UNIVERSAL
LIBRARY
OU_200988
UNIVERSAL
LIBRARY

ಆನಂದ ಕರ್ಣಾಟಕ ಗ್ರಂಥರತ್ನಮಾಲೆ. ನಂ ೧.

ಶ್ರೀಃ.

ವಾಲ್ಮೀಕಿಮಹರ್ಷಿಪ್ರಣೀತ

ಶ್ರೀಮದ್ರಾಮಾಯಣವು

ಕಿಷ್ಕಿಂಧಾ ಕಾಂಡವು.

ಕರ್ಣಾಟಕವಚನವು

ಶ್ರೀಮದ್ಮೈಲುಶೈಲನಿವಾಸರಸಿಕ
ಪಂಡಿತ ದೇವಶಿಖಾಮಣಿ ಅಳಸಿಂಗರಾಚಾರ್ಯವಿರಚಿತವು.

ಮೈಸೂರು
ಆನಂದಮುದ್ರಾಕ್ಷರಶಾಲೆಯಲ್ಲಿ ಮುದ್ರಿತವಾಗಿ,
ಆರ್. ವೇಂಕಟೇಶ್ವರಕಂಪೆನಿಯವರಿಂದ
ಪ್ರಕಟಿಸಲ್ಪಟ್ಟಿದೆ.

1918

(ALL RIGHTS RESERVED).

All Rights Reserved

—

ಕಾಪೀರೈಟ್, ೧೯೧೮—ಈ ಪುಸ್ತಕದ ಸರ್ವಸ್ವಾತಂತ್ರ್ಯವೂ ಮದ್ರಾಸ್, ಆರ್. ವೇಂಕಟೇಶ್ವರಕಂಪನಿಯವರಿಗೆ ಸೇರಿದೆ ಇದಕ್ಕೆ ಇಂಡಿಯಾದೇಶದ ಮತ್ತು ಹೊರದೇಶದ ಕಾಪೀರೈಟ್ ತೆಗೆಯಲ್ಪಟ್ಟಿದೆ ಈ ಪುಸ್ತಕವನ್ನು ಸಂಪೂರ್ಣವಾಗಿಯಾಗಲಿ, ಅಥವಾ ಇದರ ಯಾವ್ದು ದಾದರೂ ಭಾಗವನ್ನಾಗಲಿ ಪ್ರತ್ಯೇಕವಾಗಿ ಪ್ರಕಟಿಸುವುದಕ್ಕೂ, ಭಾಷಾಂತರೀಕರಿಸಿ ವಿಕ್ರಯಿಸುವುದಕ್ಕೂ ಬೇರೊಬ್ಬರಿಗೂ ಬಾಧ್ಯತೆಯಿರದು. ಈ ಪುಸ್ತಕದೊಳಗಿನ ಭಾವಗಳನ್ನಾಗಲಿ, ಪದಗಳನ್ನಾಗಲಿ, ಚಿತ್ರಪಟಗಳನ್ನಾಗಲಿ ಇತರರು ಕಾಪೀಮಾಡಿದಪಕ್ಷದಲ್ಲಿ, ಅಂತವರು ಕಾಪೀರೈಟನ್ನು ಉಲ್ಲಂಘಿಸಿದಂತಾಗುವುದು ಆದುದರಿಂದ ಯಾವ ಭಾಗದಲ್ಲಿಯಾದರೂ ಈಕಾಪೀರೈಟನ್ನು ಉಲ್ಲಂಘಿಸಿದವರು, ನಷ್ಟವಾದ ದಾವೆಗೆ ಗುರಿಯಾಗುವರೆಂದು ಇದರಿಂದ ತಿಳಿಯಪಡಿಸಿದೆ

ಕಿಷ್ಕಿಂಧಾಕಾಂಡದ ವಿಷಯಾನುಕ್ರಮಣಿಕೆ

ವರ್ಗಸಂಖ್ಯೆ.	ವಿಷಯಗಳು	ಪುಟಸಂಖ್ಯೆ.
	ಅವತಾರಿಕೆ.	
೧	ಪಂಪಾವರ್ಣನೆಯೊಳ್ ರಾಮನ ವಿರಹದುಃಖವು	೧೩೨೫
೨.	ಸುಗ್ರೀವನು ಆಂಜನೇಯನನ್ನು ರಾಮಲಕ್ಷ್ಮಣರ ಬಳಿಗೆಕಳುಹಿಸಿದುದು.	೧೩೪೯
೩.	ಹನುಮಂತನು ರಾಮಲಕ್ಷ್ಮಣರ ಬಳಿಗೆ ಬಂದು, ಅವರನ್ನು ಮಾತಾಡಿಸಿ ಪ್ರಶಂಸೆಮಾಡಿದುದು.	೧೩೫೨
೪.	ಲಕ್ಷ್ಮಣನು ಹನುಮಂತನಿಗೆ ತಮ್ಮ ವೃತ್ತಾಂತಗಳನ್ನು ಹೇಳಿದುದು. ಅವರೆಲ್ಲರೂ ಸುಗ್ರೀವನ ಬಳಿಗೆ ಹೋದುದು	೧೩೬೨
೫	ರಾಮಸುಗ್ರೀವರಿಬ್ಬರೂ ಸೇರಿ ಅಗ್ನಿಸಾಕ್ಷಿಕವಾಗಿ ಆಣೆಯಿಟ್ಟು, ಪರಸ್ಪರಸ್ನೇಹವನ್ನು ಬೆಳಿಸಿದುದು	೧೩೬೭
೬	ಸುಗ್ರೀವನು ರಾಮನ ಕಾರ್ಯವನ್ನು ನಿರ್ವಹಿಸುವುದಾಗಿ ಪ್ರತಿಜ್ಞೆಮಾಡಿದುದು.	೧೩೭೧
೭	ರಾಮನು ಸುಗ್ರೀವನಿಗೆ ವಾಲಿಯನ್ನು ವಧಿಸುವುದಾಗಿ ಪ್ರತಿಜ್ಞೆ ಮಾಡಿಕೊಟ್ಟು ಆತನನ್ನು ಸಂತೋಷಪಡಿಸಿದುದು.	೧೩೭೪
೮	ಸುಗ್ರೀವನು ತನ್ನ ಶೋಕಕಾರಣವನ್ನು ರಾಮನಿಗೆ ವಿವರಿಸಿ ತಿಳಿಸಿದುದು.	೧೩೮೦
೯.	ವಾಲಿಯು ತನಗೆ ಮಾಡಿದ ಅಪರಾಧಗಳನ್ನು ಸುಗ್ರೀವನು ರಾಮನಿಗೆ ತಿಳಿಸಿದುದು.	೧೩೮೫
೧೦.	ಸುಗ್ರೀವನು ತಾನು ವಾಲಿಯನ್ನು ಅನೇಕವಿಧದಲ್ಲಿ ಪ್ರಾರ್ಥಿಸಿದುದನ್ನೂ, ಆದರೂ ವಾಲಿಯು ನಿರ್ದಯನಾಗಿ ತನ್ನನ್ನು ನಿಗ್ರಹಿಸಿದುದನ್ನೂ ರಾಮನಿಗೆ ತಿಳಿಸಿದುದು.	೧೩೮೮

೧೧. ಸುಗ್ರೀವನು ರಾಮನಿಗೆ ವಾಲಿಯ ಪರಾಕ್ರಮವನ್ನೂ, ವಾಲಿ ದುಂದುಭಿಗಳ ಯುದ್ಧವನ್ನೂ, ಆ ವಾಲಿಗೆ ಮತಂಗೆತು ನಿಯಿಂದುಂಟಾದ ಶಾಪವನ್ನೂ, ಸಪ್ತಸಾಲಗಳನ್ನು ತನ್ನ ಬಾಣದಿಂದ ಕೊರೆದ ಆ ವಾಲಿಯ ಶಕ್ತಿಯನ್ನೂ ತಿಳಿಸಿ ದುದು. ರಾಮನು ಸುಗ್ರೀವನಿಗೆ ನಂಬಿಕೆಯನ್ನು ಹುಟ್ಟಿ ಸುವುದಕ್ಕಾಗಿ ದುಂದುಭಿಶರೀರವನ್ನು ಇನ್ನೂರುಬಿಲ್ಲಳತೆ ಗಳ ದೂರಕ್ಕೆ ಚಿಮ್ಮಿದುದು. ೧೩೯೩

೧೨. ರಾಮನು ಸಪ್ತಸಾಲಗಳನ್ನು ಭೇದಿಸಿದುದು. ವಾಲಿಸುಗ್ರೀವರ ಮೊದಲನೆಯ ಯುದ್ಧವು ೧೪೦೫

೧೩. ಸುಗ್ರೀವನೊಡಗೂಡಿ ಅವನ ಮಂತ್ರಿಗಳೂ, ರಾಮಲಕ್ಷ್ಮಣಾದಿಗಳೂ, ಪುನಃ ಕಿಷ್ಕಿಂಧೆಯಕಡೆಗೆ ಹೊರಟುದು. ದಾರಿಯಲ್ಲಿ ಸಪ್ತಜನರೆಂಬ ಮಹರ್ಷಿಗಳ ಆಶ್ರಮವನ್ನು ನೋಡಿದುದು. ೧೪೧೦

೧೪. ಸುಗ್ರೀವನು ರಾಮನಿಂದ ಪುನ ಸಂಪೂರ್ಣವಾದ ಅಭಯವನ್ನು ಪಡೆದು ವಾಲಿಯನ್ನು ಯುದ್ಧಕ್ಕೆ ಕರೆದುದು ೧೪೧೩

೧೫. ಸುಗ್ರೀವನ ಸಿಂಹನಾದವನ್ನು ಕೇಳಿ ವಾಲಿಯು ಪುನ ಕೋಪಗೊಂಡು ಯುದ್ಧಕ್ಕೆ ಹೊರಟುದು. ತಾರೆಯು ಬೇಡವೆಂದು ವಾಲಿಯನ್ನು ತಡೆದುದು. ೧೪೧೫

೧೬. ವಾಲಿಯು ತಾರೆಯನ್ನು ಹೆದರಿಸಿ ಕಳುಹಿಸಿ, ತಾನು ಯುದ್ಧಕ್ಕೆ ಹೊರಟುದು. ವಾಲಿಸುಗ್ರೀವರ ಯುದ್ಧವು. ಕೊನೆಗೆ ವಾಲಿಯಬಲವು ಹೆಚ್ಚಿದುದನ್ನುನೋಡಿ ರಾಮನು ಅವನ ಎದೆಗೆ ಬಾಣವನ್ನು ಬಿಟ್ಟುದು. ೧೪೨೩

೧೭. ವಾಲಿಯು ರಾಮನನ್ನು ನಿಂದಿಸಿದುದು. ೧೪೩೪

೧೮. ರಾಮನು ವಾಲಿಗೆ ತಕ್ಕ ಸಮಾಧಾನಗಳನ್ನು ಹೇಳಿದುದು. ೧೪೪೨

೧೯. ತಾರೆಯು ವಾಲಿಯನ್ನು ನೋಡುವುದಕ್ಕಾಗಿ ಬಂದುದು. ೧೪೫೫

೨೦. ತಾರೆಯು ದುಃಖದಿಂದ ವಾಲಿಯ ದೇಹವನ್ನಪ್ಪಿಕೊಂಡು, ಅನೇಕವಿಧದಲ್ಲಿ ಪ್ರಲಾಪಿಸಿ, ಕೊನೆಗೆ ಪ್ರಾಯೋಪವೇಶವನ್ನು ಮಾಡುವುದಾಗಿ ನಿಶ್ಚಯಿಸಿದುದು. ೧೪೬೫

೨೧. ಹನುಮಂತನು ಶಾಸ್ತ್ರಾರ್ಥಗಳನ್ನು ತಿಳಿಸಿ, ದು:ಖಿತೆಯಾದ ತಾರೆಯನ್ನು ಸಮಾಧಾನಪಡಿಸುತ್ತ, ಅಂಗದನ ಪುರೋನ್ನ ದ್ಧಿಯನ್ನು ನೋಡಿಕೊಂಡು ಸಂತುಷ್ಟಳಾಗಿರುವಂತೆ ಹೇ ಳಿದುದು ತಾರೆಯು ತನ್ನ ಪತಿಯೊಡನೆ ಸಹಮರಣವೇ ತನಗೆ ಎಲ್ಲಕ್ಕಿಂತಲೂ ಮೇಲಾದ ಸುಖವೆಂದು ದು:ಖಿಸು ತಿದ್ದುದು ೧೪೬೨

೨೨. ಮೂರ್ಛೆಹೊಂದಿ ಮೃತಪ್ರಾಯನಾಗಿದ್ದ ವಾಲಿಯು, ಸ್ವಲ್ಪ ವಾಗಿ ಚೇತರಿಸಿಕೊಂಡು ಮುಂದೆ ನಡೆಸಬೇಕಾದ ಕೆಲಸಗ ಳನ್ನು ತಿಳಿಸಿದುದು. ೧೪೬೫

೨೩. ವಾಲಿಯು ಮೃತನಾದುದನ್ನು ಕಂಡು ತಾರೆಯ ವಿಲಾಪವು ೧೪೬೯

೨೪. ಸುಗ್ರೀವನ ದುಃಖವು ತಾರೆಯು ತಾನೇ ಆತನೆನ್ನು ಸಮಾ ಧಾನಪಡಿಸಿ, ರಾಮನಲ್ಲಿ ತನ್ನ ಪ್ರತಿಪತ್ತಿಯನ್ನು ತೋರಿ ಸಿದುದು. ೧೪೭೨

೨೫. ರಾಮನು ದು:ಖಿತರಾದವರೆಲ್ಲರನ್ನೂ ಸಮಾಧಾನಪಡಿಸಿ ವಾಲಿ ಗೆ ಸಂಸ್ಕಾರವನ್ನು ಮಾಡಿಸಿದುದು. ೧೪೮೧

೨೬. ಸುಗ್ರೀವಪಟ್ಟಾಭಿಷೇಕವು. ೧೪೪೭

೨೭. ರಾಮನು ಪರ್ವತಗುಹೆಯಲ್ಲಿ ಏಕಾಂತವಾಗಿ ಕುಳಿತು, ಸೀತೆ ಯನ್ನು ನೆನೆಸಿಕೊಂಡು ವಿರಹತಾಪದಿಂದ ದು ಖಿಸುವುದ ನ್ನು ನೋಡಿ. ಲಕ್ಷ್ಮಣನು ಆತನನ್ನು ಸಮಾಧಾನಪಡಿಸಿ ದುದು. ೧೪೯೩

೨೮. ರಾಮನು ಲಕ್ಷ್ಮಣನಿಗೆ ಮಳೆಗಾಲವನ್ನು ವರ್ಣಿಸಿ ಹೇಳಿದುದು. ೧೪೯೮

೨೯. ವರ್ಷಾಕಾಲವು ಕಳೆಯುತ್ತ ಬಂದುದನ್ನು ನೋಡಿ, ಹನುಮಂ ತನು ಸುಗ್ರೀವನಿಗೆ ರಾಮಕಾರ್ಯವನ್ನು ಜ್ಞಾಪಿಸಿದುದು. ಸುಗ್ರೀವನು ನೀಲನನ್ನು ಕರೆದು ಸಮಸ್ತ ಸೈನ್ಯಗಳನ್ನೂ ಕರೆಸುವಂತೆ ನಿಯಮಿಸಿದುದು. ೧೫೦೯

೩೦. ಶರತ್ಕಾಲವರ್ಣನವು. ಸುಗ್ರೀವನು ತಿರುಗಿ ಕಾಮಾಸಕ್ತನಾಗಿ ಸುಮ್ಮನಿರುವುದನ್ನು ನೋಡಿ ರಾಮನು ಕೋಪಗೊಂಡುದು. ೧೫೧೪

೩೧. ಲಕ್ಷ್ಮಣನು ಕೋಪಗೊಂಡು ಬರುವುದನ್ನು ಕಂಡು ಅಂಗದನು ಸುಗ್ರೀವನಲ್ಲಿ ತಿಳಿಸಿದುದು. ೧೫೨೫

೩೨. ಅಂಗದನ ಮಾತನ್ನು ಕೇಳಿ ಸುಗ್ರೀವನು ಹಾಸಿಗೆಯಿಂದೆದ್ದುದು ಹನುಮಂತನು ಸುಗ್ರೀವನಿಗೆ ಹಿತೋಪದೇಶವನ್ನು ಮಾಡಿದುದು. ೧೫೩೨

೩೩. ಅಂತಃಪುರಕ್ಕೆ ಬಂದ ಲಕ್ಷ್ಮಣನನ್ನು ತಾರೆಯು ಪ್ರಸನ್ನನನ್ನಾಗಿ ಮಾಡಿದುದು. ೧೫೩೫

೩೪ ರಾಮನು ಹೇಳಿಕಳುಹಿಸಿದ ಮಾತನ್ನು ಲಕ್ಷ್ಮಣನು ಸುಗ್ರೀವನಿಗೆ ತಿಳಿಸಿದುದು. ೧೫೪೪

೩೫ ತಾರೆಯು ಪುನಃ ಲಕ್ಷ್ಮಣನನ್ನು ಸಮಾಧಾನಪಡಿಸಿದುದು. ೧೫೪೬

೩೬ ಲಕ್ಷ್ಮಣಸುಗ್ರೀವರಿಬ್ಬರೂ ಸ್ನೇಹಪೂರ್ವಕವಾಗಿ ಸಂಭಾಷಿಸಿದುದು ೧೫೪೯

೩೭. ಸುಗ್ರೀವನು ಸಮಸ್ತವಾನರರನ್ನೂ ಕರೆಸಿದುದು ೧೫೫೨

೩೮ ಸುಗ್ರೀವನೂ ಲಕ್ಷ್ಮಣನೂ ರಾಮನಬಳಿಗೆ ಹೋದುದು. ೧೫೫೬

೩೯ ವಾನರಸೈನ್ಯಗಳೆಲ್ಲವೂ ಬಂದು ಸೇರಿದುದು ೧೫೬೦

೪೦. ಸುಗ್ರೀವನು ಸೀತಾನ್ವೇಷಣಾರ್ಥವಾಗಿ, ವಿನತನೆಂಬ ವಾನರಯೂಥಾಧಿಪತಿಯನ್ನು ಪೂರ್ವದಿಕ್ಕಿಗೆ ಕಳುಹಿಸಿದುದು ೧೫೬೪

೪೧. ಸುಗ್ರೀವನು ಹನುಮದಾದಿಗಳನ್ನು ದಕ್ಷಿಣದಿಕ್ಕಿಗೆ ಕಳುಹಿಸಿದುದು. ೧೫೭೨

೪೨. ಸುಷೇಣನೆಂಬವನೊಬ್ಬನಾದ ವಾನರರನ್ನು ಪಶ್ಚಿಮದಿಕ್ಕಿಗೆ ಕಳುಹಿಸಿದುದು. ೧೫೭೯

೪೩. ಶತಬಲಿ ಮೊದಲಾದ ವಾನರರನ್ನು ಉತ್ತರದಿಕ್ಕಿಗೆ ಕಳುಹಿಸಿದುದು. ೧೫೮೬

೪೪ ರಾಮನು ಗುರುತಿಗಾಗಿ ಹನುಮಂತನ ಕೈಗೆ ತನ್ನ ಉಂಗುರವನ್ನು ಕೊಟ್ಟುದು. ೧೫೯೩

೪೫. ವಾನರಸೈನ್ಯದ ಪ್ರಯಾಣಸನ್ನಾಹವು. ೧೫೯೬

೪೬. ಸುಗ್ರೀವನು, ಸಮಸ್ತಭೂಮಂಡಲವೂ ತನಗೆ ತಿಳಿದ ರೀತಿಯನ್ನು ರಾಮನಿಗೆ ಹೇಳಿದುದು. ೧೫೯ಲ

೪೭. ದಕ್ಷಿಣದಿಕ್ಕಿಗೆ ಹೋದ ಹನುಮದಾದಿಗಳುಹೊರತು, ಬೇರೆ ದಿಕ್ಕುಗಳಿಗೆ ಹೋದ ಕಪಿಸೈನಿಕರೆಲ್ಲರೂ ಹಿಂತಿರುಗಿ ಬಂದುದು. ೧೬೦೨

೪೮ ಹನುಮದಾದಿಗಳು ದಕ್ಷಿಣದಿಕ್ಕಿನಲ್ಲಿ ಸೀತೆಯನ್ನು ಹುಡುಕುತ್ತಿರುವಾಗ ಒಬ್ಬ ರಾಕ್ಷಸನನ್ನು ಕೊಂದುದು. ೧೬೦೪

೪೯. ಹನುಮಂತನು ಇನ್ನೂ ಇತರಪ್ರದೇಶಗಳನ್ನು ಹುಡುಕುವುದಕ್ಕೆ ಹೋದುದು. ೧೬೦೬

೫೦. ಹನುಮದಾದಿವಾನರರು ಋಕ್ಷಬಿಲದಲ್ಲಿ ಸ್ವಯಂಪ್ರಭೆಯನ್ನು ಕಂಡುದು. ೧೬೦೯

೫೧. ಸ್ವಯಂಪ್ರಭೆಯು ವಾನರರಿಗೆ ಋಕ್ಷಬಿಲವೃತ್ತಾಂತವನ್ನು ಹೇಳಿದುದು ೧೬೧೩

೫೨ ಹನುಮಂತನು ತಾನು ಬಂದ ಉದ್ದೇಶವನ್ನು ಸ್ವಯಂಪ್ರಭೆಗೆ ತಿಳಿಸಿದುದು. ೧೬೧೫

೫೩. ಸ್ವಯಂಪ್ರಭೆಯು ತನ್ನ ಮಹಿಮೆಯಿಂದ ವಾನರರನ್ನು ಬಿಲದಿಂದ ಹೊರಕ್ಕೆ ತಂದುದು ವಾನರರು, ಕಾಲವು ಮೀರಿ ಹೋದುದಕ್ಕೂ, ಸೀತೆಯನ್ನು ಕಾಣದುದಕ್ಕೂ ದುಃಖಿಸುತಿದ್ದುದು. ೧೬೧೭

೫೪. ಹನುಮಂತನು ಅಂಗದನ ಮತವನ್ನು ಖಂಡಿಸಿ, ಸುಗ್ರೀವನ ಒಳಿಗೆ ಹೋಗುವುದೇ ಯುಕ್ತವೆಂದು ಹೇಳಿದುದು ೧೬೨೩

೫೫. ಅಂಗದಾದಿವಾನರರು ಪ್ರಾಯೋಪವೇಶವನ್ನು ಮಾಡಿ ಕುಳಿತುದು ೧೬೨೭

೫೬. ಸಂಪಾತಿಯು ಬಂದುದು ಆತನನ್ನು ನೋಡಿ ವಾನರರುದು ಖದಿಂದ ಸಂಭಾಷಿಸಿದುದು. ೧೬೩೯

೫೭. ವಾನರರು ಸಂಪಾತಿಯ ಪ್ರಶ್ನೆಗೆ ಪತ್ಯುತ್ತರವನ್ನು ಹೇಳಿದುದು. ೧೬೪೨

೩೧. ಲಕ್ಷ್ಮಣನು ಕೋಪಗೊಂಡು ಬರುವುದನ್ನು ಕಂಡು ಅಂಗದನು ಸುಗ್ರೀವನಲ್ಲಿ ತಿಳಿಸಿದುದು. ೧೫೨೫

೩೨. ಅಂಗದನ ಮಾತನ್ನು ಕೇಳಿ ಸುಗ್ರೀವನು ಹಾಸಿಗೆಯಿಂದೆದ್ದುದು ಹನುಮಂತನು ಸುಗ್ರೀವನಿಗೆ ಹಿತೋಪದೇಶವನ್ನು ಮಾಡಿದುದು. ೧೫೩೨

೩೩. ಅಂತಃಪುರಕ್ಕೆ ಬಂದ ಲಕ್ಷ್ಮಣನನ್ನು ತಾರೆಯು ಪ್ರಸನ್ನನನ್ನಾಗಿ ಮಾಡಿದುದು. ೧೫೩೫

೩೪. ರಾಮನು ಹೇಳಿಕಳುಹಿಸಿದ ಮಾತನ್ನು ಲಕ್ಷ್ಮಣನು ಸುಗ್ರೀವನಿಗೆ ತಿಳಿಸಿದುದು. ೧೫೪೪

೩೫. ತಾರೆಯು ಪುನಃ ಲಕ್ಷ್ಮಣನನ್ನು ಸಮಾಧಾನಪಡಿಸಿದುದು. ೧೫೪೬

೩೬ ಲಕ್ಷ್ಮಣಸುಗ್ರೀವರಿಬ್ಬರೂ ಸ್ನೇಹಪೂರ್ವಕವಾಗಿ ಸಂಭಾಷಿಸಿದುದು ೧೫೪೯

೩೭. ಸುಗ್ರೀವನು ಸಮಸ್ತವಾನರರನ್ನೂ ಕರೆಸಿದುದು ೧೫೫೨

೩೮ ಸುಗ್ರೀವನೂ ಲಕ್ಷ್ಮಣನೂ ರಾಮನಬಳಿಗೆ ಹೋದುದು. ೧೫೫೬

೩೯ ವಾನರಸೈನ್ಯಗಳೆಲ್ಲವೂ ಬಂದು ಸೇರಿದುದು ೧೫೬೦

೪೦. ಸುಗ್ರೀವನು ಸೀತಾನ್ವೇಷಣಾರ್ಥವಾಗಿ, ವಿನತನೆಂಬ ವಾನರಯೂಥಾಧಿಪತಿಯನ್ನು ಪೂರ್ವದಿಕ್ಕಿಗೆ ಕಳುಹಿಸಿದುದು ೧೫೬೪

೪೧. ಸುಗ್ರೀವನು ಹನುಮದಾದಿಗಳನ್ನು :ದಕ್ಷಿಣದಿಕ್ಕಿಗೆ ಕಳುಹಿಸಿದುದು, ೧೫೭೩

೪೨. ಸುಷೇಣನೇ ಮೊದಲಾದ ವಾನರರನ್ನು ಪಶ್ಚಿಮದಿಕ್ಕಿಗೆ ಕಳುಹಿಸಿದುದು. ೧೫೭೯

೪೩. ಶತಬಲಿ ಮೊದಲಾದ ವಾನರರನ್ನು ಉತ್ತರದಿಕ್ಕಿಗೆ ಕಳುಹಿಸಿದುದು. ೧೫೮೬

೪೪. ರಾಮನು ಗುರುತಿಗಾಗಿ ಹನುಮಂತನ ಕೈಗೆ ತನ್ನ ಉಂಗುರವನ್ನು ಕೊಟ್ಟುದು. ೧೫೯೩

೪೫. ವಾನರಸೈನ್ಯದ ಪ್ರಯಾಣಸನ್ನಾಹವು. ೧೫೯೬

೪೬. ಸುಗ್ರೀವನು, ಸಮಸ್ತಭೂಮಂಡಲವೂ ತನಗೆ ತಿಳಿದ ರೀತಿಯನ್ನು ರಾಮನಿಗೆ ಹೇಳಿದುದು. ೧೫೯೪ಲ

೪೭. ದಕ್ಷಿಣದಿಕ್ಕಿಗೆ ಹೋದ ಹನುಮದಾದಿಗಳುಹೊರತು, ಬೇರೆ ದಿಕ್ಕುಗಳಿಗೆ ಹೋದ ಕಪಿಸೈನಿಕರೆಲ್ಲರೂ ಹಿಂತಿರುಗಿ ಬಂದುದು. ೧೬೦೨

೪೮ ಹನುಮದಾದಿಗಳು ದಕ್ಷಿಣದಿಕ್ಕಿನಲ್ಲಿ ಸೀತೆಯನ್ನು ಹುಡುಕುತ್ತಿರುವಾಗ ಒಬ್ಬ ರಾಕ್ಷಸನನ್ನು ಕೊಂದುದು. ೧೬೦೪

೪೯. ಹನುಮಂತನು ಇನ್ನೂ ಇತರಪ್ರದೇಶಗಳನ್ನು ಹುಡುಕುವುದಕ್ಕೆ ಹೋದುದು ೧೬೦೬

೫೦ ಹನುಮದಾದಿವಾನರರು ಋಕ್ಷಬಿಲದಲ್ಲಿ ಸ್ವಯಂಪ್ರಭೆಯನ್ನು ಕಂಡುದು ೧೬೦೯

೫೧ ಸ್ವಯಂಪ್ರಭೆಯು ವಾನರರಿಗೆ ಋಕ್ಷಬಿಲವೃತ್ತಾಂತವನ್ನು ಹೇಳಿದುದು ೧೬೧೩

೫೨ ಹನುಮಂತನು ತಾನು ಬಂದ ಉದ್ದೇಶವನ್ನು ಸ್ವಯಂಪ್ರಭೆಗೆ ತಿಳಿಸಿದುದು. ೧೬೧೫

೫೩. ಸ್ವಯಂಪ್ರಭೆಯು ತನ್ನ ಮಹಿಮೆಯಿಂದ ವಾನರರನ್ನು ಬಿಲದಿಂದ ಹೊರಕ್ಕೆ ತಂದುದು ವಾನರರು, ಕಾಲವು ಮೀರಿ ಹೋದುದಕ್ಕೂ, ಸೀತೆಯನ್ನು ಕಾಣದುದಕ್ಕೂ ದುಃಖಿಸುತಿದ್ದುದು ೧೬೧೭

೫೪ ಹನುಮಂತನು ಅಂಗದನ ಮತವನ್ನು ಖಂಡಿಸಿ, ಸುಗ್ರೀವನ ಒಳಿಗೆ ಹೋಗುವುದೇ ಯುಕ್ತವೆಂದು ಹೇಳಿದುದು. ೧೬೨೩

೫೫. ಅಂಗದಾದಿವಾನರರು ಪ್ರಾಯೋಪವೇಶವನ್ನು ಮಾಡಿ ಕುಳಿತುದು ೧೬೨೭

೫೬. ಸಂಪಾತಿಯು ಬಂದುದು ಆತನನ್ನು ನೋಡಿ ವಾನರರು ದು'ಖದಿಂದ ಸಂಭಾಷಿಸಿದುದು. ೧೬೩೪

೫೭. ವಾನರರು ಸಂಪಾತಿಯ ಪ್ರಶ್ನೆಗೆ ಪತ್ಯುತ್ತರವನ್ನು ಹೇಳಿದುದು ೧೬೩೭

೫೮. ಸಂಪಾತಿಯು ಸೀತೆಯಿರುವ ಸ್ಥಾನವನ್ನು ವಾನರರಿಗೆ ತಿಳಿಸಿದುದು. ೧೬೩೪

೫೯. ಪುನ ಜಾಂಬವಂತನು ಕೇಳಿದುದರಮೇಲೆ, ಸಂಪಾತಿಯು ತನ್ನ ಮಗನಾದ ಸುಪಾರ್ಶ್ವನಿಂದ ರಾವಣನು ಸೀತೆಯನ್ನ ಪಹರಿಸಿದ ವೃತ್ತಾಂತವನ್ನು ತಾನು ತಿಳಿದುದಾಗಿ ಹೇಳಿದುದು. ೧೬೩೯

೬೦. ಸಂಪಾತಿಯು ತನ್ನ ಹಿಂದಿನ ವೃತ್ತಾಂತವನ್ನು ವಾನರರಿಗೆ ಹೇಳಿ ಕೊಂಡುದು. ೧೬೪೨

೬೧. ಸಂಪಾತಿಯು ತನ್ನ ರೆಕ್ಕೆಗಳು ಬೆಂದ ವೃತ್ತಾಂತವನ್ನು ನಿಶಾಕರಮಹರ್ಷಿಗೆ ತಿಳಿಸಿದುದು. ೧೬೪೫

೬೨. ನಿಶಾಕರಮುನಿಯು ಸಂಪಾತಿಗೆ ಪುನ: ರೆಕ್ಕೆಗಳು ಬರುವ'ರೀತಿಯನ್ನು ತಿಳಿಸಿದುದು ೧೬೪೭

೬೩. ಸಂಪಾತಿಗೆ ರೆಕ್ಕೆಗಳು ಬಂದುದು ಅವನು ವಾನರರಿಗೆ ಮುಂದಿನ ಕರ್ತವ್ಯವನ್ನು ಹೇಳಿ, ಅವರ ಅನುಮತಿಯನ್ನು ಪಡೆದು ಹೊರಟುಹೋದುದು ೧೬೪೯

೬೪. ವಾನರರು ಸಮುದ್ರದಕಡೆಗೆ ಹೋದುದು. ೧೬೫೦

೬೫ ವಾನರರು ಸಮುದ್ರವನ್ನು ದಾಟುವುದರಲ್ಲಿ ತಮತಮಗಿರುವ ಶಕ್ತಿತಾರತಮ್ಯವನ್ನು ಹೇಳಿಕೊಂಡುದು. ೧೬೫೩

೬೬. ಜಾಂಬವಂತನು ಸಮುದ್ರಲಂಘನಕಾರ್ಯಕ್ಕಾಗಿ ಆಂಜನೇಯನನ್ನು ಪ್ರೇರಿಸಿದುದು ೧೬೫೮

೬೭. ಹನುಮಂತನು ತನ್ನ ಉತ್ಪತ್ತಿಯನ್ನೂ, ತನ್ನ ಬಲಪರಾಕ್ರಮಗಳನ್ನೂ ಎತ್ತಿಹೇಳಿ, ವಾನರರಿಗೆ ಉತ್ಸಾಹವನ್ನು ಹುಟ್ಟಿಸಿದುದು ಸಮುದ್ರವನ್ನು ದಾಟುವುದಕ್ಕಾಗಿ ಮಹೇಂದ್ರಪರ್ವತವನ್ನೇರಿದುದು. ೧೬೬೨

ಕಿಷ್ಕಿಂಧಾಕಾಂಡದೊಳಗಿನ ಪಟಗಳ ಪಟ್ಟಿ.

ಪುಟಸಂಖ್ಯೆ.

ರಾಮನು ಪಂಪಾತೀರದಲ್ಲಿ ಕುಳಿತು,ಅದರ ಸೊಬಗನ್ನು ನೋಡಿ ಲಕ್ಷ್ಮಣನಿಗೆ ತನ್ನ ವಿರಹದುಃಖವನ್ನು ತಿಳಿಸಿಕೊಂಡುದು ೧೩೨೫

ಸುಗ್ರೀವನ ಮಾತಿನಮೇಲೆ ಆಂಜನೇಯನು ಸನ್ಯಾಸಿರೂಪವನ್ನು ಧರಿಸಿ, ರಾಮಲಕ್ಷ್ಮಣರ ಕಡೆಗೆ ಬಂದುದು ೧೩೫೩

ಹನುಮಂತನು ರಾಮಲಕ್ಷ್ಮಣರನ್ನು ತನ್ನ ಭುಜಗಳಮೇಲೆ ಏರಿಸಿಕೊಂಡು ಸುಗ್ರೀವನ ಬಳಿಗೆ ಕರೆತಂದುದು ೧೩೬೭

ಸುಗ್ರೀವನು ಸೀತೆಯ ಆಭರಣಗಳನ್ನು ರಾಮನಿಗೆ ತೋರಿಸಲು, ರಾಮನು ಅವುಗಳನ್ನು ನೋಡಿ ವ್ಯಸನಪಟ್ಟುದು. ೧೩೭೩

ರಾಮನು ದುಂದುಭಿಶರೀರವನ್ನು ತನ್ನ ಕಾಲಿನಿಂದ ಬಹುದೂರಕ್ಕೆ ಚಿಮ್ಮಿಡುದು ೧೪೦೩

ರಾಮನು ಸಪ್ತಸಾಲಗಳನ್ನು ಭೇದಿಸಿದುದು. ೧೪೦೫

ವಾಲಿಸುಗ್ರೀವರ ಯುದ್ಧವು ರಾಮನು ಮರದ ಮರೆಯಲ್ಲಿದ್ದು, ವಾಲಿಯಮೇಲೆ ಬಾಣವನ್ನು ಬಿಟ್ಟುದು ೧೪೨೮

ತಾರೆಯು ವಾಲಿಯನ್ನು ನೋಡಿ ವಿಲಪಿಸುತ್ತ ರಾಮನನ್ನು ನಿಂದಿಸಿದುದು. ೧೪೬೦

ಸುಗ್ರೀವಪಟ್ಟಾಭಿಷೇಕವು. ೧೪೮೯

ಅಂತಃಪುರಕ್ಕೆ ಬಂದ ಲಕ್ಷ್ಮಣನನ್ನು ತಾರೆಯು ಪ್ರಸನ್ನನನ್ನಾಗಿ ಮಾಡಿದುದು. ೧೫೪೦

ವಾನರರು ಸ್ವಯಂಪ್ರಭೆಯ ಬೆಳ್ಳಬಿಲಕ್ಕೆ ಪ್ರವೇಶಿಸುವುದು. ೧೬೧೧

ಸ್ವಯಂಪ್ರಭೆಯು ವಾನರರಿಗೆ ಫಲಮೂಲಾದಿಗಳನ್ನು ಕೊಡುವುದು ೧೬೧೫

ಪರ್ವತಾಗ್ರದಲ್ಲಿದ್ದ ಸಂಪಾತಿಯನ್ನು ನೋಡಿ, ಪ್ರಾಯೋಪವಿಷ್ಟರಾದ ವಾನರರು ಭಯಪಟ್ಟುದು ೧೬೩೦

ಸಂಪಾತಿಯು ತಿರುಗಿ ರೆಕ್ಕೆಗಳನ್ನು ಹೊಂದಿ ಮೇಲಕ್ಕೆ ಹಾರಿದುದು. ೧೬೫೦

ಅಂಗದಾದಿಗಳು ಸಮುದ್ರವನ್ನು ದಾಟುವುದರಲ್ಲಿ ತಮತಮಗಿರುವ ಶಕ್ತಿಯನ್ನು ಜಾಂಬವಂತನಿಗೆ ತಿಳಿಸುವಾಗ, ಹನುಮಂತನು ಏಕಾಂತವಾಗಿ ದೂರದಲ್ಲಿ ಕುಳಿತಿದ್ದುದು ೧೬೫೪

ಶ್ರೀರಸ್ತು

ಶ್ರೀರಾಮಚಂದ್ರಪರಬ್ರಹ್ಮಣೇ ನಮಃ



ಆರಣ್ಯಕಾಂಡದಲ್ಲಿ ಶ್ರೀರಾಮನು, ದೀನರಾದ ಋಷಿಗಳಿಗೆ ಸಮಸ್ತ ರಾಕ್ಷಸರ ವಧವನ್ನು ಮಾಡುವುದಾಗಿ ಅಭಯವನ್ನು ಕೊಟ್ಟು, ಅದರಂತೆ ಖರಾದಿರಾಕ್ಷಸರನ್ನು ಸಂಹರಿಸಿ, ಆ ಮಹರ್ಷಿಗಳನ್ನು ಕಾಪಾಡಿದುದರ ಮೂಲಕವಾಗಿ, ದೀನಜನಸಂರಕ್ಷಣವೆಂಬ ಧರ್ಮವನ್ನು ಪ್ರಕಾಶಪಡಿಸಿರುವನು ಈ ಕಿಷ್ಕಿಂಧಾಕಾಂಡದಲ್ಲಿ ಮಿತ್ರನಾದ ಸುಗ್ರೀವನಿಗೆ, ಅವನ ವೈರಿಯಾದ ವಾಲಿಯನ್ನು ಕೊಲ್ಲುವುದಾಗಿ ಪ್ರತಿಜ್ಞೆಮಾಡಿಕೊಟ್ಟು, ಅದರಂತೆ ವಾಲಿಯನ್ನೂ ಕೊಂದು ಅದರಿಂದ ಮಿತ್ರರಕ್ಷಣವೆಂಬ ಧರ್ಮವನ್ನು ಲೋಕಕ್ಕೆ ತೋರ್ಪಡಿಸುವನು ಮತ್ತು ಪೂರ್ವಕಾಂಡದಲ್ಲಿ ಮೋಕ್ಷಪ್ರದಾನವೆಂಬ ತನ್ನ ಪರತ್ವಚಿಹ್ನವನ್ನು ಪ್ರಕಾಶಪಡಿಸಿರುವನು ಈ ಕಾಂಡದಲ್ಲಿ ತದನುಗುಣಗಳಾದ ಅಸಂಖ್ಯಕಲ್ಯಾಣಗುಣಗಳನ್ನು ಹೊರಪಡಿಸುವನು. ಮುಖ್ಯವಾಗಿ ವಾಸ್ತವಾರ್ಥವನ್ನು ನೋಡುವಾಗ, ದ್ವಯಮಂತ್ರಾರ್ಥಪ್ರತಿಪಾದಕವಾದ ಈ ರಾಮಾಯಣದಲ್ಲಿ, ಬಾಲಕಾಂಡದಿಂದ ಶ್ರೀಮತ್ಪದೋದೀರಿತವಾದ ಭಗವಂತನ ಶ್ರೀಮತ್ತ್ವವೂ, ಅಯೋಧ್ಯಾಕಾಂಡದಲ್ಲಿ ಸರ್ವಜನವ್ಯಾಮೋಹವಿಷಯತೆಯೋಕ್ತಿಯಿಂದ ನಾರಾಯಣಶಬ್ದಾರ್ಥವೂ, ಆರಣ್ಯಕಾಂಡದ ಪಂಚವಟೀವಾಸಪರ್ಯಂತವೃತ್ತಾಂತದಲ್ಲಿ, ಮಹರ್ಷಿಗಳಿಂದ ಮಾಡಲ್ಪಟ್ಟ ಕೈಂಕರ್ಯವನ್ನು ಹೇಳಿರುವುದರಿಂದ, ಚತುರ್ಥ್ಯರ್ಥವೂ, ಖರಾ


ದಿವೃತ್ತಾಂತದಿಂದ ನಮಶ್ಶಬ್ದಾರ್ಥವೂ ಸೂಚಿತವೆಂದು ಗ್ರಾಹ್ಯವು ಪೂರ್ವ ಕಾಂಡದಲ್ಲಿ ರಾಮಾಯಣಕಥಾವಿಸ್ತೃತಿಗೆ ಬೀಜಭೂತವಾದ ಸೀತಾಪಹರಣವು ಪ್ರತಿಪಾದಿಸಲ್ಪಟ್ಟಿರುವುದು. ಈ ಕಾಂಡದಲ್ಲಿ ಆ ಸೀತಾಪ್ರಾಪ್ತಿಗೆ ಬೇಕಾದ ಸಹಾಯಸಂಗ್ರಹಣವೂ, ಶತ್ರುನಿರಸನಕ್ಕೆ ಬೇಕಾದ ಸೈನ್ಯ ಸಂಗ್ರಹವೂ ನಿರೂಪಿಸಲ್ಪಡುವುದು ಇದರಿಂದ ಧ್ವನಿತವಾಗುವ ಬೇರೊಂದು ವಾಸ್ತವಾಂಶವೇನೆಂದರೆ :—

ಹಿಂದೆ ಆರಣ್ಯಕಾಂಡದಲ್ಲಿ ಮಾರೀಚವೃತ್ತಾಂತವೇ ಮೊದಲಾದುವುಗಳಿಂದ, ಜೇತನನ ಉಜ್ಜೀವನಪ್ರಕಾರಗಳು ನಿರೂಪಿಸಲ್ಪಟ್ಟಿರುವುವು ಅವುಗಳಲ್ಲಿ ಮಾರೀಚದರ್ಶನವೃತ್ತಾಂತದಿಂದ ಭಗವನ್ನಿತ್ಯಾನುಭವಕ್ಕೆ ಯೋಗ್ಯನಾದ ಜೇತನನಿಗೆ, ಅಪ್ರಾಪ್ಯವಾದ ವಿಷಯದಲ್ಲಿ ಆಸಕ್ತಿಯೂ,ಅದರಿಂದ ರಾವಣನೆಂಬ ಮಹಾಮೋಹವು ಆಕ್ರಮಿಸಿಕೊಳ್ಳುವುದೂ, ಜಟಾಯುವು ಎಷ್ಟೇಪ್ರಯತ್ನ ಮಾಡಿದರೂ ರಾವಣನ ಕೈಯಿಂದ ಸೀತೆಯನ್ನು ಬಿಡಿಸಲಾರದೆ ಹೋದನೆಂಬುದರಿಂದ, ಕೇವಲಕರ್ಮಮಾತ್ರದಿಂದ ಸಂಸಾರವನ್ನು ಬಿಡಿಸುವುದು ಸಾಧ್ಯವಲ್ಲವೆಂಬುದೂ, ಸೀತೆಗೆ ಲಂಕಾಪ್ರವೇಶದಿಂದ ಜೀವಕ್ಕೆ ಸಾಂಸಾರಿಕಶರೀರಪ್ರವೇಶವೂ, ಏಕಾಕ್ಷಿ, ಏಕಕರ್ಣ, ಮೊದಲಾದ ವರ ಪೀಡನದಿಂದ ತಾಪತ್ರಯಗಳಿಗೆ ಸಿಕ್ಕಿ ಸಂಕಟಪಡುವುದೂ, ರಾಮನು ಅಲ್ಲಲ್ಲಿ ಹುಡುಕುತ್ತಿರುವನೆಂಬುದರಿಂದ, ಭಗವಂತನು ತಾನಾಗಿಯೇ ಜೇತನೋಜ್ಜೀವನಕ್ಕಾಗಿ ಉಪಾಯಗಳನ್ನಾಲೋಚಿಸುತ್ತಿರುವನೆಂಬುದೂಸೂಚಿತವಾಗುವುವು ಇನ್ನು ಮೇಲೆ ಈ ಕಿಷ್ಕಿಂಧಾಕಾಂಡದಲ್ಲಿ, ರಾಮನು ಹನುಮಂತನ ಮೂಲಕವಾಗಿ ಸೀತಾನ್ವೇಷಣವನ್ನು ಮಾಡಿಸಿದುದಾಗಿ ನಿರೂಪಿಸಲ್ಪಡುವುದರಿಂದ, ಭಗವಂತನು ಜೇತನನಿಗೆ ತನ್ನಲ್ಲಿ ಭಕ್ತಿಯನ್ನು ಹುಟ್ಟಿಸಿ ಅವನನ್ನು ಜ್ಜೀವಿಸುವುದಕ್ಕಾಗಿ ಆಚಾರ್ಯಮುಖದಿಂದ ಪ್ರೇರಿಸುತ್ತಿರುವನೆಂದೂ ಧ್ವನಿತವಾಗುವುದು ಆದರಲ್ಲಿಯೂ ಪ್ರಥಮಸರ್ಗದಲ್ಲಿ ರಾಮನು ಪಂಪಾಸರೋವರಾದಿಸನ್ನಿವೇಶಗಳನ್ನು ನೋಡಿ ಸೀತೆಯನ್ನು ನೆನೆಸಿಕೊಂಡು ದುಃಖಿಸುವುದರಿಂದ "ಸ ಏಕಾಕೀ ನ ರಮತೇ" ಎಂಬ ಶ್ರುತ್ಯನುಸಾರ

ವಾಗಿ, ಭಗವಂತನು ಏಕಾಕಿಯಾಗಿ ಸಂತೋಷಿಸುವವನಲ್ಲವೆಂದೂ, ಆತನು ನಿತ್ಯಸೂರಿಗಳನ್ನು ನೋಡಿ, ''ಇವರಂತೆ ಜೀವವರ್ಗಗಳೆಲ್ಲವೂ ಭೋಗಾನುಭವಕ್ಕೆ ಅರ್ಹಗಳಾಗಿದ್ದರೂ, ಅವರೇಕೆ ನನ್ನನ್ನು ಹೊಂದದಿರುವ" ರೆಂದು ದುಃಖಿಸುವುದಾಗಿಯೂ ಧ್ವನಿತವಾಗುವುದು ಇದರಲ್ಲಿ ಪಂಪಾತೀರಪ್ರದೇಶವನ್ನು ಪರಮಪದವಾಗಿಯೂ, ಅಲ್ಲಿನ ಪಕ್ಷಿವೃಕ್ಷಾದಿಗಳನ್ನು ನಿತ್ಯಸೂರಿಗಳನ್ನಾಗಿಯೂ, ಅಲ್ಲಿನ ಮಂದಮಾರುತವನ್ನು ಭಗವತ್ಕೃಪೆಯನ್ನಾಗಿಯೂ, ಪುಷ್ಪಗಳನ್ನು ಜ್ಞಾನಾದಿಗಳನ್ನಾಗಿಯೂ, ನಿರ್ಮಲವಾದ ನೀರನ್ನು ಅವರ ಪ್ರಸನ್ನಹೃದಯವನನ್ನಾಗಿಯೂ ಹೇಳಿದಂತೆ ಆಯಾಸಂಕೇತಗಳನ್ನು ಊಹಿಸಬೇಕು

ಇದಲ್ಲದೆ ಇಲ್ಲಿ ಗ್ರಹಿಸಬೇಕಾದ ಮತ್ತೊಂದು ವಿಶೇಷಾಂಶವೇನೆಂದರೆ:—ಪೂರ್ವಕಾಂಡದಲ್ಲಿ ಜಟಾಯುವು, ''ರಾವಣನು ಸೀತೆಯನ್ನಪಹರಿಸಿಕೊಂಡು ಹೋದು"ದಾಗಿ ಹೇಳಿದ ಸಂದರ್ಭದಲ್ಲಿಯೇ,ಅತನ ಸ್ಥಲಬಲಾದಿಗಳೆಲ್ಲವನ್ನೂ ವಿವರವಾಗಿ ತಿಳಿಸಿಬಿಟ್ಟಿದ್ದಪಕ್ಷದಲ್ಲಿ, ರಾಮನು ತಾನಾಗಿಯೇ ಸರ್ವಕಾರ್ಯಗಳನ್ನೂ ನಿರ್ವಹಿಸಿಬಿಡುತಿದ್ದನಾದುದರಿಂದ, ಸುಗ್ರೀವಸಖ್ಯವೇ ಮೊದಲಾದುವುಗಳ ಪ್ರಸಕ್ತಿಗೆ ಸಂದರ್ಭವೇ ಇಲ್ಲದೆ,ರಾಮಾಯಣದಲ್ಲಿ ಈ ಕಿಷ್ಕಿಂಧಾಕಾಂಡದ ಕಥಾವತರಣಕ್ಕೂ ಅವಕಾಶವೆಂ ಇಲ್ಲದೆ ಹೋಗುತಿತ್ತು. ಆದುದರಿಂದ ಜಟಾಯುವು ತನಗೆ ತಿಳಿದ ವಿಷಯವನ್ನು ರಾಮನಿಗೆ ಸೂಚಿಸುವುದಕ್ಕೆವೊದಲೇ ಪ್ರಾಣವನ್ನು ಬಿಟ್ಟುದು ಈ ಕಥಾವಿಸ್ತರಕ್ಕೆ ಮುಖ್ಯಬೀಜವಾಯಿತು ರಾಮನಿಗೆ ಜಟಾಯುವಿನ ಮೂಲಕವಾಗಿ ನಿಜಾಂಶವೊಂದೂ ಸ್ಪಷ್ಟವಾಗಿ ತಿಳಿಯದುದರಿಂದಲೇ, ಅವನು ಸೀತಾನ್ವೇಷಣವ್ಯಾಜದಿಂದ ಹೊರಟು ಕಬಂಧನನ್ನು ನೋಡುವಂತಾಯಿತು ಕಬಂಧದರ್ಶನವು ಸುಗ್ರೀವಸಖ್ಯಕ್ಕೆ ಕಾರಣವಾಯಿತು ಸುಗ್ರೀವಸಖ್ಯವು ವಾಲಿವಧಕ್ಕೆ ಮೂಲವಾಯಿತು ಹೀಗಿಲ್ಲದೆ ವಾಲಿಸುಗ್ರೀವರಿಗೆ ಪರಸ್ಪರವೈರವಿಲ್ಲದಂತೆಯೇ ರಾಮನಿಗೆ ವಾನರಸಖ್ಯವುಂಟಾಗಿದ್ದಪಕ್ಷದಲ್ಲಿಯೂ,ವಾಲಿಯು ಪ್ರೇರಣೆಯಿಂದ ಆತನ ಭಯಕ್ಕಾಗಿ ರಾವಣನು ತಾನಾಗಿಯೇ ಸೀತೆಯನ್ನು

ತಂದೊಪ್ಪಿಸಿ ರಾಮನಲ್ಲಿ ಶರಣಾಗತಿಯನ್ನು ಮಾಡುತಿದ್ದನು ಆಗಲೂ ರಾಮಾವತಾರಕ್ಕೆ ಮುಖ್ಯಪ್ರಯೋಜನಭೂತವಾದ ರಾಕ್ಷಸಸಂಹಾರವೇ ಇಲ್ಲದೆ ಹೋಗುತಿತ್ತು. ಆದುದರಿಂದ ಅವತಾರಪ್ರಯೋಜನಗಳಾದ ಶಿಷ್ಟರಕ್ಷಣ ದುಷ್ಟಶಿಕ್ಷಣಗಳೆಂಬ ಮುಖ್ಯಕಾರ್ಯಗಳೆರಡನ್ನೂ ಸಾಂಗವಾಗಿ ಕೊನೆಮುಟ್ಟಿಸುವುದಕ್ಕಾಗಿಯೇ, ಈ ಅವಾಂತರಕಥಾಸಂದರ್ಭಗಳೆಲ್ಲವೂ ಸಂಥಿಸಿರುವುವೆಂದು ಗ್ರಾಹ್ಯವು



1325. ರಾಮನು ಪಂಪಾತೀರದಲ್ಲಿ ಕುಳಿತು, ಅದರ ಸೊಬಗನ್ನು ನೋಡಿ ಲಕ್ಷ್ಮಣನಿಗೆ ತನ್ನ ವಿರಹದುಃಖವನ್ನು ತಿಳಿಸಿಕೊಂಡುದು.



ಶ್ರೀಃ

ಶ್ರೀಸೀತಾಲಕ್ಷ್ಮಣಸಮೇತ ಶ್ರೀರಾಮಚಂದ್ರಪರಬ್ರಹ್ಮಣೇ ನಮಃ

ಶ್ರೀಮದ್ರಾಮಾಯಣವು

ಕಿಷ್ಕಿಂಧಾ ಕಾಂಡವು.

ಪಂಪಾವರ್ಣನೆವು ರಾಮನ ವಿರಹದುಃಖವು



ರಾಮನು ಲಕ್ಷ್ಮಣಸಹಿತನಾಗಿ ಪಂಪಾತೀರಕ್ಕೆ ಬಂದು, ಆಲ್ಲಿ ತಾವರೆ, ನೈದಿಲೆ, ಮೊದಲಾದ ನೀರುಹೂಗಳಿಂದಲೂ, ಅನೇಕ ಮತ್ಸ್ಯಜಾತಿಗಳಿಂದಲೂ ಅತಿಮನೋಹರವಾದ ಆ ಕೊಳದ ಅಂದವನ್ನು ನೋಡಿದನು ಆಗ ಅವನ ಮನಸ್ಸು ಕದಲಿತು ಸೀತೆಯನ್ನು ಸ್ಮರಿಸಿಕೊಂಡು ಅಳುವುದಕ್ಕಾರಂಭಿಸಿದನು ಅದರ ಅಂದವನ್ನು ನೋಡಿ ನೋಡಿ ಅವನ ಇಂದ್ರಿಯಗಳೆಲ್ಲವೂ ಪರವಶಗಳಾದುವು ಆಗ ಲಕ್ಷ್ಮಣನನ್ನು ಕುರಿತು ಹೇಳುವನು "ಎಲೆ ವತ್ಸನೆ! *ವೈಡೂರ್ಯದಂತೆ ಸ್ವಚ್ಛವಾದ ನೀರುಳ್ಳ ಈ ಪಂಪಾಸರೋವರವು

---

* ಇಲ್ಲಿ ಸ್ವಚ್ಛಜಲವಂಬುದರಿಂದ ಭಕ್ತಿಯುಕ್ತವಾದ ಹೃದಯವೂ, ಕಮಲವಿಕಾಸವೇ ಮೊದಲಾದವುಗಳಿಂದ ಆ ಭಕ್ತಿಸೂಚಕಗಳಾದ ಮುಖಪ್ರಸಾದಾದಿಗಳೂ ಸೂಚಿತವು.

ಎಷ್ಟು ಮನೋಹರವಾಗಿರುವುದು ನೋಡು ! ಎಲ್ಲಿ ನೋಡಿದರೂ ನೀರು ಹೂಗಳು ಅರಳಿ ಶೋಭಿಸುತ್ತಿರುವುವು' ಸುತ್ತಲೂ ಬಗೆಬಗೆಯ ವೃಕ್ಷಗಳು ಬೆಳೆದಿರುವುವು.ಲಕ್ಷ್ಮಣಾ'*ಈ ಸರೋವರಕ್ಕೆ ಸೇರಿದಂತೆ ಶೋಭಿಸುತ್ತಿರುವ ಈ ವನಪ್ರದೇಶವು ನೋಡುವುದಕ್ಕೆ ಎಷ್ಟೋ ರಮ್ಯವಾಗಿರುವುದು!ಅದನ್ನಾಶ್ರಯಿಸಿರುವ ಮರಗಳು ಶಿಖರಗಳಿಂದ ಕೂಡಿದ ಬೆಟ್ಟಗಳಂತೆ ಎಷ್ಟು ಉನ್ನತಗಳಾಗಿರುವುವು ನೋಡಿದೆಯಾ? ಇದಲ್ಲದೆ ಎಲೆವತ್ಸನೆ' ಭರತನ†ವಿಷಯವಾದ ದುಃಖವೊಂದು!ಸೀತೆಯನ್ನು ಕಳೆದುಕೊಂಡ ಮಹಾವ್ಯಸನವೊಂದು! ಇವೆರಡರಿಂದಲೂ ನಾನು ಬಹಳವಾಗಿ ನೊಂದಿರುವೆನು ಮೊದಲೇ ದುಃಖಾರ್ತನಾದ ನನ್ನನ್ನು ಈಗಿನ ವಸಂತಋತುವು ಮತ್ತಷ್ಟು ದುಃಖಿತನನ್ನಾಗಿ ಮಾಡಿ ಪೀಡಿಸುವಂತಿದೆ ! ವಿಚಿತ್ರವಾದ ತೋಪುಗಳುಳ್ಳ ಈ ಸಂಪಾಸರೋವರವು ಮನಸ್ಸನ್ನು ಎಷ್ಟು ಆಹ್ಲಾದಪಡಿಸುತ್ತಿರುವುದು ನೋಡು! ಇದರಲ್ಲಿರುವ ಬಗೆಬಗೆಯ ಪುಷ್ಪಗಳೂ ಮನಸ್ಸಿಗೆ ಎಷ್ಟೋ ಆನಂದವನ್ನುಂಟುಮಾಡುತ್ತಿರುವುವು ‡ಇದರಲ್ಲಿ ಸರ್ಪಗಳೂ,ಹೆಬ್ಬಾವುಗಳೂ ಸೇರಿಕೊಂಡಿದ್ದರೂ, ಇದರಮೇಲೆ ಕಮಲಗಳು ದಟ್ಟವಾಗಿ ಮುಚ್ಚಿಕೊಂಡಿರುವುದರಿಂದ ನೋಡುವುದಕ್ಕೆ ಪ್ರಿಯವನ್ನುಂಟುಮಾಡುವುದು ಮೃಗಗಳೂ, ಪಕ್ಷಿಗಳೂ,

---

* ಇಲ್ಲಿ ಪಂಪಾತೀರಾಶ್ರಯಿಗಳಾದ ವೃಕ್ಷಗಳನ್ನೂ,ಆ ವೃಕ್ಷವನ್ನು ನೆಮ್ಮಿರುವ ಶಾಖೆಗಳನ್ನೂ ಹೇಳಿರುವುದರಿಂದ,ಭಗವತ್ಕೃಪಾಶ್ರಯದಿಂದುಪಜೀವಿಸುವ ಆಚಾರ್ಯರೂ, ಆ ಆಚಾರ್ಯೋಪಜೀವಿಗಳಾದ ಶಿಷ್ಯರೂ ಸೂಚಿಸಲ್ಪಡುವರು "ಅತ್ರಪರತ್ರಚಾಪಿ" ಎಂಬ ನ್ಯಾಯದಿಂದ ನಿತ್ಯವಿಭೂತಿಯಲ್ಲಿಯೂ ಈ ಬಗೆಯ ಸಾನ್ನಿಧ್ಯವುಂಟೆಂದು ಸಿದ್ಧವಾಗುವುದು

† ಇಲ್ಲಿ ಭರತನ ದುಃಖವನ್ನು ನೋಡಿ ರಾಮನು ದುಃಖಿಸುತಿದ್ದನೆಂಬುದರಿಂದ, ಸಂಸಾರದಲ್ಲಿ ಬಿದ್ದು ದುಃಖಿಸುತ್ತಿರುವ ಚೇತನರನ್ನು ನೋಡಿ ಭಗವಂತನೂ ದುಃಖಿಸುವನೆಂಬ ಭಾವವು ಸೂಚಿತವು

‡ ಇಲ್ಲಿ ಸರ್ಪಾದಿಕ್ರೂರಜಂತುಗಳಿದ್ದರೂ ಈ ಸರೋವರವು ಪದ್ಮೋತ್ಪಲಾದಿಗಳಿಂದ ಮನೋಹರವಾಗಿರುವುದೆಂದು ಹೇಳುವುದರಿಂದ, ಜ್ಞಾನಿಯಲ್ಲಿ ಏನಾದರೂ ದೋಷವಿದ್ದರೂ, ಅದರಿಂದ ಆತನಿಗೆ ಹೇಯತ್ವವುಂಟಾಗದೆಂದು ಸೂಚಿತವು. "ಶೇಷಾಂ ತೇಜೋವಿಶೇಷೇಣ ಹೃತ್ಯವಾಯೋ ನ ವಿದ್ಯತೇ" ಎಂಬ ಸ್ಮೃತ್ಯನುಸಾರವಾಗಿ,ಅವರ ತೇಜೋವಿಶೇಷವೇ ಇತರದೋಷಗಳೆಲ್ಲವನ್ನೂ ಅಡಗಿಸುವುದೆಂದರ್ಥವು.

ಹೇರಳವಾಗಿರುವುವು ಇದೋ! ಇಲ್ಲಿ * ಹಸುರು ಮತ್ತು ಹಳದಿಯ ಬಣ್ಣಗಳಿಂದ ಹೊಳೆಯುವ ಗುಹೆಯು, ತನ್ನ ಮೇಲೆ ಉದುರಿಬಿದ್ದಿರುವ ಬಗೆಬಗೆಯ ಬಣ್ಣಗಳುಳ್ಳ ಹೂಗಳಿಂದ ಮತ್ತಷ್ಟು ರಮ್ಯವಾಗಿ, ಅಷ್ಟಗಲಕ್ಕೂ ರತ್ನಕಂಬಳವನ್ನು ಹಾಸಿದಂತೆ ಕಾಣುವುದು ನೋಡು ಮರದಲ್ಲಿ ಕೊನೆಗಳು ಹೆಚ್ಚಿದ್ದರೂ ಅವು ಹೂಗೊಂಚಲುಗಳಿಂದ ತುಂಬಿರುವುದನ್ನೂ ಒಂದೊಂದು ಮರಕ್ಕೂ † ಹೂಬಳ್ಳಿಗಳು ಹಬ್ಬಿ ಬೆಳದಿರುವುದನ್ನೂ ನೋಡಿದೆಯಾ? ಎಲೆ ವತ್ಸನೆ! ಇನ್ನೇನು? ‡ ವಸಂತಕಾಲವು ಪ್ರಾಪ್ತವಾಗಿರುವುದು ಈಗ ಸುಖಸ್ಪರ್ಶವುಳ್ಳ ಗಾಳಿಯೂ ಬೀಸುತ್ತಿರುವುದು ಇವೆಲ್ಲವೂ ಮನ್ಮಥವಿಕಾರವನ್ನು ಹೆಚ್ಚಿಸುವುವು ನಾಲ್ಕುಕಡೆಗಳಿಂದಲೂ ಘಮಘಮಿಸುತ್ತಿರುವ ಪುಷ್ಪಗಂಧವು ಹೊರಟುಬರುವುದನ್ನು ನೋಡಿದೆಯಾ ? ಈಗ ಯಾವ ಗಿಡಬಳ್ಳಿಗಳನ್ನು ನೋಡದರೂ ಪುಷ್ಪಫಲಗಳಿಂದ ತುಂಬಿರುವುವು ಲಕ್ಷ್ಮಣಾ! § ಮಳೆಯನ್ನು ಕರೆಯುವ' ಮೇಘದಂತೆ ಸುತ್ತಲೂ ಪುಷ್ಪವರ್ಷವನ್ನು ಕರೆಯುವ ಈ ವನಗಳ ಅಂದವನ್ನು ನೋಡಿದೆಯಾ ? ಮನೋಹರವಾದ ¶ ಗಾಳಿಯಿಂದಾಡುತ್ತಿರುವ ಈ ಬಗೆಬಗೆಯ ಕಾಡುಮರಗಳು

---

* ಇಲ್ಲಿ ಬಗೆಬಗೆಯ ಬಣ್ಣಗಳುಳ್ಳ ಹೂಗಳಿಂದ ತುಂಬಿದ ಶಾದ್ವಲಪ್ರದೇಶವನ್ನು ರತ್ನಕಂಬಳಕ್ಕೆ ಹೋಲಿಸಿರುವುದರಿಂದ, ಚೇತನನಿಗೆ ಅನೇಕ ಗುರುಗಳಮುಖವಾಗಿ ಜ್ಞಾನವು ಲಭಿಸುವುದರಿಂದ, ಆತನ ಮನಸ್ಸು ಭಗವಂತನ ನಿತ್ಯನಿವಾಸಕ್ಕೆ ಯೋಗ್ಯವಾಗುವುದೆಂಬ ಭಾವವು ಸೂಚಿತವಾಗುವುದು

† ಇಲ್ಲಿ ಮರಬಳ್ಳಿಗಳು ಬಹುಶಾಖೆಗಳಿಂದ ತುಂಬಿದ್ದರೂ, ಪುಷ್ಪಗಳೇ ಹೆಚ್ಚಾಗಿ ಕಾಣುತ್ತಿರುವುವೆಂಬುದರಿಂದ, ಕುಟುಂಬಿಗಳಾಗಿದ್ದರೂ ನಿರವಧಿಕಜ್ಞಾನವನ್ನು ಹೊಂದಿದವರು ಭಗವದನುಗ್ರಹಪಾತ್ರರೆಂದು ಸೂಚಿತವು.

‡ ವಸಂತಋತುವು ಮನ್ಮಥೋದ್ದೀಪಕವಾದ ಸುಗಂಧವಾಯುವಿನಿಂದತುಂಬಿ, ಪುಷ್ಪಫಲಸಮೃದ್ಧವಾಗಿರುವುದೆಂಬುದರಿಂದ, ಜನಕಾದಿಗಳೆಂತೆ ಐಶ್ವರ್ಯಸಮೃದ್ಧಿಯುಳ್ಳವರಾಗಿದ್ದಾಗಲೂ, ಭಗವದ್ಭಾಗ್ಯನಿರತರಾದವರೇ ಕೃಪಾಪಾತ್ರರೆಂದು ಸೂಚಿತವು.

§ ಹೂಗಳೆನ್ನು ಚೆಲ್ಲುವ' ಗಿಡಗಳೆಂಬುದರಿಂದ ಜ್ಞಾನೋಪದೇಶವನ್ನು ಮಾಡತಕ್ಕ ಆಚಾರ್ಯರೆಂದರ್ಥವು.

¶ ಇಲ್ಲಿ ಶಿಲೆಗಳಮೇಲೆಯೂ ವೃಕ್ಷಗಳು ಹೂಗಳನ್ನು ಚೆಲ್ಲುತ್ತಿರುವುವೆಂಬುದ

ಸುತ್ತಲೂ ಈ ಕಲ್ಲುಬಂಡೆಗಳಮೇಲೆ ಹೂಗಳನ್ನು ಚೆಲ್ಲುತ್ತಿರುವುವು ನೋಡು ವಾಯುವೇಗದಿಂದ ಎಷ್ಟೋಹೂಗಳು ನೆಲದಮೇಲೆ ಬಿದ್ದಿರುವುವು ಈಗಲೇ ಕೆಲವು ಬೀಳುತ್ತಿರುವುವು ಮತ್ತೆಕೆಲವು ಆ ವೃಕ್ಷದಲ್ಲಿಯೇ ಅಂಟಿಕೊಂಡು ಬೀಳುವ ಸ್ಥಿತಿಯಲ್ಲಿರುವುವು ಇದನ್ನು ನೋಡಿದರೆ ವಸಂತದ ಗಾಳಿಯು ಈ ಹೂಗಳಿಂದ ಆಟವಾಡುತ್ತಿರುವಂತೆ ಕಾಣುವುದು ನೋಡು. * ಮತ್ತು ಈ ಮಂದಮಾರುತವು ಪುಷ್ಪಿತಗಳಾದ ವೃಕ್ಷಶಾಖೆಗಳನ್ನಲುಗಿಸುವುದರಿಂದ, ಆ ಹೂಗಳು ಕೆಳಗೆ ಬೀಳುವಾಗ, ಅವುಗಳಲ್ಲಿ ಮಕರಂದಪಾನ ಮಾಡುತಿದ್ದ ದುಂಬಿಗಳು ಸಂಭ್ರಮದಿಂದ ಮೇಲೆಹಾರಿ ಝಂಕಾರವನ್ನು ಮಾಡುತ್ತ, ಅತ್ತಿತ್ತ ಓಡಾಡುತ್ತಿರುವುದನ್ನು ನೋಡು! ನಟರಿಂದ ನರ್ತನವನ್ನು ಮಾಡಿಸುತ್ತ ಹಿಂದೆಸಿಂತು ಹಾಡುವವನಂತೆ,† ಈವಸಂತಮಾರುತವು ವೃಕ್ಷಗಳಿಂದ ನರ್ತನವನ್ನು ಮಾಡಿಸುವುದಕ್ಕಾಗಿ ಮತ್ತ ಕೋಕಿಲಗಳ ಧ್ವನಿಯೆಂಬ ಗಾನವನ್ನು ತೋರಿಸುತ್ತ, ಪರ್ವತಗುಹೆಯಿಂದ ಹೊರಟು ಬೀಸುತ್ತಿರುವುದನ್ನು ನೋಡು! ‡ ಈ ಗಾಳಿಯು ವೇಗದಿಂದ ಬೀಸುವಾಗ, ಅದರ

ರಿಂದ, ಕರಿನ ಹೃದಯರಲ್ಲಿಯೂ ದಯೆಯಿಂದ ಜ್ಞಾನೋಪದೇಶವನ್ನು ಮಾಡತಕ್ಕ ಆಚಾರ್ಯರೆಂಬ ಭಾವವು ಸೂಚಿತವು

* ಇಲ್ಲಿ ಪುಷ್ಪಭರಿತಗಳಾದ ಕೊಂಬೆಗಳು ವಾಯುಪ್ರೇರಿತಗಳಾಗಿ ಭ್ರಮರ ಝಂಕಾರಗಳಿಂದ ಕೂಡಿರುವುವೆಂಬುದರಿಂದ, ಭಗವಂತನು "ಜ್ಞಾನೀತ್ವತ್ಮೈವಮೇ ಮತಂ" ಎಂಬುದಾಗಿ, ತನಗೆ ಆತ್ಮಭೂತರಾದ ಜ್ಞಾನಿಗಳಿಗೆ ಭಕ್ತಿಯನ್ನು ಹಚ್ಚಿಸುವುದಕ್ಕಾಗಿ, ತಾನು ಭೂಮಿಯಲ್ಲಿ ಅವತರಿಸಲು "ಇರ್ಮಾಲೋಕಾ ಕಾಮರೂಪ್ಯನು ಸಂಚರೆ । ಏತತ್ಸಾಮಗಾಯನ್ನಾಸ್ತೇ" ಎಂಬಂತೆ, ಅವನನ್ನು ಕುರಿತು ಸಾಮಗಾನವನ್ನು ಮಾಡುತ್ತ ಅನುಸರಿಸುತ್ತಿರುವ ಭಕ್ತಜನರು ಸೂಚಿತರಾಗುವರು

† ಇಲ್ಲಿ ವೃಕ್ಷಗಳನ್ನಾಡಿಸುವುದಕ್ಕಾಗಿ ಗಾಳಿಯು ಧ್ವನಿಮಾಡುತ್ತ ಗುಹೆಯಿಂದ ಹೊರಟು ಬರುವುದೆಂಬುದರಿಂದ, ವೇದಪ್ರಸಾರಣದ ಮೂಲಕವಾಗಿ ಜನರಿಗೆ ಭಕ್ತಿಯನ್ನು ಹುಟ್ಟಿಸುವುದಕ್ಕಾಗಿ ಭಗವಂತನು ವೈಕುಂಠದಿಂದ ಬಂದು ಅವತರಿಸುವನೆಂಬ ಭಾವವು ಸೂಚಿತವು

‡ ಇಲ್ಲಿ ವಾಯುವೇಗದಿಂದ ವೃಕ್ಷಶಾಖೆಗಳು ಒಂದಕ್ಕೊಂದಕ್ಕೆ ಕಟ್ಟಿಟ್ಟಂತೆ ಸೇರುವುದಾಗಿ ಹೇಳಿರುವುದರಿಂದ, ಭಗವತ್ಕೈಂಕರ್ಯಕ್ಕೆ ಪಾತ್ರರಾದ ಭಾಗವತದಲ್ಲಿರುವ ಪರಸ್ಪರಾನುರಾಗವು ಸೂಚಿತವು.

ವೇಗಕ್ಕೆ ಸಿಕ್ಕಿದ ವೃಕ್ಷಶಾಖೆಗಳು ಒಂದಕ್ಕೊಂದು ತಗುಲಿ ಒಂದೊಂದಕ್ಕೆ ಸೇರಿಸಿ ಕಟ್ಟಿಟ್ಟಂತೆ ಕಾಣುವುವು ನೋಡು' ವತ್ಸ ಲಕ್ಷ್ಮಣಾ ! * ಚಂದನ ರಸದಂತೆ ಶೀತಲವಾಗಿ ಸುಖಸ್ಪರ್ಶವುಳ್ಳ ಈ ಗಾಳಿಯು ಎಷ್ಟು ಸುವಾಸನೆಯನ್ನು ಹೊರಡಿಸುತ್ತಿರುವುದು ನೋಡಿದೆಯಾ ! ಇದನ್ನನುಭವಿಸುವವರಿಗೆ ಎಷ್ಟು ಬಳಲಿಕೆಯಿದ್ದರೂ ನೀಗಿಸುವಂತಿರುವುದು ಮಕರಂದದ ಸುವಾಸನೆಯುಳ್ಳ ಈ ವನಗಳಲ್ಲಿ ವೃಕ್ಷಗಳೆಲ್ಲವೂ ಭ್ರಮರಧ್ವನಿಗಳೆಂಬ ವ್ಯಾಜದಿಂದ ಕೂಗುವಂತೆ ತೋರುವುದು ನೋಡು' ಮನೋಹರವಾದ ಈ ಬೆಟ್ಟದ ತಪ್ಪಲುಗಳಲ್ಲಿ ಪುಷ್ಪಿತಗಳಾದ ಗಿಡಗಳು, ಆ ಬೆಟ್ಟದ ಶಿಖರಗಳೇ ಗೋಚರಿಸದಂತೆ ದಟ್ಟವಾಗಿ ಬೆಳೆದಿರುವುದನ್ನು ನೋಡಿದೆಯಾ? † ಈ ಗಿಡಗಳು ಹೂಗಳಿಂದ ತುಂಬಿ ಗಾಳಿಯಿಂದಲುಗುತ್ತಿರುವಾಗ, ಅವುಗಳೊಳಗಿನ ಭ್ರಮರಗಳು ಕೂಗಿಡುತ್ತಿರಲು, ಈ ಮರಗಳೆಲ್ಲವೂ ಸೇರಿ ಗಾನನರ್ತನಗಳನ್ನು ಮಾಡುವಂತೆ ಕಾಣುವುವು ಪುಷ್ಪಗಳಿಂದ ತುಂಬಿದ ಕೊನೆಗಳುಳ್ಳುದಾಗಿ, ಸುತ್ತಲೂ ಕಾಣುತ್ತಿರುವ ಈ ಕರ್ಣಿಕಾರವೃಕ್ಷಗಳನ್ನು ನೋಡು ‡ ಸುವರ್ಣಾಲಂಕೃತರಾಗಿ ಪೀತಾಂಬರವನ್ನುಟ್ಟಿರುವ ಪುರುಷರಂತೆ ಕಾಣುತ್ತಿರುವುವು ವತ್ಸ ಲಕ್ಷ್ಮಣಾ ! § ಈ ವಸಂತಕಾಲವು, ಕಿವಿಗಿಂ

---

* ಇಲ್ಲಿ ಸುಗಂಧಸುಸ್ಪರ್ಶಾದಿಗಳುಳ್ಳ ವಾಯುವಿನ ಅಗಮನವನ್ನು ಹೇಳಿರುವುದರಿಂದ "ಸರ್ವಗಂಧಸ್ಸರ್ವರಸಃ" ಎಂಬ ಲಕ್ಷಣೋಕ್ತವಾದ ಭಗವತ್ಸ್ವರೂಪವು ಭಕ್ತಜನಗಳಿಗೆ ಸನ್ನಿಹಿತವಾಗಿರುವುದೆಂಬ ಭಾವವು ಸೂಚಿತವು

† ಇಲ್ಲಿ ವಾಯುಪ್ರೇರಿತಗಳಾದ ಮರಗಳ ಶಾಖೆಗಳು ಚಲಿಸುವುದನ್ನೂ, ಅವುಗಳಲ್ಲಿ ಭ್ರಮರಗಾನವನ್ನೂ ಹೇಳುವುದರಿಂದ, ಭಕ್ತಿವಶದಿಂದ ಆನಂದಪರವಶರಾದ ಭಕ್ತರು ಮಾಡುವ ಗಾನನರ್ತನಾದಿಗಳು ಸೂಚಿತಗಳಾಗಿವೆ.

‡ ಇಲ್ಲಿ ವೃಕ್ಷಗಳೆನ್ನು ಪೀತಾಂಬರಧಾರಿಗಳೆಗೆ ಹೋಲಿಸಿರುವುದರಿಂದ ಭಗವತ್ಸಾರೂಪ್ಯವನ್ನು ಹೊಂದಿದ ಜ್ಞಾನಿಗಳೆಂದು ಸೂಚಿತವು.

§ ಇಲ್ಲಿ ವಸಂತವು ನಾನಾಪಕ್ಷಿಧ್ವನಿಗಳಿಂದೊಪ್ಪುತಿದ್ದರೂ, ಸೀತೆಯಿಲ್ಲದುದರಿಂದ ನನಗೆ ದುಃಖವನ್ನುಂಟುಮಾಡುವುದೆಂಬುದರಿಂದ, ತನ್ನ ಭಕ್ತರನೇಕರು ನನ್ನನ್ನನುಭವಿಸಿ ತೃಪ್ತರಾಗಿ ಆನಂದಿಸುತಿದ್ದರೂ,ಬದ್ಧರು ಹಾಗಿಲ್ಲದುದರಿಂದೆ,ತನಗೆ ದುಃಖವನ್ನುಂಟುಮಾಡುವರೆಂಬ ಭಾವವು ಸೂಚಿತವಾಗುವುದು. ರಾಮನು ಹಿಂದೆ ತನ್ನ

ಪಾದ ಅನೇಕಪಕ್ಷಿಗಳ ಕೋಲಾಹಲದಿಂದ ಕೂಡಿದ್ದರೂ,ಮೊದಲೇ ಸೀತಾ ವಿಯೋಗದಿಂದ ಕೊರಗುತ್ತಿರುವ ನನ್ನ ದುಃಖವನ್ನು ಮೇಲೆಮೇಲೆ ಹೆಚ್ಚಿಸುತ್ತಿರುವುದು ಮೊದಲೇ ದುಃಖಪೀಡಿತನಾದ ನನ್ನನ್ನು ಈಗ ಮನ್ಮಥನು ಮತ್ತಷ್ಟು ಸಂತಾಪಪಡಿಸುವನು ಇದೋ ! ಇಲ್ಲಿ * ಕೋಗಿಲೆಯು ಈಗ ತನಗುಂಟಾಗಿರುವ ಸಂತೋಷಾತಿಶಯದ ಗರ್ವದಿಂದ, ದುಃಖಿತನಾದ ನನ್ನನ್ನು ಕೂಗಿ ಕರೆದು ಹಂಗಿಸುವಂತೆ ಧ್ವನಿಮಾಡುತ್ತಿರುವುದು ಇದೋ' ಮನೋಹರವಾದ ಈ ನದಿಯ ಬಳಿಯಲ್ಲಿರುವ ಈ † ಸೀರು ಹಕ್ಕಿಗಳು, ಏನೋ ಸಂತೋಷದಿಂದ ಕೂಗಿಡುತ್ತ, ಮೊದಲೇ ಕಾಮುಬಾಣಪೀಡಿತನಾದ ನನ್ನನ್ನು ಮತ್ತಷ್ಟು ಸಂಕಟಪಡಿಸುತ್ತಿರುವುವು ನೋಡಿದೆಯಾ'ಮೊದಲು‡ಸೀತೆಯು ಈ ಆಶ್ರಮದಲ್ಲಿರುವಾಗ,ಇದರ ಕೂಗನ್ನು ಕೇಳಿ ದೊಡನೆ ಕಾವೋದ್ರೇಕವನ್ನು ಹೆಂಡಿ ಆ ಕ್ಷಣವೇ ನನ್ನನ್ನು ಕರೆದು ನನ್ನೊಡನೆ ಯಥೇಚ್ಛವಾದ ಕ್ರೀಡಾರಸವನ್ನನುಭವಿಸಿ ಆನಂದಿಸಿದಳಲ್ಲವೆ ? ವತ್ಸನೆ ! §ಚಿತ್ರವಿಚಿತ್ರಗಳಾದ ಈ ಪಕ್ಷಿಗಳೆಲ್ಲವೂ ಬಗೆಬಗೆಯ ಧ್ವನಿಗಳಿಂದ

ಪಟ್ಟಾಭಿಷೇಕಕ್ಕಾಗಿ ನಿರ್ಣಯಿಸಲ್ಪಟ್ಟ ವಸಂತಋತುವಿನಲ್ಲಿಯೇ ಅಯೋಧ್ಯೆಯನ್ನು ಬಿಟ್ಟು ಹೊರಟನು ಈಗಲೂ ವಸಂತವು ವರ್ಣಿಸಲ್ಪಡುವುದರಿಂದ ಇಲ್ಲಿಗೆ ಸರಿಯಾಗಿ ಹದಿಮೂರುವರ್ಷಗಳ ಕಾಲವು ವನವಾಸದಲ್ಲಿ ಕಳೆದುಹೋದುವೆಂದು ಗ್ರಾಹ್ಯವು.

* ಇಲ್ಲಿ ಕೋಗಿಲೆಗಳು ತನ್ನನ್ನು ಹಂಗಿಸುವುವೆಂಬುದರಿಂದ ಜ್ಞಾನವಿಲ್ಲಿಯೇ ತನಗೆ ವಾತ್ಸಲ್ಯವೆಂಬುದನ್ನರಿಯದೆ, ಕೇವಲ ಕರ್ಮರಠಾದವರು ತಮ್ಮ ಕರ್ಮಗಳಿಂದ ತನ್ನನ್ನು ಹಂಗಿಸುವರೆಂದು ಭಾವವು

† ಇಲ್ಲಿ ಸೀರುಹಕ್ಕಿಗಳೆಂಬುದರಿಂದ ಕೇವಲ ಜಪಪರರೆಂದು ಭಾವವು. ''ಜ್ಞಾನೀ ತ್ವಾತ್ಮೈವಮೇಮತಮ್'' ಎಂದೂ, ''ಭಕ್ತಿಕ್ಕೇತೋಜನಾರ್ದನ'' ಎಂದೂ, ಜ್ಞಾನ ಭಕ್ತಿಗಳೇ ಭಗವಂತನಿಗೆ ಸದ್ಯಃಪ್ರೀತಿಕರಗಳಾದುದರಿಂದ, ಜಪಾದಿಸಾಧನಾಂತರ ಪರರು ಆತನಿಗೆ ಅಷ್ಟು ಪ್ರಿಯರಲ್ಲವೆಂದು ಸೂಚಿತವು.

‡ ಇಲ್ಲಿ ಸೀತೆಯು ತನ್ನನ್ನು ಕರೆದು ಆನಂದಿಸಿದಳೆಂಬುದರಿಂದ, ತನ್ನನ್ನು ಹೊರತು ಬೇರೆ ಪ್ರಯೋಜನಾಂತರವನ್ನಪೇಕ್ಷಿಸದೆ ಮಾಡತಕ್ಕ ಜಪಾದಿಗಳೇ ತನಗೆ ಪ್ರೀತಿಕರವೆಂದು ಭಾವವು

§ ಇದರಿಂದ ಆಚಾರ್ಯಪರತಂತ್ರವಾಗಿ ಸಾಮಗಾನವನ್ನು ಮಾಡತಕ್ಕ ಶಿಷ್ಯವರ್ಗವು ಸೂಚಿತವು.

ಕೂಗುತ್ತ ಇಲ್ಲಿ ಸುತ್ತಲೂ ಇರುವ ಗಿಡುಬಳ್ಳಿಗಳಲ್ಲಿ ಸೇರಿಕೊಂಡಿರುವುವು ನೋಡು! ಇದೋ! ಇಲ್ಲಿ ಹೆಣ್ಣುಹಕ್ಕಿಗಳು ತಮಗೊಪ್ಪಿದ ಗಂಡುಹಕ್ಕಿಗಳೊಡಗೂಡಿ, ಎಷ್ಟೋ ಸಂತೊಷದಿಂದ ಕ್ರೀಡಿಸುತ್ತಿರುವುವು ಈ ಅನುರೂಪದಾಂಪತ್ಯವನ್ನು ನೋಡಿ, ಆಗುಂಪಿನ ಇತರಪಕ್ಷಿಗಳೆಲ್ಲವೂ ಸಂತೋಷದಿಂದ ಅಭಿನಂದಿಸುತ್ತಿರುವುವು ಈ ಪಕ್ಷಿದಂಪತಿಗಳು ಸಂತೋಷದಿಂದ ಯಥೇಚ್ಛವಾಗಿ ಕ್ರೀಡಿಸುತ್ತಿರುವಾಗ, ನಾಲ್ಕು ಕಡೆಗಳಿಂದಲೂ ಹೊರಟು ಬರುತ್ತಿರುವ ಭ್ರಮರಧ್ವನಿಯನ್ನು ಕೇಳಿ ಆನಂದದಿಂದ ಮೃತಿಳಿಯದೆ, ಆ ಧ್ವನಿಯನ್ನನುಸರಿಸಿ ತಾವೂ ರತಿಕೂಜಿತವನ್ನು ಮಾಡುತ್ತಿರುವುವು ನೋಡು!*ಅಲ್ಲಲ್ಲಿ ಮರಗಳಮೇಲೆ ನೀರುಕೋಳಿಗಳೂ, ಕೋಗಿಲೆಗಳೂ ಕೂಗುತ್ತಿರುವುದರಿಂದ, ಆಯಾ ಮರಗಳೇ ಧ್ವನಿಮಾಡುವಂತೆ ತೋರುತ್ತ, ನನ್ನನ್ನು ಆಹ್ಲಾದಪಡಿಸುತ್ತಿರುವುವು. ವತ್ಸನೆ! ಇನ್ನು ಹೆಚ್ಚಾಗಿ ಹೇಳಿದುದರಿಂದೇನು! ಅಶೋಕಪುಷ್ಪಗಳ ಗೊಂಚಲುಗಳೆಂಬ ಕೆಂಡಗಳಿಂದಲೂ, ಭ್ರಮರಝಂಕಾರವೆಂಬ ಛಟಛಟಾತ್ಕಾರಗಳಿಂದಲೂ, ಚಿಗುರುಗಳೆಂಬ ಜ್ವಾಲೆಗಳಿಂದಲೂ ಕೂಡಿ, ಜಾಜ್ವಲ್ಯಮಾನವಾಗಿ ಉರಿಯುತ್ತಿರುವ †ಈಗಿನ ವಸಂತಾಗ್ನಿಯು ನನ್ನನ್ನು ಸುಡುತ್ತಿರುವುದಲ್ಲಾ! ಲಕ್ಷ್ಮಣಾ! ಮುಖ್ಯವಾಗಿ ಸೂಕ್ಷ್ಮವಾದ ಕಣ್ಣೆವೆಗಳಿಂದಲೂ, ನುಣುಪಾದ ಕೂದಲುಗಳಿಂದಲೂ, ಕಿವಿಗಿಂಪಾದ ಸಲ್ಲಾಪಗಳಿಂದಲೂ ಕೂಡಿದ ‡ಆ ಸೀತೆಯನ್ನು ಕಾಣದಿದ್ದಮೇಲೆ, ನಾನು ಬದುಕಿಯೂ ಪ್ರಯೋಜನವಿಲ್ಲ ವತ್ಸನೆ! ಫಲಪುಷ್ಪಗಳಿಂದ ತುಂಬಿದ ತೋಟಗಳಿಂದಲೂ, ಇಂಪಾದ ಕೋಕಿಲಧ್ವನಿಗಳಿಂದಲೂ, ಕಣ್ಣು ಕಿವಿಗಳೆರಡಕ್ಕೂ ಪರಮಾಹ್ಲಾದವನ್ನುಂಟುಮಾಡುವ ಈ ವಸಂತಕಾಲವು

---

* ಇದರಿಂದ ನಾನಾವಿಧನಾಗಿ ಭಗವನ್ನಾಮಕೀರ್ತನ ಮಾಡತಕ್ಕ ಭಕ್ತರೆಂದು ಸೂಚಿತವು

† ವಸಂತವು ತನ್ನನ್ನು ದಹಿಸುವುದೆಂಬುದರಿಂದ, ಭಕ್ತಿಯುಕ್ತರಲ್ಲದವರು ತನಗೆ ಪ್ರೇಮವನ್ನು ಹುಟ್ಟಿಸಲಾರರೆಂದು ಭಾವವು

‡ ಸೀತೆಯಿಲ್ಲದ ಮೇಲೆ ತನಗೆ ಬದುಕೇಕೆಂದು ಹೇಳಿದುದರಿಂದ, ಸಮಸ್ತಪ್ರಾಣಿಗಳೂ ನನ್ನ ಪ್ರೇಮಕ್ಕೆ ಪಾತ್ರರಾಗಿರುವಾಗ, ಸಂಸಾರಿಯಾದ ಚೇತನನು ದುಃಖವನ್ನೆನುಭವಿಸುವುದು ತನಗೆ ಸಹಿಸಲಸಾಧ್ಯವಾಗಿರುವುದೆಂದು ಭಾವವು.

ನನ್ನ ಪ್ರಿಯೆಯಾದ ಸೀತೆಗೆ ಬಹಳ ಇಷ್ಟವಾದುದು ಎಲೆವತ್ಸನೆ! ವಸಂತನು ಮನ್ಮಥನಿಗೆ ಪರಮಾಪ್ತನೆಂಬುದು ಈಗ ಚೆನ್ನಾಗಿ ನಿದರ್ಶನಕ್ಕೆ ಬರುವುದು ಈಗ ನನ್ನ ದೇಹದಲ್ಲಿರುವ ದುಃಖಾಗ್ನಿಯು ಮನ್ಮಥತಾಪದಿಂದಲೇ ಹುಟ್ಟಿತೆಂದು ತಿಳಿದು, ಅದನ್ನು ಈ ವಸಂತನು ತನ್ನ ಸೊಂಪಿನಿಂದ ಮೇಲೆಮೇಲೆ ಉರಿಸುತ್ತಿರುವನು? ಇವನು ಇನ್ನು ಶೀಘ್ರದಲ್ಲಿಯೇ ನನ್ನನ್ನು ದಹಿಸದೆ ಬಿಡನು ಆ ಪ್ರಿಯೆಯನ್ನು ಕಾಣದೆ ಇಲ್ಲಿನ ಮನೋಹರಗಳಾದ ವೃಕ್ಷಗಳನ್ನು ನೋಡುತ್ತಿರುವ ನನಗೆ ಮನ್ಮಥತಾತವು ಕೊನೆಗಾಣದಂತೆ ಬೆಳೆದು ಹೋಗುತ್ತಿರುವುದು ಆ ಸೀತೆಯನ್ನು ಕಾಣದಿರುವುದರಿಂದಲೇ ನನ್ನ ದುಃಖವು ಕ್ಷಣಕ್ಷಣಕ್ಕೂ ಹೆಚ್ಚುತ್ತಿರವುದು. ಇದರಮೇಲೆ ಈಗಲಾದರೋ, ಮಂದಮಾರುತದಿಂದ ನಾಯಿಕಾನಾಯಕರಿಗೆ ರತಿಶ್ರಮಜನ್ಯವಾದ ಬೆವರನ್ನಾರಿಸತಕ್ಕುದಾಗಿಯೂ, ಫಲಪುಷ್ಪಗಳಿಂದ ತುಂಬಿ ನೇತ್ರಾನಂದಕರವಾಗಿಯೂ ಇರುವ ಈ ವಸಂತವು, ಅದನ್ನು ಮತ್ತಷ್ಟು ಹೆಚ್ಚಿಸುತ್ತಿರುವುದು ಎಲೆವತ್ಸನೆ! ಈ ತಂಗಾಳಿಯ ಕ್ರೂರಸ್ವಭಾವವನ್ನು ನೋಡಿದೆಯಾ? ಜಿಂಕೆಯ ಕಣ್ಣುಗಳಂತೆ ಕಣ್ಣುಗಳುಳ್ಳ ಆ ಸೀತೆಯವಿಷಯವಾಗಿ ನಾನು ಮೊದಲೇ ಚಿಂತಿಸಿ ಕೊರಗುತ್ತಿರುವೆನು ಈ ದುರವಸ್ಥೆಯಲ್ಲಿರುವಾಗಲೂ ನನ್ನಲ್ಲಿ ಸ್ವಲ್ಪವೂ ಮರುಕವಿಲ್ಲದೆ ಈ ವಸಂತಮಾರುತವು ನನ್ನನ್ನು ಮೇಲೆಮೇಲೆ ಪೀಡಿಸುತ್ತಿರುವುದಲ್ಲಾ! ವತ್ಸನೆ! ಅದೋ! *ಅಲ್ಲಲ್ಲಿ ಕುಣಿಯುತ್ತಿರುವ ಈ ನವಿಲುಗಳ ಸೊಗಸನ್ನು ನೋಡಿದೆಯಾ? ಅವು ಬಿಚ್ಚಿಟ್ಟಿರುವ ಗರಿಗಳು, ಆಗಾಗ ಗಾಳಿಗೆ ಅಲುಗುತ್ತಿರುವುದರಿಂದ, ನಡುನಡುವೆ ಸಂದುಗಳು ಬಿಟ್ಟು, ಸ್ಪಟಿಕದ ಗವಾಕ್ಷಜಾಲಗಳಂತೆ ಕಾಣುವುವು ನೋಡು! ಇದೋ! †ಇಲ್ಲಿ ಕೆಲವು ನವಿಲುಗಳು

---

* ಇಲ್ಲಿ ವಾಯುಪ್ರೇರಿತಗಳಾದ ಗರಿಗಳೊಡನೆ ನವಿಲುಗಳು ಆಡುವುವೆಂದು ಹೇಳಿರುವುದರಿಂದ, ಭಗವತ್ಕೃಪಾಪ್ರೇರಿತರಾಗಿ ನಾನಾವಿಧಕರ್ಮಗಳನ್ನಾಚರಿಸುವರು ಸೂಚಿತರಾಗುವರು

† ಇಲ್ಲಿ ಹೆಣ್ಣುನವಿಲು ಗಂಡುನವಿಲಿನೊಡನೆ ಕೂಡಿರುವುದನ್ನು ನೋಡಿ ತನಗೆ ತಾಪವು ಹಚ್ಚುವುದಾಗಿ ಹೇಳಿದುದರಿಂದ, ಶಿಷ್ಯರೊಡಗೂಡಿದ ಭಕ್ತರನ್ನು ನೋಡಿದ ಮಾತ್ರಕ್ಕೆ ನೊದಲು ಅವರಲ್ಲಿ ಭಕ್ತಿಯನ್ನು ಹುಟ್ಟಿಸಬೇಕೆಂಬ ವ್ಯಾಮೋಹವು ಭಗವಂತನಿಗುಂಟಾಗುವುದೆಂದು ಸೂಚಿತವು.

ಹೆಣ್ಣುನವಿಲುಗಳಿಂದ ಪರಿವೃತಗಳಾಗಿ ಮದದಿಂದ ಮೈಮರೆತು, ಮೊದಲೇ ಮನ್ಮಥತಾಪಕ್ಕೆ ಸಿಕ್ಕಿಬಿದ್ದ ನನಗೆ ಮತ್ತಷ್ಟು ವ್ಯಾಮೋಹವನ್ನುಂಟುಮಾಡುವುವು ಇದೋ!*ಈ ಬೆಟ್ಟದ ತಪ್ಪಲುಗಳಲ್ಲಿ ಸ್ವೇಚ್ಛೆಯಿಂದ ನರ್ತಿಸುತ್ತಿರುವ ಒಂದು ಹೆಣ್ಣುನವಿಲು, ತನ್ನ ಪ್ರಿಯಪತಿಯಾದ ಗಂಡುನವಿಲನನ್ನು ನೋಡಿಕಾಮುಪೀಡಿತವಾಗಿ,ತಾನೂ ಅದನ್ನನುಸರಿಸಿ ಕುಣಿಯುವುದಕ್ಕಾರಂಭಿಸಿರುವುದು ನೋಡು ಈವ್ಯಾಜದಿಂದ ಇದು ಕ್ರೀಡಾರ್ಥವಾಗಿ ಆ ಗಂಡುನವಿಲನ್ನು ಕರೆಯುವಂತೆ ತೋರುವುದು ಈ ಭಾವವನ್ನು ತಿಳಿದು ಗಂಡುನವಿಲು,ಸಂತೋಷದಿಂದ ಗರಿಯನ್ನು ಬಿಚ್ಚಿಕೊಂಡು ಪ್ರಸನ್ನಮುಖದಿಂದ ತನ್ನ ಪ್ರಿಯೆಯ ಸಮೀಪಕ್ಕೆ ಓಡಿಬರುತ್ತಿರುವುದನ್ನು ನೋಡಿದೆಯಾ? ಎಲೆ ವತ್ಸನೆ!ಹೀಗೆ ಇದು ಸಂತೋಷದಿಂದ ಕೂಗುತ್ತ ಓಡಿಬರುವುದನ್ನು ನೋಡಿದರೆ,ಈನವಿಲು, ತಾನೇ ಸುಖಿಯುಂಬ ಗರ್ವದಿಂದ ಪತ್ನಿಯನ್ನಗಲಿರುವ ನನ್ನನ್ನು ಹಾಸ್ಯಮಾಡುವಂತೆ ತೋರುವುದು ವತ್ಸ ಲಕ್ಷ್ಮಣಾ! ಈ ಕಾಡಿನಲ್ಲಿ ಈ ನವಿಲಿನ ಹೆಂಡಿತಿಯನ್ನು ಯಾವ ರಾಕ್ಷಸನೂ ಅಪಹರಿಸಲಿಲ್ಲ ಅದಕ್ಕಾಗಿಯೇ ಮನಸ್ಸಿನಲ್ಲಿ ಚಿಂತೆಯೇನೂ ಇಲ್ಲದೆ,ಇದು ಈ ರಮಣೀಯವಾದ ವನದಲ್ಲಿ ಸಂತೋಷದಿಂದ ಕುಣಿದಾಡುತ್ತಿರುವುದು ನನಗಾದರೋ ಈ ವಸಂತಕಾಲದಲ್ಲಿ ಸೀತೆಯನ್ನು ಬಿಟ್ಟು ಈ ವನಪ್ರದೇಶವಲ್ಲಿ ವಾಸಮಾಡುವುದೇ ದುಸ್ಸಹವಾಗಿರುವುದಲ್ಲಾ! ಲಕ್ಷ್ಮಣಾ ! ಲೋಕದಲ್ಲಿ ಪುರುಷರು ಸ್ತ್ರೀಯರನ್ನನುಸರಿಸಿ ಹೋಗುವುದುಂಟು ಇದೋ ಇಲ್ಲಿ ಈ ಹೆಣ್ಣುನವಿಲು ತನ್ನ ಕಾಮಾತುರದಿಂದ ತಾನಾಗಿಯೇ ಪತಿಯಬಳಿಗೆ ಹೋಗಿ,ಅದನ್ನು ಕ್ರೀಡಾರ್ಥವಾಗಿ ಕರೆದು ರಮಿಸುತ್ತಿರುವುದು ಆಹಾ!ತಿರ್ಯಗ್ಜಾತಿಗಳಲ್ಲಿಕೂಡ ಗಂಡುಹೆಣ್ಣುಗಳಲ್ಲಿ ಎಷ್ಟುಮಟ್ಟಿಗೆ ಪರಸ್ಪರಾನ ರಾಗವಿರುವುದು ನೋಡಿದೆಯಾ ? ಹೆಂಗಸರಿಗೂ ಎಣೆಯಿಲ್ಲದ ಕಾಮವನ್ನು ಹೆಚ್ಚಿಸುವ ಈ ವಸಂತಕಾಲದ ಮಹಿಮೆಯನ್ನು ನಾನೇನು ಹೇಳಲಿ!ರಾಕ್ಷಸರಿಂದ ಅಪಹರಿಸಲ್ಪಡದಿದ್ದಪಕ್ಷದಲ್ಲಿ,ನನ್ನ ಪ್ರಿಯಯಾದ ಸೀತೆಯೂ ಈ ಕಾಲದಲ್ಲಿ ನನ್ನನ್ನು ನೋಡಿದೊಡನೆ, ಅರಳಿದ ಕಣ್ಣು

---

* ಇಲ್ಲಿ ಮಯೂರದಂಪತಿಗಳ ಪರಸ್ಪರವ್ಯೋಹವನ್ನು ಹೇಳಿರುವುದರಿಂದ, ಆಚಾರ್ಯಶಿಷ್ಯರಲ್ಲಿರಬೇಕಾದ ಪರಸ್ಪರಪ್ರಾವಣ್ಯವು ಸೂಚಿತವು,

ಳ್ಳವಳಾಗಿ, ಎಷ್ಟೋ ಸಂಭ್ರಮದಿಂದ ನನ್ನಲ್ಲಿಗೆ ಓಡಿಬರುತ್ತಿದ್ದಳು ವತ್ಸ ಲಕ್ಷ್ಮಣಾ! *ಈ ವಸಂತದಲ್ಲಿ ಕಾಡಿನಲ್ಲಿ ಹೂಗೊಂಚಲುಗಳು ಇಷ್ಟು ಸಮೃದ್ಧವಾಗಿದ್ದರೂ, ನನಗೆ ಸ್ವಲ್ಪವೂ ಪ್ರಯೋಜನಕ್ಕೆ ಬಾರದಿರುವುವಲ್ಲಾ! ಈ ಮರಗಳಲ್ಲಿ ಅತ್ಯಂತಕಾಂತಿವಿಶಿಷ್ಟವಾಗಿರುವ ಹೂಗೊಂಚಲುಗಳು ಬೇಕಾದಷ್ಟು ತುಂಬಿರುವುವು ಇಷ್ಟಾದರೂ ಇವು ನನ್ನ ಭಾಗಕ್ಕೆ ನಿಷ್ಫಲಗಳಾಗಿರುವುವು ಇನ್ನು ಸ್ವಲ್ಪಕಾಲದೊಳಗಾಗಿ ಇವು ಮರದಲ್ಲಿಯೇ ಕಳಿತು ದುಂಬಿಗಳೊಡನೆ ಹಾಗೆಯೇ ನೆಲದಮೇಲೆ ಬೀಳುವುವು ಎಲೆವತ್ಸನೆ! †ಇಲ್ಲಿ ಪಕ್ಷಿಗಳೆಲ್ಲವೂ ಗುಂಪುಕೂಡಿ ಒಂದನ್ನೊಂದು ಕರೆಯುವಂತೆ ಸಂತೋಷದಿಂದ ಇಂಪಾಗಿ ಕೂಗುತ್ತಿರುವುವು ನೋಡು ಈ ಅನರ್ಥಗಳೆಲ್ಲವೂ ನನಗೆ ಕಾಮವನ್ನು ಹೆಚ್ಚಿಸಿ ನನ್ನನ್ನು ಮರುಳಾಗಿಸುವುದಕ್ಕೆ ಹೊರತು ಬೇರೆಯಲ್ಲ! ಲಕ್ಷ್ಮಣಾ! ಒಂದುವೇಳೆ ನನ್ನ ಪ್ರಿಯೆಯಾದ ಆ ಸೀತೆಯಿರುವ ಕಡೆಯಲ್ಲಿಯೂ ಈ ದುಷ್ಟವಸಂತವೇ ಪ್ರಾಪ್ತವಾಗಿದ್ದಪಕ್ಷದಲ್ಲಿ, ಅವಳ ಗತಿಯೂ ಹೀಗೆಯೇ ಅಲ್ಲವೆ! ಆಗ ಅವಳು ಮೈಮರೆತು ನನಗಿಂತಲೂ ಹೆಚ್ಚಾಗಿ ದುಃಖಪಡುವಳು ಅಥವಾ ಒಂದುವೇಳೆ ಆ ಸೀತೆಯೆನ್ನೆತ್ತಿಕೊಂಡು ಹೋದ ರಾಕ್ಷಸನು, ಯಾರಿಗೂ ತಿಳಿಯದಿರುವುದಕ್ಕಾಗಿ, ಯಾವುದೋ ಒಂದುಗುಪ್ತಪ್ರದೇಶದಲ್ಲಿ ಅವಳನ್ನು ಬಚ್ಚಿಟ್ಟಿರಬಹುದಾದುದರಿಂದ, ಆ ಸ್ಥಳದಲ್ಲಿ ಈ ವಸಂತದ ಕ್ರೌರ್ಯವು ಅಷ್ಟಾಗಿ ಕಾಣಿಸದು. ಇದರಿಂದ ಆಕೆಗೆ ವಸಂತದ ಬಾಧೆಯು ಅಷ್ಟಾಗಿ ತೋರದಿದ್ದರೂ, ಅವಳು ನನ್ನಗಲಿಕೆಯನ್ನು ಸಹಿಸಿಕೊಂಡು ಹೇಗೆ ಬದುಕಿರುವಳೋ ಎಂದು ನನಗೆ ಸಂದೇಹವು ತೋರಿರುವುದು ವತ್ಸಲಕ್ಷ್ಮಣಾ! ಹೀಗಿಲ್ಲದೆ ಒಂದುವೇಳೆ ಅಲ್ಲಿಯೂ ಈ ವಸಂತದ ಪ್ರಾಬಲ್ಯವೇ ಹೆಚ್ಚಿದ್ದಪಕ್ಷದಲ್ಲಿ ಅವಳ ಗತಿಯೇನು?

---

* ಇಲ್ಲಿ ಪುಷ್ಪಗಳು ಸಮೃದ್ಧವಾಗಿದ್ದರೂ, ಅದರಿಂದ ತನಗೆ ಪ್ರಯೋಜವಿಲ್ಲವೆಂಬುದರಿಂದ, ತನಗೆ ಎಷ್ಟೇ ಜ್ಞಾನಿಗಳು ಲಭಿಸಿದರೂ ಸಂಸಾರಿಗಳ ದುಃಖವನ್ನು ನೋಡುತ್ತಿರುವವರೆಗೂ ತನಗೆ ಅದೊಂದೂ ಹಿತಕರವಲ್ಲವೆಂದು ಭಾವವು.

† ಇಲ್ಲಿ ಪಕ್ಷಿಗಳು ಗುಂಪುಗೂಡಿ ತನಗೆ ಮೆದನೋನ್ಮಾದವುಂಟಾಗುವಂತೆ ಕೂಗುತ್ತಿರುವುವೆಂಬುದರಿಂದ, ಜ್ಞಾನಿಗಳೆಲ್ಲರೂ ಸೇರಿ ತನ್ನನ್ನು ಕೃಪಾಪಾರವಶ್ಯದಿಂದ ಮರುಳಾಗುವಂತೆ ಮಾಡಿಬಿಡುವರೆಂದು ಭಾವವು.

ಇದರಮೇಲೆ ಆಕೆಯಸುತ್ತಲೂ ಅನೇಕರಾಕ್ಷಸರು ಸೇರಿ ಹೆದರಿಸುತ್ತಿರುವರು. ಆಯ್ಯೋ! ಲಕ್ಷ್ಮಣಾ!ಶ್ಯಾಮಾಂಗಿಯಾಗಿ, ಕಮಲದಳದಂತೆ ಕಣ್ಣುಳ್ಳವಳಾಗಿ, ಮೃದುಭಾಷಿಣಿಯಾಗಿರುವ ಆ ಸೀತೆಯು ಈ ವಸಂತಋತುವನ್ನು ನೋಡಿ ಹೇಗೆ ತಾನೇ ಬದುಕಿರುವಳು? ಇದನ್ನು ನೋಡಿದರೆ ವ್ಯಥೆಯೆನ್ನು ತಡೆಯಲಾರದೆ ಅವಳು ಪ್ರಾಣವನ್ನು ಬಿಡುವುನೇ ನಿಜವು ಆಕೆಯೋ ಮಹಾಪತಿವ್ರತೆ!-ನನ್ನ ವಿರಹವನ್ನು ಸಹಿಸಿಕೊಂಡು ಕ್ಷಣಮಾತ್ರವಾದರೂ ಅವಳು ಬದುಕಿರಲಾರಳೆಂದೇ ನನ್ನ ಮನಸ್ಸಿಗೆ ತೋರಿರುವುದು * ಆಕೆಯು ನಿಜವಾಗಿ ನನ್ನಲ್ಲಿ ಬಹಳ ಅನುರಾಗವುಳ್ಳವಳು ನನಗೂ ಆಕೆಯಲ್ಲಿ ಸಂಪೂರ್ಣವಾದ ಅನರಾಗವು ಹುಟ್ಟಿಹೋಗಿರುವುದು ಎಲೆವತ್ಸನೆ! ಪುಷ್ಪದ ಸುವಾಸನೆಯನ್ನು ಹೊಂದಿ ಸುಖಸ್ಪರ್ಶವನ್ನುಂಟುಮಾಡುತ್ತ,†ಶೀತಲವಾಗಿ ಬೀಸುತ್ತಿರುವ ಈ ಮಂದಮಾರುತವೂಕೂಡ, ಆ ಸೀತೆಯ ಸ್ಮರಣೆಯಿಂದ ಕೊರಗುತ್ತಿರುವ ನನಗೆ ಕಾಲಾಗ್ನಿಯಂತೆ ತೋರುತ್ತಿರುವುದು. ಪೂರ್ವದಲ್ಲಿ ನಾನು ಸೀತೆಯೊಡಗೂಡಿರುವಾಗ ಯಾವುದನ್ನು ಪರಮಸುಖವೆಂದೆಣಿಸಿದ್ದೆನೋ ಆ ತಂಗಾಳಿಯೇ ಈಗ ಸೀತೆಯನ್ನಗಲಿದ ಕಾಲದಲ್ಲಿ ನನಗೆ ಪರಮದುಃಖವನ್ನುಂಟುಮಾಡುತ್ತಿರುವುದು ಆದರೆ ಪೂರ್ವದಲ್ಲಿ ನಾನು ಸೀತೆಯನ್ನಗಲಿದಾಗ,ಯಾವಕಾಗೆಯು ಆಂತರಿಕ್ಷದಲ್ಲಿ ಕ್ರೂರವಾಗಿ ಕೂಗುತ್ತ,ನನಗೆಮುಂದೆ ಬರಬಹುದಾದ ಸೀತಾವಿಯೋಗವನ್ನು ಸೂಚಿಸುತಿತ್ತೋ, ಆದೇ ವಾಯಸಪಕ್ಷಿಯು ಈಗ ಮರದಮೇಲೆ ಸಂತೋಷದಿಂದ ಉಬ್ಬಿ ಕೂಗುತ್ತ, ನನಗೆ ಮುಂದೆ ಬರಬಹುದಾದ ಸೀತೆಯ ಪುನಸ್ಸಮಾಗಮವನ್ನೂ ಸೂಚಿಸುವಂತಿದೆ ಈ ಕಾಗೆಯೇ ಆಗ ಸೀತೆಯನ್ನಗಲಿಸಿದಂತಾದರೂ,ಈಗ ಇದೇ ನನ್ನನ್ನು ಆ ವಿ

---

* ಸೀತೆಗೂ ತನಗೂ ಪರಸ್ಪರ ಮಹಾನುರಾಗವಿರುವುದಾಗಿ ಹೇಳಿದುದರಿಂದ ತನಗೆ ಜೀವನೊಡನೆ ಸಂಬಂಧವೇ ಸ್ವಭಾವಸಿದ್ಧವೆಂದು ಭಾವವು

† ಇಲ್ಲಿ ತಂಗಾಳಿಯೂಕೂಡ ತನಗೆ ಬೆಂಕಿಯಂತಿರುವುದೆಂಬುದರಿಂದ, ತಾನು ಸಂಸಾರಿಗಳಿಗೆ ಯಾವುದೆಂದು ನ್ಯೂನತೆಯೂ ಇಲ್ಲದಂತೆ ಸಮಸ್ತ ಭೋಗಸಾಧನಗಳನ್ನನುಗ್ರಹಿಸಿದ್ದರೂ, ಅಂತಹ ತನ್ನ ದೆಯೆಯು ತನಗೇ ಅಸಹ್ಯವಾಗಿರುವುದೆಂದು ಭಾವವು.

ಶಾಲಾಕ್ಷಿಯ ಸಮೀಪಕ್ಕೆ ಸೇರಿಸಬಹುದಲ್ಲವೆ?ವತ್ಸನೆ! *ಕಾಡಿನಲ್ಲಿ ಪುಷ್ಪಿತಗಳಾದ ವೃಕ್ಷಗಳಮೇಲೆ ಸೇರಿ ಕೂಗುತ್ತಿರುವ ಈ ಪಕ್ಷಿಗಳ ಧ್ವನಿಯನ್ನು ಕೇಳಿದೆಯಾ?ಈ ಧ್ವನಿಯು ಎಷ್ಟುಮಧುರವರ್ಧಕವಾಗಿರುವುದು ನೋಡು ಇದೋ ಇಲ್ಲಿಭ್ರಮರವು, ಕಾಮಮದದಿಂದ ಅತ್ತಿತ್ತ ಚದರಿ ಓಡುತ್ತಿರುವಪ್ರಿಯೆಯನ್ನು ಕಾಮಾತುರನಾದ ನಾಯಕನು ಫಕ್ಕನೆ ಹಿಡಿದು ನಿಲ್ಲಿಸುವಂತೆ,ಗಾಳಿಯಿಂದ ಲುಗುತ್ತಿರುವ ಈ ತಿಲಕವೃಕ್ಷದ ಶಾಖೆಯನ್ನು ವೇಗದಿಂದೇರಿ ಹಿಡಿಯುತ್ತಿರುವುದನ್ನು ನೋಡು ಎಲೆವತ್ಸನೆ!†ವಿರಹಿಗಳಿಗೆ ವಿಶೇಷವಾಗಿ ಶೋಕವನ್ನು ಹೆಚ್ಚಿಸುವ ಈ ಅಶೋಕವೃಕ್ಷವು ಗಾಳಿಯಿಂದಲುಗುತ್ತಿರುವ ತನ್ನ ಹೂಗೊಂಚಲುಗಳಿಂದ, ನನ್ನನ್ನು ಕೃಯ್ಯಾಡಿಸಿ ಹೀಗಳೆವಂತಿದೆ ನೋಡು ಇದನ್ನು ನೋಡಿದರೆ ಈ ವೃಕ್ಷವು ನನ್ನನ್ನು ಕೂಲ್ಲುವುದಕ್ಕಾಗಿ ಮನ್ಮಥನು ಸಮೆದಿಟ್ಟಿರುವ ಬಾಣವನ್ನು ನನಗೆ ತೋರಿಸುವಂತಿರುವುದು ಇದೋ ಇಲ್ಲಿ ಪುಷ್ಪಿತವಾದ ಸೂವಿನಮರವು, ಪುಷ್ಪಚಂದನಾದಿಗಳಿಂದ ಮೃಯನ್ನಲಂಕರಿಸಿಕೊಂಡು ಗರ್ವದಿಂದುಬ್ಬಿ ನಿಂತಿರುವ ಕಾಮುಕನಂತೆ ತೋರುತ್ತಿರುವುದು ನೋಡು ಲಕ್ಷ್ಮಣಾ! ‡ಈ ಪಂಪಾತೀರದಲ್ಲಿ ಸಾಲಾಗಿರುವ ಚಿತ್ರವಿಚಿತ್ರಗಳಾದ ಈ ವನಪರಂಪರೆಗಳಲ್ಲಿ,ಅಲ್ಲಲ್ಲಿ ಎಷ್ಟೋ ಮಂದಿ ಕಿನ್ನರರುಕೂಡ ಸ್ವೇಚ್ಛೆಯಿಂದ ವಿಹರಿಸುತ್ತಿರುವರು ನೋಡು ಇದೋ ಇಲ್ಲಿ ಸುತ್ತಲೂ ಸುವಾಸನೆಯನ್ನು ಹೊರಡಿಸುತ್ತಿರುವ ತಾವರೆಗಳು ಈ ಸರೋವರದ ನೀರಿನ ಒಂದೊಂದು ತರಂಗದಮೇಲೆಯೂ ಕಾಣುತ್ತ, ಒಂದೊಂದಲೆಯಲ್ಲಿಯೂ ಪ್ರತಿಬಿಂಬಿಸಿರುವ ಬಾಲಸೂರ್ಯನಂತಿರುವುದು ನೋಡು?ಎಲವತ್ಸನೆ! ಈಸರೋವರದ ತಿಳಿನೀರಿನ ಸೊಗಸನ್ನೂ,ಇದರಲ್ಲರುವ ಪದ್ಮಸೌಗಂಧಿಕಾದಿಪುಷ್ಪಗಳ ಸಮೂಹವನ್ನೂ,ಇದರಲ್ಲಿ ಕಿಪಿಗಿಂಪಾಗಿ ಕೂಗುತ್ತಿರುವ ಹಂಸಕಾರಂಡವಾದಿ

---

* ಇದರಿಂದ ಜ್ಞಾನಪ್ರಧಾನವಾದ ಪರಮಪದದಲ್ಲಿ ನಿತ್ಯಮುಕ್ತರು ನಡಸತಕ್ಕ ಸಾಮಗಾನವು ಸೂಚಿತವು.

† ಇದರಿಂದ ಸಂಸಾರಿಗಳನ್ನುದ್ಧರಿಸದಿರುವ ನನ್ನನ್ನು ಜ್ಞಾನಿಗಳು ಲಜ್ಜಿತನನ್ನಾಗಿ ಮಾಡುವರೆಂದು ಭಾವವು.

‡ ಇಲ್ಲಿಂದಮುಂದೆ ಪಂಪೆಯೇ ವಿರಜಾಭಾವದಿಂದ ವರ್ಣಿಸಲ್ಪಡುವುದಾಗಿ ಗ್ರಾಹ್ಯವು.

ಜಲಪಕ್ಷಿಗಳ ಸಮೃದ್ಧಿಯನ್ನೂ ನೋಡಿದೆಯಾ? ಭ್ರಮರಸಮೂಹಗಳಿಂದ ತುಂಬಿ ಬಾಲಸೂರ್ಯಬಿಂಬಗಳಂತೆ ತೋರುತ್ತಿರುವ ಈ ಕಮಲಗಳು,ಪಂಪಾ ಸರೋವರದ ನೀರೇ ಕಣ್ಣಿಗೆ ಕಾಣದಂತೆ ಸುತ್ತಲೂ ಮುಚ್ಚಿಕೊಂಡಿರುವುದನ್ನು ನೋಡಿದೆಯಾ? ಮತ್ತು ಅನೇಕಚಕ್ರವಾಕಪಕ್ಷಿಗಳಿಂದ ಕೂಡಿ,ವಿಚಿತ್ರವಾದ ತೀರವನಗಳಿಂದ ಪರಿವೃತವಾಗಿ, ನೀರು ಕುಡಿಯುವುದಕ್ಕೆ ಬಂದ ಆನೆಗಳೇ ಮೊದಲಾದ ಮೃಗಗಳ ಹಿಂಡಿನಿಂದ ಶೋಭಿಸುವ ಈ ಪಂಪಾಸರೋವರವು ಎಷ್ಟು ಮನೋಹರವಾಗಿರುವುದು ನೋಡು ಎಲೆವತ್ಸನೆ!ಗಾಳಿಯಿಂದಾಡುತ್ತಿರುವ ಅಲಗಳ ಪೆಟ್ಟಿಗೆ ಸಿಕ್ಕಿ, ಕಶೆಯಿಂದ ಹೊಡೆಯಲ್ಪಟ್ಟವರಂತೆ ನಡುಗುತ್ತಿರುವ ಈಕಮಲಗಳನ್ನು ನೋಡಿದೆಯಾ? ಲಕ್ಷ್ಮಣಾ!* ಕಮಲದಳದಂತೆ ಕಣ್ಣುಳ್ಳವಳಾಗಿಯೂ,ಯಾವಾಗಲೂ ಇಂತಹ ಕಮಲಗಳಲ್ಲಿಅತ್ಯಾದರವುಳ್ಳವಳಾಗಿಯೂ ಇರುವ ಆಸೀತೆಯನ್ನು ನೋಡದೆ ಹೀಗೆಬದುಕಿರುವುದೇ ನನಗೆ ಇಷ್ಟವಾಗಿಲ್ಲ!ಅಹಾ! ಆ ಮನ್ಮಥನ ಕ್ರೌರ್ಯವನ್ನು ನಾನೇನೆಂದು ಹೇಳಲಿ! ಆತನ ಕುಟಿಲಬುದ್ಧಿಯನ್ನು ನೋಡಿದೆಯಾ? ಮಂಗಳಾಂಗಿಯಾದ ಆ ಸೀತೆಯು ಈಗ ಎಲ್ಲಿಯೋ ಕಣ್ಮರೆಯಾಗಿದ್ದುಕೊಂಡು ಪುನಃಸಿಕ್ಕುವಹಾಗಿಲ್ಲದಿದ್ದರೂ, ಆಗಾಗ ಮನ್ಮಥನು ನನ್ನನ್ನು ಸಂಕಟಪಡಿಸುವುದಕ್ಕಾಗಿಯೇ ಆಗೋಚರಳಾಗಿರುವ ಸೀತೆಯನ್ನೂ ನನ್ನ ಸ್ಮರಣೆಗೆ ತರುತ್ತಿರುವನು ಪುಷ್ಪಿತಗಳಾದ ವೃಕ್ಷಗಳುಳ್ಳ ಈ ವಸಂತವು ನಾತ್ರ ಬಾರಿಬಾರಿಗೂ ನನ್ನಮುಂದೆ ನಲಿದು ನನ್ನ ಪ್ರಾಣಗಳನ್ನು ಪೀಡಿಸುವುದ್ದಪಕ್ಷದಲ್ಲಿ, ನಾನು ಹೇಗಾದರೂ ಈಗ ಪ್ರಾಪ್ತವಾಗಿರುವ ಮನ್ಮಥಪೀಡೆಯನ್ನು ಸಹಿಸಿಕೊಳ್ಳಬಲ್ಲನು ಆ ಸೀತೆಯು ನನ್ನೊಡನೆ ಕಲೆತಿರುವಾಗ ನನ್ನ ಮನಸ್ಸಿಗೆ ಯಾವ ಯಾವ ವಸ್ತುಗಳು ಇಂಪನ್ನು ಕೂಡುತಿದ್ದುವೋ,ಅವುಗಳೇ ಈಗ ನನಗೆ ಬಹಳ ದುಃಖಕರಗಳಾಗಿ ಪರಿಣಮಿಸಿರುವುವು ವತ್ಸಲಕ್ಷ್ಮಣಾ! ಈ ಕಮಲದ ಮೊಗ್ಗಿ

---

* ಪಂಪೆಯನ್ನು ನೋಡಿದಕ್ಷಣವೇ ಅದರಿಂದ ತನಗುಂಟಾದ ಅರತಿಯನ್ನು ಕಾಮೋದ್ರೇಕವ್ಯಾಜದಿಂದ ತಿಳಿಸುವುದಾಗಿ ಗ್ರಾಹ್ಯವು ಇದರಿಂದ ಇಲ್ಲಿ "ಸ ಏಕಾಕೀನ ರಮತೇ" ಎಂಬಂತೆ ವಿರಜಾತೀರದಲ್ಲಿಯೂ ತನಗೆ ವಾಸವು ಹಿತಕರವಾಗಿಲ್ಲವೆಂದು ತಿಳಿಸುವುದಾಗಿ ಅಂತರಾರ್ಥವನ್ನು ಗ್ರಹಿಸಬೇಕು

ನಮೇಲಿನ ಗರಿಗಳನ್ನು ನೋಡುವಾಗ, ನನ್ನ ದೃಷ್ಟಿಯು ಆ ಸೀತೆಯ ನೇತ್ರಗಳನ್ನು ಸ್ಮರಣೆಗೆ ತಂದು, ನನ್ನನ್ನು ಸಂಕಟಪಡಿಸುತ್ತಿರುವುದು *ಕ ಮಲದ ಕಿಂಜಲ್ಕಗಳೊಡಗೂಡಿ ಅಲ್ಲಲ್ಲಿ ಮರಗಳ ಸಂದಿನಿಂದ ನುಗ್ಗಿಬರುತ್ತಿ

---

* ಇಲ್ಲಿ ''ಪದ್ಮಕೇಸರಸಂಸೃಷ್ಟೋ ವೃಕ್ಷಾಂತರವಿನಿಸ್ಸೃತ । ನಿಶ್ವಾಸೇಷವ ಸೀತಾಯಾ ವಾತಿ ವಾಯುರ್ಮನೋಹರ ॥'' ಎಂದು ಮೂಲವು ಇಲ್ಲಿ ವಾಯುವಿಗೆ ''ಪದ್ಮಕೇಸರಸಂಸೃಷ್ಟಃ'' ಎಂಬುದರಿಂದ ಶೈತ್ಯವೂ, (ವೃಕ್ಷಾಂತರವಿನಿಸ್ಸೃತಃ) ಎಂಬುದರಿಂದ ಮಾಂದ್ಯವೂ, ''ನಿಶ್ವಾಸೇಷವ ಸೀತಾಯಾಃ'' ಎಂಬುದಾಗಿ ಸೀತಾನಿಶ್ವಾಸ ಸಾದೃಶ್ಯದಿಂದ ಸೌರಭ್ಯವೂ ವರ್ಣಿಸಲ್ಪಟ್ಟಿರುವುದಾಗಿ ಗ್ರಾಹ್ಯವು ಮತ್ತು ಇಲ್ಲಿ ಸೀತಾವಿರಹದು ಖಿತನಾದ ರಾಮನು, ಆಗಿನ ಮಂದಮಾರುತವು ತನಗೆ ಎಷ್ಟುಮಟ್ಟಿಗೆ ನಾನಾರೀತಿಯಲ್ಲಿ ಬಾಧೆಯನ್ನುಂಟುಮಾಡಿತೋ, ಅವೆಲ್ಲವನ್ನೂ ಬೇರೆಬೇರೆಯಾಗಿ ತೋರಿಸುವಂತೆ ಕೆಲವು ವಿಶೇಷಾರ್ಥಗಳು ವಿವರಿಸಲ್ಪಡುವುವು ಹೇಗೆಂದರೆ :—ಮೊದಲು ಸಮಸ್ತ ಪ್ರಾಣಿಗಳಿಗೂ ಪ್ರಾಣಾಧಾರವೆನಿಸಿದ ವಾಯುವೇ ಈಗ ತನ್ನ ಸರ್ವಸತ್ವವನ್ನೂ ಅಪಹರಿಸುವುದೆಂದು, ಅದರ ದುಸ್ಸ್ವಭಾವವನ್ನು ಹೇಳುವನು (ಪದ್ಮಕೇಸರಸಂಸೃಷ್ಟಃ) ವಾಯುವಿಗೆ ಧೂಳೆಬ್ಬಿಸಿ, ಎಲ್ಲವನ್ನೂ ಕೆಡಿಸುವುದೇ ಮುಖ್ಯಕೃತ್ಯವು ಅದರಿಂದ ಇಲ್ಲಿ ಸಮಸ್ತಜಗತ್ತಿಗೂ ಪ್ರಾಣಾಧಾರವಾದುದೇ ಈಗ ಸಮಸ್ತವನ್ನೂ ಧೂಳೆಬ್ಬಿಸುವುದಕ್ಕೆ (ಕೆಡಿಸುವುದಕ್ಕೆ) ಪ್ರಯತ್ನಿಸಿರೆಂದು ಭಾವವು

ಅಥವಾ (ಪದ್ಮಕೇಸರಸಂಸೃಷ್ಟಃ) ಪದ್ಮವಾಸಿನಿಯಾದ ಸೀತೆಯು ತನ್ನನ್ನು ಕೈಬಿಟ್ಟುಹೋದುದನ್ನು ನೋಡಿ, ಈ ಪದ್ಮಕೇಸರಗಳೂ ತನಗೆ ಪ್ರತಿಕೂಲಗಳಾಗಿ ಆ ವಾಯುವಿನೊಡನೆ ಸೇರಿಕೊಂಡು ಬಾಧಿಸುವುವು ಅಥವಾ ''ಪಾದಾರುಂತದಮೇವ ಪಂಕಜಜರಜ '' ಎಂಬಂತೆ ಸ್ವಜನವನ್ನೇ ಬಾಧಿಸುವ ಸ್ವಭಾವವುಳ್ಳ ಪದ್ಮರಜಸ್ಸು, ನಮ್ಮನ್ನು ಬಾಧಿಸುವುದೊಂದಾಶ್ಚರ್ಯವಲ್ಲ ಇಲ್ಲಿ ಕೇಸರಶಬ್ದದಿಂದ ಅದರ ಧೂಳಿಯನ್ನು ಗ್ರಹಿಸಬೇಕು ಆದುದರಿಂದ ಹೀಗೆ ರಜೋವಿಶಿಷ್ಟವಾಗಿ ರಾಜಸಪ್ರಕೃತಿಯೆನಿಸಿಕೊಂಡಿರುವುದರಿಂದಲೇ ಈ ವಾಯುವು ನನ್ನನ್ನೂ ಬಾಧಿಸತೊಡಗಿರುವುದು ಹಾಗೆ ಇದು ಬಾಧಕವಾಗಿದ್ದಪಕ್ಷದಲ್ಲಿ ನೀನಾಗಿಯೇ ಇದರ ಸಂಬಂಧವನ್ನು ಪರಿಹರಿಸಿಕೊಳ್ಳಬಾರದೆ?'' ಎಂದರೆ (ವೃಕ್ಷಾಂತರವಿನಿಸ್ಸೃತ) ಕಣ್ಣಿಗೆ ಕಾಣದಂತೆ ಗಿಡಗಳ ಮರೆಯಿಂದ ಬರುತ್ತಿರುವುದರಿಂದ ಪರಿಹರಿಸಿಕೊಳ್ಳಲಸಾಧ್ಯವೆಂದು ಭಾವವು ಅಥವಾ (ವೃಕ್ಷಾಂತರವಿನಿಸ್ಸೃತ) ನಾನು ಮನ್ಮಥತಾಪಶಮನಾರ್ಥದಾಗಿ ವೃಕ್ಷಭಾಯೆಗಳಲ್ಲಿ ನಿಲ್ಲುವುದಕ್ಕೂ ಅವಕಾಶಕೊಡದೆ ಸಂದುಸಂದುಗಳಲ್ಲಿಯೂ ನುಗ್ಗಿಬರುವುದೆಂದು ಭಾವವು. ಹಾಗಿದ್ದರೆ ನೀನು ಅದನ್ನು ದೂರಕ್ಕೆ ತೊಲಗಿಹೋಗೆಂದಾದರೂ ನಿಯಮಿ

ರುವ ಈ ವಾಯುವು ಸೀತೆಯ ನಿಟ್ಟುಸಿರಿನಂತೆ ಸುಗಂಧವಿಶಿಷ್ಟವಾಗಿ

ಸಬಾರದೆ?" ಎಂದರೆ (ನಿಶ್ವಾಸ ಇವ ಸೀತಾಯಾ) ಸೀತೆಯ ನಿಶ್ವಾಸದಂತೆ ತೋರುತ್ತ, ಪ್ರಥಮಪರಿಚಿತನಾದವನೆಂತೆ ಬರುತ್ತಿರುವುದರಿಂದ ಅನನ್ನು ನಿಷೇಧಿಸುವುದಕ್ಕೂ ಮನಸ್ಸು ಬಾರದೆಂದು ಭಾವವು. ಇದಲ್ಲದೆ ಈ ವಾಯುವು ಸೀತೆಯ ನಿಟ್ಟುಸಿರಿನಂತೆ ತನಗೆ ಭ್ರಾಂತಿಯನ್ನು ಹುಟ್ಟಿಸುತ್ತಿರುವುದರಿಂದ, ಒಂದುವೇಳೆ ಈ ಮೊರದ ಮರೆಯಲ್ಲಿ ಸೀತೆಯು ಮರೆಸಿಕೊಂಡಿದ್ದು, ನನ್ನ ಕಡೆಗೆ ಬರುತ್ತಿರುವಳೋ ಎಂಬ ಚಾಪಲ್ಯವಿರುವುದರಿಂದ ಈ ಸ್ಥಳವನ್ನು ಬಿಟ್ಟು ಕದಲುವುದಕ್ಕೂ ನನಗೆ ಮನಸ್ಸು ಬಾರದೆಂದು ಭಾವವು (ವಾತಿ ವಾಯು) ವಾಯುವು ಬೀಸುತ್ತಿರುವುದೆಂಬುದರಿಂದ "ಭೀಷಾಸ್ಮಾದ್ವಾತಃ ಪವತೇ" ಎಂಬಂತೆ ಯಾವ ವಾಯುವು ನನಗಾಗಿ ಹೆದರಿ ಬೀಸುತ್ತಿರಬೇಕೋ ಆ ವಾಯುವೇ ಈಗ ನನಗೆ ಪ್ರತಿಕೂಲವಾಗಿ ನನ್ನನ್ನು ಬಾಧಿಸುತ್ತಿರುವುದೆಂದು ಭಾವವು ಅದು ಬಾಧಿಸತಕ್ಕ ರೀತಿಯಾದರೂ ಸಾಮಾನ್ಯವಲ್ಲ (ಮನೋಹರಃ) ಪ್ರತ್ಯಕ್ಷವಾಗಿ ಹೊರಗೆ ಕಾಣುವ ದೇಹವನ್ನೇ ಅಲ್ಲದೆ, ಅಂತರ್ಗತವಾಗಿ ಕಣ್ಣಿಗೆ ಕಾಣದಿರುವ ಮನಸ್ಸನ್ನೂ ಪೀಡಿಸುವ ಅದ್ಭುತಸಾಮರ್ಥ್ಯವುಳ್ಳದೆಂದು ಭಾವವು

ಮತ್ತು ಇಲ್ಲಿ ವಾಯುವಿಗೆ ಮಾರ್ಗಸ್ಥರ ಸರ್ವಸ್ವವನ್ನೂ ಸುಲಿಗೆ ಮಾಡುವ ದಾರಿಗಳ್ಳರ ಸ್ವಭಾವವು ವರ್ಣಿಸಲ್ಪಡುವುದಾಗಿಯೂ ಗ್ರಹಿಸಬಹುದು. ಹೇಗೆಂದರೆ, (ಪದ್ಮಕೇಸರಸಂಸ್ಪೃಷ್ಟ) ತಾನು ಇಂಥವನೆಂದು ತನ್ನ ನಿಜಸ್ವರೂಪವನ್ನು ತಿಳಿಸದಿರುವುದಕ್ಕಾಗಿಯೂ, ಭೀರುಸ್ವಭಾವವುಳ್ಳವರನ್ನು ತಮ್ಮ ಸ್ವರೂಪದಿಂದಲೇ ಹೆದರಿಸುವುದಕ್ಕಾಗಿಯೂ, ದಾರಿಗಳ್ಳರು ಮುಖಕ್ಕೆ ಮಸಿಮೊದಲಾದವುಗಳನ್ನು ಬಳಿದುಕೊಂಡು ಬರುವಂತೆ, ಈ ವಾಯುವೂ ಕಮಲದ ಕೆಂದೊಳಿಗೆಗಳಿಂದ ವೇಷವನ್ನು ಮರೆಸಿಕೊಂಡು ಬರುವುದೆಂದು ಭಾವವು (ವೈಕ್ಷಾಂತರವಿನಿಸ್ಪೃತ) ಮಾರ್ಗಸ್ಥರು ಸಮೀಪಕ್ಕೆ ಬರುವವರೆಗೂ ಅಲ್ಲಲ್ಲಿ ಮರಗಳಮರೆಯಲ್ಲಿ ಅವಿತುಕೊಂಡೇ ಬರುವ ಕಳ್ಳರಂತೆ, ಇದೂ ಅಲ್ಲಲ್ಲಿ ಮರೆಸಿಕೊಂಡು ಬರುತ್ತಿರುವುದು (ನಿಶ್ವಾಸಇವ ಸೀತಾಯಾ) ಸೀತಾನಿಶ್ವಾಸದಂತೆ ತಾನೂ ಚಿರಪರಿಚಯವನ್ನು ತೋರಿಸುತ್ತ, ಸ್ನೇಹಿತರು ಮಾತಾಡಿಸುವುದಕ್ಕೆ ಬರುವಹಾಗೆ ಬರುತ್ತಿರುವುದೆಂದು ಭಾವವು (ವಾಯು) ತನ್ನನ್ನು ಹಿಡಿದುಬಿಡುವರೆಂಬ ಭಯದಿಂದ ನಿಂತಕಡೆಯಲ್ಲಿ ನಿಲ್ಲದೆ ಕೈಗೆ ಸಿಕ್ಕದಹಾಗೆ ಅತ್ತಿತ್ತ ತಿರುಗುತ್ತಲೇ ಇರುವ ಸ್ವಭಾವವುಳ್ಳದು (ಮನೋಹರಃ) ಮೇಲೆ ಕಾಣುತ್ತಿರುವ ಬಟ್ಟೆಬರೆ, ಒಡವೆವಸ್ತ್ರ, ಮುಂತಾದುವುಗಳನ್ನು ಮಾತ್ರವೇ ಅಲ್ಲದೆ, ಒಳಗಿನ ಮನಸ್ಸನ್ನೂ ಕಳುವ ಅದ್ಭುತವಾಮರ್ಥ್ಯವುಳ್ಳದೆಂದರ್ಥವು. ಇಂತಹ ದಾರಿಗಳ್ಳನು, (ವಾತಿ) ಸಮಯನಿರೀಕ್ಷಣೆಯಿಂದ ಅತ್ತಿತ್ತ ಸುತ್ತುತ್ತಿರುವನೆಂದು ಭಾವವು

ಬೀಸುತ್ತಿರುವುದು. * ಇದೋ ಇತ್ತಲಾಗಿ ಈ ಪಂಪೆಯದಕ್ಷಿಣದಿಕ್ಕಿನ ಬೆಟ್ಟದ ತಪ್ಪಲಿನಲ್ಲಿ ಒಂದು + ಕರ್ಣಿಕಾರಲತೆಯು ಚೆನ್ನಾಗಿ ಪುಷ್ಪಿಸಿ ಎಷ್ಟು ಮನೋಹರವಾಗಿ ಕಾಣಿಸುವುದು ನೋಡು ‡ಬಗೆಬಗೆಯ ಗೈರಿಕಾದಿಧಾತುಗಳಿಂದ ತುಂಬಿ ಶೋಭಿಸುತ್ತಿರುವ ಈ ಪರ್ವತರಾಜನು ವಾಯುವೇಗದಿಂದ ಚಿತ್ರವಿಚಿತ್ರವಾದ ಬಣ್ಣವುಳ್ಳ ರೇಣುಪರಂಪರೆಯನ್ನು ಹೊರಡಿಸುತ್ತಿರುವುದನ್ನು ನೋಡು ಇದೋ ಈ ಬೆಟ್ಟದ ತಪ್ಪಲುಗಳು,ಸುತ್ತಲೂ ಪುಷ್ಪಿತಗಳಾಗಿ,ಎಲೆಯಿಲ್ಲದೆ ಶೋಭಿಸುತ್ತಿರುವ ಮುತ್ತುಕದ ಗಿಡಗಳಿಂದ, ಜ್ವಾಲೆಗೆ ಸಿಕ್ಕಿ

ಮತ್ತು ಇಲ್ಲಿ ಸಂಸಾರಬದ್ಧರಾಗಿ ಅನಾಥರಾಗಿರುವ ಜೀತನರಲ್ಲಿ ಭಗವತ್ಕೃಪೆಯು ನಿರ್ಹೇತುಕವಾಗಿ ಪ್ರವರ್ತಿಸುವುದೆಂದೂ ಧ್ವನಿತವಾಗುವುದು ಹೇಗೆಂದರೆ,—(ಪದ್ಮಕೇಸರಸಂಸೃಷ್ಟ) ಕಮಲಕೆಂಜಲ್ಕುಗಳಿಗೆ ಸಮಾನವಾಗಿರುವ ಲಕ್ಷ್ಮೀದೇವಿಯ ಅನುರಾಗದೊಡಗೂಡಿದುದು ಎಂದರೆ, ಪುರುಷಕಾರಭೂತೆಯಾದ ಲಕ್ಷ್ಮೀದೇವಿಯ ಸ್ನೇಮನನ್ನನುವರ್ತಿಸಿ ನಡೆಯತಕ್ಕುದೆಂದು ಭಾವವು (ವೃಕ್ಷಾಂತರಖಿನಿಸ್ಸೃತ) "ವೃಕ್ಷಶಬ್ದದಿಂದ ಸಂಸಾರಮಂಡಲವೆಂದು ಗ್ರಾಹ್ಯವು "ಊರ್ಧ್ವಮೂಲಮಧಶ್ಶಾಖ ಮಶ್ವತ್ಥಂಪ್ರಾಹುರವ್ಯಯಂ"ಎಂಬುದಾಗಿ, ಸಂಸಾರಮಂಡಲವೇ ವೃಕ್ಷರೂಪವಾಗಿ ನಿರೂಪಿಸಲ್ಪಟ್ಟಿರುವುದು ಅದರಲ್ಲಿ ಪ್ರವರ್ತಿಸತಕ್ಕುದೆಂದು ಭಾವವು (ನಿಶ್ವಾಸಖಿನ ಸೀತಾಯಾ) "ಸ್ತ್ರೀಪ್ರಾಯಮಿತರತ್ಸರ್ವಮ್" ಎಂಬುದಾಗಿ ಭಗವದಿತರವಾದ ಪ್ರಪಂಚವೆಲ್ಲವೂ ಪರತಂತ್ರವೆನಿಸಿಕೊಂಡು ಸ್ತ್ರೀಪ್ರಾಯವೆನಿಸಿರುವುದರಿಂದ, ಇಲ್ಲಿ ಸೀತಾಶಬ್ದವು ಪ್ರಪಂಚಪರವೆಂದು ಗ್ರಾಹ್ಯವು ಇಂತಹ ಪ್ರಪಂಚಗಳಿಗೆಲ್ಲಾ ಪ್ರಾಣಭೂತವಾಗಿ ಆಶ್ವಾಸಕವಾಗಿರುವುದೇ ದಯೆಯೆಂದು ಭಾವವು (ಮನೋಹರ)ಮನಃಕಲ್ಮಷಗಳೆಲ್ಲವನ್ನೂ ನೀಗಿಸತಕ್ಕುದು (ವಾಯು) ಸರ್ವತ್ರ ಪ್ರವರ್ತಿಸತಕ್ಕುದು ಇಂತಹ ಭಗವತ್ಕೃಪಾಪ್ರಪಾಹವು,(ನಾತಿ ನಿರ್ಹೇತುಕವಾಗಿಪ್ರವಹಿಸುತ್ತಿರುವುದೆಂದುಭಾವವು

* ಇದು ಮೊದಲಾಗಿ ವಿರಜೆಯಿಂದೀಚೆಗೆ ಸಾತ್ವಿಕ ರಾಜಸ ತಾಮಸವೃತ್ತಿಯಿಂದಿರುವ ಜೀತನರಸ್ವರೂಪವೂ ತನ್ನ ಕಟಾಕ್ಷಗಳಿಗೆ ವಿಷಯವಾಗುವುದೆಂಬ ಅಂಶವು ಸೂಚಿತವಾಗುವುದು

† ಇಲ್ಲಿ ಪುಷ್ಪಿತವಾದ ಲತೆಯನ್ನು ವರ್ಣಿಸುವುದರಿಂದ ಸತ್ಯಲೋಕಾದಿಗಳಲ್ಲಿ ವಿಜೃಂಭಿಸುತ್ತಿರುವ ರಾಜಸವೃತ್ತಿಯು ಸೂಚಿತವು

‡ ಇವುಗಳ ವ್ಯಾಪಾರದಿಂದ ರಜಸ್ಸನ್ನು ವೃದ್ಧಿಗೊಳಿಸುವ ಲೋಕಗಳು ಸೂಚಿಸಲ್ಪಡುವುವು

ಉರಿಯುವಂತೆ ಕಾಣುವುವು ನೋಡು! ಇದೋ ಈ ಪಂಪಾತೀರದಲ್ಲಿ ಹುಟ್ಟಿ ಒಂದಕ್ಕೊಂದಕ್ಕೆ ಹೆಣೆದಂತೆ ಒತ್ತಾಗಿ ಬೆಳೆದು. ನಾಲ್ಕುಕಡೆಗಳಿಗೂ ಮಕರಂದದ ಸುವಾಸನೆಯನ್ನು ಹೊರಡಿಸುತ್ತಿರುವ ಹೂಗಿಡಗಳನ್ನು ನೋಡು! ಮಾಲತಿ, ಮಲ್ಲಿಗೆ, ಕಣಿಗಿಲೆ, ತಾಳೆ, ವಾಸಂತಿಕೆ, ನಿರ್ಗುಂಡಿ, ಮೊಲ್ಲೆ, ಅಧಿರ್ಮತ್ತೆ, ನಾಗಕೇಸರಿ, ಕಡವು, ಖರ್ಜೂರ, ಪದ್ಮಪರ್ಣಿ ಮುಂತಾದ ಪುಷ್ಪಲತೆಗಳನ್ನೂ, ಮತ್ತು ಸಿಹ್ಮದ ಕೇಸರಗಳಂತೆ ಹೊಂಬಣ್ಣವಾಗಿ ಕಾಣುತ್ತಿರವ ಈ ಲೋಧ್ರಪುಷ್ಪಗಳನ್ನೂ, ಅಂಕೋಲೆ, ಗೋರಂಟೆ, ಪಾರಿಭದ್ರಕ, ಮಾವು, ಪಾದರಿ, ಕೋವಿದಾರ, ಮುಂತಾದ ಹೂಗಿಡಗಳನ್ನೂ ನೋಡು, ಸುಗಂಧಪೂರ್ಣಗಳಾದ ಮಾಧವೀಲತೆಗಳೂ, ಮೊಲ್ಲೆಯಪೊದರುಗಳೂ, ನಕ್ತಮಾಲಗಳೂ, ಮಧುವೃಕ್ಷಗಳೂ, ವಕುಳ, ಸಂಪಗೆ, ತಿಲಕ, ನಾಗಕೇಸರಿ, ಕಡವು, ಪುಷ್ಪಿತಗಳಾದ ಖರ್ಜೂರಗಳು, ಪದ್ಮಪರ್ಣಿ, ನೀಲಾಶೋಕಗಳು, ಕೋವಿದಾರ, ಅರ್ಜುನ ಮೊದಲಾದ ಬಗೆಬಗೆಯ ಗಿಡಗಳೂ ಈ ಬೆಟ್ಟದತಪ್ಪಲುಗಳಲ್ಲಿ ಶೋಭಿಸುತ್ತಿರುವುವು ನೋಡು! ಕೇದಗೆ, ಉದ್ದಾಲಕ, ಬಾಗೆ, ತಿಂಶುಪಾವೃಕ್ಷಗಳು, ಆಲ, ಬೂರಗ, ಅರಳಿ, ಮುತ್ತುಗ, ಕೆಂಪುಗೋರಂಟೆ, ಕಿನಿಶ, ನಕ್ತಮಾಲ, ಚಂದನ, ಸ್ಪಂದನ, ಮೊದಲಾದ ಈ ವೃಕ್ಷವಿಶೇಷಗಳೆಲ್ಲವೂ ಪುಷ್ಪಭರಿತಗಳಾಗಿ, ಪುಷ್ಪಿತಗಳಾದ ಬೇರಬೇರೆ ಹೂಬಳ್ಳಿಗಳಿಂದ ಪರಿವೇಷ್ಟಿತಗಳಾಗಿ ಎಷ್ಟೋ ಸೊಗಸನ್ನು ಬೀರುತ್ತಿರುವುವು ಎಲೆ ವತ್ಸನೆ! ಪಂಪಾತೀರದಲ್ಲಿ ತಂಗಾಳಿಯಿಂದಲುಗಿಸಲ್ಪಟ್ಟು ನೇತ್ರಾನಂದಕರಗಳಾದ ಈ ಬಗೆಬಗೆಯ ವೃಕ್ಷಗಳನ್ನು, ಸಮೀಪದಲ್ಲಿರುವ ಈ ಬಳ್ಳಿಗಳು, ಕಾಮೋದ್ರೇಕದಿಂದ ಮತ್ತರಾದ ಉತ್ತಮಸ್ತ್ರೀಯರು ತಮ್ಮ ಪ್ರಿಯರನ್ನಪ್ಪಿಕೊಳ್ಳುವಂತೆ ಎಡೆಬಿಡದೆ ಸುತ್ತಿಕೊಂಡು ಹಬ್ಬಿಬೆಳೆದಿರುವುದನ್ನು ನೋಡು! *ಇದೋ! ಈ ತಂಗಾಳಿಯು, ಗಿಡದಿಂದ ಗಿಡಕ್ಕೂ, ಬೆಟ್ಟದಿಂದ ಬೆಟ್ಟಕ್ಕೂ, ವನದಿಂದ ವನಕ್ಕೂ ಪ್ರವೇತಿಸುತ್ತ, ಬಗೆಬಗೆಯ ಮಧ್ಯರಸವನ್ನು ಕುಡಿದು ಮತ್ತೇರಿರುವ ಪುರುಷನಂತೆ ಮಂದಗತಿಯಿಂದ ಬೀ

---

* ಇದುವರೆಗಿನ ಗ್ರಂಥಗಳಿಂದ ವಿಷಯಾಂತರಪ್ರವಣರಾದ ಪ್ರಾಕೃತರ ರೀತಿಯು ಸೂಚಿತವೆಂದು ಗ್ರಾಹ್ಯವು.

ಸುತ್ತಿರುವುದನ್ನು ನೋಡು! ಇಲ್ಲಿ ಕೆಲವುಗಿಡಗಳು ಯಥೇಚ್ಛವಾದ ಪುಷ್ಪ ಗಳಿಂದ ತುಂಬಿ, ಸುತ್ತಲೂ ಮಕರಂದಗಂಧವನ್ನು ಹರಡುತ್ತಿರುವುವು ಮತ್ತೆ ಕೆಲವುಗಿಡಗಳಲ್ಲಿ ಅಷ್ಟಾಗಿ ಹೂಗಳಿಲ್ಲದೆ ಅಲ್ಲಲ್ಲಿ ಮೊಗ್ಗುಗಳುಮಾತ್ರ ವಿರಳವಾಗಿರುವುದರಿಂದ, ಹೆಚ್ಚಾಗಿ ಹಸುರೆಲೆಗಳೇ ಕಾಣುತ್ತಿರುವುವು ಹೊಸಹೊಸ ಹೂಗಳನ್ನು ಕುಡಿಯುವುದರಲ್ಲಿ ಅತ್ಯಾತುರದಿಂದಮೃತಿಳಿಯದಿ ರುವ ಈ ಭ್ರಮರಪಙ್ಕ್ತಿಯು, ಈ ಗಿಡಗಳ ಅಂದವನ್ನು ನೋಡಿ ಪರವ ಶವಾಗಿ ಯಾವುದೊಂದು ಗಿಡವನ್ನೂ ಬಿಟ್ಟು ಹೋಗಲಾರದೆ, ಒಂದೊಂ ದು ಹೂವಿಗೂ ಪ್ರವೇಶಿಸಿ, ''ಇದೋ ! ಇದು ರಸವತ್ತಾಗಿದುದು ! ಇದು ರುಚಿಯುಳ್ಳದು! ಇದು ಚೆನ್ನಾಗಿ ಅರಳಿರುವುದು" ಎಂದು ಸುತ್ತಿಸುತ್ತಿ ಪ್ರವೇಶಿಸುತ್ತಿರುವುದು ನೋಡು! ಮಕರಂದದಾಸೆಯಿಂದ ಈ ಭ್ರಮರ ಗಳು ಒಂದೊಂದು ತೀರವೃಕ್ಷಗಳಲ್ಲಿಯೂ ನುಗ್ಗಿ, ಅಲ್ಲಲ್ಲಿ ಕ್ಷಣಕಾಲದವ ರೆಗೆ ಅಡಗಿದ್ದು, ಪುನಃ ಮೇಲೆಹಾರಿ, ಮತ್ತೊಂದುಕಡೆಗೆ ಹೋಗುತ್ತಿರು ವುವು ಇದೋ ಇಲ್ಲಿನ ನೆಲದಲ್ಲಿ ಎಡೆಬಿಡದೆ ಮರದಿಂದುದಿರಿರುವ ಹೂಗಳು, ಸುತ್ತಲೂ ಪುಷ್ಪಾಸ್ತರಣವನ್ನು ಹಾಸಿಟ್ಟಂತೆ ಎಷ್ಟು ಸುಖಕರವಾಗಿರು ವುದು ನೋಡು ಇದೋ! ಈ ಬೆಟ್ಟದ ತಪ್ಪಲುಗಳಲ್ಲಿ ಬಂಡೆಗಳಮೇಲೆ ಉ ದಿರಿ ಬಿದ್ದಿರುವ ಬಗಬಗೆಯ ಬಣ್ಣಗಳುಳ್ಳ ಹೂಗಳು, ಅಲ್ಲಲ್ಲಿ ಹಳದಿ ಮತ್ತು ಕೆಂಪುಬಣ್ಣಗಳುಳ್ಳ ಚಿತ್ರಾಸ್ತರಣಗಳನ್ನು ಹಾಸಿಟ್ಟಂತೆ ಎಷ್ಟುಮನೋಹ ರವಾಗಿರುವುವು ನೋಡು! ವತ್ಸನೆ! ವಸಂತಕಾಲದಲ್ಲಿ ಈ ವೃಕ್ಷಗಳಿಗಿರುವ ಪು ಷ್ಪಸಮೃದ್ಧಿಯನ್ನು ನೋಡಿದೆಯಾ? ಈ ಋತುವಿನಲ್ಲಿ ಗಿಡಗಳು ಪರಸ್ಪರಸ್ಪ ರ್ಧೆಯಿಂದ ತಮ್ಮತಮ್ಮ ಸಮೃದ್ಧಿಯನ್ನು ತೋರಿಸುವಂತೆ, ಒಂದಕ್ಕಿಂತ ಲೂ ಮತ್ತೊಂದು ಹೆಚ್ಚಾಗಿ ಪುಷ್ಪಗಳನ್ನು ಬಿಡುತ್ತಿರುವುವಲ್ಲದೆ, ಭ್ರಮರ ಧ್ವನಿಗಳೆಂಬ ವ್ಯಾಜದಿಂದ ಒಂದನ್ನೊಂದು ಕರೆದು ಹೀಗಳೆಯುವಂತೆಯೂ ತೋರುವುವು ನೋಡು ! ಒಂದೊಂದು ಶಾಖೆಯೂ ಪುಷ್ಪಸರಗಳಿಂದ ಲಂಕೃತವಾಗಿರುವುದನ್ನು ನೋಡಿದೆಯಾ ? ಇದೋ! ಇತ್ತಲಾಗಿ ಕಾರಂ ಡವಪಕ್ಷಿಯು ನೀರಿಗಿಳಿದು ತನ್ನ ಪ್ರಿಯೆಯೊಡನೆ ವಿಹರಿಸುತ್ತ,ನನಗೆಕಾಮೋ

ಶ್ಲೋಕವನ್ನು ಹೆಚ್ಚಿಸುತ್ತಿರುವುದು ವತ್ಸನೆ!*ನಾವು ಹಿಂದೆ ನೋಡಿಬಂದ ಮಂದಾಕಿನಿಗೂ ಈ ಸರಸ್ಸಿನಂತೆಯೇ ಅತಿಮನೋಹರವಾದ ರೂಪವುಂ ಟಲ್ಲವೆ?ಇದಲ್ಲದೆ ಅದರ ಗುಣಗಳು ಲೋಕವಿಖ್ಯಾತಗಳಾಗಿ ಹೆಸರುಗೊಂಡಿ ರುವುದೂ ಯುಕ್ತವಾಗಿಯೇ ಇರುವುದು ಲಕ್ಷ್ಮಣಾ! ಹೋದುದು ಹೋ ಗಲಿ! ಈಗಲಾದರೂ ಆಸೀತೆಯು ನಮ್ಮ ಕಣ್ಣಿಗೆ ಬಿದ್ದು, ಆವಳೊಡನೆ ಸೇರಿ ನಾವು ಇಲ್ಲಿ ವಾಸಮಾಡುವುದಾಗಿದ್ದರ,ಇದರಮೇಲೆ ನನಗೆ ಇಂದ್ರಪದವಿ ಯು ಬಂದರೂ ಅದರಲ್ಲಿ ಆಸೆ ಹುಟ್ಟದು ಇನ್ನು ಆ ಅಯೋಧ್ಯೆಯಿಂ ದೇನು ? ಎಲೆ ವತ್ಸನೆ ! ಮುಖ್ಯವಾಗಿ ರಮಣೀಯಗಳಾದ ಈ ಶಾದ್ವ ಲಪ್ರದೇಶಗಳಲ್ಲಿ ಆ ಸೀತೆಯೊಡನೆ ನಾನು ವಿಹರಿಸುತ್ತಿರುವ ಪಕ್ಷದಲ್ಲಿ ನನಗೆ ಬೇರೆ ಚಿಂತೆಯಲ್ಲೆರುವುದು ? ಬೇರೆ ಇಂದ್ರಾದಿಪದವಿಗಳಲ್ಲಿಯೂ ನನಗೆ ಆಸೆಹುಟ್ಟದು ಬಗೆಬಗೆಯ ಹೂಗಳಿಂದಲೂ, ಮನೋಹರ ವಾದ ಎಲೆಗಳಿಂದಲೂ ಕೂಡಿದ ಈ ವೃಕ್ಷಗಳು ಸೀತಾಪಯುಕ್ತನಾದ ನನ ಗೆ ಹುಚ್ಚು ಹಿಡಿಸುವಂತಿರುವುವು ವತ್ಸನೆ! ತೀತಲವಾದ ನೀರಿಂದ ತುಂಬಿ ಕಮಲಗಳಿಂದ ನಿಬಿಡವಾದ ಈ ಪಂಪಾಸರೋವರವನ್ನು ನೋಡು ! ಇದ ರಲ್ಲಿ ಚಕ್ರವಾಕಗಳೂ, ಕಾರಂಡವಗಳೂ, ನೀರುಕೋಳಿಗಳೂ, ಕ್ರೌಂಚಗ ಳೂ ಎಷ್ಟು ಹೇರಳವಾಗಿರುವುವು ನೋಡಿದೆಯಾ? ಇದರ ತೀರಪ್ರದೇಶಗಳಲ್ಲಿ ಸುತ್ತಲೂ ಅನೇಕಾನೇಕವಾಗಿ,ಹಂದಿ, ಹುಲ್ಲೆ, ಮುಂತಾದ ಮೃಗಜಾತಿಗಳು ಸಂತೋಷದಿಂದ ಸಂಚರಿಸುತ್ತಿರುವುವು ಇದರಲ್ಲಿ ಅನೇಕಪಕ್ಷಿಗಳು ಕಿವಿಗಿಂ ಪಾಗಿ ಕೂಗುತ್ತಿರುವುದರಿಂದ, ಇದಕ್ಕೆ ಮೇಲೆಮೇಲೆ ಶೋಭಾತಿಶಯವು ಹೆ ಚ್ಚುತ್ತಿರುವುದು ವತ್ಸನೆ ! ಹೀಗೆ ಸಂತೋಷದಿಂದ ಕೂಗಿಡುತ್ತಿರುವ ಈ ಬಗೆಬಗೆಯ ಪಕ್ಷಿಗಳೆಲ್ಲವೂ ನನ್ನ ಮನಸ್ಸಿನ ಕಾಮವನ್ನು ಹೆಚ್ಚಿಸುತ್ತಿರುವುವ ಲ್ಲಾ !ಇವುಗಳನ್ನು ನೋಡಿದ ಹಾಗೆಲ್ಲಾ ನನ್ನ ಮನಸ್ಸಿಗೆ,ಶ್ಯಾಮಾಂಗಿಯಾ ಗಿಯೂ, ಚಂದ್ರಮುಖಿಯಾಗಿಯೂ, ಕಮಲದಳದಂತೆ ಕಣ್ಣುಳ್ಳವಳಾಗಿ ಯೂ ಇರುವ ಆ ನನ್ನ ಪ್ರಾಣಪ್ರಿಯಯ ಸ್ಮರಣೆಯುಂಟಾಗುತ್ತಿರುವುದು.

* ಇಲ್ಲಿ "ಈ ಪಂಪಾಸರೋವರದಂತೆ ರೂಪವು ಮಂದಾಕಿನಿಗೂ ಪ್ರಾಪ್ತವಾ ದಪಕ್ಷದಲ್ಲಿ, ಆಗ ಅದೂ ಮನೋಹರವಾದ ಗುಣವುಳ್ಳದೆಂದು ಲೋಕದಲ್ಲಿ ಹೊಂದಿ ರುವ ಖ್ಯಾತಿಯೆಲ್ಲವೂ ಯುಕ್ತವಾಗುತಿತ್ತೆ"ಂದು ಮಹೇಶ್ವರತೀರ್ಥ ವ್ಯಾಖ್ಯಾನವು.

ವತ್ಸನೆ! ಚಿತ್ರವಿಚಿತ್ರಗಳಾದ ಈ ಬೆಟ್ಟದ ತಪ್ಪಲುಗಳಲ್ಲಿ,ಜಿಂಕೆಗಳು ತಮ್ಮ ಹೆಣ್ಣುಜಿಂಕೆಗಳೊಡಗೂಡಿ ವಿಹರಿಸುತ್ತಿರುವುದನ್ನು ನೋಡು!ಇವುಗಳ ಕಣ್ಣಿನಂತೆಯೇ ಕಣ್ಣುಳ್ಳ ಆ ಸೀತೆಯಿಂದ ವಿಯುಕ್ತನಾಗಿ ಇಲ್ಲಿ ಸುತ್ತುತ್ತಿರುವ ನನ್ನ ಮನಸ್ಸಿಗೆ ಇವೆಲ್ಲವೂ ಮೇಲೆಮೇಲೆ ಸಂಕಟವನ್ನು ಹೆಚ್ಚಿಸುತ್ತಿರುವುವು ಮೃಗಗಳಿಂದಲೂ, ಪಕ್ಷಿಗಳಿಂದಲೂ ನಿಬಿಡವಾಗಿ, ಅತಿರಮ್ಯವಾದ ಈ ಸಾನುಪ್ರದೇಶದಲ್ಲಿರುವಾಗಲೇ, ನಾನು ಆ ನನ್ನ ಪ್ರಿಯೆಯನ್ನು ನೋಡುವ ಪಕ್ಷದಲ್ಲಿ ಆಗಲೇ ನನಗೆ ಕ್ಷೇಮವುಂಟೇ ಹೊರತು ಬೇರೆಯಲ್ಲ ಲಕ್ಷ್ಮಣಾ ! ಆ ನನ್ನ ಪ್ರಿಯಪತ್ನಿಯು ಈಗಲೇ ಇಲ್ಲಿಗೆ ಬಂದು, ಈ ಪಂಪಾತೀರದಲ್ಲಿ ಬೀಸುತ್ತಿರುವ ಸುಖಕರವಾದ ಈ ತಂಗಾಳಿಯನ್ನು ಸೇವಿಸುವಹಾಗಾದರೆ, ಆಗ ನಾನು ಸುಖವಾಗಿ ಬದುಕಬಲ್ಲೆನು ಎಲೆ ವತ್ಸನೆ ! ಪದ್ಮ ಸೌಗಂಧಿಕಾದಿ ಪುಷ್ಪಗಳ ವಾಸನೆಯೊಡಗೂಡಿ, ದುಃಖವನ್ನು ನೀಗಿಸುತ್ತ, ಮಂಗಳಕರವಾಗಿ ಬೀಸುತ್ತಿರುವ ಈ ಪಂಪೋಪನನದ ತಂಗಾಳಿಯನ್ನು ತಮ್ಮತಮ್ಮ ಪತ್ನೀ ಸಮೇತರಾಗಿ ಸಂತೋಷದಿಂದನುಭವಿಸುವವರೇ ಲೋಕದಲ್ಲಿ ಪರಮಭಾಗ್ಯ ಶಾಲಿಗಳಲ್ಲವೆ? ವತ್ಸನೆ! ಇವೆಲ್ಲವೂ ಹಾಗಿರಲಿ ! ಶ್ಯಾಮಾಂಗಿಯಾಗಿಯೂ, ಕಮಲದಳದಂತೆ ಕಣ್ಣುಳ್ಳವಳಾಗಿಯೂ ಇರುವ ನನ್ನ ಪ್ರಾಣಪ್ರಿಯೆಯಾದ ಆ ಜನಕಪುತ್ರಿಯು, ತನ್ನನ್ನಗಲಿ ಹೇಗೆ ಬದುಕಿರುವಳೋ ಕಾಣೆನಲ್ಲಾ ! ಪ್ರಾಣತ್ಯಾಗಕ್ಕೂ ಸ್ವಾತಂತ್ರ್ಯವಿಲ್ಲದ ಆ ಅಬಲೆಯು ಹೇಗೆ ಜೀವಿಸುವಳೋ ! ವತ್ಸನೆ! ನಾವು ಹಿಂತಿರುಗಿ ಅಯೋಧ್ಯೆಗೆ ಹೋದಮೇಲೆ, ಧರ್ಮಜ್ಞನಾಗಿಯೂ, ಸತ್ಯವಾದಿಯಾಗಿಯೂ ಇರುವ ಆ ಸೀತೆಯ ತಂದೆಯಾದ ಜನಕನು ಬಂದು, ಅನೇಕಜನಗಳಮುಂದೆ ಸೀತೆಯ ಕ್ಷೇಮಲಾಭವನ್ನು ವಿಚಾರಿಸಿದರೆ, ಆಗ ನಾನು ಅವನಿಗೆ ಏನುತ್ತರವನ್ನುಕೊಡಲಿ? ನಾನಾದರೋ ಪರಮದುರ್ಭಾಗ್ಯನು! ಹೆತ್ತತಂದೆಯಿಂದಲೇ ಕಾಡುಪಾಲಾಗಿ ಕಳುಹಿಸಲ್ಪಟ್ಟಿರುವೆನು ಈ ದುರವಸ್ಥೆಯಲ್ಲಿಯೂ ಆ ನನ್ನ ಪ್ರಾಣಪ್ರಿಯೆಯಾದ ಸೀತೆಯು ನನ್ನನ್ನು ಬಿಟ್ಟಿರಲಾರದೆ, ಪಾತಿವ್ರತ್ಯವನ್ನೇ ಅವಲಂಬಿಸಿ, ನನ್ನನ್ನು ಹಿಂಬಾಲಿಸಿ ಬಂದಳಲ್ಲಾ ! ಆ ಪ್ರಿಯಪತ್ನಿಯು ಈಗ ಎಲ್ಲಿರುವಳೋ ಕಾಣೆನಲ್ಲಾ !ವತ್ಸನೆ! ನಾನು ರಾಜ್ಯಭ್ರಷ್ಟನಾಗಿ ದೀನದಶೆಯನ್ನು ಹೊಂದಿ, ದುಃಖಿ

ನಾಗಿ ಬರುತ್ತಿರುವಾಗಲೂ, ನನ್ನನ್ನು ಬಿಡದೆ ಹಿಂಬಾಲಿಸಿ ಬಂದ ಆ ಸೀತೆಯನ್ನೂ ಅಗಲಿದಮೇಲೆ, ಆ ದುಃಖದಲ್ಲಿ ನಾನು ಹೇಗೆ ಪ್ರಾಣವನ್ನು ಧರಿಸಿಕೊಂಡಿರಲಿ? ಲೋಕಮನೋಹರವಾಗಿ, ತುಂಬಿದೆವೆಗಳಿಂದ ಕೂಡಿದ ಕಣ್ಣುಗಳುಳ್ಳದಾಗಿ, ಪದ್ಮಗಂಧವುಳ್ಳದಾಗಿ, ನಿರ್ದೋಷವೆನಿಸಿಕೊಂಡಿರುವ ಆ ಸೀತೆಯ ಮುದ್ದುಮೊಗವನ್ನು ನೋಡದೆ, ನನ್ನ ಮನಸ್ಸು ಸುಕ್ಕಿಹೋದಂತೆ ತೋರುತ್ತಿರುವುದು! * ಸ್ವಾಭಾವಿಕವಾದ ಮಂದಹಾಸದಿಂದಲೂ, ಆಗಾಗ ಸಕಾರಣವಾದ ಮುಗಳ್ನಗೆಯಿಂದಲೂ ಕೂಡಿ, ಕಿವಿಗಿಂಪಾಗಿಯೂ, ಹಿತವಾಗಿಯೂ ಇರುವ ಆ ಸೀತೆಯ ಎಣೆಯಿಲ್ಲದ ಮುದ್ದುಮಾತುಗಳನ್ನು ನಾನು ಪುನಃ ಯಾವಾಗ ಕೇಳುವೆನೋ? ಆಹಾ! ವತ್ಸನೆ! ಶ್ಯಾಮಾಂಗಿಯಾದ ಆ ನನ್ನ ಪ್ರಾಣಪ್ರಿಯೆಯು, ಕಾಡಿನಲ್ಲಿ ಸಿಕ್ಕಿ ಕಷ್ಟಪಡುತ್ತ, ದುಃಖಭಾಗಿನಿಯಾಗಿದ್ದಾಗಲೂ, ನಾನು ಮನ್ಮಥತಾಪಕ್ಕೊಳಗಾದುದನ್ನು ನೋಡಿದ ಕ್ಷಣದಲ್ಲಿ, ತಾನು ಸ್ವಲ್ಪವೂ ದುಃಖಿಪಿಲ್ಲದವಳಂತೆ ಸಂತೋಷವನ್ನೇ ತೋರಿಸುತ್ತ, ನನ್ನೊಡನೆ ಉಲ್ಲಾಸಕರಗಳಾದ ಮಾತುಗಳನ್ನಾಡಿ ನನ್ನನ್ನು ಸಂತೋಷಪಡಿಸುತಿದ್ದಳಲ್ಲಾ! ಎಲೈ ರಾಜಕುಮಾರನೆ! ನಾನು ಅಯೋಧ್ಯೆಗೆ ಹೋದಮೇಲೆ ಮನಸ್ವಿನಿಯಾದ ನನ್ನ ತಾಯಿ ಕೌಸಲ್ಯೆಯು ಬಂದು, ನನ್ನನ್ನು ನೋಡಿ, ತನ್ನ ಸೊಸೆಯ ಕ್ಷೇಮಲಾಭಗಳನ್ನು ವಿಚಾರಿಸಿ ''ಆ ಸೊಸೆಯೆಲ್ಲಿ?''ಎಂದು ಕೇಳಿದರೆ ನಾನೇನು ಹೇಳಲಿ? ವತ್ಸ ಲಕ್ಷ್ಮಣಾ! ಆದುದಾಯಿತು! ಇನ್ನು ನೀನಾದರೂ ಹೋಗಿ ಭ್ರಾತೃವತ್ಸಲನಾದ ಭರತನನ್ನು ನೋಡು! ನಾನಂತೂ ಆ ಜನಕಪುತ್ರಿಯನ್ನಗಲಿ ಬದುಕಿರಲಾರೆನು "ಎಂದನು ಹೀಗೆ ಅನಾಥನಂತೆಗೋಳಿಡುತ್ತಿರುವ ಅಣ್ಣನಾದ ರಾಮನನ್ನು ನೋಡಿ, ಲಕ್ಷ್ಮಣನು, ಯುಕ್ತವಾಕ್ಯಗಳಿಂದ ಆತನನ್ನು ಕುರಿತು, ''ಅಣ್ಣಾ! ಇದೇನು! ಸಮಾಧಾನದಿಂದಿರು! ಧೈರ್ಯವನ್ನು ತಂದುಕೊಳ್ಳುವನಾಗು! ನಿನಗೆ ಮಂಗಳವಾಗಲಿ! ದುಃಖಿಸಬೇಡ! ಧರ್ಮಾತ್ಮನಾದ ನಿನಗೂ ಹೀಗೆ ಬುದ್ಧಿಯು ಕಲುಷಿತವಾಗುವುದೆಂದರೇನು?

---

* ಇದರಿಂದ ಸಂಸಾರಬಂಧಮುಕ್ತನಾದ ಚೇತನನು ''ಏತತ್ಸಾಮಗಾಯನ್ನಾಸ್ತೇ'' ಎಂಬಂತೆ ತನ್ನ ಸಾನ್ನಿಧ್ಯದಲ್ಲಿ ಸಾಮಗಾನಮಾಡುತ್ತಿರುವುದನ್ನು ತಾನು ಯಾವಾಗ ಕೇಳುವೆನೆಂದು ಭಗವಂತನು ಆತುರಪಡುತ್ತಿರುವುದಾಗಿ ಸೂಚಿತವು

ಇಂತಹ ವಿಯೋಗದುಃಖಗಳೆಲ್ಲವೂ ವಿಶೇಷಮೋಹದಿಂದಲೇ ಪ್ರಾಪ್ತವಾಗುವುವು ಸ್ನೇಹವು ಹೆಚ್ಚಿದಷ್ಟೂ ವಿಯೋಗಕಾಲದಲ್ಲಿ ದುಃಖವನ್ನು ಹೆಚ್ಚಿಸುತ್ತಿರುವುದು ಈ ತತ್ವವನ್ನು ಚೆನ್ನಾಗಿ ಪರ್ಯಾಲೋಚಿಸಿ, ಪ್ರಿಯಜನದಲ್ಲಿಹೆಚ್ಚು ಪ್ರೇಮವನ್ನು ಬಿಟ್ಟುಬಿಡು' ಬತ್ತಿಯಲ್ಲಿ ಎಷ್ಟೇ ತೇವವಿದ್ದರೂ ಹೆಚ್ಚಾದ ಸ್ನೇಹದ (ಎಣ್ಣೆಯ) ಸಂಬಂಧದಿಂದ ಬಲವಾಗಿ ಉರಿಯುವದಲ್ಲವೆ ? ಅಣ್ಣಾ ' ಸೀತೆಯನ್ನು ಕದ್ದುಯ್ದ ಆ ರಾವಣನು, ಪಾತಾಳದಲ್ಲಿಯೇ ಅಡಗಿದ್ದರೂ,ಅಥವಾ ಅದಕ್ಕಿಂತಲೂ ದುರ್ಗಮವಾದ ಬೇರ ರಹಸ್ಯಸ್ಥಳವನ್ನು ಸೇರಿದ್ದರೂ, ಇನ್ನು ಮೇಲೆ ಬಹುಕಾಲಕ್ಕ ಬದುಕಿರಲಾರನು ಆದರ ಪಾಪಿಯಾದ ಆ ರಾಕ್ಷಸನಿರುವ ಸ್ಥಳವಾವುದೆಂದು ತಿಳಿಯುವುದೊಂದೇ ಈಗ ನಮಗೆ ಬೇಕಾದುದು ಅವನ ಸುಳಿವು ತಿಳಿದರೆ ಸಾಕು ಆಗ ಅವನು ಸೀತೆಯನ್ನಾದರೂ ನಮಗೆ ತಂದೊಪ್ಪಿಸಬೇಕು ಇಲ್ಲವೇ ತನ್ನ ಪ್ರಾಣವನ್ನಾದರೂ ನಮಗೊಪ್ಪಿಸಬೇಕು' ಅಣ್ಣಾ 'ಇನ್ನು ಹೆಚ್ಚಾಗಿ ಹೇಳಿದುದರಿಂದೇನು? ಆ ರಾವಣನು ಸೀತೆಯನ್ನೆತ್ತಿಕೊಂಡು ಹೋಗಿ, ಇಂದ್ರನ ತಾಯಿಯಾದ ಅದಿತಿಯ ಗರ್ಭದಲ್ಲಿ ಅಪಿತುಕೂಂಡರೂ, ಅಲ್ಲಿಯೂ ನಾನು ಅವನನ್ನು ಬಿಡುವವನಲ್ಲ ' ಅವನು ಸೀತೆಯನ್ನು ಕೂಡದಪಕ್ಷದಲ್ಲಿ ಅಲ್ಲಯೇ ಅವನನ್ನು ಕೂಂದುಬರುವನು ಇದು ನಿಜವು ಆದುದರಿಂದ, ಅಣ್ಣಾ 'ಧೈರ್ಯವನ್ನವಲಂಬಿಸು' ಧೈರ್ಯವೆಂಬುದೇ ಸಮಸ್ತಶ್ರೇಯಸ್ಸುಗಳಿಗೂ ಮೂಲವು ಈ ದೀನ ಸ್ವಭಾವವನ್ನು ಬಿಟ್ಟುಬಿಡು' ಕೃತಪ್ಪಿಹೋದ ಕಾರ್ಯವನ್ನು ಸಾಧಿಸಿಕೂಳ್ಳಬೇಕಾದರ ತಕ್ಕ ಪ್ರಯತ್ನವನ್ನು ಮಾಡಿದಹೊರತು ಸಾಧ್ಯವಲ್ಲ ಪ್ರಯತ್ನವಿಲ್ಲದೆ ಕಾರ್ಯಸಿದ್ಧಿಯಿಲ್ಲ' ಉತ್ಸಾಹವಂಬುದೇ ಕಾರ್ಯಸಿದ್ಧಿಗೆ ಪ್ರಬಲಸಾಧನವು ಉತ್ಸಾಹಕ್ಕಿಂತಲೂ ಮೇಲಾದ ಬೇರ ಬಲವಿಲ್ಲ ಉತ್ಸಾಹವುಳ್ಳವರಿಗೆ ಈ ಲೋಕದಲ್ಲಿ ದುರ್ಲಭವಾದುದೊಂದೂ ಇಲ್ಲ. ಉತ್ಸಾಹವುಳ್ಳ ಪುರುಷರು ಎಂತಹ ಕಾರ್ಯಗಳಲ್ಲಿಯೂ ಕ್ಲೇಶವನ್ನು ಹೊಂದರು.ಆದುದರಿಂದ ಈಗ ನಾವು ಯಾವಪಿಥದಿಂದಲೂ ಉತ್ಸಾಹವನ್ನುಮಾತ್ರ ಬಿಡದೆ, ಅದನ್ನೇ ದೃಢವಾಗಿ ಹಿಡಿದಿರುವ ಪಕ್ಷದಲ್ಲಿ,ನಮಗೆ ಸೀತೆಯು ಸಿಕ್ಕುವುದರಲ್ಲಿ ಸ್ವಲ್ಪವೂ

ಸಂದೇಹವಿಲ್ಲ ದುಃಖವನ್ನು ಬಿಡು! *ಈಮನ್ಮಥವಿಕಾರವನ್ನೂ ನಿಗ್ರಹಿಸಿಡು! ನೀನಾದರೋ ಮಹಾಮಹಿಮೆಯುಳ್ಳವನು! ಅಸಾಧಾರಣವಾದ ಬುದ್ಧಿಯುಳ್ಳವನು ಹೀಗಿರುವ ನಿನ್ನ ಸ್ಥಿತಿಯನ್ನೇ ನೀನುಮರೆತುಹೋಗಿರುವೆಯೆಲ್ಲಾ!" ಎಂದು ನಾನಾವಿಧವಾಗಿ ಸಮಾಧಾನಗಳನ್ನು ಹೇಳಿದನು ರಾಮನು ವಿಶೇಷ ಶೋಕಾಕುಲನಾಗಿದ್ದರೂ ಲಕ್ಷ್ಮಣನ ಹಿತವಾದಗಳನ್ನು ಕೇಳಿಕೊಡನೆಮನ ಸ್ಸಿನಲ್ಲಿದ್ದ †ಶೋಕವೋಹಗಳನ್ನು ಬಿಟ್ಟು ಧೈರ್ಯವನ್ನು ತಂದುಕೂಂಡನು ಅಚಿಂತ್ಯವಿಕ್ರಮನಾದ ರಾಮನು, ಹೀಗೆ ಸ್ಥಿರಮನಸ್ಸುಳ್ಳವನಾಗಿ ಮುಂದೆ ನಡೆದು, ಗಾಳಿಯಿಂದ ತೂಗಾಡುತ್ತಿರುವ ವೃಕ್ಷಗಳುಳ್ಳುದಾಗಿಯೂ, ಅತಿ ರಮಣೀಯವಾಗಿಯೂ ಇರುವ ‡ ಪಂಪಾಸರಸ್ಸನ್ನೂ ಬಾಟಿಹೋದನು ಹೀಗೆ ಮಹಾತ್ಮನಾದ ರಾಮನು ಲಕ್ಷ್ಮಣಸಹಿತನಾಗಿ, ಅಲ್ಲಲ್ಲಿ ಕಾಣುವ ಸಮಸ್ತವನವನ್ನೂ, ಗಿರಿನದಿಗಳನ್ನೂ, ಪರ್ವತಗುಹೆಗಳನ್ನೂ ಸುತ್ತಿಸುತ್ತಿ ನೋಡುತ್ತ, ಸೀತೆಯನ್ನು ಕಾಣದೆ ಮನಸ್ಸಿನಲ್ಲೆ ಕೊರಗುತ್ತ, ದುಃಖಿತನಾಗಿ ಮುಂದೆ ಹೊರಟನು ಮದದಾನೆಯಂತೆ ಗಂಭೀರವಾದ ನಡೆಯುಳ್ಳ ಮಹಾತ್ಮನಾದ ಲಕ್ಷ್ಮಣನಾದರೋ, ಹೀಗೆ ಏಕಾಗ್ರಚಿತ್ತನಾಗಿ ಸೀತೆಯನ್ನು ಹುಡುಕುತ್ತ ಮುಂದೆಮುಂದೆ ನಡೆಯುತ್ತಿರುವ ರಘುವಂಶೋತ್ತಮನಾದ ಆ ರಾಮನನ್ನು ಬಹಳ ಎಚ್ಚರಿಕೆಯಿಂದ ನೋಡಿಕೂಳ್ಳುತ್ತ, ಆಗಾಗ ಅವನಿಗೆ ರಾಜನೀತಿಗಳೇ ಮೊದಲಾದ ಧರ್ಮಗಳನ್ನು ತಿಳಿಸಿ ಸಮಾಧಾನಪಡಿಸುತ್ತ,

---

* ಇಲ್ಲಿ "ತ್ಯಜ್ಯತಾಂ ಕಾಮನೃತ್ತತ್ವಮ್" ಎಂದು ಮೂಲವು ಇದರಿಂದ ಲಕ್ಷ್ಮಣನು ರಾಮನನ್ನುಕುರಿತು "ನೀನೇಕೆ ಹೀಗೆ ವಾತ್ಸಲ್ಯದಿಂದ ತಪಿಸುವೆ? "ಸಾಧುಕಾರೀ ಸಾಧುರ್ಭವತಿ, ಪಾಪಕಾರೀ ಪಾಪೀಭವತಿ" ಎಂಬುದಾಗಿ ನೀನೇ ಸಂಕಲ್ಪಿಸಿರುವೆಯೆಲ್ಲವೆ? ಈ ಶಾಸ್ತ್ರಮರ್ಯಾದೆಯನ್ನು ಸ್ಮರಿಸಿ ನುಮ್ಮನಿರದೆ, ಈ ಯಥೇಚ್ಛಪ್ರವರ್ತನವೇಕೆಂದು ಜ್ಞಾಪಿಸಿದುದಾಗಿ ವಿಶೇಷಾರ್ಥವು

† ಇಲ್ಲಿ ಶೋಕವೋಹಶಬ್ದಗಳಿಂದ ಭಗವಂತನ ದಯಾವಾತ್ಸಲ್ಯಗಳೆಂದು ಗ್ರಾಹ್ಯವು ಅವೆರಡನ್ನೂ ತ್ಯಜಿಸುವುದೆಂದರೆ ಶಾಸ್ತ್ರಮರ್ಯಾದೆಯನ್ನನುಸರಿಸಿ ಚೇತನರನ್ನು ರಕ್ಷಿಸುವುದಕ್ಕೆ ಸಂಕಲ್ಪಿಸಿದುದಾಗಿ ಭಾವವು

‡ ಇದರಿಂದ ಭಗವಂತನು ವಿರಜೆಯನ್ನೂ ದಾಟಿ ಸಂಸಾರಿಮಂಡಲಕ್ಕಬಿಮುಖನಾಗಿರುವನೆಂದು ಸೂಚಿತವು.

ತನ್ನ ಪರಾಕ್ರಮದಿಂದ ಆತನಿಗೂ ಮೇಲೆಮೇಲೆ ಉತ್ಸಾಹವನ್ನು ಹುಟ್ಟಿಸು
ತ್ತ ರಕ್ಷಿಸುತ್ತಿದ್ದನು ಇಷ್ಟರಲ್ಲಿ ಅತ್ತಲಾಗಿ ಋಶ್ಯಮೂಕಪರ್ವತಸಮೀಪ
ದಲ್ಲಿ ಮಹಾಬಲಾಢ್ಯನಾದ ಸುಗ್ರೀವನೆಂಬ ವಾನರರಾಜನೊಬ್ಬನು, ತನ್ನ
ಣ್ಣನಾದ ವಾಲಿಯ ಭಯಕ್ಕಾಗಿ,ಅಲ್ಲಿನ ಮತಂಗಾಶ್ರಮದಲ್ಲಿ ತಿರುಗುತ್ತಿರು
ವಾಗ, ಅದ್ಭುತಸೌಂದರ್ಯವುಳ್ಳ ಈರಾಮಲಕ್ಷ್ಮಣರಿಬ್ಬರನ್ನೂ ದೂರದಿಂದ
ಲೇ ಕಂಡನು ಇವರನ್ನು ಕಂಡೊಡನೆ ಅವನ ಮನಸ್ಸಿಗೆ ಬಹಳ ಭಯವುಂಟಾ
ಯಿತು ಈ ಭಯದಿಂದ ಅವನು ಹಿಂದುಮುಂದುತೋರದೆ ಮೈಮರೆತು ಸ್ತ
ಬ್ಧನಾಗಿ ನಿಂತುಬಿಟ್ಟನು ಮತ್ತಗಜದಂತೆ ಗಂಭೀರಗಮನವುಳ್ಳ ಮಹಾತ್ಮ
ನಾದ ಸುಗ್ರೀವನು,ಆ ಪಂಪಾತೀರದಲ್ಲಿ ಬಹಳ ಹೊತ್ತಿನಿಂದ ಹೊಂಚುಹಾ
ಕಿ ಸುತ್ತುತ್ತಿರುವ ಈ ರಾಜಕುಮಾರರಿಬ್ಬರನ್ನೂ ನೋಡಿ,ಚಿಂತೆಯಿಂದಲೂ
ಭಯದಿಂದಲೂ ಪರವಶನಾಗಿ,ಅವರು ಯಾರೆಂದು ತಿಳಿಯದೆ ಶಂಕಾಕುಲಿತ
ನಾಗಿ, ಅಂಜಿಕೆಯಿಂದ ತತ್ತ್ವಳಿಸಿ ಕೊರಗುತಿದ್ದನು- ಇದ್ದಲ್ಲದೆ ಆ ಸುಗ್ರೀವನ
ಕಡೆಯ ಇತರವಾನರರೂಕೂಡ, ತಮಗೆ ನಿತ್ಯಸುಖಾಶ್ರಯವಾದ ಆ ಪು
ಣ್ಯಾಶ್ರಮಕ್ಕೆ, ಮಹಾತೇಜಸ್ವಿಗಳಾದ ಮತ್ತು ಅಪೂರ್ವರೂಪವುಳ್ಳ ಈ ರಾ
ಮಲಕ್ಷ್ಮಣರಿಬ್ಬರೂ ಪ್ರವೇತಿಸಿದುದನ್ನುನೋಡಿ, ಇವರು ವೇಷಧಾರಿಗಳಾ
ದ ವಾಲಿಯ ಕಡೆಯವರೆಂಬ ಶಂಕೆಯಿಂದ ಭಯಪಟ್ಟು,ಓಡಿ ಹೋಗಿಮತಂ
ಗಾಶ್ರಮದೊಳಗೆ ಸೇರಿಕೊಂಡರು ಇಲ್ಲಿಗೆ * ಮೊದಲನೆಯ ಸರ್ಗವು

---

* ಇದುವರೆಗೆ ಈ ಸರ್ಗದಲ್ಲಿ ಹೇಳಿರುವಂತೆಯೇ ಇತರ ಪುರಾಣಗಳಲ್ಲಿಯೂ ಪಂಪಾದರ್ಶನದಿಂದ ರಾಮನಿಗುಂಟಾದ ಕಾಮಪೀಡೆಯು ವರ್ಣಿಸಲ್ಪಟ್ಟಿದೆ. ಇದೇ ವಿಷ
ಯವು ಸ್ಕಾಂದಪುರಾಣದಲ್ಲಿ ಶ್ರುತಿಪಾದಿಸಲ್ಪಡುವಾಗ, ರಾಮನು ತನ್ನ ವಿರಹಾತಿಶಯದಿಂ
ದ ಅಲ್ಲಿ ತನಗೆ ಕಾಮೋದ್ದೀಪಕಗಳಾಗಿದ್ದ ಭ್ರಮರಾದಿಗಳನ್ನು ಕೋಪದಿಂದ ಶಪಿಸಿ
ದುದಾಗಿಯೂ ಹೇಳಲ್ಪಟ್ಟಿದೆ ಹೇಗೆಂದರೆ:—"ವೈಮುಖ್ಯಂ ಗಂಧಫಲ್ಯಾಸ್ತು ಭ್ರಮ
ರಾನಶಪತ್ಪ್ರಭುಃ । ಕೋಕಾನ್ನಿಶೀಥೇ ವಿಶ್ಲೇಷಂ ಪಿಕಮನ್ಯೇವಿವರ್ಧನಮ್ । ಚಂದನಂ
ಸರ್ಪನಿಲಯಂ ವಾಯುಂ ಸರ್ವಾಶನಂ ತಥಾ। ಜ್ಯೋತ್ಸ್ನಾಂ ಕಳಂಕಸಂಭನ್ನಾಂ ಶ
ಶಾಪ ರಘುನಂದನಃ" ಸಂಪಗೆಯನ್ನು ಮುಟ್ಟದಂತೆ ಭ್ರಮರಗಳಿಗೂ, ರಾತ್ರಿಯಲ್ಲಿ
ವಿಯೋಗವನ್ನು ಹೊಂದಿರುವಂತೆ ಚಕ್ರವಾಕಗಳಿಗೂ, ಇತರಪಕ್ಷಿಗಳ ಪೋಷಣೆಗೊಳ

ಸುಗ್ರೀವನು ಆಂಜನೇಯನನ್ನು ರಾಮಲಕ್ಷ್ಮಣರ ಬಳಿಗೆ ಕಳುಹಿಸಿದುದು,

ಅಣ್ಣನಮ್ಮಂಡುರಾದ ಈ ರಾಮಲಕ್ಷ್ಮಣರ ಆಕೃತಿಯನ್ನು ದೂರದಿಂದ ನೋಡಿದಾಗ ಸುಗ್ರೀವನ ಮನಸ್ಸಿನಲ್ಲಿ ಭಯವುಂಟಾಯಿತು ಇದರ ಮೇಲೆ ಅವರ ದೊಡ್ಡದೇಹವನ್ನೂ, ಅವರು ಕೈಯಲ್ಲಿ ಹಿಡಿದಿರುವ ಮಹಾಯುಧಗಳನ್ನೂ ನೋಡಿದ ಮೇಲೆ ಅವನ ಮನಸ್ಸಿನ ಭೀತಿಯು ವಿಶೇಷವಾಗಿ ಹೋಯಿತು ಆ ಭಯದಿಂದ ಹಿಂದುಮುಂದುತೋರದೆ ತತ್ತಳಿಸುತಿದ್ದನು ನಾಲ್ಕು ದಿಕ್ಕುಗಳನ್ನೂ ನೋಡುತ್ತ, ಸಿಂತ ಕಡೆಯಲ್ಲಿ ನಿಲ್ಲಲಾರದೆ ತಿರುಗುತಿದ್ದನು ಅವನ ಮನಸ್ಸು ಒಂದುಸ್ಥಿತಿಯಲ್ಲಿಲ್ಲದೆ, ಆ ಮಹಾಭಯದಿಂದ ಆಗಲೇ ಅವನ ಎದೆಯು ಒಡೆದುಹೋಗುವಂತಾಯಿತು' ಆದರೆ, ಆ ಸುಗ್ರೀವನು ರಾಜಧರ್ಮವನ್ನು ಚೆನ್ನಾಗಿ ಬಲ್ಲವನಾದುದರಿಂದ, ತನ್ನ ಮನಸ್ಸಿನಲ್ಲಿ ತಾನು " ಈಗ ಭಯದಿಂದ ಓಡಿಹೋಗುವುದುತ್ತಮವೆ? ಧೈರ್ಯದಿಂದ ಇಲ್ಲಿಯೇ ನಿಂತು ಪರೀಕ್ಷಿಸುವುದೊಳ್ಳೆಯದೆ? ಈಗ ಮಾಡಬೇಕಾದುದೇನು?" ಎಂದು ನಾನಾವಿಧದಿಂದ ಕಾರ್ಯಾಕಾರ್ಯಗಳನ್ನು ಚಿಂತಿಸಿ,ಕೂನೆಗೆ ತನ್ನಕಡೆಯ ಮಂತ್ರಿಗಳನ್ನು ಕರದು, ಅವರೊಡನೆಯೂ ಆ ವಿಷಯವಾದ ಗುರುಲಾಘವಗಳನ್ನು ವಿಮರ್ಶಿಸಿದನು ಏನಾದರೇನು ? ಆತನ ಮನಸ್ಸಿನಲ್ಲಿದ್ದ ಭಯವುಮಾತ್ರ ಎಷ್ಟಾದರೂ ತಗ್ಗಲಿಲ್ಲ ಹೀಗೆ ವಾನರೇಂದ್ರನಾದ ಸುಗ್ರೀವನು ಬಾರಿಬಾರಿಗೂ ರಾಮಲಕ್ಷ್ಮಣರನ್ನು ನೋಡಿ ಭಯದಿಂದ ನಡುಗುತ್ತ ತನ್ನಪರಿವಾರಗಳನ್ನು ನೋಡಿ " ಎಲ್ಲ ಮಿತ್ರರ ! ಇನ್ನು ನಮ್ಮಗತಿಯೇನು? ಅದೋ! ಅಲ್ಲಿ ನೋಡಿರಿ' ಮಹಾವೀರರಿಬ್ಬರು ಇತ್ತಲಾಗಿ ಬರುತ್ತಿರುವರು ಅವರಿಬ್ಬರೂ ವಾಲಿಯಕಡೆಯ ಗೂಢಚಾರರಂಬುದರಲ್ಲಿ ಸಂದೇಹವೇ ಇಲ್ಲ! ಮುನಿಗಳೆಂಬ ನೆವದಿಂದ ನಾರುಬಟ್ಟೆಯನ್ನುಟ್ಟು, ವೇಷಾಂತರದಿಂದ ಈ ದುರ್ಗಮವಾದ ವನದೊಳಕ್ಕೆ ಪ್ರವೇಶಿಸಿರುವರು ಇ

ಗಾಗುವಂತೆ ಕೋಗಿಲೆಗಳಿಗೂ, ಕ್ರೂರಸರ್ಪಗಳಿಗೆಡೆಯಾಗಿರುವಂತ ಚಂದನವೃಕ್ಷಗಳಿಗೂ, ಹಾವುಗಳಿಗೆ ಆಹಾರವಾಗುವಂತೆ ವಾಯುವಿಗೂ, ಕಳಂಕವಿಶಿಷ್ಟವಾಗುವಂತೆ ಚಂದ್ರಕಾಂತಿಗೂ ಶಾಪಕೊಟ್ಟಿರುವುದಾಗಿ ನಿರೂಪಿಸಲ್ಪಟ್ಟಿದೆ


ದು ನಿಜವು ಈಗ ಮಾಡುವುದೇನು?" ಎಂದನು ಹಾಗೆಯೇ ಆ ಸುಗ್ರೀವನ ಮಂತ್ರಿಗಳೆಲ್ಲರೂ, ಮಹಾಥನುರ್ಧಾರಿಗಳಾಗಿ ಬರುತ್ತಿರುವ ಆ ರಾಜಕುಮಾರರನ್ನು ನೋಡಿ, ಸುಗ್ರೀವನ ಮಾತನ್ನೇ ನಿಜವೆಂದು ನಂಬಿ ಆ ಬೆಟ್ಟದತಪ್ಪಲನ್ನು ಬಿಟ್ಟು ಮತ್ತೊಂದು ದುರ್ಗಮವಾದ ಶಿಖರವನ್ನೇರಿ ಅಲ್ಲಿ ನಿಂತರು ರಾಮ ಲಕ್ಷ್ಮಣರನ್ನು ನೋಡಿದೊಡನೆ ದಿಕ್ಕುದಿಕ್ಕಿಗೆ ಓಡಿಹೋದಕಪಿಗಳಲ್ಲರೂ ಕೊನೆಗೆ ಒಂದುಕಡೆಯಲ್ಲಿ ಸೇರಿ, ತಮಗೊಡೆಯನಾದ ಆ ಸುಗ್ರೀವನ ಸುತ್ತಲೂ ನಿಂತು ಆತನನ್ನು ಸೇವಿಸುತಿದ್ದರು ಆದರೆ ಎಲ್ಲಿಯೂ ಸ್ಥಿರವಾಗಿ ನಿಲ್ಲುವುದಕ್ಕಂಜಿ, ಬಟ್ಟಬಯಲಿಂದ ಬೆಟ್ಟಕ್ಕೆ ಹಾರುತ್ತ, ಕೊನೆಗೆ ಎತ್ತರವಾದ ಒಂದು ಶಿಖರದ ತುದಿಗೇರಿ, ಅಲ್ಲಿಯೂ ಭಯಗ್ರಸ್ತನಾಗಿ ನಿಂತಿರುವ ಸುಗ್ರೀವನ ಮುಂದೆಯೇ ಗುಂಪುಗೂಡಿದರು ಹೀಗೆ ಬವಾಢ್ಯರಾದ ಆಕಪಿಶ್ರೇಷ್ಠರೆಲ್ಲರೂ ತಮ್ಮವೇಗದಿಂದ ಬೆಟ್ಟಗಳನ್ನೂ ನಡುಗಿಸುವಂತೆ ಹಾರಿ ಹಾರಿ ಹೋಗುತ್ತ, ಭಯದಿಂದ ನಡುಗುತ್ತಿರುವ ಸುಗ್ರೀವನನ್ನು ಬಿಡದೆ, ತಾವು ಹೋಗುವ ದಾರಿಗಡ್ಡಲಾಗಿದ್ದ ಪುಷ್ಪಿತಗಳಾದ ಮರಗಳನ್ನು ಮುರಿದುಹಾಕುತ್ತ ಶಿಖರಗಳಿಂದ ಶಿಖರಗಳಿಗೆ ಹಾರುತ್ತ, ಅಲ್ಲಲ್ಲಿದ್ದ ಜಿಂಕ, ಬೆಕ್ಕು, ಹುಲಿ ಮೊದಲಾದ ಕಾಡುಮೃಗಗಳನ್ನೊಡಿಸುತ್ತಿದ್ದರು ಹೀಗೆ ಅವರೆಲ್ಲರೂ ಅಲ್ಲಲ್ಲಿ ಸುತ್ತಿ ಋಶ್ಯಮೂಕಪರ್ವತವನ್ನೇರಿ, ತನ್ನೊಡೆಯನಾದ ಸುಗ್ರೀವನಮುಂದೆ ಕೈಮುಗಿದು ನಿಂತಿದ್ದರು ಆಗ ಕಾಲೋಚಿತವಾದ ಮಾತಿನಲ್ಲಿ ನಿಪುಣನಾದ ಹನುಮಂತನು, ವಾಲಿಯ ಭಯದಿಂದ ತತ್ತಳಿಸುತ್ತಿರುವ ಸುಗ್ರೀವನನ್ನು ನೋಡಿ "ಸ್ವಾಮಿ! ಇದೇನು! ಧೀರರಾದ ನಿಮ್ಮಂತವರೂ ಶತ್ರು ಭಯಕ್ಕಾಗಿ ಹೀಗೆ ತತ್ತಳಿಸುವುದೆಂದರೇನು? ಇದು ಋಶ್ಯಮೂಕ ಪರ್ವತವಲ್ಲವೆ? ಇಲ್ಲಿ ನಮಗೆ ವಾಲಿಯಿಂದ ಭಯವೆಂದರೇನು ? ಎಲ್ಲೆ ವಾನರೇಂದ್ರನೆ! ವಾಲಿಯು ವೇಷವನ್ನು ಮರೆಸಿಕೊಂಡು ಬಂದಿರುವನೆಂದು ನೀನೂ ಭ್ರಮಿಸುವೆಯಾ? ನೀನು ಯಾರಿಗಾಗಿ ಹೀಗೆ ಭಯದಿಂದ ತತ್ತಳಿಸುತ್ತಿರುವೆಯೋ ಆತನೋ ಮಹಾಕ್ರೂರಕರ್ಮವುಳ್ಳವನು ಆತನ ಸ್ವರೂಪವೂ ಅತಿಕ್ರೂರವಾಗಿರುವುದು ಅವನ ಜಾಡೆಗಳೊಂದಾದರೂ ಇವರಲ್ಲಿ ಕಾಣುವುದಿಲ್ಲ ಎಲೈ ಸೌಮ್ಯನೆ! ನಿನ್ನ ಪತ್ನಿಯೆನ್ನ ಪಹರಿಸಿದ ಯಾವ ಪಾಪಿಗಾಗಿ

ನೀನು ಹೀಗೆ ಭಯಪಡುವೆಯೋ, ಆ ದುಷ್ಟಾತ್ಮನಾದ ನಿನ್ನ ಸಹೋದರನು ಇಲ್ಲಿಗೆ ಹೇಗೆ ಬರುವನು? ಆದುದರಿಂದ ನಿನಗೆ ಈಗ ಸ್ವಲ್ಪವೂ ಭಯಕ್ಕೆ ಕಾರಣವಿರುವುದೆಂದು ನನಗೆ ತೋರಲಿಲ್ಲ ನೀನೇ ನಿನ್ನ ಬುದ್ಧಿಚಾತುರ್ಯದಿಂದ ಚೆನ್ನಾಗಿ ವಿಚಾರಮಾಡಿನೋಡು ಮನಸ್ಸಿನಲ್ಲಿ ಧೈರ್ಯವಿಲ್ಲದೆ ಹೀಗೆ ಭಯಪಡುವೆಯೆಲ್ಲಾ! ಆಹಾ! ನಿನ್ನ ಕಪಿಸ್ವಭಾವವು ಈಗ ಚೆನ್ನಾಗಿ ಸ್ಪಷ್ಟವಾಯಿತು ಸ್ವಬುದ್ಧಿಯನ್ನೂ ಜ್ಞಾನವನ್ನೂ ಚೆನ್ನಾಗಿ ಉಪಯೋಗಿಸಿ ಇಂಗಿತಗಳಿಂದಲೇ ಇತರರ ಸ್ವಭಾವವನ್ನು ತಿಳಿದು ಸಮಸ್ತ ಕಾರ್ಯಗಳನ್ನೂ ನಡೆಸಬೇಕಲ್ಲವೆ? ಸ್ವಬುದ್ಧಿಯನ್ನು ಪಯೋಗಿಸಲಾರದ ರಾಜನು ಯಾವ ಪ್ರಜೆಯನ್ನೂ ಚೆನ್ನಾಗಿ ಪಾಲಿಸಲಾರನು" ಎಂದನು ಹನುಮಂತನು ಹೇಳಿದ ಈ ಶುಭವಾಕ್ಯವೆಲ್ಲವನ್ನೂ ಕೇಳಿ ಸುಗ್ರೀವನು, ಅದಕ್ಕಿಂತಲೂ ಯುಕ್ತಿಯುಕ್ತವಾದ ಮಾತಿನಿಂದ ಅವನನ್ನು ಕುರಿತು ,,ಎಲೈ ಪಿತೃನೆ! ಇದೇನು? ನೀನು ಅವರ ರೂಪವನ್ನು ಚೆನ್ನಾಗಿ ನೋಡಲಿಲ್ಲವೇನು? ಆಜಾನುಬಾಹುಗಳಾಗಿ, ವಿಸ್ತಾರವಾದ ಕಣ್ಣುಳ್ಳವರಾಗಿರುವ ಅವರಿಬ್ಬರನ್ನೂ ಸಾಮಾನ್ಯರೆಂದೆಣಿಸಬಹುದೆ? ಇದರಮೇಲೆ ಭಯಂಕರವಾದ ಕತ್ತಿಯನ್ನೂ, ಧನುರ್ಬಾಣಗಳನ್ನೂ ಹಿಡಿದಿರುವರು ದೇವಕುಮಾರರಂತೆ ಬೆಳಗುತ್ತಿರುವ ಆವೀರರನ್ನು ನೋಡಿದರ ಯಾರಿಗೆ ತಾನೇ ಭಯವುಂಟಾಗದು? ಅವರ ಸ್ವರೂಪವು ವಾಲಿಯಂತ ಕಾಣದಿದ್ದರೂ, ಆ ವಾಲಿಯು ಇವರಿಬ್ಬರನ್ನೂ ನಮ್ಮಕಡೆಗೆ ಗೂಢಚಾರರನ್ನಾಗಿ ಕಳುಹಿಸಿರಬಹುದಲ್ಲವೆ ನನಗೆ ಈಗ ಇದೇ ವಿಷಯವಾದ ಶಂಕ ಹುಟ್ಟಿರುವುದು ಆದರೆ ಇಂತಹ ಮಹಾಪುರುಷರು ವಾಲಿಗೆ ಹೇಗೆ ಲಭಿಸುವರಂದು ನೀನು ಕೇಳಬಹುದು ರಾಜರಿಗೆ ಬಹಳಮಂದಿ ಮಿತ್ರರುಂಟು ಆದುದರಿಂದ ಅರಸರ ವಿಷಯದಲ್ಲಿ ಮಾತ್ರ ಎಷ್ಟುಮಾತ್ರವೂ ನಂಬಿಕೆಯನ್ನಿಡಬಾರದು ಮನುಷ್ಯನು, ತನ್ನಮೇಲೆ ಹಗೆತೀರಿಸಿಕೊಳ್ಳುವುದಕ್ಕಾಗಿ ಗೂಢವೃತ್ತಿಯಿಂದ ತಿರುಗುತ್ತಿರುವ ಶತ್ರುಗಳ ರಹಸ್ಯವನ್ನು ಹೇಗಾದರೂ ಪ್ರಯತ್ನಪಟ್ಟು ಆಗಾಗಕಂಡುಕೊಳ್ಳುತ್ತಿರಬೇಕು ಹಾಗಿಲ್ಲದಿದ್ದರೆ ಅವರುಹೇಗೋ ನಂಬಿಕೆಯನ್ನು ಹುಟ್ಟಿಸಿ, ತಾವುಮಾತ್ರ ಇತರರನ್ನು ನಂಬದೆ, ತಮ್ಮನ್ನು ನಂಬಿದ ಶತ್ರುಗಳು ಎಚ್ಚರತಪ್ಪಿರುವ ಸಂದರ್ಭವನ್ನು 'ನೋಡುತ್ತ, ರಂ

ಥ್ರಾನ್ವೇಷಿಗಳಾಗಿದ್ದು,ಸಮಯವುಸಿಕ್ಕಿದಾಗ ಕೊಲ್ಲುವರು ನಮ್ಮಣ್ಣನಾದ ವಾಲಿಯಾದರೋ ಅಂತಹ ಕಾರ್ಯಗಳಲ್ಲಿ ಬಹಳ ಚತುರನು ಬಹಳ ದೂರದೃಷ್ಟಿಯುಳ್ಳವನು ಅರಸರು ಶತ್ರುಗಳನ್ನಡಗಿಸುವುದಕ್ಕಾಗಿ ಎಷ್ಟೋ ಉಪಾಯಗಳನ್ನು ಹುಡುಕುತ್ತಿರುವರು ಆದುದರಿಂದ ಮನುಷ್ಯರು ಅಂತಹ ಶತ್ರುಗಳ ರಹಸ್ಯಗಳನ್ನು ತಿಳಿದುಕೊಳ್ಳುವುದಕ್ಕಾಗಿ ತಕ್ಕ ಪ್ರಯತ್ನಗಳನ್ನು ಮಾಡುತ್ತಿರಬೇಕು ಡಂಭವನ್ನು ಬಿಟ್ಟು ದೀನವೇಷದಿಂದಲೇ ಆ ಶತ್ರುಗಳಲ್ಲಿ ಒಳ ಹೊಕ್ಕು ಅವರ ಅಭಿಪ್ರಾಯಗಳನ್ನು ಕಂಡು ಹಿಡಿಯಬೇಕು ಆದುದರಿಂದ ಎಲೈ ವಾನರಶ್ರೇಷ್ಠನೆ! ನೀನು ಈಗ ಒಬ್ಬ ಸಾಮಾನ್ಯಮನುಷ್ಯನ ವೇಷವನ್ನು ಧರಿಸಿ, ನಮ್ಮ ಕಡೆಗೆ ಬರುತ್ತಿರುವ ಆ ವೀರರ ಬಳಿಗೆ ಹೋಗು ಅವರಇಂಗಿತಚೇಷ್ಟಾದಿಗಳನ್ನು ಪರೀಕ್ಷಿಸಿ ನೋಡು! ಅವರ ಇಂಗಿತಗಳಿಂದಲೂ, ಅವರ ಸ್ವರೂಪದಿಂದಲೂ,ಅವರ ಮಾತಿನ ಜಾಡಿನಿಂದಲೂ, ಅವರ ಮನೋಭಿಪ್ರಾಯವನ್ನು ತಿಳಿಯಬೇಕು ಅವರಿಬ್ಬರೂ ಮನಸ್ಸಿನಲ್ಲಿ ಯಾವುದೋ ಕಾಪಟ್ಯವನ್ನಿಟ್ಟು *ಕೃತ್ರಿಮಹೃದಯರಾಗಿದ್ದುಪಕ್ಷದಲ್ಲಿ,ಆಗ ನೀನು ಸ್ತೋತ್ರಾದಿಗಳಿಂದಲೂ,ಅವರ ಮನಸ್ಸಿಗೆ ಅನುಕೂಲವಾಗಿ ತೋರುವ ಚೇಷ್ಟೆಗಳಿಂದಲೂ ಅವರಿಗೆ ಚೆನ್ನಾಗಿ ನಂಬಿಕೆಯನ್ನು ಹುಟ್ಟಿಸಿ, ನಮಗನುಕೂಲರಾಗುವಂತೆ ಮಾಡಿಕೊಂಡು, ಆ ವಿಷಯದಲ್ಲಿ ಅವರಿಂದಲೂ ಚೆನ್ನಾಗಿ ನಂಬಿಕೆಯನ್ನು ತೆಗೆದುಕೊಳ್ಳಬೇಕು ಹೀಗೆ ಅವರಿಬ್ಬರೂ ನಮಗೆ ಅನುಕೂಲರಾಗಿ ಬರುವರೆಂಬ ನಂಬಿಕೆಯನ್ನು ದೃಢವಾಗಿ ಹುಟ್ಟಿಸಿಕೊಂಡಮೇಲೆ, ಅವರಿಬ್ಬರೂ ಈಗ ಧನುರ್ಧಾರಿಗಳಾಗಿ ಈ ಕಾಡಿಗೆ ಪ್ರವೇಶಿಸಲು ಕಾರಣವೇನೆಂಬುದನ್ನು ವಿಚಾರಿಸಿ ತಿಳಿ! ಎಲೈ ಹನುಮಂತನೆ! ಮುಖ್ಯವಾಗಿ ಧನುರ್ಧಾರಿಗಳಾದ ಆವೀರರು, ಯಾವುದೊಂದು ಕೃತ್ರಿಮಸ್ವಭಾವವೂ ಇಲ್ಲದೆ ಋಜುಬುದ್ಧಿಯುಳ್ಳವರಾಗಿಯೇ ಇದ್ದಪಕ್ಷದಲ್ಲಿ, ಆಗ ಅವರಿಬ್ಬರನ್ನೂ ನಮ್ಮ ಕಡೆಯವರ

---

* ಇಲ್ಲಿ "ದುಷ್ಟಮನಸೌ ಯದಿ" ಎಂದು ಮೂಲದಲ್ಲಿದೆ ಪ್ರಹೃಷ್ಟಮನಸೌ ಯದಿ" ಎಂದು ಗೋವಿಂದರಾಜೀಯ ವ್ಯಾಖ್ಯಾನದಲ್ಲಿ ಪಾಠಾಂತರವನ್ನು ಮಾಡಿ "ಅವರು ಶುದ್ಧಹೃದಯರಾಗಿದ್ದಪಕ್ಷದಲ್ಲಿ" ಎಂದು ಅರ್ಥಾಂತರವು ಪ್ರತಿಪಾದಿತವಾಗಿದೆ.



1353. ಸುಗ್ರೀವನ ಮಾತಿನಮೇಲೆ, ಆಂಜನೇಯನು ಸನ್ಯಾಸಿರೂಪವನ್ನು ಧರಿಸಿ, ರಾಮಲಕ್ಷ್ಮಣರ ಕಡೆಗೆ ಬಂದುದು.

ನ್ನಾಗಿ ಮಾಡಿಕೊಂಡು, ಅವರು ಇಲ್ಲಿಗೆ ಬಂದ ಕಾರಣವೇನೆಂಬುದನ್ನೂ ಚೆನ್ನಾಗಿ ಕೇಳಿತಿಳಿ! ಅವರ ಮಾತಿನಿಂದಲೇ, ಅವರು ದುಷ್ಟರೋ ಸಾಧುಗಳೋ ಎಂಬುದನ್ನು ತಿಳಿದುಕೊಳ್ಳಬಹುದು"! ಎಂದನು ವಾಯುಪುತ್ರನಾದ ಹನುಮಂತನು ಸುಗ್ರೀವನು ಹೇಳಿದ ಈ ಮಾತನ್ನು ಕೇಳಿ, ಅದನ್ನು ಸಾಧುವೆಂದುಗ್ರಹಿಸಿ,ಆ ರಾಮಲಕ್ಷ್ಮಣರಕಡೆಗೆ ಹೊರಡುವುದಾಗಿ ನಿಶ್ಚಯಿಸಿಕೊಂಡನು ಹೀಗೆ ಶತ್ರುಭಯಂಕರನಾದ ಆಸುಗ್ರೀವನ ಮಾತನ್ನು ಮಹಾತ್ಮನಾದ ಆಂಜನೇಯನು ಮನಃಪೂರ್ವಕವಾಗಿ ಅನುಮೋದಿಸಿ ,,ಸ್ವಾಮೀ! ನಿಮ್ಮಪ್ಪಣೆಯಂತೆಯೇ ಹೋಗಿಬರುವೆನು" ಎಂದುಹೇಳಿ, ಆಗಲೇ ರಾಮಲಕ್ಷ್ಮಣರಿರುವ ಸ್ಥಳಕ್ಕೆ ಹೊರಟನು ಇಲ್ಲಿಗೆ ಎರಡನೆಯಸರ್ಗವು

---

* ಹನುಮಂತನು ರಾಮಲಕ್ಷ್ಮಣರಬಳಿಗೆ ಬಂದು, ಅವರನ್ನು ಮಾತಾಡಿಸಿ ಪ್ರಶಂಸೆಮಾಡಿದುದು

ಹೀಗೆ ಹನುಮಂತನು ಮಹಾತ್ಮನಾದ ಸುಗ್ರೀವನ ಮನೋಭಿಪ್ರಾಯವನ್ನು ತಿಳಿದು, ಆಕ್ಷಣವೇ ಋಶ್ಯಮೂಕದಿಂದ ಹಾರಿ, ನಿಮಿಷಮಾತ್ರದೊಳಗಾಗಿ ಈ ರಾಮಲಕ್ಷ್ಮಣರಿದ್ದಕಡೆಗೆ ಬಂದಿಳಿದನು ವಾಯುಪುತ್ರನಾದ ಆ ಹನುಮಂತನಿಗೆ, ಮೊದಲು ರಾಮಲಕ್ಷ್ಮಣರನ್ನು ವಂಚಿಸಿ ಅವರ ಸ್ಥಿತಿಗತಿಗಳನ್ನು ತಿಳಿದುಕೂಳ್ಳಬೇಕೆಂಬ ಬುದ್ಧಿಯು ಹುಟ್ಟಿದ್ದುದರಿಂದ,ಅವರಿಗೆ ಕಾಣಿಸಿಕೂಳ್ಳುವಷ್ಟರೊಳಗಾಗಿ, ಚಾತುರ್ಯದಿಂದ ತನ್ನ ನಿಜರೂಪವನ್ನು ಮರೆಸಿಕೂಂಡು, ಸನ್ಯಾಸಿರೂಪವನ್ನು ಹೊಂದಿಬಿಟ್ಟನು ಹೀಗೆ ಭಿಕ್ಷು

---

* ಪ್ರಥಮಸರ್ಗದಲ್ಲಿ ವೈಕುಂಠವಾಸಿಯಾದ ಭಗವಂತನು, ತನ್ನ ಪ್ರಜೆಗಳಲ್ಲಿ ಕೆಲವರು ತನ್ನ ಪರತ್ವದಲ್ಲಿ ವರ್ತಿಸುತ್ತಿರುವಾಗ, ಮತ್ತೆ ಕೆಲವರು ವಿಷಯಾಂತರಪ್ರವಣರಾಗಿರುವುದನ್ನು ನೋಡಿ, ಮನಸ್ಸಿನಲ್ಲಿ ಮರುಕೆಹೊಂದಿ, ದಯಾವೃತ್ತಿಯನ್ನು ತೋರಿಸುವನೆಂದು ಸೂಚಿತವು ದ್ವಿತೀಯಸರ್ಗದಲ್ಲಿ ಚೇತನನು, ಭಗವದಪರಾಧದಿಂದುಂಟಾಗುವ ದಂಡಕ್ಕೆ ಪೆದರಿ ಅಭಿಮುಖನಾಗುವನೆಂದು ಪ್ರತಿಪಾದಿತವು. ಈ ಮೂರನೆಯ ಸರ್ಗದಿಂದ ಆ ಚೇತನನಿಗೆ ಭಗವತ್ಕಾರ್ಪಿಯನ್ನುಂಟುಮಾಡುವುದಕ್ಕಾಗಿ ಆಚಾರ್ಯನು ಮಾಡುವ ಕಾರ್ಯವು ಪ್ರತಿಪಾದಿಸಲ್ಪಡುವುದೆಂದು ಗ್ರಾಹ್ಯವು.

ರೂಪದಿಂದ ಬಂದು ಆ ರಾಮಲಕ್ಷ್ಮಣರಮುಂದೆ ನಿಂತು ಅತಿವಿನಯವನ್ನು ತೋರಿಸುತ್ತ ಅವರಿಗೆ* ದಂಡಪ್ರಣಾಮವನ್ನೂ ಮಾಡಿ, ಅತಿಮೃದುವಾಗಿಯೂ ಕಿವಿಗಿಂಪಾಗಿಯೂ ಇರುವ ಮಾತಿನಿಂದ ಅವರನ್ನು ಮಾತಾಡಿಸತೊಡಗಿದ

* ಇಲ್ಲಿ ಸನ್ಯಾಸಿವೇಷದಿಂದ ಬಂದಿರುವ ಆಂಜನೇಯನು ರಾಮಲಕ್ಷ್ಮಣರಿಗೆ ನಮಸ್ಕರಿಸಿದುದಾಗಿ ಹೇಳಿರುವುದರಿಂದ, ಸನ್ಯಾಸಿಗಳು ಗೃಹಸ್ಥರಿಗ ಪ್ರಣಾಮಮಾಡ ಬಹುದೆಂದೇ ಸೂಚಿತವಾಗುವುದು ಸನ್ಯಾಸಿಗಳು ಗೃಹಸ್ಥಾದಿಗಳಿಗ ಪ್ರಣಾಮಮಾಡ ಬಾರದೆಂಬ ನಿಷೇಧವಚನಗಳಲ್ಲವು ಅಜ್ಞಾರ್ದ ಗೃಹಸ್ಥರವಿಷಯವಾದುದೆಂದು ಗ್ರಹಿ ಸಬೇಕು ಕರ್ಮನೂತ್ಯಾಧಿಕನಾದ ಯತಿಯು ಜ್ಞಾನಾಧಿಕನಾದವನನ್ನು ನೋಡಿ ನಮಸ್ಕರಿಸದಿರುವ ಪಕ್ಷದಲ್ಲಿ ''ಏಕಾಣಾಂ ಬ್ರಾಹ್ಮನತೋ ಶ್ರೇಷ್ಠ್ಯಮ್'' ಎಂಬ ಮನುವಚನಕ್ಕೆ ವಿರೋಧವು ಒದಗುವುದು ಮತ್ತು ಯತಿಯು ಹೀಗ ಪ್ರಣಾಮಮಾಡಕೊಡದೆಂದು ಮನುವಚನವೇನೂ ಕಾಣುವುದಿಲ್ಲ ನಿರ್ಧಾರವಾಗಿ ಹುಟ್ಟಿರುವ ಈ ನಿಷೇಧವಾಕ್ಯಗಳು ಅಜ್ಞಾರ್ದ ಗೃಹಸ್ಥರ ವಿಷಯವಾದುವಲ್ಲದೆ ಬೇರೆಯೆಲ್ಲವಂದು ನಿರ್ಧರಿಸಬೇಕಾಗಿದೆ ಆದರೆ ಕಲವರು ''ಆಂಜನೇಯನು ಸನ್ಯಾಸಿರೂಪದಿಂದ ಒಂದಿದ್ದರೂ, ಆ ರಾಮಲಕ್ಷ್ಮಣರ ಪದ್ಮಪತ್ರರೂಪವನ್ನು ನೋಡಿದಮಾತ್ರಕ್ಕೆ ಮೈಮರೆತು, ತನ್ನ ಭಿಕ್ಷುರೂಪವನ್ನೂ ಮರೆತು, ಹೀಗ ಮಾಡಿರಬಹುದೆಂದು ಹೇಳುವರು ಇದರಿಂದ ಮೊದಲಿಗೇ ವಿರೋಧವು ಬರುವುದು, ಇಂಗಿತ ಚೇಷ್ಟಾದಿಗಳಿಂದಲೂ ಪರಹೃದಯವನ್ನು ಕಂಡು ವಿರುವುದಕ್ಕಾಗಿ ದೂತ್ಯದಲ್ಲಿ ನಿಯಮಿಸಲ್ಪಟ್ಟು ಬಂದಿರುವ ಆಂಜನೇಯನು, ಹೀಗೆ ಮೊದಲೇ ಮೈಮರತು ತನ್ನ ವೇಷಕ್ಕೆ ವಿರುದ್ಧವಾದ ಕಾರ್ಯವನ್ನಾರಂಭಿಸಿದನೆಂದರ, ಅವನ ಸಾಮರ್ಥ್ಯಕ್ಕೆ ಲೋಪವಲ್ಲವೆ? ಮತ್ತ ಕೆಲವರು 'ರೂಪಮೇವಾತ್ಮನೋ ವೈಕೃತಮ್ಮಹಿಸೂತಾಂ ವ್ಯಾಚಷ್ಟೇ'' ಎಂಬ ನ್ಯಾಯದಿಂದ, ಅವರನ್ನು ನೋಡಿದಮಾತ್ರದಿಂದಲೇ ಆಂಜನೇಯನು ಅವರನ್ನು ಪಾಲಿವದೈವಮನುರ್ಧರಂದು ತಿಳಿದು, ತಾನು ವೇಷಾಂತರದಿಂದಿದ್ದರೂ ಆಗಲೇ ತಾನು ಚಾರನೆಂಬುದನ್ನು ತಿಳಿಸುವುಗಕ್ಕಾಗಿ ಆರಂಭಿಸಿದ ಮಾತನ್ನು ಮೊದಲೇ ತಿಳಿಸಬಹುದಾಗಿತ್ತು ಆದರಿಂದ ಈ ಸಮಾಧಾನವೂ ಸರಿಯಲ್ಲ ಕೆಲವರು ಭಿಕ್ಷುವೆಂದರೆ ಬ್ರಹ್ಮಚಾರಿಯೆಂದು ಅರ್ಥಾಂತರವನ್ನು ಮಾಡುವರು ಮೊದಲೇ ಬ್ರಹ್ಮಚಾರಿಯಾದ ಆಂಜನೇಯನು ಈಗ ಹೊಸದಾಗಿ ಭಿಕ್ಷುರೂಪವನ್ನು ಧರಿಸಬೇಕಾದುದಿಲ್ಲ ಆದರಿಂದ ಸನ್ಯಾಸಿಗಳಾದರೂ ಜ್ಞಾನಿಗಳಾದ ಗೃಹಸ್ಥರಿಗೆ ಪ್ರಣಾಮಮಾಡಬಹುದೆಂದೇ ಸಿದ್ಧವು

ನು ಮೊದಲು ಆ ವೀರರಿಬ್ಬರನ್ನೂ ಯಥಾವತ್ತಾಗಿ ಪ್ರಶಂಸೆಮಾಡಿದನು. ವಿಧ್ಯುಕ್ತವಾಗಿ ಅವರಿಬ್ಬರನ್ನೂ ಮನ್ನಿಸಿದನು. ಸತ್ಯಪರಾಕ್ರಮಿಗಳಾದ ಅವರಿಬ್ಬರಲ್ಲಿಯೂ ಭಕ್ತಿಯನ್ನು ತೋರಿಸುತ್ತ ಮೃದುವಾಕ್ಯಗಳಿಂದ ಅವರನ್ನು ಕುರಿತು, ''ಎಲೈ ಮಹಾತ್ಮರೆ! ನಿಮ್ಮನ್ನು ನೋಡಿದರೆ ರಾಜರ್ಷಿಗಳಂತೆ ಕಾಣುವಿರಿ! ಆದರೆ ದೇಹಸೌಂದರ್ಯದಿಂದ ದೇವಕುಮಾರರನ್ನು ಹೋಲುತ್ತಿರುವಿರಿ! ಹೀಗಿದ್ದರೂ ಕಠಿನವ್ರತವನ್ನು ಹಿಡಿದು ಹೀಗೆ ತಪಸ್ವಿಗಳಾಗಿ ಇಲ್ಲಿಗೇಕೆ ಬಂದಿರುವಿರಿ! ಸುವರ್ಣಾನಾಯೆಯೆಳ್ಳ ನಿಮಗೆ ಈ ವನಸಂಚಾರವೇಕೆ? ಈ ಕಾಡಿನಲ್ಲಿರುವ ಪಂಕೆಗಳನ್ನೂ ಇತರಪ್ರಾಣಿಗಳನ್ನೂ ನಿಮ್ಮರೂಪದಿಂದಲೇ ಅಂಜಿಸುತ್ತಿರುವಿರಿ! ನಿಮಗೆ ಈ ಪಂಪಾತೀರದಲ್ಲಿರುವ ವೃಕ್ಷಗಳನ್ನು ನೋಡುವ ಆಸೆಯೇಕ ಹುಟ್ಟಿತು? ನೀವು ತಪಸ್ವಿಗಳಂತಿದ್ದರೂ ನಿಮ್ಮ ದಿವ್ಯ ಕಾಂತಿಯಿಂದ ಈಪಂಪಾಸರಸ್ಸಿಗೇ ಒಂದುವಿಧವಾದ ಅಪೂರ್ವಶೋಭೆಯುಂಟಾಗಿರುವುದಲ್ಲಾ! ಆಹಾ! ನಿಮ್ಮಧೈರ್ಯವು ಅನನ್ಯಾದೃಶವಾದುದು! ಸುವರ್ಣದಂತ ಥಳಥಳಿಸುತ್ತಿರುವ ಈ ನಿಮ್ಮದೇಹದಮೇಲ ತಾಪಸಯೋಗ್ಯವಾದ ಈ ನಾರುಮಡಿಗಳೇನು? ನೀವುಯಾರು? ನೀವು ಯಾರ್ಗಾರ್ಯಾಸದಿಂದ ನಿಟ್ಟುಸಿರುಬಿಡುವಂತಿಲ್ಲ! ಮಾಂಸಪುಷ್ಟಿಗಳಾದ ಈ ನಿಮ್ಮ ತೋಳುಗಳನ್ನುನೋಡಿ ಇಲ್ಲಿನ ಪ್ರಾಣಿಗಳೆಲ್ಲವೂ ಭಯದಿಂದ ತತ್ತಳಿಸುತ್ತಿರುವುವು ಗಂಭೀರವಾದ ನೋಟದಿಂದಲೂ, ಅಸಾಧಾರಣವಾದ ಬಲಪರಾಕ್ರಮಗಳಿಂದಲೂ ನೀವು ಸಿಂಹಗಳನ್ನೇ ಹೋಲುತ್ತಿರುವಿರಿ! ಶತ್ರುಸಿಗ್ರಾಹಕರಾದ ನೀವಿಬ್ಬರೂ ಇಂದ್ರಾಯುಧಗಳಿಗೆ ಸಮಾನವಾದ ಬಿಲ್ಲುಗಳನ್ನು ಧರಿಸಿರುವಿರಿ! ನಿಮ್ಮ ದೇಹಕಾಂತಿಯೂ, ನಿಮ್ಮ ರೂಪಾತಿಶಯವೂ ಮಹಾವೃಷಭವನ್ನು ಹೋಲುತ್ತಿರುವ ನಿಮ್ಮಪರಾಕ್ರಮವೂ ಲೋಕಾತಿಶಾಯಿಗಳಾಗಿರುವುವು ಆನೆಯ ಸುಂಡಿಲಿನಂತಿರುವ ನಿಮ್ಮ ಆಜಾನುಬಾಹುಗಳೂ,ನಿಮ್ಮ ದೇಹಕಾಂತಿಯೂ, ನೀವು ಪುರುಷಶ್ರೇಷ್ಠರಂಬುದನ್ನು ಚೆನ್ನಾಗಿ ವ್ಯಕ್ತಗೊಳಿಸುತ್ತಿರುವುವು ನಿಮ್ಮ ದಿವ್ಯಕಾಂತಿಯಿಂದ ನಮ್ಮ ಪರ್ವತಕ್ಕೇ ಒಂದು ಅಪೂರ್ವ ಶೋಭೆಯುಂಟಾಗಿರುವುದು ರಾಜ್ಯಾರ್ಹರಾಗಿ ದೇವಸಮಾನರಾಗಿರುವನೀವಿಬ್ಬರೂ ಈ ವನಪ್ರದೇಶದಲ್ಲಿ ಸುತ್ತುತ್ತಿರುವುದಕ್ಕೆ ಕಾರಣವೇನು ? ಕಮಲದಳನಂತೆ ಕಣ್ಣುಳ್ಳವರಾಗಿ ಮಹಾವೀರರಂತೆ ತೋರುತ್ತಿರುವ ನಿಮಗೆ ತಲೆ

ಯಲ್ಲಿ ಈ ಜಟಾಭಾರಗಳೇನು? ನೀವಿಬ್ಬರೂ ರೂಪಲಾವಣ್ಯಾದಿಗಳಿಂದ ಒಬ್ಬರನ್ನೊಬ್ಬರು ಹೋಲುತ್ತ, ದೇವಲೋಕವನ್ನು ಬಿಟ್ಟು ಬಂದ ದೇವಕುಮಾರರಂತೆ ತೋರುತ್ತಿರುವಿರಿ! ಚಂದ್ರಸೂರ್ಯರಿಬ್ಬರೂ ಸ್ವೇಚ್ಛೆಯಿಂದ ಒಂದಾಗಿ ಭೂಮಿಗಿಳಿದುಬಂದಂತೆ ಕಾಣುತ್ತಿರುವಿರಿ! ನಿಮ್ಮ ವಿಶಾಲವಾದ ಎದೆಯೇ ನೀವು ಮಹಾವೀರರೆಂಬುದನ್ನು ತೋರಿಸುತ್ತಿರುವುದು ಸಿಂಹದಂತೆ ಭುಜದ ಕಟ್ಟುಳ್ಳವರಾಗಿ, ಮುಖಲಕ್ಷಣಗಳಿಂದಲೇ ಮಹೋತ್ಸಾಹವನ್ನು ತುಳುಕಿಸುತ್ತಿರುವ ನಿಮ್ಮನ್ನು ನೋಡಿದರೆ, ಮದದಿಂದುಬ್ಬಿದ ಮಹಾವೃಷಭಗಳಂತೆ ತೋರುತ್ತಿರುವುದು * ಅಗುಳಿಗಳಂತೆ ದುಂಡಾಗಿಯೂ, ಉದ್ದವಾಗಿಯೂ ಇರುವ ಈ ನಿಮ್ಮ ತೋಳುಗಳು, ಯಾವಾಗಲೂ ಭೂಷಣಗಳಿಂದಲಂಕ

---

* ಇಲ್ಲಿ "ಆಯತಾಶ್ಚ ಸುವೃತ್ತಾಶ್ಚ ಬಾಹವಃ ಪರಿಘೋಪಮಾಃ। ಸರ್ವಭೂಷಣ ಭೂಷಾರ್ಹಾಃ ಕಿಮರ್ಥಂ ನ ವಿಭೂಷಿತಾಃ" ಎಂದು ಮೂಲವು ಇಲ್ಲಿ "ಸರ್ವಭೂಷಣಭೂಷಾರ್ಹಾಃ" ಎಂಬುದಕ್ಕೆ ಬೇರೆವಿಧವಾದ ಕೆಲವು ಅರ್ಥವಿಶೇಷಗಳುಂಟು (ಸರ್ವಭೂಷಣಭೂಷಾರ್ಹಾಃ) ಸಮಸ್ತಭೂಷಣಗಳಿಗೆಲ್ಲ ಭೂಷಿಸತಕ್ಕ ಎಂದರೆ "ಆಭರಣಸ್ಯಾಭರಣಂ" ಎಂಬಂತೆ, ಆಭರಣಗಳನ್ನೂ ತನ್ನ ಸೌಂದರ್ಯದಿಂದಲಂಕರಿಸತಕ್ಕ ಈ ಬಾಹುಗಳು (ಕಿಮರ್ಥಂ ನ ವಿಭೂಷಿತಾಃ) ಏಕೆ ಅಲಂಕರಿಸಲ್ಪಡಲಿಲ್ಲ? ಇವುಗಳನ್ನು ಭೂಷಣಗಳಿಂದಲಂಕರಿಸಿ, ಆ ಭೂಷಣಗಳಿಗೆ ನೀವೇಕ ಶೋಭಾತಿಶಯವನ್ನುಂಟುಮಾಡಲಿಲ್ಲವೆಂದು ಭಾವವು. ಅಥವಾ ದೃಷ್ಟಿದೋಷಪರಿಹಾರಾರ್ಥವಾಗಿ ಈ ಬಾಹುಗಳ ಸೌಂದರ್ಯವನ್ನು ಸ್ವಲ್ಪವಾದರೂ ಮರೆಸಿಡಬೇಕಾದುದೇ ನ್ಯಾಯವು ಹಾಗೆ ಮಾಡದಿರುವುದೇಕೆ? ಅಥವಾ ಅಲ್ಲಲ್ಲಿ ಆಭರಣಗಳಿಂದ ಮರೆಸಿಟ್ಟಿರುವಾಗಲೂ ಈ ಬಾಹುಗಳ ಸೌಂದರ್ಯವು ನಮ್ಮೆಲ್ಲರನ್ನೂ ವಶೀಕರಿಸಿ ಮರುಳುಮಾಡಬಲ್ಲುವು ಹಾಗೆ ಸ್ವಲ್ಪವನ್ನೂ ಮರೆಸಿಡದೆ ಬಾಹುಸೌಂದರ್ಯವಲ್ಲವನ್ನೂ ಸಾಕಲ್ಯವಾಗಿ ತೋರಿಸಿ ಅದಕ್ಕೂಮೇಲೆ ನೀವು ಸಾಧಿಸಬೇಕಾದುದೇನೆಂದು ಭಾವವು ಅಥವಾ ಹೀಗೆ ಭೂಷಣಗಳನ್ನು ತೆಗೆದು ಹಾಕಿರುವುದು ಯಾವ ಶತ್ರುಗಳನ್ನು ನಿರ್ಮೂಲ ಮಾಡುವುದಕ್ಕೆ?" ಎಂದೂ ಭಾವವು

ಇದರಿಂದ ಅಪ್ರತಿಹತಸಂಕಲ್ಪನಾಗಿದ್ದೂ ನಿತ್ಯಸೂರಿಗಳನ್ನು ಬಿಟ್ಟು ಚತುರ್ವ್ಯೂಹದಿಂದ ಅವತರಿಸುವುದಕ್ಕೆ ಕಾರಣವೇನೆಂದು ಹೇಳಿದುದಾಗಿ ತತ್ವಾರ್ಥವನ್ನು ಗ್ರಹಿಸಬೇಕು ಇಲ್ಲಿ ತೋಳುಗಳಿಗೆ ಬಹುವಚನವನ್ನು ಹೇಳುವುದರಿಂದ ರಾಮನು ಹನುಮಂತನಿಗೆ ನಾಲ್ಕು ತೋಳುಗಳಿಂದಲೇ ಪ್ರತ್ಯಕ್ಷನಾದನೆಂದೂ ಕೆಲವರ ಭಾವವು.

ರಿಸಲ್ಪಡುವುದಕ್ಕೆ ಯೋಗ್ಯವಾಗಿರುವಾಗಲೂ, ನೀವು ಅವುಗಳನ್ನು ಉಚಿತರೀತಿಯಿಂದ ಅಲಂಕರಿಸದಿರುವುದೇಕೆ? ಎಲೈ ವೀರರೆ! ಮುಖ್ಯವಾಗಿ ನೀವಿಬ್ಬರೂ ಸಪ್ತಸಮುದ್ರಗಳಿಂದ ಪರಿವೇಷ್ಟಿತವಾಗಿ, ಅನೇಕ ಮಹಾರಣ್ಯಗಳಿಂದ ಕೂಡಿ, ಮೇರುವಿಂಧ್ಯಾದಿಪರ್ವತಗಳಿಂದಲಂಕರಿಸಲ್ಪಟ್ಟ ಈ ಸಮಸ್ತಭೂಮಂಡಲವನ್ನೂ ಏಕಾಧಿಪತ್ಯದಿಂದಾಳುವುದಕ್ಕೆ ತಕ್ಕವರೆಂದೇ ನನ್ನ ಭಾವವು. ಅಹಾ! ಗಂಧಮಾಲ್ಯಾದಿಗಳಿಂದಲಂಕರಿಸಲ್ಪಟ್ಟು, ಚಿನ್ನದ ಕಟ್ಟುಳ್ಳ, ಮತ್ತು ಮನೋಹರಗಳಾದ ಈ ನಿಮ್ಮ ಮಹಾಧನುಸ್ಸುಗಳೆರಡೂ ಇಂದ್ರನ ವಜ್ರಾಯುಧಗಳಂತೆ ಹೊಳೆಯುತ್ತಿರುವುವು ಮಹಾಪ್ರಮಾಣವುಳ್ಳುದಾಗಿಯೂ, ಅಗಲವಾಗಿಯೂ, ಪುಟಹಾಕಿದ ಚಿನ್ನದ ಹಿಡಿಗಳುಳ್ಳುದಾಗಿಯೂ ಇರುವ ಈ ನಿಮ್ಮ ಖಡ್ಗಗಳೆರಡೂ, ಪರೆಯುಚ್ಚಿದ ಮಹಾಸರ್ಪಗಳಂತೆ ತೋರುತ್ತಿರುವುವು ಎಲೈ ಮಹಾತ್ಮರೆ! ಅವೆಲ್ಲವೂ ಹಾಗಿರಲಿ! ನಾನು ನಿಮ್ಮನ್ನು ಇಷ್ಟು ವಿನಯದಿಂದ ಮಾತಾಡಿಸುತಿದ್ದರೂ ನೀವೇಕೆ ಪ್ರತ್ಯುತ್ತರವನ್ನು ಕೊಡುವುದಿಲ್ಲ? ನನ್ನ ನಿಜಸ್ಥಿತಿಯನ್ನಾದರೂ ನಿಮಗೆ ತಿಳಿಸಿಬಿಡುವೆನು ಕೇಳಿರಿ! ಧರ್ಮಾತ್ಮನಾದ ಸುಗ್ರೀವನೆಂಬ ವಾನರರಾಜನೊಬ್ಬನುಂಟು! ಅವನು ತನ್ನಣ್ಣನಿಂದ ತಿರಸ್ಕೃತನಾಗಿ ಬಂದು, ದುಃಖಿತನಾಗಿ ಈ ಭೂಮಿಯೆಲ್ಲವನ್ನೂ ಸುತ್ತುತ್ತಿರುವನು ಕಪಿಶ್ರೇಷ್ಠರಿಗೆಲ್ಲಾ ಒಡೆಯನೆನಿಸಿಕೊಂಡ ಮಹಾತ್ಮನಾದ ಆ ಸುಗ್ರೀವನೇ ನನ್ನನ್ನು ನಿಮ್ಮಲ್ಲಿಗೆ ಕಳುಹಿಸಿರುವನು ನಾನು ಅವನ ಕಡೆಯ ವಾನರನು ನನಗೆ ಹನುಮಂತನೆಂದು ಹೆಸರು ಧರ್ಮಾತ್ಮನಾದ ಆ ಸುಗ್ರೀವನುನಿಮ್ಮೊಡನೆ ಸ್ನೇಹವನ್ನು ಬೆಳೆಸಬೇಕೆಂದಿರುವನು ನಾನಾದರೋ ಸುಗ್ರೀವನಿಗೆ ಮಂತ್ರಿಯಾದ ಒಬ್ಬ ವಾನರನು ನಾನು ವಾಯುಪುತ್ರನು ಸುಗ್ರೀವನಿಗೆ ಪ್ರಿಯವನ್ನುಂಟುಮಾಡಬೇಕೆಂಬುದಕ್ಕಾಗಿ ಈ ಸನ್ಯಾಸಿವೇಷವನ್ನು ಧರಿಸಿ ಋಶ್ಯಮೂಕಪರ್ವತದಿಂದ ಇಲ್ಲಿಗೆ ಬಂದಿರುವೆನು. ನಾನು ಇಷ್ಟಬಂದಕಡೆಗೆ ಹೋಗಬಲ್ಲೆನು ಇಷ್ಟಬಂದರೂಪವನ್ನು ನಿಮಿಷಮಾತ್ರದಲ್ಲಿ ಧರಿಸಬಲ್ಲೆನು," ಎಂದನು ಮಾತಿನಲ್ಲಿ ನಿಪುಣನಾದ ಆಂಜನೇಯನು ತನ್ನ ಮಾತಿನ ಭಾವನನ್ನು ಚೆನ್ನಾಗಿ ತಿಳಿಯಬಲ್ಲ ಆ ರಾಮಲಕ್ಷ್ಮಣರೊಡನೆ ಹೀಗೆಂದು ಹೇಳಿ, ಬೇರೊಂದುಮಾತನ್ನೂ ಆಡದೆ ಸುಮ್ಮನಿದ್ದ

ನು ಶ್ರೀಮಂತನಾದ ರಾಮನಿಗೆ ಈಮಾತನ್ನು ಕೇಳಿ ಪರಮಸಂತೋಷವಾ
ಯಿತು ಅವನ ಮುಖದಲ್ಲಿ ಉಲ್ಲಾಸವು ತುಳುಕುತಿತ್ತು ಆಗ ರಾಮನು ಪ
ಕ್ಕದಲ್ಲಿದ್ದ ಲಕ್ಷ್ಮಣನನ್ನು ನೋಡಿ "ಎಲೆ ವತ್ಸನೆ! ಈತನು ಮಹಾತ್ಮನಾದ
ಆ ಸುಗ್ರೀವನೆಂಬ ಕಪಿರಾಜನಿಗೆ ಮಂತ್ರಿಯಂತೆ? ಆ ಸುಗ್ರೀವನನ್ನೇ
ನೋಡಬೇಕೆಂದಿದ್ದ ನಮಗೆ ದೈವಿಕವಾಗಿ ಈತನ ಸಮಾಗಮವು ಲಭಿಸಿತು
ಲಕ್ಷ್ಮಣಾ! ಸುಗ್ರೀವನ ಮಂತ್ರಿಯಾದ ಈತನು ಮಾತಿನಲ್ಲಿ ಬಹಳನಿಪುಣ
ನಂತೆ ತೋರುವುದು ಇವನಿಗೆ ಸುಗ್ರೀವನಲ್ಲಿ ಅಸಾಧಾರಣವಾದ ಸ್ನೇಹವು
ರುವಂತೆಯೂ ತೋರುವುದು ಈತನು ಭಾವಜ್ಞನಾದುದರಿಂದ ನೀನು ಇವ
ನೊಡನೆ ಸ್ನೇಹಯುಕ್ತವಾದ ಮೃದುವಾಕ್ಯಗಳನ್ನಾಡಿ, ಅವನನ್ನು ಸಂತೋಷ
ಪಡಿಸು *ಋಗ್ವೇದದಲ್ಲಿ ತಿಕ್ಷಿತನಲ್ಲದೆಯೂ, ಯಜುರ್ವೇದಗಳನ್ನೋಹದೆಯೂ

* ಇಲ್ಲಿ "ನಾನೃಗ್ವೇದವಿನೀತಸ್ಯ ನಾಯಜುರ್ವೇದಧಾರಿಣಃ । ನಾಸಾಮವೇದವಿ
ದುಷಶ್ಚಕ್ಯಮೇವಂ ಪ್ರಭಾಷಿತುಂ" ಎಂದು ಮೂಲವ ಚೇತನೋಜ್ಜೀವನವು ಆಚಾ
ರ್ಯಮುಖದಿಂದಲ್ಲದೆ ಬೇರೊಂದರಮೂಲಕವಾಗಿ ಲಭಿಸದಾದುದರಿಂದ ಆಚಾರ್ಯ
ಲಾಭವನ್ನು ಇದರಿಂದ ತಿಳಿಸುವುದಾಗಿ ಗ್ರಾಹ್ಯವು ಈ ಶ್ಲೋಕದಿಂದ ಆಚಾರ್ಯಲ
ಕ್ಷಣಗಳೆಲ್ಲವೂ ಸೂಚಿಸಲ್ಪಟ್ಟಿರುವುವು "ಆಚಾರ್ಯೋ ವೇದಸಂವನ್ಯೋ ವಿಷ್ಣುಭ
ಕ್ತೋ ವಿಮತ್ಸರ । ಮಂತ್ರಜ್ಞೋ ಮಂತ್ರಭಕ್ತಶ್ಚ ಸದಾ ಮಂತ್ರಾರ್ಥದರ್ಶಿಚಿ । ಗುರುಭಕ್ತಿಸಮಾಯುಕ್ತ ಪುರಾಣಜ್ಞೋ ವಿಶೇಷತ । ಏವಂ ಲಕ್ಷಣಸಂಪನ್ನೋ
ಗುರುರಿತ್ಯಭಿಧೀಯತೇ ॥ ಎಂಬುದೇ ಆಚಾರ್ಯಲಕ್ಷಣವು

ಇಲ್ಲಿ ಕ್ರಮವಾಗಿ ಋಗ್ಯಜುಸ್ಸಾಮವೇದಗಳಿಗೆ ಬೇಬೇರೆಯಾಗಿ ಪ್ರತಿಪಾದಿಸಿರು
ವ ವಿನಯಧಾರಣಜ್ಞಾನಗಳು ಮೂರನ್ನೂ ಒಂದೊಂದಕ್ಕೂ ಅನ್ವಯಿಸಿಕೊಳ್ಳಬೇ
ಕು ಅಥವಾ ಋಗ್ವೇದದಲ್ಲಿ ಪ್ರತಿವರ್ಣಗಳೂ ಸ್ವರಪೂರ್ಣಗಳಾಗಿರುವುದರಿಂದ ಬಹ
ಳ ಸಾವಧಾನವಾಗಿ ಉಚ್ಚರಿಸಬೇಕೆಂಬುದಕ್ಕಾಗಿ ಇಲ್ಲಿ ವಿನಯೋಕ್ತಿಯು ಹಾಗೆಯೇ
ಯಜುರ್ವೇದದಲ್ಲಿ ಒಂದೊಂದನುವಾಕದಲ್ಲಿಯೂ ಬೇರೆ ಅನುವಾಕಗಳೊಡನೆ ವಾಕ್ಯ
ಸಾಂಕರ್ಯವು (ತೊಡಕು) ಹೆಚ್ಚಾಗಿರುವುದರಿಂದ ಅದಕ್ಕೆ ವಿಶೇಷವಾದ ಧಾರಣಶ
ಕ್ತಿಯು ಆವಶ್ಯವು ಸಾಮವೇದದಲ್ಲಿ ಊಹರಹಸ್ಯಾದಿಗಳಿಂದ ಗರ್ಭಿತಗಳಾದ ಗಾನ
ವಿಶೇಷಗಳು ಸುಲಭವಾಗಿ ತಿಳಿಯಲಾರವಾದುದರಿಂದ, ಅದಕ್ಕೆ ಅಸಾಧಾರಣವಾದ
ಜ್ಞಾನಶಕ್ತಿಯಿರಬೇಕೆಂಬುದಕ್ಕಾಗಿ, ಇಲ್ಲಿ ವೇದನಶಬ್ದವು ಹೇಳಲ್ಪಟ್ಟಿರುವುದಾಗಿ
ಯೂ ಗ್ರಹಿಸಬಹುದು ಅಥರ್ವಣಕ್ಕೆ ಅಧ್ಯಯನಾದಿನಿಯಮಗಳಿಲ್ಲವೆಂಬುದಕ್ಕಾಗಿ

ಸಾಮವೇದವನ್ನು ತಿಳಿಯದೆಯೂ ಇರುವವನಿಗೆ ಹೀಗೆ ಮಾತಾಡುವುದು ಎಂದಿಗೂ ಸಾಧ್ಯವಲ್ಲ ಮತ್ತು ಈತನು ವ್ಯಾಕರಣಶಾಸ್ತ್ರವೆಲ್ಲವನ್ನೂ ಅನೇಕಾವರ್ತಿ ಜೆನ್ನಾಗಿ ಅಭ್ಯಸಿಸಿದವನೆಂದೂ ತೋರುವುದು ಇವನು ವೇದ ವೇದಾಂಗಗಳೆಲ್ಲವನ್ನೂ ಸಂಪೂರ್ಣವಾಗಿ ತಿಳಿದವನೆಂಬುದರಲ್ಲಿ ಸಂದೇಹವೇ ಇಲ್ಲ ಏಕೆಂದರೆ, ಇವನು ಇದುವರೆಗೆ ನಮ್ಮೊಡನೆ ಇಷ್ಟುಮಾತುಗಳನ್ನಾಡಿದರೂ ಅವುಗಳಲ್ಲಿ ಸ್ವಲ್ಪವಾದರೂ ಅಪಶಬ್ದವು ಕಾಣಲಿಲ್ಲ * ಇವನು

ಅದನ್ನು ಹೇಳಿಲ್ಲವು ' ಹೀಗೆ ಈ ಮೂರು ವೇದಗಳನ್ನೂ ತಕ್ಕ ರೀತಿಯಲ್ಲಿ ಅಭ್ಯಾಸ ಮಾಡದವನಿಗೆ ಹೀಗೆ ಮಾತಾಡುವುದು ಸಾಧ್ಯವಲ್ಲವೆಂದು ಮುಖ್ಯಾರ್ಥವು.ಮತ್ತು ಹಿಂದೆ ಆಂಜನೇಯನು ಈ ರಾಮಲಕ್ಷ್ಮಣರನ್ನು ಕುರಿತು, ''ಉಭೌ ಯೋಗ್ಯಾವಹಂ ಮನ್ಯೇ ರಕ್ಷಿತುಂ ಭುವನತ್ರಯಂ" ನೀವಿಬ್ಬರೂ ಈ ತ್ರೈಲೋಕ್ಯವನ್ನೂ ರಕ್ಷಿಸುವುದಕ್ಕೆ ಸಮರ್ಥರು '' ಎಂದು ಹೇಳಿರುವುದರಿಂದ, ಈ ರಾಮನೇ ಸೃಷ್ಟಿಸ್ಥಿತಿಸಂಹಾರ ಕರ್ತನೆಂಬ ತತ್ವಾರ್ಥವನ್ನು ಸೂಚಿಸಿದಂತಾಯಿತು ''ಬ್ರಹ್ಮವಾ ಇದಮೇಕ ಏವಾಗ್ರ ಆಸೀತ್'' ಎಂಬುದಾಗಿ ಈ ವಿಷಯವು ಋಗ್ವೇದದಲ್ಲಿ ಹೇಳಲ್ಪಡುವುದರಿಂದ, ಅದನ್ನು ತಿಳಿಯದವನು ಈ ತತ್ವವನ್ನೂ ತಿಳಿಯಲಾರನೆಂದು ಭಾವವು ಹಾಗೆಯೇ ''ಮಾನುಷೌ ದೇವರೂಪಿಣೌ'' ಇತ್ಯಾದಿವಾಕ್ಯದಿಂದ ''ಅಜಾಯಮಾನೋ ಬಹುಧಾ ವಿಜಾಯತೇ'' ಎಂಬುದಾಗಿ ಯಜುರ್ವೇದೋಕ್ತವಾದ ಅವತಾರಗಹನ್ಯವನ್ನೂ ಸೂಚಿಸಿರುವನು ''ಸುವರ್ಣಾಭೌ ಪದ್ಮಪತ್ರೇಕ್ಷಣೌ'' ಎಂಬೀ ವಿಶೇಷಣಗಳಿಂದ ''ಅಥ ಯ ಏಷೋಽನ್ತರಾದಿತ್ಯೇ ಹಿರಣ್ಮಯೇ ಪುರುಷೋ ದೃಶ್ಯತೇ" ಎಂಬುದು ಮೊದಲು ''ತಸ್ಯ ಯಥಾಕಪ್ಯಾಸಂ ಪುಂಡರೀಕಮೇವ ಮುಕ್ಷಿಣೀ" ಎಂಬೀವರಗಿರುವ ಛಾಂದೋಗ್ಯೋಪನಿಷದ್ವಾಕ್ಯಾರ್ಥವನ್ನೂ ಹೇಳಿರುವುದರಿಂದ, ಸಾಮವೇದವನ್ನರಿಯದವನಿಗೆ ಈ ತತ್ವಾರ್ಥವು ತಿಳಿಯಲಾರದು ಆದುದರಿಂದ ಈತನು ಆ ಮೂರುವೇದಗಳನ್ನೂ ಸಂಪೂರ್ಣವಾಗಿ ತಿಳಿದಿರುವನೆಂಬ ವಿಷಯವನ್ನು ಇವನ ಮಾತುಗಳೇ ವ್ಯಕ್ತಪಡಿಸುತ್ತಿರುವುವೆಂದು ಭಾವವು

* ವೇದಗಳು ಮಾತ್ರವೇ ಅಲ್ಲದೆ,ತದಂಗಭೂತಗಳಾದ ವ್ಯಾಕರಣಶಿಕ್ಷಾದಿಗಳೂ ಇವನಿಂದ ಅಧ್ಯಯನಮಾಡಲ್ಪಟ್ಟಿವೆಯೆಂಬುದನ್ನು ತಿಳಿಸುವುದಕ್ಕಾಗಿ, ಆತನ ವ್ಯಾಕರಣಜ್ಞಾನವನ್ನು ಹಿಂದಿನ ಶ್ಲೋಕದಿಂದ ಹೇಳಿ, ಇದುವೊದಲು ಆತನ ಶಿಕ್ಷಾಜ್ಞಾನವನ್ನು ತಿಳಿಸುವರು ಹೇಗೆಂದರೆ —ಕೆಲವರು ಮಾತಾಡುವಾಗ ಅನೇಕವಿಧಗಳಾದ ಮುಖವಿಕಾರಗಳೂ, ಅಂಗಚೇಷ್ಟೆಗಳೂ ಸ್ವಾಭಾವಿಕವಾಗಿ ಉಂಟಾಗುವುವು ಅವೊಂದೂ ಇಲ್ಲ

ಮಾತಾಡುತ್ತಿರುವಾಗ ಇವನ ಮುಖದಲ್ಲಿಯಾಗಲಿ, ಕಣ್ಣುಗಳಲ್ಲಿಯಾಗಲಿ, ಹಣೆಯಲ್ಲಿಯಾಗಲಿ, ಕಣ್ಣುಬೊಂಬೆಗಳಲ್ಲಿಯಾಗಲಿ, ಬೇರೆ ಅವಯವಗಳಲ್ಲಿಯೇ ಆಗಲಿ,ಯಾವುದೊಂದು ವಿಕಾರಚೇಷ್ಟೆಗಳೂ ಕಾಣಿಸಲಿಲ್ಲ ಮತ್ತು *ಈತನ ಮಾತುಗಳು ವಿಶೇಷಶಬ್ದಾಡಂಬರವಿಲ್ಲದೆ, ಪದವರ್ಣಗಳಲ್ಲಿ ಸ್ವಲ್ಪವಾದರೂ ಸಂದೇಹವು ತೋರದೆ, ಆಡಿದ ನುಡಿಗಳು ಅತಿಮಂದವಾಗಿಯಾಗಲಿ ವೇಗವಾಗಿಯಾಗಲಿ ಇಲ್ಲದೆ, ಗಂಭೀರಗಳಾಗಿ ಇದ್ದುವು ಈತನಸ್ವರವು ಎದೆಯಿಂದ ಹೊರಟುಬರುವಾಗಲೂ, ಕಂಠದಲ್ಲಿರುವಾಗಲೂ, ಅತ್ಯುಚ್ಚವೂ, ಅತಿನೀಚವೂ ಅಲ್ಲದೆ, ಮಧ್ಯಮಸಾಸ್ಥಾಯಿಯಿಂದ ವರ್ತಿಸುತ್ತಿರುವುದು ಇವನು ವ್ಯಾಕರಣಸಂಸ್ಕಾರದಿಂದ ಶಬ್ದಶುದ್ಧಿಯನ್ನು ಹೊಂದಿದವನಾದುದರಿಂದ, ಇವನ ವಾಕ್ಯಗಳಲ್ಲಿ ಪದಗಳು ವ್ಯಕ್ತವಾಗಿಯೂ, ವರ್ಣಗಳು ಸ್ಫುಟವಾಗಿಯೂ ಇರುವುವು ಇವನು ಮಾತಾಡುವಾಗ ಅತಿತ್ವರಿತ

ದಂತೆ ಸಂಭಾಷಣಮಾಡುವುದೇ ಸೆಲ್ಲಕ್ಷಣವು ಇದೇ ವಿಷಯವು ಶಿಕ್ಷಾಶಾಸ್ತ್ರದಲ್ಲಿ "ಗೀ ತೀ ಶೀಘ್ರೀ ಶಿರ ಕಂಪೀ ತಥಾ ಲಿಖಿತಪಾಠಕಃ । ಅನರ್ಥಜ್ಞೋಲ್ಪಕಂಠಶ್ಚ ಷಡೇತೇ ಪಾಠಕಾಧಮಾಃ । ನ ಶಿರಃ ಕಂಪಯೇದ್ಗಾತ್ರಂ ಭ್ರುವೌಚಾಪ್ಯಕ್ಷಿಣೀ ತಥಾ । ತೈಲಪೂರ್ಣಮಿವಾತ್ಮಾನಂ ತತ್ತದ್ಗೇಯೇ ಪ್ರಯೋಜಯೇತ್" ಎಂದು ವಿವರಿಸಲ್ಪಟ್ಟಿದೆ ಹನುಮಂತನು ಸಂಭಾಷಿಸುವಾಗ ಈ ತರದ ದೋಷಗಳೆಂದೂ ಕಾಣಿಸಲಿಲ್ಲವಾದುದರಿಂದ, ಆತನು ಶಿಕ್ಷೆಯೆನ್ನೂ ಚೆನ್ನಾಗಿ ಅಧ್ಯಯನಮಾಡಿದವನೆಂದು ಭಾವವು

* ಇದುವರೆಗೆ ವರ್ಣೋಚ್ಚಾರಣಶಕ್ತಿಯನ್ನು ಹೇಳಿದುದಾಯಿತು ಈ ಶ್ಲೋಕಗಳಿಂದ ಅವನ ವಾಕ್ಯಪ್ರಯೋಗಚಾತುರಿಯು ಹೇಳಲ್ಪಡುವುದು ಇಲ್ಲಿ ವಾಕ್ಯದೋಷಗಳಲ್ಲಿ ಕೆಲವನ್ನು ಮಾತ್ರವೇ ಹೇಳಿದ್ದರೂ, ಇವು ಶಿಕ್ಷಾಶಾಸ್ತ್ರದಲ್ಲಿ ಹೇಳಲ್ಪಟ್ಟಿರುವ ಹದಿನಾಲ್ಕು ವಾಕ್ಯದೋಷಗಳಿಗೂ ಉಪಲಕ್ಷಕಗಳೆಂದು ಗ್ರಾಹ್ಯವು ಆ ವಾಕ್ಯದೋಷಗಳಾವುವೆಂದರೆ — "ಶಂಕಿತಂ ಭೀತಮುದ್ಭ್ರುಷ್ಟಮವ್ಯಕ್ತಮನುನಾಸಿಕಂ, ಕಾಕು ಸ್ವರಂ ಶೀರ್ಷಗತಂ ತಥಾ ಸ್ಥಾನವಿವರ್ಜಿತಮ್ । ವ್ಯಾಕುಲಂ ತಾಲುಭಿನ್ನಂಚ ಪಾಠದೋಷಾಶ್ಚತುರ್ದಶ ॥" ಎಂಬಿವೆಲ್ಲವೂ ವಾಕ್ಯದೋಷಗಳು

ವಾಗಲಿ ಅತಿಮಂದವಾಗಲಿ ಅಲ್ಲದೆ * ವಾಕ್ಯಗುಣಗಳಿಂದ ಕೂಡಿ, ಕೇಳುವವರ ಮನಸ್ಸನ್ನಾಕರ್ಷಿಸುವಂತೆ ಅತಿಮಧುರವಾಗಿ ಮಾತುಗಳನ್ನಾಡುತ್ತಿರುವನು † ವರ್ಣವ್ಯಂಜಕಗಳಾದ ಎದೆ, ಕಂಠ, ಶಿರಸ್ಸುಗಳೆಂಬ ಈ ಸ್ಥಾನತ್ರಯಗಳಲ್ಲಿಯೂ ನೆಲೆಗೊಂಡಿರುವ ಉದಾತ್ತಾನುದಾತ್ತಸ್ವರಿತಗಳೆಂಬ ಮೂರುಸ್ವರಗಳಿಂದ ಕೂಡಿ, ಆಶ್ಚರ್ಯವನ್ನುಂಟುಮಾಡುತ್ತಿರುವ ಈತನ ಮಾತುಗಳನ್ನು ಕೇಳಿದರೆ, ಕೊಲ್ಲಬೇಕೆಂದು ಕತ್ತಿಯನ್ನು ಹಿಡಿದು ಬರುತ್ತಿರುವ ಶತ್ರುವಿಗಾದರೂ ಮನಸ್ಸು ಕರಗದಿರುವುದೆ ? ಎಲೆ ವತ್ಸನೆ ! ನಮ್ಮನ್ನು ಹೊಗಳುವ ನೆವದಿಂದಲೇ ನಮ್ಮ ಕುಲಗೋತ್ರಾದಿಗಳೆಲ್ಲವನ್ನೂ ಕೇಳಿದ ಇಂತಹ ಸಮರ್ಥನಾದ ಪುರುಷನು, ಯಾವ ರಾಜನ ದೂತನಾಗಿರುವನೋ,ಅಂತಹ ರಾಜನಿಗೆ ಕಾರ್ಯಸಿದ್ಧಿಯಾಗುವುದೇನಾಶ್ಚರ್ಯವು?ಇಂತಹ ಗುಣಗಳಿಂದ ಕೂಡಿ ಕಾರ್ಯಗಳನ್ನು ಸಾಧಿಸತಕ್ಕ ದೂತನು ಯಾವರಾಜರಿಗೆ ದೊರಕುವನೋ, ಆ ರಾಜರು ಸ್ವಲ್ಪವೂ ಶ್ರಮವಿಲ್ಲದೆ ಇಂತಹ ದೂತರ ವಾಕ್ಚಾತುರ್ಯದಿಂದಲೇ ಸಿದ್ಧಿಯನ್ನು ಹೊಂದುವರು"ಎಂದನು ಇದನ್ನು ಕೇಳಿ ವಾಕ್ಯಕುಶಲನಾದ ಲಕ್ಷ್ಮಣನು, ಹನುಮಂತನನ್ನು ನೋಡಿ "ಎಲೈ ವಿದ್ವಾಂಸನೆ! ಮಹಾತ್ಮನಾದ ಸುಗ್ರೀವನ ಗುಣಗಳನ್ನು ನಾವೂ ಕೇಳಿಬಲ್ಲೆವು ಈಗ ನಾವೂ ಆತನನ್ನೇ ಹುಡುಕುತ್ತಿರುವೆವು ಎಲೈ ಹನುಮಂತನೆ! ‡ಸುಗ್ರೀವನನುಮತಿನಂತೆ ಈಗ ನೀನು ನಮಗೆ ಏನನ್ನು ಹೇಳುವೆಯೋ,ಅದ

---

* ಹಿಂದಿನ ವಾಕ್ಯದಲ್ಲಿ ಪಾರದೋಷಗಳು ಹೇಳಲ್ಪಟ್ಟುವು ಈ ವಾಕ್ಯದಿಂದ ಪಾರಗುಣಗಳು ತಿಳಿಸಲ್ಪಡುವುವು "ಮಾಧುರ್ಯಮಕ್ಷರವ್ಯಕ್ತಿ ಪದಚ್ಛೇದಸ್ತಥಾ ತ್ವರಾ। ಧೈರ್ಯಂ ಲಯಸಮರ್ಥಂಚ ಷಡೇತೇ ಪಾಠಕಾ ಗುಣಾ "ಎಂಬುದಾಗಿ ಶಿಕ್ಷಾಶಾಸ್ತ್ರೋಕ್ತಗಳಾದ ಪಾಠಗುಣಗಳೆಲ್ಲವೂ ಅವನ ಮಾತಿನಲ್ಲಿ ಕಾಣುತಿದ್ದುವೆಂದುಭಾವವು.

† ಇಲ್ಲಿ "ತ್ರಿಸ್ಥಾನವ್ಯಂಜನಸ್ಥಯಾ" ಎಂದು ಮೂಲವು ತ್ರಿಸ್ಥಾನಗಳೆಂದರೆ, ಹೃದಯ, ಕಂಠ, ಶಿರಸ್ಸುಗಳು. ತ್ರಿಸ್ಥಾನವ್ಯಂಜನಗಳೆಂದರೆ ಇವುಗಳಿಂದ ತೋರಬರುವ ಉದಾತ್ತಾನುದಾತ್ತಸ್ವರಿತಗಳೆಂಬ ಮೂರು ಸ್ವರಗಳು ಈ ವಿಷಯವೂ ಶಿಕ್ಷಾಶಾಸ್ತ್ರದಲ್ಲಿ "ಅನುದಾತ್ತೋ ಹೃದಿಜ್ಞೇಯೋ ಮೂರ್ಧ್ನುದಾತ್ತ ಉದಾಹೃತ । ಸ್ವರಿತ ಕಂಠಮೂಲೀಯಃ ಪಾರ್ಶ್ವಾಸ್ಯೇ ಪ್ರಚಯಸ್ಯತು" ಎಂದು ನಿರೂಪಿಸಲ್ಪಟ್ಟಿದೆ

‡ ಇದರಿಂದ "ಯಾರು ಆಚಾರ್ಯಾಭಿಮಾನನಿಷ್ಠರೋ, ಅವರ ಉದ್ದೇಶಗಳನ್ನು ಅವರ ಮಾತಿನಿಂದಲೇ ನೆಡೆಸಿಕೊಡುವೆನೆಂಬ ಭಗವಂತನ ಸಂಕಲ್ಪವು ಸೂಚಿತವು.

ನ್ನು ಹಾಗೆಯೇ ನಡೆಸುವೆವು" ಎಂದನು ಇದನ್ನು ಕೇಳಿ ವಾಯುಪುತ್ರನಾದ ಹನುಮಂತನು ಪರಮಸಂತುಷ್ಟನಾಗಿ, ವಾಲಿಯನ್ನು ನಿಗ್ರಹಿಸುವುದಕ್ಕೆ ತಕ್ಕ ದಾರಿಯು ಸಿಕ್ಕಿತೆಂದು ನಿಶ್ಚಯಿಸಿಕೊಂಡು, ಅವರೊಡನೆ ಸ್ನೇಹವನ್ನು ಬೆಳೆಸಬೇಕೆಂದುದ್ದೇಶಿಸಿದನು ಇಲ್ಲಿಗೆ ಮೂರನೆಯ ಸರ್ಗವು

ಲಕ್ಷ್ಮಣನು ಹನುಮಂತನಿಗೆ ತನ್ನ ವೃತ್ತಾಂತಗಳನ್ನು ಹೇಳಿದುದು ಎಲ್ಲರೂ ಸುಗ್ರೀವನಬಳಿಗೆ ಹೋದುದು

* ಆಮೇಲೆ ಹನುಮಂತನು ಲಕ್ಷ್ಮಣನ ಮಧುರವಾದ ಮಾತುಗಳನ್ನು ಕೇಳಿ, ರಾಮನೂ ಕಾರ್ಯಾರ್ಥಿಯಾಗಿಯೇ ಸುಗ್ರೀವನಲ್ಲಿಗೆ ಬರುತ್ತಿರುವನೆಂಬುದನ್ನು ತಿಳಿದು, ಪರಮಸಂತುಷ್ಟನಾಗಿ, ತನ್ನ ಮನಸ್ಸಿನಲ್ಲಿ ತಾನು ಸುಗ್ರೀವನನ್ನು ಸ್ಮರಿಸಿಕೊಂಡು, ''ಆಹಾ! ಈ ರಾಮನೂ ಸುಗ್ರೀವನಲ್ಲಿ ಕಾರ್ಯಾರ್ಥಿಯಾಗಿಯೇ ಬಂದಿರುವನು ಇನ್ನು ಮಹಾಭಾಗ್ಯನಾದ ನಮ್ಮ ಸುಗ್ರೀವನಿಗೆ ಕಪಿರಾಜ್ಯವು ಕೈಗೆ ಸೇರಿತೆಂದೇ ಎಣಿಸಬಹುದು "ಎಂದುಹರ್ಷಗೊಂಡಿದ್ದನು ಹೀಗೆ † ಪರಮಸಂತುಷ್ಟನಾದ ಹನುಮಂತನು, ಮಾತಿನಲ್ಲಿ ನಿಪುಣನಾದುದರಿಂದ, ತನ್ನ ಸಂತೋಷವನ್ನು ತನ್ನಲ್ಲಿಯೇ ಅಡಗಿಸಿಕೊಂಡು ರಾಮನನ್ನುಕುರಿತು ''ಎಲೈ ನರಶ್ರೇಷ್ಠನೆ! ಈ ವನವಾದರೋ ಅನೇಕವಿಷಸರ್ಪಗಳಿಗೂ, ಕ್ರೂರಮೃಗಗಳಿಗೂ ನಿತ್ಯಾಶ್ರಯವಾದ ದಂಡಕಾರಣ್ಯವು ಅದರಲ್ಲಿಯೂ ಈ ಪಂಪಾತೀರವನವು ಅತಿ ದುರ್ಗಮವಾಗಿರುವುದು ನೀನು ನಿನ್ನ ತಮ್ಮನೊಡನೆ ಇಷ್ಟುಭಯಂಕರವಾದ ಕಾಡಿಗೆ ಬಂದುದೇಕೆ?"ಎಂದನು ಇದನ್ನುಕೇಳಿ, ಲಕ್ಷ್ಮಣನು ರಾಮನ ಇಂಗಿತವನ್ನು ತಿಳಿದು ಆಂಜನೇಯನಿಗೆ

---

* ಈ ಸರ್ಗದಲ್ಲಿ ರಾಮನಿಗೆ ಹನುಮಂತನಮೂಲಕವಾಗಿ ಸುಗ್ರೀವಸಖ್ಯವಾದುದರಿಂದ, ಭಗವಂತನಿಗೆ ಜೀವನನ ಲಾಭವು ಆಚಾರ್ಯಮುಖದಿಂದಲೇ ನಡೆಯಬೇಕೆಂಬ ವಿಷಯವು ಸೂಚಿತವಾಗಿದೆ

† ಇಲ್ಲಿ ''ತತಃ ಪರಮಸಂಹೃಷ್ಟೋ ಹನೂಮಾನ್ ಪ್ಲವಗರ್ಷಭಃ" ಎಂದು ಮೂಲವು ಇಲ್ಲಿ ''ಪ್ಲವಗರ್ಷಭ "ಎಂಬಲ್ಲಿರುವ ಗೌರವವು ಗಾಯತ್ರಿಯ ಹತ್ತನೆಯ ವರ್ಣವಾದುದರಿಂದ, ಇದುವರೆಗೆ ರಾಮಾಯಣದಲ್ಲಿ ಐಂಬತ್ತುಸಾವಿರ ಗ್ರಂಥಗಳು ಮುಗಿದು,ಈ ಶ್ಲೋಕದಿಂದ ಹತ್ತನೆಯ ಸಹಸ್ರವು ಆರಂಭಿಸುವುದಾಗಿ ತಿಳಿಯಬೇಕು.

ರಾಮನ ಮಹಾಮಹಿಮೆಯನ್ನೂ, ಆತನು ದಶರಥಪುತ್ರನೆಂಬುದನ್ನೂ ತಿಳಿಸ
ಲಾರಂಭಿಸಿ,"ಎಲೈ ಕಪಿಶ್ರೇಷ್ಠನೆ! ದಶರಥನೆಂಬ ರಾಜನೊಬ್ಬನಿದ್ದನು ಅವ
ನು ಮಹಾತೇಜಸ್ವಿಯೆನಿಸಿಕೊಂಡು, ಧರ್ಮಪರಾಯಣನಾಗಿ, ಯಾವಾಗಲೂ
ಧರ್ಮದಿಂದ ಚತುರ್ವರ್ಣಗಳನ್ನೂ ಪಾಲಿಸುತಿದ್ದನು ಈ ಲೋಕದಲ್ಲಿ ಅವ
ನನ್ನು ದ್ವೇಷಿಸುತಿದ್ದವರೊಬ್ಬರಾದರೂ ಇಲ್ಲ ಅವನೂ ಯಾರನ್ನೂ ದ್ವೇ
ಷಿಸುತ್ತಿರಲಿಲ್ಲ ಸಮಸ್ತಭೂತಗಳಲ್ಲಿಯೂ ಬ್ರಹ್ಮದೇವನಂತೆ ಅವನು ಮೇ
ಲ್ಮೆಯನ್ನು ಹೊಂದಿದ್ದನು ಬಹುದಕ್ಷಿಣೆಗಳುಳ್ಳ ಅಗ್ನಿಷ್ಟೋಮಾದಿ
ಯಾಗಗಳನ್ನು ಅನೇಕವಾಗಿ ನಡೆಸಿದವನು ಆ ಮಹಾತ್ಮನ ಜ್ಯೇಷ್ಠಪುತ್ರನೇ
ಈತನು ಇವನನ್ನು ಜನರೆಲ್ಲರೂ ರಾಮನೆಂದು ಕರೆಯುವರು ಈತನು ಸರ್ವ
ಭೂತಶರಣ್ಯನೆಂಬ ಖ್ಯಾತಿಯನ್ನು ಹೊಂದಿರುವನು ತಂದೆಯಾಜ್ಞೆಯನ್ನು
ವೀರದೆ ನಡೆಯುವುದೇ ಇವನಿಗೊಂದು ಮಹಾವ್ರತವು ಇವನು ಮಹಾವೀ
ರನು ಆ ದಶರಥನ ಪುತ್ರರಲ್ಲಿ ಈತನೇ ಬಹಳ ಗುಣವಂತನು ಇವನಲ್ಲಿ ಸಮ
ಸ್ತರಾಜಲಕ್ಷಣಗಳೂ ತುಂಬಿರುವುವು ಈತನೇ ಆ ರಾಜನಿಗೆ ಹಿರಿಯನುಗನಾ
ದುದರಿಂದ ರಾಜ್ಯಾರ್ಹನಾಗಿರುವನು ಆದರೆ ಯಾವುದೋ ಕಾರಣಾಂ
ತರದಿಂದ ರಾಜ್ಯಭ್ರಂಶವನ್ನು ಹೊಂದಿ ವನವಾಸವನ್ನು ಮಾಡುವುದಕ್ಕೆ
ನನ್ನೊಡನೆ ಇಲ್ಲಿಗೆ ಬಂದಿರುವನು ಮತ್ತು ಸಂಜೆಯಲ್ಲಿ ಸೂರ್ಯಪ್ರಭೆ
ಯು ಮಹಾತೇಜಸ್ವಿಯಾದ ಸೂರ್ಯನನ್ನೇ ಬಿಡದೆ ಹಿಂಬಾಲಿಸಿ ಹೋಗುವಂ
ತೆ, ಈತನ ಪತ್ನಿಯಾದ ಸೀತೆಯು, ಇವನು ರಾಜ್ಯಭ್ರಷ್ಟನಾಗಿ ಬಂದಾಗ
ಲೂ ಬಿಡದೆ, ಜಿತೇಂದ್ರಿಯನಾದ ಇವನನ್ನೇ ಹಿಂಬಾಲಿಸಿ ಬಂದುಬಿಟ್ಟಳು
* ನಾನು ಇವನ ತಮ್ಮನು ನನಗೆ ಲಕ್ಷ್ಮಣನೆಂದು ಹೆಸರು ನನ್ನಣ್ಣನಾದ

---

* ಇಲ್ಲಿ "ಅಹಮಸ್ಯಾವರೋ ಭ್ರಾತಾ ಗುಣೈರ್ದಾಸ್ಯ ಮುಪಾಗತಃ । ಕೃತ
ಜ್ಞಸ್ಯ ಬಹುಜ್ಞಸ್ಯ ಲಕ್ಷ್ಮಣೋನಾಮ ನಾಮತಃ" ಎಂದು ಮೂಲವು ಇಲ್ಲಿ ವೋರ್ವಾ
ರ್ಥಕ್ಕೆ "ಅವನೆ ಅಭಿಪ್ರಾಯವಿಂದ ನಾನು ಅವನಿಗೆ ತಮ್ಮನೆನಿಸಿದ್ದರೂ, ನನ್ನ ಅಭಿಪ್ರಾ
ಯದಿಂದ ನಾನು ಅವನಿಗೆ ದಾಸನು"ಎಂದು ಭಾವವು ಆದರೆ ಲಕ್ಷ್ಮಣನು ಹಿಂದೆ "ಪ
ರವಾನಸ್ಮಿ" ಇತ್ಯಾದಿವಾಕ್ಯಗಳಿಂದ, ತನಗೆ ರಾಮನಲ್ಲಿ ದಾಸ್ಯವೇ ಸ್ವರೂಪಸಿದ್ಧವಾದು
ದೆಂದು ಹೇಳಿರುವಾಗ, ಇಲ್ಲಿ " ಗುಣೈರ್ದಾಸ್ಯಮುಪಾಗತಃ" ಆನನ ಗುಣಗಳನ್ನು

ಈ ರಾಮನು,ಪರರು ತನಗೆ ಮಾಡಿದ ಉಪಕಾರವನ್ನು ಎಂದಿಗೂ ಮರೆಯುವನಲ್ಲ ಈತನಿಗೆ ತಿಳಿಯದ ವಿಷಯಗಳಿಲ್ಲ ಯಾವಾಗಲೂ ಸುಖಾರ್ಹನಾದವನು ಲೋಕಪೂಜ್ಯನು ಸಮಸ್ತಭೂತಗಳಿಗೂ ಹಿತವನ್ನೇ ಬಯಸತಕ್ಕವನು. ಇವನು ರಾಜ್ಯಭ್ರಷ್ಟನಾಗಿ ಬಂದು ವನವಾಸದಲ್ಲಿದ್ದರೂ, ನಾನು ಇವನಗುಣಾತಿಶಯಗಳಿಗೆ ಪರವಶನಾಗಿ ಈತನಲ್ಲಿ ದಾಸ್ಯವೃತ್ತಿಯನ್ನು ಮಾಡುತ್ತಿರುವೆನು ನಾವಿಬ್ಬರೂ ಇಲ್ಲದಾಗ ಯಾವನೋ ರಾಕ್ಷಸನು ಈತನ ಪತ್ನಿಯನ್ನು ಅಪಹರಿಸಿಬಿಟ್ಟನು ಆ ರಾಕ್ಷಸನಾರೆಂದು ಇದುವರೆಗೂ ತಿಳಿಯಲಿಲ್ಲ ಆದರೆ ನಾವು ಕಾಡಿನಲ್ಲಿ ಅವಳನ್ನು ಹುಡುಕುತ್ತ ಬರುತ್ತಿರುವಾಗ, ಶಾಪದಿಂದ ರಾಕ್ಷಸತ್ವವನ್ನು ಹೊಂದಿದ್ದ ದಿತಿಪುತ್ರನಾದ ದನುವೆಂಬವನನ್ನು ಕಂಡೆವು ಅವನು ನಮ್ಮನ್ನು ಕುರಿತು, ಮಹಾಸಮರ್ಥನಾದ ಸುಗ್ರೀವನೆಂಬ ವಾನರರಾಜನೊಬ್ಬನಿರುವನೆಂದೂ, ಆತನು ಮಹಾವೀರ್ಯವುಳ್ಳವನೆಂದೂ ಸೀತೆಯನ್ನು ಕದ್ದುಯ್ದ ರಾಕ್ಷಸನಾರೆಂಬುದನ್ನು ಆ ಸುಗ್ರೀವನು ಬಲ್ಲನೆಂದೂ ತಿಳಿಸಿ, ಅಗಲೇ ಶಾಪವಿಮುಕ್ತನಾಗಿ ದಿವ್ಯರೂಪವನ್ನು ಹೊಂದಿ ಸುಖವಾಗಿ ಸ್ವರ್ಗಲೋಕಕ್ಕೆ ಹೊರಟುಹೋದನು ಎಲೈ ವಾನರಶ್ರೇಷ್ಠನೆ! ನೀನು ನಮ್ಮನ್ನು ಕೇಳಿದುದರಿಂದ ಇದ್ದಸ್ಥಿತಿಯನ್ನು ಯಥಾವಸ್ಥಿತವಾಗಿ ತಿಳಿಸಿಬಿಟ್ಟೆವು ಎನು ಪ್ರಕೃತದಲ್ಲಿ ನಾನೂ ನಮ್ಮಣ್ಣನಾದ ಈ ರಾಮನೂ ನಿಮ್ಮ ಸುಗ್ರೀವನನ್ನೇ ನಂಬಿ ಬಂದಿರುವೆವು ಆಹಾ ! ನಾನೇನು ಹೇಳಲಿ ! ಯಾವನು ಪೂರ್ವದಲ್ಲಿ ಅರ್ಥಿಗಳಿಗೆ ಬೇಕಾದಷ್ಟು ಧನವನ್ನುಕೊಟ್ಟು

ನೋಡಿ ತಾನು ದಾಸ್ಯವೃತ್ತಿಯನ್ನೆವಲಂಬಿಸಿರುವುದಾಗಿ ಹೇಳಿದುದೇಕೆ? ಎಂದರೆ, ತನಗೆ ಸ್ವರೂಪಸಿದ್ಧವಾದ ದಾಸ್ಯನೇ ಈಗ ಆತನ ಗುಣಾತಿಶಯಗಳಿಂದ ಇನ್ನೂ ಹೆಚ್ಚಿತೆಂದು ಗ್ರಾಹ್ಯವು ಮತ್ತು ಇಲ್ಲಿ ''ಲಕ್ಷ್ಮಣೋನಾಮ ನಾಮತ "ಎಂಬುದರಿಂದ ತನ್ನ ಹೆಸರಿನಿಂದಲೇ ತಾನು ಕೈಂಕರ್ಯಲಕ್ಷ್ಮೀಸಂಪನ್ನನೆಂಬುದು ವ್ಯಕ್ತವಾಗುವುದರಿಂದ, ಆ ದಾಸ್ಯವು ತನಗೆ ಸ್ವರೂಪಸಿದ್ಧವೆಂದೂ ಭಾವವು

ಇದೆಲ್ಲದೆ ಮುಂದಿರುವ ''ಮಹಾರ್ಹಸ್ಯ, ವನವಾಸಾಶ್ರಿತಸ್ಯ ' ಎಂಬೀ ಎರಡು ವಿಶೇಷಣಗಳ ಸಾಹಚರ್ಯದಿಂದ, ಆ ರಾಮನು ಸಮೃದ್ಧಿದೆಶೆಯಲ್ಲಿದ್ದರೂ, ದೀನದೆಶೆಯಲ್ಲಿದ್ದರೂ ಆತನಲ್ಲಿ ದಾಸ್ಯವೇ ತನಗೆ ಸಹಜವೆಂಬುದೂ ಸ್ಪಷ್ಟವಾಗಿದೆ

ಪೋಷಿಸುತ್ತ, ಎಣೆಯಿಲ್ಲದ ಕೀರ್ತಿಯನ್ನು ಪಡೆದು, ತಾನೇ ಲೋಕನಾಥನೆನಿಸಿಕೊಂಡಿದ್ದನೋ, ಆ ರಾಮನು, ಈಗ ಸುಗ್ರೀವನನ್ನು ತನಗೆ ನಾಥನನ್ನಾಗಿ ಬಯಸಿ ಬಂದಿರುವನು ಸರ್ವಲೋಕಶರಣ್ಯನಾಗಿ, ಧರ್ಮವತ್ಸಲನೆನಿಸಿಕೊಂಡಿದ್ದ ದಶರಥನ ಹೊಟ್ಟೆಯಲ್ಲಿ ಹುಟ್ಟಿ, ತಾನೂ ಇತರರಿಗೆ ರಕ್ಷಕನೆನಿಸಿಕೊಂಡ ಈ ರಾಮನು ಈಗ ಸುಗ್ರೀವನಲ್ಲಿ ಶರಣಾಗತಿಯನ್ನು ಮಾಡಿರುವನು ಮೊದಲು ಸಮಸ್ತಲೋಕಗಳಿಗೂ ಪ್ರಾಪ್ಯನಾಗಿಯೂ, ಸರ್ವಶರಣ್ಯನಾಗಿಯೂಇದ್ದ ಧರ್ಮಾತ್ಮನಾದ ಈ ನನ್ನಣ್ಣನು, ಈಗ ಸುಗ್ರೀವನಲ್ಲಿ ಮರೆಹುಗುತ್ತಿರುವನು ಯಾವನ ಅನುಗ್ರಹವನ್ನು ಸಂಪಾದಿಸಿದಮಾತ್ರಕ್ಕೆ ಈ ಲೋಕದ ಸಮಸ್ತಪ್ರಜೆಗಳೂ ಸಮಸ್ತ ಪುರಷಾರ್ಥಗಳನ್ನೂ ಪಡೆದಂತೆ ಸಂತೋಷಿಸುತ್ತಿರುವುವೋ, ಆ ಮಹಾತ್ಮನು ಈಗ ಸುಗ್ರೀವನ ಅನುಗ್ರಹಕ್ಕಾಗಿ ನಿರೀಕ್ಷಿಸುತ್ತಿರುವನು! ಯಾವನಿಂದಲೇ ಈ ಭೂಮಿಯಲ್ಲಿ ಗುಣಾಢ್ಯರಾದ ಬೇರೆ ಸಮಸ್ತರಾಜರೂ ಯಾವಾಗಲೂ ನಾನಾವಿಧವಾಗಿ ಪೋಷಿಸಲ್ಪಡುತಿದ್ದರೋ, ಆ ದಶರಥರಾಜನಿಗೆ ಜ್ಯೇಷ್ಠಪುತ್ರನಾಗಿ,ಮೂರುಲೋಗಕಳಲ್ಲಿಯೂ ಖ್ಯಾತಿಯನ್ನು ಪಡದ ಈರಾಮನು, ಈಗ ಕಾಡುಕಪಿಗಳಿಗೊಡೆಯನಾದ ಸುಗ್ರೀವನಲ್ಲಿ ಮರೆಹುಗುತ್ತಿರುವನು


---

* ಇಲ್ಲಿ ''ಲೋಕನಾಥ ಪುರಾ ಭೂತ್ವಾ ಸುಗ್ರೀವಂ ನಾಥಮಿಚ್ಛತಿ'' ಎಂದು ಮೂಲವು ಇದರಿಂದ ರಾಮನ ಪರತ್ವಸೌಲಭ್ಯಗಳೆರಡೂ ಸೂಚಿತವಾಗುವುವು ಪರತವಿಲ್ಲದ ಸೌಲಭ್ಯವು ಗುಣವೆನಿಸುವುದಿಲ್ಲವಾದುದರಿಂದ 'ಅವೆರಡಕ್ಕೂ ಇಲ್ಲಿ ಸಾಹೆಚರ್ಯವು ಹೇಳಲ್ಪಟ್ಟಿರುವುದಾಗಿ ಗ್ಯಾಹ್ಯವು ಇಲ್ಲಿ ''ಲೋಕನಾಥಃ'' ಎಂಬುದರಿಂದ ಮೂರು ಲೋಕಗಳಿಗೂ ನಾಥನಾದುದರಿಂದಲೇ, ಈತನು ಸುಗ್ರೀವನೇ ಮೊದಲಾದ ನಿಮ್ಮೆಲ್ಲರಿಗೂ ತಾನೇ ನಾಥನೆಂಬುದು ಸ್ವತಸ್ಸಿದ್ಧವಾದರೂ,ತನ್ನ ಪರತ್ವಕ್ಕೆ ತಕ್ಕಂತೆ ಸೌಲಭ್ಯವನ್ನು ತೋರಿಸುವುದಕ್ಕಾಗಿಯೇ ''ಸುಗ್ರೀವಂ ನಾಥಮಿಚ್ಛತಿ'' ಸುಗ್ರೀವನನ್ನು ತನಗೆ ನಾಥನೆನ್ನಾಗಿ ಅಪೇಕ್ಷಿಸುವನು'' ಎಂದು ಭಾವವು. ಹಾಗೆ ಪರತ್ವದಲ್ಲಿರುವವನು ಹೀನಜನವನ್ನು ಪ್ರಾರ್ಥಿಸಬೇಕಾದುದೇಕೆ? ಎಂದರೆ ''ಇಚ್ಛತಿ'' ಇವನ ಇಚ್ಛೆಯು ಸ್ವತಂತ್ರವಾದುದರಿಂದ, ಅಷ್ಟಾಗಿ ಅವಶ್ಯಕತೆಯಿಲ್ಲದಿದ್ದರೂ, ತನ್ನ ಸ್ವೇಚ್ಛೆಯಿಂದ ತಾನಾಗಿಯೇ ಪ್ರಾರ್ಥಿಸುವನೆಂದು ಭಾವವು ಸ್ವತಂತ್ರೇಚ್ಛೆಯಿಂದ ಇತರರಲ್ಲಿ ಸೌಲಭ್ಯವನ್ನು ತೋರಿಸಿ ಪ್ರಾರ್ಥಿಸುವುದೂ ಒಂದು ಗುಣವೆಂದೇ ಮುಖ್ಯಾಶಯವು

ಎಲೈ ವಾಯುಪುತ್ರನೆ ಹೀಗೆ ಶೋಕಪೀಡಿತನಾಗಿ ನಿಮ್ಮಲ್ಲಿ ಮರೆಹೊಕ್ಕುಬಂದಿರುವ ಈ ರಾಮನಲ್ಲಿ, ಕಪಿರಾಜನಾದ ನಿಮ್ಮ ಸುಗ್ರೀವನು ಅವಶ್ಯವಾಗಿ ಅನುಗ್ರಹವನ್ನು ತೋರಿಸಬೇಕು"ಎಂದನು ಹೀಗೆ ಅತಿದೈನ್ಯದಿಂದ ಕಣ್ಣೀರು ತುಂಬಿಕೊಂಡು ಪ್ರಾರ್ಥಿಸುತ್ತಿರುವ ಲಕ್ಷ್ಮಣನನ್ನು ನೋಡಿ, ಮಾತಿನಲ್ಲಿ ನಿಪುಣನಾದ ಹನುಮಂತನು,"ಎಲೈವೀರನೆ! ಇದೇನು ಹೀಗೆ ಹೇಳುತ್ತಿರುವೆ? ಬುದ್ಧಿಸಂಪನ್ನರಾಗಿಯೂ, ತಾಳ್ಮೆಯುಳ್ಳವರಾಗಿಯೂ, ಜಿತೇಂದ್ರಿಯರಾಗಿಯೂ ಇರುವ ಇಂತಹ ಮಹಾತ್ಮರನ್ನು, ನಮ್ಮೊಡೆಯನಾದ ಸುಗ್ರೀವನು ತಾನಾಗಿಯೇ ಹುಡುಕಿಬಂದು ನೋಡಬೇಕಲ್ಲವೆ? ಹೀಗಿರುವಾಗ ಆತನ ಭಾಗ್ಯವಶದಿಂದ,ನಿಮ್ಮಂತಹ ಮಹಾತ್ಮರೇ ಆತನಿಗೆ ದರ್ಶನವನ್ನು ಕೊಡಬೇಕೆಂದು ಬಂದಿರುವಾಗ, ಇನ್ನು ಹೇಳಬೇಕಾದುದೇನು? ನಿಮ್ಮಂತೆಯೇ ಆ ಸುಗ್ರೀವನೂ ಈಗ ದೀನದಶೆಯಲ್ಲಿರುವನು ಅಣ್ಣನಾದ ವಾಲಿಯೊಡನೆ ವೈರವನ್ನು ಬೆಳೆಸಿ ಆತನೂ ರಾಜ್ಯಭ್ರಷ್ಟನಾಗಿರುವನು ಅವನ ಸಹೋದರನಾದ ವಾಲಿಯು ಆತನ ಹೆಂಡತಿಯನ್ನೂ ಅಪಹರಿಸಿ, ಆತನನ್ನು ವಂಚಿಸಿ ರಾಜ್ಯವಿಂದೋಡಿಸಿಬಿಟ್ಟಿರುವನು ಇದರಿಂದ ಆತನೂ ಕಾಡಿನಲ್ಲಿ ಅಲೆಯುತ್ತಿರುವನು ಅವನನ್ನು ಸಾಮಾನ್ಯನೆಂದು ತಿಳಿಯಬೇಡಿರಿ'ಸಾಕ್ಷಾತ್ಸೂರ್ಯದೇವನ ಮಗನು ಆತನಿಗೆ ಈ ಆಪತ್ಕಾಲದಲ್ಲಿ ನಾವು ಸಹಾಯಕರಾಗಿರುವೆವು ಆತನು ಸೀತೆಯನ್ನು ಹುಡುಕುವುದರಲ್ಲಿ ನಿಮಗೆ ತಪ್ಪದೆ ಸಹಾಯಮಾಡುವನು" ಎಂದನು ಹೀಗೆ ಹನುಮಂತನು ಇಂಪಾದ ನುಡಿಗಳಿಂದ ಅವರಿಗೆ ಸಮಾಧಾನವನ್ನು ಹೇಳಿ "ಎಲೈ ವೀರರೆ'ಇನ್ನು ನಾವು ಸುಗ್ರೀವನ ಬಳಿಗೆ ಹೋಗುವೆವೆ?" ಎಂದನು ಹೀಗೆ ಹೇಳುತ್ತಿರುವ ಹನುಮಂತನನ್ನು ಧರ್ಮಾತ್ಮನಾದ ಲಕ್ಷ್ಮಣನು ಯಥಾವಿಧಿಯಾಗಿಮನ್ನಿಸಿ,ಸವೀಪದಲ್ಲಿ

---

* ಇಲ್ಲಿ ರಾಮನು ಶೋಕಾರ್ತೆಯಾದ ಆ ಸೀತೆಯನ್ನುದ್ದೇಶಿಸಿ ಶೋಕಾಕುಲನಾಗಿ ಸುಗ್ರೀವನನ್ನು ಮರೆಹೊಕ್ಕನೆಂಬುದರಿಂದ,ಬದ್ಧರಾಗಿ ದುಃಖಿಸುತ್ತಿರುವ ಚೇತನರನ್ನು ನೋಡಿ ಭಗವಂತನು ತಾನೂ ದುಃಖಾಕುಲನಾಗುವನೆಂದೂ, ತಮ್ಮಿಬ್ಬರಿಗಿರುವ ಈ ದುಃಖವು ಆಚಾರ್ಯಮುಖದಿಂದಲ್ಲದೆ ನೀಗಲಾರದೆಂಬುದಕ್ಕಾಗಿ, ತಾನೇ ಆಚಾರ್ಯಮೂಲಕವಾಗಿ ಚೇತನೋಜ್ಜೀವನಕ್ಕೆ ಪ್ರಯತ್ನಿಸುವನೆಂದೂ ಧ್ವನಿತವಾಗುವುದು



1367. ಹನುಮಂತನು ರಾಮಲಕ್ಷ್ಮಣರನ್ನು ತನ್ನ ಭುಜಗಳಮೇಲೆ ಏರಿಸಿಕೊಂಡು ಸುಗ್ರೀವನ ಬಳಿಗೆ ಕರೆತಂದುದು.

ದ್ದ ರಾಮನನ್ನು ಕುರಿತು, " ಅಣ್ಣಾ ! ವಾಯುಪುತ್ರನಾದ ಈ ವಾನರನು, ನಮ್ಮ ಮಾತನ್ನು ಕೇಳಿ ಪರಮಸಂತೋಷವನ್ನು ಸೂಚಿಸುತ್ತಿರುವನು ಇದರಿಂದ ಈತನೂ ನಮ್ಮಲ್ಲಿ ಕಾರ್ಯಾರ್ಥಿಯಾಗಿಯೇ ಬಂದಿರುವಂತಿದೆ ಆದರಿಂದ ಈತನು ನಮ್ಮ ಕಾರ್ಯವನ್ನು ನಡೆಸಿಕೊಡುವವಿಷಯದಲ್ಲಿ ಹೇಳಿದ ಮಾತುಗಳು ಯಥಾರ್ಥವೆಂದೇ ನಂಬಬಹುದು ಸ್ವಕಾರ್ಯಾರ್ಥಿಯಾದ ಸುಗ್ರೀವನು ನಮ್ಮ ಕಾರ್ಯವನ್ನು ನಡೆಸಿಕೊಡದೆ ತೀರದು ಇನ್ನು ನೀನು ಕೃತಾರ್ಥನು ವಾಯುಕುಮಾರನಾದ ಈ ವೀರನು ಪ್ರಸನ್ನಮುಖನಾಗಿ ಸಂತೋಷದೊಡನೆ ಸ್ಪಷ್ಟವಾಗಿ ಮಾತಾಡುವುದರಿಂದ, ಈತನು ಅಸತ್ಯವನ್ನು ಹೇಳಲಾರನು" ಎಂದನು ಆಮೇಲೆ ಮಹಾಪ್ರಾಜ್ಞನಾದ ಹನುಮಂತನು, ಆ ರಾಮಲಕ್ಷ್ಮಣರಿಬ್ಬರನ್ನೂ ಸುಗ್ರೀವನಬಳಿಗೆ ಕರೆದುಕೊಂಡು ಹೋಗುವುದಾಗಿ ನಿಶ್ಚಯಿಸಿ, ಆಗಲೇ ತನ್ನ ಸನ್ಯಾಸಿರೂಪವನ್ನು ಬಿಟ್ಟು ನಿಜರೂಪವನ್ನು ತೋರಿಸಿ, ಅವರಿಬ್ಬರನ್ನೂ ಹೆಗಲಮೇಲೆ ಕುಳ್ಳಿರಿಸಿಕೊಂಡು, ಸುಗ್ರೀವನ ಬಳಿಗೆ ಹೊರಟನು ಹೀಗೆ ಮಹಾಯಶಸ್ವಿಯಾಗಿಯೂ, ವಾಯುಪುತ್ರನಾಗಿಯೂ ಇರುವ ಧೀಮಂತನಾದ ಹನುಮಂತನು, ತಾನು ಕೃತಾರ್ಥನಾದಂತೆ ಸಂತೋಷಗೊಂಡು, ಆ ರಾಮಲಕ್ಷ್ಮಣರೂಡಗೂಡಿ ಋಶ್ಯಮೂಕಪರ್ವತಕ್ಕೆ ಹೋದನು ಇಲ್ಲಿಗೆ ನಾಲ್ಕನೆಯಸರ್ಗವು

---

*ರಾಮಸುಗ್ರೀವರಿಬ್ಬರೂ ಸೇರಿ ಅಗ್ನಿಸಾಕ್ಷಿಕವಾಗಿ ಆಣೆಯಿಟ್ಟು ಪರಸ್ಪರಸ್ನೇಹವನ್ನು ಒಳಿಸಿದುದು

ಆಮೇಲೆ ಹನುಮಂತನು ಋಶ್ಯಮೂಕವನ್ನೇರಿ, ಆ ಮಾರ್ಗವಾಗಿ ಮಲಯಪರ್ವತಕ್ಕೆ ಹೋಗಿ, ಸುಗ್ರೀವನ ಸಮೀಪಕ್ಕೆ ಬಂದು ಆತನನ್ನು ಕುರಿತು,

---

* ಈ ಸರ್ಗದಲ್ಲಿ ರಾಮನನ್ನು ನೋಡಿ ವಾಲಿಯೆಂದು ಭಯಪಟ್ಟ ಸುಗ್ರೀವನು, ಹನುಮಂತನೆ ಮೊಲಕವಾಗಿ ನಿಜಸ್ಥಿತಿಯನ್ನು ತಿಳಿದಮೇಲೆ ನಿರ್ಭಯನಾಗಿ, ಆತನೊಡನೆ ಸ್ನೇಹವನ್ನು ಮಾಡಿದನೆಂಬುದರಿಂದ, ಜೀವನು ತನ್ನ ಪಾಪಗಳನ್ನು ನೋಡಿ ಮೊದಲು ನಿರ್ಹೇತುಕಕೃಪಾಕರನಾದ ಭಗವಂತನಿಗೂ ಅಂಜಿ, ಕೊನೆಗೆ ಆಚಾರ್ಯಮುಖದಿಂದ ನಿಜತತ್ವವನ್ನು ತಿಳಿದು, ಭಗವತ್ಕೃಪಾಪಾತ್ರನಾಗುವನೆಂಬ ತತ್ವಾರ್ಥವು ಸೂಚಿಸಲ್ಪಡುವುದು.

"ಇದೋ! ಮಹಾಪ್ರಾಜ್ಞನೂ, ಪರಾಕ್ರಮಶಾಲಿಯೂ ಆದ ಶ್ರೀರಾಮನೂ, ಆತನ ತಮ್ಮನೂ ಬಂದಿರುವರು ಅಯ್ಯಾ! ಕಪಿರಾಜನೆ! ಈ ರಾಮನು ಸಾಮಾನ್ಯನಲ್ಲ ಸತ್ಯಪರಾಕ್ರಮನು ಇಕ್ಷ್ವಾಕುವಂಶದಲ್ಲಿ ಹುಟ್ಟಿದವನು ದಶರಥಮಹಾರಾಜನ ಪುತ್ರನು ಪರಮಧಾರ್ಮಿಕನೆಂಬ ಪ್ರಸಿದ್ಧಿಯನ್ನು ಹೊಂದಿರುವನು ಪಿತೃವಾಕ್ಯಪರಿಪಾಲನವೆಂಬ ವ್ರತವನ್ನು ನಡೆಸುತ್ತಿರುವನು ಮಹಾತ್ಮನಾದ ಈತನು ಈ ವ್ರತವನ್ನು ಹಿಡಿದು ಅರಣ್ಯದಲ್ಲಿರುವಾಗ, ಆವನ ಹೆಂಡತಿಯನ್ನು ರಾವಣನಂಬ ರಾಕ್ಷಸನೊಬ್ಬನು ಕದ್ದುಯ್ದಿರುವನು ಆದಕ್ಕಾಗಿ ಈತನು ಸಿನ್ನಲ್ಲಿ ಮರೆಹೊಕ್ಕಿರುವನು ರಾಜಸೂಯಗಳಿಂದಲೂ, ಅಶ್ವಮೇಧಗಳಿಂದಲೂ, ಅಗ್ನ್ಯಾದಿದೇವತೆಗಳಿಗೆ ವಿಶೇಷತೃಪ್ತಿಯನ್ನುಂಟುಮಾಡಿ,ಲಕ್ಷೋಪಲಕ್ಷಗೋವ್ರಗಳನ್ನು ದಕ್ಷಿಣೆಯಾಗಿ ಕೊಟ್ಟು,ತಪೋನಿರತನಾಗಿ,ಸತ್ಯಸಂಧನಾಗಿ,ಈ ಭೂಮಂಡಲವನ್ನು ಪರಿಪಾಲಿಸಿದ ಆ ದಶರಥ ಮಹಾರಾಜನಿಗೆ ಪ್ರಿಯಪುತ್ರನಾದ ಈತನು,ಒಬ್ಬಸ್ತ್ರೀಯ ನಿಮಿತ್ತವಾಗಿ ಸಿನ್ನಲ್ಲಿ ಮರೆಹುಗುತ್ತಿರುವನು ಈ ಅಣ್ಣತಮ್ಮಂದಿರಿಬ್ಬರೂ ನಿನ್ನೊಡನೆ ಸ್ನೇಹವನ್ನು ಕೋರುವರು ಇವರಿಬ್ಬರೂ ಬಹಳ ಪೂಜನೀಯರು ಇವರಿಬ್ಬರನ್ನೂ ನೀನು ಯಥೋಚಿತವಾಗಿ ಪ್ರತಿಗ್ರಹಿಸಿ ಪೂಜಿಸಬೇಕು" ಎಂದನು ಈ ಹನುಮಂತನ ವಾಕ್ಯವನ್ನು ಕೇಳಿ ಸುಗ್ರೀವನು, ಮನಸ್ಸಿನ ವ್ಯಾಕುಲವನ್ನು ಬಿಟ್ಟು, ಸಂತೋಷದಿಂದ ಹಿಗ್ಗುತ್ತ, ಮೊದಲು ಈ ರಾಜಕುಮಾರರವಿಷಯವಾಗಿ ತನಗಿದ್ದ ಅಪರಿಮಿತವಾದ ಭೀತಿಯನ್ನು ಬಿಟ್ಟು ನಿಶ್ಚಿಂತನಾದನು ಆಮೇಲೆ ವಾನರಶ್ರೇಷ್ಠನಾದ ಆ ಸುಗ್ರೀವನು ತನಗೆ ಸ್ವಾಭಾವಿಕವಾಗಿದ್ದ ಕಾಡುಕಪಿಯ ರೂಪವನ್ನು ಮರೆಸಿಕೊಂಡು ಪ್ರಿಯದರ್ಶನವುಳ್ಳ, *ಮನುಷ್ಯರೂಪವನ್ನು ಹೊಂದಿ, ಪ್ರೀತಿಪೂರ್ವಕವಾದ ನುಡಿಗಳಿಂದ ಅವ

---

* ಇಲ್ಲಿ ಹನುಮಂತನು ಹೇಳಿದುದನ್ನು ಕೇಳಿದಮೇಲೆ ಸುಗ್ರೀವನು ಮನುಷ್ಯರೂಪವನ್ನು ಧರಿಸಿದುದಾಗಿ ಹೇಳಿರುವುದರಿಂದ, ಹನುಮಂತನು ರಾಮಲಕ್ಷ್ಮಣರನ್ನು ಬೇರೊಂದು ಸ್ಥಳದಲ್ಲಿರಿಸಿದ್ದು,ಇವರ ಆಗಮನವನ್ನು ಸುಗ್ರೀವನಿಗೆ ಮೊದಲು ತಿಳಿಸಿದನೆಂದೂಹ್ಯವು.

ರನ್ನು ಮಾತಾಡಿಸುವನು ''ಎಲೈ ಮಹಾತ್ಮರೆ' ನೀವಾದರೋ ಧರ್ಮದಲ್ಲಿ ಚೆನ್ನಾಗಿ ಶಿಕ್ಷಿತರಾದವರು ಬಹಳ ಪರಾಕ್ರಮವುಳ್ಳವರು ಸಮಸ್ತಪ್ರಾಣಿಗಳಲ್ಲಿಯೂ ವಾತ್ಸಲ್ಯವುಳ್ಳವರು ನಿಮ್ಮ ಗುಣಾತಿಶಯಗಳೆಲ್ಲವನ್ನೂ ಯಥಾಸ್ಥಿತವಾಗಿ ಈ ಹನುಮಂತನು ನನಗೆ ತಿಳಿಸಿದನು ಇಷ್ಟುಗುಣಾಢ್ಯರಾದ ನಿಮ್ಮಂತವರು,ಕೇವಲ ವಾನರನಾದ ನನ್ನೊಡನೆ ಸ್ನೇಹವನ್ನು ಬಳೆಸಬೇಕೆಂದು ಬಂದಮೇಲೆ,ಇದಕ್ಕಿಂತಲೂ ಮೇಲಾದ ಗೌರವವೂ,ಉತ್ತಮವಾದ ಲಾಭವೂ, ನನಗೆ ಬೇರಯಾವುದುಂಟು? ರಾಮಾ'ನಿಜವಾಗಿ ನನ್ನಸ್ನೇಹವು ನಿನಗೆ ಇಷ್ಟವಾಗಿದ್ದರೆ,ಇದೋ ಕೈಸೀಡಿರುವನು.ನಿನ್ನ ಕೈಯ್ಯಿಂದ ಈ ನನ್ನ ಕೈಯನ್ನು ಹಿಡಿದು ಈ ಸ್ನೇಹಕ್ಕೆ ಎಂದಿಗೂ ಚ್ಯುತಿಯಿಲ್ಲದಂತೆ ದೃಢಪಡಿಸು"ಎಂದನು ಇದನ್ನು ಕೇಳಿದೊಡನೆ ರಾಮನಿಗೆ ಪರಮಸಂತೋಷವುಂಟಾಯಿತು ತನ್ನ ಕೈಯಿಂದ ಸುಗ್ರೀವನ ಕೈಯನ್ನು ಗ್ರಹಿಸಿದನು ಮೇಲೆ ಮೇಲೆ ದೃಢವಾದ ಸ್ನೇಹಭಾವನನ್ನು ತೋರಿಸುತ್ತಾ, ಸುಗ್ರೀವನನ್ನು ಬಿಗಿಯಾಗಿ ಅಪ್ಪಿಕೊಂಡನು ಇತ್ತಲಾಗಿ ಹನುಮಂತನು ರಾಮಲಕ್ಷ್ಮಣರಿಗೆ ತನ್ನ ನಿಜರೂಪವನ್ನು ತೋರಿಸಿದಮೇಲೆ, ಸುಗ್ರೀವನಬಳಿಗೆ ಬರುವಾಗ ರಾಜಾಜ್ಞೆಯನ್ನು ಮೀರಬಾರದೆಂಬುದಕ್ಕಾಗಿ *ಪುನಃ ಭಿಕ್ಷುರೂಪವನ್ನೇ ಧರಿಸಿ, ರಾಮಲಕ್ಷ್ಮಣರೊಡಗೂಡಿ ಸುಗ್ರೀವನಬಳಿಗೆ ಬಂದಿದ್ದನು ಈಗ ಸುಗ್ರೀವನ ಮುಂದೆ, ಆ ಭಿಕ್ಷುರೂಪವನ್ನು ಬಿಟ್ಟು, ನಿಜರೂಪವನ್ನು ಧರಿಸಿ, ಅರಣಿಕಾಷ್ಠಗಳನ್ನು ಜಜ್ಜಿ ಬೆಂಕಿಯನ್ನು ಹುಟ್ಟಿಸಿದನು ಆಮೇಲೆ ಜ್ವಲಿಸುತ್ತಿರುವ ಆ ಅಗ್ನಿಯನ್ನು ಯಥಾವಿಧಿಯಾಗಿ ಪೂಜಿಸಿ, ಆ ಸಂಸ್ಕೃತಾಗ್ನಿಯನ್ನು ರಾಮ ಸುಗ್ರೀವರ ನಡುವೆ ತಂದಿಟ್ಟನು ಆಗ ರಾಮಸುಗ್ರೀವರಿಬ್ಬರೂ, ಕೈಹಿಡಿದುಕೊಂಡು ಆ ಅಗ್ನಿಯನ್ನು ಪ್ರದಕ್ಷಿಣವಾಗಿ ಸುತ್ತಿಬಂದು, ಅಗ್ನಿಸಾಕ್ಷಿಕವಾಗಿಯೇ ಸ್ನೇಹವನ್ನು ಮಾಡಿದರು ಇಬ್ಬರೂ ಪರಮಸಂತುಷ್ಟಚಿತ್ತರಾಗಿ, ಒಬ್ಬರನ್ನೊಬ್ಬರು ಎಷ್ಟುನೋಡುತಿದ್ದರೂ ತೃಪ್ತಿಹೊಂದದೆ ನಿಂತಿದ್ದರು

* ಇಲ್ಲಿ ಪುನಃ ಹನುಮಂತನು ಭಿಕ್ಷುರೂಪವನ್ನು ಬಿಟ್ಟನೆಂಬುದರಿಂದ, ಇವನು ರಾಮಲಕ್ಷ್ಮಣರನ್ನು ಕರೆತರುವಾಗ, ಸುಗ್ರೀವನ ನಂಬಿಕೆಗಾಗಿ ಮೊದಲು ತಾನು ಬಿಟ್ಟಿದ್ದ ಭಿಕ್ಷುರೂಪವನ್ನೇ ಪುನ ತಾಳಿಬಂದನೆಂದೂ ಗ್ರಾಹ್ಯವು

ಆಗ ಸುಗ್ರೀವನು ಸಂತೋಷದಿಂದ ರಾಮನನ್ನು ನೋಡಿ, ''ಎಲೈ ರಾಮನೆ! ನಿ
ನಗಿಂತಲೂ ನನಗೆ ಬೇರೆ ಪ್ರಿಯಮಿತ್ರನಿಲ್ಲವು ಈಗ ನಿನ್ನ ದುಃಖವೂ ನನ್ನ ದುಃ
ಖವೂ ಒಂದಾಯಿತು ಹಾಗೆಯೇ ನಿನ್ನ ಸುಖವೂ ನನ್ನ ಸುಖವೂ ಒಂದೇ ಆ
ಗಿರುವುದು" ಎಂದನು ಆಮೇಲೆ ಸುಗ್ರೀವನು ವಿಶೇಷಪತ್ರಗಳುಳ್ಳ ದಾ
ಗಿಯೂ, ಚೆನ್ನಾಗಿ ಪುಷ್ಪಿಸಿಯೂ ಇರುವ ಒಂದು ಸಾಲವೃಕ್ಷದ ಶಾಖೆಯ
ನ್ನು ಮುರಿದು ತಂದು, ಅದನ್ನು ನೆಲದಮೇಲೆ ಹಾಸಿ ರಾಮನೊಡನೆ ತಾನೂ
ಕುಳಿತುಕೊಂಡನು- ಆಮೇಲ ಹನುಮಂತನು ಲಕ್ಷ್ಮಣನಿಗಾಗಿ ಪುಷ್ಪಿತ
ವಾದ ಒಂದು ಚಂದನವೃಕ್ಷದ ಶಾಖೆಯನ್ನು ಮುರಿದುತಂದು ಹಾಸಿದನು
ಆಗ ಸುಗ್ರೀವನು ಉಕ್ಕಿಬರುವ ಸಂತೋಷದಿಂದ ಕಣ್ಣುಗಳಲ್ಲಿ ಆನಂ
ಬಾಷ್ಪವನ್ನು ಸುರಿಸುತ್ತ, ರಾಮನನ್ನು ನೋಡಿ ಮೃದುಮಧುರವಾಕ್ಯದಿಂ
ದ ''ರಾಮಾ! ನನ್ನಣ್ಣನು ನನ್ನನ್ನು ವಂಚಿಸಿ, ನನ್ನ ಪತ್ನಿಯನ್ನೂ ಅಪಹರಿಸಿರು
ವನು ಅವನ ಭಯಕ್ಕಾಗಿಯೇ ನಾನು ಈ ದುರ್ಗಮವಾದ ವನವನ್ನಾಶ್ರ
ಯಿಸಿರುವನು ಈಗ ನನ್ನಿನ್ನೇ ಒಕ್ಕಾಗಿ ನಂಬಿರುವೆನು ಆ ವಾಲಿಯು ನನ್ನನ್ನು
ವಂಚಿಸಿದುದಲ್ಲದೆ,ನನ್ನಲ್ಲಿ ಮಹಾವೈರವನ್ನಿಟ್ಟಿರುವುದರಿಂದ,ನಾನು ಅವನ ಭ
ಯದಿಂದ ದಿಗ್ಭ್ರಮವನ್ನು ಹೊಂದಿ ಏನೂತೋರದ ಈ ಕಾಡಿನಲ್ಲಿ ಅವಿತು
ಕೊಂಡಿರುವೆನು ಎಲೈ ಮಹಾತ್ಮನೆ! ಆ ವಾಲಿಯ ಭಯದಿಂದ ಪೀಡಿತನಾದ
ನನಗೆ ಅಭಯವನ್ನು ಕೊಟ್ಟು ಕಾಪಾಡಬೇಕು" ಎಂದನು ಇದನ್ನು ಕೇಳಿ ಧ
ರ್ಮವತ್ಸಲನಾದ ರಾಮನು ಸುಗ್ರೀವನನ್ನು ನೋಡಿ ''ಇದೆಷ್ಟುಮಾತ್ರದ ಕೆ
ಲಸವು" ಎಂದುಹೇಳಿ, ಮಗುಳ್ನಗೆಯನ್ನು ತೋರಿಸುತ್ತ, ''ಎಲೈ ಕಪಿರಾಜನೆ!
ಸ್ನೇಹವನ್ನು ಬಳೆಸಿದುದಕ್ಕೆ ಉಪಕಾರಮಾಡುವುದೇ ಫಲವೆಂಬುದನ್ನು ನಾ
ನು ಬಲ್ಲೆನು ನಿನ್ನ ಹೆಂಡತಿಯನ್ನು ಕದ್ದ ಆ ವಾಲಿಯನ್ನು ತಪ್ಪದೆ ಕೊಲ್ಲುವೆ
ನು ನನ್ನ ತೀಕ್ಷ್ಣಬಾಣಗಳು ಎಲ್ಲಿಯೂ ವಿಫಲವಾಗತಕ್ಕುವಲ್ಲ ಸೂರ್ಯನಿಗೆ
ಸಮಾನವಾದುವು ಗರಿಗಳಿಂದ ಕೂಡಿ ಮಹಾವೇಗವುಳ್ಳವುಗಳಾಗಿ, ಇಂದ್ರ
ನ ವಜ್ರಾಯುಧದಂತೆ ಅತಿತೀಕ್ಷ್ಣಗಳಾಗಿ,ಬಲವಾದ ಗಿಣ್ಣುಗಳುಳ್ಳ ಈ
ನನ್ನ ಬಾಣಗಳನ್ನು ಕೋಪಗೊಂಡ ವಿಷಸರ್ಪಗಳೆಂದೇ ತಿಳಿ ! ಸರ್ಪಸಮಾನ
ಗಳಾದ ಈ ಬಾಣಗಳು ದುರ್ವೃತ್ತನಾದ ಆ ವಾಲಿಯಮೇಲೆ ಬಿದ್ದು,ಇದೋ!

ತೀಕ್ಷ್ಣದಲ್ಲಿಯೇ ಅವನ ಪ್ರಾಣಗಳನ್ನು ಹೀರಿಬಿಡುವುವು. ಉರಿದುಬಿದ್ದ ಬೆಟ್ಟದಂತೆ ನಿನ್ನ ವೈರಿಯಾದ ವಾಲಿಯು ನೆಲದಮೇಲೆ ಬೀಳುವುದನ್ನು ನೋಡುವೆ" ಎಂದನು ಹೀಗೆ ರಾಮನು ಹೇಳಿದ ವಾಕ್ಯವನ್ನು ಕೇಳಿ ಸುಗ್ರೀವನು ಸಂತೋಷದಿಂದುಬ್ಬಿ, ಸಾರವತ್ತಾದ ಮಾತಿನಿಂದ "ಎಲ್ಲೈ ಪುರುಷಶ್ರೇಷ್ಠನೆ! ಹಾಗಿದ್ದರೆ ನಿನ್ನ ಅನುಗ್ರಹಬಲದಿಂದ ನಾನು ನನ್ನ ಪ್ರಿಯೆಯನ್ನೂ, ನನ್ನ ರಾಜ್ಯವನ್ನೂ ಹಿಂತಿರುಗಿ ಪಡೆಯಬಹುದು ಇನ್ನು ನೀನು ನನಗೆ ವೈರಿಯಾದ ಆ ವಾಲಿಯನ್ನು ಕೂಲ್ಲುವುದಕ್ಕೆ ಪ್ರಯತ್ನಿಸಬೇಕು" ಎಂದನು ಹೀಗೆ ರಾಮಸುಗ್ರೀವರಿಬ್ಬರೂ ಅಗ್ನಿಸಾಕ್ಷಿಕವಾಗಿ ಪರಸ್ಪರಸ್ನೇಹವನ್ನು ಮಾಡುವಕಾಲದಲ್ಲಿ ಅತ್ತಲಾಗಿ ಪದ್ಮದಳದಂತೆ ಶೋಭಿಸುತ್ತಿರುವ ಸೀತೆಯ ಎಡದಕಣ್ಣೂ, ಬಂಗಾರದಂತೆ ಹೊಂಬಣ್ಣವುಳ್ಳ ವಾಲಿಯ ಎಡದಕಣ್ಣೂ, ಅಗ್ನಿಯಂತ ಉರಿಯುತ್ತಿರುವ ರಾವಣನ ಎಡದಕಣ್ಣೂ ಏಕಕಾಲದಲ್ಲಿ ಅದಿರಿದುವು ಇಲ್ಲಗೆ ಐದನೆಯ ಸರ್ಗವು


ಸುಗ್ರೀವನು ರಾಮನ ಕಾರ್ಯವನ್ನು ನಿರ್ವಹಿಸುವುದಾಗಿ ಪ್ರತಿಜ್ಞೆಮಾಡಿದುದು

ಆಮೇಲೆ ಪುನಃ ಸುಗ್ರೀವನು ರಘುಪುತ್ರನಾದ ರಾಮನನ್ನು ಕುರಿತು ಸಂತೋಷದಿಂದ, "ರಾಮಾ! ನನ್ನ ಮಂತ್ರಿಶ್ರೇಷ್ಠನಾದ ಈ ಹನುಮಂತನು, ನೀನು ನಿರ್ಜನವಾದ ಕಾಡಿಗೆ ಹೊರಟುಬಂದ ಕಾರಣವನ್ನು ಹೇಳಿರುವನು ನೀನು ತಮ್ಮನಾದ ಲಕ್ಷ್ಮಣನೊಡನೆ ಕಾಡಿನಲ್ಲಿ ವಾಸಮಾಡುತ್ತಿರುವಾಗ, ಜನಕಪುತ್ರಿಯಾದ ನಿನ್ನ ಪತ್ನಿಯು ರಾಕ್ಷಸನಿಂದ ಅಪಹೃತಳಾದಳೆಂಬುದನ್ನೂ ಕೇಳಿದೆನು ನೀನೂ ಧೀಮಂತನಾದ ಈ ಲಕ್ಷ್ಮಣನೂಇಲ್ಲದ ವೇಳಯಲ್ಲಿ, ಅದೇಸಮಯವನ್ನು ನಿರೀಕ್ಷಿಸುತಿದ್ದ ಆ ರಾಕ್ಷಸನು, ಅಡ್ಡಲಾಗಿ ಬಂದ ಜಟಾಯುವನ್ನೂ ಕೊಂದು,ಭಯದಿಂದ ತತ್ತರಿಸಿ ಗೋಳಿಡುತ್ತಿರುವ ನಿನ್ನ ಪತ್ನಿಯನ್ನೆತ್ತಿಕೊಂಡು ಹೋದುದಾಗಿಯೂ ಕೇಳಿದೆನು ಆದರೇನು! ಎಲ್ಲೈಮಿತ್ರನೆ! ಇನ್ನು ಸ್ವಲ್ಪಕಾಲದೊಳಗಾಗಿಯೇ ನಿನಗೆ ಪತ್ನೀವಿಯೋಗದಿಂದುಂಟಾಗಿರುವ ಈ ದುಃಖವು ನೀಗುವುದೆಂದು ತಿಳಿ! ಅವಳು ಪಾತಾ

ಳದಲ್ಲಿ ಮುಚ್ಚಿಡಲ್ಪಟ್ಟಿದ್ದರೂ, ಅಥವಾ ಆಕಾಶದಲ್ಲಿ ಬಚ್ಚಿಡಲ್ಪಟ್ಟಿದ್ದರೂ ನಾನು ಬಿಡುವವನಲ್ಲ ಮಧುಕೈಟಭರು ಕದ್ದುಯ್ದ ಶ್ರುತಿಯನ್ನು ವಿಷ್ಣುವು ಉದ್ಧರಿಸಿ ತಂದಂತೆ,ಅವಳನ್ನು ಎಲ್ಲಿದ್ದರೂ ನಿನಗೆ ನಾನುತಂದೊಪ್ಪಿಸುವೆನು. ರಾಮಾ! ಈಗ ನಾನು ಹೇಳುವುದನ್ನು ನಿಜವೆಂದು ದೃಢವಾಗಿ ನಂಬು! ಎಲೈ ಮಹಾಬಾಹುವಾದ ರಾಮನೆ! ವಿಷಮಿಶ್ರವಾಗಿ ಮಾಡಲ್ಪಟ್ಟ ಭಕ್ಷ್ಯವನ್ನು ಭುಜಿಸಿದವರಂತೆ, ಇಂದ್ರನೂಡಗೂಡಿದ ದೇವಾಸುರರಾದರೂ ನಿನ್ನ ಪತ್ನಿಯನ್ನು ಬಚ್ಚಿಟ್ಟು ಬದುಕಲಾರರೆಂದು ತಿಳಿ! ಎಲೈವೀರನೆ! ಇನ್ನು ನಿನ್ನ ದುಃಖವನ್ನು ಬಿಡು! ಆಕೆಯನ್ನು ನಾನೇ ನಿನಗೆ ತಂದೊಪ್ಪಿಸುವೆನು ನನಗೆ ಹಿಂದೆ ಒಂಕು ಅನುಮಾನವೂ ಹುಟ್ಟದ! ಅವಳೇ ನಿನ್ನ ಪತ್ನಿಯಾದಸೀತೆಯೆಂಬುದರಲ್ಲಿ ಸಂದೇಹವಿಲ್ಲ ಕ್ರೂರಕರ್ಮಿಯಾದ ರಾಕ್ಷಸನೊಬ್ಬನು ಆಕೆಯನ್ನೆತ್ತಿಕೊಂಡು ಅಂತರಿಕ್ಷದಲ್ಲಿ ಹೋಗುತಿದ್ದುದನ್ನು ಕಂಡೆನು ಆಕಾಲದಲ್ಲಿ ಆಕೆಯು ‘‘ರಾಮಾ! ರಾಮಾ!! ಲಕ್ಷ್ಮಣಾ!!!” ಎಂದು ದೀನಸ್ವರದಿಂದ ಕೂಗಿಕೊಳ್ಳುತಿದ್ದಳು ಹೆಣ್ಣುಹಾವಿನಂತೆ ರಾವಣನ ತೊಡೆಯಲ್ಲಿ ಸಿಕ್ಕಿ ನರಳುತ್ತಿದ್ದಳು ಆ ಕಾಲದಲ್ಲಿ ನಾನು ಬೇರೆನಾಲ್ಕುಮಂದಿ ಕಪಿಗಳೊಡನೆ ಈ ಬೆಟ್ಟದ ತಪ್ಪಲಲ್ಲಿ ಕುಳಿತಿದ್ದೆನು ನಮ್ಮನ್ನು ಕಂಡು ಆಕೆಯು ತನ್ನ ಆಭರಣಗಳನ್ನು ತೆಗೆದು,ತಾನು ಹೊದೆದಿದ್ದ ಉತ್ತರೀಯದಲ್ಲಿ ಕಟ್ಟಿ ನಮ್ಮ ಕಡೆಗೆ ಬಿಸುಟಳು ನಾವು ಅದನ್ನು ತೆಗೆದು ಸುರಕ್ಷಿತವಾಗಿಟ್ಟಿರುವೆವು ಬೇಕಾದರೆ ಈಗಲೂ ಅವುಗಳನ್ನು ತಂದು ನಿನಗೆ ತೋರಿಸುವೆವು ನೀನು ಅವುಗಳ ಗುರುತನ್ನು ಕಂಡು ಹಿಡಿಯಬಹುದು” ಎಂದನು ಈ ಪ್ರಿಯವಾಕ್ಯವನ್ನು ಕೇಳಿದೊಡನೆ ರಾಮನು ಅತ್ಯಾತುರದಿಂದ ಸುಗ್ರೀವನನ್ನು ಕುರಿತು. *‘‘ಮಿತ್ರನೆ! ಹಾಗಾದರೆ ಶೀಘ್ರದಲ್ಲಿ ಅವುಗಳನ್ನು ತರಿಸು! ಹೀಗಿದ್ದರೂ ನೀನು ತಾಮಸಮಾಡಬಹುದೆ!” ಎಂದನು ಆ ಕ್ಷಣವೇ ಸುಗ್ರೀವನು ದುರ್ಗಮವಾದ ತನ್ನ ಗುಹೆಯನ್ನು ಪ್ರವೇಶಿಸಿ, ರಾಮು

---

* ಹೀಗೆ ಆಭರಣಗಳನ್ನು ನೋಡಿದೊಡನೆ ಸೀತೆಯೆನ್ನು ನೋಡುವುದಕ್ಕಾಗಿ ರಾಮನು ಆತುರಪಡುತಿದ್ದನೆಂಬುದರಿಂದ, ಚೇತನನೆನೆ ಯಾದೃಚ್ಛಿಕಪ್ರಾಸಂಗಿಕಸುಖ್ಯತಗಳನ್ನು ನೋಡುವುದರಿಂದ, ಭಗವಂತನಿಗೆ ಆತನನ್ನು ಪಡೆಯಬೇಕೆಂಬ ತ್ವರೆಯು ಹುಟ್ಟುವುದೆಂಬ ತತ್ವಾರ್ಥವು ಧ್ವನಿತವಾಗುವುದು



1373. ಸುಗ್ರೀವನು ಸೀತೆಯ ಆಭರಣಗಳನ್ನು ರಾಮನಿಗೆ ತೋರಿಸಲು, ರಾಮನು ಅವುಗಳನ್ನು ನೋಡಿ ವ್ಯಸನಪಟ್ಟುದು.

ನಿಗೆ ಪ್ರಿಯವನ್ನುಂಟುಮಾಡಬೇಕೆಂಬ ಆತುರದಿಂದ,ಅಲ್ಲಿ ತಾನುಬಚ್ಚಿಟ್ಟಿದ್ದ ಉತ್ತರೀಯವನ್ನೂ, ಉತ್ತಮವಾದ ಆಭರಣಗಳನ್ನೂ ತಂದು ,,ರಾಮಾ! ಇದೋ!ನೋಡು"ಎಂದು ತೋರಿಸಿದನು ಆಗ ರಾಮನು ಆ ಉತ್ತರೀಯವನ್ನೂ ಆಭರಣಗಳನ್ನೂ ಕೈಗೆತ್ತಿಕೊಂಡೊಡನೆ ಮಂಜುಮುಚ್ಚಿದ ಚಂದ್ರನಂತೆ ಅವನಕಣ್ಣಿನಲ್ಲಿ ನೀರುತುಂಬಿತು ಸೀತೆಯಲ್ಲಿ ತನಗಿರುವ ಅಪಾರವಾದ ಸ್ನೇಹದಿಂದ ದುಃಖವನ್ನು ತಡೆಯಲಾರದೆ ಧೈರ್ಯಗುಂದಿ ಕಣ್ಣೀರುಬಿಡುತ್ತ,,,ಹಾ! ಪ್ರಿಯೇ!" ಎಂದು ಉಚ್ಚಸ್ವರದಿಂದ ಪ್ರಲಾಪಿಸಿ, ಹಾಗೆಯೇ ಮೂರ್ಛಿತನಾಗಿ ನೆಲದಮೇಲೆ ಬಿದ್ದನು ಮತ್ತು ಆ ಆಭರಣಗಳನ್ನು ಬಾರಿಬಾರಿಗೂ ಎದೆಗೊತ್ತಿಕೊಂಡು, ಹುತ್ತದಲ್ಲಿ ಅಡಗಿ ಕೋಪದಿಂದ ಬುಸುಗುಟ್ಟುತ್ತಿರುವ ಹಾವಿನಂತೆ ಉದ್ವಾಗಿ ನಿಟ್ಟುಸಿರನ್ನು ಬಿಡುತಿದ್ದನು ಅವನ ಕಣ್ಣುಗಳಲ್ಲಿಎಡೆಬಿಡದೆ ನೀರು ತುಳುಕುತಿತ್ತು ಆಗ ಪಕ್ಕದಲ್ಲಿದ್ದ ಲಕ್ಷ್ಮಣನನ್ನು ನೋಡಿ ದೈನ್ಯದಿಂದ ಪ್ರಲಾಪಿಸತೊಡಗಿದನು ,,ವತ್ಸಲಕ್ಷ್ಮಣಾ! ನನ್ನಪ್ರಿಯೆಯಾದ ಸೀತೆಯು ರಾಕ್ಷಸನಿಂದ ಕದ್ದುಯ್ಯಲ್ಪಡುವಾಗ,ಕೆಳಕ್ಕೆ ಬಿಸುಟ ಉತ್ತರೀಯವನ್ನೂ, ಉತ್ತಮಾಭರಣಗಳನ್ನೂ ನೋಡಿದೆಯಾ? ಆ ಸೀತೆಯು ಕದ್ದುಯ್ಯಲ್ಪಡುವಾಗ ತನ್ನ ಆಭರಣವನ್ನು ಇದೋ!ಇಲ್ಲಿನ ಶಾದ್ವಲಪ್ರದೇಶದಲ್ಲಿಯೇ ಬಿಸುಟಿರುವಳೆಂಬುದರಲ್ಲಿ ಸಂದೇಹವಿಲ್ಲ ಇದು ಅವಳ ಆಭರಣಗಳೆಂಬುದಕ್ಕೆ ತಕ್ಕಗುರುತುಗಳೆಲ್ಲವೂ ಹಾಗೆಯೇ ಕಾಣುತ್ತಿರುವುವು ನೋಡು!" ಎಂದನು ಇದನ್ನುಕೇಳಿ ಲಕ್ಷ್ಮಣನು ರಾಮನನ್ನುಕುರಿತು, ,,ಅಣ್ಣಾ! ಇರಬಹುದು! ಆದರೆ ಅವಳ ಕೈಬಳೆಗಳನ್ನಾಗಲಿ, ಕಿವಿಯೊಲೆಗಳನ್ನಾಗಲಿ ಇದುವರೆಗೆ ನಾನು ಕಣ್ಣೆಟ್ಟು ನೋಡಿದವನಲ್ಲ ಅವುಗಳ ಗುರುತುಗಳನ್ನೂ ನಾನು ಕಾಣೆನು ನಾನು ಆಕಗೆ ಪ್ರತಿದಿನವೂ ಪಾದಾಭಿವಂದನವನ್ನು ಮಾಡುತಿದ್ದವನಾದುದರಿಂದ,ಅವಳ ಕಾಲಂದುಗೆಗಳ ಗುರುತನ್ನುಮಾತ್ರ ನಾನುಚೆನ್ನಾಗಿ ಬಲ್ಲೆನೇಹೊರತು ಬೇರೊಂದನ್ನೂ ಕಾಣೆನು" ಎಂದನು ಆಗ ರಾಮನು ದುಃಖದಿಂದ ಸುಗ್ರೀವನನ್ನುನೋಡಿ, ,,ಎಲೈಮಿತ್ರನೆ! ಕ್ರೂರನಾದ ಆ ರಾಕ್ಷಸನು ನನಗೆ ಪ್ರಾಣಕ್ಕಿಂತಲೂ ಪ್ರಿಯತಮಳಾದ ಸೀತೆಯನ್ನು ಯಾವ ಕಡೆಗುಯ್ಯುತಿದ್ದನು? ಅವಳನ್ನು ನೀನು ಕಂಡುದೆಲ್ಲಿ?ಹೇಳು!ನನಗೆ ಇಂತಹ ಮ

ಹಾವ್ಯಸನವನ್ನುಂಟುಮಾಡಿದ ಆ ಕ್ರೂರರಾಕ್ಷಸನು ಎಲ್ಲಿ ವಾಸಮಾಡುತ್ತಿರಬಹುದು? ಅವನೊಬ್ಬನಿಗಾಗಿ ಈಗ ನಾನು ಸಮಸ್ತರಾಕ್ಷಸರನ್ನೂ ನಿರ್ಮೂಲಮಾಡಬೇಕಾಗಿ ಬಂದಿರುವುದು ಮುಖ್ಯವಾಗಿ ಸೀತೆಯನ್ನ ಪಹರಿಸಿ ನನಗೆ ಇಷ್ಟುಕೋಪವನ್ನುಂಟುಮಾಡಿದ ಆ ನೀಚರಾಕ್ಷಸನು, ತನ್ನ ಪ್ರಾಣನಾಶಕ್ಕಾಗಿ ಮೃತ್ಯುದ್ವಾರವನ್ನು ತೆರೆದುಕೊಂಡು ಸಿದ್ಧವಾಗಿ ನಿಂತಿರುವನಲ್ಲದೆ ಬೇರೆಯೆಲ್ಲ! ಎಲೈ ವಾನರರಾಜನೆ! ಯಾವರಾಕ್ಷಸನು ನನ್ನ ಪ್ರಿಯಪತ್ನಿಯನ್ನು ಈ ಕಾಡಿನಿಂದ ಬಲಾತ್ಕರಿಸಿ ಕದ್ದುಯ್ದಿರುವನೋ, ಆ ನನ್ನ ಶತ್ರುವು ಎಲ್ಲಿರುವನೆಂಬುದನ್ನು ಈಗಲೇ ನನಗೆ ತಿಳಿಸು! ಈಕ್ಷಣವೇ ಅವನನ್ನು ಯಮಪುರಿಗೆ ಕಳುಹಿಸಿಬರುವೆನು" ಎಂದನು. ಇಲ್ಲಿಗೆ ಆರನೆಯ ಸರ್ಗವು

ರಾಮನು ಸುಗ್ರೀವನಿಗೆ ವಾಲಿಯನ್ನು ವಧಿಸುವುದಾಗಿ ಪ್ರತಿಜ್ಞೆಮಾಡಿಕೊಟ್ಟು, ಆತನನ್ನು ಸಂತೋಷಪಡಿಸಿದುದು

ಹೀಗೆ ದುಃಖಾರ್ತನಾದ ರಾಮನ ವಾಕ್ಯವನ್ನು ಕೇಳಿದೊಡನೆ ಸುಗ್ರೀವನು, ಕಣ್ಣುಗಳಲ್ಲಿ ನೀರುತುಂಬಿಕೊಂಡು, ಆ ದುಃಖದಿಂದಲೇ ಗದ್ಗದಸ್ವರವುಳ್ಳವನಾಗಿ ರಾಮನಿಗೆ ಕೈಮುಗಿದು, "ಎಲೈ ಅರಿಂದಮನೆ! ನಿಜವಾಗಿ *ಆ ಪಾಪಿರಾಕ್ಷಸನೆಲ್ಲಿರುವನೆಂಬುದನ್ನು ನಾನು ಕಾಣೆನು ಅವನ ಸಾಮ

---

* ಮೇಲೆ ಹೇಳಿದ ಸುಗ್ರೀವನ ಮಾತಿನ ವಿಷಯದಲ್ಲಿ ಸ್ವಲ್ಪವಿವಾದವುಂಟು ಏನೆಂದರೆ —"ಸುಗ್ರೀವನು ಮುಂದೆ ಸೀತಾನ್ವೇಷಣಾರ್ಥವಾಗಿ ಕಪಿಗಳನ್ನು ಕಳುಹಿಸುವಾಗ "ದ್ವೀಪಸ್ತ್ವಸ್ಯಾಪರೇಪಾರೇ ಶತಯೋಜನಮಾಯತ । ಅಗವ್ಯೋ ಮಾನುಷೈರ್ದೇವೈಸ್ತಂ ಮಾರ್ಗಧ್ವಂ ಸಮಂತತಃ ॥ ಸಹಿ ದೇಶಸ್ತು ವಧ್ಯಸ್ಯ ರಾವಣಸ್ಯ ದುರಾತ್ಮನಃ । ರಾಕ್ಷಸಾಧಿಪತೇರ್ವಾಸ ಸಹಸ್ರಾಕ್ಷಸಮದ್ಯುತೇಃ" ಎಂಬುದಾಗಿ ರಾವಣನ ಬಲಪರಾಕ್ರಮಗಳನ್ನೂ, ಅವನ ವಾಸಸ್ಥಾನದ ಗುರುತನ್ನೂ ಸ್ಪಷ್ಟವಾಗಿ ಹೇಳಿರುವನು. ಇದರಿಂದ ಸುಗ್ರೀವನಿಗೆ ಅವೆಲ್ಲವೂ ಚೆನ್ನಾಗಿ ತಿಳಿದಿತ್ತೆಂದೇ ಸ್ಪಷ್ಟವಾಗುವುದು ಹಾಗಿದ್ದರೂ ಇಲ್ಲಿ ತನಗೆ ಸೀತೆಯನ್ನ ಪಹರಿಸಿದ ರಾಕ್ಷಸನ ಸ್ಥಿತಿಗತಿಗಳೊಂದೂ ತಿಳಿದಿಲ್ಲವೆಂದು ಹೇಳಿದುದರಿಂದ ಸುಳ್ಳಾಡಿದಂತಾಗಲಿಲ್ಲವೆ?" ಎಂಬ ಆಕ್ಷೇಪವು ಬರುವುದು ಸು

ರ್ಥ್ಯವಾಗಲಿ,ಅವನ ವೀರ್ಯವಾಗಲಿ ಎಂತದೆಂಬುದನ್ನೂ ನಾನರಿಯೆನು ದು

ಗ್ರೀವನಿಗೆ ರಾವಣನ ಸ್ಥಿತಿಗತಿಗಳೆಲ್ಲವೂ ತಿಳಿದಿದ್ದುದೇನೋ ನಿಜವು ಆದರೆ ದೂರಾ ಲೋಚನೆಯುಳ್ಳ ಆ ಸುಗ್ರೀವನು,ರಾಮನಿಂದ ತನ್ನ ಕಾರ್ಯವನ್ನು ಮಾಡಿಸಿಕೊಳ್ಳುವುದಕ್ಕಾಗಿಯೇ,ತನಗೆ ರಾವಣನ ವಿಷಯವೇನೂ ತಿಳಿಯದಂತೆ ನಟಿಸಿರುವನು. ಈ ಕಾರಣದಿಂದಲೇ ಇವನು,ರಾಮನು ತನ್ನನ್ನು ಕುರಿತು, ''ಬ್ರೂಹಿ ಸುಗ್ರೀವ ಕಂ ದೇಶಂ ಹ್ರಿಯಂತೀ ಲಕ್ಷಿತಾ ತ್ವಯಾ"ಆ ಸೀತೆಯು ಯಾವದಾರಿಯಿಂದ ಉಯ್ಯಲ್ಪಡುತಿದ್ದಳು?" ಎಂದು ಕೇಳಿದುದಕ್ಕೂ ಪ್ರತ್ಯುತ್ತರವನ್ನು ಸರಿಯಾಗಿ ಹೇಳದೆ ಮರೆಸಿಬಿಟ್ಟನು ಇದರಿಂದಲೇ ಸುಗ್ರೀವನು,ತಾನು ಪ್ರತ್ಯಕ್ಷವಾಗಿ ನೋಡಿದ ವಿಷಯವನ್ನೂ ಮರೆಸಿಟ್ಟನೆಂಬುದು ಸ್ಪಷ್ಟವು ಆದರೆ ''ಹೀಗೆ ಮಾಡಿದುದರಿಂದ ಸುಗ್ರೀವನು ರಾನನು ವಿಷಯದಲ್ಲಿ ಮೊದಲೇ ಮಿತ್ರದ್ರೋಹವನ್ನು ಮಾಡಿದಂತಾಗಲಿಲ್ಲವೆ!" ಎಂದರೆ, ಬಹುದೂರಾಲೋಚನೆಯಿಂದಲೇ ಸುಗ್ರೀವನುಹೀಗೆ ಹೇಳಿರುವನೇ ಹೊರತು,ಇದು ಮಿತ್ರದ್ರೋಹವಲ್ಲ ಮೊದಲೇ ತಾನು ರಾಮನವೃತ್ತಾಂತವನ್ನು ತಿಳಿದಿರುವುದಾಗಿ ರಾಮನಿಗೆ ತಿಳಿಸಿಬಿಟ್ಟರೆ,ರಾಮನು ಸೀತಾನ್ವೇಷಣಕ್ಕಾಗಿಯೇ ಮೊದಲು ತನ್ನನ್ನು ನಿಯಮಿಸಿ ಬಿಡುವನು ವಾನರರೆಲ್ಲರೂ ವಾಲಿಗೆ ವಶರಾಗಿರುವುದರಿಂದ ಸಹಾಯಸಂಪತ್ತಿಲ್ಲದೆ ತಾನು ಆ ಕಾರ್ಯವನ್ನು ನಿರ್ವಹಿಸುವುದಸಾಧ್ಯವು ಅಥವಾ ಪ್ರಯತ್ನದಿಂದ ಕೆಲವು ವಾನರರನ್ನು ವಶಪಡಿಸಿಕೊಂಡರೂ, ವಾಲಿಯು ರಾವಣನಿಗೆ ಮಿತ್ರನಾಗಿಯೂ,ತನಗೆ ವೈರಿಯಾಗಿಯೂ ಇರುವುದರಿಂದ, ರಾವಣನ ಭಂಗವನ್ನಾಗಲಿ, ತನ್ನ ಕಾರ್ಯಸಾಧನೆಯನ್ನಾಗಲಿ ಸ್ವಲ್ಪಮಾತ್ರವೂ ಸಹಿಸಲಾರದೆ ಹೇಗಾದರೂ ಕಾರ್ಯಭಂಗವನ್ನು ಮಾಡಿಬಿಡಬಹುದು ಇದರಿಂದತನ್ನ ಮತ್ತು ರಾಮನ ಕಾರ್ಯಗಳೆರಡೂ ಕೆಡುವುವು ಇವೆಲ್ಲವನ್ನೂ ಪರ್ಯಾಲೋಚಿಸಿಯೇ ಸುಗ್ರೀವನು ತನಗೆ ಏನೊಂದೂ ತಿಳಿಯದಂತೆ ನಟಿಸಿದನೇಹೊರತು ಬೇರೆಯಿಲ್ಲವು. ''ಹಾಗಿದ್ದರೆ ಸುಗ್ರೀವನು ವಾನರರನ್ನು ಕಳುಹಿಸುವ ಕಾಲದಲ್ಲಿ ಹೇಳಿದ ಮಾತಿನಿಂದ,ಆತನುಮೊದಲು ತನ್ನನ್ನು ವಂಚಿಸಿಬಿಟ್ಟನೆಂಬ ಸಂದೇಹವು ರಾಮನಿಗಾದರೂಹುಟ್ಟಲಾರದೆ?"ಎಂಬ ಶಂಕೆಯುಂಟಾಗಬಹುದು ಅದಕ್ಕೂ ಅವಕಾಶವಿಲ್ಲ ' ಮುಂದೆ ಲಕ್ಷ್ಮಣನು ತಾರೆಯು ತನಗೆ ಹೇಳಿದ ರಾವಣವೃತ್ತಾಂತವನ್ನು ರಾಮನಲ್ಲಿ ತಿಳಿಸಿರುವನು ಸುಗ್ರೀವನೂ ಆ ಕೆಯೆ ಮೂಲಕವಾಗಿಯೇ ಆಮೇಲೆ ಈ ವೃತ್ತಾಂತವನ್ನು ಕೇಳಿ ತಿಳಿದಿರಬಹುದಾದುದರಿಂದ, ಆಮೇಲೆ ಆ ವಿಷಯವನ್ನೇ ಕಪಿಗಳಿಗೂ ಹೇಳಿರಬಹುದಾದಸಂಭವವುಂಟು ಅದರಿಂದ ರಾಮನಿಗೆ ಈ ಶಂಕೆಯುಂಟಾಗುವುದಕ್ಕೂ ಕಾರಣವಿಲ್ಲ.ಇದಲ್ಲದೆ ಹಿಂದೆ ಸುಗ್ರೀವನು ಚಕ್ರವಾಳಪರ್ವತದವರೆಗೂ ಈ ಭೂಮಿಯನ್ನೆಲ್ಲಾ ಸುತ್ತಿರುವುದಾಗಿ ತಿಳಿಸಲ್ಪ

ಷ್ಟುಕುಲದಲ್ಲಿ ಹುಟ್ಟಿದ ಆತನ ವಂಶವಾವುದೆಂಬುದನ್ನೂ ನಾನು ಕೇಳಿದವನಲ್ಲ

ಟ್ಟಿದೆ ಅಂತವನಿಗೆ ರಾವಣನ ಸ್ಥಲಬಲಾದಿಗಳು ತಿಳಿಯದೆಂಬುದು ಹೇಗೆ? ಹೀಗೆ ತಿಳಿದಿದ್ದರೂ ಅದನ್ನು ರಾಮನಿಗೆ ಮರೆಸಿಡಬೇಕೆಂಬುದೇ ಇವನ ಮುಖ್ಯೋದ್ದೇಶವು. ಈತನು ರಾಮನ ಬಲವನ್ನು ಪರೀಕ್ಷಿಸುವಾಗಲೂಕೂಡ, ವಾಲಿಯು ದುಂದುಭಿವೊದಲಾದ ವರನ್ನು ಜಯಿಸಿದ ವೃತ್ತಾಂತಗಳೆಲ್ಲವನ್ನೂ ಹೇಳಿದರೂ, ಅವನು ರಾವಣನನ್ನು ಜಯಿಸಿದೆ ವೃತ್ತಾಂತವನ್ನು ಮಾತ್ರ ಮರೆಸಿಬಿಟ್ಟನು ಹಾಗಿದ್ದರೆ ಸುಗ್ರೀವನಿಗೂ ವೊದಲು ಈ ವಿಷಯವೊಂದೂ ತಿಳಿಯದೆ ಆಮೇಲೆ ತಾರೆಯಿಂದ ತಿಳಿದಿರಬಾರದೆ?" ಎಂದರೆ, ತಾರೆಯನ್ನು ನೋಡಿದುದು ವೊದಲು ಕೇವಲಕಾಮಪರವಶನಾಗಿ ಲೋಕವ್ಯಾಪಾರಗಳನ್ನೇ ಮರೆತವನಹಾಗಿದ್ದ ಸುಗ್ರೀವನು, ಆ ತಾರೆಯೊಡನೆ ರಾಮಕಾರ್ಯವನ್ನಾಲೋಚಿಸಿದನೆಂಬುದೂ ಅಸಂಭವವು ಸುಗ್ರೀವನಿಗೆ ರಾವಣನ ಸ್ಥಿತಿಗತಿಗಳೊಂದೂ ನಿಜವಾಗಿ ತಿಳಿಯದಿದ್ದಪಕ್ಷದಲ್ಲಿ, ಹಿಂದೆ ರಾಮನು ಕೇಳಿದಾಗ ಸೀತೆಯು ಹೋದ ದಿಕ್ಕನ್ನಾದರೂ ಸ್ಪಷ್ಟವಾಗಿ ಹೇಳಿಬಿಡುತಿದ್ದನು ಹೀಗೆ ತನಗೆ ತಿಳಿದಿದ್ದ ವಿಷಯಗಳನ್ನೂ ರಾಮನಿಗೆ ತಿಳಿಸದೆಮರೆಸಿಬಿಟ್ಟಿರುವುದರಿಂದಲೂ ಮೇಲಿನ ಇತರಕಾರಣಗಳಿಂದಲೂ, ಆ ಸುಗ್ರೀವನಿಗೆ ಇತರವಿಷಯಗಳೂ ತಿಳಿದಿದ್ದುವೆಂದೇ ಊಹ್ಯವು ಆದರೆ ಕಲವರು "ರಾವಣನಿರುವ ಸ್ಥಳವನ್ನು ನಾನು ಕಾಣೆನು" ಎಂದು ಹೇಳಿದ ಸುಗ್ರೀವನ ಮಾತಿಗೆ, ರಾವಣನು ಈಗ ಎಲ್ಲಿರುವನೆಂಬುದನ್ನು ತಾನು ಕಾಣದುದಾಗಿ ಸುಗ್ರೀವನು ಹೇಳಿರುವನೆಂದು ಅರ್ಥವನ್ನು ಮಾಡುವರು ಇದೂ ಯುಕ್ತವಲ್ಲ ಸೀತೆಯನ್ನೆತ್ತಿಕೊಂಡು ಹೋದ ರಾಕ್ಷಸನ ವೃತ್ತಾಂತವು ಸ್ವಲ್ಪಮಾತ್ರವಾದರೂ ತಿಳಿದರೆ ಸಾಕೆಂದು ರಾಮನು ಅತ್ಯಾತುರದಿಂದ ಕೇಳುತ್ತಿರುವಾಗ, ಸುಗ್ರೀವನಿಗೆ ರಾವಣನ ತಾತ್ಕಾಲಿಕವಾಸಸ್ಥಳವು ತಿಳಿಯದಿದ್ದೂದೂ, ಇತರವಿಷಯಗಳಿನ್ನಾದರೂ ತನಗೆ ತಿಳಿದಮಟ್ಟಿಗೆ ಹೇಳಿಬಿಡುತಿದ್ದನೇಹೊರತು "ಆರಾಕ್ಷಸನು ಎಲ್ಲಿ ವಾಸಮಾಡುತಿರುವನು?" ಎಂದು ರಾಮನು ಕೇಳಿದುದಕ್ಕೆ, ಸುಗ್ರೀವನು "ಈಗ ಅವನೆಲ್ಲಿರುವನೆಂಬುದನ್ನು ನಾನರಿಯೆನು" ಎಂದು ಉತ್ತರವನ್ನು ಹೇಳಿ ನಿಲ್ಲಿಸಿಬಿಡಲಾರನು ಅಥವಾ ಹಾಗೆ ಹೇಳಿದ್ದರೂ ರಾಮನು ಅಷ್ಟಕ್ಕೆ ಬಿಡದೆ ಪುನಃ ಪ್ರಶ್ನಮಾಡಿ ಇತರವಿಷಯಗಳಿನ್ನಾದರೂ ಕೇಳಿ ತಿಳಿಯುತಿದ್ದನು ಇದಲ್ಲದೆ ಹೀಗೆ ಅಸಂಬದ್ಧವಾದ ಉತ್ತರವನ್ನು ಹೇಳಿದ್ದರೆ ರಾಮನಿಗೆ ಅವನ ಮಾತಿನಲ್ಲಿ ನಂಬಿಕೆಯೂ ಹುಟ್ಟಲಾರದು. ರಾಮನು ಸುಗ್ರೀವನನ್ನು ಪ್ರಶ್ನಮಾಡುವಾಗಲೂಆ ರಾಕ್ಷಸನ ನಿಯತವಾದ ವಾಸಸ್ಥಳವನ್ನು ಕೇಳಿದನೇಹೊರತು, ಆಗಿನ ವಾಸಸ್ಥಾನವನ್ನು ಕೇಳಿದವನಲ್ಲ ಆ ರಾವಣನು ವಾಸಮಾಡುತಿದ್ದ ಸ್ಥಳವನ್ನು ಕಂಡುಹಿಡಿದು, ಅದನ್ನು ಭಂಗಪಡಿಸಿದ ಮಾತ್ರದಲ್ಲಿಯೇ

ರಾಮಾ! ನಿನಗೆ ಅವುಗಳಿಂದೇನು? ನಿನ್ನ ದುಃಖವನ್ನು ಬಿಡು! ನಿನಗೆ ಪುನಃ ಸೀತೆಯು ಸಿಕ್ಕುವಂತೆ ಮಾಡುವ ಪ್ರಯತ್ನವು ನನ್ನ ದಾಗಿರಲಿ! ಬೇಕಾದರೆ ಈ

ರಾವಣನು ಎಲ್ಲಿದ್ದರೂ ಅದನ್ನು ಸಹಿಸಲಾರದೆ ತಾನಾಗಿಯೇ ಬಂದುಬಿಡುವನೆಂಬುದೇ ರಾಮನ ಅಭಿಪ್ರಾಯವು ಇದನ್ನು ತಿಳಿದಿದ್ದರೂ ಸುಗ್ರೀವನು ಯಾವುದೊಂದುಸೂಚನೆಯನ್ನೂ ಕೊಡದಿದ್ದುದರಿಂದ,ತಾನು ರಾವಣವೃತ್ತಾಂತವನ್ನು ತಿಳಿದೂ, ಏನೂ ತಿಳಿಯದವನಂತೆ ರಾಮನಲ್ಲಿ ನಟಿಸಿದೆನೆಂದೇ ಊಹ್ಯವು "ಹಾಗೆ ಸುಗ್ರೀವನಿಗೆ ನಿಜಸ್ಥಿತಿಯು ತಿಳಿದಿದ್ದಪಕ್ಷದಲ್ಲಿ, ಮುಂದೆ ಸೀತಾನ್ವೇಷಣಾರ್ಥವಾಗಿ ಕಪಿಗಳನ್ನು ಕಳುಹಿಸುವಾಗ,ಆ ದಿಕ್ಕಿಗೆಮಾತ್ರವೇ ಕೆಲವರನ್ನು ಕಳುಹಿಸಿದ್ದರೆ ಸಾಕಾಗಿತ್ತಲ್ಲವೆ? ನಾಲ್ಕುದಿಕ್ಕುಗಳಿಗೂ ಬೇರೆಬೇರೆಯಾಗಿ ಕಳುಹಿಸಿದುದೇಕ?" ಎಂದರೆ, ರಾವಣನು ಸೀತೆಯನ್ನೆತ್ತಿಕೊಂಡು ಹೋಗಿ ಬಹುದಿನಗಳಾದುದರಿಂದ, ಅವನು ಸೀತೆಯನ್ನು ಬೇರೆಲ್ಲಿಗಾದರೂ ಸಾಗಿಸಿದ್ದರೂ ಇರಬಹುದೆಂದಾಲೋಚಿಸಿ, ಏಕಕಾಲದಲ್ಲಿ ನಾಲ್ಕೂದಿಕ್ಕುಗಳಿಗೂ ಕಪಿಗಳನ್ನು ಕಳುಹಿಸಿದನೆಂಬುದರಿಂದ ವಿರೋಧವೇನೂ ಇಲ್ಲವು ಕೆಲವರು "ಸರ್ವಥಾ ನಜಾನೇ" ಎಂಬುದಕ್ಕ, ಆರಾವಣನ ವೃತ್ತಾಂತವು ಸಾಕಲ್ಯವಾಗಿ ತನಗೆ ತಿಳಿಯದು" ಎಂಬುದಾಗಿ ಅರ್ಥಾಂತರವನ್ನು ಹೇಳುವರು ಇದರಿಂದ ಸುಗ್ರೀವನು ರಾವಣವೃತ್ತಾಂತವನ್ನು ಸ್ವಲ್ಪಮಾತ್ರವೇ ತಿಳಿದಿರುವಂತೆ ಅಭಿಪ್ರಾಯವುಂಟಾಗುವುದರಿಂದ, ಮುಂದೆ ಸುಗ್ರೀವನು ಕಪಿಗಳೊಡನೆ ಹೇಳತಕ್ಕ ಮಾತಿಗೆ ವಿರೋಧವಿಲ್ಲವೆನ್ನುವರು ಆಗಲೂ ಸುಗ್ರೀವನು ತನಗೆ ತಿಳಿದಷ್ಟುಮಟ್ಟಿಗಾದರೂ ರಾಮನಿಗೆ ತಿಳಿಸಬೇಕಾಗಿತ್ತು ಅದನ್ನೂ ಹೇಳದುದರಿಂದ, ಹಾಗೆ ಗ್ರಹಿಸುವುದೂ ಯುಕ್ತವಲ್ಲ ಮತ್ತೆ ಕೆಲವರು, ರಾವಣನು ಆ ಒಂದುವರ್ಷದವರೆಗೂ ಪೂರ್ತಿಯಾಗಿ ಬದುಕಿರದಿದ್ದರೆ ಅವನಿಗೆ ಶಿವಪೂಜಾಫಲವಿಲ್ಲದೆ ಕ್ಷೋಗುವುದೆಂದೂ ಅದನ್ನು ಸಾಧಿಸುವುದಕ್ಕಾಗಿಯೇ ಸುಗ್ರೀವನಿಗೆ ಅಜ್ಞಾನವು ಕವಿದುಹೋಗಿತ್ತೆಂದೂ ಹೇಳುವರು ಪ್ರತ್ಯಕ್ಷವಾಗಿ ದೃಷ್ಟಕಾರಣವಿರುವಾಗ ಅದೃಷ್ಟಕಾರಣವನ್ನು ಹೇಳುವುದು ನ್ಯಾಯವಲ್ಲ ಆದುದರಿಂದ ಸುಗ್ರೀವನು ರಾವಣವೃತ್ತಾಂತವನ್ನು ತಿಳಿದಿದ್ದರೂ, ಬಹುದೂರದೃಷ್ಟಿಯಿಟ್ಟು, ಮೊದಲೇ ರಾಮನಿಗೆ ರಾವಣನ ಸ್ಥಲಬಲಾದಿಗಳನ್ನು ತಿಳಿಸಿಬಿಟ್ಟರೆ, ತಮ್ಮಿಬ್ಬರಕಾರ್ಯವೂ ಕೆಡುವುದೆಂದೂ,ಅಥವಾ ವಾಲಿಯ ಮೂಲಕವಾಗಿಯೇ ರಾಮನಿಗೆ ಒಂದುವೇಳೆ ಸೀತಾಪ್ರಾಪ್ತಿಯಾದರೂ ಆಗ ಅವತಾರಕ್ಕೆ ಮುಖ್ಯಪ್ರಯೋಜನವಾದ ರಾವಣಾದಿರಾಕ್ಷಸವಧೆಯಿಲ್ಲದೆ ಹೋಗುವುದೆಂದೂ ಆಲೋಚಿಸಿ,ರಾಮನಿಗೆ ತಿಳಿಸದೆ ಮರೆಸಿದನೆಂಬುದು ಸಿದ್ಧವಾಗುವುದು (ಗೋವಿಂದರಾಜೀಯವು)

ವಿಷಯದಲ್ಲಿ ನಿನಗೆ ನಾನು ಆಣೆಯಿಟ್ಟು ಪ್ರತಿಜ್ಞೆಮಾಡಿಕೊಡುವೆನು ಸಪರಿವಾರನಾದ ಆ ರಾವಣನನ್ನು ಕೊಂದು ಪೌರುಷವನ್ನು ಸಾರ್ಥಕಪಡಿಸಿ ನೀನು ಸಂತುಷ್ಟನಾಗುವಂತೆ ಕ್ಷಿಪ್ರದಲ್ಲಿಯೇ ಮಾಡುವೆನು ಈ ದುಃಖವನ್ನು ಬಿಡು! ನಿನ್ನ ಸ್ವಾಭಾವಿಕವಾದ ಧೈರ್ಯದಲ್ಲಿ ಮನಸ್ಸಿಡು ನಿನ್ನಂತಹ ಮಹನೀಯರಿಗೆ ಈವಿಧವಾದ ಲಘುಸ್ವಭಾವವು ಎಂದಿಗೂ ಉಚಿತವಲ್ಲ ನಾನೂ ನಿನ್ನಂತೆಯೇ ಪತ್ನೀವಿಯೋಗವನ್ನು ಹೊಂದಿ ಹೀಗೆ ಅಲೆಯುತ್ತಿರುವೆನು. ಆದರೇನು? ನಿನ್ನಂತೆ ನಾನು ಶೋಕಿಸುವವನಲ್ಲ ನಿನ್ನಂತೆ ನಾನು ಧೈರ್ಯಗುಂದಿದವನಲ್ಲ ಯುಕ್ತಾಯುಕ್ತಗಳನ್ನು ತಿಳಿಯಲಾರದ ತಿರ್ಯಕ್ಕನೆನಿಸಿಕೊಂಡಿದ್ದರೂ, ನನ್ನ ಪತ್ನಿಗಾಗಿ ನಾನು ನಿನ್ನಷ್ಟು ದುಃಖಿಸುವದಿಲ್ಲವಲ್ಲವ? ಹೀಗಿರುವಾಗ ಮಹಾತ್ಮನಾಗಿಯೂ, ನೀತಿಜ್ಞನಾಗಿಯೂ, ಧೈರ್ಯಶಾಲಿಯಾಗಿಯೂ ಇರುವ ನೀನು,ಇಂತಹ ಕಾಲಗಳಲ್ಲಿ ಧೈರ್ಯವನ್ನವಲಂಬಿಸಿರಬೇಕಂಬುದನ್ನು ಹೇಳತಕ್ಕುದೇನು? ನಿನ್ನ ಕಣ್ಣುಗಳಲ್ಲಿ ತುಳುಕಿಬರುತ್ತಿರುವ ಶೋಕಬಾಷ್ಪವನ್ನು ಧೈರ್ಯದಿಂದ ತಡೆದಿರಿಸು! ಸತ್ಯಶಾಲಿಗಳಿಗೆ ಮುಖ್ಯಗುಣವಾದ ಧೈರ್ಯವನ್ನು ನೀನು ಬಿಡಬಾರದು! ವ್ಯಸನದಲ್ಲಿಯಾಗಲಿ, ದ್ರವ್ಯಸಂಬಂಧವಾದ ಕಷ್ಟದಲ್ಲಿಯಾಗಲಿ, ಪ್ರಾಣಾಂತಕರವಾದ ಮಹಾಭಯದಲ್ಲಿಯಾಗಲಿ, ಯಾವನು ಸ್ವಬುದ್ಧಿಯಿಂದ ಚೆನ್ನಾಗಿ ವಿಮರ್ಶಿಸಿ, ಧೈರ್ಯವನ್ನು ತಂದುಕೊಳ್ಳುವನೋ, ಅವನಿಗೆ ಎಂದಿಗೂ ಹಾನಿಯಿಲ್ಲ ಹಾಗಿಲ್ಲವ ಯಾವನು ವಿವೇಚನೆಯಿಲ್ಲದವನಾಗಿ ದುಃಖದಿಂದ ಎದೆಗುಂದಿರುವನೋ, ಅವನು ಹೆಚ್ಚು ಭಾರವನ್ನು ಹೊರಿಸಿದ ಹಡಗು ವಶತಪ್ಪಿ ನೀರಿನಲ್ಲಿ ಮುಳುಗುವಂತ, ಆ ದುಃಖಭಾರದಿಂದಲೇ ವಶತಪ್ಪಿ ,ಅಧೋಗತಿಯನ್ನು ಹೊಂದುವನು ಎಲ್ಲ ರಘುವಂತೋತ್ತಮನೆ! ಇದೋ! ಕೈಮುಗಿದು ಬೇಡುವೆನಲ್ಲದೆ, ಸ್ನೇಹಪೂರ್ವಕವಾಗಿಯೂ ನಿನ್ನನ್ನು ಕೇಳಿಕೊಳ್ಳುವೆನು ಪೌರುಷವನ್ನವಲಂಬಿಸು! ಇಷ್ಟು ದುಃಖಕ್ಕೆ ಅವಕಾಶವನ್ನು ಕೊಡಬೇಡ! ದುಃಖವನ್ನು ಜಯಿಸದವರಿಗೆ "ಎಂದಿಗೂ ಸುಖವುಂಟಾಗದು ಅಂತವರ ತೇಜಸ್ಸೂ ಕ್ರಮಕ್ರಮವಾಗಿ ಕ್ಷೀಣವಾಗುವುದು ಆದುದರಿಂದ ನೀನು ದುಃಖಿಸಬೇಡ! ದುಃಖವಶರಾದವರಿಗೆ ಒಂದೊಂದು ವೇಳೆಗಳಲ್ಲಿ ಪ್ರಾಣಕ್ಕೇ ಸಂದೇ

ಹವುಂಟಾಗುವುದು ಆದುದರಿಂದ ಎಲೈ ರಾಜೇಂದ್ರನೆ! ಶೋಕವನ್ನು ಬಿಡು! ಧೈರ್ಯವನ್ನಾಶ್ರಯಿಸು! ನಾನು ನಿನ್ನಲ್ಲಿರುವ ಸ್ನೇಹದ ಸಲಿಗೆಯಿಂದ ಹಿತವನ್ನು ಹೇಳುವೆನೇಹೊರತು ನಿನಗೆ ಉಪದೇಶಿಸುವೆನೆಂದು ತಿಳಿಯಬೇಡ! ನನ್ನ ಸ್ನೇಹಭಾವದಲ್ಲಿ ಗೌರವವನ್ನಿಟ್ಟಾದರೂ ನಿನ್ನ ದುಃಖವನ್ನು ಬಿಟ್ಟುಬಿಡು!" ಎಂದನು ಹೀಗೆ ಸುಗ್ರೀವನು ಮೃದುವಾಕ್ಯಗಳಿಂದ ಸಮಾಧಾನಪಡಿಸಲು, ರಾಮನು ತನ್ನ ವಸ್ತ್ರದ ಸೆರಗಿನಿಂದ ಕಣ್ಣೀರನ್ನೊರೆಸಿಕೊಂಡು, ಮನಸ್ಸಿನಲ್ಲಿ ಸ್ವಲ್ಪಸಮಾಧಾನವನ್ನು ಹೊಂದಿ,ಆ ಸುಗ್ರೀವನ ಮಾತಿಗೆ ಅನುಮೋದಿಸಿ,ಪ್ರೀತಿಯಿಂದ ತೋಳುಗಳನ್ನು ನೀಡಿ ಅವನನ್ನಾಲಿಂಗಿಸಿ, ಒಂದಾನೊಂದುಮಾತನ್ನು ಹೇಳುವನು :-"ಎಲೆ ವಾನರೇಂದ್ರನೆ! ನಿಜವಾದ ಪ್ರೀತಿಯುಳ್ಳ ಮಿತ್ರನು ಹೇಗೆ ವರ್ತಿಸಬೇಕೋ, ಅದಕ್ಕೆ ತಕ್ಕಂತೆಯೇ ಈಗ ನೀನೂ ನನ್ನಲ್ಲಿ ನಡೆಸಿರುವೆ ಈ ನಿನ್ನ ಹಿತವಾದಗಳಿಂದ ನನ್ನ ಮನಸ್ಸಿಗೆ ಎಷ್ಟೋ ಸಮಾಧಾನವುಂಟಾಯಿತು ಇಂತಹ ಆಪದ್ಬಂಧುಗಳು ವಿಶೇಷವಾಗಿ ಈಕಾಲದಲ್ಲಿ ಸಿಕ್ಕುವುದೇ ದುರ್ಲಭವು ಮುಖ್ಯವಾಗಿ ಸೀತೆಯನ್ನು ಹುಡುಕಿ ತರುವ ವಿಷಯದಲ್ಲಿ ನೀನು ಆದಷ್ಟುಪ್ರಯತ್ನವನ್ನು ಮಾಡಬೇಕು ದುರಾತ್ಮನಾದ ರಾವಣನೆಂಬ ಆ ಕ್ರೂರರಾಕ್ಷಸನೆಲ್ಲಿರುವನೆಂಬುದನ್ನು ತಿಳಿಯುವುದಕ್ಕೂ ತಕ್ಕ ಪ್ರಯತ್ನವನ್ನು ಮಾಡಬೇಕು ಈಗ ನಾನು ಮಾಡಬೇಕಾದ ಕಲಸವೇನೆಂಬುದನ್ನು ನೀನು ನಿಸ್ಸಂಕೋಚವಾಗಿ ಹೇಳು! ವರ್ಷಾಕಾಲಗಳಲ್ಲಿ ಸುಕ್ಷೇತ್ರದಲ್ಲಿ ಬಿತ್ತಿದ ಬೀಜದಂತೆ,ನನ್ನ ಮೇಲೆ ಹೊರಿಸಿದ ಯಾವಕಾರ್ಯವಾದರೂ ಫಲಿಸದಿರಲಾರದು ಈಗ ನಾನು ಯಾವಮಾತನ್ನು ಸ್ವಾಭಿಮಾನದಿಂದ ಹೇಳಿರುವೆನೋ,ಅವೆಲ್ಲವೂ ನಿಜವೆಂದೇ ದೃಢವಾಗಿ ನಂಬು! ನಾನು ಇದುವರೆಗೆ ಹಿಂದೆ ಯಾವಾಗಲೂ ಸುಳ್ಳುಹೇಳಿದವನಲ್ಲ ಮುಂದಯೂ ಸುಳ್ಳಾಡುವವನಲ್ಲ! ಬೇಕಾದರೆ ಈ ವಿಷಯದಲ್ಲಿ ನಿನಗೆ ಪ್ರತಿಜ್ಞೆಮಾಡಿಕೊಡುವೆನು ಸತ್ಯದ ಮೇಲೆ ಆಣೆಯಿಟ್ಟು ಹೇಳುವೆನು"ಎಂದನು ರಾಮನು ಹೇಳಿದ ಈ ಮಾತನ್ನು, ಅದರಲ್ಲಿಯೂ ಮುಖ್ಯವಾಗಿ ಅವನು ದೃಢಪ್ರತಿಜ್ಞೆಮಾಡಿ ಹೇಳಿದುದನ್ನು, ಕೇಳಿ ಸುಗ್ರೀವನಿಗೂ ಅವನ ಮಂತ್ರಿಗಳಿಗೂ ಪರಮಸಂತೋಷವುಂಟಾಯಿತು ಹೀಗೆ ಆ ರಾಮಸುಗ್ರೀವರಿಬ್ಬರೂ ಸೇರಿ, ಒಬ್ಬರಿಗೊಬ್ಬರು ತಮ್ಮ

ತಮ್ಮ ಸುಖದುಃಖಗಳನ್ನು ಹೇಳಿಕೊಳ್ಳುತಿದ್ದರು ಮಹಾನುಭಾವನಾಗಿಯೂ ಪುರುಷಶ್ರೇಷ್ಠನಾಗಿಯೂ ಇರುವ ಆ ರಾಮನ ಮಾತುಗಳನ್ನು ಕೇಳಿ, ಬುದ್ಧಿಶಾಲಿಯಾದ ವಾನರೇಂದ್ರನು, ಇನ್ನು ತನ್ನ ಕಾರ್ಯವು ಕೈಗೂಡಿತೆಂದೇ ಮನಸ್ಸಿನಲ್ಲಿ ಭಾವಿಸಿ ಸಂತೋಷದಿಂದಿದ್ದನು ಇಲ್ಲಿಗೆ ಏಳನೆಯ ಸರ್ಗವು

ಸುಗ್ರೀವನು ತನ್ನ ಶೋಕಕಾರಣವನ್ನು ರಾಮನಿಗೆ ವಿವರಿಸಿ ತಿಳಿಸಿದುದು

ರಾಮನ ಮಾತಿಗೆ ಸುಗ್ರೀವನು ಪರಮಸಂತುಷ್ಟನಾಗಿ, ಲಕ್ಷ್ಮಣನಿಗಿದಿರಾಗಿ ರಾಮನನ್ನುದ್ದೇಶಿಸಿ, 'ಎಲೈ ರಾಮನೆ! ರಾಜಯೋಗ್ಯಗಳಾದ ಧೈರ್ಯ ಶೌರ್ಯಾದಿ ಸಮಸ್ತಗುಣಗಳಿಂದಲೂ ಕೂಡಿದ ನೀನು, ನನಗೆ ಮಿತ್ರನಾಗಿರುವೆಯಾದುದರಿಂದ, ಇನ್ನು ನಾನು ಸರ್ವವಿಧದಲ್ಲಿಯೂ ದೇವತಾನುಗ್ರಹಕ್ಕೆ ಪಾತ್ರನಾದೆನು ಇದರಲ್ಲಿ ಸಂದೇಹವಿಲ್ಲ ಎಲೈ ದೋಷರಹಿತನೆ! ನಿನ್ನಂತವನ ಸಹಾಯವಿದ್ದಮೇಲೆ, ದೇವರಾಜ್ಯವನ್ನಾದರೂ ಸಂಪಾದಿಸುವುದು ದುಷ್ಕರವಲ್ಲ ಇನ್ನು ನಮ್ಮ ಕಪಿರಾಜ್ಯವು ನನಗೆ ವಶವಾಗುವುದರಲ್ಲಿ ಸಂದೇಹವೇನಿದೆ? ಸರ್ವೋತ್ತಮವಾದ ರಘುವಂಶದಲ್ಲಿ ಹುಟ್ಟಿದ ಮಹಾತ್ಮನೊಬ್ಬನು, ಅಗ್ನಿಸಾಕ್ಷಿಕವಾಗಿ ನನಗೆ ಮಿತ್ರನಾಗಿ ಲಭಿಸಿರುವಾಗ, ಇನ್ನು ನಾನು ನನ್ನ ಬಂಧುಮಿತ್ರವರ್ಗಗಳಲ್ಲಿ ಪೂಜ್ಯನಾಗುವುದರಲ್ಲಿ ಸಂದೇಹವೇನಿದೆ? ನಾನೂ ನಿನಗೆ ತಕ್ಕ ಮಿತ್ರನೆಂಬುದನ್ನು ನೀನು ಕಾಲಕ್ರಮದಿಂದ ತಿಳಿಯಬಹುದು ನನ್ನಲ್ಲಿರುವ ಸಾಮರ್ಥ್ಯಾದಿಗುಣಗಳನ್ನು ನಾನೇ ಹೇಳಿಕೊಳ್ಳುವುದು ಆತ್ಮಸ್ತುತಿಯೆನಿಸುವುದರಿಂದ, ಈಗ ನಾನು ಅದೊಂದನ್ನೂ ಹೇಳಲಾರೆನು ಮಹಾತ್ಮರಾಗಿಯೂ, ಕೃತಾತ್ಮರಾಗಿಯೂ ಇರುವ ನಿನ್ನಂತವರಿಗೆ ಬೇರೆಯವರಲ್ಲಿ ಹುಟ್ಟುವಪ್ರೀತಿಯು, ಆತ್ಮಜ್ಞಾನಿಗಳ ಧೈರ್ಯದಂತೆ ಎಂದಿಗೂ ಚ್ಯುತಿಯಿಲ್ಲದೆ ನಿಶ್ಚಲವಾಗಿರುವುದು ನಿಜವಾದ ಸ್ನೇಹಭಾವವುಳ್ಳವರು, ತಮ್ಮಿಬ್ಬರಲ್ಲಿರುವ ಸುವರ್ಣರಜತಾದಿಗಳನ್ನಾಗಲಿ, ವಸ್ತ್ರ ಭೂಷಣಾದಿಗಳನ್ನಾಗಲಿ, ಬೇರೆ ಯಾವವಸ್ತುವನ್ನಾಗಲಿ ತಮ್ಮೊಳಗೆ ಅವಿಭಕ್ತವಾದಂತೆ ಎಣಿಸುವರೇಹೊರತು ಭೇದಬುದ್ಧಿಯನ್ನು ತೋರಿಸುವುದಿಲ್ಲ. ಧನವಂತ

ನಾಗಿರಲಿ, ದರಿದ್ರನಾಗಿರಲಿ, ದುಃಖಿತನಾಗಲಿ, ಸುಖಿಯಾಗಲಿ, ದೋಷಿಯಾಗಲಿ, ನಿರ್ದೋಷಿಯಾಗಲಿ ಮಿತ್ರನೇ ಪರಮಗತಿಯು ಸಜ್ಜನರು ತಮಗೆ ಸಮರ್ಪಕವಾದಷ್ಟು ಸ್ನೇಹವನ್ನು ಮತ್ತೊಬ್ಬರಲ್ಲಿ ನೋಡದಪಕ್ಷದಲ್ಲಿ, ಅಂತಹ ಆಪ್ತರಿಗಾಗಿ ತಮ್ಮ ಧನವನ್ನಾಗಲಿ ಕೊನೆಗೆ ದೇಹವನ್ನೇ ಆಗಲಿ ಒಪ್ಪಿಸಿಬಿಡುವರು" ಎಂದನು. ಇದನ್ನು ಕೇಳಿ ರಾಮನು, ಲಕ್ಷ್ಮಣನೂ ಕೇಳುತ್ತಿರುವಹಾಗೆಯೇ ಸುಗ್ರೀವನನ್ನು ನೋಡಿ "ಮಿತ್ರನೆ! ನೀನು ಹೇಳಿದುದೇನೋ ನಿಜವು" ಎಂದನು ಆಮೇಲೆ ಸುಗ್ರೀವನು ಹಿಂದೆ ಸೀತೆಯೆ ಆಭರಣಗಳನ್ನು ತಂದು ತೋರಿಸಿದಾಗಿನಿಂದ ನಿಂತುಮಾತಾಡುತಿದ್ದ ರಾಮನನ್ನೂ, ಮಹಾಬಲಾಢ್ಯನಾದ ಲಕ್ಷ್ಮಣನನ್ನೂ ನೋಡಿ, ಅವರಿಗೆ * ಮೃದುವಾದ ಆಸನವೊಂದನ್ನುಕೂಟ್ಟು ಕುಳ್ಳಿರಿಸಬೇಕೆಂದಾಲೋಚಿಸಿ, ಸುತ್ತಲೂ ದೃಷ್ಟಿಯಿಟ್ಟು ಆ ಅರಣ್ಯವೆಲ್ಲವನ್ನೂ ನೋಡಿದನು ಸಮೀಪದಲ್ಲಿ ಚೆನ್ನಾಗಿ ಪುಷ್ಪಿತವಾಗಿಯೂ, ಹಸಿಯ ಎಲೆಗಳುಳ್ಳದಾಗಿಯೂ, ಭ್ರಮರಗಳಿಂದ ಶೋಭಿತವಾಗಿಯೂ ಇದ್ದ ಒಂದುಸಾಲವೃಕ್ಷವು ಕಾಣಿಸಿತು ಅದರಲ್ಲಿ ಎಲೆಗಳಿಂದ ತುಂಬಿ ಚೆನ್ನಾಗಿ ಪುಷ್ಪಿಸಿದ್ದ ಒಂದುಕೊನೆಯನು ಮುರಿದುತಂದು, ಅದರಮೇಲೆ ಆ ರಾಮನೊಡನೆ ತಾನೂ ಕುಳಿತನು ಇವರಿಬ್ಬರೂ ಒಂದಾಗಿ ಕುಳಿತಮೇಲೆ, ಹನುಮಂತನು ಮತ್ತೊಂದು ಕೊನೆಯನ್ನು ಮುರಿದುತಂದು ಲಕ್ಷ್ಮಣನಮುಂದೆ ಹಾಸಿ, ವಿನಯಪೂರ್ವಕವಾಗಿ, ಆತನನ್ನು ಕುಳ್ಳಿರುವಂತೆ ಹೇಳಿದನು ವಿಶೇಷವಾದ ಫಲಪುಷ್ಪಗಳಿಂದ ತುಂಬಿದ, ಆ ಪರ್ವತದಮೇಲೆ ಸುಖಾಸೀನನಾಗಿ, ಸಮುದ್ರದಂತೆ ಗಂಭೀರಸ್ವಭಾವದಿಂದೊಪ್ಪುತ್ತಿರುವ ರಾಮನನ್ನುನೋಡಿ ಸುಗ್ರೀವನು, ಮಿತಿಮೀರಿದ ಸಂತೋಷದಿಂದ ಗದ್ಗದಸ್ವರವುಳ್ಳವನಾಗಿ ಮೃದುಮಧುರವಾಕ್ಯದಿಂದ, "ರಾಮಾ! ನನ್ನಣ್ಣನಾದ ವಾಲಿಯು ನನ್ನಪತ್ನಿಯನ್ನಪಹರಿಸಿದುದಲ್ಲದೆ, ನನ್ನನ್ನೂ ಭಂಗಪಡಿಸಿ ಓಡಿಸಿದನು ಅಂದಿನಿಂದ ನಾನು ಪರಮದುಃಖಿತನಾಗಿ ಅವನ ಭಯದಿಂದ ಈ ಬೆಟ್ಟವನ್ನಾಶ್ರಯಿಸಿರುವೆನು ನಾನು ಈ ಭಯದಲ್ಲಿ ಮುಳುಗಿ

---

* ಇಲ್ಲಿ ಮುನ ಆಸನವನ್ನುಕೊಟ್ಟುದಾಗಿ ಹೇಳಿರುವುದರಿಂದ ಇದು ಮರುದಿನದ ವೃತ್ತಾಂತವೆಂದು ಗ್ರಾಹ್ಯವು

ಹುಚ್ಚು ಹಿಡಿದವನಂತೆ ಇಲ್ಲಿ ಸುತ್ತುತ್ತಿರುವೆನು ನಮ್ಮಣ್ಣನಿಗೂ, ನನಗೂ ಸಂಪೂರ್ಣವಾದ ವೈರವು ಬೆಳೆದುಹೋಗಿರುವುದು ಆ ವಾಲಿಯ ಭಯದಿಂದಲೇ ನಾನು ಅನವರತವೂ ತತ್ತಳಿಸುತ್ತಿರುವೆನು ಎಲೈ ಮಹಾತ್ಮನೆ! ನೀನು ಸಮಸ್ತಲೋಕಗಳಿಗೂ ಅಭಯವನ್ನು ಕೊಟ್ಟು ಕಾಪಾಡತಕ್ಕವನು ಅನಾಥನಾದ ನನ್ನಲ್ಲಿಯೂ ಈಗ ನೀನು ಅನುಗ್ರಹವನ್ನು ತೋರಿಸಬೇಕು" ಎಂದನು ಇದನ್ನು ಕೇಳಿ ಮಹಾತೇಜಸ್ವಿಯಾಗಿಯೂ, ಧರ್ಮಾತ್ಮನಾಗಿಯೂ, ಧರ್ಮವತ್ಸಲನಾಗಿಯೂ ಇರುವ ರಾಮನು, ಮುಗಳ್ನಗೆಯೊಡನೆ ಆ ಸುಗ್ರೀವನನ್ನು ಕುರಿತು,"ಎಲೈ ಕಪೀಂದ್ರನೆ! ಇದೀಗ ಚೆನ್ನಾಯಿತು! ಇದೇನು? ನೀನು ಹೀಗೆ ಪುನಃಪುನಃ ಪ್ರಾರ್ಥಿಸುತ್ತಿರುವೆ? ಮಿತ್ರನಾದುದಕ್ಕೆ ಉಪಕಾರಮಾಡುವುದೇ ಫಲವು! ಅಪಕಾರಮಾಡುವುದೇ ಶತ್ರುವಿನ ಲಕ್ಷಣವು ಆದುದರಿಂದ ಮಿತ್ರನಾದ ನಿನ್ನ ಉಪಕಾರಕ್ಕಾಗಿ, ನಿನ್ನ ವೈರಿಯಾದ ಮತ್ತು ನಿನ್ನ ಪತ್ನಿಯನ್ನು ಅಪಹರಿಸಿದ ವಾಲಿಯನ್ನು ನಾನು ಸತ್ಯವಾಗಿ ವಧಿಸುವೆನು ಮೊದಲೇ ನಾನು ಆಣೆಯಿಟ್ಟು ನಿನಗೆ ಪ್ರತಿಜ್ಞೆಮಾಡಿ ಕೊಟ್ಟಿರುವಾಗಲೂ, ನೀನು ಹೀಗೆ ಸಂದೇಹಿಸುವುದೇಕೆ! ಎಲೆ ಮಿತ್ರನೆ! ಇದೋ! ಮಹಾವೇಗವುಳ್ಳ ಈ ನನ್ನ ಬಾಣಗಳನ್ನು ನೋಡಿದೆಯಾ? ಇವುಗಳ ತೇಜಸ್ಸು ಅತಿತೀಕ್ಷ್ಣವಾದುದು ಇವು ಷಣ್ಮುಖನು ಹುಟ್ಟಿದ ಶರವಣದಲ್ಲಿ ಹುಟ್ಟಿದುವುಗಳು ಇವುಗಳ ಚಿನ್ನದಕಟ್ಟುಗಳನ್ನೂ, ಇವುಗಳಿಗೆ ಕಟ್ಟಿರುವ ಕಂಕಪತ್ರಗಳನ್ನೂ ನೋಡು! ಇವು ಇಂದ್ರನ ವಜ್ರಾಯುಧಕ್ಕೆ ಸಮಾನವಾದುವೆಂದು ತಿಳಿ! ಇವುಗಳ ಋಜುವಾದ ಗಿಣ್ಣುಗಳನ್ನೂ, ತೀಕ್ಷ್ಣವಾದ ಅಲಗುಗಳನ್ನೂ ನೋಡು! ರೋಷದಿಂದ ಕೂಡಿದ ಸರ್ಪಗಳಂತೆ ಇವು ಅತಿಕ್ರೂರಗಳಾಗಿರುವುವು ಎಲೆ ಸುಗ್ರೀವಾ! ಹೆಸರುಮಾತ್ರಕ್ಕೆ ನಿನಗೆ ಸಹೋದರನೆನಿಸಿಕೊಂಡು ನಿನ್ನಲ್ಲಿ ಪಾಪಬುದ್ಧಿಯನ್ನಿಟ್ಟು ನಿನಗೆ ವೈರಿಯಾಗಿರುವ ಆ ವಾಲಿಯನ್ನು, ಇದೋ! ಈ ಬಾಣಗಳಿಂದಲೇ ಬೆಟ್ಟವನ್ನು ರುಳಿಸುವಂತೆ ಹೊಡೆದು, ಕೆಡಹುವುದನ್ನು ನೋಡು" ಎಂದನು ಇದನ್ನು ಕೇಳಿ ಸುಗ್ರೀವನಿಗೆ ಪರಮಸಂತೋಷವುಂಟಾಗಲು ,, ಭಲೆ! ಭಲೆ!" ಎಂದು ರಾಮನನ್ನು ಕೊಂಡಾಡುತ್ತ, ಪುನಃ ಆತನನ್ನು ಕುರಿತು,"ರಾಮಾ! ಮುಖ್ಯವಾಗಿ ನಾನು ದುಃಖಕ್ಕೀಡಾಗಿರುವೆನು! ದುಃಖಿತರಾದವರಿಗೆ ನೀನೇ ದಿಕ್ಕೆನಿಸಿಕೊಂಡಿರುವೆಯಾದುದರಿಂದ, ನಾನು ಪ್ರಾರ್ಥಿಸಿಕೊಂಡರೂ, ಪ್ರಾರ್ಥಿಸ

ಕೊಳ್ಳದಿದ್ದರೂ, ನನ್ನನ್ನು ಕಷ್ಟದಿಂದ ಬಿಡಿಸುವ ಭಾರವು ನಿನ್ನದಾಗಿದೆ ಆದರೂ ನಾವಿಬ್ಬರೂ ಈಗ ಅಗ್ನಿಸಾಕ್ಷಿಕವಾಗಿ ಕೈಹಿಡಿದು ಮಾಡಿಕೊಂಡ ಸ್ನೇಹದ ಸಲಿಗೆಯಿಂದ, ನಾನು ನಿನ್ನನ್ನು ಹೆಚ್ಚಾಗಿ ನಿರ್ಬಂಧಿಸಿ ನಿನ್ನಲ್ಲಿ ಮೊರೆಯಿಡುತ್ತಿರುವೆನು ನೀನು ಈಗ ನನಗೆ ಪ್ರಾಣಕ್ಕಿಂತಲೂ ಮೇಲೆನಿಸಿಕೊಂಡಿರುವೆ ಈ ವಿಷಯದಲ್ಲಿ ನಾನು ಸತ್ಯದಮೇಲೆ ಆಣೆಯಿಟ್ಟು ಹೇಳುವೆನು ಸ್ನೇಹಿತನೆಂಬ ಸಲಿಗೆಯಿಂದ ನಾನು ನಿಸ್ಸಂಕೋಚವಾಗಿ ನಿನ್ನಲ್ಲಿ ಹೇಳಬಾರದುದನ್ನೆಲ್ಲಾ ಹೇಳಬೇಕಾಗಿರುವುದು ನನ್ನ ಮನಸ್ಸಿನಲ್ಲಿರುವ ದುಃಖವು ನನ್ನನ್ನು ಎಡೆಬಿಡದೆ ದಹಿಸುತ್ತಿರುವುದು ನಾನೇನು ಮಾಡಲಿ' " ಎಂದು ಇಷ್ಟುಮಾತ್ರವನ್ನು ಹೇಳಿ, ಕಣ್ಣುಗಳಲ್ಲಿ ಫಳಫಳನೆ ನೀರನ್ನು ಸುರಿಸುತ್ತ, ಮೇಲೆಮೇಲೆ ಕಂಠವು ಕುಗ್ಗಿಹೋಗಲು, ಗದ್ಗದಸ್ವರದಿಂದ ಗಟ್ಟಿಯಾಗಿ ಮಾತಾಡುವುದಕ್ಕೂ ಅವಕಾಶವಿಲ್ಲದ ಸುಮ್ಮನಾದನು ಆದರೆ ಆ ಸುಗ್ರೀವನು ಬಹಳ ಜಿತೇಂದ್ರಿಯನಾದುದರಿಂದ, ನದೀಪ್ರವಾಹದಂತೆ ವೇಗದಿಂದ ಹೊರಟುಬರುತ್ತಿರುವ ತನ್ನ ಕಣ್ಣೀರನ್ನು ರಾಮನಿಗೆ ತಿಳಿಯದಂತೆ ತನ್ನಲ್ಲಿಯೇ ಅಡಗಿಸಿಕೊಂಡನು ಆದರೂ ಇವನಿಗೆ ಮನಸ್ಸಿನಲ್ಲಿರುವ ಸಂಕಟವನ್ನು ತಡೆಯಲಸಾಧ್ಯವಾಯಿತು ! ಆ ದುಃಖದಿಂದ ಆಗಾಗ ನಿಟ್ಟುಸಿರನ್ನು ಬಿಡುತ್ತ, ಕಣ್ಣುಗಳನ್ನೊರೆಸಿಕೊಂಡು, ಪುನಃ ರಾಮನನ್ನು ಕುರಿತು ಹೇಳುವನು ,,ಎಲೈ ರಾಮನೆ! ಬಲಿಷ್ಠನಾದ ವಾಲಿಯು, ಮೊದಲು ನನ್ನನ್ನು ಯುವರಾಜಪದವಿಯಿಂದ ತಳ್ಳಿಬಿಟ್ಟನು ! ಅಷ್ಟುಮಾತ್ರವೇ ಅಲ್ಲದೆ ! ಆಡಬಾರದನಾತುಗಳನ್ನಾಡಿ ರಾಜ್ಯದಿಂದಲೂ ಓಡಿಸಿಬಿಟ್ಟನು ! ನನಗೆ ಪ್ರಾಣಕ್ಕಿಂತಲೂ ಪ್ರಿಯಳಾದ ನನ್ನ ಪತ್ನಿಯನ್ನೂ ವಶಮಾಡಿಕೊಂಡುಬಿಟ್ಟನು ನನ್ನ ಪಾಡು ಹಾಗಿರಲಿ ! ನನ್ನ ಸ್ನೇಹಿತರೆಲ್ಲರನ್ನೂ ಸೆರೆಯಲ್ಲಿಟ್ಟನು ಇಷ್ಟಾದರೂ ಬಿಡದೆ ವಾಲಿಯು" ಈಗಲೂ ನನ್ನನ್ನು ಕೊನೆಗಾಣಿಸಿಬಿಡಬೇಕೆಂದೇ ಪ್ರಯತ್ನಮಾಡುತ್ತಿರುವನು ಇದಕ್ಕಾಗಿ ಅವನು ಕಳುಹಿಸಿದ ಅನೇಕವಾನರರನ್ನೂ ಕೊಂದುಹಾಕಿದೆನು ರಾಮಾ ! ನಾನು ಮೊದಲು ನಿನ್ನನ್ನು ನೋಡಿದಾಗ, ನೀನೂ ವಾಲಿಯಕಡೆಯವನೆಂಬ ಸಂದೇಹದಿಂದ ಭಯಪಟ್ಟು ನಡುಗುತಿದ್ದೆನು ನೀನು ಇಷ್ಟುಪರಮಕಾರುಣಿಕನೆಂಬು

ದು ನನಗೆ ತಿಳಿಯದೆಹೋಯಿತು ಆದಕ್ಕಾಗಿಯೇ ನಾನು ನಿನ್ನ ಬಳಿಗೆ ಬಾರದೆ ನಿನ್ನನ್ನು ಕಂಡು ದೂರಕ್ಕೊಡುತಿದ್ದೆನು ಭಯಕಾರಣವಿದ್ದಾಗ ಯಾರಾದರೂ ಭಯಪಡಬೇಕಾದುದೇ ಸಹಜವಲ್ಲವೆ ? ನನಗೆ ಆಪತ್ಕಾಲದಲ್ಲಿ ಈ ಹನುಮಂತನು ಮೊದಲಾದನಾಲ್ಕುಮಂದಿ ಕಪಿಗಳುಮಾತ್ರವೇ ಸಹಾಯಕರೇ ಹೊರತು ಬೇರೆಯಿಲ್ಲ ಇವರ ಬಲದಿಂದಲೇ ನಾನು ಇಷ್ಟು ಕಷ್ಟದಲ್ಲಿದ್ದರೂ ಪ್ರಾಣವನ್ನುಳಿಸಿಕೊಂಡಿರುವೆನು ಇವರಿಗೆ ನನ್ನಲ್ಲಿ ನಿಜವಾದ ಸ್ನೇಹವುಂಟು' ನನ್ನನ್ನು ಯಾವಾಗಲೂ ಎಚ್ಚರಿಕೆಯಿಂದ ರಕ್ಷಿಸುತ್ತಿರುವರು ನಾನು ಹೋದಕಡೆಗೆಲ್ಲಾ ನನ್ನನ್ನು ಬಿಡದೆ ಹಿಂಬಾಲಿಸಿ ಬರುವರು ನಾನು ಎಲ್ಲಿದ್ದರೂ ಇವರು ನನ್ನೊಡನೆಯೇ ಇರುವರು ರಾಮಾ ! ಇನ್ನು ಹೆಚ್ಚು ಮಾತುಗಳಿಂದೇನು! ಸಂಕ್ಷೇಪವಾಗಿ ಹೇಳುವೆನು ಕೇಳು! ಮುಖ್ಯವಾಗಿ ನನ್ನಣ್ಣನೇ ನನಗೆ ವೈರಿಯಾಗಿರುವನು ಅವನಾದರೋ ಎಣೆಯಿಲ್ಲದ ಪರಾಕ್ರಮವುಳ್ಳವನು ಅವನು ಸತ್ತಹೊರತು ನನ್ನ ದುಃಖವು ತೀರದು' ನನ್ನ ಸುಖವಾಗಲಿ, ನನ್ನ ಪ್ರಾಣವಾಗಲಿ ಅವನು ಸತ್ತಮೇಲೆಯೇ ಸ್ಥಿರಪಡಬೇಕೇಹೊರತು ಬೇರೆಯಲ್ಲ ಇದ್ದ ಸಂಗತಿಯನ್ನು ಸಂಕ್ಷೇಪವಾಗಿ ಹೇಳಿಬಿಟ್ಟೆರುವೆನು ಇದೇ ನನ್ನ ದುಃಖಕ್ಕೆ ಮೂಲವು ದುಃಖವನ್ನು ತಡೆಯಲಾರದೆ ನಮ್ಮೊಳಗಿನ ಗೃಹಚ್ಛಿದ್ರವನ್ನು ನಿನಗೆ ನಿಸ್ಸಂಕೋಚವಾಗಿ ತಿಳಿಸಿಬಿಟ್ಟೆರುವೆನು ದುಃಖಿತನಾಗಲಿ, ಸುಖಿತನಾಗಲಿ, ಮಿತ್ರನಿಗೆ ಮಿತ್ರನೇ ಗತಿಯಲ್ಲವೆ" ಎಂದನು ಇದನ್ನು ಕೇಳಿ ರಾಮನು ಸುಗ್ರೀವನನ್ನು ಕುರಿತು ' ನಿನಗೂ ವಾಲಿಗೂ ಯಾವಕಾರಣದಿಂದ ಹೀಗೆ ವೈರವುಂಟಾಯಿತು? ಯಥಾಸ್ಥಿತವಾಗಿ ತಿಳಿಸು. ಮೊದಲು ವೈರಕಾರಣವನ್ನು ಕೇಳಿ, ಅಮೇಲೆ ಅವುಗಳ*ಬಲಾಬಲಗಳನ್ನು ಚೆನ್ನಾಗಿ ಪರ್ಯಾಲೋಚಿಸಿ,ಅದರಮೇಲೆ ತಕ್ಕ ಪ್ರತಿಕ್ರಿಯೆಯನ್ನು ಮಾಡಬೇಕಾಗಿರುವುದು ವಾಲಿಯು ನಿನಗುಂಟುಮಾಡಿದ ಅವಮಾನವನ್ನು ಕೇಳಿದಾಗಿನಿಂದಲೇ,ವರ್ಷಾಕಾಲದ ಜಲಪ್ರವಾಹದಂತೆ ನನ್ನ ಮನಸ್ಸಿನಲ್ಲಿ ಕೋಪವು

* ಇಲ್ಲಿ ಬಲಾಬಲವೆಂದರೆ ''ವಾಲಿಯ ಕೋಪಕ್ಕೆ ಕಾರಣವಾದ ನಿನ್ನ ಅಪರಾಧವೇ ಪ್ರಬಲವಾಗಿದ್ದರೆ,ನಿಮ್ಮಿಬ್ಬರಿಗೂ ಸಮಾಧಾನವನ್ನುಮಾಡಿ ಕ್ಷೇಮದಿಂದಿರಿಸುವೆನೆಂದೂ, ಅಪರಾಧವು ಸ್ವಲ್ಪವಾಗಿ, ವೈರವೇ ಹೆಚ್ಚಿದ್ದರೆ ವಾಲಿಯನ್ನು ಕೊಲ್ಲುವೆ''ನೆಂದೂ ಹೇಳಿದುದಾಗಿ ಭಾವವು

ಉಕ್ಕಿಬಂದು,ನನ್ನ ಹೃದಯವನ್ನು ಕದಲಿಸುತ್ತಿರುವುದು ಆದುದರಿಂದ. ನೀನು ನಿಸ್ಸಂಕೋಚವಾಗಿ ಇದ್ದ ಸ್ಥಿತಿಯನ್ನು ಸಂತೋಷದಿಂದ ತಿಳಿಸು ನೀನು ಹೇಳಿ ಮುಗಿಸುವಷ್ಟರಲ್ಲಿಯೇ, ನಾನು ಈ ನನ್ನ ಬಿಲ್ಲನ್ನು ಏರಿಸಿ ಹಿಡಿಯುವೆನೆಂದು ತಿಳಿ! ನಾನು ಬಾಣವನ್ನು ಬಿಡುವುದೇ ತಡೆ! ಆ ಕ್ಷಣವೇ ನಿನ್ನ ಶತ್ರುವು ಹತನಾದನೆಂದೂ ಭಾವಿಸು" ಎಂದನು ಮಹಾತ್ಮನಾದ ರಾಮನ ಮಾತನ್ನು ಕೇಳಿ, ಸುಗ್ರೀವನೂ, ಆತನ ನಾಲ್ಕುಮಂದಿ ಮಂತ್ರಿಗಳೂ ಪರಮಸಂತೋಷವನ್ನು ಹೊಂದಿದರು ಆಮೇಲೆ ಸುಗ್ರೀವನು ಸಂತೋಷದಿಂದ ರಾಮನಿಗೆ ವೈರಕಾರಣವೆಲ್ಲವನ್ನೂ ಯಥಾಸ್ಥಿತವಾಗಿ ತಿಳಿಸಲಾರಂಭಿಸಿದನು ಇಲ್ಲಿಗೆ ಎಂಟನೆಯ ಸರ್ಗವು

ವಾಲಿಯ ಅಪರಾಧಗಳನ್ನು ಸುಗ್ರೀವನು ರಾಮನಿಗೆ ತಿಳಿಸುವುದು

"ರಾಮಾ! ಶತ್ರುಗಳನ್ನು ಹುಟ್ಟಡಗಿಸತಕ್ಕ ನನ್ನಣ್ಣನಾದ ವಾಲಿಯನ್ನು,ನಮ್ಮ, ತಂದೆಯು ಅತಿಪ್ರೀತಿಯಿಂದ ಪೋಷಿಸುತಿದ್ದನು ನಾನೂ ಹಾಗೆಯೇ ನನ್ನಣ್ಣನಲ್ಲಿ ಪರಮಪ್ರೇಮವನ್ನಿಟ್ಟಿದ್ದೆನು ನಮ್ಮ ತಂದೆಯು ಮೃತನಾದಮೇಲೆ,ಮಂತ್ರಿಗಳೆಲ್ಲರೂ ಸೇರಿ ಹಿರಿಯವನಾದ ವಾಲಿಯನ್ನು ವಾನರರಾಜ್ಯದಲ್ಲಿರಿಸಿ ಪಟ್ಟಾಭಿಷೇಕಮಾಡಿಸಿದರು ಆ ವಾಲಿಯು ವಂಶಪರಂಪರೆಯಾಗಿ ಬಂದ ದೊಡ್ಡ ವಾನರರಾಜ್ಯವನ್ನು ನಿರಂಕುಶವಾಗಿ ಪರಿಪಾಲಿಸುತಿದ್ದನು ನಾನೂ ಆತನಿಗೆ ಅತಿವಶ್ಯನಾಗಿ ಸರ್ವಕಾಲಗಳಲ್ಲಿಯೂ ಅವನಲ್ಲಿ ಸೇವಕನಂತೆ ನಡೆದುಕೊಳ್ಳುತಿದ್ದೆನು ಈ ಸಂದರ್ಭದಲ್ಲಿ ದುಂದುಭಿಯೆಂಬವನಿಗೆ ಹಿರಿಯಮಗನಾದ ಮಾಯಾವಿಯೆಂಬ ರಾಕ್ಷಸನೊಬ್ಬನಿದ್ದನು ಆತನು ಬಹಳ ವೀರ್ಯವಂತನು ಒಂದು ಹೆಂಗಸಿನ ನಿಮಿತ್ತವಾಗಿ ಆತನಿಗೂ ನನ್ನಣ್ಣನಾದ ವಾಲಿಗೂ ಮಹಾವೈರವುಂಟಾಯಿತು ಇದು ಲೋಕವಿದಿತವಾದ ವೃತ್ತಾಂತವು ಒಂಬಾನೊಂದು ದಿನದ ಅರ್ಧರಾತ್ರಿಯಲ್ಲಿ, ನಾವೆಲ್ಲರೂ ನಿದ್ರೆ ಹೋಗುತಿರ್ದಾಗ, ಆ ಮಾಯಾವಿಯು ನಮ್ಮ ಕಿಷ್ಕಿಂಧೆಯ ಬಾಗಿಲಿಗೆ ಬಂದು, ಅತ್ಯಾರ್ಭಟೆಯಿಂದ ಗರ್ಜಿಸಿ, ವಾಲಿಯನ್ನು ಯುದ್ಧಕ್ಕೆ ಕರೆದನು ಆಗ

ನಿದ್ರೆಹೋಗುತಿದ್ದ ನನ್ನಣ್ಣನು,ಭಯಂಕರವಾಗಿ ಆ ಗರ್ಜನವನ್ನು ಕೇಳಿ ಸಹಿ
ಸಲಾರದೆ ಅತಿವೇಗದಿಂದ ಹೊರಕ್ಕೆ ಬಂದನು ಆಗ ಆ ವಾಲಿಯ ಪತ್ನಿಯ
ರೂ, ನಾನೂ, ವಿನಯಪೂರ್ವಕವಾಗಿ ಎಷ್ಟೋವಿಧದಲ್ಲಿ ಪ್ರಾರ್ಥಿಸಿ ವಾಲಿ
ಯನ್ನು ತಡೆದೆವು ಆದರೂ ಅವನು ನಮ ಮಾತನ್ನು ಮೀರಿ ಕೋಪದಿಂದ
ಆ ರಾಕ್ಷಸನನ್ನು ಕೊಲ್ಲುವುದಕ್ಕಾಗಿ ಹೊರಟನು ಹೀಗೆ ವಾಲಿಯು ಅಡ್ಡ
ಲಾಗಿ ಬಂದ ನಮ್ಮೆಲ್ಲರನ್ನೂ ಒದರಿಕೊಂಡು, ಆ ರಾಕ್ಷಸನೊಡನೆ ಯುದ್ಧ
ಕ್ಕೆ ಹೊರಡಲು, ನನಗೆ ಅಣ್ಣನಲ್ಲಿರುವ ಪ್ರೇಮದಿಂದ ಮನಸ್ಸು ತಡೆಯದೆ
ಹೋಯಿತು ನಾನೂ ಆ ವಾಲಿಯ ಹಿಂದೆಯೇ ಹೊರಟೆನು ಆ ರಾಕ್ಷಸ
ನಾದರೋ, ಹೀಗೆ ಬನ್ನಟ್ಟಿ ಬರುತ್ತಿರುವ ನನ್ನಣ್ಣನನ್ನೂ, ಅವನ ಹಿಂದೆ
ದೂರದಲ್ಲಿ ಹಿಂಬಾಲಿಸಿ ಬರುತ್ತಿರುವ ನನ್ನನ್ನೂ ನೋಡಿ ಭಯಪಟ್ಟು ಇದಿ
ರಿಸಲಾರದೆ ಓಡುವುದಕ್ಕಾರಂಭಿಸಿದನು ಅವನು ಭಯದಿಂದ ಓಡುವು
ದನ್ನು ನೋಡಿ ನಾವೂ ಅವನನ್ನು ಬೆನ್ನಟ್ಟಿ ವೇಗದಿಂದ ಹೋದೆವು ಆಗಲೇ
ಚಂದ್ರೋದಯವಾಗಿ ಚೆನ್ನಾಗಿ ಬೆಳಕಿದ್ದುದರಿಂದ,ದಾರಿಯು ಸ್ಪಷ್ಟವಾಗಿ
ಕಾಣುತಿತ್ತು ರಾಕ್ಷಸನು ಬಹುದೂರದವರೆಗೂ ಓಡಿ,ಕೊನೆಗೆ ಅಲ್ಲಿ ನೆಲದೊ
ಳಗೆ, ಮೇಲೆ ಹುಲ್ಲು ಮುಚ್ಚಿದ್ದ ಒಂದು ಮಹಾಬಿಲಕ್ಕೆ ಪ್ರವೇಶಿಸಿ ಬಿಟ್ಟನು
ಆ ಬಿಲವಾದರೋ ಇತರರಿಗೆ ದುರ್ಗಮವಾಗಿಯೂ ಬಹಳ ವಿಶಾಲವಾಗಿ
ಯೂ ಇದ್ದಿತು ಮಾಯಾವಿಯು ಅತಿವೇಗದಿಂದ ಆ ಬಿಲದಲ್ಲಿ ಪ್ರವೇಶಿಸಿ
ಬಿಟ್ಟನು ನಾವಿಬ್ಬರೂ ಆ ಬಿಲದ ಬಾಗಿಲಲ್ಲಿ ನಿಂತೆವು ಹೀಗೆ ತಪ್ಪಿಸಿಕೊಂ
ಡುಹೋದ ರಾಕ್ಷಸನನ್ನು ನೋಡಿ ನನ್ನಣ್ಣನಿಗೆ ಮೈಮರೆಯುವಷ್ಟು ಕೋಪ
ವುಂಟಾಯಿತು ಅವನ ಇಂದ್ರಿಯಗಳೆಲ್ಲವೂ ಕಲಗಿಹೋದುವು ಆಗ ವಾಲಿ
ಯು ನನ್ನನ್ನು ಕುರಿತು ''ವತ್ಸ ಸುಗ್ರೀವಾ ! ನೀನು ಬಿಲದ್ವಾರದಲ್ಲಿಯೇ
ಎಚ್ಚರಿಕೆಯಿಂದ ಕಾದಿರು! ನಾನು ಬಿಲದೊಳಗೆ ಪ್ರವೇಶಿಸಿ ಆ ಶತ್ರುವ
ನ್ನು ಕೊಂದು ಬರುವೆನು ಅದುವರೆಗೂ ನೀನು ಎಚ್ಚರದಿಂದಿರು"ಎಂದನು
ಆಗ ನಾನು ನನ್ನಣ್ಣನನ್ನು ಕುರಿತು ''ನಾನೂ ಸಂಗಡ ಬರುವೆ"ನೆಂದು ಎ
ಷ್ಟೋವಿಧದಲ್ಲಿ ಪ್ರಾರ್ಥಿಸಿದೆನು ಆದರೂ ಅವನು ನನ್ನ ಪ್ರಾರ್ಥನೆಯನ್ನು
ಸ್ವೀಕರಿಸದೆ, ನನ್ನ ಕೈಯಿಂದ ತನ್ನ ಕಾಲುಗಳನ್ನು ಮುಟ್ಟಿಸಿ ಆಣೆಯಿಡಿಸಿ

ಕೊಂಡು, ಆ ಮಹಾಬಿಲಕ್ಕೆ ಪ್ರವೇಶಿಸಿಬಿಟ್ಟನು ಅವನು ಬಿಲಕ್ಕೆ ಪ್ರವೇಶಿಸಿದಮೇಲೆ ಪೂರ್ಣವಾಗಿ ಒಂದು ಸಂವತ್ಸರವು ಕಳೆದು ಹೋಯಿತು ಅಷ್ಟು ದೀರ್ಘಕಾಲದವರೆಗೂ ನಾನು ಅಣ್ಣನಾಜ್ಞೆಯನ್ನು ಮೀರಬಾರದೆಂಬುದಕ್ಕಾಗಿ ಅಲ್ಲಿಂದ ಕದಲದೆ ಕಾದಿದ್ದೆನು ಆದರ ಬಹು ದೀರ್ಘಕಾಲದವರೆಗೂ ಅವನು ಹಿಂತಿರುಗಿ ಬಾರದುದನ್ನು ನೋಡಿ, ನನಗೆ ಅವನಲ್ಲಿರುವ ಸಹೋದರಪ್ರೇಮದಿಂದ ಮನಸ್ಸು ಕಳವಳಹೊಂದಿತು ವಾಲಿಯು ರಾಕ್ಷಸನಿಂದ ಸಂಹೃತನಾಗಿರಬಹುದೆಂದೇ ತಿಳಿದುಕೊಂಡೆನು ಬಿಲಕ್ಕೆ ಹೋದ ವಾಲಿಯು ಆಗುವರೆಗೂ ಹಿಂತಿರುಗದಿದ್ದುದರಿಂದ, ಅವನ ವಿಷಯದಲ್ಲಿ ನನಗೆ ಆಪಾಯಶಂಕೆಯುಂಟಾಯಿತು ಈ ಭ್ರಾಂತಿಯನ್ನು ಚೆನ್ನಾಗಿ ಸ್ಥಿರಪಡಿಸುವಂತೆ, ಆ ಬಿಲದೊಳಗಿನಿಂದ ನೊರೆಗಟ್ಟಿದ ರಕ್ತಪ್ರವಾಹವು ಹೊರಡಲಾರಂಭಿಸಿತು ನನ್ನ ಮನಸ್ಸಿನ ಶಂಕೆಯು ಸ್ಥಿರಪಟ್ಟುಹೋಯಿತು ಆ ರಕ್ತವನ್ನು ನೋಡಿ ನನಗೆ ಸಹಿಸಲಾರದ ಸಂಕಟವುಂಟಾಯಿತು ಇಷ್ಟರಲ್ಲಿ ಆ ಬಿಲದೊಳಗಿನಿಂದ ಅನೇಕರಾಕ್ಷಸರ ಗರ್ಜನಧ್ವನಿಯೂ ಹೊರಟು ಬಂದು ನನ್ನ ಕಿವಿಗೆ ಕಳಿಸಿತು ಆದರೊಡನೆ ಯುದ್ಧದಲ್ಲಿ ಪರಾಜಿತನಾದ ನನ್ನಣ್ಣನು ಕ್ಷೀನಧ್ವನಿಯಿಂದ ಕೂಗಿಕೂಳ್ಳುವಂತೆಯೂ ನನ್ನ ಕಿವಿಗೆ ಕೇಳಿಸಿತು ಎಲೈ ಮಿತ್ರನೆ ! ಈ ಚಿಹ್ನಗಳಿಂದ ನನಗೆ ವಾಲಿಯು ರಾಕ್ಷಸರಿಂದ ಸಂಹೃತನಾದನೆಂದೇ ನಿಶ್ಚಯವು ಹುಟ್ಟಿತು ಆಗ ಒಳಗಿದ್ದ ರಾಕ್ಷಸರಾದರೂ ಅಲ್ಲಿಯೇ ಸಾಯಲೆಂದು ನನ್ನ ಮನಸ್ಸಿನಲ್ಲಿ ಚಿಂತಿಸಿ, ಬೆಟ್ಟದಂತಿರುವ ಕಲ್ಲುಗಳನ್ನು ಹೊತ್ತು ತಂದು, ಆ ಬಿಲದ್ವಾರವನ್ನು ಚೆನ್ನಾಗಿ ಮುಚ್ಚಿಬಿಟ್ಟೆನು ಆಗಲೇ ಅಣ್ಣನಾದ ವಾಲಿಗೆ ಉದಕಕ್ರಿಯೆಯನ್ನು ಮಾಡಿಅಲ್ಲಿಂದ ಹಿಂತಿರುಗಿ, ಕಿಷ್ಕಿಂಧೆಗೆ ಬಂದು ಸೇರಿದೆನು ಆದರೆ ನಾನು ವಾಲಿಯ ಮರಣವನ್ನು ಪ್ರಜೆಗಳಿಗೆ ತಿಳಿಸಿದರೆ ದೇಶಕ್ಷೋಭವುಂಟಾಗುವುದೆಂದೆಣಿಸಿ, ನಿಜಸ್ಥಿತಿಯೊಂದನ್ನೂ ಹೊರಬೀಳಿಸದೆ ಮರಸುತ್ತಲೇ ಬಂದೆನು ಆದರೆ ಮಂತ್ರಿಗಳು ಬಹುಪ್ರಯತ್ನದಿಂದ ಆ ವಾಲಿಯ ಮರಣವನ್ನು ನನ್ನ ಬಾಯಿಂದ ಹೊರಡಿಸಿಬಿಟ್ಟರು ನಾನು ಅಲ್ಲಿನ ನಿಜಸ್ಥಿತಿಯೆಲ್ಲವನ್ನೂ ತಿಳಿಸಿಬಿಟ್ಟಮೇಲೆ, ಮಂತ್ರಿಗಳೆಲ್ಲರೂ ಸೇರಿ ಸಮ್ಮತಿಪೂರ್ವಕವಾಗಿ ನನ

ಗೆ ಪಟ್ಟಾಭಿಷೇಕವನ್ನೂ ಮಾಡಿಬಿಟ್ಟರು ಆಮೇಲೆ ನಾನು ನ್ಯಾಯ ದಿಂದಲೇ ರಾಜ್ಯವನ್ನು ಪಾಲಿಸುತಿದ್ದೆನು ರಾಮಾ ! ದೈವಗತಿಯನ್ನು ನಾನೇನೆಂದು ಹೇಳಲಿ! ನಾನು ಹೀಗೆ ರಾಜ್ಯಭಾರಮಾಡುತ್ತಿರುವಾಗ ಅತ್ತ ಲಾಗಿ ನನ್ನಣ್ಣನಾದ ವಾಲಿಯು ಆ ರಾಕ್ಷಸನನ್ನು ಕೊಂದು ಜಯಶೀಲನಾ ಗಿ ಹಿಂತಿರುಗಿ ಬಂದು ಇತ್ತಲಾಗಿ ಪಟ್ಟಾಭಿಷಿಕ್ತನಾಗಿ ರಾಜ್ಯವನ್ನು ಪಾಲಿ ಸುತಿದ್ದ ನನ್ನನ್ನು ನೋಡಿದನು ಅವನಿಗೆ ತಡೆಯಲಾರದ ಕೋಪವುಂಟಾ ಯಿತು ಅವನ ಕಣ್ಣುಗಳೆರಡೂ ಕೆಂಡದಂತೆ ಕೆಂಪಾದುವು ಆ ಕ್ಷಣವೇ ನನ್ನ ಮಂತ್ರಿಗಳೆಲ್ಲರನ್ನೂ ಸೆರೆಯಲ್ಲಿಟ್ಟನು ನನ್ನನ್ನು ಕ್ರೂರವಾಕ್ಯಗಳಿಂದ ನಿಂದಿಸತೊಡಗಿದನು ಆಗ ಪ್ರಕೃತಿಬಲಸಂಪನ್ನನಾಗಿದ್ದ ನಾನು, ಆ ವಾಲಿಯನ್ನು ಆಗಲೇ ನಿಗ್ರಹಿಸಬಲ್ಲವನಾಗಿದ್ದರೂ, ಅಣ್ಣನೆಂಬ ಗೌರವಬು ದ್ಧಿಯಿಂದ ನನ್ನ ಮನಸ್ಸು ಹಿಂತೆಗೆಯಿತು ಆದುದರಿಂದ ನಾನು ಅವನ ಕ್ರೂರವಾಕ್ಯಗಳನ್ನೂ ಲಕ್ಷಿಸದೆ, ಶತ್ರುಜಯವನ್ನು ಮಾಡಿ ಬರುತ್ತಿರುವ ಆ ತನನ್ನು ಎಷ್ಟೋ ಗೌರವದಿಂದ ಸತ್ಕರಿಸಿ ನಮಸ್ಕರಿಸಿದೆನು ಏನಾದರೇನು? ಇದರಿಂದ ಅವನು ಸ್ವಲ್ಪವಾದರೂ ಸಂತುಷ್ಟನಾಗಲಿಲ್ಲ ಅವನ ಮತ್ಸರದ ಕೋಪವೂ ಅಡಗಲಿಲ್ಲ ನಮಸ್ಕರಿಸುತ್ತಿರುವ ನನಗೆ ಎಂದಿನಂತೆ ಅವನು ಆಶೀರ್ವಾದಗಳನ್ನೂ ಮಾಡಲಿಲ್ಲ ಆದರೂ ನಾನು ಬಿಡದೆ ಬಾರಿಬಾರಿಗೂ ಅವನ ಪಾದಗಳಿಗೆ ತಲೆಯನ್ನು ಸೋಕಿಸಿ ಸಾಷ್ಟಾಂಗಪ್ರಣಾಮವನ್ನು ಮಾ ಡುತಿದ್ದೆನು ಆಗಲೂ ಅವನಿಗೆ ನನ್ನಲ್ಲಿ ಅನುಗ್ರಹವು ಹುಟ್ಟಲಿಲ್ಲ ಅವನ ಕೋಪವೂ ಶಾಂತವಾಗಲಿಲ್ಲ" ಇಲ್ಲಿಗೆ ಒಂಬತ್ತನೆಯಸರ್ಗವು

ಸುಗ್ರೀವನು ತಾನು ವಾಲಿಯನ್ನು ಅನೇಕವಿಧದಲ್ಲಿ ಪ್ರಾರ್ಥಿಸಿದುದನ್ನೂ, ಆದರೂ ವಾಲಿಯು ನಿರ್ದಯನಾಗಿ ತನ್ನನ್ನು ನಿಗ್ರಹಿಸಿದುದನ್ನೂ ರಾಮನಿಗೆ ತಿಳಿಸಿದುದು

ಹೀಂಗೆ ನನ್ನಣ್ಣನಾದ ವಾಲಿಯು ಮೈತಿಳಿಯದ ಕೋಪದಿಂದಿರುವು ದನ್ನು ನೋಡಿ, ನಾನು ಅತನನ್ನು ಪ್ರಸನ್ನನನ್ನಾಗಿ ಮಾಡಬೇಕೆಂಬ ಕೋ

ರಿಕೆಯಿಂದ ಅವನನ್ನು ಕುರಿತು, "ಅಣ್ಣಾ! ನೀನು ಕ್ಷೇಮದಿಂದ ಬಂದುದೇ ನನ್ನ ಪರಮಭಾಗ್ಯವು. ಇದರಮೇಲೆ ಶತ್ರುವನ್ನೂ ನಿಗ್ರಹಿಸದೆ! ನೀನು ಅನಾಥರನ್ನು ರಕ್ಷಿಸುವ ಸ್ವಭಾವವುಳ್ಳವನು ಅನಾಥನಾದ ನನಗೂ ನೀನಲ್ಲದೆ ಬೇರೆ ನಾಥರಿಲ್ಲ ಅನೇಕ, ಶಲಾಕೆಗಳಿಂದ ಕೂಡಿಪೂರ್ಣಚಂದ್ರನಂತೆ ಹೊಳೆಯುತ್ತಿರುವ ರಾಜಚಿಹ್ನವಾದ ಈ ಶ್ವೇತಚ್ಛತ್ರವನ್ನೂ, ಈ ಚಾಮರವನ್ನೂ, ನಾನೇ ನನ್ನಕೈಯಿಂದ ನಿನಗೆ ಹಿಡಿಯುವೆನು ಇದನ್ನು ಪ್ರತಿಗ್ರಹಿಸಿ ನಿನ್ನರಾಜ್ಯವನ್ನು ಪಾಲಿಸು ನಿನ್ನಾಜ್ಞೆಯಂತೆ ನಾನು ಒಂದು ಸಂವತ್ಸರದವರೆಗೂ ಬಿಲದ್ವಾರದಲ್ಲಿ ಕಾದಿದ್ದೆನು ನೀನು ಹಿಂತಿರುಗಿ ಬರಲಿಲ್ಲ. ಇದರಮೇಲೆ ಆ ಬಿಲದಿಂದ ರಕ್ತಪ್ರವಾಹವೂ ಹೊರಬಂದಿತು ಅದನ್ನು ನೋಡಿ ನನಗೆ ಶಂಕೆಯುಂಟಾಯಿತು ನನ್ನ ಮನಸ್ಸು ನಡುಗಿತು. ನನ್ನ ಇಂದ್ರಿಯಗಳು ಕಳವಳಿಸಿದುವು ಅದರಿಂದ ನಾನು ನಿನಗೆ ವೈರಿಗಳಾದ ರಾಕ್ಷಸರೂ ಅಲ್ಲಿಯೇ ಸಾಯಲೆಂದು ನಿಶ್ಚಯಿಸಿ, ದೊಡ್ಡ ದೊಡ್ಡ ಕಲ್ಲುಗಳಿಂದ ಆ ಬಿಲದ್ವಾರವನ್ನು ಮುಚ್ಚಿ, ಇತ್ತಲಾಗಿ ಕಿಷ್ಕಿಂಧೆಗೆ ಬಂದುಬಿಟ್ಟೆನು ಆಗ, ಪುರಜನರೂ ಮಂತ್ರಿಗಳೂ, ರಾಜ್ಯವು ಅನಾಥವಾಗಿ ಕೆಟ್ಟುಹೋಗುವುದೆಂಬ ವಿಷಾದದಿಂದ, ತಾವಾಗಿಯೇ ನನಗೆ ಪಟ್ಟಾಭಿಷೇಕವನ್ನು ಮಾಡಿಬಿಟ್ಟರು ಅದಕ್ಕಾಗಿ ನಾನು ಆಸೆಪಟ್ಟು ಕೇಳಿದವನಲ್ಲ ನಿಜಸ್ಥಿತಿಯನ್ನು ವಿಜ್ಞಾಪಿಸಿರುವೆನು ಒಂದುವೇಳೆ ಇದರಲ್ಲಿ ನನ್ನ ತಪ್ಪಿದ್ದರೂ ನೀನು ಮನ್ನಿಸಿ ಕಾಪಾಡಬೇಕು ಈ ರಾಜ್ಯಕ್ಕೆ ನೀನೇ ರಾಜನು ನನಗೂ ನೀನೇ ಪೂಜ್ಯನು, ನಾನು ಮೊದಲಿನಂತೆಯೇ ಯುವರಾಜನಾಗಿದ್ದು ನಿನ್ನ ಸೇವೆಯಲ್ಲಿರುವೆನು ಆದರೆ ಇದುವರೆಗೆ ನೀನೂ ಇಲ್ಲದುದರಿಂದ ನಿನಗೆ ಪ್ರತಿನಿಧಿಯಾಗಿ ನಾನು ಅನಾಥವಾಗಿದ್ದ ಈ ರಾಜ್ಯವನ್ನು ಪಾಲಿಸುತಿದ್ದೆನೆಂದು ಭಾವಿಸಿ, ನನ್ನನ್ನು ಮನ್ನಿಸು ನಿನ್ನ ರಾಜ್ಯವೇ ಇದುವರೆಗೆ ನನ್ನಲ್ಲಿ ನ್ಯಾಸರೂಪವಾಗಿತ್ತೆಂದೆಣಿಸು' ನಾನು ಇದುವರೆಗೂ, ಮಂತ್ರಿ ಪೌರಜಾನಪದಾದಿಗಳಿಂದ ಕೂಡಿದ ಈ ರಾಜ್ಯವನ್ನ ನಿಷ್ಕಂಟಕವಾಗಿ ಕಾಪಾಡಿಟ್ಟಿದ್ದೆನು ಈಗ ನಿನ್ನ ರಾಜ್ಯವನ್ನು ನಿನಗೆ ಹಿಂತಿರುಗಿ ಒಪ್ಪಿಸಿರುವೆನು. ಎಲೈ ಶತ್ರುನಿಗ್ರಾಹಕನೆ! ನೀನು ಯಾವಾಗಲೂ ಸೌಮ್ಯಸ್ವ

ಭಾವವುಳ್ಳವನಲ್ಲವೆ? ನನ್ನಲ್ಲಿ ಕೋಪವನ್ನು ಬಿಡು! ನನಗೆ ನೀನೇ ಪ್ರಭುವು ಕೈಮುಗಿದು ತಲೆಯನ್ನು ತಗ್ಗಿಸಿ ಬೇಡುವೆನು ನಮ್ಮ ರಾಜ್ಯವು ಅನಾಯಕವಾಗಿ ಕೆಟ್ಟುಹೋಗಬಾರದೆಂಬ ಕೋರಿಕೆಯಿಂದ, ಮಂತ್ರಿಗಳೂ ಪುರವಾಸಿಗಳೂ ನನ್ನನ್ನು ಬಹಳವಾಗಿ ಬಲಾತ್ಕರಿಸಿ ರಾಜನನ್ನಾಗಿ ಮಾಡಿಬಿಟ್ಟರು ನಾನು ಇದನ್ನು ಕೋರಿದವನೂ ಅಲ್ಲ ಅಥವಾ ನಾನು ಇದಕ್ಕೆ ಮನಃಪೂರ್ವಕವಾಗಿ ಅಂಗೀಕರಿಸಿದವನೂ ಅಲ್ಲ!" ಎಂದೆನು ನಾನು ಹೀಗೆ ಎಷ್ಟೋ ಮೃದುವಾಕ್ಯಗಳಿಂದ ಸ್ನೇಹಪೂರ್ವಕವಾಗಿ ಹೇಳಿದರೂ ವಾಲಿಯು ನನ್ನನ್ನು ಗದರಿಸಿ, ಛೀಗಳಯುತ್ತ, ಬಾಯಿಗೆ ಬಂದಮಾತುಗಳನ್ನೆಲ್ಲಾ ಆಡತೊಡಗಿದನು ಆಮೇಲೆ ಅವನು ಪ್ರಜೆಗಳನ್ನೂ, ತನಗಿಷ್ಟರಾದ ಮಂತ್ರಿಗಳನ್ನೂ ಕರೆಸಿ, ಸಭೆಗೂಡಿಸಿ ಅವರೆಲ್ಲರಮುಂದೆ ನನ್ನನ್ನು ಕುರಿತು ಅತಿನಿಂದಿತವಾದ ಮಾತುಗಳನ್ನಾಡತೊಡಗಿ, "ಎಲೈ ಪ್ರಜೆಗಳಿರಾ! ಹಿಂದೊಮ್ಮೆ ದುರ್ಬುದ್ಧಿಯುಳ್ಳ ಮಾಯಾವಿಯೆಂಬ ಕ್ರೂರರಾಕ್ಷಸನೊಬ್ಬನು, ಅರ್ಧರಾತ್ರಿಯ ಸಮಯದಲ್ಲಿ ನಮ್ಮ ಬಿಲದ್ವಾರಕ್ಕೆ ಬಂದು ಗರ್ಜಿಸಿ, ನನ್ನನ್ನು ಯುದ್ಧಕ್ಕೆ ಕರೆದ ಸಂಗತಿಯನ್ನು ನೀವೆಲ್ಲರೂ ಬಲ್ಲಿರಷ್ಟೆ? ಅದನ್ನು ಕೇಳಿದ ಕ್ಷಣವೇ ನಾನು ನನ್ನ ಗುಹೆಯೆನ್ನು ಬಿಟ್ಟು ಹೊರಟುಬಂದೆನು ಕ್ರೂರನಾದ ಈ ನನ್ನ ತಮ್ಮನೂ ನನ್ನ ಹಿಂದೆ ಬಂದನು ಆ ರಾಕ್ಷಸನು ಮಹಾಬಲಾಢ್ಯನಾದರೂ ಹೀಗೆ ನಾವಿಬ್ಬರೂ ಬರುತ್ತಿರುವುದನ್ನು ನೋಡಿ ಹೆದರಿ ಓಡಲಾರಂಭಿಸಿದನು ಹಾಗೆಯೇ ನಾವಿಬ್ಬರೂ ಬನ್ನಟ್ಟಿ ಬರುತ್ತಿರುವುದನ್ನು ನೋಡಿ, ಒಂದುಬಿಲದಲ್ಲಿ ಪ್ರವೇಶಿಸಿಬಿಟ್ಟನು ಬಲಾಢ್ಯನಾದ ಆ ಘೋರರಾಕ್ಷಸನು ಬಿಲಕ್ಕೆ ಹೊಕ್ಕುದನ್ನು ಕಂಡು, ನಾನು ಕ್ರೂರಸ್ವಭಾವವುಳ್ಳ ಈ ನನ್ನ ತಮ್ಮನನ್ನು ಕುರಿತು, "ವತ್ಸನೆ! ಈ ರಾಕ್ಷಸನನ್ನು ಕೊಂದಹೊರತು ಪಟ್ಟಣಕ್ಕೆ ಹಿಂತಿರುಗಿಹೋಗಬಾರದು ಆದುದರಿಂದ ನಾನು ಅವನನ್ನು ಕೊಂದು ಬರುವವರಗೂ ನೀನು ಈ ಬಿಲದ್ವಾರದಲ್ಲಿ ಎಚ್ಚರಿಕೆಯಿಂದ ಕಾದಿರು!" ಎಂದೆನು ಇವನು ಬಾಗಿಲಲ್ಲಿ ಕಾದಿರುವನೆಂಬ ನಂಬಿಕೆಯಿಂದಲೇ ನಾನು ದುರ್ಗಮವಾದ ಆ ಬಿಲದೊಳಕ್ಕೆ ನಿರ್ಭಯವಾಗಿ ಪ್ರವೇಶಿಸಿದೆನು ಆ ಬಿಲದಲ್ಲಿ ಅವಿತುಕೊಂಡ ಆ ರಾಕ್ಷಸನನ್ನು

ಕಂಡುಹಿಡಿಯುವುದಕ್ಕಾಗಿಯೇ ಬಂದುವರ್ಷವು ಹಿಡಿಯುತು ಕೊನೆಗೆ ಆತನು ನನ್ನ ಕಣ್ಣಿಗೆ ಸಿಕ್ಕಿಬಿದ್ದನು ನಾನು ಲೀಲಾಮಾತ್ರದಿಂದಲೇ ಅವನನ್ನೂ, ಅವನಬಂಧುಗಳನ್ನೂ ಅಲ್ಲಿಯೇ ಕೊಂದುಬಿಟ್ಟೆನು ಆಗ ನನ್ನ ಶಕ್ತಿಗೆ ತಾಳ ಲಾರದೆ ಆರಾಕ್ಷಸನು ಅರಚಿಕೊಳ್ಳುತ್ತ ಬಾಯಿಂದ ರಕ್ತವನ್ನು ಕಾರಿ ಕೆಳಗೆ ಬಿದ್ದನು ಆ ಬಿಲವೆಲ್ಲವೂ ರಕ್ತಮಯವಾಗಿ ನಿಲ್ಲುವುದಕ್ಕೂ ಸ್ಥಳವಿಲ್ಲದಂ ತಾಯಿತು ಹೀಗೆ ನಾನು ನನ್ನ ವೀರ್ಯದಿಂದ ದುಂದುಭಿಪುತ್ರನಾದ ಆ ಮಾಯಾವಿಯನ್ನುಕೊಂದು, ಅಲ್ಲಿ ರಕ್ತದ ದುರ್ಗಂಧವನ್ನು ಸಹಿಸಲಾರ ದೆ ಬಿಲದಿಂದ ಹೊರಗೆ ಬರುವುದಕ್ಕೆ ಯತ್ನಿಸಿದೆನು ಎಲ್ಲಿ ನೋಡಿದರೂ ದ್ವಾರವು ಕಾಣಿಸಲಿಲ್ಲ ಆದರ ದ್ವಾರವು ಕಲ್ಲುಗಳಿಂದ ಮುಚ್ಚಲ್ಪಟ್ಟಿದ್ದು ದರಿಂದ ಎಲ್ಲಿ ಹೋಗುವುದಕ್ಕೂ ದಾರಿಯಿಲ್ಲ ಆಗ ನಾನು ''ಸುಗ್ರೀವಾ ಸುಗ್ರೀವಾ!" ಎಂದು ಎಷ್ಟು ಕೂಗಿದರೂ ಪ್ರತ್ಯುತ್ತರವಿಲ್ಲ ನನಗಾದ ರೋ ಆಗ ಮಿತಿಮೀರಿದ ಕೋಪವೂ ಸಂಕಟವೂ, ಉಂಟಾಯಿತು ಕೊನೆಗೆ ನಾನೇ ಆ ಬಿಲದ್ವಾರದ ಕಲ್ಲುಗಳನ್ನು ಕಾಲುಗಳಿಂದೊದ್ದು ಬಹುಪ್ರಯ ತ್ನದಿಂದ ಕಡಹಿಬಿಟ್ಟೆನು ಆದಾರಿಯಿಂದಲೇ ಹೊರಕ್ಕು ಹೊರಟು ಇಲ್ಲಿಗೆ ಬಂ ದು ಸೇರಿದೆನು ಆಹಾ! ಕ್ರೂರನಾದ ಈ ಸುಗ್ರೀವನು ನನ್ನ ರಾಜ್ಯವನ್ನು ದಕ್ಕಿಸಿಕೂಳ್ಳಬೇಕೆಂಬ ದುರಾಸೆಯಿಂದ, ಒಡಹುಟ್ಟಿದ ಪ್ರೇಮವನ್ನೂ ಮರತು, ಆ ಬಿಲದಲ್ಲಿ ನಾನಿರುವಾಗ, ಇದೇಸಮಯವೆಂದು ಬಿಲದ್ವಾರ ವನ್ನು ಮುಚ್ಚಿ, ಹೊರಕ್ಕು ಬಾರದಂತ ಮಾಡಿದನಲ್ಲಾ!" ಎಂದನು ಇಷ್ಟು ಹೇಳಿದುದುಮಾತ್ರವೇ ಅಲ್ಲದೆ, ಆಕ್ಷಣವೇ ನನ್ನನ್ನು ಉಟ್ಟಿದ್ದ ಈ ಒಂದುಬಟ್ಟೆಯೊಡನೆ ಊರಿಂದ ಹೊರಡಿಸಿ ಬಿಟ್ಟನು ಇದರಮೇಲೆ ನನ್ನ ಭಾರ್ಯೆಯನ್ನೂ ಅಪಹರಿಸಿದವನು ವಾಲಿಯು ಭಯಕ್ಕಾಗಿ ನಾನು ಈ ಸ ಮಸ್ತಭೂಮಿಯನ್ನೂ, ಸಮಸ್ತ ಸಮುದ್ರಗಳನ್ನೂ, ಸಮಸ್ತ ವನಗಳ ನ್ನೂ ಸುತ್ತಿದೆನು ಎಲ್ಲಿಗೆ ಹೋದರೂ ಅವನು ನನ್ನನ್ನು ಬೆನ್ನಟ್ಟಿಬರುತಿದ್ದು ದರಿಂದ,ಎಲ್ಲಿಯೂ ನನಗೆ ಉಳಿಗಾಲವಿರಲಿಲ್ಲ .ಹೆಂಡತಿಯನ್ನು ಕಳೆದುಕೊಂ ಡ ದುಃಖದಿಂದ ಕಂದುಕುಂದಿ ಕೃಶನಾಗಿದ್ದನಾನು, ಕೊನೆಗೆ ಈ ಋಶ್ಯ ಮೂಕಕ್ಕೆ ಬಂದು ಸೇರಿದೆನು ಬೇರೊಂದು ಕಾರಣಕ್ಕಾಗಿ ಇಲ್ಲಿ ವಾಲಿಗೆ

ಪ್ರವೇಶವಿಲ್ಲದುದರಿಂದ, ಇಲ್ಲಿ ನಾನು ನಿರ್ಭಯವಾಗಿರುವೆನು ರಾಮಾ ! ನಮ್ಮಿಬ್ಬರ ಈ ವೈರವೃತ್ತಾಂತವು ಅತಿವಿಸ್ತಾರವಾದರೂ ಅದೆಲ್ಲವನ್ನೂ ನಿನಗೆ ಯಥಾಸ್ಥಿತವಾಗಿ ತಿಳಿಸಿರುವೆನು ನಾನು ನಿರಪರಾಧಿಯಾಗಿದ್ದರೂ ನನಗೆ ಬಂದ ಮಹಾವಿಪತ್ತನ್ನು ನೋಡಿದೆಯಾ? ರಾಮಾ ! ನೀನು ಮಹಾವೀರನು ಆಶ್ರಿತರಿಗೆ ಅಭಯವನ್ನು ಕೊಟ್ಟು ಕಾಪಾಡುವವನು ವಾಲಿಭಯದಿಂದ ಕೊರಗುತ್ತಿರುವ ನನ್ನಲ್ಲಿಯೂ ಅನುಗ್ರಹವನ್ನಿಟ್ಟು ಆ ನನ್ನ ವೈರಿಯನ್ನು ನಿಗ್ರಹಿಸಬೇಕು " ಎಂದನು ಆಗ ತೇಜಸ್ವಿಯಾದ ರಾಮನು ಮಂದಹಾಸದೊಡನೆ ಆ ಸುಗ್ರೀವನನ್ನು ಕುರಿತು, ಧರ್ಮಯುಕ್ತವಾದ ಮಾತಿನಿಂದ ''ಎಲೈ ಸುಗ್ರೀವನೆ ! ಅವೋಘಗಳಾಗಿಯೂ, ಸೂರ್ಯಸಮಾನಗಳಾಗಿಯೂ ಇರುವ ಈ ನನ್ನ ತೀಕ್ಷ್ಣಬಾಣಗಳು, ಅತಿವೇಗದಿಂದ ಹೋಗಿ ದುರಾಚಾರನಾದ ಆ ವಾಲಿಯ ಮೇಲೆ ಬಿಳುವುದರಲ್ಲಿ ಸಂದೇಹವಿಲ್ಲ ನಿನ್ನ ಪತ್ನಿಯನ್ನಪಹರಿದ ದುಷ್ಟಾತ್ಮನೂ, ಕುಲಗೇಡಿಯೂ ಆದ ಆ ವಾಲಿಯು ನನ್ನ ಕಣ್ಣಿಗೆ ಬಿಳುವುದೇ ಅಡ್ಡಿ ! ಆಕ್ಷಣವೇ ಅವನನ್ನು ಕೊಂದು ಹಾಕುವೆನು ನನಗೆ ಗೋಚರಿಸುವವರೆಗೆ ಮಾತ್ರವೇ ಆವನು ಬದುಕಿರಬಹುದು ನನಗೆ ಭಾರ್ಯಾವಿಯೋಗದುಂಟಾಗಿರುವ ದುಃಖವನ್ನು ಊಹಿಸಿಕೂಂಡರೆ, ನಿನಗೂ ನಿನ್ನ ಪತ್ನೀವಿಯೋಗದಿಂದ ಎಷ್ಟುಮಟ್ಟಿಗೆ ದುಃಖವಿರಬಹುದೆಂಬುದು ಸ್ಪಷ್ಟವಾಗಿ ತಿಳಿಯುವುದು ಎಲೈ ವಿತ್ರನೆ? ಚಿಂತಿಸಬೇಡ ! ಆ ದುಃಖಸಮುದ್ರದಿಂದ ನಿನ್ನನ್ನು ದಾಟಿಸುವೆನು ನಿನ್ನ ಕೋರಿಕೆಯನ್ನು ಲೋಪವಿಲ್ಲದೆ ಪೂರ್ಣವಾಗಿ ಸಿದ್ಧಿಸೊಂದಿಸುವೆನು " ಎಂದನು ರಾಮನು ಹೇಳಿದ ಈ ಹಿತವಾಕ್ಯವನ್ನು ಕೇಳಿ ಸುಗ್ರೀವನು ಪರಮಸಂತುಷ್ಟನಾಗಿ, ರಾಮನನ್ನು ಅನೇಕವಿಧದಲ್ಲಿ ಕೊಂಡಾಡಿದನು ಇಲ್ಲಿಗೆ ಹತ್ತನೆಯಸರ್ಗವು

ಸುಗ್ರೀವನು ರಾಮನಿಗೆ ವಾಲಿಯ ಪರಾಕ್ರಮವನ್ನೂ, ವಾಲಿದುಂದುಭಿಗಳ ಯುದ್ಧವನ್ನೂ, ಆ ವಾಲಿಗೆ ಮತಂಗಮುನಿಯಿಂದುಂಟಾದ ಶಾಪವನ್ನೂ, ಸಪ್ತ ಸಾಲಗಳನ್ನು ತನ್ನ ಬಾಣದಿಂದ ಕೂರದ ಆ ವಾಲಿಯ ಶಕ್ತಿಯನ್ನೂ ತಿಳಿಸಿದುದು ರಾಮನು ಸುಗ್ರೀವನಿಗೆ ನಂಬಿಕೆಯನ್ನು ಹುಟ್ಟಿಸುವುದಕ್ಕಾಗಿ ದುಂದುಭಿಶರೀರವನ್ನು ಇನ್ನೂರು ಬಿಲ್ಲಳತಗಳ ದೂರಕ್ಕೆ ಚಿಮ್ಮಿದುದು

ಹೀಗೆ ವೀರ್ಯೋತ್ಸಾಹಗಳನ್ನು ಸೂಚಿಸತಕ್ಕ ರಾಮನ ಮಾತನ್ನು ಕುಳಿ ಸುಗ್ರೀವನು ಪರಮಸಂತೋಷದಿಂದ ಆ ರಾಮನಮುಂದೆ ಕೈಮುಗಿದು ನಿಂತು "ಎಲೈ ಮಹಾತ್ಮನೆ! ನಿನ್ನ ಸ್ವರೂಪವೇ ನಿನ್ನ ವೀರ್ಯವನ್ನು ತಿಳಿಸುತ್ತಿರುವುದು! ನೀನು ಕೋಪತಾಪರ, ಪ್ರಳಯಕಾಲದ ಸೂರ್ಯನಂತೆ ಧಗಧಗಿಸುತ್ತಿರುವ ಮರ್ಮಭೇದಕಗಳಾದ ನಿನ್ನ ತೀಕ್ಷ್ಣ ಬಾಣಗಳಿಂದ ಈ ತ್ರೈಲೋಕ್ಯವನ್ನೂ ಒಮ್ಮೆಯೇ ದಹಿಸಬಲ್ಲೆಯಂಬುದರಲ್ಲಿಯೂ ಸಂದೇಹವಿಲ್ಲ ಆದರ ಮಾಡಲು ನೀನು ಆ ವಾಲಿಯ ಬಲಪರಾಕ್ರಮಗಳನ್ನೂ, ವೀರ್ಯಧೈರ್ಯಾದಿಗಳನ್ನೂ ನಿನ್ನಿಂದ ಚನ್ನಾಗಿ ತಿಳಿದುಕೊಂಡು, ಆಮೇಲ ಏನುಮಾಡಬೇಕೆಂಬುದನ್ನು ನಿಶ್ಚಯಿಸುವುದುತ್ತಮವು ಆ ವಾಲಿಯು * ಬ್ರಾಹ್ಮಮುಹೂರ್ತದಲ್ಲಯೇ ಎದ್ದು, ಸೂರ್ಯನು ಉದಯಿಸುವಷ್ಟರೊಳಗಾಗಿ, ತನ್ನ ಸಂಧ್ಯಾಕಾರ್ಯಗಳಿಗಾಗಿ ಪಶ್ಚಿಮಸಮುದ್ರದಿಂದ ಪೂರ್ವಸಮುದ್ರಕ್ಕೂ, ದಕ್ಷಿಣಸಮುದ್ರದಿಂದ ಉತ್ತರಸಮುದ್ರಕ್ಕೂ ಹೋಗಿ ಬರುವನು ಈ ನಾಲ್ಕುಸಮುದ್ರಗಳನ್ನೂ ಸ್ವಲ್ಪವೂ ಶ್ರಮವಿಲ್ಲದೆ

* ಇದೇವಿಷಯವಾಗಿ ಉತ್ತರಕಾಂಡದಲ್ಲಿ ತಾರೆಯು ರಾವಣನನ್ನು ಕುರಿತು 'ಚತುರೊಪ್ಯುಪಿಸಮುದ್ರೇಭ್ಯಸ್ಸಂಧ್ಯಾಮನ್ವಾಸ್ಯರಾವಣ । ಇಮಂ ಮುಹೂರ್ತಮಾಯಾತಿ ವಾಲೀ ತಿಸ್ರಮುಹೂರ್ತಕಂ" ಎಂಬುದಾಗಿ, ವಾಲಿಯು ಸಂಧ್ಯಾಕಾರ್ಯಕ್ಕಾಗಿ ನಾಲ್ಕು ಸಮುದ್ರಗಳಿಗೂ ಹೋಗಿಬರುವುದಾಗಿ ಹೇಳಿರುವಳು "ಏಕಕಾಲದ ಸಂಧ್ಯೋಪಾಸನೆಯನ್ನು ನಾಲ್ಕುಸಮುದ್ರಗಳಲ್ಲಿಯೂ ಮಾಡುವುದು ಹೇಗೆ?" ಎಂದರೆ, ಕೆರೆಗೆ ಹೋದವರು ಒಂದುಕಡಯಲ್ಲಿ ಶೌಚವನ್ನೂ, ಮತ್ತೊಂದುಕಡಯಲ್ಲಿ ಸ್ನಾನವನ್ನೂ, ಇನ್ನೊಂದು ಕಡಯಲ್ಲಿ ಅರ್ಘ್ಯಪ್ರದಾನಗಳನ್ನೂ ಮಾಡುವಂತೆ, ಈ ವಾಲಿಯೂ ನಡೆಸುತಿದ್ದುದಾಗಿ ಗ್ರಾಹ್ಯವು.

ಸುಲಭವಾಗಿ ಸುತ್ತಿಬರುವನು ಇದಲ್ಲದೆ ಮಹಾವೀರ್ಯವುಳ್ಳ ಆ ವಾಲಿಯು, ಪರ್ವತಾಗ್ರಗಳನ್ನೇರಿ, ಅಲ್ಲಿ ದೊಡ್ಡದೊಡ್ಡಪರ್ವತಶಿಖರಗಳನ್ನು ಕೈಯಿಂದೆತ್ತಿ, ಚಂಡಿನಂತೆ ವೇಗದಿಂದ ಮೇಲಕ್ಕನೆದು, ಅವುಗಳನ್ನು ಆತುಕೂಳ್ಳುವನು ಮತ್ತು ಆತನು ತನ್ನ ಬಲವನ್ನು ತೋರಿಸುವುದಕ್ಕಾಗಿ ಕಾಡುಗಳಲ್ಲಿ ದೃಢವಾಗಿ ಬೆಳೆದ ಬಗೆಬಗೆಯ ಮರಗಳೆಲ್ಲವನ್ನೂ ತನ್ನ ಕೈಯಿಂದಲೇ ಮುರಿಯುತ್ತಿರುವನು ಪೂರ್ವದಲ್ಲಿ ಕೃಲಾಸತೀರದಂತಿದ್ದ ಮಹಿಷರೂಪಿಯಾದ ದುಂದುಭಿಯಂಬ ರಾಕ್ಷಸನೂಬ್ಬನು, ಸಾವಿರಾನೆಗಳ ಬಲವುಳ್ಳವನಾಗಿದ್ದನು ಆ ದುಷ್ಟಾತ್ಮನು ತನ್ನವೀರ್ಯದ ಕೂಬ್ಬಿನಿಂದಲೂ, ತಾನು ಪಡೆದಿದ್ದ ವರದ ಬಲದಿಂದಲೂ ಸಮುದ್ರರಾಜನು,ಒಮ್ಮೆ ನದೀಪತಿಯಾದ ಸನು ದ್ರರಾಜನಬಳಿಗೆ ಹೋದನು ವಿಶೇಷವಾದ ಆಲಗಳಿಂದ ತುಂಬಿ, ರತ್ನರಾಶಿಯೆಸಿಸಿಕೊಂಡಿರುವ ಆ ಮಹಾಸಮುದ್ರವನ್ನು ನೋಡಿ,ಇದರ ಆರ್ಭಟವನ್ನಡಗಿಸಬೇಕೆಂಬುದಕ್ಕಾಗಿ ಆ ಸಮುದ್ರವನ್ನುಕುರಿತು ,,ನನ್ನೊಡನೆ ಯುದ್ಧಕ್ಕೆ ಬರುವಯಾ?" ಎಂದನು ಆಗ ಧರ್ಮಾತ್ಮನಾದ ಸಮುದ್ರನು ಮನುಷ್ಯರೂಪದಿಂದ ಕಾಣಿಸಿಕೊಂಡು, ಮೃತ್ಯುಚೋದಿತನಾದ ಆ ರಾಕ್ಷಸನನ್ನು ನೋಡಿ ,,ಅಯ್ಯಾ! ಬಲಾಢ್ಯನೆ! ಯುದ್ಧದಲ್ಲಿ ನೀನು ಎಣೆಯಿಲ್ಲದ ಪಾಂಡಿತ್ಯವುಳ್ಳವನು ನಿನ್ನೊಡನೆ ನಾನು ಯುದ್ಧಮಾಡಬಲ್ಲೆನೆ? ಎಂದಿಗೂ ನನ್ನಿಂದ ಸಾಧ್ಯವಲ್ಲ ಹಾಗೆ ನಿನಗೆ ಯುದ್ಧಮಾಡಬೇಕೆಂಬ ಆಸೆಯಿದ್ದರೆ, ನಿನ್ನೊಡನೆ ಸಮವಾಗಿ ನಿಂತು ಯುದ್ಧಮಾಡಬಲ್ಲ ವೀರನೊಬ್ಬನನ್ನು ತೋರಿಸಿಕೂಡುವೆನು ಮಹಾರಣ್ಯದಲ್ಲಿ ಪರ್ವತರಾಜನೊಬ್ಬನಿರುವನು ಅನೇಕತಪಸ್ವಿಗಳಿಗೆ ಆಶ್ರಯನಾಗಿರುವನು ಆತನು ರುದ್ರನಿಗೆ ಹೆಣ್ಣುಕೊಟ್ಟ ಮಾವನು ಅವನಿಗೆ ಹಿಮವಂತನೆಂದು ಹೆಸರು ದೊಡ್ಡಗುಹೆಗಳನ್ನೂ, ಗಿರಿನದಿಗಳನ್ನೂ ಹೊಂದಿ ಅನೇಕವಾದ ಸಣ್ಣಗುಹೆಗಳಿಂದಲೂ. ಕಮರಿಗಳಿಂದಲೂ ಭಯಂಕರನಾಗಿರುವನು ಅವನು ನಿನ್ನನ್ನು ಯುದ್ಧದಲ್ಲಿ ಸಂಪೂರ್ಣವಾಗಿ ತೃಪ್ತಿಹೊಂದಿಸಬಹುದು" ಎಂದನು ಆಗ ದುಂದುಭಿಯು, ಸಮುದ್ರರಾಜನೂ ತನಗೆ ಭಯಪಟ್ಟನೆಂಬ ಸಂತೋಷದಿಂದುಬ್ಬುತ್ತ, ಬಿಲ್ಲಿನಿಂದ ಹೊರಟ ಬಾಣದಂತೆ ಅತಿವೇಗದಿಂದ ಹಿಮವತ್ಪರ್ವತಪ್ರಾಂತಕ್ಕೆ ಹೋದನು ಆ ಪರ್ವತದ

ಸಮೀಪದಲ್ಲೆ ನಿಂತು, ಅಲೆಗಳಂತೆ ದೊಡ್ಡವಾದ ಅದರ ಬಿಳೀಕಲ್ಲುಗಳನ್ನು ನಾನಾಕಡೆಗಳಿಗೂ ಉರುಳಿಸಿ, ಆಪರ್ವತರಾಜನನ್ನು ಕೆಣಕಿ, ಜಂಬಾವರ್ತಿಗ ರ್ಜಿಸಿದನು ಆಗ ಆ ಪರ್ವತರಾಜನು,ಬಿಳೀಮೇಘದಂತೆ ಆಕಾರವುಳ್ಳವನಾಗಿ, ಸೌಮ್ಯಸ್ವರೂಪನಾಗಿ, ನೋಡುವವರಿಗೆ ಮೇಲೆಮೇಲೆ ಸಂತೋಷವನ್ನುಂಟುಮಾಡತಕ್ಕ ಪ್ರಿಯದರ್ಶನವುಳ್ಳವನಾಗಿ ತನ್ನ ಶಿಖರದಲ್ಲಿಯೇ ದುಂದುಭಿಗೆ ಕಾಣಿಸಿಕೊಂಡು ,,ಎಲ್ಲ ಧರ್ಮವತ್ಸಲನೆ! ನೀನು ನನ್ನನ್ನೀಕ ಹೀಗೆ ಪೀಡಿಸುವ! ನಾನು ಇದುವರಗೆ ಯಾರೂಡನೆಯೂ ಯುದ್ಧಮಾಡದವನಲ್ಲ. ಯುದ್ಧದಲ್ಲಿ ನನಗೆ ಸಾಮರ್ಥ್ಯವೂ ಇಲ್ಲ ಕೇವಲ ಬಡಮುನಿಗಳಿಗೆ ಆಶ್ರಯವಾದ ನಾನು ಹೇಗೆ ಯುದ್ಧಮಾಡಬಲ್ಲೆನು?" ಎಂದನು ಹೀಗ ವಾಕ್ಚಾತುರ್ಯದಿಂದ ಸನ್ಮಾನಪಡಿಸುತ್ತಿರುವ ಪರ್ವತರಾಜನನ್ನು ನೋಡಿ ದುಂದುಭಿಯು, ಕೋಪದಿಂದ ಕಣ್ಣುಗಳನ್ನು ಕಂಪಾಗಿ ಮಾಡಿಕೊಂಡು ,,ಎಲ ಪರ್ವತರಾಜನ! ಹೋಗಲಿ! ನಿನಗೆ ಯುದ್ಧಮಾಡುವುದಕ್ಕೆ ಶಕ್ತಿಯಿಲ್ಲದಿದ್ದರೂ ಇರಬಹುದು ಅಥವಾ ಶಕ್ತಿಯಿದ್ದರೂ ನನಗೆ ಭಯಪಟ್ಟುತಂತ್ರದಿಂದ ಈ ಈ ಮಾತುಗಳನ್ನಾಡಿದ್ದರೂ ಇರಬಹುದು! ಚಿಂತೆಯಿಲ್ಲ! ನಿನ್ನೊಡನೆ ನಾನು ಯುದ್ಧಮಾಡುವುದಿಲ್ಲ! ಆದರ ಈಗ ನನಗೆ ಹೇಗಾದರೂ ಯುದ್ಧವನ್ನು ಮಾಡಿಯೇತೀರಬೇಕೆಂಬ ಆಸೆಯಿರುವುದರಿಂದ, ನಿನ್ನೊಡನೆ ಯುದ್ಧಮಾಡಬಲ್ಲ ಸಮರ್ಥರಾರೆಂಬುದನ್ನಾದರೂ ಹೇಳು" ಎಂದನು ಆಗ ಹಿಮವಂತನು, ಇದುವರಗ ಯಾರೂ ಯಾವಾಗಲೂ ಹೇಳಿಲ್ಲದ ಈ ಕೊಬ್ಬಿನ ಮಾತುಗಳನ್ನು ಕೇಳಿ, ಮನಸ್ಸಿನಲ್ಲಿ ನಗುತ್ತ ಕೋಪಗೊಂಡು, ಆ ರಾಕ್ಷಸನನ್ನು ನೋಡಿ, ತನ್ನ ವಾಕ್ಚಾತುರ್ಯದಿಂದ ,,ಎಲೈದುಂದುಭಿ! ನಿನಗೆ ಹಾಗೆ ಆಸೆಯಿದ್ದರ ಕಿಷ್ಕಿಂಧಾಪುರಕ್ಕೆ ಹೋಗು! ಅದು ಎಣೆಯಿಲ್ಲದ ಕಾಂತಿಯಿಂದ ಶೋಭಿಸುತ್ತಿರುವುದು ಅಲ್ಲಿ ವಾಲಿಯೆಂಬ ವಾನರೋತ್ತಮನೊಬ್ಬನಿರುವನು ಅವನು ಮಹಾಪ್ರಾಜ್ಞನು ಶ್ರೀಮಂತನು ಪರಾಕ್ರಮದಲ್ಲಿ ಇಂದ್ರನಿಗೆ ಸಾಟಿಯಾದವನು ಅವನು ಯುದ್ಧದಲ್ಲಿ ಅಸದೃಶವಾದ ಪಾಂಡಿತ್ಯವುಳ್ಳವನು ದೇವೇಂದ್ರನು ನಮುಚಿಗೆ ಯುದ್ಧವನ್ನು ಕೊಟ್ಟಂತೆ, ನಿನ್ನೊಡನೆ ದೊಡ್ಡದ್ವಂದ್ವಯುದ್ಧವನ್ನು ಮಾಡಬಲ್ಲನು ನೀನು

ವೇ ಈಗ ನಿನ್ನೊಡನೆ ಮಾಡಬೇಕಾದ ಯುದ್ಧಕ್ಕೆ, *ವೀರಪಾನವೆಂದು ತಿಳಿ!" ಎಂದನು ಹೀಗೆಂದು ಹೇಳಿ ವಾಲಿಯು, ಪರಮಕುಪಿತನಾಗಿ, ಪೂರ್ವದಲ್ಲಿ ತನಗೆ ತಂದಯಾದ †ದೇವೇಂದ್ರನು ಕೊಟ್ಟ ಸುವರ್ಣಮಾಲಿಕೆಯನ್ನು ಸರಿಯಾಗಿ ಕೊರಲಿಗೇರಿಸಿಕೊಂಡು ಯುದ್ಧಕ್ಕೆ ನಿಂತನು ಆಗಲೇ ವಾಲಿಯು ಪರ್ವತಾಕಾರವುಳ್ಳ ಆ ದುಂದುಭಿಯ ಕೊಂಬುಗಳೆರಡನ್ನೂ ತನ್ನ ಎರಡು ಕೈಗಳಿಂದ ಹಿಡಿದುಕೊಂಡು, ಅವನ ದೇಹವನ್ನು ಗಿರಗಿರನೆ ತಿರುಗಿಸಿ ಅವನನ್ನು ದೂರಕ್ಕೆಸೆದುಬಿಟ್ಟನು ಹೀಗೆ ಆತನನ್ನು ನೆಲದಲ್ಲಿ ಕೆಡಹಿದಮೇಲೆ ಒಂದು ಸಿಂಹನಾದವನ್ನೂ ಮಾಡಿದನು ಆ ದುಂದುಭಿಯ ಎರಡು ಕಿವಿಗಳಿಂದಲೂ ರಕ್ತಪ್ರವಾಹವು ಹೊರಟಿತು ಆದರೂ ಆ ದುಂದುಭಿಯು ಹಿಮ್ಮೆಟ್ಟದೆ ಪುನಃ ವಾಲಿಗಿದಿರಾಗಿ ನಿಂತು ಯುದ್ಧಕ್ಕೆ ತೊಡಗಿದನು ದುಂದುಭಿವಾನರರಿಬ್ಬರೂ ಒಬ್ಬರನ್ನೊಬ್ಬರು ಜಯಿಸಬೇಕೆಂಬ ಹಟದಿಂದ, ಕೋಪಾವೇಶದೊಡಗೂಡಿ, ಮಹಾಘೋರವಾದ ಯುದ್ಧವನ್ನಾರಂಭಿಸಿದರು ಆಗ ಇಂದ್ರಸಿಗೆಣೆಯಾದ ಪರಾಕ್ರಮವುಳ್ಳ ವಾಲಿಯು, ತನ್ನ ಮುಷ್ಟಿಗಳಿಂದಲೂ ಮೊಳಕಾಲುಗಳಿಂದಲೂ, ಆ ದುಂದುಭಿಯನ್ನು ಗುದ್ದುತಿದ್ದನು ಕೈಗೆ ಸಿಕ್ಕಿದ ಕಲ್ಲುಮರಗಳನ್ನೆಲ್ಲಾ ಆತನಮೇಲೆ ಪ್ರಯೋಗಿಸಿ ಅತಿಸಾಹಸದಿಂದ ಯುದ್ಧಮಾಡಿದನು ಆ ರಾಕ್ಷಸನೂ ಕೈಯಿಂದಾದ ಪ್ರಸಾಹಸವನ್ನು ತೋರಿಸುತಿದ್ದನು ಹೀಗೆ ವಾನರರಾಕ್ಷಸರಿಬ್ಬರೂ ಬಹಳಹೊತ್ತಿನವರೆಗೆ ಒಬ್ಬರನ್ನೊಬ್ಬರು ಹೊಡೆಯುತ್ತಿರಲು, ಕೊನೆಕೊನೆಗೆ ದುಂದುಭಿಯ ಶಕ್ತಿಯು ಕಡಿಮೆಯಾಗುತ್ತಾ ಬಂದಿತು ಇಂದ್ರಪುತ್ರನಾದ ವಾಲಿಯ ಕೈ ಮೇಲಾಯಿತು ಕ್ರಮಕ್ರಮವಾಗಿ ಆ ದುಂದುಭಿಯ ಅವಯವವ್ಯಾಪಾರಗಳೂ, ಅವನ ಧೈರ್ಯವೂ, ಅವನ ವೀರ್ಯವೂ, ಅವನ ಪರಾಕ್ರಮ

---

* ವೀರಪಾನವೆಂದರೆ ವೀರರು ಯುದ್ಧಕ್ಕೆ ಹೊರಡುವುದಕ್ಕೆ ಮೊದಲು ಉತ್ಸಾಹವೃದ್ಧಿಗಾಗಿ ಕುಡಿಯುವ ರಸವು

† ದೇವೇಂದ್ರನು ಈ ಸುವರ್ಣಮಾಲಿಕೆಯನ್ನು ವಾಲಿಗೆ ಕೊಟ್ಟಾಗ, "ಇದನ್ನು ಧರಿಸಿ ಯುದ್ಧಮಾಡುವಾಗ ಇದಿರಿಗಿರುವ ಶತ್ರುಗಳ ಬಲವೆಲ್ಲವೂ ನಿನಗೆ ಒರಲೆ" ಎಂದು ಅನುಗ್ರಹಿಸಿರುವನು

ವೂ ಕುಂದುತ್ತ ಬಂದುವು ವಾಲಿಯು ಇದೇ ಸಮಯವನ್ನು ನೋಡಿಕೊಂಡಿದ್ದು, ಆ ದುಂದುಭಿಯನ್ನೆತ್ತಿ ನೆಲದಲ್ಲಿ ಕುಕ್ಕಿಬಿಟ್ಟನು ಹೀಗೆ ವಾಲಿಯ ಕೈಯಿಂದ ನಜ್ಜುಗುಜ್ಜಾಗಿ ಮಾಡಲ್ಪಟ್ಟ ಆ ರಾಕ್ಷಸಶರೀರವು, ಆಗಲೇ ಗತ ಪ್ರಾಣವಾಗಿ ನೆಲದಮೇಲೆ ಬಿದ್ದಿತು ಸತ್ತುಬಿದ್ದ ಆ ರಾಕ್ಷಸನ ಪರ್ವತಾಕಾರವಾದ ದೇಹವನ್ನು ವಾಲಿಯು ತನ್ನ ಎರಡುಕೈಗಳಿಂದಲೂ ಕೇವಲಲೀಲಾಸೂತ್ರದಿಂದೆತ್ತಿ, ಒಂದೇ ವೇಗದಿಂದ ಒಂದು ಗಾವ್ದದಷ್ಟು ದೂರಕ್ಕೆ ಹೋಗಿ ಬಿಳುವಂತೆ ಬಿಸುಟನು ಹೀಗೆ ಬಿಸುಡುವ ವೇಗದಲ್ಲಿ ಆ ದುಂದುಭಿಯ ಬಾಯಿಯಿಂದ ರಕ್ತವು ಬಿಳಲಾರಂಭಿಸಿತು ಆ ರಕ್ತಬಿಂದುಗಳು ಗಾಳಿಗೆ ಹಾರಿ, ಸಮೀಪದಲ್ಲಿದ್ದ ಈ ಮತಂಗಾಶ್ರಮದಲ್ಲಿ ಬಿದ್ದುವು ತನ್ನ ಪುಣ್ಯಾಶ್ರಮದಲ್ಲಿ ರಕ್ತಬಿಂದುಗಳು ಬಿಳುವುದನ್ನು ಕಂಡು ಅಲ್ಲಿದ್ದ ಮತಂಗಮುನಿಗೆ ಅತಿಕೋಪವುಂಟಾಯಿತು ಆಗ ಅವನು ಮಿತಿಮೀರಿದ ಆ ಕ್ರೋಶದಿಂದ ಮೇಲೆನೋಡಿ ''ಆಹಾ! ಯಾರವನು? ಹೀಗೆ ರಕ್ತವನ್ನು ಸುರಿದು ಈ ನನ್ನ ಪುಣ್ಯಾಶ್ರಮವನ್ನೂ ನನ್ನನ್ನೂ ಅಶುಚಿಯನ್ನಾಗಿ ಮಾಡಿದ ದುರಾತ್ಮನಾರು? ವಿವೇಕವಿಲ್ಲದ ದುರ್ಬುದ್ಧಿಯುಳ್ಳ ಯಾವ ಮೂಢನು ಈ ಅಕಾರ್ಯವನ್ನು ಮಾಡಿರಬಹುದು?" ಎಂದು ಸ್ವಲ್ಪಹೊತ್ತಿನವರೆಗೆ ಚಿಂತಿಸಿ, ಆಶ್ರಮದಹೊರಗೆ ಬಂದು ಸುತ್ತಲೂ ನೋಡಿದನು ಅಲ್ಲಿ ಒಂದಾನೊಂದು ದುಕಡೆಯಲ್ಲಿ ಪರ್ವತಾಕಾರವಾಗಿ ನೆಲದಮೇಲೆ ಸತ್ತುಬಿದ್ದಿದ್ದ ಒಂದು ಎಮ್ಮೆಯ ದೇಹವನ್ನು ಕಂಡನು ಆಗ ಅವನು ತನ್ನ ಯೋಗದೃಷ್ಟಿಯಿಂದ ಚಿಂತಿಸಿ ನೋಡಲು, ಇತ್ತಲಾಗಿ ನಡೆದ ನಿಜಾಂಶಗಳೆಲ್ಲವೂ ಅವನಿಗೆ ಸ್ಪಷ್ಟವಾಗಿ ಜ್ಞಾನವಿಷಯವಾಯಿತು ಇದು ವಾಲಿಯೆಂಬ ವಾನರನ ದುಶ್ಚೇಷ್ಟೆಯೆಂದೇ ತಿಳಿದುಕೊಂಡನು ಮೃತದೇಹವನ್ನು ಬಿಸುಟ ವಾಲಿಗೆ ಕ್ರೂರಶಾಪವನ್ನು ಕೊಡಲಾರಂಭಿಸಿ ''ಯಾವ ದುರಾತ್ಮನು ಈ ಕಾರ್ಯವನ್ನು ಮಾಡಿದನೋ, ಅವನು ಇನ್ನು ಮೇಲೆ ಈ ನನ್ನಾಶ್ರಮದ ಎಲ್ಲೆಗೆ ಕಾಲಿಡಕೂಡದು! ಹಾಗೆ ಕಾಲಿಟ್ಟರೆ ಆಗಲೇ ಅವನು ಸಾಯಲಿ! ನನಗೆ ಸುಖಾಶ್ರಯವಾದ ಈ ತಪೋವನವೆಲ್ಲವನ್ನೂ ಹೀಗೆ ರಕ್ತಸ್ರಾವಗಳಿಂದ ಕೆಡಿಸಿದುದಲ್ಲದೆ, ಈ ರಾಕ್ಷಸದೇಹವನ್ನೂ ಬಿಸುಟು, ನಮ್ಮ ಆಶ್ರಮವೃಕ್ಷಗಳನ್ನೆಲ್ಲಾ ಮುರಿದ


ಆ ಪಾಪಿಯು, ಇನ್ನು ಇಲ್ಲಿಗೆ ಕಾಲಿಡುವುದೆಂದೇನು? ಇಲ್ಲಿಂದ ಸುತ್ತಲೂ ಪೂರ್ಣವಾಗಿ ಒಂದುಗಾವುದದವರೆಗೆ ವ್ಯಾಪಿಸಿರುವ ಈ ನನ್ನಾಶ್ರಮದ ಎಲ್ಲೆಕಟ್ಟಿಗೆ ಅವನು ಕಾಲಿಟ್ಟರೆ ಸಾಕು! ಆ ದುರ್ಬುದ್ಧಿಯು ಆಕ್ಷಣವೇ ಸಾಯುವನು ಇಷ್ಟೇ ಆಲ್ಲ!ಅವನ ಮಂತ್ರಿಗಳಲ್ಲಿ ಕಲವರು ಈಗಲೂ ಈ ಆಶ್ರಮದಲ್ಲಿ ಸೇರಿಕೊಂಡಿರುವರು ಅವರೂ ಇನ್ನು ಮೇಲೆ ಇಲ್ಲಿರಕೂಡದು ಇದನ್ನು ಕೇಳಿದೊಡನೆ ಅವರೂ ಈ ಸ್ಥಳವನ್ನು ಬಿಟ್ಟು ಇಷ್ಟಬಂದಕಡೆಗೆ ಸುಖವಾಗಿ ಹೋಗಿ ಸೇರಿಕೊಳ್ಳಲಿ! ಹಾಗಿಲ್ಲದೆ ಅವರು ಇಲ್ಲಿಯೇ ಇದ್ದಪಕ್ಷದಲ್ಲಿ ಅವರಿಗೂ ಶಾಪವನ್ನು ಕೊಡುವುದೇ ನಿಶ್ಚಯವು ನಾನು ಈ ಆಶ್ರಮವನ್ನು ಪುತ್ರನಂತೆ ಕಾಣುತ್ತ ಎಷ್ಟೋ ಪ್ರೀತಿಯಿಂದ ರಕ್ಷಿಸುತ್ತಿರುವೆನು ಇದರಲ್ಲಿ ಅವರನ್ನು ಳಿಸುವುದರಿಂದ ಇಲ್ಲಿನ ಫಲಮೂಲಗಳೂ, ಎಲೆಚಿಗುರುಗಳೂ ಮುರಿಯಲ್ಪಡುತ್ತಿರುವುವು ಆದುದರಿಂದ ಇದೊಂದುದಿವಸದವರಗೆ ಮಾತ್ರವೇ ಅವರಿಗೆ ನಡುವನ್ನು ಕೊಟ್ಟಿರುವೆನು ಎಲ್ಲರೂ ನಾಳ ಬಳಗಾಗುವಷ್ಟರೊಳಗಾಗಿ ಇದನ್ನು ಬಿಟ್ಟುಹೋಗಬೇಕು ನಾಳೆ ಬಳಗಾದಮೇಲೆ ಇಲ್ಲಿ ಯಾವನಾದರೂ ಒಬ್ಬವಾನರನು ನನ್ನ ಕಣ್ಣಿಗೆ ಬಿದ್ದರೆ,ಆಕ್ಷಣವೇ ಅವನು ಕಲ್ಲಾಗಿಹೋಗಿ,ಅನೇಕ ಸಹಸ್ರವರ್ಷಗಳವರೆಗೆ ಆ ಶಿಲಾರೂಪದಿಂದಲೇ ಇರಲಿ!"ಎಂದು ಅತಿಕ್ರೂರಶಾಪವನ್ನು ಕೊಟ್ಟನು ಈ ವಿಷಯವು ಅಲ್ಲಿದ್ದ ವಾನರರಿಗೆಲ್ಲರಿಗೂ ಕ್ರಮಕ್ರಮವಾಗಿ ತಿಳಿಯಿತು ಆ ಕ್ಷಣವೇ ಅವರೆಲ್ಲರೂ ಆ ವನವನ್ನು ಬಿಟ್ಟುಹೋದರು ಹೀಗೆ ಗುಂಪುಗೂಡಿ ಬರುತ್ತಿರುವ ತನ್ನ ಕಡೆಯ ವಾನರರನ್ನು ನೋಡಿ ವಾಲಿಯುಶಂಕಾಕುಲಿತನಾಗಿ ,,ಎಲ್ಲೈವಾನರರೆ!ಇದೇನು!ಮಂತಗಾಶ್ರಮದಲ್ಲಿರುತಿದ್ದ ನೀವೆಲ್ಲರೂ ಒಟ್ಟಾಗಿ ಹೀಗೆ ಅದನ್ನು ಬಿಟ್ಟುಬರುವುದಕ್ಕೆ ಕಾರಣವೇನು? ನಮ್ಮ ವಾನರರೆಲ್ಲರಿಗೂ ಕ್ಷೇಮವಷ್ಟೆ" ಎಂದನು ಆಗ ವಾನರರೆಲ್ಲರೂ ತಾವು ಹೊರಟುಬಂದಕಾರಣವನ್ನೂ, ಆ ವಾಲಿಗುಂಟಾದ ಶಾಪವನ್ನೂ ವಿವರವಾಗಿ ತಿಳಿಸಿದರು ಆಗ ವಾಲಿಯು ತನ್ನ ಕಡೆಯ ಮಂತ್ರಿಗಳು ಹೇಳಿದ ಈ ಮಾತನ್ನು ಕೇಳಿ,ಆಕ್ಷಣವೇ ಮತಂಗಮುನಿಯ ಬಳಿಗೆ ಬಂದು,ಕೈಮುಗಿದು,ಅನೇಕವಿಧದಲ್ಲಿ ಆತನ ಮನ್ನಣೆಯನ್ನು ಬೇಡಿಕೊಂಡನು ವಾಲಿಯು ಎಷ್ಟುವಿಧದಲ್ಲಿ ಪ್ರಾರ್ಥಿಸಿದರೂ ಮತಂಗಮು

ನಿಯು ಅವನ ಮಾತಿಗೆ ಕಿವಿಗುಡದೆ, ತನ್ನಾಶ್ರಮಕ್ಕೆ ಹೊರಟುಹೋದನು ಇತ್ತಲಾಗಿ ವಾಲಿಯು ಶಾಪಭಯದಿಂದ ದುಃಖಿತನಾಗಿ, ತನ್ನ ನಿವಾಸಕ್ಕೆ ಹೊರಟುಹೋದನು ಈಗಲೂ ವಾಲಿಯು ಆ ಋಷಿಶಾಪಕ್ಕೆ ಹೆದರಿ ಈ ಋಶ್ಯಮೂಕಕ್ಕೆ ಕಾಲಿಡುವುದಿಲ್ಲ ಈ ಕಡೆಗೆ ಕಣ್ಣೆತ್ತಿಯೂ ನೋಡುವುದಿಲ್ಲ ಇದನ್ನು ತಿಳಿದೇ ನಾನು ಈಗ ನಿರ್ಭಯವಾಗಿ ನನ್ನ ಮಂತ್ರಿಗಳೊಡನೆ ಇಲ್ಲಿ ಸೇರಿಕೊಂಡಿರುವೆನು ರಾಮಾ! ಇದೋ ನೋಡು! ಆಗ ವಾಲಿಯು ತನ್ನಕೈಗಳಿಂದೆತ್ತಿಬಿಸುಟ ಆ ದುಂದುಭಿಯ ಮೃತದೇಹವು, ಒಣಗಿ ಅಸ್ಥಿಶೇಷವಾಗಿ ಈಗಲೂ ಇಲ್ಲಿ ಬಿದ್ದಿರುವುದು! ಬೆಟ್ಟದಂತೆ ದೊಡ್ಡದಾದ ಈ ದೇಹವನ್ನು ಆ ವಾಲಿಯು ಎಷ್ಟುದೂರಕ್ಕೆ ಬಿಸಾಡಿರುವನು ನೋಡಿದೆಯಾ? ಅವನ ವೀರ್ಯಾತಿಶಯಕ್ಕ ಇದಕ್ಕಿಂತಲೂ ಬೇರೆ ಯಾವ ನಿದರ್ಶನವು ಬೇಕು! ರಾಮಾ! ಅದೂ ಹೋಗಲಿ! ಇತ್ತಲಾಗಿ ನೋಡು! ಅನೇಕ ಶಾಖೆಗಳೊಡಗೂಡಿ ವಿಸ್ತಾರವಾಗಿ ಬೆಳೆದ ಬಲವಾದ ಈ ಏಳು ಸಾಲವೃಕ್ಷಗಳುಕಾಣುವುವಷ್ಟೆ?* ಆ ವಾಲಿಯು ಇವುಗಳಲ್ಲಿ ಒಂದೇಸಲಕ್ಕೆ ಒಂದೊಂದುಮರವನ್ನು ತನ್ನ ಬಾಣದಿಂದ ಕೂರೆದುಬಿಡಬಲ್ಲ ಅದ್ಭುತಸಾಮರ್ಥ್ಯವುಳ್ಳವನು! ರಾಮಾ! ಈಗ ನಾನಂತೂ ಆ ವಾಲಿಯಲ್ಲಿರುವ ಅಸಾಧಾರಣ ಸಾಮರ್ಥ್ಯವನ್ನು ನಿನಗೆ ತಿಳಿಸಿಬಿಟ್ಟಿರುವೆನು ಹೀಗೆ ಎಣೆಯಿಲ್ಲದ ವೀರ್ಯವುಳ್ಳ ಆ ವಾಲಿಯನ್ನು ಯುದ್ಧದಲ್ಲಿ ನೀನು ಹೇಗೆ ಜಯಿಸಬಲ್ಲೆ?" ಎಂದನು ಇದನ್ನು ಕೇಳುತಿದ್ದ ಲಕ್ಷ್ಮಣನು, ಮುಗುಳ್ನಗೆಯಿಂದ ನಗುತ್ತ, ಆ ಸುಗ್ರೀವನನ್ನು ಕುರಿತು, "ಅಯ್ಯಾ ವಾನರೇಂದ್ರನೆ! ನಮ್ಮ ರಾಮನು ಆ ವಾಲಿಯನ್ನು ಕೊಲ್ಲಬಲ್ಲನೆಂಬ ವಿಷಯದಲ್ಲಿ ನಿನಗೆ ಚೆನ್ನಾಗಿ ನಂಬಿಕೆಯುಂಟಾಗಬೇಕಾದರೆ, ಈಗ ಯಾವಕೆಲಸವನ್ನುಮಾಡಿ ತೋರಿಸಬೇಕು ಹೇಳು!" ಎಂದನು ಅದಕ್ಕಾಸುಗ್ರೀವನು ಲಕ್ಷ್ಮಣನನ್ನು ಕುರಿತು, "ಲಕ್ಷ್ಮಣಾ! ನಾನು ಬೇರೆಯಾವುದನ್ನೂ ಅಪೇಕ್ಷಿಸುವವನಲ್ಲ ಆ ವಾಲಿಯು ಈ ಏಳುಮರಗಳಲ್ಲಿ ಒಂದೊಂದುಮರವನ್ನೂ ತನ್ನ ಒಂದೊಂದು ಬಾಣದಿಂದ ಕೊರೆದು

---

*ವಾಲಿಯು ತನ್ನ ಶಕ್ತಿಯಿಂದಾಡಿಸಿ ಒಂದೊಂದುಸಲಕ್ಕೆ ಒಂದೊಂದುಮರದ ಎಲೆಗಳೆಲ್ಲವನ್ನೂ ನಿಶ್ಶೇಷವಾಗಿ ಉದುರಿಸಿಬಿಡಬಲ್ಲನೆಂದೂ ಅರ್ಥಾಂತರವನ್ನು ಹೇಳುವರು.


ಬಿಡುವನಲ್ಲವೆ? ಹಾಗೆಯೇ ಎಷ್ಟೋ ಅವರ್ತಿ ಬಾಣಗಳಿಂದ ಇವುಗಳನ್ನು ಕೊರೆದಿರುವನು ಈಗ ರಾಮನು ತನ್ನ ಒಂದೇಬಾಣದಿಂದ ಇವುಗಳಲ್ಲಿ ಒಂದೊಂದು ಮರವನ್ನು ಕಡಿದುಬಿಟ್ಟರೆ ಸಾಕು' ಆಗ ರಾಮನ ವೀರ್ಯವು ಚೆನ್ನಾಗಿ ತಿಳಿದುಹೋಗುವುದು ವಾಲಿಯು ಹತನಾದನೆಂದೇ ತಿಳಿಯುವೆನು ಇದರಲ್ಲಿ ಏನೇನೂ ಸಂದೇಹವಿಲ್ಲ' ಆದರೆ ಲಕ್ಷ್ಮಣಾ' ನನಗೆ ಇನ್ನೂ ಒಂದುಸಂದೇಹವಿರುವುದು' ಅದನ್ನೂ ತೀರಿಸಿಬಿಟ್ಟರೆ ಇನ್ನೂ ಸರ್ವೋತ್ತಮವು ಇದೋ' ಇಲ್ಲಿ ಕಾಣುವ ಈ ಎಮ್ಮೆಯ ಮೃತದೇಹವನ್ನು ವಾಲಿಯು ತನ್ನ ಕೈಯಿಂದತ್ತಿ ಇಷ್ಟುದೂರಕ್ಕೆ ಬಿಸುಟಿನಲ್ಲವೆ ? ಈಗೀಗ ಚೆನ್ನಾಗಿ ಒಣಗಿ ಅಸ್ಥಿಶೇಷವಾಗಿರುವ ಈ ದೇಹವನ್ನೇ ರಾಮನು ತನ್ನ ಕಾಲಿನಿಂದ ಅದೆ' ಇನ್ನೂರುಬಿಲ್ಲಿನದೂರಕ್ಕೆ ಚಿಮ್ಮಿಬಿಡಲಿ' ಆಗ ನನಗೆಸಂಪೂರ್ಣವಾದ ನಂಬಿಕೆಯು ಹುಟ್ಟಿಹೋಗುವುದು" ಎಂದನು ಈ ಸಾತುಗಳನ್ನಾಡಿದ ಮೇಲೆ ಸುಗ್ರೀವನ ಮನಸ್ಸಿನಲ್ಲಿ ಸ್ವಲ್ಪಶಂಕೆಯುಂಟಾಯಿತು ರಾಮನ ವೀರ್ಯವನ್ನು ನಂಬದಮೇಲೆ ಅವನಿಗೆ ತನ್ನಲ್ಲಿ ಏನು ಕೋಪವುಂಟಾಗುವುದೋ ಎಂದು ಸ್ವಲ್ಪಹೊತ್ತಿನವರೆಗೆ ಚಿಂತಿಸಿ, ಕೂನೆಗೆ ರಾಮನನ್ನುಕುರಿತು, "ರಾಮಾ' ನಾನು ಹೀಗೆ ಹೇಳಿದೆನೆಂದು ಕೋಪಿಸಬೇಡ ! ಆ ವಾಲಿಯೇನೋ ಮಹಾಶೂರನು'ಇದುವರೆಗೆ ಅನೇಕಶೂರರನ್ನೂ ಕೊಂದಿರುವನು ಮಹಾಬಲವುಳ್ಳವನು ಅವನ ಬಲಪರಾಕ್ರಮಗಳನ್ನು ಲೋಕವೆಲ್ಲವೂ ಕೇಳಿಬಲ್ಲುದು ಇದುವರೆಗೆ ಅವನು ಯಾವಯುದ್ಧದಲ್ಲಿಯೂ ಸೋತು ಬಂದವನಲ್ಲ. ಅತನು ದೇವತೆಗಳಿಗೂ ದುಷ್ಕರಗಳಾದ ಅನೇಕ ಕಾರ್ಯಗಳನ್ನು ನಡೆಸಿರುವುದನ್ನು ನಾನೇ ಕಂಡುಬಲ್ಲೆನು ಇವೆಲ್ಲವನ್ನೂ ಆಲೋಚಿಸಿಯೇ ನಾನು ಭಯಪಟ್ಟು ಈ ಋಶ್ಯಮೂಕದಲ್ಲಿ ಸೇರಿಕೊಂಡಿರುವೆನು ಯಾರಿಂದಲೂ ಜಯಿಸಲಸಾಧ್ಯವಾದ ಅವನ ಪರಾಕ್ರಮವನ್ನೂ, ಯಾರಿಗೂ ಅಂಜದ ಅವನ ಮಹಾಧೈರ್ಯವನ್ನೂ, ತಡೆಯಬಾರದ ಅವನ ಮಹಾಕೋಪವನ್ನೂ ನಾನು ಕಂಡುಬಲ್ಲೆನಾದುದರಿಂದಲೇ,ಈ ಋಶ್ಯಮೂಕವನ್ನು ಬಿಡದೆ ಇಲ್ಲಿಯೇ ಅವಿತುಕೊಂಡಿರುವೆನು, ಯಾವಾಗಲೂ ಅವನ ಭಯದಿಂದಲೂ, ದುಃಖದಿಂದಲೂ ನಡುಗುತ್ತ ಈ ವನದಲ್ಲಿ ನಾನು, ನನ್ನ ಇಷ್ಟರಾಗಿರುವ ಈ ಹನುಮಂತನೇ



1403. ರಾಮನು ದುಂದುಭಿಶರೀರವನ್ನು ತನ್ನ ಕಾಲಿನಿಂದ ಬಹುದೂರಕ್ಕೆ ಚಿಮ್ಮಿದುದು.

ಮೊದಲಾದ ಕೆಲವು ವಾನರರೊಡನೆ ಸುತ್ತುತ್ತಿರುವೆನು ಎಲೈವಿಶ್ವಾಸಪಾತ್ರನೆ! ಹೀಗೆ ಭಯದಿಂದ ತತ್ತಳಿಸುತ್ತಿರುವ ನನಗೆ ದೈವಗತಿಯಿಂದ ಪರಮಶ್ಲಾಘ್ಯನಾದ ನಿನ್ನಂತಹ ಸನ್ಮಿತ್ರನು ದೊರಕಿದನು ಎಲೈಪುರುಷಶ್ರೇಷ್ಠನೆ! ಹಿಮವಂತವನ್ನಾಶ್ರಯಿಸುವಂತೆ ಈಗ ನಾನು ನಿನ್ನನ್ನು ಆಶ್ರಯಿಸಿಬಿಟ್ಟಿರುವೆನು ಆದರ ನಾನು ಆ ನನ್ನ ದುಷ್ಪ್ರಸಹೋದರನಾದ ವಾಲಿಯ ಬಲವನ್ನು ಆ ನೇಕಾವರ್ತಿ ಅನುಭವಿಸಿ ತಿಳಿದಿರುವೆನು ಯುದ್ಧದಲ್ಲಿ ನಿನ್ನ ವೀರ್ಯವೆಂತದೆಂಬುದನ್ನು ನಾನು ಯಾವಾಗಲೂ ಪ್ರತ್ಯಕ್ಷವಾಗಿ ನೋಡಿ ತಿಳಿದವನಲ್ಲ ರಾಮಾ! ಆದರ ನಾನು ಈಗ ನಿನ್ನ ವೀರ್ಯವನ್ನು ಇತರರೊಡನೆ ಹೋಲಿಸಿ ಪರೀಕ್ಷಿಸಬೇಕಂಬುದಕ್ಕಾಗಲಿ, ನಿನ್ನನ್ನು ಅವಮಾನಪಡಿಸುವುದಕ್ಕಾಗಲಿ, ನಿನ್ನನ್ನು ಹೆದರಿಸುವುದಕ್ಕಾಗಲಿ ಹೀಗೆ ಹೇಳುವನೆಂದೆಣಿಸಬೇಡ! ಆ ವಾಲಿಯ ಭಯಂಕರವಾದ ಕಾರ್ಯಗಳನ್ನು ನೋಡಿರುವುದರಿಂದ ನನಗುಂಟಾಗಿರುವ ಭೀತಿಯು ನನ್ನನ್ನು ಹೀಗೆ ಹೇಳಿಸುತ್ತಿರುವುದು ಎಲೈ ರಘುವಂಶತಿಲಕಾಮಣಿಯೆ! ನಿನ್ನ ಅಭಯವಾಕ್ಯವೊಂದೇ ನನಗೆ ಸಾಕಾದ ಪ್ರಮಾಣವೆಂಬುವರಲ್ಲಿ ಸಂದೇಹವಿಲ್ಲ ಇದರಮೇಲ ನಿನ್ನ ಬುದ್ಧಿಯೂ ನಿನ್ನ ಆಕಾರವೂ, ನಿನ್ನ ಧೈರ್ಯವೂ, ಬೂದಿಮುಚ್ಚಿದ ಕಿಡಿದಂತಿರುವ ನಿನ್ನ ಮಹಾತೇಜಸ್ಸನ್ನು ಸೂಚಿಸುತ್ತಿರುವುವು ಇದರಲ್ಲಿ ಸಂದೇಹವೇಇಲ್ಲ" ಎಂದನು ಧೀರನಾದ ರಾಮನು ಈ ಮಾತನ್ನು ಕೇಳಿ ಮಂದಹಾಸಪೂರ್ವಕವಾಗಿ ಸುಗ್ರೀವನನ್ನು ನೋಡಿ, ''ಎಲೈ ವಾನರೇಂದ್ರನೆ! ಹಾಗ ನಿನಗ ನನ್ನ ಪರಾಕ್ರಮದಲ್ಲಿ ನಂಬಿಕೆಯಲ್ಲವಿದ್ದರೆ, ಆ ಯುದ್ಧ ವಿಷಯದಲ್ಲಿ ನಾನು ಸಮರ್ಥನೆಂಬುದಕ್ಕೆ ನಿನಗೆ ಸಾಕಾದಷ್ಟು ನಂಬಿಕೆಯನ್ನು, ನೀನು ಕೇಳಿದುದಕ್ಕಿಂತಲೂ ಹೆಚ್ಚಾಗಿಯೇ ತೋರಿಸಿಕೂಡುವೆನು" ಎಂದನು ಆಗಲೇ ರಾಮನು ಅಲ್ಲಿದ್ದ ದುಂದುಭಿಯ ದೇಹವನ್ನು ಕೇವಲ ಲೀಲಾಮಾತ್ರದಲ್ಲಿ ತನ್ನ ಕಾಲಿನ ಹೆಬ್ಬೆರಳಿನಿಂದ ಚಿಮ್ಮಿಬಿಟ್ಟನು ಅದು ಹತ್ತುಯೋಜನದ ದೂರದವರೆಗೆ ಹೋಗಿಬಿದ್ದಿತು ಆದರೆ ಹೀಗೆ ರಾಮನು ಒಣಗಿದ್ದ ಆ ಮೃತದೇಹವನ್ನು ಕಾಲಿನಿಂದ ಚಿಮ್ಮಿ ಆಷ್ಟುದೂರಕ್ಕೆ ಹಾರಿಸಿದರೂ ಸುಗ್ರೀವನಿಗೆ ಮನಸ್ಸಿನ ಶಂಕೆಯು ಹೋಗಲಿಲ್ಲ ಆಗ ಸುಗ್ರೀವನು ಲಕ್ಷ್ಮಣನಿಗಿಬಿರಾಗಿ ರಾಮನನ್ನು ನೋಡಿ, ''ರಾಮಾ! ನೀನುಮಾಡಿದ

ಕಾರ್ಯವೇನೋ ತೃಪ್ತಿಕರವಾಗಿಯೇ ಇರುವುದು ಆದರೂ ಇದರಿಂದ ಅಷ್ಟಾ
ಗಿ ನನ್ನ ಶಂಕೆಯು ನೀಗಲಿಲ್ಲ ಮೊದಲು ಈ ದೇಹವು ಇನ್ನೂ ಹಸಿದಾಗಿತ್ತು
ಮಾಂಸತುಂಬಿ ಉಬ್ಬಿದಾಗಲೇ ವಾಲಿಯು ಇದನ್ನು ಕೈಯಿಂದೆತ್ತಿ ಇಷ್ಟು
ದೂರಕ್ಕೆ ಬಿಸುಟನು ಈಗ ಅದೇದೇಹವು, ಕೇವಲ ಶುಷ್ಕವಾಗಿ, ಸ್ವಲ್ಪವೂ
ಮಾಂಸವಿಲ್ಲದೆ ಹುಲ್ಲಿನಂತೆ ಹಗುರವಾಗಿರುವುದು ಇದಲ್ಲದೆ ಇದನ್ನು ಬಿಸುಡು
ವಾಗ ನಮ್ಮಣ್ಣನು ಆಗಲೇ ಯುದ್ಧಮಾಡಿ ಬಹಳವಾಗಿ ಬಳಲಿದ್ದನು ಅದ
ರಮೇಲೆ ಅವನು ಆಗಲೇ ನಿದ್ರೆಯೆಂದೆದ್ದುಬಂದವನಾದುದರಿಂದ ಬಿಗುಇನಲ್ಲಿ
ಯೂ ಇದ್ದನು ಹೀಗಿರುವಾಗಲೂ ನನ್ನಣ್ಣನು ಅಷ್ಟುಭಾರವುಳ್ಳದೇಹವನ್ನು
ಇಷ್ಟುದೂರಕ್ಕೆಸೆದನು ಈಗ ನೀನು ಆ ವಿಷಯವಾದ ನ್ಯೂನತೆಯೊಂದೂ ಇಲ್ಲ
ದೆ ಉತ್ಸಾಹದಿಂದಿರುವೆ ಮತ್ತು ಈ ದೇಹವೂ ಒಣಗಿ ಹಗುರವಾಗಿಹೋಗಿರು
ವುದು ಆದುದರಿಂದ ಇಷ್ಟುಮಾತ್ರಕ್ಕೆ ನಿನ್ನಬಲವು,ಹೆಚ್ಚೋ,ಅವನಬಲವು ಹೆ
ಚ್ಚೋ ಎಂಬುದನ್ನು ನಿರ್ಧರಿಸುವುದು ಸಾಧ್ಯವಲ್ಲ ರಾಮಾ' ಈ ವಿಷಯದಲ್ಲಿ
ಬೇರೂಂದನ್ನೂ ನಾವು ನೋಡಬೇಕಾದುಲ್ಲವಾದರೂ, ಆಗ ಹಸಿಯಾಗಿ
ಭಾರವಾಗಿದ್ದದೇಹವು,ಈಗ ಒಣಗಿನಿಸ್ಸಾರವಾಗಿರುವುದೆಂಬ ಈವ್ಯತ್ಯಾಸವೇ
ಸಾಕಲ್ಲವೆ?ಆದುದರಿಂದ ನಿನ್ನ ಮತ್ತು ವಾಲಿಯ ಬಲದಲ್ಲಿ ಮೊದಲಿನ ಸಂದೇ
ಹವು ನನಗಿದ್ದೇ ಇರುವುದು ನೀನು ಈ ಸಾಲವೃಕ್ಷಗಳಲ್ಲಿ ಒಂದನ್ನು ನಿನ್ನ
ಒಂದೇಬಾಣದಿಂದ ಭೇದಿಸಿಬಿಟ್ಟೆಯಾದರ, ಆಗ ನಿಮ್ಮ ಬಲಾಬಲಗಳು ಜೆ
ನ್ನಾಗಿ ತಿಳಿದುಹೋಗುವುವು ಆದುದರಿಂದ ರಾಮಾ ! ಆನೆಯ ಸುಂಡಿಲಂ
ತೆ ಮಹತ್ತಾದ ಈ ನಿನ್ನ ಬಿಲ್ಲಿಗೆ ನಾಣೇರಿಸಿ ಆಕರ್ಣಾಂತವಾಗಿ ಎಳೆದು,ಬಾ
ಣವನ್ನು ಪ್ರಯೋಗಿಸು ನೀನು ಪ್ರಯೋಗಿಸಿದ ಬಾಣವು ಈ ಸಾಲವೃಕ್ಷ
ವನ್ನು ಬೇಧಿಸುವುದರಲ್ಲಿ ಸಂದೇಹವೇನೂ ಇರದು ಆದರೂ ನನ್ನಮನಸ್ತೃ
ಪ್ತಿಗಾಗಿ ನಿನ್ನನ್ನು ಕೇಳಿಕೊಳ್ಳುವೆನು ನಿನ್ನನ್ನು ಪರೀಕ್ಷಿಸುವೆನೆಂದು ನನ್ನಲ್ಲಿ
ನೀನು ಬೇರೆಪಿದವಾಗಿ ಎಣಿಸದೇಡ ಇದೋ'ನಾನು ಸತ್ಯವಾಗಿ ಹೇಳುವೆನು
ತೇಜಸ್ವಿಗಳಲ್ಲಿ ಸೂರ್ಯನೂ, ಪರ್ವತಗಳಲ್ಲಿ ಹಿಮವಂತನೂ, ಮೃಗಗಳಲ್ಲಿ ಸಿಂ
ಹವೂ,ಹೇಗೆ ಮೇಲ್ಮೆಯನ್ನು ಪಡೆದಿರುವುವೋ, ಹಾಗೆಯೇ ನೀನೂ ಪರಾಕ್ರ
ಮದ ವಿಷಯದಲ್ಲಿ ಈ ಮನುಷ್ಯಲೋಕದಲ್ಲೆಲ್ಲಾ ಮೇಲ್ಮೆಯನ್ನು ಪಡೆದ
ವನೆಂಬುದರಲ್ಲಿ ಸಂದೇಹವಿಲ್ಲ" ಎಂದನು. ಇಲ್ಲಿಗೆ ಹನ್ನೊಂದನೆಯಸರ್ಗವು.



1405. ರಾಮನು ಸಪ್ತಸಾಲಗಳನ್ನು ಭೇದಿಸಿದುದು.

{ರಾಮನು ಸಪ್ತಸಾಲಗಳನ್ನು ಬೇಧಿಸಿದುದು. ವಾಲಿ ಸುಗ್ರೀವರ ಪೊದಲನೆಯಯುದ್ಧವು}

ಹೀಗೆ ಹೇಳಿದ ಸುಗ್ರೀವನ ಮಾತನ್ನು ಕೇಳಿ ಮಹಾತೇಜಸ್ವಿಯಾದ ರಾಮನು, ಆತನಿಗೆ ನಂಬಿಕೆಯನ್ನು ಹುಟ್ಟಿಸುವುದಕ್ಕಾಗಿ ತನ್ನ ಬಿಲ್ಲನ್ನು ಕೈಗೆ ತ್ತಿಕೊಂಡನು ಭಯಂಕರವಾದ ಒಂದುಬಾಣವನ್ನೂ ಕೈಗೆ ತೆಗೆದುಕೂಂ ಡು, ಧನುಷ್ಟಂಕಾರಧ್ವನಿಗಳಿಂದ ಸಮಸ್ತದಿಕ್ಕುಗಳನ್ನೂ ತುಂಬುತ್ತ, ಆ ಬಾಣವನ್ನು ಧನುಸ್ಸಿನಲ್ಲಿ ಸಂಧಾನಮಾಡಿ, ಒಂದುಸಾಲವೃಕ್ಷವನ್ನು ಗುರಿಹಿ ಡಿದು ಹೊಡೆದನು ಬಲಶಾಲಿಯಾದ ರಾಮನು, ಆ'ಕರ್ಣಾಂತವಾಗಿ ಬಾಣವನ್ನೆಳದು ಬಿಟ್ಟೊಡನೆ, ಚಿನ್ನದಹಿಡಿಯುಳ್ಳ ಆ ಒಂಬೇಬಾಣವು, ಸಪ್ತ ಸಾಲವೃಕ್ಷಗಳನ್ನೂ ಭೇದಿಸಿಕೂಂಡುಹೋಗಿ, ಮುಂದಿದ್ದ ಬೆಟ್ಟದ ತಿಖರವ ನ್ನೂಕೂರದು, ಅಲ್ಲಿಂದಾಚೆಗ ಭೂಮಿಯಲ್ಲಿಯೂ ನಾಟಿಕೊಂಡಿತು ಹೀಗೆ ಭೂಮಿಯನ್ನು ಭೇದಿಸಿದಮೇಲ, ಆದೇಬಾಣವು ಪುನಃ ಮೇಲಕ್ಕೆದ್ದು,ಅಲ್ಲಿಂದ ಹಿಂತಿರುಗಿ ರಾಮನ ಬತ್ತಳಿಕೆಯನ್ನೇ ಪ್ರವೇತಿಸಿತು ಆಗ ಸುಗ್ರೀವನು ಈ ರಾ ಮನ ಬಾಣವೇಗವನ್ನೂ, ಆ ಬಾಣಹತಿಗೆ ಸಪ್ತಸಾಲಗಳೂ ಏಕಕಾಲದಲ್ಲಿ ಮುರಿದುಬಿದ್ದುದನ್ನೂನೋಡಿ, ಆಶ್ಚರ್ಯದಿಂದ ಹಿಂದುಮುಂದುತೋರದೆ ಸ್ತ ಬ್ಧನಾಗಿ ನಿಂತುಬಿಟ್ಟನು ಆಗ ಅವನ ಸಂತೋಷಕ್ಕ ಪಾರವೇ ಇರಲಿಲ್ಲ * ಕಂರ್ಾಭರಣಗಳು ಜೂಲುವಂತೆ ತಲೆಯನ್ನು ನೆಲಕ್ಕೆ ಸೋಕಿಸಿ, ರಾಮನಿಗೆ ಪ್ರಣಾಮಮಾಡಿ ಕೈಮುಗಿದು ನಿಂತು, ಧರ್ಮಜ್ಞನಾಗಿಯೂ, ಸರ್ವಾಸ್ತ್ರವಿಶಾರದದಲ್ಲಿ ಮೇಲಾಗಿಯೂ, ಲೋಕೈಕಶೂರನಾಗಿಯೂ ಇರುವ ಆರಾಮನನ್ನುಕುರಿತು,ಅವನ ಅದ್ಭುತಸಾಮರ್ಥ್ಯವನ್ನು ನೆನೆನೆನೆದು ಹಿಗ್ಗುತ್ತ ''ಎಲೈ ಪುರುಷಶ್ರೇಷ್ಠನೆ! ಇನ್ನು ನಾನೇನುಹೇಳಲಿ'ಯುದ್ಧದಲ್ಲಿ ಇಂದ್ರನೊ ಡಗೂಡಿ ಸಮಸ್ತದೇವತೆಗಳೂ ಬಂದು ನಿಂತರೂ ನೀನು ನಿನ್ನ ಬಾಣಗಳಿಂದ

---

* ಇಲ್ಲಿ ಕಂರಾಭರಣಗಳು ಜೂಲುವಂತೆ ತಲೆಯನ್ನು ನೆಲಕ್ಕೆಸೋಕಿಸಿ ಪ್ರಣಾಮಮಾಡಿದನೆಂಬುದರಿಂದ, ಉದರಪ್ರದೇಶವು ನೆಲಕ್ಕೆ ಸೋಕದಂತೆ ನಮಸ್ಕರಿಸಿದನೆಂದು ಭಾವ ಇದರಿಂದ ಭಗವದ್ವಿಷಯದಲ್ಲಿ ಪ್ರಣಾಮಪ್ರಕಾರವು ಸೂಚಿತವೆಂದು ಕೆಲವರಮತವು

ಕೊಲ್ಲಬಲ್ಲೆಯಂಬುದದಲ್ಲಿ ಸಂದೇಹವಿಲ್ಲ ಇನ್ನು ವಾಲಿಯನ್ನು ಕೊ ಲ್ಲುವುದೇನು ಹೆಚ್ಚು! ಒಂದುಮರವನ್ನು ಕಡಿಯುವುದಕ್ಕಾಗಿ ನೀನು ಬಿಟ್ಟ ಒಂದೇಬಾಣವು, ತನ್ನ ವೇಗದಿಂದ ಏಳುಮರಗಳನ್ನೂ ಭೇದಿಸಿದುದಲ್ಲದೆ, ಮುಂದಿದ್ದಬೆಟ್ಟವನ್ನೂ ಕೂರೆದು, ಭೂಮಿಗೂ ನಾಟಿತು! ಇನ್ನು ನಿನ್ನ ಮುಂ ದೆ ಯುದ್ಧದಲ್ಲಿ ನಿಲ್ಲುವವನಾವನು? ಈಗ ನನ್ನ ಶೋಕವೆಲ್ಲವೂ ನೀಗಿತು ಈಗ ನನ್ನ ಸಂತೋಷಕ್ಕೆ ಪಾರವೇ ಇಲ್ಲ! ಮಹೇಂದ್ರವರುಣರಿಗೆ ಸಮಾನ ನಾದ ನಿನ್ನೊಡನೆ ನನಗ ಸ್ನೇಹವುಂಟಾದಮೇಲೆ, ಇನ್ನು ನನಗೆ ಯಾವವಿ ಧದಲ್ಲಿ ಕೊರತೆಯುಂಟು? 'ರಾಮಾ! ಇನ್ನು ತಡಮಾಡಬೇಡ! ನನಗೆ ಒಡಹುಟ್ಟಿದ ರೂಪವಿಂದಿರುವ ನನ್ನವೈರಿಯನ್ನು ಕೊಂದು, ನನ್ನ ಇಷ್ಟವನು ಕೈಗೂಡಿಸುವುದಕ್ಕ ಪ್ರಯತ್ನಿಸು! ಇದೋ! ಕೃಮುಗಿಯುವೆನು" ಎಂದನ್ನು ಆಗ ರಾಮನು ಆಗಿನ ಸಂತೋಷಾತಿಶಯದಿಂದ ಪ್ರಿಯದರ್ಶನನಾದ ಸುಗ್ರೀ ವನನ್ನಪ್ಪಿಕೊಂಡು, ಮಹಾಪ್ರಜ್ಞನಾದುದರಿಂದ, ಲಕ್ಷ್ಮಣನ ಇಂಗಿತಗ ಳನ್ನೂ ತಿಳಿದು, ಅವನಿಗೂ ಇಷ್ಟವಾದ ಮಾತಿನಿಂದ ಸುಗ್ರೀವನನ್ನು ಕುರಿತು ಹೇಳುವನು "ಎಲೈ ಸುಗ್ರೀವನ! ಇನ್ನು ಸಾವಕಾಶವೇಕೆ? ಇಲ್ಲಿಂದ ಹೀಗೆ ಯೇ ಕಿಷ್ಕಿಂಧೆಗೆ ಹೊರಟುಬಿಡುವೆವು ನೀನು ಸ್ವಲ್ಪಮುಂದಾಗಿ ಬೇಗಹೋ ಗು! ಆಲ್ಲಿಹೋಗಿ ಭ್ರಾತೃಹಿಂಸಕನಾದ ವಾಲಿಯನ್ನು ಯುದ್ಧಕ್ಕ ಕರಯು ವನಾಗು!" ಎಂದನು ಆನೆಲೆ ಎಲ್ಲರೂ ವೇಗದಿಂದ ಹೊರಟು ಕಿಷ್ಕಿಂಧೆ ಯಬಳಿಗೆ ಬಂದರು ಅಲ್ಲಿ ಸಮೀಪದಲ್ಲಿದ್ದ ದುರ್ಗಮವಾದ ಒಂದು ಅಡವಿ ಯಲ್ಲಿ ರಾಮಾದಿಗಳಲ್ಲರೂ ಒಂದುಮರದ ಮರೆಯಲ್ಲ ನಿಂತರು ಅತ್ತಲಾಗಿ ಸುಗ್ರೀವನು ನಡುದಟ್ಟಿಯನ್ನು ಬಲವಾಗಿ ಎಳೆದುಕಟ್ಟಿಕೊಂಡು, ಯುದ್ಧ ಸನ್ನದ್ಧನಾಗಿ ಬಂದುನಿಂತು, ವಾಲಿಯನ್ನು ಯುದ್ಧಕ್ಕ ಕರಯುವುದಕ್ಕಾಗಿ ಆಕಾಶವೇ ಭೇದಿಸುವಂತೆ ಭಯಂಕರವಾದ ಒಂದುಗರ್ಜನೆಯನ್ನು ಮಾಡಿ ದನು ಸುಗ್ರೀವನ ಈ ಘೋರಗರ್ಜನವನ್ನು ಕೇಳಿ ವಾಲಿಗೆ ಮಹಾಕೋಪ ವುಂಟಾಯಿತು *ಅಸ್ತಾಚಲದಿಂದ ಬರುವ ಸೂರ್ಯನಂತೆ ಆಕ್ಷಣವೇ ಮಹಾವೇ

* ಈ ನಿದರ್ಶನದಿಂದ ವಾಲಿಗುಂಟಾಗುವ ತೇಜೋಹಾನಿಯೂ ಅವನ ಕೊನೆ ಗಾಲವೂ ಸೂಚಿತವಾಗುವುದು

ಗದಿಂದ ಹೊರಗೆ ಹೊರಟುಬಂದನು ಆಕಾಶದಲ್ಲಿ ಬುಧಾಂಗಾರಕಗ್ರಹಗಳಂತೆ ವಾಲಿಸುಗ್ರೀವರಿಬ್ಬರೂ ಘೋರವಾದ ತುಮುಲಯುದ್ಧಕ್ಕಾರಂಭಿಸಿದರು ಆ ಸಹೋದರರಿಬ್ಬರೂ ಒಬ್ಬರಿಗೊಬ್ಬರು ಕೋಪದಿಂದ ಮೈತಿಳಿಯದೆ, ಸಿಡಿಲಿಗೆ ಸಮಾನವಾದ ಅಂಗೈಗಳಿಂದಲೂ, ವಜ್ರಸಮಾನಗಳಾದ ಮುಷ್ಟಿಗಳಿಂದಲೂ ಹೊಡೆದಾಡುತಿದ್ದರು ಇತ್ತಲಾಗಿ ರಾಮನು ಧನುರ್ಧಾರಿಯಾಗಿ ಮರದ ಮರೆಯಲ್ಲಿ ನಿಂತು ನೋಡುತಿದ್ದನು ವಾಲಿಸುಗ್ರೀವರಿಬ್ಬರೂ ಅವಳಿಮಕ್ಕಳಾದ ಅಶ್ವಿನೀದೇವತೆಗಳಂತ ಸ್ವಲ್ಪವೂ ವ್ಯತ್ಯಾಸವಿಲ್ಲದೆ ಒಬ್ಬರನ್ನೊಬ್ಬರು ಹೋಲುತಿದ್ದುದರಿಂದ, ಅವರಲ್ಲಿ ''ವಾಲಿಯಾರು, ಸುಗ್ರೀವನಾರು'' ಎಂಬ ಭೇದವನ್ನು ಕಂಡುಹಿಡಿಯಲಾರದೆ ಹೋದನು ಈ ಸಂದೇಹದಿಂದ ತಾನು ಕೈಯಲ್ಲಿ ಹಿಡಿದಿದ್ದ ಬಾಣವನ್ನು ಬಿಡುವವಿಷಯದಲ್ಲಿ ಆತನ ಮನಸ್ಸು ಹಿಂತೆಗೆಯಿತು ಇಷ್ಟರಲ್ಲಿ ಸುಗ್ರೀವನೂ ಶ್ರಾಂತನಾಗಿ ವಾಲಿಯಿಂದ ಭಂಗವನ್ನು ಹೊಂದಬೇಕಾದ ಸನ್ನಿವೇಶವು ಬಂದಿತು ಕ್ಷಣಕ್ಷಣಕ್ಕೂ ರಾಮನನ್ನೂ, ರಾಮಬಾಣವನ್ನೂ ಇದಿರುನೋಡುತಿದ್ದನು ಎತ್ತಲಾಗಿ ತಿರುಗಿ ನೋಡಿದರೂ ರಾಮನ ಸುಳಿವಿಲ್ಲ! ಮಾಡಬೇಕಾದುದೇನು? ಹೀಗೆ ತನಗೆ ಪೂರ್ಣವಾದಭರವಸವನ್ನು ಕೊಟ್ಟಿದ್ದ ರಾಮನನ್ನು ಕಾಣದೆ ಆಶಾಭಂಗವನ್ನು ಹೊಂದಿ, ಹಿಂತಿರುಗಿ ಪಲಾಯನಮಾಡುವುದೇ ಕಾಲೋಚಿತವೆಂದು ನಿಶ್ಚಯಿಸಿ, ಆ ಕ್ಷಣವೇ ಋಶ್ಯಮೂಕಕ್ಕೆ ಓಡಿಹೋದನು ಇಷ್ಟರಲ್ಲಿ ಆ ಸುಗ್ರೀವನ ದುರವಸ್ಥೆಯನ್ನು ಕೇಳಬೇಕೆ? ಅವನ ಶಕ್ತಿಯೆಲ್ಲವೂ ಕುಗ್ಗಿಹೋಯಿತು ಮೈಯಲ್ಲಿ ಧಾರಧಾರೆಯಾಗಿ ರಕ್ತವು ಸೋರುತಿತ್ತು! ವಾಲಿಯ ಕೈಸೆಟ್ಟುಗಳಿಂದ ಅವನ ಅಂಗಾಂಗವೆಲ್ಲವೂ ಜರ್ಝರಿತವಾಯಿತು! ಇದರಮೇಲೆ ಹಿಂದೆ ವಾಲಿಯು ಬೆನ್ನಟ್ಟಿ ಓಡಿಸಿಕೊಂಡೂ ಬರುತಿದ್ದನು ಸುಗ್ರೀವನು ಮಹಾಪ್ರಯತ್ನದಿಂದ ತಲೆತಪ್ಪಿಸಿಕೊಂಡು ಬಂದು, ಮತಂಗವನದಲ್ಲಿ ಅವಿತುಕೊಂಡುಬಿಟ್ಟನು ಅದನ್ನು ನೋಡಿ ಬೆನ್ನಟ್ಟಿ ಬರುತಿದ್ದ ವಾಲಿಯು, ಶಾಪಭಯದಿಂದ ಅಲ್ಲಿಗೆ ಪ್ರವೇಶಿಸಲಾರದೆ ಕೋಪದಿಂದ ಆ ಸುಗ್ರೀವನನ್ನು ಕೂಗಿ ''ಸುಗ್ರೀವಾ! ಈಸಲಕ್ಕೆ ತಪ್ಪಿಸಿಕೊಂಡು ಬದುಕಿದೆ! ಹೋಗು!'' ಎಂದು ಹೇಳಿ ತನ್ನ ಪುರಕ್ಕೆ ಹಿಂತಿರುಗಿಬಿ

ಟ್ಟನು ಆಮೇಲೆ ರಾಮನು ತಮ್ಮನಾದ ಲಕ್ಷ್ಮಣನೊಡನೆಯೂ, ಹನುಮಂತ ನೊಡನೆಯೂ ಸೇರಿ ಸುಗ್ರೀವನಬಳಿಗೆ ಬರಲು, ಈಮೂವರನ್ನೂ ನೋಡಿ ಸು ಗ್ರೀವನು ನಾಚಿಕೆಯಿಂದ ತಲೆಯೆತ್ತಲಾರದೆ ನೆಲವನ್ನೇ ನೋಡುತಿದ್ದು, ಕೊ ನೆಗೆ ದೈನ್ಯದಿಂದ ರಾಮನನ್ನು ಕುರಿತು, ''ರಾಮಾ! ಒಳ್ಳೇ ಕಲಸವನ್ನು ಮಾ ಡಿದೆ! ಮೊದಲು ನೀನು ನನಗೆ ಏನೋ ಒಂದು ಇದ್ರಜಾಲದಂತೆ ನಿನ್ನ ಅದ್ಭುತ ಪರಾಕ್ರಮಗಳನ್ನೆಲ್ಲಾ ತೋರಿಸಿ ನನ್ನನ್ನು ಮರುಳುಮಾಡಿದೆ, ವಾಲಿಯನ್ನು ಯುದ್ಧಕ್ಕೆ ಕರೆಯುವಂತೆಯೂ ಹೇಳಿದೆ ಹೀಗೆ ಹೇಳಿ ಕೊನೆಗೆ ಕೈಬಿಟ್ಟ್ಯಲ್ಲಾ! ವಾಲಿಯ ಕೈಯಿಂದ ನನ್ನನ್ನು ಹೊಡೆಸುವುದಕ್ಕಾಗಿಯೇ ನೀನು ಈ ಉಪಾಯವನ್ನು ಮಾಡಿದಂತಿದೆ! ನಿನ್ನ ಮನಸ್ಸಿನ ಅಭಿಪ್ರಾಯವೇ ನೆಂಬುದನ್ನು ನನಗೆ ಮೊದಲೇ ತಿಳಿಸಬಾರದಾಗಿತ್ತ? ನಾನು ನಿನ್ನನ್ನು ಕೇಳಿ ಕೊಂಡಾಗಲೇ ನೀನು ''ವಾಲಿಯನ್ನು ಕೊಲ್ಲಲಾರ" ನೆಂದು ಯಥಾರ್ಥವನ್ನು ಹೇಳಿರಬಾರದೆ? ಆಗ ನಾನು ಇಲ್ಲಿಂದ ಕದಲುತ್ತಲೇ ಇರಲಿಲ್ಲ! ಅನ್ಯಾಯ ವಾಗಿ ಹೀಗೆ ನೀನೇ ನನ್ನನ್ನು ಕೊಡೆಯಿಸಿದಯಲ್ಲಾ!" ಎಂದನು ಹೀಗೆ ಅತಿ ದೈನ್ಯದಿಂದ ಹೇಳುತ್ತಿರುವ ಸುಗ್ರೀವನನ್ನು ನೋಡಿ ರಾಮನು, ''ಎಲೈ ಮಿ ತ್ರನೆ! ನೀನು ಬೇರಪಥವಾಗಿ ತಿಳಿಯಬೇಡ! ಕೋಪವನ್ನು ಬಿಡು! ನಾನು ಬಾ ಣವನ್ನು ಪ್ರಯೋಗಿಸದುದಕ್ಕೆ ನಿಜವಾದ ಕಾರಣವನ್ನು ಹೇಳುವನು ಕೇಳು! ನೀವಿಬ್ಬರೂ ಯುದ್ಧಮಾಡುವಾಗ, ಇಬ್ಬರ ಆಕಾರವೂ ಒಂದೇವಿಧ ವಾಗಿ ಕಾಣುತಿತ್ತು *ಅಲಂಕಾರದಲ್ಲಿಯಾಗಲಿ, ವೇಷದಲ್ಲಿಯಾಗಲಿ! ಅಳತೆ ಯಲ್ಲಿಯಾಗಲಿ, ನಡೆಯಲ್ಲಿಯೇ ಆಗಲಿ ನಿಮ್ಮಿಬ್ಬರಿಗೆ ಸ್ವಲ್ಪವಾದರೂ ಭೇ ದವೇ ಕಾಣುತ್ತಿರಲಿಲ್ಲ ಇದಲ್ಲದೆ ನಿಮ್ಮ ನಿಮ್ಮ ಗರ್ಜನಧ್ವನಿಗಳಿಂದಾಗಲಿ, ನಿ ಮ್ಮ ವರ್ಚಸ್ಸಿನಿಂದಾಗಲಿ, ನೋಟದಿಂದಾಗಲಿ, ಪರಾಕ್ರಮದಿಂದಾಗಲಿ, ನಿಮ್ಮ ಮಾತುಗಳಿಂದಾಗಲಿ ಭೇದವನ್ನು ಕಂಡು ಹಿಡಿಯುವುದಕ್ಕೂ ನನಗೆ ಸಾಧ್ಯವಿಲ್ಲದೆ ಹೋಯಿತು! ಹೀಗೆ ನಿಮ್ಮಿಬ್ಬರಿಗಿರುವ ಹೋಲಿಕೆಯಿಂದಲೇ ನಾನು ಮೋಸಹೋದೆನು ಈ ಸಂದೇಹದಿಂದಲೇ ನಾನು '' ಮೊದಲಿಗೇ

---

* ವಾಲಿಗೆ ಕಾಂಚನಮಾಲೆಯೆಂಬ ಅಸಾಧಾರಣಚಿಹ್ನೆದಿದ್ದರೂ. ಈ ಸಲಕ್ಕೆ ಮಾತ್ರ ಅವನು ಅದನ್ನು ಧರಿಸಿ ಬಂದಿರಲಿಲ್ಲವೆಂದೂಹ್ಯವು.

ಮೋಸಬರಬಾದು ''ಎಂದೆಣಿಸಿ, ಶತ್ರುವಿನ ಪ್ರಾಣವನ್ನು ಹೀರಿಬಿಡತಕ್ಕ ಈ ನನ್ನ ಘೋರಬಾಣವನ್ನು ಪ್ರಯೋಗಿಸಲಿಲ್ಲ ' ಇದುಹೊರತು ಬೇರೆ ಕಾರಣವೇನೂ ಇಲ್ಲ ಇದು ಸತ್ಯವು'ಇದನ್ನು ಯೋಚಿಸದೆ ನಾನು ಅಜ್ಞಾನದಿಂದಾಗಲಿ, ಅಲ್ಪಬುದ್ಧಿಯಿಂದಾಗಲಿ, ಬಾಣವನ್ನು ಬಿಟ್ಟು ಆದರಿಂದ ನಿನಗೇನಾದರೂ ವಿಪತ್ತು ಸಂಭವಿಸಿದ್ದಪಕ್ಷದಲ್ಲಿ, ಆಗ ಲೋಕವೆಲ್ಲವೂ ನನ್ನ ವಿಷಯದಲ್ಲಿ ಏನೆಂದು ಭಾವಿಸಬಹುದು?ಆಗ ನನ್ನ ವಿವೇಕಶೂನ್ಯತೆಯೊ,ಹುಡುಗುತನವೂ ಚೆನ್ನಾಗಿ ಹೊರಪಡು ತಿತ್ತಲ್ಲವೆ?ಯಾವನಿಗೆ ನಾವು ಅಭಯವನ್ನು ಕೊಟ್ಟಿರುವೆವೋ ಅವನನ್ನೇ ಕೊಲ್ಲುವುಕ್ಕಿಂತ ಮಹಾಪಾತಕವೇನುಂಟು ಸುಗ್ರೀವಾ'ಇನ್ನೆಷ್ಟು ಹೇಳಿದರೇನು?ಮುಖ್ಯವಾಗಿ ನಾನೂ,ಈಲಕ್ಷ್ಮಣನೂ, ವರವರ್ಣಿನಿಯಾದ ಆ ನನ್ನ ಪ್ರಿಯ ಸೀತೆಯೂ ಈಗ ನಿನ್ನಲ್ಲಿ ಮರಹೊಕ್ಕು ನಿನ್ನ ಆಧೀನರಾಗಿರುವೆವು ಈಗ ಈ ಕಾಡಿನಲ್ಲಿ ನಾವು ಮೂವರಿಗೂ ನೀನೇ ದಿಕ್ಕಾಗಿರುವೆ' ಆದುದರಿಂದ ನೀನು ನಮ್ಮಲ್ಲಿ ಸಂದೇಹಿಸಬೇಡ' ಪುನಃ ಹೋಗಿ ಆ ವಾಲಿಯನ್ನು ಯುದ್ಧಕ್ಕೆ ಕರೆದು ಯುದ್ಧವನ್ನಾರಂಭಿಸು' ನನ್ನ ಮಾತನ್ನು ದೃಢವಾಗಿ ನಂಬು'ಸತ್ಯವಾಗಿಯೂ ಸಂದೇಹಿಸಬೇಡ'ಸಾರಿಸಾರಿ ಹೇಳುವೆನು ಈ ಒಂದೇಬಾಣದಿಂದ ಇನ್ನು ಮುಹೂರ್ತದೊಳಗಾಗಿ ವಾಲಿಯು ಯುದ್ಧರಂಗದಲ್ಲಿ ನೆಲಕ್ಕೆ ಬಿದ್ದು ಉರುಳುವುದನ್ನು ನಿನ್ನ ಕಣ್ಣಾರೆ ನೀನೇ ನೋಡುವೆ' ಆದರೆ ನೀನುಮಾತ್ರ ಆ ದ್ವಂದ್ವಯುದ್ಧಕ್ಕೆ ಹೊರಡುವಾಗ ನನಗೆ ತಿಳಿಯುವುದಕ್ಕಾಗಿ ಒಂದು ಗುರುತನ್ನಿಟ್ಟುಕೊಂಡು ಹೋಗಬೇಕು ವತ್ಸ ಲಕ್ಷ್ಮಣಾ ' ಇದೋ' ಇಲ್ಲಿ ಈ ನಾಗಪುಷ್ಪೀಲತೆಯು ಚೆನ್ನಾಗಿ ಪುಷ್ಪಿಸಿರುವುದು ನೋಡು ' ಇದನ್ನು ಕಿತ್ತುತಂದು ಮಹಾತ್ಮನಾದ ಈ ಸುಗ್ರೀವನ ಕೊರಲಿಗೆ ಹಾಕು '" ಎಂದನು ಇದನ್ನು ಕೇಳಿದೊಡನೆ ಲಕ್ಷ್ಮಣನು ಬೆಟ್ಟದ ತಪ್ಪಲಿನಲ್ಲಿ ಬೆಳೆದಿದ್ದ ಪುಷ್ಪಿತವಾದ ಆ ಲತೆಯನ್ನು ತಂದು ಸುಗ್ರೀವನ ಕೊರಲಿಗೆ ಹಾಕಿದನು ಆಗ ಸುಗ್ರೀವನು ಕಂಠಗತವಾದ ಆ ಮಾಲೆಯಿಂದ·ಆಕಾಶದಲ್ಲಿ ನಕ್ಷತ್ರಮಾಲೆಯಿಂದ ಪರಿವೃತನಾದ ಸೂರ್ಯನಂತೆ ಶೋಭಿಸುತಿದ್ದನು ಮತ್ತು ಬಲಾಕಪರಂಪರೆಯಿಂದ ಕೂಡಿದ ಸಂಜೆಯಮೇಘದಂತೆ ಆತನ ದೇಹವು ಪ್ರಕಾಶಿಸುತ್ತಿತ್ತು.ಆಗ ಸುಗ್ರೀವನು

ರಾಮನ ಮಾತಿನಲ್ಲಿ ಸಂಪೂರ್ಣವಾದ ವಿಶ್ವಾಸವನ್ನಿಟ್ಟು, ಪುನಃ ರಾಮನನ್ನೂ ಕರೆದುಕೊಂಡು, ವಾಲಿರಕ್ಷಿತವಾದ ಕಿಷ್ಕಿಂಧೆಯಕಡೆಗೆ ಹೊರಟನು ಇಲ್ಲಿಗೆ ಹನ್ನೆರಡನೆಯ ಸರ್ಗವು

ಸುಗ್ರೀವನೊಡಗೂಡಿ ಅವನ ಮಂತ್ರಿಗಳೂ, ರಾಮ ಲಕ್ಷ್ಮಣಾದಿಗಳೂ ಪುನಃ ಕಿಷ್ಕಿಂಧೆಯಕಡೆಗೆ ಹೊರಟು, ದಾರಿಯಲ್ಲಿ ಸಪ್ತಜನರೆಂಬ ಮಹರ್ಷಿಗಳ ಆಶ್ರಮವನ್ನು ನೋಡಿದುದು

ಹೀಗೆ ಧರ್ಮಾತ್ಮನಾದ ರಾಮನು ಸುಗ್ರೀವನೊಡನೆ ಋಶ್ಯಮೂಕದಿಂದ ಹೊರಟು, ವಾಲಿಯ ವೀರ್ಯದಿಂದ ಸುರಕ್ಷಿತವಾದ ಕಿಷ್ಕಿಂಧೆಯಕಡೆಗೆ ಬರುತಿದ್ದನು ಅಲ್ಲಿಂದ ಹೊರಟು ಬರುವಾಗಲೇ ಚಿನ್ನದ ಕಟ್ಟುಗಳುಳ್ಳ ತನ್ನ ಮಹಾಧನುಸ್ಸನ್ನೆತ್ತಿಕೊಂಡು, ಸೂರ್ಯಸಮಾನಗಳಾಗಿ ಜ್ವಲಿಸುತ್ತಿರುವ ಯುದ್ಧಸಾಧನಗಳಾದ ತನ್ನ ತೀಕ್ಷ್ಣಬಾಣಗಳನ್ನೂ ಸಿದ್ಧವಾಗಿ ಹಿಡಿದುಹೊರಟನು ಉಬ್ಬಿದ ಕಂಠವುಳ್ಳ ಸುಗ್ರೀವನೂ, ಲಕ್ಷ್ಮಣನೂ, ರಾಮನ ಮುಂದುಗಡೆಯಲ್ಲಿ ಬರುತಿದ್ದರು ರಾಮನ ಹಿಂದೆ ವೀರನಾದ ಹನುಮಂತನೂ, ನಳನೂ,ನೀಲನೂ, ತಾರನೆಂಬ ವಾನರಶ್ರೇಷ್ಠನೂ ಒಟ್ಟಾಗಿ ಸೇರಿ ಬರುತಿದ್ದರು ಇವರೆಲ್ಲರೂ ದಾರಿಯಲ್ಲಿ ಅಲ್ಲಲ್ಲಿ, ಪುಷ್ಪಸಮೃದ್ಧಿಯಿಂದ ತೂಗುತ್ತಿರುವ ಗಿಡಗಳನ್ನೂ, ತಿಳಿನೀರಿನಿಂದ ಮನೋಹರಗಳಾಗಿ ಸಮುದ್ರಗಾಮಿನಿಗಳಾದ ಮಹಾನದಿಗಳನ್ನೂ, ಸಣ್ಣಸಣ್ಣ ಗವಿಗಳನ್ನೂ, ಬೆಟ್ಟಗಳನ್ನೂ, ಕಲ್ಲಿನ ಗವಿಗಳನ್ನೂ, ದೊಡ್ಡಗುಹೆಗಳನ್ನೂ ನೋಡಿ ಆನಂದಿಸುತ್ತ, ಮುಂದೆಮುಂದೆ ಸಾಗಿಬರುತಿದ್ದರು ಮತ್ತು ಅಲ್ಲಲ್ಲಿ ಮುಖ್ಯಮುಖ್ಯಗಳಾದ ಪರ್ವತಶಿಖರಗಳನ್ನೂ,ಗೋಡೆಯೆಬ್ಬಿಸಿ ಕಟ್ಟಿದ ಮನೆಯಂತೆ ಅಂದವಾದ, ಗುಹೆಗಳನ್ನೂ ನೋಡುತ್ತಬಂದರು ವೈಡೂರ್ಯದಂತೆ ಸ್ವಚ್ಛವಾದ ತಾವರೆಯೆಲೆಗಳಿಂದಲೂ, ಸ್ವಲ್ಪವಾಗಿ ಅರಳಿದ ಕಮಲಗಳಿಂದಲೂ ಶೋಭಿತಗಳಾಗಿ, ನೀರಿನಿಂದ ತುಂಬಿದ ಕೆರೆಗಳು ದಾರಿಯುದ್ದಕ್ಕೂ ಅಲ್ಲಲ್ಲಿ ಕಾಣಿಸುತಿದ್ದುವು ಅಲ್ಲಿ ಕಾರಂಡವಗಳು, ಸಾರಸಪಕ್ಷಿಗಳು,ಹಂಸಗಳು, ವಂಜುಲಕಗಳು,ನೀರುಕೋಳಿಗಳು, ಚಕ್ರವಾಕಗಳು, ಮೊದಲಾದ ಬೇರೆಬೇರೆ

ಜಲಪಕ್ಷಿಗಳೆಲ್ಲವೂ ಕಿವಿಗಿಂಪಾಗಿ ಕೂಗುತ್ತಿದ್ದುವು ಅಲ್ಲಲ್ಲಿರುವ ಹುಲ್ಲಿನ ಮೈದಾನಗಳಲ್ಲಿ ಮೃದುವಾದ ಎಳಗರಿಕೆಯನ್ನು ಮೇಯುತ್ತ,ನಿರ್ಭಯವಾಗಿ ಸುತ್ತಲೂ ಸಂಚರಿಸುತ್ತಿರುವ ಕಾಡುಜಿಂಕೆಗಳನ್ನು ಕಂಡರು ಮತ್ತು ಆ ಕೆರೆಯ ಸುತ್ತಿನಲ್ಲಿ ಅಂದವಾದ ಬಿಳೀದಂತಗಳಿಂದ ಶೋಭಿತಗಳಾಗಿ, ಭಯಂಕರ ಸ್ವರೂಪವುಳ್ಳವುಗಳಾಗಿ, ಮದದಿಂದ ಕೊಬ್ಬಿ, ಮೈನವೆಯನ್ನಾರಿಸುವುದಕ್ಕಾಗಿ ಕೆರೆಯ ಕಟ್ಟುಗಳನ್ನು ಕೊಂಬುಗಳಿಂದ ತಿವಿಯುತ್ತ, ನಡೆವೆಟ್ಟುಗಳಂತೆಯೂ,ಮೇಘುಗಳಂತೆಯೂ ಒಂಟಿಯಾಗಿ ಸುತ್ತುತ್ತಿರುವ ಕಾಡಾನೆಗಳನ್ನು ಕಂಡರು ಮತ್ತು ಅವರೆಲ್ಲರೂ ಕಾಡಿನಲ್ಲಿರುವ ಇನ್ನೂ ಬೇರೆಬೇರ ಮೃಗಜಾತಿಗಳನ್ನೂ,ಆಕಾಶದಲ್ಲಿ ಸಂಚರಿಸತಕ್ಕ ಪಕ್ಷಿಜಾತಿಗಳನ್ನೂ ನೋಡುತ್ತ, ಸುಗ್ರೀವನ ವಶವರ್ತಿಗಳಾಗಿ ಬೇಗಬೇಗನೆ ಮುಂದೆ ಸಾಗಿ ಬರುತಿದ್ದರು ಹೀಗೆ ವೇಗದಿಂದ ಎಲ್ಲರೂ ಬರುತ್ತಿರುವಾಗ, ಮುಂದೆ ಅನೇಕ ವೃಕ್ಷಸಮೂಹದಿಂದ ತುಂಬಿದ ಒಂದು ವನವನ್ನು ನೋಡಿ,ರಾಮನು ಸುಗ್ರೀವನನ್ನು ಕುರಿತು ''ಎಲೈ ಮಿತ್ರನೆ' ಇದೋ' ಆಕಾಶದಲ್ಲಿರುವ ಮೇಘುದಂತೆ ಕಪ್ಪಾದ ವೃಕ್ಷಸಮೂಹವು ಕಾಣುತ್ತಿರುವುದು ಮೇಘುಗಳು ಗುಂಪುಕಟ್ಟಿದಂತೆ ಇದು ಅತಿವಿಸ್ತಾರವಾಗಿಯೂ ಬೆಳೆದಿರುವುದು ಸುತ್ತಲೂ ಬಾಳೆಯಗಿಡಗಳಿಂದ ಪರಿವೃತವಾಗಿರುವುದು ಈ ಸ್ಥಳವಾವುದೆಂಬುದನ್ನು ತಿಳಿಯಬೇಕೆಂದು ನನಗೆ ಬಹಳ ಕುತೂಹಲವುಂಟಾಗಿರುವುದು ನೀನು ಇದರ ವಿವರವನ್ನು ತಿಳಿಸಿ ನನ್ನ ಕುತೂಹಲವನ್ನು ನೀಗಿಸುವೆಯಾ?" ಎಂದನು ಆಗ ಸುಗ್ರೀವನು ದಾರಿ ನಡೆಯುತ್ತಿರುವಾಗಲೇ ರಾಮನಿಗೆ ಆ ವನದ ವೃತ್ತಾಂತವನ್ನು ಹೇಳತೊಡಗಿ ,''ರಾಮಾ' ಇದೊಂದು ಋಷ್ಯಾಶ್ರಮವು ಇದು ಅತಿವಿಶಾಲವಾಗಿಯೂ, ತಂಪಾಗಿಯೂ ಇರುವುದರಿಂದ ಎಷ್ಟುಶ್ರಮವನ್ನಾದರೂ ಕ್ಷಣಮಾತ್ರದಲ್ಲಿ ನೀಗಿಸುವುದು ಅಂದವಾದ ಉದ್ಯಾನವನಗಳಿಂದಲೂ, ರುಚಿರುಚಿಯಾದ ಕಂದಮೂಲಫಲಗಳಿಂದಲೂ, ತಿಳಿನೀರಿನಿಂದಲೂ ಶೋಭಿಸುವ ಈ ಆಶ್ರಮದಲ್ಲಿ ಮೊದಲು ಸಪ್ತಜನರೆಂಬ ಏಳುಮಂದಿಋಷಿಗಳು ವಾಸಮಾಡುತಿದ್ದರು. ಅವರೆಲ್ಲರೂ ತೀಕ್ಷ್ಣವಾದ ವ್ರತವನ್ನು ಹಿಡಿದು, ತಲೆಕೆಳಗಾಗಿ ನೀರಿನಲ್ಲಿ ಮುಳುಗಿ ತಪಸ್ಸನ್ನು ಮಾಡುತಿದ್ದರು.ಅವರು ಈ ವನದಲ್ಲಿ ಏಳುರಾ

ತ್ರಿಗಳಿಗೊಂದಾವರ್ತಿ ವಾಯುಭಕ್ಷಕರಾಗಿ ಏಳುನೂರುವರುಷಗಳವರೆಗೆ ತಪಸ್ಸನ್ನು ಮಾಡಿ, ಕೊನೆಗೆ ಸಶರೀರಸ್ವರ್ಗವನ್ನು ಹೊಂದಿದರು ಇಂತಹ ಮಹಾಮಹಿಮೆಯುಳ್ಳ ಆ ಋಷಿಗಳ ಪುಣ್ಯಾಶ್ರಮಕ್ಕೆ ಸುತ್ತಲೂ ಈ ವೃಕ್ಷಗಳೇ ಪ್ರಾಕಾರವಾಗಿ,ಇಂದ್ರನೊಡಗೂಡಿದ ದೇವಾಸುರರು ಬಂದರೂ ಪ್ರವೇಶಿಸಲಸಾಧ್ಯವಾಗಿರುವುದು ಮನುಷ್ಯರಾರೂ ಈ ಆಶ್ರಮವನ್ನು ಪ್ರವೇಶಿಸುವುದಿಲ್ಲ ಪಕ್ಷಿಗಳಾಗಲಿ,ಕಾಡಿನಲ್ಲಿರುವ ಇತರಜಂತುಗಳಾಗಲಿ ಈ ಆಶ್ರಮಕ್ಕ ಎಷ್ಟುನಾತ್ರವೂ ಕಾಲಿಡಲಾರವು ಅಥವಾ ತಿಳಿಯದೆ ಯಾವಪ್ರಾಣಿಯಾದರೂ ಈ ಆಶ್ರಮದೊಳಗೆ ಕಾಲಿಟ್ಟರೆ,ಅಲ್ಲಿಯೇ ನಾಶಹೊಂದುವುವೇಹೊರತು ಹಿಂತಿರುಗಿ ಬರುವುದಿಲ್ಲ ರಾಮಾ' ಈ ಆಶ್ರಮದಲ್ಲಿ ಯಾವಾಗಲೂ ನೃತ್ಯವನ್ನು ಮಾಡುವ *ಅಪ್ಸರಸ್ತ್ರೀಯರುಗಳ ಆಭರಣಧ್ವನಿಗಳೂ, ಅವ್ಯಕ್ತಮಧುರವಾದ ಅಕ್ಷರಗಳಿಂದ ಕೂಡಿದ ಅವರ ಗಾನಧ್ವನಿಗಳೂ,ವಾದ್ಯಧ್ವನಿಗಳೂ,ಕಿವಿಗೆ ಬೀಳುತ್ತಲೇ ಇರುವುವು ಇಲ್ಲಿಂದ ಅನವರತವೂ ದಿವ್ಯಗಂಧವು ಹೊರಡುತ್ತಿರುವುದು ಯಾವಾಗಲೂ ಇಲ್ಲಿ ತ್ರೇತಾಗ್ನಿಗಳು ಜ್ವಲಿಸುತ್ತಿರುವುವು ಈಗಲೂ ಇದಕ್ಕೆ ನಿದರ್ಶನವಾಗಿ ಈ ಧೂಮಪರಂಪರೆಯು ವೃಕ್ಷಾಗ್ರಗಳನ್ನು ದಟ್ಟವಾಗಿ ಸುತ್ತಿ, ಮೇಘದಿಂದ ಮುಚ್ಚಲ್ಪಟ್ಟ ವೈಡೂರ್ಯದ ಬೆಟ್ಟಗಳಂತೆ ಕಾಣುವುವು ನೋಡು'ಎಲೈ ಧರ್ಮಾತ್ಮನೆ'ನೀನು ಲಕ್ಷ್ಮಣನೊಡನೆ ಆ ಮಹಾತ್ಮರಾದ ಋಷಿಗಳನ್ನು ದ್ವೇತಶಿಸಿಕೊಂಡು, ಭಕ್ತಿಯಿಂದ ಕೈಮುಗಿದು ಇಲ್ಲಿಗೆ ನಮಸ್ಕರಿಸು' ಆತ್ಮಜ್ಞಾನವುಳ್ಳ ಆ ಮುನಿಗಳಿಗೆ ಯಾರು ನಮಸ್ಕರಿಸುವರೋ, ಅವರಿಗೆ ಧೇಹದಲ್ಲಿ ಎಂದಿಗೂ ಯಾವ ಅಶುಭವೂ ಉಂಟಾಗಲಾರದು"ಎಂದನು ಆಗ ರಾಮನು ಲಕ್ಷ್ಮಣನೊಡಗೂಡಿ ಆ ಋಷಿಗಳನ್ನು ಧ್ಯಾನಿಸುತ್ತ, ಆ ಆಶ್ರಮಕ್ಕೆ ಕೈಮುಗಿದು ನಮಸ್ಕರಿಸಿದನು ಹೀಗೆ ಮಹಾತ್ಮನಾದ ರಾಮನೂ ಲಕ್ಷ್ಮಣನೂ ನಮಸ್ಕರಿಸಿದಮೇಲೆ, ಅವರೊಡನೆ ಸುಗ್ರೀವನೂ, ಇತರವಾನರರೂ ಸಂತುಷ್ಟಚಿತ್ತರಾಗಿ ಮುಂದಕ್ಕೆ ಪ್ರಯಾಣಮಾಡಿದರು. ಆ ಸಪ್ತಜನಾಶ್ರಮದಿಂದ ಬಹುದೂರದವರೆಗೆ ನ

---

* ಇದರಿಂದ ಆ ಸಪ್ತಜನಮಹರ್ಷಿಗಳು ದೇವಲೋಕದಿಂದ ಈ ವನಕ್ಕೆ ಆಗಾಗ ಬಂದು ಅಪ್ಸರಸ್ಸುಗಳೊಡನೆ ಕ್ರೀಡಿಸುತಿದ್ದರೆಂದು ಗ್ರಾಹ್ಯವು.

ಡೆದು, ಮುಂದೆ ವಾಲಿಯಿಂದ ಸುರಕ್ಷಿತವಾಗಿ, ಶತ್ರುಗಳಿಂದ ಪ್ರವೇಶಿಸಲ ಸಾಧ್ಯವಾದ ಕಿಷ್ಕಿಂಧೆಯನ್ನು ಕಂಡರು ಹೀಗೆ:ಮಹಾತೇಜಸ್ವಿಗಳಾದ ರಾಮಲಕ್ಷ್ಮಣರೂ, ಇತರ ವಾನರಶ್ರೇಷ್ಠರೂ ಶತ್ರುವಧೋದ್ದೇಶದಿಂದ, ಇಂದ್ರಪುತ್ರನಾದ ಆ ವಾಲಿಯ ವೀರ್ಯದಿಂದ ಪರಿಪಾಲಿತವಾದ ಕಿಷ್ಕಿಂಧಾನಗರಿಯ ಬಳಿಗೆ ಪುನಃ ಬಂದು ಸೇರಿದರು ಇಲ್ಲಿಗೆ ಹದಿಮೂರನೆಯಸರ್ಗವು

ಸುಗ್ರೀವನು ರಾಮನಿಂದ ಪುನೆ ಸಂಪೂರ್ಣವಾದ ಅಭಯವನ್ನುಪಡೆದು ವಾಲಿಯನ್ನು ಯುದ್ಧಕ್ಕೆ ಕರೆದುದು

ಹೀಗೆ ಅವರೆಲ್ಲರೂ ವೇಗದಿಂದ ಹೊರಟು ವಾಲಿಯಿಂದ ಪಾಲಿತವಾದ ಕಿಷ್ಕಿಂಧೆಯಬಳಿಗೆ ಬಂದರು ಸಮೀಪದಲ್ಲಿದ್ದ ಒಂದು ದುರ್ಗಮವಾದ ಅರಣ್ಯದಲ್ಲಿ ರಾಮಾದಿಗಳಲ್ಲರೂ ಒಂದು ಮರದ ಗುಂಪಿನಲ್ಲಿ ಮರೆಸಿಕೊಂಡು ನಿಂತರು ಉಬ್ಬಿದ ಕಂಠವುಳ್ಳವನಾಗಿಯೂ, ಅರಣ್ಯದಲ್ಲಿಯೇ ವಿಶೇಷಪ್ರೀತಿಯುಳ್ಳವನಾಗಿಯೂ ಇರುವ ಸುಗ್ರೀವನು,ಆ ಕಿಷ್ಕಿಂಧೆಯ ಸುತ್ತಿನ ಅಡವಿಯಲ್ಲವನ್ನೂ ಒಮ್ಮೆ ಸುತ್ತಲೂ ಕಣ್ಣಿಟ್ಟು ನೋಡಿದನು ಅದನ್ನು ನೋಡಿದಾಗಲೇ ಅವನ ಮನಸ್ಸಿನಲ್ಲಿ ಕೋಪವು ಅಂಕುರಿಸಿ ಮೇಲೆಮೇಲೆ ಹೆಚ್ಚಿ ಹೋಯಿತು ವಾಯುವೇಗಕ್ಕೆ ಸಿಕ್ಕಿ ಗುಡುಗುತ್ತಿರುವ ಮಹಾಮೇಘದಂತ ತನ್ನನ್ನು ಸುತ್ತಿದ್ದ ಇತರವಾನರರೂಡಗೂಡಿ ಒಂದು ದೊಡ್ಡ ಸಿಂಹನಾದವನ್ನು ಮಾಡಿದನು ಅದರ ಧ್ವನಿಯು ಆಕಾಶವನ್ನೂ ಭೇದಿಸುವಂತೆ ವ್ಯಾಪಿಸಿತು ಬಾಲಸೂರ್ಯಸಮಾನನಾಗಿಯೂ ಮದಿಸಿದ ಸಿಂಹದಂತೆ ಗಂಭೀರಗಮನವುಳ್ಳನಾಗಿಯೂ ಇರುವ ಆ ಸುಗ್ರೀವನು, ಈವಿಧವಾಗಿ ಮೊದಲು ಒಂದಾವರ್ತಿ ವಾಲಿಗೆ ಯುದ್ಧಸೂಚನೆಯನ್ನು ಕೊಟ್ಟು, ಆ ಮೇಲೆ ಕಾರ್ಯಸಮರ್ಥನಾದ ರಾಮನನ್ನು ಕುರಿತು' ,,ರಾಮಾ' ಈಗ ನಾವು ವಾಲಿಯಿಂದ ಪಾಲಿತವಾದ ಕಿಷ್ಕಿಂಧಾಪುರಿಗೆ ಬಂದುಬಿಟ್ಟೆವು ಈ ನಗರಿಯನ್ನು ಸಾಮಾನ್ಯವೆಂದು ತಿಳಿಯಬೇಡ'ಮೃಗಗಳನ್ನು ಹಿಡಿಯುವ ಬಲೆಯಂತೆ, ಶತ್ರುಗಳನ್ನು ಸೆರೆಸಿಕ್ಕಿಸಿಕೊಳ್ಳುವ ಅನೇಕವಾನರು ಇದರಲ್ಲಿ ತುಂ

ಬಿರುವರು ಇದರ ಪುರದ್ವಾರಗಳೆಲ್ಲವೂ ಸುವರ್ಣಮಯವಾಗಿರುವುವು ಮತ್ತು ಇಲ್ಲಿ ಧ್ವಜಗಳೂ ಅನೇಕಯಂತ್ರಗಳೂ ಹೇರಳವಾಗಿರುವುವು ರಾಮಾ! ನೀನು ಮೊದಲಿಂದಲೂ ನನಗೆ ವಾಲಿಯನ್ನು ಕೊಲ್ಲುವುದಾಗಿ ಪ್ರತಿಜ್ಞೆಯನ್ನು ಮಾಡಿಕೊಟ್ಟಿರುವೆ! ಈಗ ಅದಕ್ಕೆ ಫಲಕಾಲವು ಬಂದಿರುವುದು ಫಲಕಾಲದಲ್ಲಿ ಲತೆಗಳು ತಪ್ಪದೆ ಫಲಿಸುವಂತೆ, ಈಗ ನೀನು ನಿನ್ನ ಪ್ರತಿಜ್ಞೆಯನ್ನು ತಪ್ಪದೆ ಸಫಲಗೊಳಿಸಬೇಕು" ಎಂದನು ಇದನ್ನು ಕೇಳಿ ಧರ್ಮಾತ್ಮನಾಗಿಯೂ ಶತ್ರುನಿಗ್ರಾಹಕನಾಗಿಯೂ ಇರುವ ರಾಮನು, ಸುಗ್ರೀವನನ್ನುಕುರಿತು, "ಎಲೈ ಮಿತ್ರನೆ! ಆಗ ನಾನು ವಾಲಿಯನ್ನು ಕೊಲ್ಲದಿದ್ದುದಕ್ಕೆ ಯಥಾರ್ಥವಾದ ಕಾರಣವನ್ನು ಹೇಳಿರುವೆನಲ್ಲವೆ! ಈಗ ಲಕ್ಷ್ಮಣನು ನಿನ್ನ ಕಂಠದಲ್ಲಿ ಈ ನಾಗಪುಷ್ಪೀಲತೆಯನ್ನು ಹಾಕಿರುವುದರಿಂದ, ನಾನು ಸುಲಭವಾಗಿ ನಿನ್ನ ಗುರುತನ್ನು ಕಂಡುಕೊಳ್ಳಬಹುದು ಸುಗ್ರೀವಾ! ಈಗ ವಾಲಿಯು ನನ್ನ ಬಾಣದಿಂದ ಸಾಯುವುದು ಹಾಗಿರಲಿ! * ನಕ್ಷತ್ರಮಾಲೆಯಿಂದ ಪರಿವೃ

---

* ಇಲ್ಲಿ "ಶೋಭಸೇ ಹ್ಯಧಿಕಂ ವೀರ ಲತಯಾ ಕಂಠಸಕ್ತಯಾ! ವಿಪರೀತೇ ಇವಾಕಾಶೇ ಸೂರ್ಯೋ ನಕ್ಷತ್ರಮಾಲಯಾ" ಎಂದು ಮೂಲವು ಇಲ್ಲಿ ಸೂರ್ಯನು ನಕ್ಷತ್ರಮಾಲೆಯಿಂದ ಪರಿವೃತನಾಗುವುದು ಅಸಂಭವದಾದುದರಿಂದ, ಇದನ್ನು ಅಭೂತೋಪಮೆಯೆಂದು ಗ್ರಹಿಸಬೇಕು ಈ ಹೋಲಿಕೆಯೇ ವಾಲಿವಿನಾಶಕ್ಕೆ ಸೂಚಕವೆಂದೂ ಗ್ರಾಹ್ಯವು. "ರಾತ್ರಾವಿಂದ್ರಧನುರ್ದರ್ಶೀ ದಿವಾನಕ್ಷತ್ರದರ್ಶನೇ। ತದ್ರಾಷ್ಟ್ರನಾಥನಾಶಸ್ಯ ದಿಶೇ ಗರ್ಗಸ್ಯಭಾಷಿತಮ್" ಎಂಬುದಾಗಿ, ರಾತ್ರಿಯಲ್ಲಿ ಇಂದ್ರಧನುಸ್ಸನ್ನೂ, ಹಗಲಲ್ಲಿ ನಕ್ಷತ್ರವನ್ನೂ ನೋಡಿದರೆ, ಆಯಾರಾಷ್ಟ್ರದ ರಾಜರಿಗೆ ಹಾನಿಯೆಂದು ಗರ್ಗವಚನವಿರುವುದರಿಂದ, ನಕ್ಷತ್ರಪರಿವೃತನಾದ ಸೂರ್ಯನೆನ್ನು ಹೋಲುತ್ತಿರುವ ಈ ಸುಗ್ರೀವನ ಸ್ವರೂಪವೇ, ಈಗ ವಾನರರಾಜನಾದ ವಾಲಿಯ ಮರಣಕ್ಕೆ ಸೂಚಕವೆಂದು ಭಾವವು

ಅಥವಾ "ವಿಪರೀತಂತು ದಿವಾ ಪ್ರೋಕ್ತಂ ವಿಪರೀತಂತು ಶರ್ವರೀ" ಎಂದೂ, "ರಾತ್ರಾಮಧ್ಯೇಗತಶ್ಚಂದ್ರಸೂರ್ಯ ಇತ್ಯಭಿಧೀಯತೇ" ಎಂದೂ ಪ್ರಮಾಣಗಳಿರುವುದರಿಂದ, ವಿಪರೀತವೆಂದರೆ ರಾತ್ರಿಯು, ಸೂರ್ಯನೆಂದರೆ ರಾತ್ರಾಚಂದ್ರನು ಇದರಿಂದ ರಾತ್ರಿಯಲ್ಲಿ ನಕ್ಷತ್ರಪರಿವೃತನಾದ ರಾತ್ರಾಚಂದ್ರನಂತೆ ಸುಗ್ರೀವನು ಶೋಭಿಸುತಿದ್ದನೆಂದು ಸಾಮಾನ್ಯೋಪಮೆಯನ್ನೂ ಹೇಳಬಹುದು.

ತನಾಗಿ, ಆಕಾಶದಲ್ಲಿ ಕಾಣಿಸಿಕೊಳ್ಳುವ ಉತ್ಪಾತಸೂರ್ಯನಂತೆ ಈ ಲತೆಯಿಂದ ಶೋಭಿಸುವ ಈ ನಿನ್ನ ಸ್ವರೂಪವೇ ಅವಾಲಿಯ ಸಾವಿಗೆ ಸೂಚಕವಾದ ಮಹೋತ್ಪಾತವನ್ನು ತೋರಿಸುತ್ತಿರುವುದು ಎಲೈ ವಾನರೋತ್ತಮನೆ! ಮುಖ್ಯವಾಗಿ ನಿನಗೆ ವಾಲಿಯಿಂದುಂಟಾಗಿರುವ ಭಯವೂ, ಆತನಿಗೂ ನಿನಗೂ ಇರತಕ್ಕ ವೈರವೂ ಇಂದಿಗೆ, ತೀರಿತೆಂದು ತಿಳಿ! ಈಗ ನಾನು ಈ ನನ್ನ ಒಂದೇಬಾಣದಿಂದ ಅವೆಲ್ಲವನ್ನೂ ತೀರಿಸಿಬಿಡುವೆನು ಭಯಪಡಬೇಡ! ನಿನಗೆ ಸಹೋದರರೂಪದಿಂದಿರುವ ನಿನ್ನ ವೈರಿಯನ್ನು ತಂದು ನನಗೆ ತೋರಿಸು ಅವನು ನನ್ನ ಕಣ್ಣಿಗೆ ಬಿಳುವುದೇ ತಡೆ' ಆ ಕ್ಷಣವೇ ಅವನು ಹತನಾಗಿ ಬಿದ್ದು ಇಲ್ಲಿನ ನೆಲದಮಣ್ಣಿನಮೇಲೆ ಹೊರಳುವುದನ್ನು ನೋಡು! ಅವನು ಈಗ ನನ್ನ ಕಣ್ಣಿಗೆ ಬಿದ್ದನಾದರೆ ತಿರುಗಿ ಬದುಕಿಹೋಗುವನೆಂದೆಣಿಸಬೇಡ ಆತನು ಬದುಕಿಹೋದರ ಆಗ ನಾನು ದೋಷಭಾಗಿಯೇ ಸಿಜವು ಆಗ ನೀನೂ ನನ್ನನ್ನು ನಿನ್ನ ಬಾಯಿಗೆ ಬಂದಂತೆ ನಿಂದಿಸಬಹುದು ನಾನು ಒಂದೇ ಬಾಣದಿಂದ ಸಪ್ತಸಾಲಗಳನ್ನು 'ಭೇದಿಸಿದುದನ್ನು ನೀನೇ ಪ್ರತ್ಯಕ್ಷವಾಗಿ ನೋಡಿರುವೆಯಷ್ಟೆ' ಅದೇ ವೇಗದಿಂದ ಈಗ ವಾಲಿಯೂ ನನ್ನಿಂದ ಹತನಾಗುವನೆಂದು ತಿಳಿ! ಎಲೈ ವೀರನೆ! ನಾನು ಎಷ್ಟೇ ಕಷ್ಟದಲ್ಲಿದ್ದರೂ ಹಿಂದೆ ಯಾವಾಗಲೂ ಸುಳ್ಳಾಡಿದವನಲ್ಲ ಧರ್ಮಕ್ಕೆ ಲೋಪವುಂಟಾಗಬಾರದೆಂಬುದೇ ನನ್ನ ಮುಖ್ಯವ್ರತವು ಇನ್ನು ಮುಂದೆಯೂ ಎಷ್ಟೇಕಷ್ಟಬಂದರೂ ಸುಳ್ಳಾಡತಕ್ಕವನಲ್ಲ ಇಂದ್ರನು ಭೂಮಿಯಲ್ಲಿ ಬಿತ್ತಿದ ಪೈರುಗಳನ್ನು ಮಳೆಯಿಂದ

ಅಥವಾ ''ನವೋನವೋಭವತಿ'' ಇತ್ಯಾದಿಶ್ರುತಿಗಳಲ್ಲಿ, ''ಅಹ್ನಾಂಕೇತು'' ಎಂಬ ಶಬ್ದದಿಂದ ವಾಚ್ಯನಾದ ಸೂರ್ಯನೇ ಚಂದ್ರನಿಗೆ ಆಪ್ಯಾಯಕನಾದುದರಿಂದ, ಚಂದ್ರನೆನಿಸಲ್ಪಡುವನು. ಹೀಗೆ ಸೂರ್ಯಕಿರಣದಿಂದಲೇ ಚಂದ್ರನಿಗೆ ಕಾಂತಿಯುಂಟಾಗುವುದೆಂಬ ವಿಷಯವು ವಿಷ್ಣುಪುರಾಣದಲ್ಲಿಯೂ ''ಕ್ಷೀಣಂ ಸೋಮಂ ಸುರೈಃಪೀತಮಾಪ್ಯಾಯಯತಿ ದೀಪ್ತಿಮಾನ್ । ಮೈತ್ರೇಯೈಕಕಲಂ ಸಂತಂ ರಶ್ಮಿನೈಕೇನ ಭಾಸ್ಕರಃ''ಎಂದು ನಿರೂಪಿಸಲ್ಪಟ್ಟಿದೆ ಹಾಗೆಯೇ ಚಂದ್ರನು ಸೂರ್ಯಕಿರಣಪ್ರವೇಶದಿಂದಲೇ ಕಾಂತಿವಿಶಿಷ್ಟನಾಗುವುದರಿಂದ ಸೂರ್ಯನೆನಿಸಲ್ಪಡುವನು ಆದುದರಿಂದ ಇಲ್ಲಿ ನಕ್ಷತ್ರಮಾಲೆಯಿಂದ (ವಿಪರೀತಃ) ವಿಶೇಷವಾಗಿ ಪರಿವೇಷ್ಟಿತನಾದ ಚಂದ್ರನಂತೆ ಪ್ರಕಾಶಿಸುತಿದ್ದನೆಂದೂ ಹೇಳಬಹುದು

ಹೇಗೆ ಫಲಭರಿತವನ್ನಾಗಿ ಮಾಡುವನೋ, ಹಾಗೆ ನಾನು ವಾಲಿಯನ್ನು ಕೊಲ್ಲಬೇಕೆಂದು ಮಾಡಿದ ಪ್ರತಿಜ್ಞೆಯನ್ನು ನನ್ನ ಪರಾಕ್ರಮದಿಂದ ಸ ಫಲವನ್ನಾಗಿ ಮಾಡುವೆನು ಮಾಡಿದ ಪ್ರತಿಜ್ಞೆಗೆ ನಾನು ಯಾವಾಗಲೂ ತಪ್ಪತಕ್ಕವನಲ್ಲ ಅದರಿಂದ ನೀನು ಸಂದೇಹಿಸಬೇಕಾದುದೇ ಇಲ್ಲ ಸುಗ್ರೀವಾ ! ಸುವರ್ಣಮಾಲಿಕೆಯೊಡಗೂಡಿದ ಆ ವಾಲಿಯು ಈಕ್ಷಣವೇಹೊರಟು ಬರುವುದಕ್ಕೆ ತಕ್ಕಂತೆ ನೀನು ಒಂದುದೊಡ್ಡಗರ್ಜನೆಯನ್ನು ಮಾಡು ಆ ವಾಲಿಯು ಯಾವಾಗಲೂ ಜಯಶೀಲನು ಬಲದಲ್ಲಿ ಬಹಳಖ್ಯಾತಿಯನ್ನು ಹೊಂದಿದವನು ಶತ್ರುಗಳ ಬಲವನ್ನೂ ಮಚ್ಚಿ ಸಂತೋಷಿಸುವವನು ಯುದ್ಧಪ್ರಿಯನು ನೀನು ಇದಕ್ಕೆ ಮೊದಲೇ ಒಂಬಾವರ್ತಿ ಆತನನ್ನು ಯುದ್ಧಕ್ಕೆ ಕರೆದು ಇದಿರಿಸಿದವನಾದುದರಿಂದ, ಈಗ ನಿನ್ನ ಗರ್ಜನೆಯನ್ನು ಕೇಳಿದ ಕ್ಷಣವೇ ಅವನು ಕೋಪದಿಂದ ಹೊರಟುಬರುವುದರಲ್ಲಿ ಸಂದೇಹವಿಲ್ಲ ಪರಾಕ್ರಮವುಳ್ಳವರು ಯುದ್ಧದಲ್ಲಿ ಶತ್ರುಗಳು ಮಾಡುವ ತಿರಸ್ಕಾರವನ್ನು ಸ್ವಲ್ಪವೂ ಸಹಿಸಲಾರರು ಇದರಮೇಲೆ ಈ ವಾಲಿಯಂತೆ ತಮ್ಮ ಪರಾಕ್ರಮವೇ ಹೆಚ್ಚೆಂಬ ಹೆಮ್ಮೆಯಿಂದಿರುವವರು, ಅದರಲ್ಲಿಯೂ *ತಮ್ಮಸ್ತ್ರೀಯರ ಮುಂದಿರುವಾಗ, 'ಶತ್ರುಗಳ ತಿರಸ್ಕಾರವನ್ನು ಸ್ವಲ್ಪವಾತ್ರವೂ ಸಹಿಸರು," ಎಂದನು ಇದನ್ನು ಕೇಳಿ ಸುವರ್ಣಛಾಯೆಯುಳ್ಳ ಆ ಸುಗ್ರೀವನು, ಆಕಾಶವನ್ನು ಭೇದಿಸುವಂತೆ ಆಗಲೇ ಒಂದು ಸಿಂಹನಾದವನ್ನು ಮಾಡಿದನು ರಾಜ್ಯವು ಅರಾಜಕವಾಗಿ ಕೇಳುವವರಿಲ್ಲದಿದ್ದಾಗ, ದೇಶದಲ್ಲಿರುವ ಕುಲಸ್ತ್ರೀಯರು ಪರಪುರುಷರಿಂದ ಹಿಡಿಯಲ್ಪಟ್ಟ ತರುಬುಳ್ಳರಾಗಿ, ದಿಕ್ಕುಕಾಣದೆ ತತ್ತಳಿಸುವಂತೆ ಆಗಪಟ್ಟಣದ ಹೊರಗಿದ್ದ ಗೋಕುಲವೆಲ್ಲವೂ ಸುಗ್ರೀವನ ಧ್ವನಿಗೆ ಬೆದರಿ ಪಟ್ಟಣಕ್ಕೆ ಹಿಂತಿರುಗಿದುವು ಅಲ್ಲಿದ್ದ ಜಿಂಕೆಗಳೂ, ಯುದ್ಧದಲ್ಲಿ ಗಾಯಪಟ್ಟ ಕುದುರೆಗಳಂತೆ, ಹಿಂದು

''ಪ್ರಾತರ್ಮೃತ್ಪುರೀಷಾಭ್ಯಾಂ ಮಧ್ಯಾಹ್ನೇ ಕ್ಷುತ್ಪಿಪಾಸಯಾ। ಸಾಯಂ ಕಾಮೇನ ಪೀಡ್ಯಂತೇ ಜಂತವೋನಿಶಿನಿದ್ರಯಾ" ಎಂಬುದಾಗಿ ವಾಲಿಯು ಸ್ತ್ರೀಮಧ್ಯಗತನೆಂದು ಹೇಳಿರುವುದರಿಂದಲೂ, ಗೋವ್ರಗಳಿಗೆ ಪುರಪ್ರವೇಶವನ್ನು ಹೇಳಿದುದರಿಂದಲೂ ಇದು ಸಾಯಂಕಾಲವೆಂದೂಹ್ಯವು

ಮುಂದುತೋರದೆ, ದಿಕ್ಕುಗೆಟ್ಟು ಓಡಲಾರಂಭಿಸಿದುವು ಆಕಾಶದಲ್ಲಿ ನಕ್ಷತ್ರರೂಪದಿಂದ ಶೋಭಿಸುವ ಪುಣ್ಯಪುರುಷರು, ತಾವುಮಾಡಿದ ಪುಣ್ಯ ಫಲವೆಲ್ಲವೂ ಮುಗಿದಮೇಲೆ ಭೂಮಿಗೆ ಬಿಳುವಂತೆ, ಗಗನಚಾರಿಗಳಾದ ಪಕ್ಷಿಗಳೆಲ್ಲವೂ ಮೇಲಿಂದ ಉದುರುತಿದ್ದುವು ಹೀಗೆ ಸೂರ್ಯಾತ್ಮಜನಾದ ಆ ಸುಗ್ರೀವನು, ಮೇಘಸಮೂಹಗಳು ಒಂದಾಗಿ ಸೇರಿ ಗರ್ಜಿಸುವಂತೆ ಭಯಂಕರವಾದ ಸಿಂಹನಾದವನ್ನುಮಾಡಿ, ವಾಯುವೇಗದಿಂದ ಉಲ್ಲೋಲಕಲ್ಲೋಲವಾದ ಮಹಾಸಮುದ್ರದಂತೆ ಆರ್ಭಟಿಸುತ್ತ, ಪರಾಕ್ರಮದಿಂದುಬ್ಬಿಬರುತಿದ್ದನು ಇಲ್ಲಿಗೆ ಹದಿನಾಲ್ಕನೆಯಸರ್ಗವು

ಸುಗ್ರೀವನ ಸಿಂಹನಾದವನ್ನು ಕೇಳಿ ವಾಲಿಯು ವನಃ ಕೋಪಗೊಂಡು ಯುದ್ಧಕ್ಕೆ ಹೊರಟುದು. ತಾರೆ ಯು ಬೇಡವೆಂದು ವಾಲಿಯನ್ನು ತಡೆದುದು

ಹೀಗೆ ಸುಗ್ರೀವನು ಹಿಂದೆ ಯಾವಾಗಲೂ ಇಲ್ಲದಥೈರ್ಯವನ್ನು ಹಿಡಿದು ಮಾಡಿದ ಸಿಂಹನಾದವು,ಅತ್ತಲಾಗಿ ವಾಲಿಯ ಕಿವಿಗೆ ಬಿದ್ದಿತು ಅಂತಃಪುರದಲ್ಲಿದ್ದ ವಾಲಿಗೆ ಸಹಿಸಲಾರದ ಕೋಪವುಂಟಾಯಿತು ವಾಲಿಯು ಅಂತಃಪುರವಿಹಾರದಲ್ಲಿದ್ದರೂ, ಸಮಸ್ತಭೂತಗಳನ್ನೂ ನಡುಗಿಸುವಂತಿರುವ ಆ ಗರ್ಜನಧ್ವನಿಯನ್ನು ಕೇಳಿದೊಡನೆ, ಅವಸಿಗಿದ್ದ ಕಾಮಮದವೆಲ್ಲವೂ ಅಡಗಿಹೋಯಿತು ವಾಲಿಯು ಸಹಜವಾಗಿ ಸಂಜೆಗೆಂಪಿನಂತೆ ಮೈಒಣ್ಣುವುಳ್ಳವನಾಗಿದ್ದರೂ, ಆಗ ಮಿತಿಮೀರಿದ ಕೋಪದಿಂದ ಕಪ್ಪುಹಿಡಿದ ದೇಹವುಳ್ಳವನಾಗಿ * ಗ್ರಹಣಹಿಡಿದ ಸೂರ್ಯನಂತೆ ಕಾಂತಿಹೀನನಾಗಿಬಿಟ್ಟನು ಭಯಂಕರವಾದ ಕೋರೆದಾಡೆಗಳಿಂದಕೂ

---

* ಇಲ್ಲಿ "ಉಪರಕ್ತ ಇವಾದಿತ್ಯಃ"ಎಂದುಮೂಲವು ಉಪರಕ್ತನೆಂದರೆ ಸಮೀಪದಲ್ಲಿ ರಕ್ತವರ್ಣವುಳ್ಳವನು,ಪರಿವೇಷವನ್ನು ಹೊಂದಿರುವವನೆಂದರ್ಥವು ಪರಿವೇಷದಿಂದ ಕೂಡಿದೆ ಸೂರ್ಯನು ಹೇಗೆ ಕಾಂತಿಹೀನನಾಗುವನೋ,ಹಾಗೆ ವಾಲಿಯೂ ಕಾಂತಿಹೀನನಾಗಿದ್ದನೆಂದೂ ಅರ್ಥಾಂತರವು ಮೇಲೆ ಹೇಳಿದಂತೆ ರಾಹುಗ್ರಸ್ತನಾದ ಸೂರ್ಯನೊಡನೆ ಹೋಲಿಸುವುದರಿಂದ ವಾಲಿಗೆ ಮುಂದೆ ಬರುವ ವಿನಾಶವು ಸೂಚಿತವಾಗುವುದು.

ಡಿ,ಬೆಂಕಿಯುರಿಯಂತೆ ಜ್ವಲಿಸುತಿದ್ದ ಆತನ ದೇಹವು, ದಂಟಿನೊಡನೆ ಮೇಲೆ ದ್ದ ಕಮಲವುಳ್ಳ ಮಡುವಿನಂತೆ ತೋರುತಿತ್ತು. ಹೀಗೆ ವಾಲಿಯು ಕಿವಿ ಯಿಂದ ಕೇಳಿ ಸಹಿಸಲಾರದ ಸುಗ್ರೀವನ ಗರ್ಜನೆಯನ್ನು ಕೇಳಿದೊಡನೆ ಅಂತಃಪುರದಿಂದ ಹೊರಟು,ತನ್ನ ಪದಘಾತದಿಂದ ಭೂಮಿಯನ್ನೇ ಭೇದಿಸು ವಂತೆ ವೇಗದಿಂದ ಕಾಲಿಡುತ್ತ ಹೊರಗೆ ಬಂದನು ಇದನ್ನು ನೋಡಿ :ಅವನ ಪತ್ನಿಯಾದ ತಾರೆಯು, ಸಂಭ್ರಮದಿಂದಲೂ, ಭಯದಿಂದಲೂ ಕೂಡಿದವ ಳಾಗಿ, ಪತಿಯ ಬಳಿಗೆ ಬಂದು, ಪ್ರೀತಿಯಿಂದ ಆತನನ್ನಪ್ಪಿಕೊಂಡು, ಸ್ನೇ ಹಪೂರ್ವಕವಾದ ಮಾತಿನಿಂದ ಆತನನ್ನು ಕುರಿತು ಹಿತವಾಕ್ಯಗಳನ್ನಾಡ ತೊಡಗಿದಳು ''ಎಲೈ ವೀರನೆ! ಈಗ ನಿನಗಾದರೋ, ನದೀಪ್ರವಾಹವೇಗ ದಂತೆ ತಡೆಯಲಾರದ ಕೋಪವು ಬಂದಿರುವುದು ಈ ಕೋಪವನ್ನು ಬಿಟ್ಟು ಬಿಡು! ಬೆಳಗಾದಮೇಲೆ ಹಾಸಿಗೆಯಿಂದೆದ್ದವನು, ರಾತ್ರಿಯಲ್ಲಿ ಉಪಭು ಕ್ತವಾದ ಪುಷ್ಪಮಾಲಿಕೆಯನ್ನು ಕಳೆದುಬಿಸುಡುವಂತೆ, ನೀನು ಈಗ್ಗೆ ಈ ಕೋಪವನ್ನು ತ್ಯಜಿಸಬೇಕು ಬೆಳಗಾದಮೇಲೆ ಯುದ್ಧಮಾಡಬಹುದು ಇಷ್ಟ ರೊಳಗಾಗಿ ನಿನ್ನ ಶತ್ರುವಿಗೆ ಯಾವ,ಮೇಲ್ಮೆಯಾಗಲಿ, ನಿನಗೆ ಯಾವವಿಧದ ನ್ಯೂನತೆಯಾಗಲಿ ಉಂಟಾಗದು ನೀನು ಇದ್ದಕ್ಕಿದ್ದಹಾಗೆ ಯು ದ್ಧಕ್ಕಹೊರಡುವುದು ನನಗೇನೋ ಸರ್ವಥಾ ಸಮ್ಮತವಲ್ಲ ಈಗ ನಾನು ನಿನ್ನ ನ್ನು ತಡೆಯುವುದಕ್ಕೆ ತಕ್ಕ ಕಾರಣವನ್ನೂ ಹೇಳುವೆನು ಕೇಳು!ಸುಗ್ರೀವನು ಇ ದಕ್ಕೆ ಮೊದಲೇ ಒಂದಾವರ್ತಿ ಇಲ್ಲಿಗೆ ಬಂದು ಯುದ್ಧಕ್ಕೆ ಕರೆದನಲ್ಲವೆ? ಆಗ ಲೇ ನೀನು ಅತನನ್ನು ಹೊಡೆದೋಡಿಸಿರುವೆ! ಆಗ ನಿನ್ನ ವೀರ್ಯಕ್ಕೆ ತಡೆಯ ಲಾರದೆ ಅವನು ದಿಕ್ಕುಗೆಟ್ಟು ಪಲಾಯನಮಾಡಿದನು ಈ ಕಾರ್ಯವು ನಡೆದು ಇನ್ನೂ ಬಹಳಹೊತ್ತಾಗಿಲ್ಲವು ಹೀಗೆ ಈಗಲೇ ನಿನ್ನಿಂದ ಪೀಡಿತನಾಗಿ ಪ ಲಾಯನಮಾಡಿದ ಆ ನಿನ್ನವೈರಿಯು,ಪುನಃ ಇಲ್ಲಿಗೆ ಬಂದು ನಿನ್ನನ್ನು ಯುದ್ಧಕ್ಕೆ ಕರೆಯುತ್ತಿರುವನಲ್ಲವೆ? ಇದರಿಂದ ನನಗೇನೋ ಸಂದೇಹವು ತೋರಿರುವುದು ಇದಲ್ಲವೆ ಈಗಿನ ಅವನ ಗರ್ಜನಧ್ವನಿಯು ಮೊದಲಿನಂತಿಲ್ಲದೆ, ಸ್ವರವೇ ಬೇರೆವಿಧವಾಗಿರುವುದು ಈ ಧ್ವನಿಯೇ ಅವನ ಈಗಿನ ಹೆಮ್ಮೆಯೆನ್ನೂ,ಅವನ ಪ್ರಯತ್ನವನ್ನೂ ಚೆನ್ನಾಗಿ ತೋರಿಸುವಂತಿರುವುದು ಇದಕ್ಕೆ ಏನೋ

ಒಂದು ದೊಡ್ಡ ಕಾರಣವಿರಬೇಕು ಈಗ ಸುಗ್ರೀವನು ಮೊದಲಿನಂತೆ ಯೇ ಅಸಹಾಯನಾಗಿ ಬಂದಿರುವನೆಂದು ನನಗೆ ತೋರಲಿಲ್ಲ ಸಂ ಪೂರ್ಣವಾದ ಯಾವುದೋ ಸಹಾಯದ ಬಲದಿಂದಲೇ ಅವನು ಹೀಗೆ ಉತ್ಸಾಹದಿಂದ ಗರ್ಜಿಸುತ್ತಿರುವನು ಆದರೆ "ಯಾವನ ಸಹಾಯವಿದ್ದರೂ ಭಯವಿಲ್ಲ"ವೆಂದು ನೀನು ಹೇಳಬಹುದು ಹಾಗೆಣಿಸಬಾರದು ಆ ಸುಗ್ರೀ ವನು ಸಹಜವಾಗಿಯೇ ಬಹಳಚಾತುರ್ಯವುಳ್ಳವನು ಬಹಳ ಬುದ್ಧಿವಂತನು ಯುಕ್ತಾಯುಕ್ತವಿವೇಚನೆಯನ್ನು ಚೆನ್ನಾಗಿ ಬಲ್ಲವನು ಅವರವರ ವೀರ್ಯವನ್ನು ಚೆನ್ನಾಗಿ ಪರೀಕ್ಷಿಸಿ ನೋಡಿದಹೊರತು, ಸ್ನೇಹವನ್ನು ಬಳೆಸುವವನಲ್ಲ ತನಗೆ ನಂಬಿಕೆಯು ಹುಟ್ಟಿದಹೊರತು ಇತರರನ್ನು ಸಹಾಯಕ್ಕೆ ಕರೆಯುವವನಲ್ಲ ಇದಲ್ಲದೆ ಹಿಂದೊಮ್ಮೆ ನಿನ್ನಕುಮಾರನಾದ ಅಂಗದನು, ನನಗೆ ಒಂದು ವಿ ಷಯವನ್ನು ಹೇಳಿರುವನು ನಿನಗೆ ಹಿತಕರವಾದ ಆ ಸಂಗತಿಯನ್ನೂ ತಿಳಿಸು ವೆನು ಕೇಳು ಅಂಗದನು ಒಮ್ಮೆ ಕಾಡಿನಲ್ಲಿ ಸುತ್ತಿಬರುವುದಕ್ಕಾಗಿ ಹೋಗಿದ್ದಾಗ, ಅಲ್ಲಿ ಆಪ್ತರಾದ ಕೆಲವು ಚಾರರಿಂದ ತಾನು ತಿಳಿದ ಕೆಲವು ಸಂಗತಿಗಳನ್ನು ನನ್ನೊಡನೆ ಹೇಳಿರುವನು ಇಕ್ಷ್ವಾಕುವಂಶದಲ್ಲಿ ಅಯೋ ಧ್ಯಾಧಿಪತಿಯಾದ ದಶರಥನ ಮಕ್ಕಳಾದ ರಾಮಲಕ್ಷ್ಮಣರೆಂಬ ಮಹಾಶೂ ರರಿಬ್ಬರು ಸುಗ್ರೀವನ ಸಹಾಯಕ್ಕಾಗಿ ಇಲ್ಲಿಗೆ ಬಂದಿರುವರೆಂದೂ, ಯುದ್ಧ ದಲ್ಲಿ ಅವರನ್ನು ಜಯಿಸುವುದು ಯಾರಿಗೂ ಸಾಧ್ಯವಲ್ಲವೆಂದೂ ಕೇಳಿದನು ಎಲೈ ಪ್ರಿಯನೆ ! ಆ ಇಬ್ಬರಲ್ಲಿ ರಾಮನೆಂಬವನೊಬ್ಬನ ಗುಣವನ್ನು ಮಾತ್ರ ಹೇಳುವೆನು ಕೇಳು'ಅವನುಯುದ್ಧಕಾರ್ಯದಲ್ಲಿ ಅತಿಕ್ರೂರನು ಎಷ್ಟೇಶತ್ರುಸೈ ನ್ಯವನ್ನಾದರೂ ಪ್ರಳಯಕಾಲದ ಬೆಂಕಿಯಂತೆ ತನ್ನ ಬಾಣದಿಂದ ದಹಿಸಿಬಿ ಡುವನು' ಸಾಧುಗಳಿಗೆ ಆಶ್ರಯವೃಕ್ಷದಂತಿರುವನು ಎಷ್ಟೇಕಷ್ಟದಲ್ಲಿ ಸಿಕ್ಕಿ

---

* ಇಲ್ಲಿ "ಸಿವಾಸವೃಕ್ಷಸ್ಸಾಧೂನಾಮಾಪನ್ನಾನಾಂ ಪರಾ ಗತಿಃ । ಆರ್ತಾನಾಂ ಸಂಶ್ರಯಶ್ಚೈವ ಯಶಸಶ್ಚೈಕಭಾಜನಂ॥ಜ್ಞಾನವಿಜ್ಞಾನಸಂಪನ್ನೋ ನಿದೇಶೇ ನಿರತಃ ಪಿತುಃ।ಧಾತೂನಾಮಿವ ಶೈಲೇಂದ್ರೋ ಗುಣಾನಾಮಾಕರೋ ಮಹಾನ್ "ಎಂದುಮೂ ಲವು ತಾರೆಯು ರಾಮಲಕ್ಷ್ಮಣರೆಂತವರೆಂಬುದನ್ನು ವಾಲಿಗೆ ತಿಳಿಸಲಾರಂಭಿಸಿ, ಅವರಲ್ಲಿ ಪ್ರಧಾನಭೂತನಾದ ರಾಮನ ಸ್ವರೂಪವನ್ನು ತಿಳಿಸುವುದರಿಂದಲೇ, ಇಬ್ಬರ ಸ್ವರೂಪ

ಬಿದ್ದವರಿಗೂ ದಿಕ್ಕಾಗಿ ಬಂದು ಅವರನ್ನು ಧರ್ಮಿಸುವನು ದುಃಖಿತರಾದವರಿಗೆ

ವೂ ತಿಳಿಸಲ್ಪಟ್ಟಂತಾಗುವುದೆಂದೆಣಿಸಿ,ಆ ರಾಮನ ಗುಣಗಳನ್ನು ಹೇಳುವಳು ಇದರಿಂದ ತಾರೆಯು ರಾಮನ ತತ್ವವನ್ನು ತಿಳಿಸುವುದಾಗಿ ಗ್ರಾಹ್ಯವು "ಸುಗ್ರೀವನಿಗೆ ಸಹಾಯಕನಾಗಿ ಬಂದ ರಾಮನು, ತನಗೂ ಸಹಾಯಕನಾಗಲಾರನೆ?" ಎಂದು ವಾಲಿಯು ಆಕ್ಷೇಪಿಸಬಹುದೆಂದೆಣಿಸಿ. (ನಿವಾಸವೃಕ್ಷ-ಛಾಯಾನಾಂ) ಎಂದುಹೇಳಿರುವಳು ವೃಕ್ಷವು ತನ್ನ ನೆರಳನ್ನಪೇಕ್ಷಿಸಿ ತನಗೆನುಕೂಲರಾಗಿ ಬಂದವರಿಗೆಮಾತ್ರವೇ ಆಶ್ರಯವನ್ನು ಕೊಡುವಂತೆ, ರಾಮನೂ ತನಗೆನುಕೂಲರಾಗಿ ತನ್ನಕಡೆಗೆ ಬಂದ ಸಾಧುಗಳಿಗೆಮಾತ್ರವೇ ಆಶ್ರಯವನ್ನು ಕೊಡತಕ್ಕವನೆಂದುಭಾವವು ಇಲ್ಲಿ ರಾಮನಿಗೆ ವೃಕ್ಷದೊಡನೆ ಅಭೇದಾಧ್ಯವಸಾಯವನ್ನೂ ಹೇಳಿರುವುದರಿಂದ,ಸರ್ವವಿಧದಲ್ಲಿಯೂ ಈತನಿಗೆ ವೃಕ್ಷಸಾಮ್ಯವಿರುವುದೆಂದು ಭಾವವು ವೃಕ್ಷವು ಹೇಗೆ ತನ್ನಕಡಗ ಬಂದವರಿಗೆ ನೊದಲು ತಂಪನ್ನುಂಟುಮಾಡಿ, ಫಲಪುಷ್ಪಾದಿಗಳನ್ನುಕೊಟ್ಟು ಸರ್ವೇಂದ್ರಿಯಗಳನ್ನೂ ತೃಪ್ತಿಹೊಂದಿಸುವುದೋ, ಹಾಗೆಯೇ ಈ ರಾಮನೂ ತನ್ನಲ್ಲಿ ಆಶ್ರಿತರಿಗೆ ಸಮಸ್ತವಿಧದಲ್ಲಿಯೂ ಸಂಪೂರ್ಣವಾದ ತೃಪ್ತಿಯನ್ನು ಹೊಂದಿಸತಕ್ಕವನೆಂದು ಭಾವವು "ವಾಸುದೇವತರುಚ್ಛಾಯಾ ನಾತಿ ಶೀತಾನ ಘರ್ಮದಾ । ನರಕಾಂಗಾರಶಮನೀ ಸಾ ಕಿಮರ್ಥಂನಸೇವ್ಯತೆ" ಎಂದು ಇದೇ ಅರ್ಥವು ಗ್ರಂಥಾಂತರದಲ್ಲಿಯೂ ಹೇಳಲ್ಪಟ್ಟಿರುವುದು ಸುಗ್ರೀವನಿಗೆ ದ್ರೋಹಮಾಡಿದ ನಮ್ಮನ್ನು ಆಶ್ರೀರಾಮನು ಸಾಧುಗಳೆಂದೆಣಿಸಲಾರನಾದುದರಿಂದ, ನಮ್ಮಲ್ಲಿ ಅನುಗ್ರಹವನ್ನು ತೋರಿಸಲಾರನೆಂದೂ ಭಾವವು (ಆಪನ್ನಾನಾಂಪರಾಗತಿಃ) ಆಶ್ರಿತರಿಗೆ ಪರಮಗತಿಯು ಎಂದರೆ "ಅನನ್ಯಾಶ್ಚಿಂತಯಂತೋ ಮಾಂ ಯೇಜನಾಃ ಪರ್ಯುವಾಸತೇ। ತೇಷಾಂನಿತ್ಯಾಭಿಯುಯುಕ್ತಾನಾಂ ಯೋಗಕ್ಷೇಮಂವಹಾಮ್ಯಹಂ" ಎಂಬುದಾಗಿ, ಬೇರೆದಿಕ್ಕೆಲ್ಲದೆ ತನ್ನನ್ನೇ ನಂಬಿ ತನ್ನಲ್ಲಿ ಮೆರಹೊಕ್ಕವರಯೋಗಕ್ಷೇಮವನ್ನು ತನ್ನದೆಂದೇಭಾವಿಸಿ, ಮೊದಲಿಂದ ಕೊನೆಯವರೆಗೂ ಕಾಪಾಡುವ ಅಸಾಧಾರಣಕೃಪಾಸ್ವಭಾವವುಳ್ಳವನು (ಆರ್ತಾನಾಂ ಸಂಶ್ರಯಶ್ಚೈವ) ಆಶ್ರಿತರಲ್ಲಿಯೂ ಆರ್ತರಾದವರಿಗೆ ಸಂಪೂರ್ಣಾವಲಂಬನವನ್ನು ಕೊಡುವವನು ಆದುದರಿಂದ ಸುಗ್ರೀವನು ಆತನಲ್ಲಿ ಆಶ್ರಿತನಾಗಿರುವುದೆಲ್ಲದೆ, ನಮ್ಮಿಂದ ಪೀಡಿತನಾಗಿಯೂ ಇರುವುದರಿಂದ, ರಾಮನು ಅವನನ್ನು ತಪ್ಪದೆ ರಕ್ಷಿಸುವನೆಂದು ಭಾವವು "ಹಾಗೆ ಸುಗ್ರೀವನಿಗೆ ರಾಮನ ಆಶ್ರಯವಿರುವಂತೆ ನಮಗೂ ಮತ್ತೊಬ್ಬನ ಆಶ್ರಯವು ಸಿಕ್ಕಲಾರದೆ?" ಎಂದರೆ, (ಯಶಸಶ್ಚೈಕಭಾಜನಂ) ಅಂತಹ ಆಶ್ರಿತರಕ್ಷಣವೆಂಬ ಕೀರ್ತಿಗೆ ಈ ರಾಮನೊಬ್ಬನೇ ಭಾಗಿಯು. ಇಂತಹ ರಕ್ಷಕರು ಬೇರೆಲ್ಲಿಯೂ ಸಿಕ್ಕಲಾರರೆಂದೂ.ಭಾವವು.

ತಾನೇ ಮುಖ್ಯಾಶ್ರಯವೆನಿಸಿರುವನು ಅವನೊಬ್ಬನೇ ಕೀರ್ತಿಗೆ ಮುಖ್ಯ

ಇಲ್ಲಿ ''ಚತುರ್ವಿಧಾ ಭಜನ್ತೇ ಮಾಂ ಜನಾಸ್ಸುಕೃತಿನೋ ಽರ್ಜುನ! ಆರ್ತೋ ಜಿಜ್ಞಾಸುರರ್ಥಾರ್ಥೀ ಜ್ಞಾನೀಚ ಭರತರ್ಷಭ'' ಎಂಬುದಾಗಿ, ಗೀತೆಯಲ್ಲಿ ಶ್ರೀಕೃಷ್ಣನು ಅರ್ಜುನನನ್ನು ಕುರಿತು ಹೇಳಿದ ನಾಲ್ಕುಬಗೆಯ ಅಧಿಕಾರಿಗಳೂ ಸೂಚಿಸಲ್ಪಟ್ಟಿರುವರೆಂದು ಗ್ರಾಹ್ಯವು. (ಆರ್ತಾನಾಂ) ಎಂಬುದರಿಂದ ಆರ್ತನೂ, (ಸಾಧೂನಾಂ) ಎಂಬುದರಿಂದ ಜಿಜ್ಞಾಸುವೂ, (ಆಪನ್ನಾನಾಂ) ಎಂಬುದರಿಂದ, ಆಕಿಂಚನ್ಯದಿಂದ ದುಃಖವನ ಅರ್ಥಾರ್ಥಿಯೂ, ಸೂಚಿಸಲ್ಪಟ್ಟಿರುವರು. ಹಾಗೆಯೇ (ಯಶಸಶೆ ಲೃಕಭಾಜನಂ) ಎಂಬಲ್ಲಿ ಯಶಸ್ಸೆಂಬುದಕ್ಕೆ ಜ್ಞಾನಾತಿಶಯದಿಂದ ಕೀರ್ತಿಯನ್ನು ಪಡೆದವನೆಂದೂ ಊಹ್ಯವು (ಸಾಧೂನಾಂ) ಇತ್ಯಾದಿಸ್ಥಳಗಳಲ್ಲಿ ಬಹುವಚನವನ್ನು ಹೇಳಿ (ಯಶಸ) ಎಂಬಲ್ಲಿಮಾತ್ರ ಏಕವಚನವನ್ನು ಹೇಳಿರುವುದರಿಂದ, ಅಂತಹ ಜ್ಞಾನಿಯುಮಾತ್ರ ದುರ್ಲಭನೆಂದೂ ಭಾವವು ಇದಕ್ಕಾಗಿಯೇ ಭಗವಂತನು ''ಉದಾರಾಸ್ಸರ್ವ್ವಏವೈತೇ ಜ್ಞಾನೀತ್ವಾತ್ಮೈವ ಮೇಮತಂ'' ಎಂಬುದಾಗಿ ಅವರೆಲ್ಲರೂ ಉತ್ತಮರೇಆಗಿದ್ದರೂ, ಜ್ಞಾನಿಯೊಬ್ಬನುಮಾತ್ರ ನನಗೆ ಆತ್ಮನೆಂದೇ ನನ್ನ ಮತವು'' ಎಂದುಹೇಳಿರುವನು ಆದುದರಿಂದ ಅಂತಹ ಭಗವತ್ಪ್ರೀತಿಪಾತ್ರವಾದ ಜ್ಞಾನದಿಂದ ಯಶಸ್ವಿಯಾದವನೆಂದು ಯಶಶ್ಶಬ್ದಾರ್ಥವು ಅಥವಾ (ಸಾಧೂನಾಂ) ಉಪಾಸಕರಿಗೂ, (ಆಪನ್ನಾನಾಂ) ''ಸಕೃದೇವ ಪ್ರಪನ್ನಾಯ'' ಎಂಬಂತೆ ಸ್ವಲ್ಪವಾಗಿ ಶರಣಾಗತಿಯನ್ನು ಮಾಡಿದವರಿಗೂ, (ಆರ್ತಾನಾಂ) ''ಆರ್ತೋವಾ ಯದಿವಾ ದೃಪ್ತ ಪರೇಷಾಂ ಶರಣಾಗತ'' ಎಂದು ಮುಂದೆ ಹೇಳುವಂತೆ ಆರ್ತರಾಗಿ ಬಂದ ಪ್ರಪನ್ನರಿಗೂ (ಯಶಸ) ಕೀರ್ತಿಗೂ, (ಏಕಭಾಜನಂ) ಒಂದೇ ಸ್ಥಾನವು. ಎಂದರೆ, ಇವೆಲ್ಲಕ್ಕೂ ಅವನೆಲ್ಲದೆ ಬೇರೆ ಆಶ್ರಯವಿಲ್ಲವೆಂದೂ ಭಾವವು (ಗೋವಿಂದರಾಜೀಯವು)

ಮುಂದೆ ಆಶ್ರಿತರ ಕೋರಿಕೆಗಳನ್ನು ಈಡೇರಿಸುವುದಕ್ಕೆ ಸಾಧಕವಾದ ಜ್ಞಾನಸಂಪತ್ತಿಯನ್ನು ಹೇಳುವಳು. (ಜ್ಞಾನವಿಜ್ಞಾನಸಂಪನ್ನಃ) ಲೌಕಿಕಜ್ಞಾನಶಾಸ್ತ್ರಜ್ಞಾನಗಳಿಂದ ಪೂರ್ಣನಾದವನು ಅಥವಾ ''ಜ್ಞಾನಶ್ಚಾಸೌ ವಿಜ್ಞಾನಸಂಪನ್ನಶ್ಚ'' ಜ್ಞಾನಸ್ವರೂಪನೂ, ಜ್ಞಾನಗುಣಕನೂ ಆಗಿ ಶೋಭಿಸುವವನೆಂದರ್ಥವು. ಹೀಗೆ ಜ್ಞಾನಸಂಪತ್ತಿಯನ್ನು ಹೇಳಿ ಅದಕ್ಕೆ ತಕ್ಕ ಅನುಷ್ಠಾನಸಂಪತ್ತಿಯನ್ನೂ ಹೇಳುವಳು ''ನಿದೇಶೇ ನಿರತಃ ಪಿತುಃ'' ಪಿತೃವಾಕ್ಯಪರಿಪಾಲನವೆಂಬ ವ್ರತವನ್ನು ನಡೆಸುವವನು ಇಲ್ಲಿ ಪಿತೃವಚನಪರಿಪಾಲನವೆಂಬ ಧರ್ಮವೊಂದೇ ಪ್ರಧಾನವಾಗಿಹೇಳಲ್ಪಟ್ಟಿದ್ದರೂ, ಇದು ಇತರಧರ್ಮಗಳಿಗೂ ಉಪಲಕ್ಷಕವೆಂದು ಗ್ರಾಹ್ಯವು. ಇದರಿಂದ ಅವನ ಸೌಲಭ್ಯವೂ ಸೂಚಿತವಾಗುವುದು.

ಸ್ಥಾನವೆಂದು ಹೇಳಬಹುದು ಪಾರಲೌಕಿಕವಾದ ಮೋಕ್ಷವಿಚಾರವನ್ನೂ, ಇಹಲೌಕಿಕಗಳಾದ ವ್ಯಾವಹಾರಿಕವಿಷಯಗಳನ್ನೂ ಆತನು ಸಂಪೂರ್ಣವಾಗಿ ಬಲ್ಲನು ತಂದೆಯಾಜ್ಞೆಯನ್ನು ಮೀರಿಸವನಲ್ಲ ಗೈರಿಕಾದಿಧಾತುಗಳಿಗೆ ಪರ್ವತವು ಹೇಗೋ ಹಾಗೆ, ಸಮಸ್ತಗುಣಗಳಿಗೂ ಅವನು ಗನಿಯಂತಿರುವನು ಇಂತಹ ರಾಮನೇ ಈಗ ನಿನ್ನ ತಮ್ಮನಾದ ಸುಗ್ರೀವನಿಗೆ ಸಹಾಯಕನಾಗಿ ಬಂದಿರುವನಲ್ಲವೆ? ಆ ಮಹಾತ್ಮನೊಡನೆ ನಿನಗೆ ವಿರೋಧವು ಎಂದಿಗೂ ತಕ್ಕುದಲ್ಲ ಯುದ್ಧಗಳಲ್ಲಿ ಆತನನ್ನು ಜಯಿಸುವುದು ಯಾರಿಗೂ ಸಾಧ್ಯವಲ್ಲ ಮುಖ್ಯವಾಗಿ ಆತನ ಮಹಿಮೆಯನ್ನು ಇಷ್ಟೆಂದು ಹೇಳಿ ತೀರದು' ಎಲೈ ಶೂರನೆ! ನಿನಗೆ ಮತ್ತೊಂದು ಮುಖ್ಯವಿಷಯವನ್ನು ಹೇಳುವೆನು ನೀನು ಕೋಪಿಸಬಾರದು ನಾನು ಅಪಕ್ಯಾಗಿ ಹೇಳುವ ಹಿತವಾಕ್ಯವನ್ನು ಚೆನ್ನಾಗಿ ಲಾಲಿಸಿಕೇಳು! ಅದರಂತೆಯೇ ನಡೆಸು! ಈಗಲೇ 'ಆ ಸುಗ್ರೀವನನ್ನು ಕರೆತರಿಸಿ, ಅವನಿಗೆ ಯೌವರಾಜ್ಯದಲ್ಲಿ ಅಭಿಷೇಕವನ್ನು ನೂಡಿಬಿಡು' ಈಗೀಗ ಅವನು ನಿನಗಿಂತಲೂ ಬಲದಲ್ಲಿ ಮೇಲಾಗಿಯೇ ಇರುವನು ಹೀಗೆ ಬಲಾಢ್ಯನಾದ ನಿನ್ನ ಒಡಹುಟ್ಟಿದವನೊಡನೆ ವೈರವನ್ನು ಬೆಳೆಸಬೇಡ ! ಎಲೈ ವೀರನೆ! ರಾಮನೊಡನೆ ನೀನು ವೈರವನ್ನು ಮಾಡಬಾರದೆಂಬುದುಮಾತ್ರವೇ ಅಲ್ಲ ನೀನಾಗಿ ಅವನನ್ನು ಕರೆತಂದು ಅವನೊಡನೆ ಸ್ನೇಹವನ್ನು ಮಾಡಿಕೊಂಡರೂ ಮೇಲು! ಸುಗ್ರೀವನೊಡನೆಯೂ ಈಗಿನ ವೈರವನ್ನು ಬಿಟ್ಟು ಪ್ರೀತಿಯನ್ನು ಬೆಳೆಸು! ನಿನ್ನ ತಮ್ಮನಾದ ಆತನನ್ನು ನೀನಾಗಿ ಕರೆತಂದು ಲಾಲಿಸಿಪೋಷಿಸಬೇಕಲ್ಲವೆ? ಅವನು ಅಲ್ಲಿದ್ದರೇನು? ಇಲ್ಲಿದ್ದರೇನು ? ಎಲ್ಲಿದ್ದರೂ ನಿನಗೆ ಬಂಧುವೆನಿಸಿದನು ಲೋಕದಲ್ಲಿ ಒಡಹುಟ್ಟಿದವನಿಗಿಂತಲೂ ಬೇರೆ ಬಂಧುವುಂ

(ಗುಣಾನಾಮಾಕರಃ) 'ಸಮಸ್ತಕಲ್ಯಾಣಗುಣಗಳಿಗೂ ಗನಿಯಂತಿರುವನು ''ಧಾತೂನಾಮಿವ ಶೈಲೇಂದ್ರಃ'' ಎಂಬ ಹೋಲಿಕೆಯಿಂದ ಪರ್ವತಗಳಲ್ಲಿ ಬಗೆಬಗೆಯಾದ ಧಾತುಗಳಿರುವಂತೆ ರಾಮನೆಲ್ಲಿ ಜ್ಞಾನಶಕ್ತಿಬಲೈಶ್ವರ್ಯಾದಿಬಹುಭೇದಗಳುಳ್ಳ ಕಲ್ಯಾಣಗುಣಗಳಿಲ್ಲವೂ ತುಂಬಿರುವುವೆಂದು ಭಾವವು. ಮತ್ತು ಇಲ್ಲಿ ಪರ್ವತಸಾದೃಶ್ಯದಿಂದ (ಆ ರಾಮನಗುಣಗಳಿಗೂ, ಧೈರ್ಯಕ್ಕೂ ಚಲನವೇ ಇಲ್ಲವೆಂದೂ ಸೂಚಿತವು.

ಟೆ? ಪ್ರಿಯನೆ! ನೀನಾಗಿ ಅವನನ್ನು ಕರೆಯಿಸಿ, ದಾನಮಾನಾದಿ ಸತ್ಕಾರಗಳಿಂದ ಅವನನ್ನು ಸಂತೋಷಪಡಿಸಿ, ಸಮೀಪದಲ್ಲಿಯೇ ಇರಿಸಿಕೊಳ್ಳುವನಾಗು! ವೈರವನ್ನು ಬಿಟ್ಟುಬಿಡು! ಅವನು ನಿನಗೆ ಸಹಾಯಕನಾಗಿ ನಿನ್ನ ಬಳಿಯಲ್ಲಿರಲಿ! ಹೇಗಿದ್ದರೂ ಆ ಸುಗ್ರೀವನು ನಿನಗೆ ಬಂಧುವೆನಿಸಿರುವನು ಆತನಲ್ಲಿ ಮೊದಲಿನಂತೆಯೇ ಒಡಹುಟ್ಟಿದ ಪ್ರೇಮವನ್ನು ತೋರಿಸು! ಈಗ ನಿನಗೆ ಈ ಉಪಾಯವನ್ನು ಬಿಟ್ಟರೆ ಬೇರೆದಾರಿಯಿಲ್ಲ! ನೀನು ನನಗೆ ಪ್ರಿಯವನ್ನು ಕೋರುವವನಾಗಿದ್ದರ,ನಾನೂ ನಿನಗೆ ನಿಜವಾದ ಹಿತೈಷಿಣಿಯೆಂದು ನೀನು ನಂಬುವುದಾದರ, ಇದೋ ಕೈಮುಗಿದು ಯಾಚಿಸುವೆನು ನನ್ನ ಮಾತನ್ನು ನಡೆಸಿಕೊಡು! ಎಲೈ ಪ್ರಿಯನೆ! ಈ ಕೋಪವನ್ನು ಬಿಟ್ಟು ನನ್ನಲ್ಲಿ ಪ್ರಸನ್ನನಾಗು! ಪಥ್ಯವಾದ ನನ್ನ ಮಾತನ್ನು ಕೇಳು! ಕೋಪವನ್ನೇ ಅನುಸರಿಸಬೇಡ! ಇಂದ್ರನಿಗೆಣೆಯಾದ ದಿವ್ಯತೇಜಸ್ಸುಳ್ಳ ಆ ಕೋಸಲರಾಜಪುತ್ರನೊಡನೆ ಯುದ್ಧಕ್ಕ ನಿಲ್ಲುವುದು ಎಂದಿಗೂ ನಿನಗೆ ತಕ್ಕುದಲ್ಲ" ಎಂದಳು ಹೀಗೆ ತಾರೆಯು ವಾಲಿಯನ್ನು ಕುರಿತು, ಅನೇಕವಿಧವಲ್ಲಿ ಹಿತವಾಗಿಯೂ ಪಥ್ಯವಾಗಿಯೂ ಇರುವ ಬುದ್ಧಿವಾದಗಳನ್ನು ಹೇಳಿದರೂ, ಮೃತ್ಯುವಶನಾಗಿ ವಿನಾಶಕಾಲದಲ್ಲಿದ್ದ ಆಕೆಯ ಮಾತೊಂದೂ ಆವಾಲಿಗೆ ಕಿವಿಗೇರಲಿಲ್ಲ ಇಲ್ಲಿಗೆ ಹದಿನೈದನೆಯಸರ್ಗವು

ವಾಲಿಯು ತಾರೆಯನ್ನು ಹೆದರಿಸಿ ಕಳುಹಿಸಿ, ತಾನು ಯುದ್ಧಕ್ಕೆ ಹೊರಟುದು ವಾಲಿಸುಗ್ರೀವರ ಯುದ್ಧವು ಕೊನೆಗೆ 'ವಾಲಿಯಬಲವು ಹೆಚ್ಚಿದುದನ್ನು ನೋಡಿ ರಾಮನು ಅವನ ಎದೆಗೆ ಬಾಣವನ್ನು ಬಿಟ್ಟುದು

ಹೀಗೆ ತನಗೆ ಹಿತವಾದವನ್ನು ಹೇಳುತಿದ್ದ ಚಂದ್ರಮುಖಿಯಾದ ಆ ತಾರೆಯನ್ನು ವಾಲಿಯು ಹೆದರಿಸಿ, ಅವಳನ್ನು ಕುರಿತು "ನನಗೆ ಒಡಹುಟ್ಟಿದವನಾಗಿ,ನನಗಿಂತಲೂ ಕಿರಿಯವನಾದ ಆ ಸುಗ್ರೀವನು,ಇಷ್ಟುಹೆಮ್ಮೆಯಿಂದ ಗರ್ಜಿಸಿ ನನ್ನನ್ನು ಯುದ್ಧಕ್ಕೆ ಕರೆಯುತ್ತಿರುವಾಗ,ನಾನು ಸುಮ್ಮನಿರಬೇಕೆ? ಅದರಲ್ಲಿಯೂ ಅವನು ನನ್ನ ಮೇಲೆ ಪ್ರಬಲವಾದ ವೈರವನ್ನೂ ಬೆಳೆಸಿರುವನು

ನಾನು ಇವೆಲ್ಲವನ್ನೂ ಹೇಗೆ ಮನ್ನಿಸಿಬಿಡಲಿ! ಎಲೆ! ಭೀರು! ಇದುವರೆಗೆ ಯಾವ ಯುದ್ಧದಲ್ಲಿಯೂ ಹಿಂತಿರುಗದ, ಯಾರಿಂದಲೂ ಪರಾಜಿತರಾಗದ ಶೂರರಿಗೆ, ಇಂತಹ ತಿರಸ್ಕಾರಗಳನ್ನು ಕೇಳುವುದು ಮರಣಕ್ಕಿಂತಲೂ ಹೆಚ್ಚು ಸಂಕಟವನ್ನುಂಟುಮಾಡುವುದು ನನ್ನಿಂದ ಮೃಮುರಿಸಿಕೊಳ್ಳುವುದಕ್ಕಾಗಿಯೇ ಹೀಗೆ ನನ್ನನ್ನು ಯುದ್ಧಕ್ಕೆ ಕರೆಯುತ್ತಿರುವ ಆತನ ಈ ಕೂಬ್ಜನ್ನೂ, ಅವನ ಈಗರ್ಜನವನ್ನೂ, ನಾನು ಎಂದಿಗೂ ಸಹಿಸಲಾರೆನು ರಾಮನಿಂದ ನನಗೆ ಅಪಾಯವುಂಟಾಗುವುದೆಂದು ನೀನು ಸ್ವಲ್ಪವೂ ಚಿಂತಿಸಬೇಕಾದುದಿಲ್ಲ ಅವನು ಧರ್ಮಜ್ಞನೆಂದೂ, ಕೃತಜ್ಞನೆಂದೂ ನೀನೇ ಹೇಳಿದೆಯಲ್ಲವೆ? ಇಷ್ಟು ಗುಣಾಢ್ಯನಾದವನು, ಅವನ ವಿಷಯದಲ್ಲಿ ನಿರಪರಾಧಿಯಾದ ನನ್ನನ್ನು ನಿಷ್ಕಾರಣವಾಗಿ ಕೊಲ್ಲುವಷ್ಟು ಪಾಪಕಾರ್ಯವನ್ನು ಮಾಡುವನೆ ? ಎಲೆಪ್ರಿಯೆ! ಹೋಗು! ಈ ಸ್ತ್ರೀಯರೆಲ್ಲರನ್ನೂ ಹಿಂತಿರುಗಿಸಿಕೊಂಡು ನೀನೂ ಅಂತಃಪುರಕ್ಕೆ ನಡೆ? ಇದೇನು ? ನಾನು ಎಷ್ಟು ಹೇಳಿದರೂ ಕೇಳದೆ ಹಿಂಬಾಲಿಸಿ ಬರುತ್ತಿರುವೆ ? ಎಲೆ ತಾರೆ! ನೀನು ಪತಿಯಾದ ನನ್ನಲ್ಲಿ ತೋರಿಸಬೇಕಾದಷ್ಟು ಪ್ರೀತಿಯನ್ನು ತೋರಿಸಿದುದಾಯಿತಲ್ಲವೆ! ನಿನ್ನ ಭಕ್ತಿಯನ್ನೂ ತೋರಿಸಿದೆ? ಇನ್ನು ನೀನು ಹೋಗು ! ನಾನು ಸುಗ್ರೀವನೊಡನೆ ಯುದ್ಧಮಾಡಿಬರುವೆನು. ನಿನ್ನ ಕಳವಳವನ್ನು ಬಿಡು ! ನಾನು ಅವನ ಕೊಬ್ಬನ್ನು ನಾತ್ರ! ಮುರಿದುಬರುವೆನೇ ಹೊರತು ಅತನನ್ನು ಕೊಂದುಬಿಡುವುದಿಲ್ಲ ನಾನು ಯುದ್ಧದಲ್ಲಿ ನಿಂತಾಗಲೂ ನನ್ನ ಮನಸ್ಸನ್ನು ತಡೆದಿಡಬಲ್ಲೆನಾದುದರಿಂದ, ಕಾಲೋಚಿತವಾಗಿ ನಡೆಸಿಬರುವೆನು ಮರಗಳಿಂದಲೂ,ಮುಷ್ಟಿಪ್ರಹಾರಗಳಿಂದಲೂ ಆತನನ್ನು ಹೊಡೆದು, ಮುಂದೆ ನಿಲ್ಲದಂತೆ ಓಡಿಸಿಬಿಡುವೆನು ಹೇಗಿದ್ದರೂ ಅವನು ನನ್ನ ಪೆಟ್ಟುಗಳಿಗೆ ಸಿಕ್ಕಿ ಬಹಳಹೊತ್ತಿನವರೆಗೆ ನಿಲ್ಲಲಾರನು ಎಲೆ ತಾರೆ! ನೀನು ದಾನಮಾನಾದಿಗಳಿಂದ ಅವನನ್ನು ಸತ್ಕರಿಸಿ ವಶದಲ್ಲಿರಿಸಿಕೊಳ್ಳಬೇಕೆಂದು ಹೇಳಿದೆಯಲ್ಲವೆ? ದುರಾತ್ಮನಾದ ಆತನು ನನ್ನ ಮೇಲ್ಮೈಯನ್ನಾಗಲಿ, ದರ್ಪವನ್ನಾಗಲಿ, ಪ್ರಯತ್ನವನ್ನಾಗಲಿ ಸ್ವಲ್ಪವೂ ಸಹಿಸುವವನಲ್ಲ ನೀನಂತೂ ನಿನಗೆ ತಿಳಿದಮಟ್ಟಿಗೆ ನನಗೆ ಹಿತವಾದವನ್ನು ಹೇಳಿ, ನಿನ್ನ ಬುದ್ಧಿಯಿಂದ ವಿಶೇಷಸಹಾಯವನ್ನು ಮಾಡಿ

ದೆ ಇದಕ್ಕಾಗಿ ನಾನು ಬಹಳವಾಗಿ ಸಂತೋಷಿಸಿರುವೆನು ನೀನು ನನ್ನಲ್ಲಿ ತೋರಿಸಬೇಕಾದ ಪ್ರೀತಿಯನ್ನೂ ತೋರಿಸಿದುದಾಯಿತಲ್ಲವೆ? ಇನ್ನು ನೀನು ಹೋಗು! ನನ್ನ ಜೀವಪರ್ಯಂತ ಆಣೆಯಿಟ್ಟು ಹೇಳುವನು ಬೇಗನೆ ಹೊರಡು! ನಾನು ಯುದ್ಧದಲ್ಲಿ ಜಯಿಸಿಬರುವಂತೆ ಶ್ರೇಯಃಪ್ರಾರ್ಥನೆಯೆನ್ನು ಮಾತ್ರಮಾಡುತ್ತಿರು ನಾನು ಸುಗ್ರೀವನನ್ನು ಪರಾಜಿತನನ್ನಾಗಿ ಮಾಡಿಬರುವನೀಹೊರತು ಕೊಲ್ಲುವನಂಬೆಸಬೇಡ!"ಎಂದನು ಇದನ್ನು ಕೇಳಿ ಪ್ರಿಯಭಾಷಿಣಿಯಾದ ತಾರೆಯು, ಕೇವಲವಾಕ್ಷೈಣ್ಯಬುದ್ಧಿಯುಳ್ಳವಳಾದುದರಿಂದ, ಪತಿಯ ಮಾತಿಗೆ ಪ್ರತ್ಯುತ್ತರವನ್ನು ಹೇಳಲಾರದೆ,ಆ ವಾಲಿಯನ್ನು ಪ್ರೀತಿಯಿಂದಾಲಿಂಗಿಸಿಕೊಂಡು, ಮನಸ್ಸಿನಲ್ಲಿ ವಿಶೇಷದುಃಖವಿದ್ದರೂ ಅಮಂಗಳಭಯದಿಂದ ಮೆಲ್ಲಗೆ ರೋದಿಸುತ್ತ,ಆ ವಾಲಿಗೆ ಪ್ರದಕ್ಷಿಣವನ್ನು ಮಾಡಿದಳು ಮತ್ತು ಆ ತನಿಗೆ ಪುರಾಣಮಂತ್ರಗಳಿಂದ ಸ್ವಸ್ತ್ಯಯನವನ್ನೂ ಮಾಡಿ,ದುಃಖದಿಂದಮ್ಮತಿಳಿಯದೆ ಸಂಕಟಪಡುತ್ತ, ಇತರಸ್ತ್ರೀಯರನ್ನೂ ಕರೆದುಕೊಂಡು ಅಂತಃಪುರಕ್ಕೆ ಹೋದಳು ಇತ್ತಲಾಗಿ ವಾಲಿಯು ಆ ಸ್ತ್ರೀಯರು ತನ್ನ ಮುಂದೆ ನಿಂತಿರುವವರಗೂ, ಅವರು ಭಯಪಡುವರೆಂದು ತನ್ನ ಕೋಪವನ್ನು ತನ್ನಲ್ಲಿಯೇ ಅಡಗಿಸಿಕೊಂಡಿದ್ದು,ಅವರು ಹೋದಮೇಲ ವಿಪರೀತವಿರದ ಕೋಪವನ್ನು ತಂದುಕೊಂಡು, ಮಹಾಸರ್ಪದಂತೆ ನಿಟ್ಟುಸಿರನ್ನು ಬಿಡುತ್ತ, ಯುದ್ಧೋದ್ಯುಕ್ತನಾಗಿ ಹೊರಟುಬಂದನು ಹೀಗೆ ಕೋಪದಿಂದ ಹೊರಟುಬಂದ ಮಹಾತೇಜಸ್ವಿಯಾದ ವಾಲಿಯು, ಸುಗ್ರೀವನೆಲ್ಲಿರುವನೆಂದು ನಾಲ್ಕುದಿಕ್ಕುಗಳಿಗೂ ದೃಷ್ಟಿಯಿಟ್ಟು ನೋಡಿದನು ಮುಂದೆ ದಟ್ಟಿಯನ್ನು ಬಿಗಿದು ಯುದ್ಧಸನ್ನದ್ಧನಾಗಿ, ಜ್ವಲಿಸುವ ಅಗ್ನಿಯಂತೆ ಪಿಂಗಳದೇಹವುಳ್ಳವನಾಗಿ ನಿಂತಿರುವ ಸುಗ್ರೀವನನ್ನು ಕಂಡನು ಯುದ್ಧಸನ್ನದ್ಧನಾಗಿ ನಿಂತಿರುವ ಆ ಸುಗ್ರೀವನನ್ನು ಕಂಡೊಡನೆ ವಾಲಿಗೆ ಮತ್ತಷ್ಟು ಕೋಪವು ಹೆಚ್ಚಿತು ತಾನೂ ನಡುದಟ್ಟಿಯನ್ನೆಳೆದು ಕಟ್ಟಿ, ಕೋಪದಿಂದ ಮುಷ್ಟಿಯನ್ನೆತ್ತಿಕೊಂಡು ಯುದ್ಧೋತ್ಸಾಹದಿಂದ ಸುಗ್ರೀವನಿಗಿದಿರಾಗಿಯೇ ಬಂದುಬಿಟ್ಟನು ಹಾಗೆಯೇ ಸುಗ್ರೀವನೂ ದೃಢವಾದ ಮುಷ್ಟಿಯನ್ನು ಹಿಡಿದು, ಅವನಿಗಿಂತಲೂ ಹೆಚ್ಚುಕೋಪವನ್ನು ತೋರಿಸುತ್ತ, ಸುವರ್ಣಮಾಲಿಕೆಯಿಂದಲಂಕೃತನಾದ ಆವಾಲಿ

ಗಿದಿರಾಗಿ ಬಂದನು ಸುಗ್ರೀವನು ಸ್ವಲ್ಪವೂ ಭಯವಿಲ್ಲದೆ ತನಗಿದಿರಾಗಿ ಮಹಾವೇಗದಿಂದ ಯುದ್ಧಕ್ಕೆ ಬರುವುದನ್ನು ನೋಡಿ,ವಾಲಿಯ ಕಣ್ಣುಗಳೆರಡೂ ಕೋಪದಿಂದ ಕೆಂಪಾದುವು ಆಗ ವಾಲಿಯು ಸುಗ್ರೀವನನ್ನು ಕುರಿತು ,,ಎಲೆ ಸುಗ್ರೀವಾ'ಇದೋ' ಈ ಮುಷ್ಟಿಯನ್ನು ನೋಡು ಕ್ರಮವಾಗಿ ಬೆರಳುಗಳೆಲ್ಲವನ್ನೂ ಸೇರಿಸಿ ಹಿಡಿದ ಈಬಲವಾದ ಮುಷ್ಟಿಯೊಂದೇ ನಿನ್ನ ಪ್ರಾಣಗಳನ್ನು ಸೆಳೆದುಬಿಡುವುದೆಂದುತಿಳಿ" ಎಂದನು ಇದನ್ನುಕೇಳಿ ಸುಗ್ರೀವನಿಗೂ ಕೋಪವುಂಟಾಯಿತು ಆಗ ಇವನೂ ಆವಾಲಿಯನ್ನು ಕುರಿತು ,,ಇದೋ ! ಈ ನನ್ನ ಮುಷ್ಟಿಯ ಬಲವನ್ನು ನೀನು ನೋಡಲಿಲ್ಲವ? ಇದು ನಿನ್ನ ಹಣೆಗೆ ಸೋಕಿದೊಡನೆಯೇ ನಿನ್ನ ಪ್ರಾಣವನ್ನು ಹೀರಿಬಿಡುವುದೆಂದುತಿಳಿ?"ಎಂದನು ಅವರು ಹೀಗೆ ಪರಸ್ಪರವೀರವಾದವನ್ನು ಮಾಡುತ್ತಿರುವಷ್ಟರಲ್ಲಿಯೇ ವಾಲಿಯು ಮುಂದೆಬಂದು,ಆ ಸುಗ್ರೀವನನ್ನು,ತನ್ನ ಮುಷ್ಟಿಯಿಂದಹೊಡೆದನು ಆಮುಷ್ಟಿಘಾತದಿಂದ ಸುಗ್ರೀವನ ದೇಹವೆಲ್ಲವೂ ಜರ್ಝರಿತವಾಯಿತು ಅಂಗಾಂಗಗಳಲ್ಲಿಯೂ ರಕ್ತವು ಸೋರುವುದಕ್ಕಾರಂಭಿಸಿತು ಗಿರಿನದಿಗಳನ್ನು ಸುರಿಸುತ್ತಿರುವ ಬಟ್ಟದಂತೆ ಕಾಣುತ್ತಿದ್ದನು ಇಷ್ಟಾದರೂ ಎದಗುಂದದ ಸುಗ್ರೀವನು ವೇಗದಿಂದ ವಾಲಿಯನ್ನು ದೂರಿಸಿ, ಸಮೀಪದಲ್ಲಿದ್ದ ಒಂದು ಸಾಲವೃಕ್ಷವನ್ನು ಕಿತ್ತುತಂದು, ಇಂದ್ರನು ತನ್ನವಜ್ರಾಯುಧವನ್ನು ಪರ್ವತದಮೇಲೆ ಬಿಡುವಂತ ವಾಲಿಯಮೇಲೆ ಬೀಸಿದನು ಈ ಸಾಲವೃಕ್ಷವು ಮೇಲೆ ಬಿದ್ದೊಡನೆ ವಾಲಿಯ ಅಂಗಾಂಗಗಳೆಲ್ಲವೂ ಸಡಿಲಿದುವು ಹೆಚ್ಚುಭಾರವನ್ನು ಹೊರಿಸಿದ ಹಡಗು, ಸಮುದ್ರದಲ್ಲಿ ಮುಳುಗಿ ಹೋಗುವಹಾಗೆ, ವಾಲಿಯು ಆ ವೃಕ್ಷದಭಾರವನ್ನು ತಡೆಯಲಾರದೆ ಕುಗ್ಗಿದನು, ಹಾಗಿದ್ದರೂ ವಾಲಿಯು ಧೈರ್ಯಗಿಡದೆಸಿಂತನು ಇಬ್ಬರೂ ಪರಸ್ಪರತಾಡನೆಗಳನ್ನು ಲಕ್ಷ್ಯಮಾಡದೆ, ಭಯಂಕರಗಳಾದ ತಮ್ಮ ಬಲಪರಾಕ್ರಮಗಳ ಚಾತುರ್ಯವನ್ನು ತೋರಿಸುತ್ತ, ಗರುಡನಂತೆ ಮಹಾವೇಗವುಳ್ಳವರಾಗಿ, ಭಯಂಕರಸ್ವರೂಪವುಳ್ಳವರಾಗಿ, ಆಕಾಶದಲ್ಲಿ ಚಂದ್ರಸೂರ್ಯರಿಬ್ಬರೂ ಹೋರಾಡುವಂತೆ ಮಹೋತ್ಸಾಹದಿಂದುಬ್ಬುತಿದ್ದರು ಎಂತಹ ಶತ್ರುಗಳನ್ನಾದರೂ ನಿಗ್ರಹಿಸಬಲ್ಲ ಆ ವೀರರಿಬ್ಬರೂ, ಒಬ್ಬರನ್ನೊಬ್ಬರು ಕೆಡಹುವುದಕ್ಕಾಗಿ ಹೊಂಚು

ಹಾಕುತ್ತಿದ್ದರು ಹೀಗೆ ದ್ವಂದ್ವಯುದ್ಧವನ್ನು ಮಾಡುತ್ತಿರುವಾಗಲೇ ಮಹಾವೀರ್ಯವುಳ್ಳ ವಾಲಿಯ ಬಲವು ಮೇಲಾಯಿತು ಸೂರ್ಯಪುತ್ರನಾದ ಸುಗ್ರೀವನ ಬಲವು ಕ್ರಮಕ್ರಮವಾಗಿ ತಗ್ಗುತಿತ್ತು ಎಷ್ಟೇ ಬಲಹೀನನಾದರೂ ಸುಗ್ರೀವನು ತನ್ನ ಉತ್ಸಾಹವನ್ನೂ, ಕೋಪವನ್ನೂ ಬಿಡದೆ, ಸಾಧ್ಯವಾದ ಮಟ್ಟಿಗೆ ತನ್ನ ಹಸ್ತಲಾಘವಗಳನ್ನು ವಾಲಿಯಮೇಲೆ ತೋರಿಸುತಿದ್ದನು ವಾಲಿಸುಗ್ರೀವರಿಬ್ಬರೂ ಕೈಗೆ ಸಿಕ್ಕದ ಮರಗಳನ್ನುಕಿತ್ತು ತಂದು, ಒಬ್ಬರಮೇಲೊಬ್ಬರು ಬೀಸುತಿದ್ದರು ವಜ್ರಸಮಾನಗಳಾದ ಉಗುರುಗಳಿಂದ ಒಬ್ಬರನ್ನೊಬ್ಬರು ಪರಚುತಿದ್ದರು ಮುಷ್ಟಿಗಳಿಂದಲೂ, ಮೊಳಕಾಲುಗಳಿಂದಲೂ, ಕಾಲುಗಳಿಂದಲೂ, ತೋಳುಗಳಿಂದಲೂ, ಎಡೆಬಿಡದೆ ಒಬ್ಬರನ್ನೊಬ್ಬರು ಹೊಡೆಯುತ್ತಿದ್ದರು ಇವರುಬ್ಬರಿಗೂ ನಡೆದ ಯುದ್ಧವು ಇಂದ್ರವೃತ್ರರಿಗೆ ನಡೆದ ಮಹಾಯುದ್ಧದಂತೆ ಅತಿಘೋರವಾಯಿತು ಇಬ್ಬರ ದೇಹದಲ್ಲಿಯೂ ರಕ್ತವು ಸುರಿಯುತಿತ್ತು ಇಷ್ಟಾದರೂ ವನಚಾರಿಗಳಾದ ಆ ವಾನರರಿಬ್ಬರೂ ಧೈರ್ಯಗೆಡದೆ, ಗರ್ಜಿಸುವ ಮಹಾಮೇಘಗಳಂತ ಸಿಹ್ಮನಾದದಿಂದ ಒಬ್ಬರನ್ನೊಬ್ಬರು ಹೆದರಿಸುತ್ತ, ಯುದ್ಧ ಮಾಡುತಿದ್ದರು ಅತ್ತಲಾಗಿ ಮರದ ಮರೆಯಲ್ಲಿದ್ದ ರಾಮನು ಇದೆಲ್ಲವನ್ನೂ ನೋಡುತ್ತಿದ್ದನು ಕ್ರಮಕ್ರಮವಾಗಿ ಸುಗ್ರೀವನು ಶಕ್ತಿಗುಂದಿ, ಭಯದಿಂದ ಬಾರಿಬಾರಿಗೂ ನಾಲ್ಕುದಿಕ್ಕುಗಳನ್ನು ನೋಡುತ್ತಿರುವುದನ್ನು ಕಂಡನು ಹೀಗೆ ದುಃಖಿತನಾದ ಸುಗ್ರೀವನನ್ನು ನೋಡಿದೊಡನೆ ಮಹಾತೇಜಸ್ವಿಯಾದ ರಾಮನಿಗೆ ಮರುಕವು ಹುಟ್ಟಿತು ವಾಲಿಯನ್ನು ಕೊಲ್ಲುವುದಕ್ಕೆ ತಕ್ಕ ಬಾಣವಾವುದೆಂದು ಹುಡುಕಿ, ಉತ್ತಮವಾದ ಬಾಣವೊಂದನ್ನು ತಗೆದುಕೊಂಡನು ಸರ್ಪದಂತ ಘೋರವಾದ ಆ ಬಾಣವನ್ನು ಧನುಸ್ಸಿನಲ್ಲಿ ಸಂಧಾನಮಾಡಿ, ಯಮನು ಕಾಲಚಕ್ರವನ್ನೆಳೆಯುವಂತೆ ಆ ಧನುಸ್ಸನ್ನು ಆ ಕರ್ಣಾಂತವಾಗಿ ಎಳೆದನು ರಾಮನ ಹಸ್ತಸ್ಪರ್ಶಮಾತ್ರದಿಂದಲೇ ಆ ಬಿಲ್ಲಿನ ನಾಣಿನಲ್ಲಿ ಹೊರಟ ಮಹಾಧ್ವನಿಯನ್ನು ಕೇಳಿ, ಆ ವನದಲ್ಲಿದ್ದ ಪಕ್ಷಿಗಳೂ, ಮೃಗಗಳೂ, ಪ್ರಳಯಭಯವನ್ನು ಹೊಂದಿದಂತೆ ದಿಕ್ಕುಗೆಟ್ಟು ಓಡಿದುವು ಈಬಾಣವನ್ನು ರಾಮನು ತನ್ನಬಿಲ್ಲಿನಿಂದ ಪ್ರಯೋಗಿಸಿದೊಡನೆ

ಅದು ಸಿಡಿಲಿನಂತೆ ಧ್ವನಿಮಾಡುತ್ತ, ಅಗ್ನಿಯಂತೆ ಬಾಜ್ವಲ್ಯಮಾನವಾಗಿ ಬಂದು ವಾಲಿಯ ಎದೆಯಲ್ಲಿ ತಾಕಿತು ವಾಲಿಯು ವೀರ್ಯದಿಂದ ಕೊಬ್ಬಿ ಮಹಾತೇಜಸ್ವಿಯೆನಿಸಿಕೊಂಡಿದ್ದರೂ, * ಆ ಒಂದುಬಾಣದ ವೇಗದಿಂದಲೇ ಹತನಾಗಿ, ಶಕ್ತಿಗುಂದಿ ನೆಲದಮೇಲೆ ಬಿದ್ದನು, ಆಶ್ವಯುಜಮಾಸದ ಹುಣ್ಣಿಮೆಯಲ್ಲಿ ಉತ್ಸವಾನಂತರದಲ್ಲಿ ಕೆಳಗೆ ಕಡಹಲ್ಪಡುವ ಇಂದ್ರಧ್ವಜದಂತೆ ನೆಲಕ್ಕುರುಳಿದನು ಪುರುಷಶ್ರೇಷ್ಠನಾದ ರಾಮನಾದರೋ ಹೀಗೆ ಕಾಲಮೃತ್ಯುವಿನಂತೆ ಅತಿಕ್ರೂರವಾಗಿಯೂ, ಚಿನ್ನಬೆಳ್ಳಿಗಳಿಂದಲಂಕರಿಸಲ್ಪಟ್ಟುದಾಗಿಯೂ, ಶತ್ರುಸಂಗ್ರಾಹಕವಾಗಿಯೂ, ಅಗ್ನಿಯಂತೆ ಜ್ವಲಿಸುವುದಾಗಿಯೂ ಇರುವ ತನ್ನಬಾಣವನ್ನು, ಕಾಲರುದ್ರನು ಮುಖದಿಂದ ಬಂಕಿಯನ್ನು ಕಕ್ಕುವಂತೆ ತನ್ನಬಿಲ್ಲಿನಿಂದ ಪ್ರಯೋಗಿಸಲು, ಇಂದ್ರಸುತನಾದ ವಾಲಿಯು ಆದರಿಂದ ಜರ್ಝರಿತವಾದ ದೇಹವುಳ್ಳವನಾದನು ಅವನ ದೇಹದ ಸುತ್ತಲೂ ರಕ್ತಪ್ರವಾಹಗಳು ಸೋರುತಿದ್ದುವು ಕಾಡುಗಿಚ್ಚಿನ ಜ್ವಾಲೆಯ ನಡುವೆ ಸಿಕ್ಕಿಬಿದ್ದ ಪುಷ್ಪಿತವಾದ ಅಶೋಕವೃಕ್ಷದಂತೆ ಕಾಣುತ್ತ, ಉತ್ಸವಾಂತದಲ್ಲಿ ಹಗ್ಗವನ್ನು ಸಡಿಲಿಸಿದ ಇಂದ್ರಧ್ವಜವು ಕಳಗೆಬಿಳುವಂತೆ ನೆಲದಮೇಲೆ ಬಿದ್ದನು ಇಲ್ಲಿಗೆ ಹದಿನಾರನೆಯ ಸರ್ಗವು

ವಾಲಿಯು ರಾಮನನ್ನು ನಿಂದಿಸಿದುದು

ರಾಜಪಂಡಿತತನಾಗಿದ್ದರೂ ವಾಲಿಯು ಹೀಗೆ ರಾಮಬಾಣದಿಂದ ಹೊಡೆಯೆಲ್ಪಟ್ಟು ಬಡಕಡಿದ ಮರದಂತೆ ನೆಲದಮೇಲೆ ಬಿದ್ದೊಡನೆ, ಅವನ ಅಂಗಾಂಗಳೆಲ್ಲವೂ ನಿಶ್ಚೇಷ್ಟವಾದುವು ಅವನ ದೇಹದ ಆಭರಣಗಳೆಲ್ಲವೂ ಅಗ್ನಿ

---

* ಇಲ್ಲಿ ವಾಲಿಯು ಒಂದೇಬಾಣದಿಂದ ಸಂಹೃತನಾದಂತೆ ಹೇಳಲ್ಪಟ್ಟಿರುವುದು ಮುಂದೆ ತಾರೆಯು "ರಾಮೇಣ ಪ್ರಹಿತೈ ರೌದ್ರೈರ್ಮಾರ್ಗಣೈ" ಎಂದು ಅನೇಕಬಾಣಗಳಿಂದ ಸಂಹೃತನಾದಂತೆ ಹೇಳುವಳು ಇದು ಪರಸ್ಪರವಿರೋಧದಂತೆ ತೋರಬಹುದು ಆದರೆ, ಮುಂದೆ ತಾರೆಯು ಒಂದೇ ಬಾಣದಿಂದ ವಾಲಿಯು ಸಂಹೃತನಾದುದನ್ನು ಚಾರರಿಂದ ಕೇಳಿದ್ದರೂ, ಇಲ್ಲಿ ಬಹುಬಾಣಗಳೆಂದು ಹೇಳಿದುದು ರಾಜಪ್ರಭಾವಶಕ್ತಿಯಿಂದಲ್ಲದೆ ಬೇರೆಯಲ್ಲವೆಂದು ಗ್ರಾಹ್ಯವು.

ಯಂತೆ ಜ್ವಲಿಸುತ್ತಿರಲು, ಹಗ್ಗವನ್ನು ಸಡಿಲಿಸಿದ ಇಂದ್ರಧ್ವಜದಂತೆ ಕೆಳಗೆ ಬಿದ್ದಿದ್ದನು ವಾನರರೆಲ್ಲರಿಗೂ ಅಧಿರಾಜನಾದ ವಾಲಿಯು,ಹೀಗೆ ಬಾಣದಿಂದ ಹತನಾಗಿ ಬಿದ್ದಿರಲು,ಆ ವನಭೂಮಿಯೆಲ್ಲವೂ ಚಂದ್ರನಿಲ್ಲದ ಆಕಾಶಪ್ರದೇಶದಂತೆ ಕೇವಲಕಾಂತಿಹೀನವಾಗಿ ಕಾಣುತಿತ್ತು ಮಹಾತ್ಮನಾದ ಆ ವಾಲಿಯು ಹೀಗೆ ನಿಶ್ಚೇಷ್ಟನಾಗಿ ನೆಲದಲ್ಲಿ ಬಿದ್ದಿದ್ದರೂ,ಅವನನುಖದ ಕಳೆಯಾಗಲಿ, ಅವನ ಪ್ರಾಣಗಳಾಗಲಿ, ಅವನ ತೇಜಸ್ಸಾಗಲಿ, ಅವನ ಪರಾಕ್ರಮವಾಗಲಿ ಅವನ ದೇಹವನ್ನು ಬಿಟ್ಟುಹೋಗಲಿಲ್ಲ ಹಿಂದೆ ಇಂದ್ರನಿಂದ ಅನುಗ್ರಹಿಸಿ ಕೊಡಲ್ಪಟ್ಟ ವಜ್ರಾಲಂಕೃತವಾದ ಕಾಂಚನಮಾಲಿಕೆಯು ಅವನ ಪ್ರಾಣಗಳನ್ನೂ, ತೇಜಸ್ಸನ್ನೂ, ಕಾಂತಿಯನ್ನೂ,ಅವನ ದೇಹದಿಂದ ಬಿಟ್ಟು ಹೋಗದಂತೆ ನಿಲಿಸಿತು ಸರ್ವೋತ್ತಮವಾದ ಆ ಕಾಂಚನಮಾಲೆಯಿಂದಲಂಕೃತನಾಗಿದ್ದ ವಾಲಿಯು, ಆಗ ಸುತ್ತಲೂ ಅಂಚಿನಲ್ಲಿ ಸಂಧ್ಯಾರಾಗದಿಂದಾವರಿಸಲ್ಪಟ್ಟ ಮೇಘದಂತೆ ಶೋಭಿಸುತಿದ್ದನು ವಾಲಿಯು ಹೀಗೆ ಬಾಣದಿಂದ ಹತನಾಗಿ ನೆಲದಮೇಲೆ ಬಿದ್ದಿದ್ದರೂ, ಸ್ವಾಭಾವಿಕವಾದ ದಿವ್ಯತೇಜಸ್ಸಿನಿಂದ ಕೂಡಿದ ಅವನ ದೇಹವೂ, ಆ ಕಾಂಚನಮಾಲೆಯೂ,ಮರ್ಮದಲ್ಲಿ ನಾಟಿದ ಅಮೋಘವಾದ ರಾಮಬಾಣವೂ, ಇವು ಮೂರೂ ಬೇರೆಬೇರೆಯಾಗಿ ಪ್ರಕಾಶಿಸುತ್ತಿರುವುದನ್ನು ನೋಡಿದರೆ, ಆ ವಾಲಿಯ ತೇಜಸ್ಸೇ ಆ ಮೂರುವಿಧದಿಂದ ರಚಿಸಲ್ಪಟ್ಟಂತೆ ತೋರುತಿತ್ತು ಯುದ್ಧದಲ್ಲಿ ಅಸ್ತ್ರಹತನಾದ ವಾಲಿಗೆ ವೀರಸ್ವರ್ಗವು ಸ್ವತಸ್ಸಿದ್ಧವಾಗಿದ್ದರೂ, ಶ್ರೀರಾಮನ ದಿವ್ಯಧನುಸ್ಸಿನಿಂದ ಹೊರಟುಬಂದ ಈ ಮಹಾಸ್ತ್ರವು, ಅವನ ಮೈಗೆ ತಾಗಿದುದರಿಂದ, ಪುನರಾವೃತ್ತಿಯಿಲ್ಲದ ಸರ್ವೋತ್ತಮವಾದ ಪರಗತಿಯೇ ಲಭಿಸುವಂತಾಯಿತು ಹೀಗೆ ವಾಲಿಯು ಉರಿಯಡಗಿದ ಅಗ್ನಿಯಂತೆ ನೆಲದಲ್ಲಿ ಬಿದ್ದು,ತನ್ನಮೇಲೆ ಬಿದ್ದ ಆಬಾಣದ ವೇಗವನ್ನ ಭಿನಂದಿಸುತ್ತ,ಹೀಗೆ ಅದ್ಭುತಬಾಣವನ್ನು ಪ್ರಯೋಗಿಸಿದ ವೀರನಾವನೆಂಬುದನ್ನು ತಿಳಿಯುವುದಕ್ಕಾಗಿ ಸುತ್ತಲೂ ಕಣ್ಣಿಟ್ಟು ನೋಡುತಿದ್ದನು ವಾಲಿಯಾದರೋ ಮಹೇಂದ್ರನಂತೆ ಇತರರಿಂದ ಜಯಿಸಕೂಡದ ಪರಾಕ್ರಮವುಳ್ಳವನು ಮಹೇಂದ್ರನಂತೆ ಇತರರಿಗೆ:ಸಹಿಸಲಸಾಧ್ಯವಾದಮಹಾವೀರ್ಯವುಳ್ಳವನು ಸಾ

ಕ್ಷಾತ್ರಹೇಂದ್ರಪುತ್ರನು ಮಹೇಂದ್ರದತ್ತವಾದ ಕಾಂಚನಮಾಲಿಕೆಯನ್ನೂ ಧರಿಸಿರುವನು ಸಿಂಹದಂತೆ ವಿಸ್ತಾರವಾದ ಎದೆಕಟ್ಟುಳ್ಳವನು ಉದ್ದವಾದ ತೋಳುಗಳುಳ್ಳವನು ಅವನ ಮುಖದಲ್ಲಿ ದಿವ್ಯತೇಜಸ್ಸು ಉಕ್ಕುತ್ತಿರುವುದು ಪಿಂಗಳವರ್ಣವಾದ ಕಣ್ಣುಗಳುಳ್ಳವನು ಹೀಗೆ ಮಹಾದ್ಭುತಲಕ್ಷಣಗಳುಳ್ಳವನಾಗಿದ್ದರೂ, ತನ್ನ ಪುಣ್ಯಫಲವು ಮುಗಿದಮೇಲೆ ದೇವಲೋಕದಿಂದ ಕೆಳಗೆ ಬಿದ್ದ ಯಯಾತಿಯಂತೆಯೂ, ಪ್ರಳಯಕಾಲದಲ್ಲಿ ದೈವಪ್ರೇರಣೆಯಿಂದ ಭೂಮಿಗೆ ಬಿದ್ದ ಸೂರ್ಯನಂತೆಯೂ, ಶಸ್ತ್ರಹತನಾಗಿ ನೆಲದಲ್ಲಿ ಬಿದ್ದು, ಬಾಣಹತಿಯ ವೇದನೆಯಿಂದ ಮೆಲ್ಲಗೆ ದೃಷ್ಟಿಯನ್ನು ತಿರುಗಿಸಿ ನೋಡುತ್ತಿರಲು, ಅದನ್ನುಕಂಡು ರಾಮನು ಲಕ್ಷ್ಮಣಸಹಿತನಾಗಿ ಮುಂದೆ ಬಂದನು ಹೀಗೆ ಇವರಾಗಿ ಬರುತ್ತಿರುವ ರಾಮನನ್ನೂ, ಅವನ ಹಕ್ಕದಲ್ಲಿದ್ದ ಬಲಾಢ್ಯನಾದ ಲಕ್ಷ್ಮಣನನ್ನೂ ನೋಡಿ ವಾಲಿಯು ವಿನಯವಿಂದ ರಾಮನನ್ನುಕುರಿತು,*ಮರ್ಮವನ್ನು ಭೇದಿಸುವಂತೆ ಪರುಷವಾಗಿದ್ದರೂ, ಧರ್ಮಯುಕ್ತವಾಗಿರುವ ಮಾತಿನಿಂದ "ಎಲ್ಲೆ! ನೀನಾದರೋ ಮಹಾರಾಜಕುಮಾರನು ವಿಶೇಷನಾದ ಖ್ಯಾತಿಯನ್ನೂ ಹೊಂದಿದವನು ಶಾಸ್ತ್ರವಿಚಾರಗಳಲ್ಲಿ ಅಕ್ಷರಯುಳ್ಳವನು ಸತ್ಕುಲದಲ್ಲಿ ಹುಟ್ಟಿದವನು ಸತ್ವಗುಣಸಂಪನ್ನನು ಮಹಾತೇಜಸ್ವಿಯು ಅನೇಕವ್ರತಗಳನ್ನು ನಡೆಸಿದವನು ಎಷ್ಟಿದ್ದರೇನು?†ಈಗ ನಾನು ನಿನ್ನನ್ನು ಇದಿರಿಸದೆ,ಬೇರೊಬ್ಬನೊಡನೆ ಯುದ್ಧವನ್ನು

---

* ಇಲ್ಲಿ "ಅಬ್ರವೀತ್ಪರುಷಂ ವಾಕ್ಯಂ ಪ್ರಶ್ರಿತಂ ಧರ್ಮಸಂಹಿತಂ" ಎಂದು ಮೂಲವು ಹೊರಕ್ಕೆ ಪರುಷವಾಗಿ ಕಾಣುತಿದ್ದರೂ ವಾಲಿಯು ರಾಮನನ್ನು ಕುರಿತು ವಿನಯದಿಂದಲೂ,ಧರ್ಮದಿಂದಲೂ ಕೂಡಿದ ಮಾತುಗಳನ್ನೇ ಹೇಳುತಿದ್ದನೇ ಹೊರತು ನಿಂದಿಸಲಿಲ್ಲವೆಂದು ಗ್ರಹಿಸಬೇಕು. ನಿಂದಾವಾಕ್ಯಗಳಂತೆ ತೋರುವ ಕೆಲವುಮಾತುಗಳಿಗೆಮಾತ್ರ ಅನ್ವಯಭೇದದಿಂದಲೂ, ಅರ್ಥಭೇದದಿಂದಲೂ ಸ್ತುತಿರೂಪವಾದ ನಾಸ್ತವಾರ್ಥವು ಅಲ್ಲಲ್ಲಿ ವಿವರಿಸಲ್ಪಡುವುದು.

† ಇಲ್ಲಿ "ಪರಾಙ್ಮುಖವಧಂ ಕೃತ್ವಾಕೋನುಪ್ರಾಪ್ತಸ್ತ್ವಯಾಗುಣಃ। ಯುದಹಂ ಯುದ್ಧಸಂರಂಭಶ್ಯಶ್ರೇಣೋರಸಿ ತೋಷಿತಃ" ಎಂದು ಮೂಲವು ಇದರ ವಾಸ್ತವಾರ್ಥವೇನೆಂದರೆ, "ಆತ್ಮಪರಾಙ್ಮುಖನಾಗಿ ವಿಷಯಲೋಲನಾಗಿರುವ ನನ್ನನು, ಕೊಂ

ಮಾಡುತ್ತ, ಅದರ ಸಂಭ್ರಮದಲ್ಲಿರುವಾಗ, ನನ್ನ ಎದೆಗೆ ಗುರಿಯಿಟ್ಟು ಬಾಣವನ್ನು ಹೊಡೆದೆಯಲ್ಲಾ! ಹೀಗೆ ಪರಾಙ್ಮುಖನಾಗಿರುವವನನ್ನು ಕೊಂದುದರಿಂದ ನಿನಗೆ ಬಂದ ಲಾಭವೇನು? ಲೋಕದಲ್ಲಿ ಸಮಸ್ತಭೂತಗಳೂ, ನಿನ್ನನ್ನು ಕುರಿತು ''ರಾಮನು ಕಾರುಣ್ಯವನ್ನು ಬಲ್ಲವನೆಂದೂ, ಪ್ರಜೆಗಳ ಹಿತವನ್ನೇ ಕೋರತಕ್ಕವನೆಂದೂ, ಮರುಕವುಳ್ಳವನೆಂದೂ, ಕೋಪವನ್ನು ನಿಗ್ರಹಿಸಬಲ್ಲವನೆಂದೂ, ಯುಕ್ತಾಯುಕ್ತಗಳನ್ನರಿತವನೆಂದೂ, ದೃಢವ್ರತವುಳ್ಳವನ"ನೆಂದೂ ನಿನ್ನ ಯಶಸ್ಸನ್ನು ನಾನಾವಿಧವಾಗಿ ಕೊಂಡಾಡುತ್ತಿರುವುವು ಅದಲ್ಲದೆ' ಎಲೈ ರಾಜಕುಮಾರನೆ' ಲೋಕದಲ್ಲಿ, ಇಂದ್ರಿಯನಿಗ್ರಹ, ತಾಳ್ಮೆ, ಧರ್ಮಬುದ್ಧಿ, ಧೈರ್ಯ, ಸತ್ಯ, ಪರಾಕ್ರಮ, ಅಪರಾಧಿಗಳಲ್ಲಿ ದಂಡನೆ, ಇವೆಲ್ಲವೂ ರಾಜರಿಗಿರಬೇಕಾದ ಮುಖ್ಯಗುಣಗಳೆಂದು ನೀತಿಜ್ಞರು ಹೇಳಿರುವರು * ನಿನ್ನಲ್ಲಿಯೂ ಈ ಸದ್ಗುಣಗಳೆಲ್ಲವೂ ತುಂಬಿರುವುವೆಂದು ನಂಬಿದ್ದೆನು ಇದರಂತೆ ನಿನ್ನ ವಂಶೋನ್ನತಿಯನ್ನೂ ಪರ್ಯಾಲೋಚಿಸಿ ತಾರೆಯು ನನ್ನನ್ನು ಅನೇಕವಿಧವಲ್ಲಿ ತಡೆದರೂ ಕೇಳದೆ, ನಮ್ಮ ಅಂತಃಕಲಹವಲ್ಲಿ ನೀನು ಪ್ರವರ್ತಿಸಿ ನನಗೆ ಕೇಡುಮಾಡಲಾರೆಯೆಂಬ ನಂಬಿಕೆಯಿಂದಲೇ ಸುಗ್ರೀವನೊಡನೆ ಯುದ್ಧಕ್ಕೆ ನಿಂತೆನು ನಾನು ಮತ್ತೊ

ದುದರಿಂದ ನಿನಗೆ (ಕೋsನುಗುಣ) ತ್ರಿವರ್ಗಚೇಷ್ಟೆಯಾದ ಬಂದುಗುಣವುಂಟೆಂದು ಅಲ್ಲವೆ ಈಗ ನಿನ್ನಿಂದ ಹತನಾದ ನನಗೂ ದೋಷಪರಿಹಾರನಾಗಿ ಗುಣವುಂಟಾಯಿತೆಂದು ಭಾವವು ' ರಾಜಾತ್ವಶಾರ್ದ್ದ ವಾಪಸ್ಯ ತವ ವಾವ್ಯೋತಿ ಕಿಲ್ಬಿಷಂ" ಎಂದೂ ''ರಾಜಭಿರ್ಧೃತದಂಡಾಸ್ತು ಕೃತ್ವಾ ಪಾಪಾನಿ ಮಾನವಾಃ । ನಿರ್ಮಲಾಸ್ತ್ರಿದಿವಂ ಯಾಂತಿ ಸಂತಸ್ಸುಕೃತಿನೋ ಯಥಾ" ಎಂದೂ ಶಾಸ್ತ್ರಪ್ರಮಾಣವಿರುವುದರಿಂದ, ದುಷ್ಟನಾದ ನನ್ನನ್ನು ಶಿಕ್ಷಿಸಿದುದಕ್ಕಾಗಿ ನಿನಗೂ, ನಿನ್ನಿಂದ ಶಿಕ್ಷಿತನಾದುದಕ್ಕಾಗಿ ನನಗೂ ಗುಣವೇ ಉಂಟಾಯಿತೆಂದರ್ಥವು.

* ಇಲ್ಲಿ ''ನಿನ್ನಲ್ಲಿರುವ ಈ ಸದ್ಗುಣಕ್ರಿಯಾಕಲಾಪಗಳನ್ನೂ ನೋಡಿಯೇ ನಾನು ನಿನ್ನನ್ನು ಸರ್ವೇಶ್ವರನೆಂದೆಣಿಸಿ, ನಿನ್ನ ಕೈಯಿಂದ ಸಾಯುವೆಂಕಿಯು ಉತ್ಸಾಹವುಂಟಾಗಿ, ತಾರೆಯು ನನ್ನನ್ನು ಎಷ್ಟೋವಿಧವಲ್ಲಿ ತಡೆದರೂ ಕೇಳದೆ ಇಲ್ಲಿಗೆ ಬಂದೆ'' ಎಂದು ಹೇಳಿದುದಾಗಿ ಭಾವವು

ಬ್ಬರೊಡನೆ ಯುದ್ಧಮಾಡುವ ! ಆತುರದಲ್ಲಿದ್ದಾಗ, ನೀನು ನನ್ನನ್ನು ಏನೂ ಮಾಡಲಾರೆಯೆಂದೂ ತಿಳಿದಿದ್ದೆನು ನಿನ್ನನ್ನು ನೋಡುವುದಕ್ಕೆ ಮೊದಲು ನಾನು ನಿನ್ನ ಖ್ಯಾತಿಯೆಲ್ಲವನ್ನೂ ನಿಜವೆಂದೇ ತಿಳಿದಿದ್ದೆನು ಈಗ ನಿನ್ನ ಸ್ವಭಾವವು ಚೆನ್ನಾಗಿ ಸ್ಪಷ್ಟವಾಯಿತು * ನೀನು ಹೀಗೆ ಬುದ್ಧಿಗೆಟ್ಟವನೆಂದೂ, ಲೋಕವನ್ನು ವಂಚಿಸುವುದಕ್ಕಾಗಿ ಧರ್ಮಚಿಹ್ನಗಳನ್ನು ಧರಿಸಿರುವೆಯೆಂದೂ ನನಗೆ ತಿಳಿಯದೆಹೋಯಿತು ಇಂತಹ ಪಾಪಬುದ್ಧಿಯುಳ್ಳ ನೀನು ಮೇಲೆ ಹುಲ್ಲುಹೊದೆಸಿದ ಬಾವಿಯಂತೆ ಹೊರಗೆಮಾತ್ರ ಧರ್ಮಧ್ವಜವನ್ನು ಧರಿಸಿರುವೆಯೆಂದು ನನಗೆ ತಿಳಿದಿರಲಿಲ್ಲ ಬೂದಿಮುಚ್ಚಿದ ಬೆಂಕಿಯಂತೆ, ಮೇಲೆಮಾತ್ರ ಸತ್ಪುರುಷರ ವೇಷವನ್ನು ಧರಿಸಿ,ಧರ್ಮವೆಂಬ ನೆಪದಿಂದ ನಿಜ ಸ್ವಭಾವವನ್ನು ಮರೆಸಿಕೊಂಡಿರುವ ನೀನು ಹೀಗೆ ಕುಟಿಲಬುದ್ಧಿಯುಳ್ಳವನೆಂದು ನನಗೆ ತಿಳಿಯದೆ ಹೋಯಿತು ರಾಮಾ! †ನಾನು ನಿನ್ನ ದೇಶಕ್ಕೆ ಬಂದವನಲ್ಲ ನಿನ್ನ ಪಟ್ಟಣಕ್ಕೆ ಕಾಲಿಟ್ಟವನಲ್ಲ ನಾನು ನಿನಗೆ ಯಾವವಿಧದಲ್ಲಿಯೂ ಅಪರಾಧಮಾಡಿದವನಲ್ಲ ಹಿಂದೆ ಎಂದಾದರೂ ನಾನು ನಿನ್ನನ್ನು ಅವಮಾನಪಡಿಸಿದವನೂ ಅಲ್ಲ! ಹೀಗೆ ನಿರ್ದೋಷಿಯಾದ ನನ್ನನ್ನು ನೀನು ಕೊಲ್ಲಲು ಕಾರಣವೇನು? ಅಲ್ಲಲ್ಲಿ ಹಣ್ಣುಗಡ್ಡೆಗಳನ್ನು ಕಿತ್ತು ತಿಂದು, ಕಾಡಿನಲ್ಲಿ ವಾಸಮಾಡುತ್ತಿರುವ ಕೇವಲವಾನರನಾದ ನನ್ನನ್ನು ನೀನು ಕೊಲ್ಲಬಹುದೆ? ಇದರಮೇಲೆ ನಾನು ನಿನ್ನೊಡನೆ ಯುದ್ಧಕ್ಕೆ ನಿಂತವನೂ ಅಲ್ಲ ಮತ್ತೊಬ್ಬರೊಡನೆ ಯುದ್ಧಕ್ಕೆ ನಿಂತು, ಆ ಸಂಭ್ರಮದಿಂದ ನಾನು ಪರಾಙ್ಮುಖನಾಗಿರುವಾಗ ಹಿಂದಿನಿಂದ ಹೊಡೆದೆಯಲ್ಲಾ ! ನೀನು ಸ್ವಭಾವ

---

* ಇಲ್ಲಿ ''ನೈತ್ಯಾಂವಿನಿಹತಾತ್ಮಾನಂ ಧರ್ಮಧ್ವಜಮಥಾರ್ಮಿಕಂ। ಜಾನೇಪಾಪಸಮಾಚಾರಂ ತೃಣೈ ಕೂಪಮಿವಾವೃತಂ॥ ಸತಾಂವೇಷಧರಂಪಾಪಂ ಪ್ರಚ್ಛನ್ನಮಿವಪಾವಕಂ। ನಾಹಂತ್ವಾಮಭಿಜಾನಾಮಿಧರ್ಮಚ್ಛದ್ಮಾಭಿಸಂವೃತಂ"ಎಂದುಮೂಲವು.ಅಧಾರ್ಮಿಕತ್ವಾದಿದುರ್ಗುಣಗಳಾವುವನ್ನೂ ನಾನು ನಿನ್ನಲ್ಲಿ ಕಾಣಲಿಲ್ಲವೆಂದು ಇಲ್ಲಿನ ವಾಸ್ತವಾರ್ಥವು

† ಇಲ್ಲಿ ''ಕಸ್ಮಾತ್ತ್ವಂ ಹಂಸ್ಯಕೆಲ್ಬಿಷಂ" ಎಂದು ಮೂಲವು ''ನೀನು ನಿರಪರಾಧಿಗಳನ್ನು ಎಂದಿಗೂ ದಂಡಿಸತಕ್ಕವನೆಲ್ಲ ಹೀಗಿರುವಾಗಲೂ ನೀನು ನನ್ನನ್ನು ದಂಡಿಸಿದುದರಿಂದಲೇ ನಾನು ಅಪರಾಧಿಯೆಂಬುದು ಸ್ಪಷ್ಟವಾಗುವುದೆಂದು ವಾಸ್ತವಾರ್ಥವು

ದಿಂದ ಕಪಟಿಯಾಗಿ ಮೇಲೆಮಾತ್ರ ಧರ್ಮವನ್ನಭಿನಯಿಸುತ್ತಿರುವೆಯೇ ಹೊರತು ಬೇರೆಯಲ್ಲ ಈಗ ನೀನು ನಡೆಸಿದ ಅಕೃತ್ಯದಿಂದಲೇ ನಿನ್ನ ಕಾಪಟ್ಯವು ಸ್ಪಷ್ಟವಾಗುವುದು *ಕ್ಷತ್ರಿಯಕುಲದಲ್ಲಿ ಹುಟ್ಟಿ, ವಿದ್ಯಾವಂತನಾದ ಯಾವನು ತಾನೇ ಹೀಗೆ ಧರ್ಮವೇಷದಿಂದ ತನ್ನನ್ನು ಮರೆಸಿಕೊಂಡು ಇಂತಹ ಕ್ರೂರಕಾರ್ಯವನ್ನು ನಡೆಸುವನು? ರಾಮಾ! ನೀನು ರಾಜವಂಶದಲ್ಲಿ ಹುಟ್ಟಿ ಧರ್ಮಜ್ಞನೆಂಬ ಖ್ಯಾತಿಯನ್ನು ಹೊಂದಿರುವೆ †ಹೀಗಿದ್ದರೂ ಕ್ರೂರಸ್ವಭಾವವನ್ನು ಬಿಡದೆ ಇತರರನ್ನು ವಂಚಿಸುವುದಕ್ಕಾಗಿಯೇ ಹೊರಗೆ ಸಾಧುತ್ವವನ್ನಭಿನಯಿಸುತ್ತ ಹೀಗೆ ಸಂಚರಿಸುವೆಯಾ? ಎಲ್ಲೆರಾಜನೆ!‡ ಸಾಮ, ದಾನ, ಶಾಳ್ಮೆ, ಧರ್ಮ, ಸತ್ಯ, ಧೈರ್ಯ, ಪರಾಕ್ರಮ, ಅಪರಾಧಿಗಳನ್ನು ದಂಡಿಸುವುದು,ಇವೆಲ್ಲವೂ ರಾಜರಿಗಿರಬೇಕಾದ ಗುಣಗಳು,§ನಾವಾದರೋ ಗಡ್ಡೆಗೆಣಸುಗಳನ್ನು ತಿಂದು, ಕಾಡಿನಲ್ಲಿ ಸಂಚರಿಸುವ ಮೃಗಗಳು ಇದೇ ನಮಗೆ ಸ್ವಭಾ

---

* ಇಲ್ಲಿ ಸಾಮಾನ್ಯಕ್ಷತ್ರಿಯರೇ ಕ್ರೂರಕಾರ್ಯವನ್ನು ಮಾಡುವುದಕ್ಕಂಜುವಾಗ ಸರ್ವೇಶ್ವರನಾದ ನಿನ್ನ ವಿಷಯದಲ್ಲಿ ಹೇಳತಕ್ಕುದೇನೆಂದು ವಾಸ್ತವಾರ್ಥವು

† ಇಲ್ಲಿ 'ಅಭವ್ಯೋಭವ್ಯರೂಪೇಣ ಕಿಂ ಕುರ್ಮಃ ಪರಿಭಾಷಸೇ'ಎಂದುಮೂಲವು ಇದರಲ್ಲಿ "ತ್ವಂ ಅಭವ್ಯಸ್ಸನ್ ಅರ್ಥಮುದ್ದಿಶ್ಯ ಭವ್ಯರೂಪೇಣ ಪರಿಭಾಷಸಿ ಕಿಂ?" ಎಂದು ಅನ್ವಯಭೇದವನ್ನುಮಾಡಿ, "ನೀನುಪ್ರಾಕೃತರಾದ ಬೇರೆ ಹೀನಜನರಂತೆ, ಪ್ರಯೋಜನಾಪೇಕ್ಷೆಯಿಂದ ಸಾಧುವೇಷವನ್ನು ಹಾಕಿಕೊಂಡು ಇಂತಹಕ್ರೂರಕಾರ್ಯವನ್ನು ನಡಸತಕ್ಕವನ? ಎಂದಿಗೂ ಹಾಗಲ್ಲ" ವೆಂದು ಭಾವವು

‡ ಇಲ್ಲಿ "ರಾಜನೀತಿಯನ್ನು ವಿಚಾರಿಸಿದರೂ ಕೂಡ ಅಪರಾಧಿಯಾದ ನನ್ನನ್ನು ದಂಡಿಸಿದುದು ನಿನಗೆ ಯುಕ್ತವೇ" ಎಂದುಭಾವವು

§ ಇಲ್ಲಿ "ನಿನಗೂ ನನಗೂ ವೈರಪ್ರಸಕ್ತಿಯೇ ಇಲ್ಲವು. ನಾವು ಕಾಡಿನಲ್ಲಿರುವವರು ನೀವು ಪುರವಾಸಿಗಳು ನಾವು ಹಣ್ಣುಗಡ್ಡೆಗಳನ್ನು ತಿನ್ನುವವರು ನೀವು ಮೃಷ್ಟಾನ್ನವನ್ನು ಭುಜಿಸತಕ್ಕವರು ನಾವು ಮೃಗಗಳು, ನೀವು ಮನುಷ್ಯರು. ಆದುದರಿಂದ ನಮ್ಮಿಬ್ಬರಿಗೂ ಈರ್ಷ್ಯೆಗೆ ಕಾರಣವಿಲ್ಲ ಇದಲ್ಲದೆ ನಮ್ಮಿಬ್ಬರಿಗೂ ಭೂಹಿರಣ್ಯಗಳೇ ಮೊದಲಾದ ಇತರವೈರಕಾರಣಗಳೂ ಇಲ್ಲ ಹೀಗೆ ವೈರಪ್ರಸಕ್ತಿಯೇ ಇಲ್ಲದಿರುವಾಗಲೂ ನೀನು ನನ್ನನ್ನು ಹೊಡೆದುದಕ್ಕೆ ನನ್ನ ಅಪರಾಧವೇ ಕಾರಣವಲ್ಲದೆ ಬೇರೆಯಲ್ಲ" ವೆಂದು ಭಾವವು

ವಸಿಷ್ಠವಾದ ವೃತ್ತಿಯು ನೀನಾದರೋ ಮನುಷ್ಯನು ಅದರಲ್ಲಿಯೂ ರಾಜನೆನಿಸಿಕೊಂಡಿರುವೆ! ಹೀಗಿದ್ದರೂ ನಮ್ಮಲ್ಲಿ ನಿನಗೆ ಈ ವೈರವು ಹುಟ್ಟಿದುದೇಕೆ? ಲೋಕದಲ್ಲಿ ಭೂಮಿ, ಚಿನ್ನ, ಬಳ್ಳಿ ಇವು ಮೂರೂ ಯುದ್ಧಕ್ಕೆ ಮೂಲಕಾರಣಗಳೆಂದೂ ಹೇಳುವರು ಇವುಗಳಲ್ಲಿ ಯಾವ ಆಸೆಗಾಗಿ ನೀನು ಹೀಗೆ ನನ್ನನ್ನು ಕೊಂಯಿರುವೆ? ರಾಮಾ! ನಾವು ಈ ಕಾಡಿನಲ್ಲಿ ಕಿತ್ತುತಿನ್ನುವ ಹಣ್ಣುಗಡ್ಡೆಗಳಲ್ಲಿ ನಿನಗೇನಾದರೂ ದುರಾಸೆಯುಂಟಾಗಿ ಈಕೆಲಸವನ್ನು ಮಾಡಿದೆಯಾ? ನೀತಿಯೂ, ಅನುಗ್ರಹವೂ ಉತ್ತಮರಾಜರಧರ್ಮವು ಆರ್ಯತೆಯೂ, ನಿಗ್ರಹವೂ ನೀಚರಾಜರ ಕೃತ್ಯಗಳು ಹೀಗೆ ರಾಜವೃತ್ತಿಯೂಕೂಡ ಪ್ರತ್ಯೇಕವಾಗಿ ವಿಭಾಗಿಸಲ್ಪಟ್ಟಿರುವುದರಿಂದ, ಆಯಾರಾಜರು ಅದನ್ನನುಸರಿಸಿಯೇ ನಡೆಸುತ್ತಿರುವರೇ ಹೊರತು ಸ್ವಧೇಚ್ಛನಾಗಿ ಪ್ರವರ್ತಿಸರು † ನಿನಗಾದರೋ ಕಾಮವೊಂದೇ ಪ್ರಧಾನವೆಂದು ತೋರುವುದು ಕೋಪನೇ

---

* ಇಲ್ಲಿ "ಕೇವಲ ಸಾಮಾನ್ಯರಾಜರೂ ಕೂಡ, ಕಾಮವೃತ್ತರಾಗದೆ, ರಾಜನೀತಿಯನ್ನನುಸರಿಸಿ ನಿಗ್ರಹಾನುಗ್ರಹಗಳನ್ನು ನಡಸುವರು ಇನ್ನು ಸರ್ವೇಶ್ವರನಾದ ನಿನ್ನ ವಿಷಯವೆಲ್ಲಿ ಹೇಳಬೇಕಾದುದೇನು? ನೀನು ನನ್ನನ್ನು ವಧಿಸಿದುದು ನಿನ ವಾಪನನ್ನು ನೀಗಿಸಿ ಉದ್ಧರಿಸುವುದಕ್ಕಾಗಿಯೇ ಅಲ್ಲದೆ ಬೇರೆಯೆಲ್ಲವು" ಎಂದು ಭಾವ

† ಇಲ್ಲಿ "ತ್ವಂತು ಕಾಮಪ್ರಧಾನಶ್ಚ ಕೋಪರಶ್ಚಾನವಸ್ಥಿತ । ರಾಜವೃತ್ತೈಶ್ಚ ಸಂಕೀರ್ಣಶ್ಚರಾಸಿ ತಪರಾಯಣಃ ॥ ನತೇಸ್ಯಪಚಿತಿರ್ಧರ್ಮೇ ನಾರ್ಥೇ ಬುದ್ಧಿರವಸ್ಥಿತಾ। ಇಂದ್ರಿಯೈಃ ಕಾಮವೃತ್ತಸ್ಸ್ವಂ ಕೃಷ್ಯಸೇ ಮನುಜೇಶ್ವರ॥" ಎಂದುಮೂಲವು ಇಲ್ಲಿನ ವಾಸ್ತವಾರ್ಥವೇನೆಂದರೆ —(ಮನುಜೇಶ್ವರ) ಮನುಷ್ಯರೂಪವಿಂದನೆತರಿಸಿರುವ ಎಲೈ ಸರ್ವೇಶ್ವರನ! ನೀನು ಸಮಸ್ತಪ್ರಪಂಚವನ್ನೂ ಜಯಿಸಿ ವಶಪಡಿಸಿಕೊಂಡಿರುವ ಕಾಮ ಕ್ರೋಧ ಪ್ರಧಾನನು ಎಂದರೆ ಕಾಮವನ್ನೂ ಜಯಿಸಿದವನು (ಕೋಪನ) ದುಷ್ಟಾತ್ಮರಲ್ಲಿ ಕೋಪ ಪ್ರಭಾವನನುಳ್ಳವನು (ಅನವಸ್ಥಿತ) ಬಂದುಕಡೆಯಲ್ಲಿ ಸ್ಥಿರವಾಗಿ ನಿಲ್ಲದೆ ಸರ್ವಾಂತರ್ಯಾಮಿಯಾಗಿರುವವನು. ಈಗ ರಾಜಧರ್ಮವನ್ನು ಬಿಟ್ಟು ವಾನಪ್ರಸ್ಥಧರ್ಮದಲ್ಲಿರುವವನು ಮನುಷ್ಯರ ಸಾಮಾನ್ಯಧರ್ಮಗಳಲ್ಲಿಯಾಗಲಿ, ಅರ್ಥದಲ್ಲಿಯಾಗಲಿ ಆಸೆಯಿಲ್ಲದವನು ಎಂದರೆ ಧರ್ಮಾರ್ಥಗಳನ್ನು ಮೀರಿದವನು ಇಂತಹ ನೀನು ಸ್ವತಂತ್ರಾಚರಣೆಯುಳ್ಳವನಾಗಿ ಯೋಗಿಗಳ ಜ್ಞಾನೇಂದ್ರಿಯಗಳಿಂದ ಎಳೆಯುಲ್ಪಡುತ್ತಿರುವೆ" ಯೆಂದು ವಾಸ್ತವಾರ್ಥವು

ನಿನಗೆ ಸ್ವಭಾವವು ನೀನು ಮರ್ಯಾದೆಯಿಲ್ಲದವನು ರಾಜನೀತಿಯ ನಿರ್ಣಯವನ್ನು ತಿಳಿಯದೆ, ಅಕ್ರಮವಾಗಿ ಯಥೇಚ್ಛಪ್ರವರ್ತನೆಯನ್ನೇ ಅನುಸರಿಸುವಂತಿದೆ ಬಿಲ್ಲನ್ನೆಳೆದು ಹೊಡೆಯುವುದೊಂದೇ ನಿನ್ನ ಮುಖ್ಯವಾದ ವ್ರತವೆಂದೂ ತೋರುವುದು ಎಲರಾಜನೆ! ಮುಖ್ಯವಾಗಿ ನಿನಗೆ ಧರ್ಮದಲ್ಲಿಯೂ ಶ್ರದ್ಧೆಯಿಲ್ಲ ಅರ್ಥವಿಷಯದಲ್ಲಿಯೂ ನಿನ್ನ ಬುದ್ಧಿಗೆ ಯುಕ್ತಾಯುಕ್ತಗ್ರಹಣವಿಲ್ಲ ಯಥೇಚ್ಛಪ್ರವರ್ತನೆಯಿಂದ ನಿನ್ನ ಇಂದ್ರಿಯಗಳನ್ನು ಹೋದಕಡೆಗೆ ಬಿಡುತ್ತಿರುವುದರಿಂದ ಕಾಮವಿಷಯದಲ್ಲಿಯೂ ನಿನಗೆ ವ್ಯವಸ್ಥೆಯಿಲ್ಲ ರಾಮಾ! ನೀನು ಸರ್ವೋತ್ತಮವಾದ ಕಕುತ್ಥ್ಸವಂಶದಲ್ಲಿ ಹುಟ್ಟಿದವನು * ಈ ನಿನ್ನ ವಂಶೋನ್ನತಿಯನ್ನೂ ಯೋಚಿಸದೆ, ನಿರಪರಾಧಿಯಾದ ನನ್ನನ್ನು ಕೊಂದೆಯಲ್ಲಾ ಈ ನಿಂದಿತವಾದ ಕಾರ್ಯವನ್ನು ಮಾಡಿ ಸತ್ಪುರುಷರಮುಂದೆ ಏನು ಸಮಾಧಾನವನ್ನು ಹೇಳಬಲ್ಲೆ?† ರಾಜರನ್ನು ಕೊಂದವನು, ಬ್ರಾಹ್ಮಣರನ್ನು ಕೊಂದವನು, ಗೋವಧವನ್ನು ಮಾಡಿದವನು, ಪರರೊಡವೆಗಳನ್ನು ಕಳುವವನು, ಪ್ರಾಣಿಗಳನ್ನು ಕೊಲ್ಲುವವನು, ನಾಸ್ತಿಕನು, ಅಣ್ಣನಿಗಿಂತಲೂ ಮೊದಲು ಮದುವೆಮಾಡಿಕೊಂಡವನು ಇವರೆಲ್ಲರಿಗೂ ಘೋರವಾದ ನರಕನೆಂಬುದು ಸಿದ್ಧವು ಮತ್ತೊಬ್ಬರಮೇಲೆ ಚಾಡಿಹೇಳುವವನೂ, ಲುಬ್ಧನೂ, ನಂಬಿದಮಿತ್ರರನ್ನು ಕೆಡಿಸುವವನೂ, ಪಾಪಿಗಳುಹೊಂದತಕ್ಕ ಗತಿಯನ್ನೇ ಹೊಂದುವರಂಬುದರಲ್ಲಿ ಸಂದೇಹವಿಲ್ಲ ರಾಮಾ! ಆ ಧರ್ಮವಿಜ್ಞಾ

---

* ಇಲ್ಲಿ "ರಾಮಾ ನಾಪರಾಧಿನಂ। ಕಿಂವಕ್ಷ್ಯಸಿ ಸತಾಂ ಮಧ್ಯೇ ಕರ್ಮಕೃತ್ವಾ ಜುಗುಪ್ಸಿತಂ" ಎಂದುಮೂಲವ (ಜುಗುಪ್ಸಿತಂ ಕರ್ಮಕೃತ್ವಾಪಿ ಮಾಂ ಸತಾಂ ಮಧ್ಯೇ ಅನಪರಾಧಿನಂ ವಕ್ಷ್ಯಸಿಕಿಂ?" ಎಂದು ಅನ್ವಯಭೇದವನ್ನು ಮಾಡಿ 'ಸಹೋದರ ಭಾರ್ಯಾಪರಿಗ್ರಹವೆಂಬ ಜುಗುಪ್ಸಿತಕಾರ್ಯವನ್ನು ಮಾಡಿರುವಾಗಲೂ, ನನ್ನನ್ನು ನೀನು ಸತ್ಪುರುಷರ ನಡುವೆ ಅನಪರಾಧಿಯೆಂದು ಹೇಳುವೆಯಾ? ಎಂದಿಗೂ ನನ್ನನ್ನು ಅನಪರಾಧಿಯೆಂದು ಹೇಳುವುದಕ್ಕಿಲ್ಲವು" ಎಂದು ವಾಸ್ತವಾರ್ಥವು

† ಇದರಿಂದ "ರಾಜಘಾತಿಗಳಿಗೇ ಪಾಪವೇಹೊರತು ಅಪರಾಧಿಯಾಡ ನನ್ನನ್ನು ವಧಿಸಿದುದರಿಂದ ನಿನಗೆ ಯಾವದೋಷವೂ ಇಲ್ಲ" ವೆಂದು ಭಾವವು

ರವೂ ಹಾಗಿರಲಿ * ಈಗ ನೀನು ನನ್ನನ್ನು ಕೊಂದ ಉದ್ದೇಶವೇನು? ರಾಜನಾದುದರಿಂದ ಮೃಗಯಾರ್ಥವಾಗಿ ಕೊಂದೆನೆಂದು ದೇಳುವೆಯಾ ? ನನ್ನನ್ನು ಬೇಟೆಯಾಡಿ ನಿನಗೆ ಫಲವೇನು ? ನಮ್ಮ ಚರ್ಮವಾದರೂ ಜಿಂಕೆಯ ಚರ್ಮದಂತೆ ಧರಿಸುವುದಕ್ಕು ಯೋಗ್ಯವಾದುದಲ್ಲ ನಮ್ಮ ರೋಮವಾದರೂ, ಕೇವಲನಿಷಿದ್ಧಗಳಲ್ಲದೆ ಪಟ್ಟೆಯನೂಲಿನಂತೆ ಸ್ವೀಕಾರಾರ್ಹವಲ್ಲ ನಮ್ಮ ಅಸ್ಥಿಯೂ ಕೇವಲನಿಷಿದ್ಧವಾದುದಲ್ಲದೆ ಅನೆಯ ದಂತದಂತೆ ಪ್ರಯೋಜನಕ್ಕೆ ಬರುವುದಲ್ಲ ನಮ್ಮ ಮಾಂಸವೂ ಭಕ್ಷಣಯೋಗ್ಯವಲ್ಲ ಐದುನಖಗಳುಳ್ಳ ಪ್ರಾಣಿಗಳಲ್ಲಿ, ಮುಳ್ಳುಹಂದಿ, ಕಾಡುಹಂದಿ, ಉಡು, ಮೂಲ, ಆಮೆ, ಇವೈದುಮಾತ್ರವೇ ಬ್ರಾಹ್ಮಣ ಕ್ಷತ್ರಿಯ ವೈಶ್ಯರಿಗೆ ಭಕ್ಷಣಾರ್ಹವಾದುವು ಇತರ ಪಂಚನಖಪ್ರಾಣಿಗಳೆಲ್ಲವೂ ಅಭಕ್ಷ್ಯಗಳು ಪಂಡಿತರಾದವರು ನಮ್ಮ ಚರ್ಮವನ್ನಾಗಲಿ ಅಸ್ಥಿಯನ್ನಾಗಲಿ ಕೈಯಿಂದಲೂ ಮುಟ್ಟುವುದಿಲ್ಲ ನಮ್ಮ ಮಾಂಸವನ್ನೂ ಭಕ್ಷಿಸುವುದಿಲ್ಲ ಹೀಗೆ ಅಭಕ್ಷ್ಯಗಳಾದ ಪ್ರಾಣಿವರ್ಗಕ್ಕೆ ಸೇರಿದ ನನ್ನನ್ನು ವ್ಯರ್ಥವಾಗಿ ನೀನು ಕೊಂದೆಯಲ್ಲಾ 'ರಾಮಾ' †ಹಿಂದೆ ತಾರೆಯು ನನ್ನನ್ನು ಎಷ್ಟೋವಿಧದಲ್ಲಿ ತಡೆದಳು' ನನಗೆ ಎಷ್ಟೋಹಿತವಾದವನ್ನು ಹೇಳಿದಳು ಅವಳು ಹೇಳಿದುದೆಲ್ಲವೂ ಸತ್ಯವಾಯಿತು ಸರ್ವಜ್ಞಳಾದ ಆಕೆಯ ಮಾತನ್ನು ಮೀರಿ,ಅಜ್ಞಾನದಿಂದ ನಾ

---

* ಇಲ್ಲಿ ''ಯಾವವಿಧದಲ್ಲಿಯೂ ಉಪಯೋಗವಿಲ್ಲದ ನನ್ನನ್ನು ನೀನು ಕೊಂದುದರಿಂದ ಇದಕ್ಕೆ ನನ್ನ ಅಪರಾಧವೇ ಮೂಲವೆಂಬುದನ್ನು ಸ್ಪಷ್ಟವಾಗಿ ಊಹಿಸಬಹು'' ದೆಂದು ವಾಸ್ತವಾರ್ಥವು

† ಇತಿ ''ತಮತಿಕ್ರಮ್ಯ ಮೋಹೇನ ಕಾಲಸ್ಯ ವಶಮಾಗತಃ''ಎಂದುಮೂಲವು ಇಲ್ಲಿ ಕಾಲಶಬ್ದಕ್ಕೆ ''ಕಾಲೋಸ್ಮಿ ಲೋಕಕ್ಷಯಕೃತ್ಪ್ರವೃದ್ಧ ''ಎಂಬ ಭಗವದ್ವಾಕ್ಯವ್ರಮಾಣದಿಂದ ಸರ್ವೇಶ್ವರನೆಂದರ್ಥವು ಇದರಿಂದ ತಾರೆಯು ನನ್ನನ್ನು ತಡೆದರೂ ಕೇಳದೆ ನಿನ್ನ ಕೈಯಿಂದ ಸಾಯಬೇಕೆಂದು ಬಂದು, ಈಗ ನಿನ್ನಿಂದ ಹತನಾಗಿ ಸರ್ವೇಶ್ವರನಾದ ನಿನ್ನ ಸಾನ್ನಿಧ್ಯವನ್ನು ಸೇರಿದೆನು'' ಎಂದು ಭಾವವು

ನು ಹೀಗೆ ಮೃತ್ಯುವಿನ ಪಾಲಾದೆನು *ಸದಾಚಾರಸಂಪನ್ನೆಯಾದ ಉತ್ತಮ ಸ್ತ್ರೀಗೆ, ಥೂರ್ತನಾದ ಪತಿಯು ಲಭಿಸಿದಂತೆ, ನೀನು ಭೂಮಿಗೆ ನಾಥನೆನಿಸಿ ಕೊಂಡಿದ್ದರೂ ಅದನ್ನು ಅನಾಥವೆಂದೇ ಹೇಳಬೇಕಾಗಿದೆ † ನೀನು ಗೂಢವಾಗಿಯೇ ಇತರರಿಗೆ ಕೇಡನ್ನು ಮಾಡುವವನು ಇತರರಿಗೆ ಅಪಕಾರವನ್ನು ಮಾಡುವುದೇ ನಿನ್ನ ವೃತ್ತಿಯೆಂದೂ ತೋರುವುದು ಕೇವಲಕ್ಷುದ್ರಸ್ವಭಾವವುಳ್ಳ ನೀನು ಹೊರಕ್ಕೆತೋರಿಸುವ ಈವಿನಯಾದಿಗುಣಗಳೆಲ್ಲವೂ ಕೇವಲನಟನಗಳು ಪಾಪವೇ ನಿನ್ನ ಸ್ವಭಾವವು ಅಯ್ಯೋ! ಮಹಾತ್ಮನಾದ ಆ ದಶರಥನ ಹೊಟ್ಟೆಯಲ್ಲಿ ಪಾಪಿಯಾದ ನೀನೇಕ ಹುಟ್ಟಿದೆ? ಅಹಾ ‡ ಕೊಬ್ಬಿದ ಕಾಡಾನೆಯಂತ, ಸಚ್ಚರಿತ್ರವೆಂಬ ಹಗ್ಗವನ್ನು ಕಿತ್ತು, ಸತ್ಪುರುಷರ ಮಾರ್ಗವೆಂಬ ಬಾರಿಯನ್ನತಿಕ್ರಮಿಸಿ, ಧರ್ಮವೆಂಬ ಅಂಕುಶವನ್ನೂ ಲಕ್ಷ್ಯಮಾಡದ ಮದೋನ್ಮತ್ತನಾದ ನಿನ್ನ ಕೈಯಲ್ಲಿ ಸಿಕ್ಕಿ ನಾನು ಸಾಯಬೇಕಾಯಿತೆ? ರಾಮಾ!

---

* ಇಲ್ಲಿ ''ತ್ವಯಾ ನಾಥೇನ ಕಾಕುತ್ಸ್ಥ ನೇವನಾಥಾ ವಸುಂಧರಾ। ಪ್ರಮದಾ ಶೀಲಸಂಪನ್ನಾ ಭರ್ತಾರೇವ ಪತಿನಾಯಥಾ'' ಎಂದುಮೂಲವು ಇದಕ್ಕೆ 'ಭರ್ತಾನಾದ ಪತಿಯಿಂದ ಶೀಲಸಂಪನ್ನೆಯಾದ ಕಾಂತೆಯು ಸನಾಥೆಯೆನಿಸಿಕೊಳ್ಳುವಹಾಗೆ ನಿನ್ನಿಂದ ಭೂಮಿಯು ಸನಾಥೆಯಾಗಿಲ್ಲ ಎಂದರೆ ದುಷ್ಟನಿಗ್ರಹಾದಿರೂಪಗಳಾದ ಸಮಸ್ತಕಲ್ಯಾಣಗುಣಗಳಿಂದ ಕೂಡಿದೆ ನೀನು ನಾಥನಾಗಿರುವುದರಿಂದ, ಶೀಲಸಂಪನ್ನನಾದವನು ಪತಿವ್ರತೆಯಾದ ತನ್ನಪತ್ನಿಯನ್ನು ಪೋಷಿಸುವಂತೆ ಈ ಭೂಮಿಯನ್ನು ನೀನು ಪ್ರೇಮದಿಂದ ಪೋಷಿಸುತ್ತಿರುವೆ'' ಎಂದು ಭಾವವು

† ಇಲ್ಲಿ ''ಶಠೋ ನೈಕೃತಿಕಃ ಕ್ಷುದ್ರೋಮಿಥ್ಯಾಪ್ರಶ್ರಿತಮಾನಸಃ। ಕಥಂ ದಶರಥೇನ ತ್ವಂ ಜಾತ ಪಾಪೋ ಮಹಾತ್ಮನಾ'' ಎಂದುಮೂಲವು ಇದಕ್ಕೆ ''ಮಹಾತ್ಮನಾ ದಶರಥೇನ ಜಾತಸ್ತ್ವಂ ಕಥಂಶಠಃ?'' ಇತ್ಯಾದಿರೀತಿಯಲ್ಲಿ ಅನ್ವಯಭೇದವನ್ನುಮಾಡಿ ಮಹಾತ್ಮನಾದ ದಶರಥನಿಂದ ಜನಿಸಿದನಿನ್ನಲ್ಲಿ ಶಠತ್ವಾದಿದುರ್ಗುಣಗಳೆನ್ನಾರೋಪಿಸುವುದುಂಟೆ?'' ಎಂದು ವಾಸ್ತವಾರ್ಥವನ್ನು ಗ್ರಹಿಸಬೇಕು

‡ ಇಲ್ಲಿ ''ಛಿನ್ನೇ ಚಾರಿತ್ರ್ಯಕಕ್ಷ್ಯೇಣ ಸತಾಂ ಧರ್ಮಾತಿವರ್ತಿನಾ। ತ್ಯಕ್ತಧರ್ಮಾಂಕುಶೇನಾಹಂ ನಿಹತೋ ರಾಮಹಸ್ತಿನಾ॥'' ಎಂದುಮೂಲವು '' ಶಾಸ್ತ್ರವಿಹಿತಗಳಾದ ಚರಿತ್ರಧರ್ಮಾದಿಗಳ ನಿರ್ಬಂಧಕ್ಕೊಳಪಡದೆ ಸರ್ವಸ್ವತಂತ್ರನಾದ ನಿನ್ನಿಂದ ಹತನಾಗಿ ಈಗ ನಾನು ಕೃತಾರ್ಥನಾದೆನು'' ಎಂದು ವಾಸ್ತವಾರ್ಥವು

*ಹೀಗೆ ಅಶುಭವಾಗಿಯೂ, ಅಯುಕ್ತವಾಗಿಯೂ ಸಜ್ಜನನಿಂದಿತವಾಗಿಯೂ ಇರುವ ಈ ಕೃತ್ಯವನ್ನು ನಡೆಸಿದೆಯೆಲ್ಲಾ ! ಸತ್ಪುರುಷರ ಮುಂದೆ ನೀ ನೇನು ಹೇಳುವೆ?"ನಿರಪರಾಧಿಯಾದ ನನ್ನಲ್ಲಿ ತೋರಿಸಿದ ಈ ನಿನ್ನ ಪರಾಕ್ರಮವನ್ನು, ನೀನು ನಿನ್ನ ಅಪರಾಧಿಗಳಲ್ಲಿ ತೋರಿಸಿದುದನ್ನು ನಾನು ಕಾಣಲಿಲ್ಲ, ರಾಮಾ! ಈ ನ್ಯಾಯಾನ್ಯಾಯವಿಚಾರವೂ ಹಾಗಿರಲಿ!‡ನನ್ನ ಕಣ್ಣಿಗಿದಿರಾಗಿ ನಿಂತು ನೀನು ಯುದ್ಧಮಾಡಿದ್ದ ಪಕ್ಷದಲ್ಲಿ, ಆ ಕ್ಷಣವೇ ನಿನಗೆ ನಾನು ಯಮ

---

* ಇಲ್ಲಿ "ಅಶುಭಂ ಚಾಪ್ಯಯುಕ್ತಂಚ ಸತಾಂ ಚೈವಾಗರ್ಹಿತಂ। ವಕ್ಷ್ಯಸೇ ಚೇದೃಶಂ ಕೃತ್ವಾ ಸದ್ಭಿಸ್ಸಹ ಸಮಾಗತ "ಎಂದುಮೂಲವು (ಸಮಾಗತ }ಎಂಬಲ್ಲಿ "ಸಃ + ಮಾ + ಗತ "ಎಂದು ಪದಚ್ಛೇದವು "ಪಾಪಿಯಾಗಿ ಸತ್ಪುರುಷರ ನಿಂದೆಗೊಳಗಾದ ನನ್ನೆನ್ನು ಹೀಗೆ ನಿನ್ನ ಕೈಯಿಂದ ಸಂಹೃತನೆನ್ನಾಗಿಮಾಡಿ, (ಸಃ ಮಾ ಗತ ! ಆ ವಾಲಿಯು ನನ್ನ ಸಾನ್ನಿಧ್ಯವನ್ನು ಸೇರಿದನು "ಎಂದು ಸಜ್ಜನರೊಡನೆ ಹೇಳುವೆ" ಎಂದೆವಾಸ್ತವಾರ್ಥವು ಪಾಪಿಯಾದ ನನ್ನನ್ನು ಉದ್ಧರಿಸಬೇಕೆಂಬುದಕ್ಕಾಗಿಯೇ ನಿನ್ನ ಕೈಯಿಂದ ಕೊಂದು, ಅದರಿಂದ ನನಗುಂಟಾದ ಸದ್ಗತಿಯನ್ನು ನೀನಾಗಿಯೇ ಸತ್ಪುರುಷರ ಗೋಷ್ಠಿಯಲ್ಲಿ ಕೊಂಡಾಡುವಷ್ಟು ದಯಾಸ್ವಭಾವವುಳ್ಳವನೆಂದು ಭಾವವು

† ಇಲ್ಲಿ"ಉದಾಸೀನೇಷುಯೋSಸ್ಮಾಸುವಿಕ್ರಮಸ್ತೇ ಪ್ರಕಾಶಿತ ।ಅಪಕಾರಿಷು ತಂ ರಾಜನ್ನಹಿಪಶ್ಯಾಮಿವಿಕ್ರಮಂ" ಎಂದುಮೂಲವು- ಇಲ್ಲಿ ದೂರಾನ್ವಯದಿಂದ ಪದಪರಿವರ್ತನಗಳನ್ನುಮಾಡಿ, 'ಅಪರಾಧಿಗಳಾದ ನಮ್ಮಲ್ಲಿಯೂ ನೀನು ದಯೆಯಿಂದ ಈಗ ಯಾವ ನಿನ್ನಪಾದನ್ಯಾಸಗಳನ್ನು ತೋರಿಸಿದೆಯೋ, ಅಂತಹ ವಾದನ್ಯಾಸವು, ಪ್ರಪಂಚವ್ಯಾಪಾರದಲ್ಲಿ ಉದಾಸೀನರಾದ ಯೋಗಿಗಳಿಗೂ ಲಭಿಸಲಾರ"ದೆಂದು ಹೇಳಿದುದಾಗಿ ವಾಸ್ತವಾರ್ಥವನ್ನು ಗ್ರಹಿಸಬೇಕು

‡ ಇಲ್ಲಿ "ದೃಶ್ಯಮಾನಸ್ತುಯುಧ್ಯೇಥಾಮಯಾಯದಿನೃಪಾತ್ಮಜ।ಅದ್ಯ ವೈವಸ್ವತಂ ದೇವಂ ಪಶ್ಯೇಸ್ತ್ವಂ ನಿಹತೋಮಯಾ॥"ಎಂದುಮೂಲವು ಇದಕ್ಕೆ "ನಾನು ನಿನಗಿದಿರಾಗಿಯೇ ನಿಂತು ಯುದ್ಧಮಾಡಿದ್ದ ಪಕ್ಷದಲ್ಲಿ ನೀನು (ಅದ್ಯ ವೈವಸ್ವತಂ ದೇವಂ ಪಶ್ಯೇಃ) ಈಗಲೇ ಈ ಸೂರ್ಯಪುತ್ರನಾದ ಸುಗ್ರೀವನನ್ನು ವಾನರರಾಜ್ಯಾಧಿಪತಿಯನ್ನಾಗಿ ನೋಡುತಿದ್ದೆ"ಎಂದರೆ, "ನೀನು ನನ್ನೆಲ್ಲಿ ಈಗ ತೋರಿಸುವಷ್ಟು ಅನುಗ್ರಹವನ್ನೊಬಿಟ್ಟು, ನಾನು ಬದುಕಿರುವಾಗ ನನ್ನ ಕಣ್ಣಮುಂದೆಯೇ ಸುಗ್ರೀವನಿಗೆ ಪಟ್ಟವನ್ನು ಕಟ್ಟಿಬಿಡುತಿದ್ದೆ" ಯೆಂದು ಭಾವವು.

ದರ್ಶನವನ್ನು ಮಾಡಿಸುತಿದ್ದೆನು ನಾನು ದುರ್ಜಯನೆಂಬುದನ್ನು ತಿಳಿದೇ, ನೀನು ನನ್ನ ಕಣ್ಣಿಗೆ ಕಾಣಿಸಿಕೊಳ್ಳದೆ ಮರೆಯಲ್ಲಿ ನಿಂತು,*ಮದ್ಯಪಾನ ಮಾಡಿ ಮತ್ತೇರಿ ಮಲಗಿದವನನ್ನು,ಕೆಟ್ಟಹಾವು ಕಚ್ಚಿಕೊಲ್ಲುವಂತೆ ನನ್ನನ್ನು ಕೊಂದೆಯಲ್ಲದೆ ಬೇರೆಯಲ್ಲ!ರಾಮಾ!ನೀನು ಯಾವ ಉದ್ದೇಶದಿಂದ ನನ್ನನ್ನು ಕೊಂದೆಯೋ ಆ ಉದ್ದೇಶವನ್ನು ಮೊದಲು ನನ್ನಲ್ಲಿಯೇ ತಿಳಿಸಿದ್ದರೆ,ನಾನು ಒಂದೇದಿನದಲ್ಲಿ ನಿನಗೆ ಸೀತೆಯನ್ನು ತಂದೊಪ್ಪಿಸುತಿದ್ದೆನಲ್ಲಾ ! ಸುಗ್ರೀವನ ಮೂಲಕವಾಗಿ ರಾವಣನನ್ನು ಕಂಡುಹಿಡಿಯಬೇಕಂಬ ಆಶೆಯಿಂದ ಅವನಸಂತೋಷಾರ್ಥವಾಗಿ ನನ್ನನ್ನು ಕೊಂದೆಯಲ್ಲವ? ಈ ನಿನ್ನ ಉದ್ದೇಶವನ್ನ ನನಗೇ ತಿಳಿಸಿದ್ದರೆ, ನಾನು ಕ್ಷಣಮಾತ್ರದಲ್ಲಿ ಆ ರಾವಣನನ್ನು ಕೂಂದು, ಕೂರಲಿಗೆ ಕಟ್ಟಿಕೂಂಡು ಬಂದು ನಿನಗೊಪ್ಪಿಸುತಿದ್ದೆನು ಆ ಸೀತೆಯನ್ನು ತಂದುಕೊಡಬೇಕೆಂದು ನೀನು ನನಗೆ ಮೊದಲೇ ನಿಯಮಿಸಿದ್ದಪಕ್ಷದಲ್ಲಿ, ಪೂರ್ವದಲ್ಲಿ ಮಧುಕೈಟಭರು ಪಾತಾಳದಲ್ಲಿ ಬಚ್ಚಿಟ್ಟಿದ್ದ ಶ್ವೇತಾಶ್ವತರೀರೂಪವಾದ ಶ್ರುತಿಯನ್ನು ಭಗವಂತನಾದ ಹಯಗ್ರೀವನು ಉದ್ಧರಿಸಿತಂದಂತೆ,ಆಕಯನ್ನು ರಾವಣನು ಸಮುದ್ರಜಲದಲ್ಲಾಗಲಿ, ಬೇರೆಲ್ಲೆಯಾಗಲಿ ಬಚ್ಚಿಟ್ಟಿದ್ದರೂ,ನಾನು ನಿನಗೆ ತಂದೊಪ್ಪಿಸುತಿದ್ದೆನು † ನಾನು

---

* ಇಲ್ಲಿ ''ತ್ವಯಾऽದೃಶ್ಯೇನತು ರಣೇ ನಿಹತೋಹಂ ದುರಾಸದ ।ಪ್ರಸುಪ್ತ ಪನ್ನಗೇನೇವ ನರ ಪಾನವಶಂ ಗತಃ'' ಎಂದು ಮೂಲವು ಇಲ್ಲಿ ವಾಲಿಯು ತನ್ನನ್ನು ಪಾನವಶನಾದವನಿಗೆ ಹೋಲಿಸಿಕೊಂಡಿರುವುದರಿಂದ ತನ್ನ ಅಜ್ಞಾನದ ದಶೆಯಿಂದ ರಾಮನಲ್ಲಿ ತಾನು ನೈಚ್ಯಾನುಸಂಧಾನವನ್ನು ಮಾಡಿದುದಾಗಿ ಗ್ರಾಹ್ಯವು ಇಲ್ಲಿ ಲೋಕೈಕವೀರನಾದ ರಾಮನನ್ನಿದಿರಿಸಿ ಸತ್ತನೆಂಬ ಕೀರ್ತಿಗೆ ತಾನು ಭಾಗಿಯಾಗದುದಕ್ಕಾಗಿ ವಾಲಿಯು ದುಃಖಿಸುವುದಾಗಿ ಸೂಚಿತವು.

† ಇಲ್ಲಿ ''ಯುಕ್ತಂ ಯತ್ಪ್ರಾಪ್ತುಯಾದ್ರಾಜ್ಯಂ ಸುಗ್ರೀವೋ ನಿಹತೇಮಯಿ । ಅಯುಕ್ತಂ ಯದಧರ್ಮೇಣ ತ್ವಯಾಹಂ ನಿಹತೋರಣೇ।।'' ಎಂದುಮೂಲವು. ಇದಕ್ಕೆ ''ಈಗ ನಾನು ಸತ್ತಮೇಲೆ ಸುಗ್ರೀವನು ರಾಜ್ಯವನ್ನು ಹೊಂದುವುದೇನೋ ಯಕ್ತವು. ಹಾಗಿಲ್ಲದೆ ನನ್ನನ್ನು ದೊಂದುಳಿಯ ಬಿಲದಲ್ಲಿ ಸೇರಿಸಿದ್ದಾಗ, ತಾನು ಅಧರ್ಮದಿಂದ ರಾಜ್ಯವನ್ನು ಪಡೆದಿದ್ದರೆ ಅಯುಕ್ತವಾಗುತಿತ್ತು, ಅದರಿಂದಲೇ ಈಗ ನಾನು ನಿನ್ನಿಂದ ಹತನಾಗಿರುವೆ'' ನೆಂದು ವಾಸ್ತವಾರ್ಥವು.

ಸತ್ತಮೇಲೆ ಈ ವಾನರರಾಜ್ಯವನ್ನು ಸುಗ್ರೀವನು ಅನುಭವಿಸಬೇಕೆಂಬುದೇ ನೋ ಯುಕ್ತವಾಗಿಯೇ ತರುವುದು ಹೇಗಿದ್ದರೂ ಅವನೇ ಈ ರಾಜ್ಯಕ್ಕೆ ಉತ್ತರಾಧಿಕಾರಿಯು! ಆದರೆ ಇದಕ್ಕಾಗಿ ನೀನು; ಅಧರ್ಮದಿಂದ ನನ್ನನ್ನು ಕೊಂದು, ಅನ್ಯಾಯಕ್ಕೆ ಭಾಗಿಯಾಗಿ ನಿಂತಂತಾಯಿತೇಕೊರತು ಬೇರೆಯಲ್ಲ ಹೇಗಿದ್ದರೂ ಭೂಮಿಯಲ್ಲಿ ಹುಟ್ಟಿದಮೇಲೆ ಎಂದಾದರೂ ಸಾಯಬೇಕು! ಹೀಗೆ ಸುಗ್ರೀವನಿಗೆ ರಾಜ್ಯಪ್ರಾಪ್ತಿಯಾಗಲಿ, ನನ್ನ ಸಾವಾಗಲಿ ಎಂದಿದ್ದರೂ ಸಿದ್ಧವಾಗಿರುವಾಗ ನಡುವೆ ನೀನು ಪ್ರವರ್ತಿಸಿ ಅಧರ್ಮಕ್ಕೆ ಭಾಗಿಯಾಗಬಹುದೆ? * ಹಾಗೆ ನೀನು ಮರೆಯಲ್ಲಿ ನಿಂತು ನಿರಪರಾಧಿಯಾದ

ವಾಲಿವಧೆ ಸಾಧುತ್ವಾಸಾಧುತ್ವವಿಚಾರವು

* "ರಾಮನು ತನ್ನಲ್ಲಿ ನಿರಪರಾಧಿಯಾದ ವಾಲಿಯನ್ನು ಕೊಂದುದು ಯುಕ್ತವೆ? ಅದರಲ್ಲಿಯೂ ವಾಲಿಯು ಬೇರೊಬ್ಬರೊಡನೆ ಯುದ್ಧಾಸಕ್ತನಾಗಿ ಪರಾಙ್ಮುಖನಾಗಿರುವಾಗ ಕೊಂದುದು ಕೇವಲಧರ್ಮವಿರುದ್ಧವಲ್ಲವೆ?" ಎಂಬ ಶಂಕೆಯುಂಟಾಗಬಹುದು ಸೂಕ್ಷ್ಮದೃಷ್ಟಿಯಿಂದಲೂ ಪೂರ್ವಾಪರಸಂದರ್ಭಗಳನ್ನು ವಿಚಾರಿಸಿನೋಡಿದರೆ, ಈಗ ರಾಮನು ಮಾಡಿದ ವಾಲಿ ವಧವು ನ್ಯಾಯ್ಯವೆಂದೇ ಸ್ಪಷ್ಟವಾಗುವುದು ಹೇಗೆಂದರೆ —

ರಾಮನು ಸುಗ್ರೀವನೊಡನೆ ಸ್ನೇಹವನ್ನುಮಾಡುವುದಕ್ಕೆ ಪ್ರತಿಯಾಗಿ ವಾಲಿಯೊಡನೆಯೇ ಸ್ನೇಹವನ್ನು ಬಳಿಸಬಹುದಾಗಿತ್ತು ಆಗ ಸೀತೆಯನ್ನೂ ಬಹಳಸುಲಭವಾಗಿಯೇ ಪಡೆಯಬಹುದಾಗಿತ್ತೆಂಬುದೂ ನಿಜವು ಆದರೆ ರಾಮನು ದೂರದೃಷ್ಟಿಯಿಂದಾಲೋಚಿಸಿಯೇ ಆ ವಾಲಿಯೊಡನೆ ಸ್ನೇಹವನ್ನು ಬೆಳೆಸಲಿಲ್ಲ ಇದರ ಕಾರಣವು ಸ್ಕಾಂದಪುರಾಣದಲ್ಲಿ ಸ್ಪಷ್ಟವಾಗಿ ಹೇಳಲ್ಪಟ್ಟಿರುವುದು "ರಾವಣಸ್ಯಸಖಾವಾಲೀ ರಾವಣೋಪಿ ವ್ಯಜೇತುಮಾಂ। ರಾವಣಸ್ಯ ವಧಾರ್ಥಾವಾದವತಾರಫಲಂನಹಿ॥" ಎಂದರೆ ವಾಲಿಯು ರಾವಣನಿಗೆ ಪ್ರಿಯಮಿತ್ರನಾದುದರಿಂದ, ವಾಲಿಯ ಪ್ರೇರಣೆಯಿಂದಲಾಗಲಿ, ವಾಲಿಯ ಭಯದಿಂದಾಗಲಿ ರಾವಣನು ತನ್ನಲ್ಲಿ ಬಂದು ಶರಣಾಗತನಾಗಿಬಿಡುವನು ಆಗ ರಾವಣನನ್ನು ತಾನು ಕೊಲ್ಲುವುದಕ್ಕೆ ಅವಕಾಶವಿಲ್ಲದೆ ಹೋಗುವುದರಿಂದ, ತನ್ನ ಅವತಾರದ ಮುಖ್ಯೋದ್ದೇಶವೇ ಕೆಟ್ಟುಹೋಗುವುದಲ್ಲದೆ, ಅನೇಕ ರಾಕ್ಷಸರ ವಧೆಕ್ಕೂ ವಿಘ್ನಬರುವುದೆಂದೆಣಿಸಿ, ವಾಲಿಯೊಡನೆ ಸ್ನೇಹವನ್ನು ಮಾಡಲಿಲ್ಲವೆಂದು ಗ್ರಾಹ್ಯವು ಈ ದೂರದೃಷ್ಟಿಯಿಂದಲೇ ಶಾಪಮುಕ್ತನಾದ ತುಂಬುರನೂಕೂಡ ಲೋಕಕ್ಷೇಮವನ್ನು ಚಿಂತಿಸಿ ವಾಲಿಯ ಹೆಸರನ್ನು ಹೇಳದೆ ಸುಗ್ರೀವನೊಡನೆಯೇ ಸ್ನೇಹಮಾಡುವಂತೆ ರಾಮನಿಗೆ ತಿಳಿಸಿರುವನು.

ನನ್ನನ್ನು ಹೊಡೆದುದು ಯಾವ ಭಾಗದಲ್ಲಿಯಾದರೂ ನಿನಗೆ ಯುಕ್ತವೆಂದು

''ಹಾಗಿದ್ದರೆ ರಾಮನು ವಾಲಿಯ ಸ್ನೇಹವನ್ನು ಮಾಡದಿದ್ದರೂ ಇರಲಿ! ನಿರಪರಾಧಿಯಾದ ಆವಾಲಿಯನ್ನು ಕೊಂದುದೇಕೆ? ' ಎಂದರೆ, ಮೊದಲು ಕಬಂಧಾದಿಗಳ ಮಾತಿನಂತೆ ರಾಮನು ಸೀತಾನ್ವೇಷಣಾರ್ಥವಾಗಿ ಸುಗ್ರೀವನೊಡನೆ ಸ್ನೇಹವನ್ನು ಮಾಡಿದನು ತ ಸ್ನೇಹಮಾತ್ರಲ್ಯದಿಂದ ಆತನಿಗೆ ವಾಲಿಯನ್ನು ಕೊಲ್ಲುವುದಾಗಿಯೂ ಪ್ರತಿಜ್ಞೆಯನ್ನು ಮಾಡಿಕೊಟ್ಟನು ಈಗ ಅದಗಂತೆ ನಡಸದಿದ್ದರೆ ಮಾತಿಗೆ ತಪ್ಪಿದಂತಾಗುವುದು ಆದುದರಿಂದಲೇ ವಾಲಿಯನ್ನು ಕೊಲ್ಲಬೇಕಾಗಿ ಬಂದಿತು ಇದೇ ವಿಷಯವು ಸ್ಕಾಂದಪುರಾಣದಲ್ಲಿ ''ಉಭಯೋ ವಾಲಿನೇ ದತ್ತೇ ಪ್ರತಿಜ್ಞಾಪರಿಹೀಯತೇ'' ಎಂದು ರಾಮನು ತನ್ನ ಪ್ರತಿಜ್ಞೆಗೆ ಭಂಗವು ಬರಬಾರದೆಂಬುದಕ್ಕಾಗಿಯೇ ವಾಲಿಯನ್ನು ಕೊಂದುದಾಗಿ ಹೇಳಲ್ಪಟ್ಟಿರುವುದು

''ಹಾಗೂ ಆಗಲಿ! ರಾಮನು ಆ ವಾಲಿಯನ್ನು ಕೊಲ್ಲಬೇಕಾಗಿದ್ದರೂ ಇದಿರಾಗಿ ನಿಂತು ಯುದ್ಧಮಾಡಿಯೇ ಕೊಲ್ಲಬಾರದೆ? ಕಣ್ಮರೆಯಾಗಿದ್ದುಕೊಂಡು ಪರಾಙ್ಮುಖನಾದವನನ್ನು ಬಾಣವನ್ನು ಹೊಡೆಯಬಹುದೆ?'' ಎಂದು ಆಕ್ಷೇಪಿಸಬಹುದು ಆದೊ ಯುಕ್ತವಲ್ಲ ಪೂರ್ವದಲ್ಲಿ ಬ್ರಹ್ಮನು ವಾಲಿಯನ್ನು ಕರೆದು 'ಪ್ರತೀಸವರ್ತಿನೋ ಭೂಯಾದರ್ಥಂ ಬಲಮಂದನು'' ನಿನಗಿದಿರಾಗಿ ನಿಂತು ಯುದ್ಧಮಾಡುವನನ ಅರ್ಧ ಬಲವು ನಿನಗೆ ಬಂದು ಸೇರಲಿ'' ಎಂದು ಅನುಗ್ರಹಿಸಿರುವನು ಇದಲ್ಲದೆ ಈ ವಾಲಿಯ ತಂದೆಯಾದ ಇಂದ್ರನೂ ಪುತ್ರವಲ್ಲಿ ವಾತ್ಸಲ್ಯದಿಂದ ಈತನಿಗೆ ಬಂದು ಸುವರ್ಣಮಾಲಿಕೆಯನ್ನು ಕೊಟ್ಟು, ಈ ಕಾಂಚನಮಾಲಿಕೆಯನ್ನು ಧರಿಸಿ ಯುದ್ಧಕ್ಕೆ ನಿಂತಾಗ ಇದಿರಾಗಿ ನಿಂತ ಶತ್ರುವಿನ ಬಲವೆಲ್ಲವೂ ನಿನಗೆ ಬರಲಿ!'' ಎಂದೂ ಅನುಗ್ರಹಿಸಿರುವನು ಇದಕ್ಕಾಗಿಯೇ ರಾಮನು ವಾಲಿಗಿದಿರಾಗಿ ನಿಲ್ಲದೆ ಅದೃಶ್ಯನಾಗಿದ್ದು ಆತನನ್ನು ಕೊಲ್ಲಬೇಕಾಯಿತು ಆದರೆ ತಾನು ವಾಲಿಗಿದಿರಾಗಿ ನಿಲ್ಲುವುದರಿಂದ ತನ್ನ ಬಲವೆಲ್ಲವೂ ವಾಲಿಗೆ ಸೇರಿ, ತಾನು ಪರಾಜಿತನಾಗಬೇಕಾಗುವುದೆಂಬ ಅಂಜಿಕೆಯಿಂದ ಹೀಗೆ ನಡೆಸಿದುದಾಗಿ ಎಣಿಸಬಾರದು ಈತನು ಸರ್ವಸ್ವತಂತ್ರನಾಗಿ ಸರ್ವೇಶ್ವರನೆನಿಸಿಕೊಂಡಿರುವುದರಿಂದ, ಬ್ರಹ್ಮಾದಿದೇವತೆಗಳ ವಾಕ್ಯವನ್ನು ವ್ಯರ್ಥವಾಗಿಸುವುದಕ್ಕೂ ಈತನಿಗೆ ಶಕ್ತಿಯುಂಟು ಆದರೆ ಆ ದೇವತೆಗಳ ಮೆಲ್ಮೆಯನ್ನು ಕೋರಿಯೇ ತಾನು ಭೂಲೋಕದಲ್ಲಿ ಮನುಷ್ಯರೂಪದಿಂದವತರಿಸಿ, ಸರ್ವವಿಧದಲ್ಲಿಯೂ ಅವರಿಗೆ ಮೇಲ್ಮೆಯನ್ನುಂಟುಮಾಡಬೇಕೆಂದಿರುವಾಗ, ದೇವತೆಗಳಲ್ಲಿ ಪ್ರಧಾನರಾದ ಬ್ರಹ್ಮೇಂದ್ರರಿಬ್ಬರ ಮಾತನ್ನೇ ಸುಳ್ಳಾಗಿಸಿದರೆ ಮೊದಲೇ ಅವರಿಗೆ ಅವಮಾನವನ್ನುಂಟುಮಾಡಿದಂತಾಗುವುದಲ್ಲವೆ! ಇದೆಲ್ಲವನ್ನೂ ಪ

ತೋರಿದ್ದ ಪಕ್ಷದಲ್ಲಿ,ನಿನಗೆ ತೋರಿದ ಸಮಾಧಾನವನ್ನು ಹೇಳು ನೋಡುವೆನು" ಎಂದನು ಹೀಗೆ ಮಹಾತ್ಮನಾಗಿಯೂ ಇಂದ್ರಪುತ್ರನಾಗಿಯೂ ಇರುವ ವಾಲಿಯು, ಬಾಣಹತಿಯುಂಟಾದ ವೇದನೆಯಿಂದ ಸಂಕಟಪಡುತ್ತ, ರಾಮನನ್ನುಕುರಿತು ಈ ಮಾತುಗಳನ್ನಾಡುತ್ತಿರುವಷ್ಟರಲ್ಲಿಯೇ, ಆಯಾಸದಿಂದ ಬಾಯೊಣಗಿ, ಸೂರ್ಯಸಮಾನನಾದ ಆ ರಾಮನನ್ನೇ ನಟ್ಟಕಣ್ಣಿನಿಂದ ನೋಡುತ್ತ ಸುಮ್ಮನಾದನು ಇಲ್ಲಿಗೆ ಹದಿನೇಳನೆಯಸರ್ಗವು

ರಾಮನು ವಾಲಿಗೆ ತಕ್ಕ ಸಮಾಧಾನಗಳನ್ನು ಹೇಳಿದುದು

ಹೀಗೆ ವಾಲಿಯು ಹತನಾಗಿ ಬಿದ್ದು, ಜ್ಞಾನಾಜ್ಞಾನದಿಂದ ರಾಮನನ್ನು ಕುರಿತು ವಿನಯದೊಡನೆ, ಧರ್ಮಾರ್ಥಸಹಿತವಾಗಿಯೂ, ತನಗೆ ಯುಕ್ತವೆಂದು ತೋರಿದುವಾಗಿಯೂ ಇರುವ ಮಾತಿನಿಂದ, ಮರ್ಮೋದ್ಘಾಟ

ರ್ಯಾಲೋಚಿಸಿಯೇ, ರಾಮನು ವಾಲಿಯನ್ನು ಕೊಲ್ಲುವಕಾಲದಲ್ಲಿ ಅದೃಶ್ಯನಾಗಿರಬೇಕಾಯಿತು ಮುಖ್ಯವಾಗಿ ತನ್ನ ಅವತಾರಕ್ಕೆ ಫಲವಿಲ್ಲದೆ ಹೋಗುವುದೆಂಬುದಕ್ಕಾಗಿ, ವಾಲಿಯೊಡನೆ ಸ್ನೇಹವನ್ನು ಬೆಳೆಸುವುದಕ್ಕಿಲ್ಲದೆ ಹೋಯಿತು ಇದನ್ನನುಸರಿಸಿಯೇ ಕಬಂಧನೂ ಸುಗ್ರೀವನೆನ್ನು ತೋರಿಸಿಬಿಟ್ಟುದರಿಂದ, ಆವಾಲಿಗೆ ವೈರಿಯಾದ ಸುಗ್ರೀವನೊಡನೆ ಸ್ನೇಹವನ್ನು ಮಾಡಬೇಕಾಯಿತು ಆ ಸ್ನೇಹವಾತ್ಸಲ್ಯದಿಂದ ವಾಲಿಯನ್ನು ಕೊಲ್ಲುವುದಾಗಿ ಪ್ರತಿಜ್ಞೆಯನ್ನೂ ಮಾಡಬೇಕಾಯಿತು. ಆ ಪ್ರತಿಜ್ಞೆಗೆ ಭಂಗವು ಬರಬಾರದೆಂಬುದಕ್ಕಾಗಿ ನಿರಪರಾಧಿಯಾಗಿದ್ದರೂ ವಾಲಿಯನ್ನು ಕೊಲ್ಲಬೇಕಾಯಿತು ಬ್ರಹ್ಮೇಂದ್ರಾದಿಗಳ ವಾಕ್ಯವನ್ನು ಪಾಲಿಸುವುದಕ್ಕಾಗಿಯೇ ತಾನು ಅದೃಶ್ಯನಾಗಿಯೂ ನಿಂತು ಆತನನ್ನು ಕೊಲ್ಲಬೇಕಾಯಿತೆಂದೂ ಗ್ರಾಹ್ಯವು ಈ ಕಾರಣಗಳಿಂದಲೂ, ರಾಮನು ಮುಂದೆ ಹೇಳುವ ಇತರಸಮಾಧಾನಗಳಿಂದಲೂ ರಾಮನು ಇಲ್ಲಿ ವಾಲಿಯನ್ನು ಕೊಂದುದು ಯುಕ್ತವೆಂದೇ ತಿಳಿಯಬೇಕು.

ಇವಲ್ಲದೆ ರಾಮನು ವಾಲಿಗಿದಿರಾಗಿ ನಿಲ್ಲದುದಕ್ಕೆ ಮತ್ತೆರಡು ಮುಖ್ಯಕಾರಣಗಳುಂಟು ವೀರಕ್ಷತ್ರಿಯನಾದ ತಾನು ಕಪಿಯೊಡನೆ ಯುದ್ಧಕ್ಕೆ ನಿಲ್ಲವುದು ಅವಮಾನಕರವೆಂಬುದೊಂದು, ಅಥವಾ ಹಾಗೆ ನಿಂತರೂ ವಾಲಿಯು ತನ್ನ ಮಹಿಮೆಯನ್ನು ತಿಳಿದು ತನ್ನಲ್ಲಿ ಶರಣಾಗತನಾದರೆ, ಹಿಂದೆ ಹೇಳಿದಂತೆ ಅವತಾರಫಲವು ಕೆಡುವುದೊಂದು, ಇವೆರಡು ಕಾರಣಗಳಿಂದಲೂ ಮರೆಯಲ್ಲಿರಬೇಕಾಯಿತೆಂದೂ ಗ್ರಾಹ್ಯವು

ಟಕವಾಗಿ ಆಕ್ಷೇಪಿಸಿದನು ಕಾಂತಿಹೀನನಾದ ಸೂರ್ಯನಂತೆಯೂ, ನೀರಿಲ್ಲದ ಮೇಘದಂತೆಯೂ, ಉರಿಯಿಲ್ಲದ ಬೆಂಕಿಯಂತೆಯೂ, ಕಾಂತಿಗುಂದಿ ನೆಲದಮೇಲೆ ಬಿದ್ದು ನಿಶ್ಚೇಷ್ಟನಾಗಿದ್ದರೂ, ವಾಲಿಯು ತನ್ನನ್ನು ಹೀಗೆ ಆಕ್ಷೇಪಿಸುವುದನ್ನು ನೋಡಿ ರಾಮನು, ಧರ್ಮಾರ್ಥಯುಕ್ತವಾಗಿಯೂ, ಗುಣವಿಶಿಷ್ಟವಾಗಿಯೂ ಇರುವ ಮಾತಿನಿಂದ, ಆವಾಲಿಯ ಮನಸ್ಸಿಗೊಪ್ಪುವಂತೆ ಸಮಾಧಾನವನ್ನು ಹೇಳತೊಡಗಿದನು ''ಎಲೈ, ವಾನರರಾಜನೆ! ಮೊದಲು ನೀನು ಧರ್ಮವನ್ನಾಗಲಿ, ಅರ್ಥವನ್ನಾಗಲಿ, ಕಾಮವನ್ನಾಗಲಿ, ಇತರಲೌಕಿಕಾಚಾರಗಳನ್ನಾಗಲಿ ತಿಳಿದುಕೊಳ್ಳದೆ, ಇವೆಲ್ಲಕ್ಕೂ ವಿರುದ್ಧವಾಗಿ ನಡೆಯುತ್ತಿರುವವನಾದರೂ, ಅಜ್ಞಾನದಿಂದ ನನ್ನಲ್ಲಿ ದೋಷವನ್ನಾರೋಪಿಸಿ, ನಿರ್ದೋಷಿಯಾದ ನನ್ನನ್ನು ಹೀಗೇಕ ನಿಂದಿಸುವೆಸೀನು? ಕೇವಲಚಪಲಬುದ್ಧಿಯುಳ್ಳವನು ಬುದ್ಧಿವಂತರಾಗಿಯೂ, ವೃದ್ಧರಾಗಿಯೂ, ಪೂಜ್ಯರಾಗಿಯೂ ಇರುವ ಆಚಾರ್ಯರ ಮುಖದಿಂದ ನೀನು ಈ ಧರ್ಮಾರ್ಥಕಾಮಾದಿಗಳ ಸ್ವರೂಪವೊಂದನ್ನೂ ಚೆನ್ನಾಗಿ ತಿಳಿದುಕೊಳ್ಳದೆ, ನಿನ್ನ ಕಪಿಸ್ವಭಾವಕ್ಕೆ ತಕ್ಕ ಚಾಪಲ್ಯದಿಂದ ನನ್ನನ್ನು ಕುರಿತು ಹೀಗೆ ವ್ಯರ್ಥವಾದ ಮಾತುಗಳನ್ನಾಡುತ್ತಿರುವೆ ನಿನ್ನ ಆಕ್ಷೇಪಗಳಿಗೆ ಸಮಾಧಾನವನ್ನು ಹೇಳುವೆನು ಕೇಳು ಪರ್ವತಗಳಿಂದಲೂ, ಕಾಡುಗಳಿಂದಲೂ, ಮಹಾರಣ್ಯಗಳಿಂದಲೂ ತುಂಬಿದ ಈ ಭೂಮಂಡಲವೆಲ್ಲವೂ ಇಕ್ಷ್ವಾಕುವಂಶದ ರಾಜರಿಗೆ ಅಧೀನವಾಗಿರುವುದು ಇಲ್ಲಿನ ಮೃಗಗಳನ್ನಾಗಲಿ, ಪಕ್ಷಿಗಳನ್ನಾಗಲಿ, ಮನುಷ್ಯರನ್ನಾಗಲಿ, ನಿಗ್ರಹಿಸುವುದಕ್ಕೂ, ಅನುಗ್ರಹಿಸುವುದಕ್ಕೂ ನಮ್ಮ ಇಕ್ಷ್ವಾಕುವಂಶದವರಿಗೆ ಪೂರ್ಣಾಧಿಕಾರವುಂಟು ಆ ವಂಶದಲ್ಲಿ ಹುಟ್ಟಿ, ಧರ್ಮಾತ್ಮನಾಗಿಯೂ, ಸತ್ಯಸಂಧನಾಗಿಯೂ, ನಿಷ್ಕಪಟನಾಗಿಯೂ ಇರುವ ಭರತನು ಈಗ ಈ ಭೂಪ್ರದೇಶವೆಲ್ಲವನ್ನೂ ಪಾಲಿಸುತ್ತಿರುವನು. ಆತನು ಧರ್ಮಾರ್ಥಕಾಮಗಳ ತತ್ವವನ್ನು ಚೆನ್ನಾಗಿ ಬಲ್ಲನು ದುಷ್ಟರನ್ನು ನಿಗ್ರಹಿಸಿ, ಸಾಧುಗಳನ್ನನುಗ್ರಹಿಸಿ, ಧರ್ಮವನ್ನು ಬಿಡದೆ ಭೂಪಿಯನ್ನು ರಕ್ಷಿಸುತ್ತಿರುವನು ಯಾವನಲ್ಲಿ ನಯವಿನಯಗಳೆಂಬಿವೆರಡೂ ಸ್ಥಿರವಾಗಿ ನಿಂತಿರುವವೋ, ಸತ್ಯವೂ ಶಾಸ್ತ್ರವಿಹಿತವಾದ ಪರಾಕ್ರಮವೂ ಎಡೆಬಿಡದೆ ನೆಲೆಗೊಂಡಿರುವುವೋ, ಯಾವನು ದೇಶಕಾಲ

ಸ್ಥಿತಿಗಳನ್ನು ಚೆನ್ನಾಗಿ ಬಲ್ಲನೋ ಅಂತಹ ಭರತನೇ ಈಗ ಈ ಭೂಮಿಗೆ ರಾಜನಾಗಿರುವನು ನಾವೂ ಇನ್ನು ಬೇರೆಕೆಲವು ರಾಜರೂ ಧರ್ಮಾಭಿವೃದ್ಧಿಯನ್ನು ಕೋರಿ * ಆ ಭರತನ ರಾಜಧರ್ಮವನ್ನನುಸರಿಸಿ, ಅದಕ್ಕಧೀನರಾಗಿಯೇ ಈ ಭೂಮಿಯೆಲ್ಲವನ್ನೂ ಸುತ್ತುತ್ತಿರುವೆವು ಧರ್ಮಪರಾಯಣನಾಗಿ ರಾಜಸಿಂಹನೆನಿಸಿಕೊಂಡಿರುವ ಆ ಭರತನು, ಈ ಸಮಸ್ತ ಭೂಮಂಡಲವನ್ನೂ ಧರ್ಮಕ್ಕೆ ಸ್ವಲ್ಪಮಾತ್ರವೂ ಲೋಪವು ಜಾರದಂತ ಪರಿಪಾಲಿಸುತ್ತಿರುವನು ಆತನ ರಾಜ್ಯಭಾರದಲ್ಲಿ ಯಾವಕಡೆಯಲ್ಲಿಯೂ ಧರ್ಮಕ್ಕ ಹಾನಿಯುಂಟಾಗಲಾರದು ಅದನ್ನು ನೀವು ನಡೆದವರು, ತಪ್ಪದೆ ಶಿಕ್ಷೆಗೆ ಗುರಿಯಾಗುವರು ಆತನಿಂದ ಆಜ್ಞಾಪ್ತರಾದ ನಾವೂ, ಸರ್ವೋತ್ತಮವಾದ ನಮ್ಮ ರಾಜಧರ್ಮವನ್ನವಲಂಬಿಸಿ, ಆತನ ಆಜ್ಞೆಯನ್ನೇ ಮುಂಡಿಟ್ಟುಕೊಂಡು ಅಲ್ಲಲ್ಲಿ ಸುತ್ತುತ್ತ, ಧರ್ಮವನ್ನು ತಪ್ಪಿನಡೆದವರನ್ನು ಯಥಾವಿಧಿಯಾಗಿ ಶಿಕ್ಷಿಸುತ್ತಿರುವೆವು ಎಲೆ ವಾಲಿ ! ನೀನಾದರೋ ಧರ್ಮದಲ್ಲಿ ಸ್ವಲ್ಪವೂ ದೃಷ್ಟಿಯಿಟ್ಟವನಲ್ಲ ನಿನ್ನ ಕಾರ್ಯಗಳಿಂದಲೇ ನೀನು ಲೋಕನಿಂದಿತನೆಂಬುದು ಸ್ಪಷ್ಟವಾಗುವುದು ನಿನಗೆ ಕಾಮವ್ಯಾಪಾರವೇ ಮುಖ್ಯವು ನೀನು ಯಾವಾಗಲೂ ರಾಜಯೋಗ್ಯವಾದ ನಡತೆಯಲ್ಲಿ ಇದ್ದವನಲ್ಲ ನಿನಗೆ ಧರ್ಮಸೂಕ್ಷ್ಮ

---

* ಇಲ್ಲಿ "ತಸ್ಯಧರ್ಮಕೃತಾದೇಶಾಃ" ಎಂದು ಮೂಲವು. "ಕನಿಷ್ಠನಾದ ಭರತನು ತನ್ನಣ್ಣನಾದ ರಾಮನಿಗೆ ನಿಯೋಗಿಸುವುದು ಹೇಗೆ?" ಎಂದರೆ, ಇಲ್ಲಿ ಧರ್ಮವೆಂದರೆ ರಾಜಧರ್ಮವೆಂದು ಗ್ರಹಿಸಬೇಕು ಭರತನು ತಾನಾಗಿ ಆಜ್ಞೆಮಾಡದಿದ್ದರೂ,ಅವನ ರಾಜಧರ್ಮವೇ ರಾಮನಿಗೆ ಆಜ್ಞಾಪಿಸುತ್ತಿರುವುದೆಂದು ಭಾವವು ದುಷ್ಟನಿಗ್ರಹಶಿಷ್ಟಪರಿಪಾಲನಗಳೆರಡೂ ಪ್ರಧಾನವಾದ ರಾಜಧರ್ಮವನಿಸುವುದರಿಂದ, ಈ ರಾಜಧರ್ಮಕ್ಕೆ ಕಟ್ಟುಬಿದ್ದೇ ತಾನು ನಡೆಯುತ್ತಿರುವುದಾಗಿ ರಾಮನ ಅಭಿಪ್ರಾಯವು ಅಥವಾ ಇಲ್ಲಿ "ತಸ್ಯಧರ್ಮ ಕೃತಾದೇಶಾ" ಎಂಬುದಕ್ಕೆ ರಾಮನು ರಾಜಧರ್ಮವನ್ನನುಸರಿಸಿ ಭರತನಿಗೆ ತಾನೇ ಆಜ್ಞೆಮಾಡಿರುವುದಾಗಿಯೂ ಗ್ರಹಿಸಬಹುದು ಹಿಂದೆ ಅಯೋಧ್ಯಾಕಾಂಡದ ನೂರೇಳನೆಯ ಸರ್ಗದಲ್ಲಿ, ರಾಜ್ಯಭಾರವನ್ನೆಂಗೀಕರಿಸದೆ ಕಾಡಿಗೆ ಬಂದ ಭರತನನ್ನು ಕುರಿತು ರಾಮನು "ತ್ವಂ ರಾಜಾ ಭರತ ಭವ ಸ್ವಯಂ ನರಾಣಾಂ ವನ್ಯಾನಾಮಹಮಪಿ ರಾಜರಾಜ್ಮೃಗಾಣಾಂ" ಎಂದು "ನಿಯಮಿಸಿರುವುದರಿಂದ, ಆ ವಾಕ್ಯವನ್ನನುಸರಿಸಿಯೇ ಈಗ ತಾನೂ ನಡೆಸುತ್ತಿರುವುದಾಗಿ ತಿಳಿಯಬೇಕು

ವನ್ನಾದರೂ ತಿಳಿಸುವೆನು ಕೇಳು ಹೆತ್ತತಂದೆಯನ್ನೂ, ಅಣ್ಣನನ್ನೂ, ವಿದ್ಯೆ ಹೇಳಿದ ಗುರುವನ್ನೂ, ಈ ಮೂವರನ್ನೂ ಧರ್ಮಮಾರ್ಗನಿರತರಾದವರು ತಂದೆಯಂತೆಯೇ ಭಾವಿಸಬೇಕು ಹಾಗೆಯೇ ಹಿರಿಯರೂಕೂಡ ಧರ್ಮವನ್ನು ತಪ್ಪದೆ ನಡೆದುಕೊಳ್ಳುವರಾದಪಕ್ಷದಲ್ಲಿ, ಹೊಟ್ಟೆಯಲ್ಲಿ ಹುಟ್ಟಿದ ಮಗನನ್ನೂ, ತಮ್ಮನನ್ನೂ, ಗುಣವಂತನಾದ ಶಿಷ್ಯನನ್ನೂ, ಔರಸಪುತ್ರರಂತೆಯೇ ಭಾವಿಸಬೇಕು ಧರ್ಮವನ್ನು ಮೀರಿ ನಡೆಯುವವರಿಗೆ ಈ ಬುದ್ಧಿಯು ಹುಟ್ಟದು ಎಲ್ಲೈ ವಾನರೇಂದ್ರನೆ! ಧರ್ಮಸೂಕ್ಷ್ಮವೆಂಬುದು ಸುಲಭವಾಗಿ ಇಂದ್ರಿಯಗಳಿಗೆ ಗೋಚರಿಸತಕ್ಕುದಲ್ಲ ಧೀಮಂತರಾದ ಸತ್ಪುರುಷರಿಗೂ ಕೂಡ ಅದನ್ನು ತಿಳಿಯುವುದು ಸಾಧ್ಯವಲ್ಲ ಇನ್ನು ನಿನ್ನಂತಹ ಪ್ರಾಕೃತರಿಗೆ ಅದು ಹೇಗೆ ತಿಳಿದೀತು? ಜನರು ನಡೆಸತಕ್ಕ ಧರ್ಮಾಧರ್ಮಗಳೆಲ್ಲವೂ ಸಮಸ್ತಭೂತಗಳ ಹೃದಯದಲ್ಲಿರುವ * ಅಂತರ್ಯಾಮಿಯೊಬ್ಬನಿಗೆ ಮಾತ್ರವೇ ತಿಳಿಯುವುದು. ಆ ಪರಮಾತ್ಮನೊಬ್ಬನೇ ಶುಭಾಶುಭಗಳಿಗೆ ಕಾರಣಗಳಾದ ಧರ್ಮಾಧರ್ಮಗಳ ಸೂಕ್ಷ್ಮವನ್ನು ತಿಳಿಯಬಲ್ಲನೇ ಹೊರತು ಇತರರಿಂದ ತಿಳಿಯಲಸಾಧ್ಯವು ನೀನೋ ಕೇವಲ ಚಪಲಸ್ವಭಾವವುಳ್ಳವನು ಹುಟ್ಟುಕುರುಡನು ಬೇರೆಕೆಲವು ಹುಟ್ಟುಕುರುಡರೊಡನೆ ಸೇರಿ ಮಂತ್ರಾಲೋಚನೆಯನ್ನು ಮಾಡುವಂತೆ, ನೀನು ನಿನ್ನಂತೆಯೇ ಚಪಲಬುದ್ಧಿಯುಳ್ಳ ಇತರವಾನರರೊಡನೆ ಕಲೆತು ಎಷ್ಟಾಲೋಚಿಸಿದರೇನು? ನಿನಗೆ ತಿಳುವಳಿಕೆಯುಂಟಾಗದು ಎಲವಾಲಿ! ಮಗನೂ ತಮ್ಮನೂ, ಶಿಷ್ಯನೂ ಪುತ್ರಪ್ರಾಯರೆಂಬ ನೀತಿಯನ್ನು ನಾನು ಮೊದಲು ನಿನಗೆ ಹೇಳಿದೆನಲ್ಲವೆ? ಆಮಾತಿನಃಅಭಿಪ್ರಾಯವನ್ನೇ ಇನ್ನೂ ಸ್ಪಷ್ಟವಾಗಿ ತಿಳಿಸುವೆನು ಕೇಳು ಆಗ ನಿನ್ನ ದೋಷವು ನಿನಗೆ ಚನ್ನಾಗಿ ತಿಳಿಯಬಹುದು ಅದೊಂದನ್ನೂ ಪರ್ಯಾಲೋಚಿಸದೆ, ಕೇವಲ ರೋಷದಿಂದ ಹೀಗೆ ನನ್ನನ್ನು ನಿಂದಿಸುವುದು ನಿನಗೆ ಎಷ್ಟುಮಾತ್ರವೂ ಉಚಿತವಲ್ಲ ನಿನ್ನನ್ನು ಕೊಂದುದಕ್ಕೆ ಕಾರಣವೇ ಬೇರೆ! ನೀನು ಸನಾತನಧರ್ಮವನ್ನು ಬಿಟ್ಟು ನಿನ್ನ ತಮ್ಮನಾದ ಸುಗ್ರೀವನ

---

* ಅಂತಹ ಪರಮಾತ್ಮನು ತಾನೇ ಆಗಿರುವುದರಿಂದ, ತನಗೊಬ್ಬನಿಗೆಹೊರತು ಇತರರಿಗೆ ಆ ಧರ್ಮಾಧರ್ಮಸೂಕ್ಷ್ಮಗಳು ತಿಳಿಯಲಾರವೆಂದು ಭಾವವು.

ಭಾರ್ಯೆಯೊಡನೆ ರಮಿಸುತ್ತಿರುವೆ ಈ ಪಾಪಕೃತ್ಯವನ್ನು ನೋಡಿ ಸಹಿಸ
ಲಾರದೆಯೇ ನಾನು ನಿನ್ನನ್ನು ಕೊಂದೆನು ಸುಗ್ರೀವನು ನಿನಗೆ ತ
ಮ್ಮನಾದುದರಿಂದ ಪುತ್ರಪ್ರಾಯನಾದನು ಅದರಿಂದ ಆತನ ಭಾರ್ಯೆಯೂ
ನಿನಗೆ ಸೊಸೆಯಾದಳಲ್ಲವೆ? ಮಹಾತ್ಮನಾದ ಸುಗ್ರೀವನು * ಪ್ರಾಣಸಹಿತ

---

* ಇಲ್ಲಿ "ಅಸ್ಯ ತ್ವಂಧರಮಾಣಸ್ಯ ಸುಗ್ರೀವಸ್ಯ ಮಹಾತ್ಮನಃ।ರುಮಾಯಾಂ ವರ್ತ
ಸೇ ಕಾಮಾತ್ಸುಷಾಯಾಂ ಪಾಪಕರ್ಮಕೃತ್" ಎಂದುಮೂಲವು ಇಲ್ಲಿ "ವಾಲಿಯು
ತನಗೆ ಸೊಸೆಯಂತಿದ್ದ ರುಮೆಯನ್ನು ಪರಿಗ್ರಹಿಸಿದುದಕ್ಕಾಗಿ ರಾಮನು ಆತನನ್ನು
ದೋಷಿಯೆಂದು ನಿಂದಿಸುವನೆಲ್ಲವೆ? ಸುಗ್ರೀವನು ತನಗ ತಾಯಿಯಂತಿರುವ ತಾರೆಯೊ
ಡನೆಯೇ ರಮಿಸಿದುದಾಗಿ ತಿಳಿದು ಬರು ದು.ಆಗ ಸುಗ್ರೀವನು ಇನ್ನೂ ಹೆಚ್ಚು ದೋ
ಷಿಯಾಗಲಿಲ್ಲವೆ?" ಎಂಬ ಶಂಕೆಯುಂಟಾಗಬಹುದು ಇದಕ್ಕಾಗಿಯೇ ಇಲ್ಲಿ (ಧರಮಾಣ
ಸ್ಯ) ಎಂಬ ವಿಶೇಷಣವು ಉಪಯೋಗಿಸಲ್ಪಟ್ಟಿರುವುದು. ಇದರಿಂದ, ಸಹೋದರನು ಸ
ತ್ತಮೇಲೆ ಅವನ ಭಾರ್ಯೆಯನ್ನು ಬೇರೊಬ್ಬನು ಸ್ವೀಕರಿಸುವುದರಿಂದ ದೋಷನಲ್ಲವೆಂ
ಬುದು ಈ ವಾಲಿಸುಗ್ರೀವರ ಕುಲಧರ್ಮವೆಂದೇ ಸೂಚಿತವಾಗುವುದು ಆದರೆ, ಮಾ
ಯಾವಿಯನ್ನು ಕೊಲ್ಲುವುದಕ್ಕಾಗಿ ವಾಲಿಯು ಬಿಲವನ್ನು ಪ್ರವೇಶಿಸಿದಾಗ, ಅವನು
ಮೃತಹೊಂದಿದನೆಂಬ ಅಭಿಪ್ರಾಯದಿಂದ ಸುಗ್ರೀವನು ಆ ವಾಲಿಯ ಭಾರ್ಯೆಯಾದ ತಾ
ರೆಯನ್ನು ಪರಿಗ್ರಹಿಸಿಬಿಟ್ಟನಲ್ಲವೆ? ವಾಲಿಯಿದ್ದಾಗಲೇ ಸುಗ್ರೀವನು ತಾರೆಯನ್ನು ಪರಿ
ಗ್ರಹಿಸಿದನೆಂಬ ವಿಷಯವು, ಮುಂದೆ ಅಂಗದನು ಪ್ರಾಯೋಪವೇಶಮಾಡುವ ಕಾಲದಲ್ಲಿ
ಹೇಳಿದ ವಾಕ್ಯದಿಂದ ಚೆನ್ನಾಗಿ ವ್ಯಕ್ತವಾಗುವುದು ಏನೆಂದರೆ — "ಭ್ರಾತುರ್ಜ್ಯೇಷ್ಠ
ಸ್ಯಯೋಭಾರ್ಯಾಂ ಜೀವತೋಮಹಿಷೀಂಪ್ರಿಯಾಂ।ಧರ್ಮೇಣ ಮಾತರಂ ಯಸ್ತು ಸ್ವೀಕ
ರೋತಿ ಜುಗುಪ್ಸಿತಃ॥" ಎಂದು ಹೇಳಿದು ಖಿಸುತ್ತಿರುವನು. ಅದಕ್ಕಾದರೂ ರಾಮನು
ಅವನನ್ನು ಶಿಕ್ಷಿಸಬೇಡವೆ?" ಎಂದರೆ ಆಗ ವಾಲಿಯು ನಿಜವಾಗಿ ಮೃತನಲ್ಲದಿದ್ದರೂ,
ಸುಗ್ರೀವನಿಗೆ ಆ ಭ್ರಾಂತಿಯಿದ್ದುದರಿಂದ ಅದೂ ದೋಷಾಸ್ಪದವಲ್ಲವೆಂದುದು ರಾಮನ
ಆಶಯವು. ಅಲ್ಲಿಯೂ "ಜೀವತ" ಎಂಬ ಪದದಿಂದ ಜೀವಂತನಾದ ಸಹೋದರನ ಪ
ತ್ನಿಯನ್ನು ಪರಿಗ್ರಹಿಸುವುದುಮಾತ್ರವೇ ದೋಷವೆಂದು ವ್ಯಕ್ತವಾಗುವುದು

ಆದರೆ ಇಲ್ಲಿ ಮತ್ತೆ ಕೆಲವರು ಬೇರೆವಿಧವಾಗಿ ಉಪಪಾದಿಸುವರು ಹೇಗೆಂದರೆ:—
"ಸುಷಾಪ್ರಾಯಳಾದ ರುಮೆಯನ್ನು ವಾಲಿಯು ಪರಿಗ್ರಹಿಸಿದುದರಿಂದ, ವಾಲಿಯು
ದೋಷಿಯೆಂಬುದೇನೋ ನಿಜವು ಸುಗ್ರೀವನು ಮಾತೃಪ್ರಾಯಳಾದ ತಾರೆಯನ್ನು ಪ
ರಿಗ್ರಹಿಸಿದುದು ಇನ್ನೂ ಹೆಚ್ಚು ದೋಷಾಸ್ಪದವು ಇದನ್ನು ತಿಳಿದೇರಾಮನು,ವಾಲಿಯು

ಸಂದೇಹವಿಲ್ಲ ದುಃಖವನ್ನು ಬಿಡು! *ಈಮನ್ಮಥವಿಕಾರವನ್ನೂ ನಿಗ್ರಹಿಸಿಡು! ನೀನಾದರೋ ಮಹಾಮಹಿಮೆಯುಳ್ಳವನು! ಅಸಾಧಾರಣವಾದ ಬುದ್ಧಿಯುಳ್ಳವನು ಹೀಗಿರುವ ನಿನ್ನ ಸ್ಥಿತಿಯನ್ನೇ ನೀನುಮರೆತುಹೋಗಿರುವೆಯಲ್ಲಾ!" ಎಂದು ನಾನಾವಿಧವಾಗಿ ಸಮಾಧಾನಗಳನ್ನು ಹೇಳಿದನು ರಾಮನು ವಿಶೇಷ ಶೋಕಾಕುಲನಾಗಿದ್ದರೂ ಲಕ್ಷ್ಮಣನ ಹಿತವಾದಗಳನ್ನು ಕೇಳಿದೊಡನೆಮನಸ್ಸಿನಲ್ಲಿದ್ದ †ಶೋಕಮೋಹಗಳನ್ನು ಬಿಟ್ಟು ಧೈರ್ಯವನ್ನು ತಂದುಕೊಂಡನು. ಅಚಿಂತ್ಯವಿಕ್ರಮನಾದ ರಾಮನು, ಹೀಗೆ ಸ್ಥಿರಮನಸ್ಸುಳ್ಳವನಾಗಿ ಮುಂದೆ ನಡೆದು, ಗಾಳಿಯಿಂದ ತೂಗಾಡುತ್ತಿರುವ ವೃಕ್ಷಗಳುಳ್ಳುದಾಗಿಯೂ, ಅತಿ ರಮಣೀಯವಾಗಿಯೂ ಇರುವ ‡ ಪಂಪಾಸರಸ್ಸನ್ನೂ ಪಾಟಿಹೋದನು ಹೀಗೆ ಮಹಾತ್ಮನಾದ ರಾಮನು ಲಕ್ಷ್ಮಣಸಹಿತನಾಗಿ, ಅಲ್ಲಲ್ಲಿ ಕಾಣುವ ಸಮಸ್ತವನವನ್ನೂ, ಗಿರಿನದಿಗಳನ್ನೂ, ಪರ್ವತಗುಹೆಗಳನ್ನೂ ಸುತ್ತಿಸುತ್ತಿ ನೋಡುತ್ತ, ಸೀತೆಯನ್ನು ಕಾಣದೆ ಮನಸ್ಸಿನಲ್ಲಿ ಕೊರಗುತ್ತ,ದುಃಖಿತನಾಗಿ ಮುಂದೆ ಹೊರಟನು ಮದದಾನೆಯಂತೆ ಗಂಭೀರವಾದ ನಡೆಯುಳ್ಳ ಮಹಾತ್ಮನಾದ ಲಕ್ಷ್ಮಣನಾದರೋ,ಹೀಗೆ ಏಕಾಗ್ರಚಿತ್ತನಾಗಿ ಸೀತೆಯನ್ನು ಹುಡುಕುತ್ತ ಮುಂದೆಮುಂದೆ ನಡೆಯುತ್ತಿರುವ ರಘುವಂಶೋತ್ತಮನಾದ ಆ ರಾಮನನ್ನು ಬಹಳ ಎಚ್ಚರಿಕೆಯಿಂದ ನೋಡಿಕೊಳ್ಳುತ್ತ, ಆಗಾಗ ಅವನಿಗೆ ರಾಜನೀತಿಗಳೇ ಮೊದಲಾದ ಧರ್ಮಗಳನ್ನು ತಿಳಿಸಿ ಸಮಾಧಾನಪಡಿಸುತ್ತ,

---

* ಇಲ್ಲಿ "ತ್ಯಜ್ಯತಾಂ ಕಾಮವೃತ್ತತ್ವಮ್" ಎಂದು ಮೂಲವು ಇದರಿಂದ ಲಕ್ಷ್ಮಣನು ರಾಮನನ್ನು ಕುರಿತು "ನೀನೇಕೆ ಹೀಗೆ ವಾತ್ಸಲ್ಯದಿಂದ ತಪಿಸುವೆ? "ಸಾಧುಕಾರೀ ಸಾಧುರ್ಭವತಿ, ಪಾಪಕಾರೀ ಪಾಪೀಭವತಿ" ಎಂಬುದಾಗಿ ನೀನೇ ಸಂಕಲ್ಪಿಸಿರುವೆಯೆಲ್ಲವೆ? ಈ ಶಾಸ್ತ್ರಮರ್ಯಾದೆಯನ್ನು ಸ್ಮರಿಸಿ ಸುಮ್ಮನಿರದೆ, ಈ ಯಥೇಚ್ಛಪ್ರವರ್ತನವೇಕೆಂದು ಜ್ಞಾಪಿಸಿದುದಾಗಿ ವಿಶೇಷಾರ್ಥವು

† ಇಲ್ಲಿ ಶೋಕಮೋಹಶಬ್ದಗಳಿಂದ ಭಗವಂತನ ದಯಾವಾತ್ಸಲ್ಯಗಳೆಂದು ಗ್ರಾಹ್ಯವು ಅವೆರಡನ್ನೂ ತ್ಯಜಿಸುವುದೆಂದರೆ ಶಾಸ್ತ್ರಮರ್ಯಾದೆಯನ್ನನುಸರಿಸಿ ಚೇತನರನ್ನು ರಕ್ಷಿಸುವುದಕ್ಕೆ ಸಂಕಲ್ಪಿಸಿದೆಯೆಂದಾಗಿ ಭಾವವು

‡ ಇದರಿಂದ ಭಗವಂತನು ವಿರಜೆಯನ್ನೂ ದಾಟಿ ಸಂಸಾರಿಮಂಡಲಕ್ಕಭಿಮುಖನಾಗಿರುವನೆಂದು ಸೂಚಿತವು.

ಬಂದಿರುವೆವು ಎಲೈ ಕಪಿರಾಜನೆ!" ನೀನು * "ಸೀತಾನ್ವೇಷಣದ ವಿಷಯದಲ್ಲಿ ನನ್ನ ಸಹಾಯವನ್ನೇ ಕೇಳಬಹುದಾಗಿತ್ತು" ಎಂದು ಹೇಳಿದೆಯೆಲ್ಲವೆ? ನಾನು ನಿನ್ನ ತಮ್ಮನಾದ ಸುಗ್ರೀವನೊಡನೆ ಮಾಡಿದ ಸಖ್ಯವು, ಲಕ್ಷ್ಮಣನಿಗೂ ನನಗೂ ಇರುವ ಮೈತ್ರಿಯಂತೆ ಅತಿದೃಢವಾಗಿರುವುದು ಅದನ್ನು ಯಾವವಿಧದಿಂದಲೂ ತಪ್ಪಿಸಿಕೊಳ್ಳುವುದು ಸಾಧ್ಯವಲ್ಲ ನಾವಿಬ್ಬರೂ ಮಾಡಿರುವ "ಈ ಸಖ್ಯವು ಪರಸ್ಪರರಾಜ್ಯಲಾಭಾರ್ಥವಾಗಿಯೂ, ಪತ್ನೀಲಾಭಾರ್ಥವಾಗಿಯೂ ಏರ್ಪಟ್ಟಿರುವುದು ಆ ಸುಗ್ರೀವನೂ ಮನಃಪೂರ್ವಕವಾಗಿ ನನ್ನ ಶ್ರೇಯಸ್ಸಿನಲ್ಲಿಯೇ ಆಕ್ಕರೆಯುಳ್ಳವನಾಗಿರುವನು ನಾನೂ ಅನೇಕ ವಾನರರಮುಂದೆ ನಿನ್ನನ್ನು ಕೊಲ್ಲುವುದಾಗಿ ಅವನಿಗೆ ಪ್ರತಿಜ್ಞೆಮಾಡಿಕೊಟ್ಟು ಬಿಟ್ಟೆನು ಇದುವರೆಗೆ ನಾನು ಎಂದಿಗೂ ಮಾತಿಗೆ ತಪ್ಪಿದವನಲ್ಲ ಇದರಮೇಲ ನನಗೆ ಅಷ್ಟುಪ್ರಾಣಪ್ರಿಯನಾದ ಆ ಸುಗ್ರೀವನ ಪತ್ನಿಯನ್ನೇ ವಶಪಡಿಸಿಕೊಂಡಿರುವ ನಿನ್ನನ್ನು ನಾನು ಹೇಗೆ ಸುಮ್ಮನೆ ಬಿಡಲಿ ಆದುದರಿಂದ ನಾನು ಧರ್ಮಯುಕ್ತವಾಗಿಯೇ ಈ ಕಾರ್ಯವನ್ನು ನಡೆಸಿರುವನು ಇದುವರೆಗೆ ಹೇಳಿದ ಕಾರಣಗಳೆಲ್ಲವನ್ನೂ ನೀನು ಪರ್ಯಾಲೋಚಿಸಿ ನೋಡು ಸಹೋದರಭಾರ್ಯೆಯನ್ನಪಹರಿಸಿದ ನಿನಗೆ ಈಗ ನಾನು ಮಾಡಿರುವ ಶಿಕ್ಷೆಯು †ಶಾಸ್ತ್ರವಿಹಿತವಲ್ಲದೆ ಬೇರೆಯಲ್ಲ ಧರ್ಮದೃಷ್ಟಿಯಿಂದ ಯೋಚಿಸಿದ ಪಕ್ಷದಲ್ಲಿ ನೀನೂ ಇದನ್ನು ಯುಕ್ತವೆಂದೇ ಗ್ರಹಿಸಬೇಕಾಗುವುದು ಎಷ್ಟು ವಿಧದಲ್ಲಿ ನೋಡಿದರೂ ಇದು ಅಧರ್ಮವಲ್ಲ ಧರ್ಮವನ್ನೇ ಮುಖ್ಯವಾಗಿ ಅನುವರ್ತಿಸುತ್ತಿರುವ ಯಾವನಾದರೂ, ತನ್ನ ಮಿತ್ರನ ಶತ್ರುವನ್ನು ತಪ್ಪದೆ ಶಿಕ್ಷಿಸಬೇಕು ನೀನು ಧರ್ಮಸೂಕ್ಷ್ಮದಲ್ಲಿ ಜಾಣನಾಗಿ ದೃಷ್ಟಿಯಿಟ್ಟು ನೋಡಿ

---

* ಇದುವರೆಗೆ ನಿರಪರಾಧಿಯೆನ್ನು ಕೊಂದನೆಂಬ ದೋಷಾರೋಪಣೆಗೆ ಸಮಾಧಾನವನ್ನು ಹೇಳಿದುದಾಯಿತು ಇನ್ನುಮುಂದೆ ವಾಲಿಯು "ನನ್ನನ್ನೇ ಸೀತಾನ್ವೇಷಣಾರ್ಥವಾಗಿ ಕೇಳಿರಬಾರದೆ" ಎಂದು ಕೇಳಿದುದಕ್ಕೆ ಪರಿಹಾರವನ್ನು ಹೇಳುವನು

† ವೈರಿಗಳನ್ನು ಕೊಲ್ಲುವಾಗಮಾತ್ರ ಇದಿರಿಗೆ ನಿಂತು ಧರ್ಮಯುದ್ಧದಿಂದ ಕೊಲ್ಲಬೇಕೇ ಹೊರತು, ಅಪರಾಧಿಗಳನ್ನು ಕೊಲ್ಲುವಾಗ ಇದಿರಾಗಿ ನಿಂತರೂ ಮರೆಯಲ್ಲಿದ್ದರೂ ದೋಷವಿಲ್ಲವೆಂದು ಭಾವವು.

ದಪಕ್ಷದಲ್ಲಿ, ನೀನು ಮಾಡಿರುವ ಈಗಿನ ದುಷ್ಕೃತ್ಯಕ್ಕೆ ಈವಿಧವಾದ ನಿಗ್ರಹವನ್ನು ಹೊಂದುವುದೇ ತಕ್ಕ ಪ್ರಾಯಶ್ಚಿತ್ತವೆಂದು ಒಪ್ಪಬೇಕಾಗುವುದು ಎಲೆ ವಾಲಿ! ಪೂರ್ವದಲ್ಲಿ ಮನುವು ಸದಾಚಾರವನ್ನು ಕುರಿತು ಎರಡುಶ್ಲೋಕಗಳನ್ನು ನಿರೂಪಿಸಿರುವರು ಆ ನೀತಿಶ್ಲೋಕಗಳ ಮಹಾತ್ಮರೆಲ್ಲರೂ ಪರಿಗ್ರಹಿಸಿರುವರು ಆ ನೀತಿಶ್ಲೋಕಗಳನ್ನನುಸರಿಸಿಯೇ ಈಗ ನಾನೂ ನಡೆಸಿರುವೆನು ಆ ಶ್ಲೋಕಾರ್ಥವನ್ನೂ ಹೇಳುವೆನು ಕೇಳು ''ಪಾಪಗಳನ್ನು ನಡೆಸಿದವರು ರಾಜರಿಂದ ಆಯಾಪಾಪಗಳಿಗೆ ತಕ್ಕಂತೆ ಶಿಕ್ಷಿತರಾದ ಪಕ್ಷದಲ್ಲಿ, ಅದರಿಂದ ಅವರ ಪಾಪವೆಲ್ಲವೂ ನೀಗುವುದಲ್ಲದೆ ಅವರು ಪುಣ್ಯವಂತರಾಗಿ ಸದ್ಗತಿಯನ್ನೂ ಹೊಂದುವರು ರಾಜನು ಕಳ್ಳನನ್ನು ಶಿಕ್ಷಿಸಿದರೂ,ಶಿಕ್ಷಿಸದೆ ಮನ್ನಿಸಿಬಿಟ್ಟರೂ, ಅವನ ಚೌರ್ಯದಿಂದುಂಟಾದ ಪಾಪವು ನೀಗಿ ಹೋಗುವುದು ಅದರೆ ರಾಜನು ಅಂತವನನ್ನು ಶಿಕ್ಷಿಸದೆ ಮನ್ನಿಸಿಬಿಟ್ಟ ಪಕ್ಷದಲ್ಲಿ, ಅವನ ಚೌರ್ಯದಿಂದುಂಟಾದ ಪಾಪಕ್ಕೆ ರಾಜನೇ ಭಾಗಿಯಾಗುವನು '' ಎಂಬುದೇ ಆ ಶ್ಲೋಕಾರ್ಥವು ಇವೆರಡುಶ್ಲೋಕಗಳೂ ಮನುವಿನಿಂದ ಹೇಳಲ್ಪಟ್ಟಿವೆ ನೀನು ಈಗ ನಡೆಸಿದಂತೆಯೇ ಪೂರ್ವದಲ್ಲಿ ಒಬ್ಬ ಶ್ರಮಣನು ಒಂದು ಪಾಪಕೃತ್ಯವನ್ನು ನಡೆಸಿದನು ಆಗ ನಮ್ಮವಂಶದಲ್ಲಿಯೇ ಪ್ರಸಿದ್ಧನಾಗಿದ್ದ ಪೂಜ್ಯನಾದ ಮಾಂಧಾತನು ಈ ಭೂಮಿಯನ್ನು ಪಾಲಿಸುತಿದ್ದುದರಿಂದ,ಅವನು ಆ ಕ್ಷಪಣಕನಿಗೆ ಹೀಗೆಯೇ ಭಯಂಕರವಾದ ಶಿಕ್ಷೆಯೆನ್ನು ವಿಧಿಸಿರುವನು ಲೋಕದಲ್ಲಿ ಪಾಪಮಾಡಿದವರಿಗೆ ನೀವಿಬ್ಬರುಮಾತ್ರವೇ ನಿದರ್ಶನವಲ್ಲ ರಾಜರು ಪ್ರಮಾದವಶದಿಂದಿರುವಾಗ ಎಷ್ಟೋಜನರು ಎಷ್ಟೋವಿಧವಾದ ಪಾಪಗಳನ್ನುಮಾಡಬಹುದು ಕಾಲಕ್ರಮದಿಂದ ಆರಾಜರು ಎಚ್ಚರಗೊಂಡು ರಾಜಕಾರ್ಯವನ್ನು ವಿಮರ್ಶಿಸುವಾಗ ಆಯಾಪಾಪಿಗಳಿಗೆ ವಧಾದಿಪ್ರಾಯಶ್ಚಿತ್ತಗಳನ್ನು ಮಾಡುವರು ಇದರಿಂದ ಅವರಿಬ್ಬರ ಪಾಪವೂ ನೀಗುವುದು ಈಕ್ರಮವು ಈಗಲೂ ಆಚಾರದಲ್ಲಿ ಬರುತ್ತಿದೆ ಎಲೈ ವಾನರಶ್ರೇಷ್ಠನೆ! ನೀನು ಇದಕ್ಕಾಗಿ ಪರಿತಪಿಸಬೇಕಾದ ಕಾರಣವಿಲ್ಲ ನಿನ್ನ ಪಾಪಕ್ಕೆ ಈಗಲೇ ತಕ್ಕಪ್ರಾಯಶ್ಚಿತ್ತವಾಯಿತೆಂದು ನೀನು ಸಂತೋಷಿಸಬೇಕಾದುದೇ ನ್ಯಾಯವು! ಸಾಕು ಬಿಡು!ನಾವು ಧರ್ಮವನ್ನನುಸ

ರಿಸಿಯೇ ನಿನ್ನನ್ನು ವಧಿಸಿರುವೆವು, ನಾವು ಯಾವವಿಧದಲ್ಲಿಯೂ ಸ್ವತಂತ್ರರಲ್ಲ. ಅತ್ತಲಾಗಿ ಭರತನಾಜ್ಞೆಗೆ ಅಧೀನರಾಗಿರುವೆವು ಇತ್ತಲಾಗಿ ಧರ್ಮಕ್ಕೆ ಕಟ್ಟು ಬಿದ್ದಿರುವೆವು ಆದುದರಿಂದ ನಾವು ರಾಜಾಜ್ಞೆಗೂ ಶಾಸ್ತ್ರಕ್ಕೂ ಬದ್ಧರಾಗಿಯೇ ಯಾವಕೆಲಸವನ್ನಾದರೂ ನಡೆಸುವವರೇ ಹೊರತು, ನಮ್ಮ ಕೋಪ ಪ್ರಸಾದಗಳನ್ನೇ ಆಧಾರವಾಗಿಟ್ಟುಕೊಂಡು ಇತರರಿಗೆ ನಿಗ್ರಹಾನುಗ್ರಹಗಳನ್ನು ಮಾಡತಕ್ಕವರಲ್ಲ ಎಲೈ ವಾನರನೆ!* ಮತ್ತೊಂದುಕಾರಣವನ್ನೂ ಹೇಳುವೆನುಕೇಳು ಅದು ಇನ್ನೂ ವಿಶೇಷವಾಗಿ ಹೇತುಯುಕ್ತವಾಗಿರುವುದರಿಂದ, ಅದನ್ನು ಕೇಳಿದಮೇಲೆ ನಿನಗೆ ನನ್ನಮೇಲಿರುವ ಕೋಪವು ನಿಶ್ಶೇಷವಾಗಿ ಹೋಗಬಹುದು ಮರಯೆಲ್ಲಿದ್ದೂ ನಾನು ನಿನ್ನನ್ನು ವಧಿಸಿದುದಕ್ಕಾಗಿ ಆಕ್ಷೇಪಿಸಿ, ನನ್ನನ್ನು ಯಮಲೋಕಕ್ಕೆ ಕಳುಹಿಸುವುದಾಗಿ ಹೇಳಿದೆಯಲ್ಲವೆ? ನೀನು ಇಷ್ಟು ಕ್ರೂರವಾಕ್ಯಗಳನ್ನಾಡಿದ್ದರೂ, ನನಗೆ ಸ್ವಲ್ಪಮಾತ್ರವೂ ಮನಸ್ತಾಪವಿಲ್ಲ ಇದರಿಂದ ನನಗೆ ಕೋಪವೂ ಇಲ್ಲ ಮನುಷ್ಯರು ಕಾಡಿನಲ್ಲಿ ಬಲೆಗಳಿಂದಲೂ ಹಗ್ಗಗಳಿಂದಲೂ, ಇನ್ನೂ ಅನೇಕಸಾಧನಗಳಿಂದಲೂ ಬೇಟೆಯಾಡಿ, ಮೃಗಗಳನ್ನು ಕೊಲ್ಲುವರು ಕೆಲವು ಮೃಗಗಳನ್ನು ಪ್ರತ್ಯಕ್ಷದಲ್ಲಿ ನಿಂತುಹೊಡೆಯುವರು ಕೆಲವನ್ನು ಮರೆಯಲ್ಲಿ ನಿಂತು ಕೊಲ್ಲುವರು ಹೀಗೆ ನಾನಾವಿಧವಾದ ಕಪಟವ್ಯಾಪಾರದಿಂದ ಕಾಡುಮೃಗಗಳನ್ನು ಕೊಲ್ಲುವುದುಂಟು ಮಾಂಸಾರ್ಥಿಗಳು ಕಾಡಿನಲ್ಲಿ ಮೃಗಗಳು ಓಡುತಿದ್ದರೂ, ಭಯದಿಂದ ನಡುಗುತಿದ್ದರೂ, ನಂಬಿಕೆಯಿಂದ ನಿರ್ಭಯವಾಗಿ ನಿಂತಿದ್ದರೂ, ಎಚ್ಚರಿಕೆಯಿಂದಿದ್ದರೂ, ಪ್ರಮಾದದಿಂದಿದ್ದರೂ, ಹಿಮ್ಮೊಗವಾಗಿದ್ದರೂ ಯಾವಸ್ಥಿತಿಯಲ್ಲಿಯೂ ದಯಾದಾಕ್ಷಿಣ್ಯಗಳನ್ನು ತೋರಿಸದೆ ಕೊಂದುಬಿಡುವರು ಇದರಿಂದ ದೋಷವೇನೂ ಕಾಣಲಿಲ್ಲ ಧರ್ಮಪ್ರವೀಣರಾದ ರಾಜರ್ಷಿಗಳೂ ಹೀಗೆ ಕಾಡಿನಲ್ಲಿ ಬೇಟೆಯಾಡುವರು ಎಲೈ ವಾನರನೆ! ಆ ಮಾರ್ಗವನ್ನನು-

---

* ವಾಲಿಯು ವಾನರನಾಗಿದ್ದರೂ, ಮನುಷ್ಯರಂತೆ ರಾಜ್ಯಪಾಲನ ಸಂಧ್ಯೋಪಾಸನಾದಿಗಳನ್ನು ನಡೆಸುತ್ತ, ಶಾಸ್ತ್ರವಶ್ಯನಾಗಿದ್ದುದರಿಂದ, ರಾಮನು ಇದುವರೆಗೆ ಅದಕ್ಕನುಗುಣಗಳಾದ ಪರಿಹಾರಗಳನ್ನೇ ಹೇಳಿ, ಇದುವೊದಲು ಕೇವಲನಾನರತ್ವವನ್ನುಳುರಿತು ಕೆಲವು ಪರಿಹಾರಗಳನ್ನು ಹೇಳುವನು.

ಸರಿಸಿಯೇ ನಾನೂ ನಿನ್ನನ್ನು ಬಾಣದಿಂದ ವಧಿಸಿರುವೆನು ನೀನು ಶಾಖಾಮೃ
ಗವೆನಿಸಿಕೊಂಡಿರುವುದರಿಂದ, ನೀನು ನನ್ನ ಮುಂದೆ ಯುದ್ಧಸನ್ನದ್ಧನಾಗಿ ನಿಂ
ತರೂ, ನಿಲ್ಲದಿದ್ದರೂ ನಾನು ನಿನ್ನನ್ನು ಕೊಲ್ಲಬೇಕಾದವಿಷಯದಲ್ಲಿ ಯುಕ್ತಾ
ಯುಕ್ತಗಳನ್ನು ಆಲೋಚಿಸಬೇಕಾದುದಿಲ್ಲ ರಣರಂಗದಲ್ಲಿ ನಿಂತು ವೀರ
ರೊಡನೆ ಯುದ್ಧಮಾಡುವಾಗ ಅನುಸರಿಸಬೇಕಾದ ಧರ್ಮವೇ ಬೇರೆ ! ಬೇ
ಟೆಯಲ್ಲಿ ಮೃಗಗಳನ್ನು ಕೊಲ್ಲುವ ರೀತಿಯೇ ಬೇರೆ! ಅದಕ್ಕಿದಕ್ಕೆ ಸಂಬಂಧ
ವೇ ಇಲ್ಲ ಎಲೈ ವಾನರಶ್ರೇಷ್ಠನೆ! ದುರ್ಲಭವಾದ ಧರ್ಮವನ್ನಾಗಲಿ, ಜೀ
ವನವನ್ನಾಗಲಿ, ಕುಭವನ್ನಾಗಲಿ ಪ್ರಜೆಗಳಿಗೆ ರಾಜರೇ ನಡೆಸಿಕೂಡತಕ್ಕವ
ರು ದೇವತಗಳೇ ಮನುಷ್ಯರೂಪದಿಂದ ಭೂಲೋಕದಲ್ಲಿ ಹುಟ್ಟಿ ಧರ್ಮ
ರಕ್ಷಣಾರ್ಥವಾಗಿ ರಾಜರೆನಿಸಿಕೊಂಡು ಸಂಚರಿಸುತ್ತಿರುವರು ಇದರಲ್ಲಿ ಸಂ
ದೇಹವಿಲ್ಲ ಅದುದರಿಂದ ದೇವಾಂಶವುಳ್ಳ ಆ ರಾಜರನ್ನು ಎಷ್ಟುಮಾತ್ರ
ವೂ, ಹಿಂಸಿಸುವುದಾಗಲಿ, ನಿಂದಿಸುವುದಾಗಲಿ, ಆಕ್ಷೇಪಿಸುವುದಾಗಲಿ, ಅವ
ರೊಡನೆ ಅಪ್ರಿಯವಾಕ್ಯಗಳನ್ನಾಡುವುದಾಗಲಿ ಯುಕ್ತವಲ್ಲ ನೀನಾದರೋ
ಈ ಧರ್ಮಸೂಕ್ಷ್ಮವೂಂದನ್ನೂ ತಿಳಿಯದೆ, ಕೇವಲರೋಷದಿಂದ ಮಾತಾ
ಡುತ್ತಿರುವೆ ಪಿತೃಪಿತಾಮಹರ ಕಾಲದಿಂದ ಬಂದ ಸನಾತನಧರ್ಮವನ್ನು
ತಪ್ಪದೆ, ತದನುಸಾರವಾಗಿ ನಡೆಯುತ್ತಿರುವ ನನ್ನನ್ನು ಹೀಗೇಕೆ ದೂಷಿಸು
ವೆ?" ಎಂದನು ಇದನ್ನು ಕೇಳಿದಮೇಲೆ ವಾಲಿಗೆ ಪಶ್ಚಾತ್ತಾಪವು ಹುಟ್ಟಿತು.
ಧರ್ಮಸೂಕ್ಷ್ಮವನ್ನು ತನ್ನಲ್ಲಿಯೂ ಆಲೋಚಿಕೊಂಡು, ರಾಮನಲ್ಲಿ ಯಾವ
ದೋಷವೂ ಇಲ್ಲವೆಂದೇ ನಿಶ್ಚಯಿಸಿಕೂಂಡನು ಮೊದಲು ಯುಕ್ತಾಯುಕ್ತ
ವನ್ನು ವಿಚಾರಿಸದೆ ಕೇವಲರೋಷದಿಂದ ರಾಮನನ್ನು ನಿಂದಿಸಿದುದಕ್ಕಾಗಿ
ಅನುತಾಪಪಡುತ್ತ, ಆತನನ್ನು ನೋಡಿ, ಆತನಿಗೆ ಕೈಮುಗಿದು ''ಎಲೈ ಪು
ರುಷಶ್ರೇಷ್ಠನೆ! ನೀನು ಹೇಳಿದುದೇ ವಾಸ್ತವವು ಇದರಲ್ಲಿ ಸಂದೇಹವಿಲ್ಲ
ಧರ್ಮಸೂಕ್ಷ್ಮವೆಂಬುದು ಬಹಳ ದುರವಗಾಹವು ಅಂತಹವಿಷಯದಲ್ಲಿ ಅ
ಲ್ಪನಾದ ನಾನು ಸಮಾಧಾನವನ್ನು ಹೇಳಲಾರೆನೆಂಬುದೂ ನಿಜವು ಸರ್ವಜ್ಞ
ನಾದ ನಿನ್ನ ಮಾತಿಗೆ ಅಲ್ಪಜ್ಞನಾದ ನಾನು ಯಾವಪ್ರತ್ಯುತ್ತರವನ್ನು ಹೇ
ಳಬಲ್ಲೆನು! ಎಲೈ ಮಹಾತ್ಮನೆ! ನಾನು ಮೊದಲು ಅಜ್ಞಾನದಿಂದ ನಿನ್ನನು

ಕುರಿತು ಅನೇಕವಿಧದಲ್ಲಿ ಅಪ್ರಿಯವಾಕ್ಯಗಳನ್ನಾಡಿಬಿಟ್ಟೆನು ಆ ಅಪರಾಧವನ್ನು ನೀನು ಮನಸ್ಸಿಗೆ ತಂದುಕೊಳ್ಳದೆ ಮನ್ನಿಸಬೇಕು ನೀನು ಸಮಸ್ತವಿಧಗಳಾದ ಅರ್ಥತತ್ವಗಳನ್ನೂ ತಿಳಿದವನು ಪ್ರಜೆಗಳಿಗೆ ಕ್ಷೇಮವನ್ನುಂಟುಮಾಡುವುದರಲ್ಲಿಯೇ ಆಸಕ್ತಿಯುಳ್ಳವನು ಕಾರ್ಯಕಾರಣಗಳನ್ನು ವಿಮರ್ಶಿಸಿ ನಿಶ್ಚಯಿಸುವವಿಷಯದಲ್ಲಿ ನಿನ್ನ ಬುದ್ಧಿಯು ಸ್ವಲ್ಪವೂ ಚಾಂಚಲ್ಯವಿಲ್ಲದೆ ಪ್ರಸನ್ನವಾಗಿರುವುದು ಎಲೈ ಧರ್ಮಜ್ಞನೆ! ನೀನು ಹೇಳಿದಂತೆಯೇ ನಾನು ಧರ್ಮವನ್ನು ಮೀರಿ ನಡೆದವನೆಂಬುದೇನೋ ನಿಜವು ಮಾಡಬಾರದ ಕಾರ್ಯವನ್ನೂ ಮಾಡಿಬಿಟ್ಟೆನು ಇಂತಹ ಪಾಪಿಯಾದ ನನ್ನನ್ನು ನೀನು ಮನ್ನಿಸಬೇಕು ಹಾಗೆ ನೀನು ಕ್ಷಮಿಸಿದವಿಷಯದಲ್ಲಿ ಧರ್ಮಯುಕ್ತವಾದ ನಿನ್ನ ಮಾತಿನಿಂದ ಅಭಯವಾಕ್ಯವನ್ನೂ ಕೊಟ್ಟುಕಾಪಾಡಬೇಕು ಈಗ ನಾನು ನಿನ್ನಿಂದಹತನಾದುದಕ್ಕಾಗಿ ನನ್ನನ್ನು ಕುರಿತಾಗಲಿ, ತಾರೆಯನ್ನು ಕುರಿತಾಗಲಿ, ನನ್ನ ಇತರಬಂಧುಗಳನ್ನು ಕುರಿತಾಗಲಿ ನಾನು ಸ್ವಲ್ಪವೂ ದುಃಖಿಸುವವನಲ್ಲ ಆದರೆ ಗುಣಾಗ್ರಣಿಯಾಗಿ ರತ್ನಾಂಗದಗಳಿಂದೊಪ್ಪುತ್ತಿರುವ ನನ್ನ ಮುದ್ದುಮಗನಾದ ಈ ಅಂಗದನಿಗಾಗಿಯೇ ನಾನು ಬಹಳವಾಗಿ ದುಃಖಿಸಬೇಕಾಗಿರುವುದು. ಅವನು ಹುಟ್ಟಿದಂದಿನಿಂದಲೂ ನಾನು ಎಷ್ಟೋ ಮೋಹದಿಂದ ಸಾಲಿಸಿ ಬಳೆಸಿದೆನು ಅವನು ನನ್ನನ್ನು ನೋಡದೆ ನಿಮಿಷಮಾತ್ರವೂ ಸಹಿಸಲಾರನು ನಾನು ಈಗ ಮೃತನಾದುದನ್ನು ಕೇಳಿದರೆ, ನೀರಿಲ್ಲದ ಕೆರೆಯು ಕ್ಷಣಕ್ಷಣಕ್ಕೂ ಒಣಗಿಹೋಗುವಂತೆ ದುಃಖದಿಂದ ಕೃಶಿಸಿಹೋಗುವನು ರಾಮಾ! ನಾನು ತಾರೆಯಲ್ಲಿ ಬಹುಕಾಲಕ್ಕೆ ಈ ಮುದ್ದುಮಗನೊಬ್ಬನನ್ನು ಪಡೆದೆನು ಇನ್ನೂ ಅವನು ಕೇವಲಬಾಲ್ಯದಶೆಯಲ್ಲಿರುವನು ಯಾವುದನ್ನೂ ತಿಳಿದವನಲ್ಲ ನನಗೆ ಅವನೊಬ್ಬನೇ ಕೇವಲಪ್ರಿಯನಾದ ಮಗನು ಅವನು ಬಾಲನಾದರೂ ಬಹಳಬಲಾಢ್ಯನು ರಾಮಾ! ಅತನನ್ನುಮಾತ್ರ ನೀನು ಯಾವವಿಧದಲ್ಲಿಯೂ ನೋಯಿಸದೆ, ಪ್ರೀತಿಯಿಂದ ಪೋಷಿಸುತ್ತಿರಬೇಕು ಸುಗ್ರೀವನಲ್ಲಿಯೂ, ಆ ಅಂಗದನಲ್ಲಿಯೂ ನೀನು ಸಮಾನವಾದ ಬುದ್ಧಿಯನ್ನೇ, ಇಟ್ಟು ನಿಷ್ಪಕ್ಷಪಾತವಾಗಿ ನೋಡಬೇಕು ಇವರಿಬ್ಬರಲ್ಲಿ ಯಾವನೊಬ್ಬನು ತಪ್ಪಿನಡೆದರೂ ಅವರನ್ನು ಶಿಕ್ಷಿಸುವುದಕ್ಕೂ,

ರಕ್ಷಿಸುವುದಕ್ಕೂ, ಸರ್ವವಿಧದಲ್ಲಿಯೂ ನೀನು ಸ್ವತಂತ್ರನು ಎಲೈ ರಾಜೇಂ
ದ್ರನೆ! ನನಗೆ ಭರತನಲ್ಲಿಯೂ, ಲಕ್ಷ್ಮಣನಲ್ಲಿಯೂ ಯಾವಯಾವವಿಧವಾದ
ಪ್ರೀತಿಯುಂಟೋ, ಆ ವಿಧವಾದ ಪ್ರೀತಿಯನ್ನೇ ಸುಗ್ರೀವನಲ್ಲಿಯೂ, ಅಂಗ
ದನಲ್ಲಿಯೂ ತೋರಿಸುತ್ತಿರಬೇಕು ತಾರೆಯು ನಿರ್ದೋಷೆಯಾಗಿದ್ದರೂ, ನ
ನ್ನಪತ್ನಿಯಾದುದರಿಂದ ನನ್ನ ದೋಷಕ್ಕೆ ಸಮಭಾಗಿನಿಯಾಗಿ,ಸುಗ್ರೀವನಿಗೆ
ಕೆಡುಕನ್ನು ಮಾಡಿದಂತೆಯೇ ಎಣಿಸಬೇಕಾಗುವುದು ಈ ವೈರವನ್ನು ಮ
ನಸ್ಸಿನಲ್ಲಿಟ್ಟು ಸುಗ್ರೀವನು ಆ ತಾರೆಯನ್ನು ಎಷ್ಟುಮಾತ್ರವೂ ಅವಮಾನಿಸ
ದಂತ ನೀನು ನೋಡಿಕೊಳ್ಳಬೇಕು ಎಲೈ ರಘುವಂಶೋತ್ತಮನೆ! ನಿನ್ನ ಅನು
ಗ್ರಹವನ್ನೇ ಹೊಂದಿ ನಿನ್ನ ಮನಸ್ಸನ್ನನುವರ್ತಿಸಿ, ನಿನಗಧೀನನಾಗಿಯೇ
ನಾನು ನಡೆಯುತ್ತಿರುವೆನು, ನನಗೆ ನನ್ನ ರಾಜ್ಯವೂ,ನನ್ನ ಪ್ರಾಣವೂ ಸಲ್ಲುವುದೇನೂ
ಅಸಾಧ್ಯವಾಗಿರಲಿಲ್ಲ ನನ್ನ ರಾಜ್ಯವೊಂದುಮಾತ್ರವೇ ಅಲ್ಲದೆ ಈ ಸಮಸ್ತಭೂ
ಮಂಡಲವನ್ನೂ,ಕೂಸಿಗೆ ದೇವಲೋಕವನ್ನಾದರೂ ಸಂಪಾದಿಸುವುದು ಅ
ಸಾಧ್ಯವಾಗುತ್ತಿರಲಿಲ್ಲ ಆದರ ನನ್ನ ಉದ್ದೇಶವೇಬೇರೆ! ಅದರನಿಜಸ್ಥಿತಿಯನ್ನೂ
ತಿಳಿಸಿಬಿಡುವೆನು ಕೇಳು ನನಗೆ ಬಹುಕಾಲದಿಂದ ಹೇಗಾದರೂ ನಿನ್ನಕೈಯಿಂ
ದ ಸಾಯಬೇಕಂಬ ಆಸೆಯೆದ್ದುದರಿಂದಲೇ, ತಾರೆಯು ನನ್ನನ್ನು ಎಷ್ಟೋ
ವಿಧದಿಂದ ತಡೆದರೂ ನಾನು ಸುಗ್ರೀವನೊಡನೆ ಯುದ್ಧಕ್ಕೆ ಬಂದೆನು " ಎಂ
ದನು ವಾಲಿಯು ವಿನಯದಿಂದ ಈ ವಾಕ್ಯವನ್ನು ಹೇಳಿ ಸುಮ್ಮನಿರಲು,
ಆಮೇಲೆ ರಾಮನು,ಹೀಗೆ ಅಜ್ಞಾನವನ್ನು ಬಿಟ್ಟು ಶುದ್ಧವಾದ ಜ್ಞಾನವನ್ನು
ಹೊಂದಿ ಮಾತಾಡುತ್ತಿರುವ ಆ ವಾಲಿಯನ್ನುನೋಡಿ, ಧರ್ಮಸ್ವರೂಪವು
ಜೆನ್ನಾಗಿ ವ್ಯಕ್ತವಾಗುವಂತೆ ಸಾಮವಾಕ್ಯಗಳಿಂದ ,,ಎಲೆ ಕಪಿರಾಜನೆ! ನಿನ್ನ
ಮಗನಾದ ಅಂಗದನ ವಿಷಯವಾಗಿ ನೀನು ಸ್ವಲ್ಪವೂ ಚಿಂತಿಸಬೇಡ!
ಮತ್ತು ನಿನ್ನನ್ನು ಕೊಂದುದಕ್ಕಾಗಿ ನನ್ನವಿಷಯದಲ್ಲಿಯಾಗಲಿ, ಸಹೋ
ದರಭಾರ್ಯೆಯನ್ನಪಹರಿಸಿದುದಕ್ಕಾಗಿ ನಿನ್ನ ವಿಷಯವಾಗಿಯೇ ಆಗಲಿ ನೀ
ನು ದೋಷವನ್ನೆಣಿಸಬೇಕಾದುದಿಲ್ಲ ಈಗ ನಾನು ನಿನ್ನನ್ನು ಕೊಂದುದ
ರಿಂದ ರಾಜನಾದ ನನ್ನ ಧರ್ಮವನ್ನು ನಡೆಸಿದಂತಾಯಿತು ನನ್ನಿಂದ
ಹತನಾದ ನೀನೂ ನಿನ್ನ ಪಾಪಕ್ಕೆ ಪ್ರಾಯಶ್ಚಿತ್ತರೂಪವಾದ ಶಿಕ್ಷೆಯನ್ನು

ಹೊಂದಿದಂತಾಯಿತು. ನಮ್ಮಿಬ್ಬರಿಗೂ ಇದು ಧರ್ಮಹೇತುವೆಂದೇ ನಿಸ್ಸಂಶಯವಾಗಿ ನಿಶ್ಚಯಿಸಿರುವೆನು ಆದುದರಿಂದ ನಮ್ಮಿಬ್ಬರ ವಿಷಯವಾಗಿಯೂ ನೀನು ಚಿಂತಿಸಬೇಕಾದುದಿಲ್ಲ ಯಾವರಾಜನು ದಂಡಿಸಬೇಕಾದವನ್ನು ದಂಡಿಸುವನೋ, ಯಾವನು ತನ್ನ ಪಾಪಕ್ಕೆ ತಕ್ಕಶಿಕ್ಷೆಯನ್ನು ಹೊಂದುವನೋ, ಅವರಿಬ್ಬರೂ, ತಮ್ಮ ದೋಷಗಳನ್ನು ಕಳೆದುಕೊಂಡು ಕೃತಾರ್ಥರಾಗುವರು ಆದುದರಿಂದ ಧರ್ಮಶಾಸ್ತ್ರವನ್ನನುಸರಿಸಿಯೇ ನೀನು ಶಿಕ್ಷಿತನಾಗಿರುವುದರಿಂದ,ಇಂದಿಗೆ ನಿನ್ನ ಪಾಪವೂ ನೀಗಿತು ಈಗ ನೀನು ಶುಚಿತ್ವವನ್ನೂ ಹೊಂದಿದಂತಾಯಿತು ಎಲೈ ವಾನರೇಂದ್ರನೆ! ಈಗ ನಿನ್ನ ಮನಸ್ಸಿನಲ್ಲಿರುವ, ದುಃಖವನ್ನೂ, ಮೋಹವನ್ನೂ, ಭಯವನ್ನೂ ಬಿಟ್ಟುಬಿಡು ದೈವಗತಿಯನ್ನು ತಪ್ಪಿಸಿಕೂಳ್ಳಬೇಕೆಂದರೆ ನಿನಗೆ ಸಾಧ್ಯವೇ? ಎಲೆ ವಾಲಿ! ಅಂಗದನ ವಿಷಯವಾಗಿ ನೀನೇಕೆ ಚಿಂತಿಸುವೆ ? ಅವನು ನಿನ್ನಲ್ಲಿ ಹೇಗೆ ವರ್ತಿಸುವನೋ ಹಾಗೆಯೇ ನನ್ನಲ್ಲಿಯೂ ಈ ಸುಗ್ರೀವನಲ್ಲಿಯೂ ಪಿತೃಭಕ್ತಿಯನ್ನು ತೋರಿಸುವನಂಬುದರಲ್ಲಿ ಸಂದೇಹವಿಲ್ಲ ಅಂತಪ ಗುಣಾಢ್ಯನಾದ ಅಂಗದನನ್ನು ನಾವು ಪ್ರೇಮದಿಂದ ನೋಡಿಕೂಳ್ಳಬೇಕಂಬ ವಿಷಯದಲ್ಲಿ ನೀನು ನಮಗೆ ಹೇಳಬೇಕ? ನಾವು ಅವನನ್ನು ಪುತ್ರವಾತ್ಸಲ್ಯದಿಂದಲೇ ಪೋಷಿಸುವೆವು " ಎಂದನು ಮಹಾತ್ಮನಾಗಿಯೂ ಧರ್ಮಮಾರ್ಗ್ಯಕನಿರತನಾಗಿಯೂ, ರಣವೀರನಾಗಿಯೂ ಇರುವ ರಾಮನು, ಕಿವಿಗಿಂಪಾದ ಈ ಮಾತುಗಳನ್ನು ಹೇಳಿದಮೇಲೆ, ವಾಲಿಯು ಮನಸ್ಸಿನ ಚಿಂತೆಯನ್ನು ಬಿಟ್ಟು, ಕಾಲೋಚಿತವಾದ ಸಾತಿನಿಂದ ಆ ರಾಮನನ್ನು ಕುರಿತು ''ಲೋಕಪ್ರಭುವಾದ ಎಲೈ ರಾಜೇಂದ್ರನೆ! ನೀನು ದೇವೇಂದ್ರನಿಗೆ ಸಮನಾದವನು ಶತ್ರುಭಯಂಕರವಾದ ಪರಾಕ್ರಮವುಳ್ಳವನು ಆದರ ನಿನ್ನ ಬಾಣದಿಂದ ಪೀಡಿತನಾದ ನಾನು, ಆ ಬಾಣವೇದನೆಯಿಂದ ಮೈಮರೆತು ನಿನ್ನನ್ನು ವಿಶೇಷವಾಗಿ ದೂಷಿಸಿದೆನು ಈ ಅಪರಾಧಕ್ಕಾಗಿ ನೀನು ನನ್ನಲ್ಲಿ ಕೋಪವನ್ನಿಡದೆ ಮನ್ನಿಸಬೇಕೆಂಬುದೇ ನನ್ನ ಮುಖ್ಯಪ್ರಾರ್ಥನೆಯು" ಎಂದು ಹೇಳಿ ಕೈಮುಗಿದನು

ಇಲ್ಲಿಗೆ ಹದಿನೆಂಟನೆಯಸರ್ಗವು

ತಾರೆಯು ವಾಲಿಯನ್ನು ನೋಡುವುದಕ್ಕಾಗಿ ಬಂದುದು

ಬಾಣದಿಂದ ಹತನಾಗಿ ನೆಲದಮೇಲೆ ಬಿದ್ದಿದ್ದ ಆ ವಾಲಿಯು, ತನ್ನ ಆಕ್ಷೇಪಣೆಗಳಿಗೆ ರಾಮನು ಯುಕ್ತಿಯುಕ್ತರಾಗಿ ಹೇಳಿದ ಪ್ರತ್ಯುತ್ತರಗಳನ್ನು ಕೇಳಿ,ಮನಸ್ಸಿನ ಶಂಕೆಯನ್ನು ಬಿಟ್ಟು, ಮುಂದೆ ಯಾವುದೊಂದುಮಾತನ್ನೂ ಆಡಲಾರದೆ ಸುಮ್ಮನಾಗಿ ಬಿಟ್ಟನು ಮೊದಲು ಸುಗ್ರೀವನೊಡನೆ ಯುದ್ಧ ಮಾಡುವಾಗಲೀ,ಅವನು ತನ್ನ ಮೇಲೆ ಬೀಸಿದ ಕಲ್ಲುಗಳಿಂದಲೂ, ಮರಗಿಡಗ ಳಿಂದಲೂ, ಅವನ ಅಂಗಾಂಗವೆಲ್ಲವೂ ಜರ್ಝರಿತವಾಗಿತ್ತು ಇಷ್ಟರಲ್ಲಿ ಅ ತಿಕ್ರೂರವಾದ ರಾಮನ ಬಾಣವೂ ಮೇಲೆ ಬಿದ್ದುದರಿಂದ, ಅವನಿಗೆ ಮೇಲೆ ಮೇಲೆ ತ್ರಾಣವಡಗಿ ಉತ್ಕ್ರಮಣಕಾಲವೇ ಸಮೀಪಿಸಿದಂತಾಯಿತು ಹಾ ಗೆಯೇ ಮೂರ್ಛೆಯನ್ನು ಹೊಂದಿಬಿಟ್ಟನು ಅತ್ತಲಾಗಿ ಇವನ ಪತ್ನಿಯಾದ ತಾರೆಯು, ರಾಮಪ್ರಯುಕ್ತವಾದ ಬಾಣದಿಂದ ಪತಿಯು ಹತನಾದನೆಂಬ ಸುದ್ದಿಯನ್ನು ಕೇಳಿದಳು ಈ ಭಯಂಕರವಾರ್ತೆಯನ್ನು ಕೇಳಿದೊಡನೆ ಆ ಕೆಯ ಎದೆಯೊಡೆದು, ಮೈ ನಡುಗಿಹೋಯಿತು ಒಡನೆಯೇ ಪುತ್ರನಾದ ಅಂಗದನನ್ನೂ ಸಂಗಡ ಕರೆದುಕೊಂಡು ತನ್ನ ಗುಹೆಯನ್ನು ಬಿಟ್ಟು ಹೊರ ಟುಬಂದಳು ಇಷ್ಟರೊಳಗಾಗಿ ಅಂಗದನಿಗೆ ಪರಿಚಾರರಾಗಿ ಮಹಾಪರಾಕ್ರ ಮಿಗಳೆನಿಸಿಕೊಂಡ ಕೆಲವು ವಾನರರು, ಮುಂದೆಹೋಗಿ ಧನುರ್ಧಾರಿಯಾಗಿ ನಿಂತಿದ್ದ ರಾಮನನ್ನು ನೋಡಿ ಭಯಪಟ್ಟು ಹಿಂತಿರುಗಿ ಓಡಿ ಬರುತಿದ್ದರು. ತಮ್ಮ ಗುಂಪನ್ನು ಕಾಯುತಿದ್ದ ಸಲಗವು ಹತವಾದುದನ್ನು ನೋಡಿ,ಭಯದಿಂ ದ ಚದರಿ ದಿಕ್ಕುಗೆಟ್ಟು ಓಡುತ್ತಿರುವ ಮೃಗಗಳಂತೆ, ಭಯದಿಂದ ಓಡಿ ಬರು ತ್ತಿರುವ ದುಃಖಿತರಾದ ಆ ವಾನರರನ್ನು ತಾರೆಯು ನಡುದಾರಿಯಲ್ಲಿ ಕಂಡ ಳು ರಾಮಬಾಣದಿಂದ ತೂರಿಸಲ್ಪಟ್ಟವರಂತೆ ಅತಿವೇಗದಿಂದ ಓಡಿಬ ರುತ್ತಿರುವ ಆವಾನರರನ್ನುನೋಡಿ ತಾರೆಯು "ಎಲ್ಲೈ ವಾನರರೆ ! ರಾಜಸಿ ಹ್ಮನಾದ ವಾಲಿಗೆ ನೀವು ಅನುಚರರಾಗಿದ್ದರೂ ಅವನನ್ನು ಬಿಟ್ಟು ಹೀಗೆ ಭಯಪಟ್ಟು ಓಡುವುದೇಕೆ ? ಒಂದುವೇಳೆ ಆ ಕ್ರೂರಸಹೋದರ ನಾದ ಸುಗ್ರೀವನು, ರಾಜ್ಯದಾಸೆಯಿಂದ ತನಗೆ ಒಡಹುಟ್ಟಿದವನಾದ ವಾಲಿಯನ್ನು ರಾಮನ ಕ್ರೂರಬಾಣಗಳಿಂದ ಕೊಲ್ಲಿಸಿರಬಹುದು ಆದ

ಮಾತ್ರಕ್ಕೆ ನೀವು ಭಯಪಡಬೇಕಾದ ಕಾರಣವೇನು? ರಾಜ್ಯಕೋಶಗಳೊಂ ದೂ ಇಲ್ಲದ ನಿಮ್ಮಲ್ಲಿ ಆ ಸುಗ್ರೀವನಿಗೆ ವೈರವೇನು ? ಆದುದರಿಂ ದ ನಿಮಗೆ ಸ್ವಲ್ಪವೂ ಭಯಕಾರಣವಿಲ್ಲ?" ಎಂದಳು ಕಾಮರೂಪಿಗಳಾದ ಆವಾನರರು, ತಾರೆಯ ಈ ಮಾತನ್ನು ಕೇಳಿ, ಆಕಯನ್ನು ಕುರಿತು ಕಾಲೋ ಚಿತವಾದ ಯುಕ್ತಿವಾಕ್ಯಗಳಿಂದ-"ಅಮ್ಮಾ! ನಮ್ಮ ಪಾಡು ಹಾಗಿರಲಿ ನೀನೇ ಕೆ ಅಲ್ಲಿಗೆ ಹೋಗುವ? ನಿನ್ನ ಮಗನಾದ ಅಂಗದನನ್ನೂ ಅನ್ಯಾಯವಾಗಿ ಆ ರಾಮನ ಕೈಗೆ ಸಿಕ್ಕಿಸಿಕೊಳ್ಳಿಸಬೇಡ- ಈತನಾದರೂ ಬದುಕಿರಲಿ, ಈತ ನನ್ನು ಕರೆದುಕೊಂಡು ನೀನು ಹಿಂತಿರುಗಿಹೋಗು ಮೃತ್ಯುವೇ ರಾಮನೂ ಪದಿಂದ ಬಂದು ವಾಲಿಯನ್ನು ಕೊಂದು ಪರಲೋಕಕ್ಕೆ ಸಾಗಿಸುತ್ತಿರುವ ನೆಂದು ತಿಳಿ! ನಿನ್ನ ಪತಿಯಾದ ವಾಲಿಯು ಯುದ್ಧದಲ್ಲಿ ಸುಗ್ರೀವನಿಂದ ಪ್ರೇರಿ ತಗಳಾದ ಎಷ್ಟೋ ವೃಕ್ಷಗಳನ್ನು ಮುರಿದು ಹಾಕಿದನು ಎಷ್ಟೋ ಕಲ್ಲು ಬಂಡೆಗಳನ್ನು ಪುಡಿಪುಡಿಮಾಡಿದನು ಏನಾದರೇನು? ಕೂನೆನೆ ವಜ್ರಸಮಾನ ಗಳಾದ ರಾಮನ ಬಾಣಗಳಿಂದ ನೆಲಕ್ಕುರಿಳಿಸಲ್ಪಟ್ಟನು ಇಂದ್ರನಿಗೆಣೆ ಯಾದ ತೇಜಸ್ಸುಳ್ಳ ವಾಲಿಯು ಆಗಲೇ ಸತ್ತುಬಿದ್ದನು ಮೊದಲು ಕಿಷ್ಕಿಂಧೆಯಿಂದ ವಾಲಿಯನ್ನು ಹಿಂಬಾಲಿಸಿಬಂದ ವಾನರಸೈನ್ಯವೆಲ್ಲವೂ ಜಲ್ಲಾಚದರಾಗಿ ಹಿಂತಿರುಗಿ ಓಡಿಬರುತ್ತಿರುವುದನ್ನು ನೋಡು! ನೀನು ಈಗ ಲೇ ಹಿಂತಿರುಗಿ ಪುರದಬಾಗಿಲನ್ನು ಮುಚ್ಚಿ ನಮ್ಮನ್ನು ರಕ್ಷಿಸು! ಅಂಗದನಿಗೂ ಈಗಲೇ ಪಟ್ಟಾಭಿಷೇಕವನ್ನು ಮಾಡಿಬಿಡು! ಅವನಿಗೆ ಈಗಲೇ ರಾಜ್ಯವನ್ನು ವಹಿಸಿಬಿಟ್ಟರೆ, ಇಲ್ಲಿನ ವಾನರರೆಲ್ಲರೂ ಅವನ ವಶರಾಗಿಬಿಡುವರು ಈಗ ಸಾವಕಾಶಕ್ಕೆ ಕಾಲವಲ್ಲ ಅಥವಾ ವಾನರರಿಗೆ ನೀನಿರುವ ಈ ಕಿಷ್ಕಿಂ ಧೆಯೇ ಇನ್ನು ಮೇಲೆ ವಾಸಕ್ಕೆ ರುಚಿಸಲಾರದು ಶತ್ರುಗಳು ಬಂದು ಈ ಸ್ಥ ಳವನ್ನಾಕ್ರಮಿಸುವರೆಂಬ ಭಯದಿಂದ ಇಲ್ಲಿನ ವಾನರರಲ್ಲರೂ ಬೇರೆ ದುರ್ಗ ಗಳಿಗೆ ಹೋಗಿಸೇರಿಬಿಡುವರು ಆ ಶತ್ರುಗಳೂ ಈಗಲೇ ಬಂದು ನಮ್ಮ ವಾ ಸಸ್ಥಾನಗಳನ್ನೂ, ಇತರದುರ್ಗಗಳನ್ನೂ ಆಕ್ರಮಿಸಿಬಿಡುವರು "ಆಕ್ರಮಿ ಸಿದರೇನು?"ಎಂದುಕೇಳುವೆಯಾ? ವಾಲಿಯು ಇಲ್ಲಿಂದ ಎಷ್ಟೋಮಂದಿ ಕ ಪಿಗಳನ್ನು ಹೊರಡಿಸಿಬಿಟ್ಟಿರುವನು "ಅವರಲ್ಲಿ ಪತ್ನಿಯನ್ನಗಲಿರುವವರು ಕೆ ಲವರು! ಒಬ್ಬಳನ್ನೇ ತಮ್ಮಲ್ಲಿ ಅನೇಕರಿಗೆ ಪತ್ನಿಯನ್ನಾಗಿ ಮಾಡಿಕೊಂಡಿ

ರುವನರು ಕೆಲವರು ಇವರೆಲ್ಲರೂ ಮೊದಲು ಇಲ್ಲಿಯೇ ಇದ್ದುಹೋ ದವರು ಹೀಗೆ ಪತ್ನಿಯನ್ನಗಲಿದವರೂ, ಸಮಾನಭಾರ್ಯೆಯುಳ್ಳವರೂ ಆತುರದಿಂದ ಕಾದಿರುವರು ಅವರೂ ನಮ್ಮ ಜ್ಞಾತಿಗಳಾದ ಸುಗ್ರೀವಾದಿಗ ಳೂ ಇಲ್ಲಿಗೆ ಬಂದಮೇಲೆ ನಮ್ಮ ಗತಿಯೇನು?" ಎಂದರು ಹೀಗೆ ಭೀರು ಗಳಾದ ವಾನರರು, ಮುಂದೆ ಬಂದು ಈ ಮಾತುಗಳನ್ನಾಡಲು ತಾರೆ ಯು ಅದನ್ನು ಕೇಳಿ ತನ್ನ ಧೈರ್ಯಕ್ಕೆ ತಕ್ಕಂತೆ ಅವರನ್ನು ಕುರಿತು "ಎಲೆ ವಾನರರೆ' ವಾನರಸಿಹ್ಮನಂತಿದ್ದ ಮಹಾತ್ಮನಾದ ಆ ನನ್ನ ಪತಿಯೇ ಹೋ ದಮೇಲೆ ನನಗೆ ಈ ಪುತ್ರನಿಂದಾಗಲಿ, ಈ ರಾಜ್ಯದಿಂದಾಗಲಿ, ಕೊನೆಗೆ ಈ ನನ್ನ ದೇಹದಿಂದಲೇ ಆಗಲಿ ಮಾಡಬೇಕಾದ ಕಾರ್ಯವೇನು? ಈಗ ನಾನೂ ಹೋಗಿ ಮಹಾತ್ಮನಾದ ಆ ವಾಲಿಯ ಕಾಲಿನ ತಳದಲ್ಲಿಯೇ ಬಿಳುವೆನು ರಾಮಪ್ರಯುಕ್ತವಾದ ಬಾಣದಿಂದ ಕೆಡಹಲ್ಪಟ್ಟ ಆತನ ಪಾದಮೂಲ ವನ್ನೇ ಸೇರುವೆನು" ಎಂದು ಹೇಳಿ ದುಃಖದಿಂದ ಕುಂದಿ ರೋದಿಸುತ್ತ, ಮ ನಸ್ಸಂಕಟವನ್ನು ತಡೆಯಲಾರದೆ, ಎರಡು ಕೈಯಿಂದಲೂ ತನ್ನ ಹೊಟ್ಟೆ ಯನ್ನೂ, ತಲೆಯನ್ನೂ ಚಚ್ಚಿಕೂಳ್ಳುತ್ತಾ ಬಂದಳು ಹೀಗೆ ತಾರೆಯು ಹಿಂದುಮುಂದುತೋರದೆ ಓಡಿಬಂದು, ಅಲ್ಲಿ ನೆಲದಮೇಲೆ ಬಿದ್ದಿದ್ದ ತನ್ನ ಪ ತಿಯನ್ನು ನೋಡಿದಳು ಆತನಾದರೋ ಇದುವರಗೆ ಎಷ್ಟೋಯುದ್ಧಗಳ ಲ್ಲಿ ಪರಾಜಿತರಾಗದೆ ಜಯಿಸಿಬಂದ ಮಾಯಾವಿ ಮೊದಲಾದ ಅನೇಕರಾಕ್ಷ ಸರನ್ನು ಕೊಂದು ಕೆಡಹಿದವನು ಇಂದ್ರನು ವಜ್ರಾಯುಧಗಳನ್ನು ಬೀ ಸುವಂತೆ ಎಷ್ಟೋ ಪರ್ವತಗಳನ್ನೆತ್ತಿ ಶತ್ರುಗಳಮೇಲೆ ಬೀಸಿದವನು ಮಹಾ ವಾತಗಳೆಲ್ಲವೂ ಒಂದಾಗಿ ಸೇರಿದಷ್ಟು ಬಲಾಢ್ಯನು ಮಹಾಮೇಘಗಳ ಮೊ ಳಗಿನಂತೆ ಧೀರಧ್ವನಿಯುಳ್ಳವನು ಇಂದ್ರನಿಗೆಣೆಯಾದ ಪರಾಕ್ರಮವುಳ್ಳವ ನು ಅಂತವನು ಈಗ,ಬಹುಕಾಲದವರೆಗೆ ಎಡೆಬಿಡದೆ ದೊಡ್ಡಮಳೆಯನ್ನು ಸು ರಿಸಿ ಶಾಂತವಾದ ಮಹಾಮೇಘದಂತೆ ಮಲಗಿದ್ದನು ಮತ್ತು ಆತನು ಇದಿ ರಾಗಿ ನಿಂತು ಗರ್ಜನಧ್ವನಿಗಳಿಂದ ಹೆದರಿಸುವವರನ್ನೆಲ್ಲಾ ಅದಕ್ಕಿಂತಲೂ ಮೇಲೆ ಗರ್ಜಿಸಿ ನಡುಗಿಸತಕ್ಕ ಮಹಾವೀರನು. ಇಷ್ಟುಶೂರನಾದ ವಾ ಲಿಯು, ಮಹಾಪರಾಕ್ರಮವುಳ್ಳ ಸಿಹ್ಮದಿಂದ ಮಾಂಸಾರ್ಥವಾಗಿ ಕೊಲ್ಲ

ಲ್ಪಟ್ಟ ಬೇರೊಂದು ಸಿಹ್ಮದಂತೆ, ರಾಮನಿಂದ ಹತನಾಗಿ ಬಿದ್ದಿರುವುದನ್ನು ನೋಡಿದಳು ಮತ್ತು ಆ ವಾಲಿಯು ಪರಾಕ್ರಮಾದಿಗುಣಗಳಿಂದ ಸಮಸ್ತ ಲೋಕಕ್ಕೂ ಪೂಜ್ಯನಾಗಿದ್ದರೂ ತಮ್ಮನ ಭಾರ್ಯೆಯನ್ನ ಪಹರಿಸಿದ ದೋಷ ಕ್ಕಾಗಿ ರಾಮನಿಂದ ಹತನಾಗಿ ಬಿದ್ದು, ಸರ್ವಲೋಕಪೂಜ್ಯವಾಗಿಯೂ ಧ್ವಜಗ ಳಿಂದಲೂ, ವೇದಿಕೆಗಳಿಂದಲೂ ಅಲಂಕೃತವಾಗಿಯೂ ಇರುವ ಜ್ಯೈತ್ಯವೃಕ್ಷ ವು, ತನ್ನಲ್ಲಿರುವ ಸರ್ಪಗಳ ಆಸೆಗಾಗಿ ಗರುಡನಿಂದ ಮುರಿದುಕೆಡಹಲ್ಪ ಟ್ಟಿರುವಂತೆ ಕಾಣುತಿಪ್ಪನು. ಹೀಗೆ ಸತ್ತುಬಿದ್ದಿರುವ ತನ್ನ ಪತಿಯಾದ ವಾಲಿಯನ್ನು ಕಂಡೊಡನೆ, ತಾರೆಯು ಇತ್ತಲಾಗಿ ಬಿಲ್ಲನ್ನು ನಮ್ಮಿ ನಿಂತಿ ರುವ ರಾಮನನ್ನೂ, ಮತ್ತು ರಾಮನ ಸಮೀಪದಲ್ಲಿ ನಿಂತಿದ್ದ ಅವನ ತಮ್ಮ ನಾದ ಲಕ್ಷ್ಮಣನನ್ನೂ, ತನ್ನ ಮೃದುನನಾದ ಸುಗ್ರೀವನನ್ನೂ, ಕಂಡರೂ ಕಾಣದಂದೆ, ಲಕ್ಷ್ಯಮಾಡದೆ ಮುಂದೆ ದಾಟಿಹೋಗಿ, ತನ್ನ ಪತಿಯಬಳಿಗೆ ಬಂದು, ಅವನು ನಿಶ್ಚೇತನನಾಗಿರುವುದನ್ನು ಕಂಡು ದುಃಖದಿಂದ ಮೂರ್ಛೆ ಬಿದ್ದಳು ನಿದ್ರೆಯಿಂದೆದ್ದಂತೆ ಸ್ವಲ್ಪಹೊತ್ತಿನಮೇಲೆ ಚೇತರಿಸಿಕೊಂಡು, ಮೃತ್ಯುಪಾಶಬದ್ಧನಾದ ಆ ವಾಲಿಯನ್ನು ನೋಡಿ, ''ಹಾ ಆರ್ಯ ಪುತ್ರನೇ" ಎಂದು ಗೋಳಿಡುತಿದ್ದಳು ಹೀಗೆ ಕುರರಪಕ್ಷಿಯಂತೆ ಕೂಗಿ ಪ್ರಲಾಪಿಸು ತ್ತಿರುವ ತಾರೆಯನ್ನೂ, ಅವಳ ಸಮೀಪದಲ್ಲಿ ದೈನ್ಯದಿಂದ ನಿಂತಿರುವ ಅಂಗ ದನನ್ನೂ ನೋಡಿದೊಡನೆ ಸುಗ್ರೀವನಿಗೂ ತಡೆಯಲಾರದ ದುಃಖವುಂಟಾ ಯಿತು ಇಲ್ಲಿಗೆ ಹತ್ತೊಂಬತ್ತನೆಯಸರ್ಗವು

ತಾರೆಯು ದುಃಖದಿಂದ ವಾಲಿಯ ದೇಹವನ್ನಪ್ಪಿ ಕೊಂಡು, ಅನೇಕವಿಧದಲ್ಲಿ ಪ್ರಲಾಪಿಸಿ, ಕೊನೆಗೆ ಪ್ರಾ ಯೋಪವೇಶವನ್ನು ಮಾಡುವುದಾಗಿ ನಿಶ್ಚಯಿಸಿದುದು

ಹೀಗೆ ಪ್ರಾಣಾಂತಕರವಾದ ರಾಮಬಾಣದಿಂದ ಹತನಾಗಿ ನೆಲದಮೇ ಲೆ ಬಿದ್ದಿದ್ದ ತನ್ನ ಪತಿಯನ್ನು ನೋಡಿ, ಚಂದ್ರಮುಖಿಯಾದ ತಾರೆಯು, ದುಃ ಖದಿಂದ ಅವನ ಮೃತದೇಹವನ್ನಪ್ಪಿಕೊಂಡು ಗೋಳಿಡುತ್ತಿದ್ದಳು ಮಹೇ ನ್ದ್ರನಂತೆ ದಿವ್ಯತೇಜಸ್ಸಿನಿಂದ ಕೂಡಿ, ಮದದಾನೆಯಂತಿದ್ದ ಆ ಕಪಿರಾಜ

ನು ಹತನಾಗಿ ಬಿದ್ದಿರುವುದನ್ನು ನೋಡುತಿದ್ದಷ್ಟೂ ತಾರೆಯ ಮನಸ್ಸು ಸಂಕಟದಿಂದ ಕುಮಿಯುತಿತ್ತು ಬುಡದೊಡನೆ ಕಿತ್ತುಹಾಕಿದ ಮರದಂತೆ ನಿಶ್ಚೇಷ್ಟನಾಗಿ ಬಿದ್ದಿರುವ ಆ ಪತಿಯನ್ನು ನೋಡಿ ಪ್ರಲಾಪಿಸಲಾರಂಭಿಸಿದಳು 'ಹಾಪ್ರಿಯನೆ' ಯುದ್ಧದಲ್ಲಿ ಭಯಂಕರವಾದ ಪರಾಕ್ರಮವುಳ್ಳವನಾಗಿ, ವೀರರಿಗೆಲ್ಲಾ ವೀರನಾಗಿ, ಸಮಸ್ತಕಪಿಗಳಿಗೂ ನಾಥನಾದ ನೀನು,ಈಗ ದುಃಖಿತಳಾಗಿ ಬಂದಿರುವ ನನ್ನನ್ನು ಎಂದಿನಂತೆ ಮಾತಾಡಿಸಬಾರದೇಕೆ? ಹಾ ವೀರನೆ! ನಾನು ಎಂದಿಗೂ ನಿನ್ನಲ್ಲಿ ದೋಷವನ್ನೆಣಿಸಿದಳಲ್ಲವಲ್ಲಾ!ಎಲೈ ವಾನರಸಿಂಹನೆ! ಏಳು! ಹೀಗೇಕ ನೆಲದಮೇಲೆ ಮಲಗಿರುವೆ?ಉತ್ತಮವಾದ ಹಾಸಿಗೆಯಲ್ಲಿ ಮಲಗಬಾರದೆ?ನಿಮ್ಮಂತಹ ರಾಜಶ್ರೇಷ್ಠರು ಹೀಗೆ ಬರೀನೆಲದಮೇಲೆ ಮಲಗುವುದಂಟೆ? ಎಲೈ ಭೂನಾಥನೆ ! ನನಗಿಂತಲೂ ಈ ಭೂಮಿಯೇ ನಿನಗೆ ಹೆಚ್ಚು ಪ್ರೀತಿಪಾತ್ರಳಾದಳೆ? ಪ್ರಾಣವು ಹೋದರೂ ಆಕೆಯನ್ನು ಬಿಡಲಾರದೆ ಅಪ್ಪಿಕೊಂಡು, ನನ್ನನ್ನು ಹೀಗೆ ಅನಾದರಿಸುತ್ತಿರುವೆಯಾ?ಎಲೈ ವೀರನೆ! ಈಗ ನಿನಗಾದರೋ,ನಿನ್ನ ಧರ್ಮದಿಂದ,ಸ್ವರ್ಗಮಾರ್ಗದಲ್ಲಿಯೂ ಈ ಕಿಷ್ಕಿಂಧೆಯಂತೆಯೇ ಮನೋಹರವಾದ ಬೇರೊಂದು ಸ್ಥಾನವು ಸಿದ್ಧವಾಗಿರುವುದೆಂಬುದರಲ್ಲಿ ಸಂದೇಹವಿಲ್ಲ ಆದರ ನಾವು ನಿನ್ನೊಡಗೂಡಿ ಇಲ್ಲಿನ ಮಕರಂದಗಂಧವುಳ್ಳ ತೋಟಗಳಲ್ಲಿ ಆಡಿದ ಆಟಗಳೆಲ್ಲವೂ ಇಂದಿಗೆ ತೀರಿತಲ್ಲವೆ? ಸಲಗಗಳಿಗೆಲ್ಲಾ ಸಲಗನಾಗಿದ್ದ ನೀನು ಹೀಗೆ ಮೃತಿಯನ್ನು ಹೊಂದಿದಮೇಲೆ, ನನಗೆ ಇನ್ನು ಯಾವವಿಧದಲ್ಲಿ ಸಂತೋಷವುಂಟು? ಇನ್ನು ನಾನು ನಿರಾಶಳಾದೆನಲ್ಲಾ!ದುಃಖಸಮುದ್ರದಲ್ಲಿ ಮುಳುಗಿಹೋದೆನು ಕೈಹಿಡಿದ ಗಂಡನಾದ ನೀನು ಹೀಗೆ ಸತ್ತುಬಿದ್ದಿರುವುದನ್ನುನೋಡಿಯೂ, ನನ್ನ ಹೃದಯವು ಸಹಸ್ರಭಾಗವಾಗಿ ಒಡೆಯದಿರುವುದನ್ನು ನೋಡಿದರೆ, ಈ ನನ್ನ ಎದೆಯನ್ನು ಕಲ್ಲೆದೆಯೆಂದೇ ಎಣಿಸಬೇಕಾಗಿದೆ ಎಲೈ ವಾನರರಾಜನೆ!ಸುಗ್ರೀವನ ಭಾರ್ಯೆಯನ್ನಪಹರಿಸಿ ಆತನನ್ನು ದೇಶದಿಂದ ಓಡಿಸಿದುದಕ್ಕೆ ಈಗ ತಕ್ಕ ಫಲವುಂಟಾಯಿತೆ? ನಿನ್ನ ಶ್ರೇಯಃಕಾಂಕ್ಷಿಣಿಯಾದ ನಾನು,ನಿನಗೆ ಎಷ್ಟೋ ಹಿತವನ್ನು ಹೇಳಿದೆನು ನನ್ನನ್ನೂ ನಿಂದಿಸಿಕಳುಹಿಸಿದೆಯಲ್ಲಾ! ಎಲೆ ಆರ್ಯನೆ! ನೀನು ಈಗ ವೀರಸ್ವರ್ಗವನ್ನು ಸೇರಿದ

ರೆ, ಆಲ್ಲಿ ರೂಪಯೌವನಗಳಿಂದ ಹೆಮ್ಮೆಗೊಂಡು, ಕಾಮತಂತ್ರಗಳಲ್ಲಿ ಕುಶಲರಾದ ಅಪ್ಸರಸ್ತ್ರೀಯರ ಮನಸ್ಸನ್ನೂ ನಿನ್ನ ಸೌಂದರ್ಯವು ವಶಪಡಿಸುವುದರಲ್ಲಿ ಸಂದೇಹವಿಲ್ಲ ಮುಖ್ಯವಾಗಿ ನಿನ್ನ ಪ್ರಾಣಗಳನ್ನು ಕೊನೆಮುಟ್ಟಿಸುವ ದುಷ್ಕಾಲವು ಬಂದೊದಗಿತು ಆದರಿಂದಲೇ ಯಾರ ವೀರ್ಯಕ್ಕೂ ವಶನಾಗದ ನೀನು, ಈ ಅಲ್ಪನಾದ ಸುಗ್ರೀವನ ಕೈಗೆ ಸಿಕ್ಕಿ ಸಾಯಬೇಕಾಯಿತು ಲೋಕೋತ್ತರವಾದ ಕಕುತ್ಥ್ಸವಂಶದಲ್ಲಿ ಹುಟ್ಟಿಯೂ ಈ ರಾಮನು, ಇತರರೊಡನೆ ಯುದ್ಧಮಾಡುತ್ತಿದ್ದ ನಿನ್ನನ್ನು ನಿಷ್ಕಾರಣವಾಗಿ ಕೊಂದು, ಸ್ವಲ್ಪವಾದರೂ ಮನಸ್ಸಿನಲ್ಲಿ ಪಶ್ಚಾತ್ತಾಪವಿಲ್ಲದೆ ನಿಂತಿರುವನಲ್ಲಾ ! ಇದಕ್ಕಿಂತಲೂ ಅನುಚಿತವೇನುಂಟು ? ಹುಟ್ಟಿದಂದಿನಿಂದ ದುಃಖವನ್ನೇ ಕಂಡರಿಯದೆ ಬಳೆದ ನಾನು, ಈಗ ಈ ವೈಧವ್ಯವನ್ನೂ, ದುಃಖವನ್ನೂ, ಸಂಕಟವನ್ನೂ ಅನುಭವಿಸುತ್ತ, ದಿಕ್ಕಿಲ್ಲದವಳಂತೆ ದೈನ್ಯದಿಂದ ಬದುಕಬೇಕಾಯಿತೆ? ನನ್ನ ಪಾಡೂ ಹಾಗಿರಲಿ ! ಬಾಲ್ಯದಿಂದಲೂ ಅತಿಮೋಹದಿಂದ ಸುಖದಲ್ಲಿಯೇ ಬಳಸಲ್ಪಟ್ಟ ಸುಕುಮಾರಾಂಗನಾದ ಈ ಅಂಗದನ ಗತಿಯೇನು ? ಇವನ ಚಿಕ್ಕಪ್ಪನು ದಾಯಾದದ್ವೇಷದಿಂದ ಇನ್ನು ಮೇಲೆ ಆಗಾಗ ಇವನನ್ನು ಕ್ರೂರದೃಷ್ಟಿಯಿಂದ ನೋಡಿದರೆ ಇವನ ಅವಸ್ಥೆಯೇನಾಗುವುದೋ ! ಎಲೆ ವತ್ಸ ಅಂಗವಾ ! ಬಾ ! ನಿನ್ನ ತಂದೆಯನ್ನು ಈಗಲೇ ಚೆನ್ನಾಗಿ ನೋಡಿಬಿಡು! ಇನ್ನು ಮೇಲೆ ನಿನಗೆ ನಿನ್ನ ತಂದೆಯ ದರ್ಶನವು ದುರ್ಲಭವಾಗಿ ಹೋಗುವುದು ಎಲೈ ಆರ್ಯಪುತ್ರನೆ ! ನಿನ್ನ ಪ್ರಿಯಪುತ್ರನಾದ ಅಂಗದನು ಬಂದು ನಿಂತಿರುವನು ನೋಡು! ನೀನು ಪರಲೋಕಪ್ರಯಾಣಕ್ಕೆ ಸಿದ್ಧನಾಗಿರುವೆಯಲ್ಲವೆ! ನಿನ್ನ ಪುತ್ರನನ್ನು ಸಮಾಧಾನಪಡಿಸು! ಅವನ ತಲೆಯಘ್ರಾಣಿಸು! ಅವನಿಗೆ ಹೇಳಬೇಕಾದ ಬುದ್ಧಿವಾದಗಳನ್ನು ಹೇಳು! ಆಹಾ! ಲೋಕೈಕವೀರನಾದ ನಿನ್ನನ್ನು ಕೊಲ್ಲುವ ವಿಷಯದಲ್ಲಿ ರಾಮನು ಎಂತಹ ಸಾಹಸವನ್ನು ಮಾಡಿದನು ! ಹೇಗಾದರೂ ಹೋಗಲಿ! ಮುಖ್ಯವಾಗಿ ಅವನು ಸುಗ್ರೀವನಿಗೆ ಮಾಡಿಕೊಟ್ಟ ಪ್ರತಿಜ್ಞೆಯನ್ನು ತೀರಿಸಿ ಋಣಮುಕ್ತನಾದನು ಎಲೈ ಸುಗ್ರೀವನೆ! ನಿನ್ನ ಕೋರಿಕೆಯು ಕೈಗೂಡಿತೆ? ಇನ್ನು ನೀನು ರುಮೆಯೊಡಗೂಡಿ ನಿಷ್ಕಂಟಕವಾಗಿ

ರಾಜ್ಯವನ್ನನುಭವಿಸು! ನಿನಗೆ ಶತ್ರುವಾಗಿದ್ದ ಸಹೋದರನನ್ನು ಕೊಂದಾ ಯಿತಷ್ಟೆ? ಹಾಪ್ರಿಯನೆ! ಇದೇನು! ನಾನು ಇಷ್ಟುವಿಧದಲ್ಲಿ ಪ್ರಲಾಪಿಸುತಿ ದ್ದರೂ ನೀನು ಪ್ರೀತಿಯಿಂದ ನನ್ನನ್ನು ಮಾತಾಡಿಸದಿರುವುದೇಕೆ? ಒಂದು ವೇಳೆ ನಿನಗೆ ನನ್ನಲ್ಲಿ ಪ್ರೀತಿಯಿಲ್ಲದಿದ್ದರೂ ಹೋಗಲಿ! ನಿನ್ನ ಇತರಪತ್ನಿಯ ರೆಲ್ಲರೂ ಇಲ್ಲಿ ಬಂದು ನಿಂತಿರುವರು ಅವರನ್ನಾದರೂ ನೋಡು!"ಎಂದು ಹು ಚ್ಚಳಂತೆ ನಾನಾವಿಧದಿಂದ ಗೋಳಿಡುತಿದ್ದಳು ಅವಳ ಗೋಳಾಟವನ್ನು ಕೇ ಳಿ ಸುತ್ತಲೂ ಇದ್ದ ಇತರವಾನರಸ್ತ್ರೀಯರೆಲ್ಲರೂ, ಸಂಕಟದಿಂದ ತಪಿಸು ತ್ತ, ದುಃಖಿತನಾದ ಅಂಗದನನ್ನುಕರೆದು ಸನೂಥಾನಪಡಿಸುತ್ತ,ದೈನ್ಯದಿಂ ದ ಅಳುತಿದ್ದರು ತಾರೆಯು ಬಾರಿಬಾರಿಗೂ ತನ್ನ ಪತಿಯನ್ನು ನೋಡಿ ದುಃಖಿ ಸುತ್ತ ಆತನನ್ನುಕುರಿತು ''ಹಾ! ಪ್ರಾಣನಾಥನೆ! ಮಹಾವೀರ್ಯವುಳ್ಳ ನಿನ್ನ ತೋಳುಗಳು ಯಾವಾಗಲೂ ಅಂಗದಾಲಂಕೃತಗಳಾಗಿ ಶೋಭಿಸುತ್ತಿರುವು ವಲ್ಲವೆ? ಈ ನಿನ್ನ ತೋಳುಗಳಿಗೆ ಪ್ರಧಾನಭೂಷಣನಾದ ಈ ಅಂಗದನನ್ನೇ ಬಿಟ್ಟು, ನೀನು ಇಷ್ಟು ದೀರ್ಘಕಾಲಪ್ರಯಾಣಕ್ಕೆ ಸಿದ್ಧನಾಗಿರುವುದುಂಟೆ? ಗುಣಗಳಲ್ಲಿ ನಿನ್ನನ್ನೇ ಹೋಲುತ್ತಿರುವ ಈ ಪುತ್ರರತ್ನವನ್ನು ಬಿಟ್ಟು ಹೋ ಗುವುದು ನಿನಗುಚಿತವೆ? ಪುತ್ರವತ್ಸಲನೆಂಬ ನಿನ್ನ ಖ್ಯಾತಿಯನ್ನುಳಿಸಿಕೊಳ್ಳ ಬೇಡವೆ? ಎಲೈ ಪ್ರಿಯನೆ! ನೀನು ನನ್ನನ್ನೂ, ನಿನ್ನಪುತ್ರನಾದ ಈ ಅಂಗದ ನನ್ನೂ ಹೀಗೆ ನಿರಾಕರಿಸಿ,ಚಿರಕಾಲಪ್ರಯಾಣಕ್ಕೆ ಸಿದ್ಧನಾಗಿರುವೆಯಲ್ಲಾ! ನಿನ್ನ ವಿಷಯದಲ್ಲಿ ನಾನಾಗಲಿ, ಅಂಗದನಾಗಲಿ ಮಾಡಿದ ಅಪ್ರಿಯವೇನು? ಎಲೈ ಮಹಾಬಾಹುವೆ?ಒಂದುವೇಳೆ ನಾನು ಅಜ್ಞಾನದಿಂದ ನಿನಗೆ ಏನಾದ ರೂ ಅಪ್ರಿಯವನ್ನು ಮಾಡಿದ್ದರೂ ಮನ್ನಿಸಿಬಿಡು ನಿನ್ನ ಪಾದಗಳಿಗೆ ತಲೆಯ ನ್ನು ಸೋಕಿಸಿ ಪ್ರಣಾಮಮಾಡುವೆನು "ಎಂದು ನಾನಾವಿಧದಿಂದ ರೋದಿ ಸುತಿದ್ದಳು ಹೀಗೆ ತಾರೆಯು ಇತರವಾನರಸ್ತ್ರೀಯರೊಡನೆ ಪತಿಯ ಸಮೀ ಪದಲ್ಲಿ ಅಳುತ್ತಿದ್ದು, ಕೂನೆಗೆ ತನ್ನ ಸಂಕಟವನ್ನು ತಡೆಯಲಾರದೆ,ಆ ವಾಲಿ ಯು ಬಿದ್ದಿದ್ದ ಕಡೆಯಲ್ಲಿಯೇ ತಾನೂ ಪ್ರಾಯೋಪವೇಶವನ್ನು ಮಾಡಿ ಸಾ ಯುವುದಾಗಿ ನಿಶ್ಚಯಿಸಿಕೊಂಡಳು ಇಲ್ಲಿಗೆ ಇಪ್ಪತ್ತನೆಯಸರ್ಗವು

ಹನುಮಂತನು ಶಾಸ್ತ್ರಾರ್ಥಗಳನ್ನು ತಿಳಿಸಿದು
ಖತೆಯಾದ ತಾರೆಯನ್ನು ಸಮಾಧಾನಪಡಿಸುತ್ತ
ಅಂಗದನ ಪುರೋವೃದ್ಧಿಯನ್ನು ನೋಡಿಕೊಂಡು
ಸಂತುಷ್ಟಳಾಗಿರುವಂತೆ ಹೇಳಿದುದು ತಾರೆಯು
ತನ್ನ ಪತಿಯೊಡನೆ ಸಹಮರಣವೇ ತನಗೆ ಎಲ್ಲಕ್ಕಿಂತ
ಲೂ ಮೇಲಾದ ಸುಖವೆಂದು ದು ಖಿಸುತಿದ್ದುದು

ಆಕಾಶದಿಂದುದಿರಿಬಿದ್ದ ತಾರೆಯಂತೆ ದುಃಖದಿಂದ ನೆಲದಲ್ಲಿ ಬಿದ್ದು ಹೊರಳುತ್ತಿರುವ ತಾರೆಯನ್ನು ನೋಡಿ, ವಾನರಶ್ರೇಷ್ಠನಾದ ಹನುಮಂತನು, ಆಕೆಯನ್ನು ಮೆಲ್ಲಗೆ ಸಮಾಧಾನಪಡಿಸುತ್ತ 'ಎಲೈ ಪೂಜ್ಯಳೆ! ಲೋಕದಲ್ಲಿ ಯಾವ ಪ್ರಾಣಿಗಳಾದರೂ, ತಮ್ಮ ತಮ್ಮ ಗುಣದೋಷಗಳನ್ನನುಸರಿಸಿ ನಡೆಸಿದ ಸುಕೃತದುಷ್ಕೃತಗಳ ಫಲದಿಂದಲೇ ಪರಲೋಕದಲ್ಲಿ ಸುಖದುಃಖಗಳನ್ನನುಭವಿಸುವುವು ಅದನ್ನು ತಪ್ಪಿಸಿಕೊಳ್ಳುವುದಕ್ಕೆ ಯಾರಿಂದಲೂ ಸಾಧ್ಯವಲ್ಲ ಆದುದರಿಂದ ಲೋಕದಲ್ಲಿ ಪ್ರತಿಯೊಂದು ಪ್ರಾಣಿಯೂ ತನ್ನ ತನ್ನ ಆತ್ಮವನ್ನುಕುರಿತೇ ಚಿಂತಿಸಬೇಕಾಗಿರುವುದು ಹೀಗೆ ನಿನ್ನ ಆತ್ಮವನ್ನು ಕುರಿತೇ ನೀನು ಚಿಂತಿಸಿ ದುಃಖಿಸಬೇಕಾಗಿರುವಾಗ, ಬೇರೊಬ್ಬರ ಚಿಂತೆಯು ನಿನಗೇಕೆ? ಸ್ವತಃ ಕೇವಲದೀನಳಾದ ನೀನು ಮತ್ತೊಬ್ಬನ ದೈನ್ಯವನ್ನು ನೋಡಿ ಮರುಕಪಡುವೆಯಾ? ನೀರಿನ ಗುಳ್ಳೆಯಂತೆ ಕ್ಷಣಭಂಗುರವಾದ ಈ ಮನುಷ್ಯದೇಹದಲ್ಲಿ ಯಾರಿಗಾಗಿ ಯಾರು ಶೋಕಿಸಬಹುದು? ತಮ್ಮ ಬದುಕೇ ತಮಗೆ ಸಂದಿಗ್ಧವಾಗಿರುವಾಗ ಮತ್ತೊಬ್ಬರಿಗಾಗಿ ದುಃಖಿಸಬೇಕೆ! ಈ ದುಃಖವನ್ನು ಬಿಡು! ಕಳೆದುಹೋದುದನ್ನು ಕುರಿತು ಚಿಂತೆಯೇಕೆ? ಪ್ರಕೃತದಲ್ಲಿ ನಿನ್ನ ಕಣ್ಣ ಮುಂದೆ ಬದುಕಿರುವ ಕುಮಾರನಾದ ಅಂಗದನನ್ನು ಚನ್ನಾಗಿ ಕಾಪಾಡಿಕೊಂಡು, ಮುಂದೆ ಇವನ ಪುರೋವೃದ್ಧಿಗೆ ಬೇಕಾದ ಉಪಾಯಗಳಾಗುವುವೆಂಬುದನ್ನು ಚಿಂತಿಸು! ಲೋಕದಲ್ಲಿ ಪ್ರಾಣಿಗಳಿಗೆ ಜನನ ಮರಣಗಳು ಸ್ಥಿರವಲ್ಲವೆಂಬುದನ್ನು ನೀನು ತಿಳಿಯದವಳಲ್ಲ. ಆದುದರಿಂದ ಎಲೈ ನೀತಿಜ್ಞಳೆ! ಈ ರೋದನವನ್ನು ಬಿಡು! ಲೋಕದಲ್ಲಿ ಕೇವಲಪ್ರೀ

ತಿಗಾಗಿ ಮಾಡತಕ್ಕ ಈ ಪ್ರಲಾಪಗಳಿಂದೇನು? ನಿನ್ನ ಪತಿಗೆ *ಪಾರಲೌಕವಾ ಶ್ರೇಯಸ್ಸನ್ನುಂಟುಮಾಡುವ ದಾಗಿಯಾವುದೋ ಅದನ್ನು ನೋಡು! ಅಂಗ ದನಿಂದ ಅವನಿಗೆ ಅಪರಕ್ರಿಯೆಗಳನ್ನು ಮಾಡಿಸಿ, ಆ ನಿನ್ನ ಪತಿಯ ಆತ್ಮನಿಗೆ ಸದ್ಗತಿಯನ್ನು ಹೊಂದಿಸು! ಇವನಲ್ಲಿ ಲಕ್ಷಾಧಿಕಸಂಖ್ಯೆಯುಳ್ಳ ಕಪಿಗಳು ಆ ಶ್ರಿತರಾಗಿ ಬೇರೆಬೇರೆ ವಿಧದಿಂದ ಉಪಜೀವಿಸುತಿದ್ದರು ಅಂತಹ ಮಹಾವೀ ರನಾದ ವಾಲಿಯು ಈಗ ಕಾಲವಶನಾಗಿದ್ದರೂ, ತನ್ನ ಪುಣ್ಯಗಳಿಗೆ ತಕ್ಕ ಪು ಣ್ಯಲೋಕವನ್ನೇ ಹೊಂದಿರುವನು ಈ ನಿನ್ನ ಪತಿಯಾದ ವಾಲಿಯು ಶಾಸ್ತ್ರ ಗಳನ್ನೋದಿ ಅನೇಕವಿಷಯಗಳನ್ನು ತಿಳಿದವನು ಸ್ವಜನರಲ್ಲಿ ಪ್ರೀತಿ, ಯುಕ್ತ ವಾದ ಮಾತು, ಯಾಚಕರಲ್ಲಿ ಔದಾರ್ಯ, ಅಪರಾಧಿಗಳಲ್ಲಿ ತಾಳ್ಮೆ, ಮುಂತಾ ದ ಅದ್ಭುತಗುಣಗಳೆಲ್ಲವೂ ಈತನಲ್ಲಿ ತುಂಬಿದ್ದುವು ಆದುದರಿಂದ ಇವನು ಈಗ ಧರ್ಮಜಿತ್ತುಗಳ ಲೋಕವನ್ನೇ ಹೊಂದಿ ಸುಖಿಸುತ್ತಿರುವನು ಇವನಿ ಗಾಗಿ ನೀನು ಶೋಕಿಸಬೇಕಾದುದಿಲ್ಲ ಎಲೈ ಗುಣಾಢ್ಯಳೆ! ಇಲ್ಲಿನ ಸಮಸ್ತ ವಾನರಶ್ರೇಷ್ಠರೂ, ನಿನ್ನ ಪುತ್ರನಾದ ಈ ಅಂಗದನೂ, ಈ ಸಮಸ್ತಕಪಿಭ ಲ್ಲೂಕರಾಜ್ಯವೂ ಈಗ ನಿನ್ನಧೀನವಾಗಿ ನಿನ್ನಿಂದಲೇ ಪೋಷಿಸಲ್ಪಡಬೇಕಾಗಿ ರುವುದು ಆದುದರಿಂದ ಈಗ ನೀನು ನಿನ್ನ ದುಃಖವನ್ನೂ, ನಿನ್ನ ಸಂ ಕಟವನ್ನೂ ಮೆಲ್ಲಗೆ ತಗ್ಗಿಸಿಕೊಂಡು, ಈ ಸಮಸ್ತರಾಜ್ಯವನ್ನೂ ನಿನ್ನ ಪು ತ್ರನಾದ ಅಂಗದನ ವಶವಲ್ಲಿರಿಸು! ಅವನು ನಿನ್ನಧೀನನಾಗಿಯೇ ರಾಜ್ಯವನ್ನು ಪಾಲಿಸಲಿ! ವಾಲಿಗೆ ಈ ಪುತ್ರಸಂತಾನವುಂಟಾದುದಕ್ಕೆ ಮುಖ್ಯಫಲವೇ ನೆಂಬುದನ್ನೂ, ಈಗ ಮೊದಲು ನಡೆಸಬೇಕಾದ ಕಾರ್ಯವೇನೆಂಬುದನ್ನೂ ಚೆನ್ನಾಗಿ ಪರ್ಯಾಲೋಚಿಸಿ, ವಾಲಿಗೆ ಸದ್ಗತಿಯನ್ನುಂಟುಮಾಡುವ ಪ್ರಯ ತ್ನವನ್ನು ಮಾಡು! ಈ ಕಾಲಕ್ಕೆ ನೀನು ಮೊದಲು ನಿಶ್ಚಯಿಸಬೇಕಾದ ಕಾರ್ಯ

* "ಇಲ್ಲಿ ವಾಲಿಯು ಇನ್ನೂ ಪ್ರಾಣಸಹಿತನಾಗಿರುವುದನ್ನು ತಿಳಿದೂ, ಹನು ಮಂತನು ಅವನಿಗೆ ಅಪರಸಂಸ್ಕಾರಗಳನ್ನು ನಡಸುವಂತೆ ನಿಯಮಿಸಿದುದುಯುಕ್ತವೆ" ಎಂದರೆ, ಅಮೋಘಬಾದ ರಾಮಬಾಣದಿಂದ ಆಗ ವಾಲಿಗೆಂಟಾದ ಗಾಢಮೂರ್ಛೆ ಯನ್ನು ಮರಣವೆಂದೇ ನಿಶ್ಚಯಿಸಿಕೊಂಡು, ಆಂಜನೇಯನು ಹೀಗೆ ಹೇಳಿರುವುದರಿಂದ ದೋಷಾಸ್ಪದವಲ್ಲವೆಂದು ಗ್ರಾಹ್ಯವು.

ವೇ ಇದು' ದುಃಖದಿಂದ ನಮ್ಮನಿರುವುದಕ್ಕೆ ಇದು ಸಮಯವಲ್ಲ ಕಪಿರಾಜನಾದ ವಾಲಿಗೆ ಅಪರಸಂಸ್ಕಾರಗಳನ್ನು ನಡೆಸಬೇಕಾದುದೇ ಈಗಿನ ಮೊದಲನೆಯಕಾರ್ಯವು ಅಂಗದನಿಗೆ ರಾಜ್ಯಾಭಿಷೇಕವನ್ನು ನಡೆಸಬೇಕಾದುದು ಎರಡನೆಯದು ಈ ಎರಡುಕಾರ್ಯಗಳೂ ಈಗಲೇ ನಡೆಯಬೇಕು ನೀನು ನಿನ್ನ ಪುತ್ರನು ಸಿಂಹಾಸನವನ್ನೇರಿ ಕುಳ್ಳಿರುವುದನ್ನು ನೋಡಿದಕ್ಷಣದಲ್ಲಿ ಈ ನಿನ್ನ ದುಃಖವೆಲ್ಲವೂ ಶಾಂತವಾಗುವುದು " ಎಂದನು ಪತಿಶೋಕದಿಂದ ಪೀಡಿತೆಯಾದ ತಾರೆಯು, ಆ ಹನುಮಂತನ ವಾಕ್ಯಕ್ಕೆ ಪ್ರತ್ಯುತ್ತರವನ್ನು ಹೇಳಲಾರಂಭಿಸಿ, ''ಎಲೈ ಹನುಮಂತನೆ' ಈ ಅಂಗದನಿಗೆ ಸಮಾನರಾದ ಇನ್ನೂ ನೂರಾರುನುಂದಿ ಮಕ್ಕಳನ್ನು ಪಡೆದಿದ್ದರೂ, ಅವರೆಲ್ಲರ ಮೇಲ್ಮೈಯನ್ನೂ ನೋಡುವುದರಿಂದುಂಟಾಗುವ ಸುಖವು, ಈಗ ಇಲ್ಲಿ ಬಿದ್ದಿರುವ ವಾಲಿಯ ಮೃತದೇಹಸ್ಪರ್ಶದಿಂದುಂಟಾಗುವ ಸುಖಕ್ಕೆಣೆಯಾಗಲಾರದು ಈ ವಾಲಿಯ ಅಪರಸಂಸ್ಕಾರಗಳಿಗಾಗಲಿ, ಅಂಗದನ ಪಟ್ಟಾಭಿಷೇಕಕ್ಕಾಗಲಿ ಸ್ತ್ರೀಮಾತ್ರಳಾದ ನಾನೇನು ಮಾಡಬಲ್ಲೆನು? ಈ ಅಂಗದನುಂಟು' ಅವನ ಚಿಕ್ಕತಂದೆಯಾದ ಈ ಸುಗ್ರೀವನುಂಟು, ಇನ್ನು ಮೇಲೆ ಯಾವಕಾರ್ಯಗಳನ್ನು ನಡೆಸುವುದಕ್ಕೂ ಅವನೇ ಬಾಧ್ಯನು ತಂದೆಯಿಲ್ಲದ ಮೇಲೆ ಸಮಸ್ತವಿಷಯದಲ್ಲಿಯೂ ಚಿಕ್ಕತಂದೆಯೇ ಬಾಧ್ಯನೇಹೊರತು ನಾನಲ್ಲ ವಾನರರಾಜನಾದ ಈ ವಾಲಿಯ ಪಾದವನ್ನಾಶ್ರಯಿಸುವುದಕ್ಕಿಂತಲೂ, ಈ ಲೋಕದಲ್ಲಿಯಾಗಲಿ, ಪರಲೋಕದಲ್ಲಿಯಾಗಲಿ, ನನಗೆ ಬೇರೊಂದೂ ಯುಕ್ತವಾಗಿತೋರಲಿಲ್ಲ ಆದುದರಿಂದ ಯುದ್ಧದಲ್ಲಿ ಶತ್ರುವನ್ನಿರಿಸಿ ಹತನಾಗಿಬಿದ್ದ ಈ ವಾಲಿಯು ಮಲಗಿರುವ ಶಯನವೇ, ಈಗ ನನಗೂ ಮಲಗುವುದಕ್ಕೆಯೋಗ್ಯವಾದ ಸ್ಥಳವಾಗಿರುವುದು ಇದನ್ನು ಬಿಟ್ಟು ಬೇರೆಯಾವುದೂ ನನಗೆ ಯುಕ್ತವಲ್ಲ" ಎಂದಳು ಇಲ್ಲಿಗೆ ಇಪ್ಪತ್ತೊಂದನೆಯ ಸರ್ಗವು

ಮೂರ್ಛೆಹೊಂದಿ ಮೃತಪ್ರಾಯನಾಗಿದ್ದ ವಾಲಿಯು ಸ್ವಲ್ಪವಾಗಿಚೇತರಿಸಿಕೊಂಡುಮುಂದೆ ನಡೆಸಬೇಕಾದ ಕೆಲಸಗಳನ್ನು ತಿಳಿಸಿದುದು

ಮೂರ್ಛೆಹೊಂದಿ ಅರ್ಧಪ್ರಾಣದಿಂದ ಸಂಕಟಪಡುತ್ತಿದ್ದ ವಾಲಿಯು, ಮೆಲ್ಲಗೆ ಕಣ್ಣುಬಿಟ್ಟು, ಸುತ್ತಲೂ ನೋಡುತ್ತ ಮೆಲ್ಲಮೆಲ್ಲಗೆ ಉಸಿರು ಬಿಡುತಿದ್ದನು ಮೊದಲು ಆ ವಾಲಿಯು ಕಣ್ಣೆತ್ತಿನೋಡಿದಾಗ, ತನ್ನ ಮಗನಾದ ಅಂಗದನಮುಂದೆ ನಿಂತಿದ್ದ ಸುಗ್ರೀವನನ್ನು ಕಂಡನು ತನ್ನ ಕಾರ್ಯದಲ್ಲಿ ಜಯಹೊಂದಿ ನಿಂತಿದ್ದ ಆತನನ್ನು ಕರೆದು, ಸ್ಫುಟಾಕ್ಷರಗಳೊಡನೆ ಸ್ನೇಹ ಪೂರ್ವಕವಾದ ಮಾತಿನಿಂದ, ‘‘ವತ್ಸ ಸುಗ್ರೀವಾ! ನಾನು ನಿನ್ನನ್ನು ರಾಜ್ಯದಿಂದ ಹೊರಡಿಸಿ, ನಿನ್ನಪತ್ನಿಯನ್ನೂ ಅಪಹರಿಸಿದೆನೆಂದು, ನನ್ನವಿಷಯದಲ್ಲಿ ನೀನು ದೋಷವನ್ನು ಮನಸ್ಸಿನಲ್ಲಿಡಬೇಡ! ನಾನು ಈ ದುರ್ದಶೆಯನ್ನು ಹೊಂದಬೇಕೆಂಬ ವಿಧಿಯಿದ್ದುದಕ್ಕಾಗಿಯೇ ನನಗ ಆ ವಿಧವಾದ ಬುದ್ಧಿಮೋಹವುಂಟಾಯಿತು. ಅದೇ ನನ್ನನ್ನು ಬಲಾತ್ಕರಿಸಿ ಈ ಅಕೃತ್ಯವನ್ನೂ ಮಾಡಿಸಿತೆಂದು ಭಾವಿಸು! ಎಲೈವತ್ಸನೆ! ನಾವಿಬ್ಬರೂ ಸೇರಿ ಈ ರಾಜ್ಯ ಸುಖವನ್ನಾಗಲಿ, ಒಡಹುಟ್ಟಿದ ಪ್ರೇಮದಿಂದುಂಟಾದ ಸಂತೋಷವನ್ನಾಗಲಿ, ಏಕಕಾಲದಲ್ಲಿ ಅನುಭವಿಸಬಾರದೆಂಬುದೇ ದೈವಸಂಕಲ್ಪವಾಗಿತ್ತೆಂದು ನನಗೆ! ತೋರಿರುವುದು ಆ ದೈವಸಂಕಲ್ಪವನ್ನು ಮೀರುವುದಕ್ಕ ಯಾರಿಂದ ಸಾಧ್ಯವು? ಎಲೈವತ್ಸನೆ! ಇದೋ! ನಾನು ಯಮಲೋಕಪ್ರಯಾಣಕ್ಕೆ ಸಿದ್ಧನಾಗಿರುವೆನು ನೀನು ನಮ್ಮ ವಾನರರಾಜ್ಯವನ್ನು ಸ್ವೀಕರಿಸಿ ಪರಿಪಾಲಿಸು! ಈ ನನ್ನ ಪ್ರಾಣಗಳೊಡನೆ, ನನ್ನರಾಜ್ಯವೂ, ವಿಸ್ತಾರವಾದ ನನ್ನಸಂಪತ್ತೂ, ಯಾರಿಗೂ ಅಜಯ್ಯನೆಂಬ ನನ್ನ ಪ್ರಖ್ಯಾತಿಯೂ ಈಗ ನನ್ನನ್ನು ಬಿಟ್ಟುಹೋಗುತ್ತಿರುವುದು ನಾನು ಈ ದುರವಸ್ಥೆಯಲ್ಲಿರುವಾಗ ನಿನಗೆ ಹೇಳುವ ಮಾತನ್ನು ತಪ್ಪದೆ ನಡೆಸಬೇಕು ಒಂದುವೇಳೆ ನಿನಗೆ ಅದನ್ನು ನಡೆಸುವುದು ಕಷ್ಟವೆಂದು ತೋರಿದರೂ ಪ್ರಯತ್ನಪಟ್ಟು ನಡೆಸಿಯೇತೀರಬೇಕು-ಇದೋ! ನನ್ನಪುತ್ರನಾದ ಅಂಗದನು ಇಲ್ಲಿ ಕಣ್ಣೀರುಬಿಡುತ್ತ ನೆಲದ ಮೇಲೆಬಿದ್ದು ಹೊರಳುವುದನ್ನು ನೋಡು! ಬಾಲ್ಯದಿಂದಲೂ, ಸುಖದಿಂದಲೇ

ಬಳೆದುಃಯಾವಾಗಲೂ ಸುಖಾರ್ಹನಾಗಿ,ವಯಸ್ಸಿನಲ್ಲಿ ಚಿಕ್ಕವನಾಗಿದ್ದರೂ ಬುದ್ಧಿಯಲ್ಲಿ ಮೇಲೆನಿಸಿಕೊಂಡ ಈತನು ನನಗೆ ಪ್ರಾಣಕ್ಕಿಂತಲೂಪ್ರಿಯನಾಗಿರುವನು ಇವನನ್ನು ನಿನ್ನ ಹೊಟ್ಟೆಯಲ್ಲಿ ಹುಟ್ಟಿದ ಮಗನೆಂದೇ ಭಾವಿಸಿ ಪ್ರೇಮದಿಂದ ಪೋಷಿಸಬೇಕು ಇನ್ನು ಮೇಲೆ ಈತನು ತಂದೆಯಿಲ್ಲದ ತಬ್ಬಲಿಯಂತಾದರೂ ಆ ಲೋಪವನ್ನು ಕಾಣಿಸದಂತೆ ನೀನು ಅವನ ಕೋರಿಕೆಗಳನ್ನು ನಡೆಸಿಕೊಟ್ಟು ರಕ್ಷಿಸಬೇಕು ಎಲೆ ಕಪೀಂದ್ರನೆ ' ಇನ್ನು ಮೇಲೆ ನೀನೇ ಅಂಗದನಿಗೆ ಅವನ ಕೋರಿಕೆಗಳೆಲ್ಲವನ್ನೂ ಈಡೇರಿಸತಕ್ಕವನು ನೀನೇ ಅವನಿನಗೆ ರಕ್ಷಕನು ನೀನೇ ಅವನಿಗೆ ಅಭಯವನ್ನುಕೊಡತಕ್ಕವನು ನನ್ನಂತೆಯೇ ನೀನು ಇವನಲ್ಲಿ ಪ್ರೇಮವನ್ನಿಟ್ಟು, ಸರ್ವವಿಧದಿಂದಲೂ ಪೋಷಿಸಬೇಕು ನಿನ್ನನ್ನು ಬಿಟ್ಟರ ಆತನಿಗೆ ಬೇರೆದಿಕ್ಕಾರು?ಶ್ರೀಮಂತನಾದ ಈ ಕುಮಾರನು, ಪರಾಕ್ರಮದಲ್ಲಿ ನಿನಗೆಣೆಯಾದವನೆಂದುತಿಳಿ' ಸಮಸ್ತಕಾರ್ಯಗಳಲ್ಲಿಯೂ ನಿನಗೆ ಸಹಾಯಕನಾಗುವನು ಮುಂದೆ ನೀನು ರಾಮನಸಹಾಯಾರ್ಥವಾಗಿ ರಾಕ್ಷಸರನ್ನು ವಧಿಸುವಾಗ, ಇವನು ನಿನಗಿಂತಲೂ ಮುಂದಾಗಿ ನಿಲ್ಲುವನು. ತಾರೆಯೆ ಪ್ರಿಯಪುತ್ರನಾದ ಈ ಅಂಗದನು, ನಡುವಯಸ್ಸುಳ್ಳವನಾಗಿಯೂ, ಬಲಾಢ್ಯನಾಗಿಯೂ, ವೇಗಶಾಲಿಯಾಗಿಯೂ ಇರುವುದರಿಂದ, ಯಾವ ಮಹಾಯುದ್ಧದಲ್ಲಿಯಾದರೂ, ತನ್ನ ಪರಾಕ್ರಮಕ್ಕನುರೂಪವಾದ ಅದ್ಭುತಕಾರ್ಯವನ್ನು ನಡೆಸದಿರಲಾರನು ಸುಷೇಣನ ಮಗಳಾದ ಈತಾರೆಯೂ ಸೂಕ್ಷ್ಮಾರ್ಥಗಳನ್ನು ನಿಶ್ಚಯಿಸುವುದರಲ್ಲಿಯೂ, ಮುಂದೆ ಬರಬಹುದಾದ ಕಷ್ಟಸಿಷ್ಟುರಗಳನ್ನೂ ಹಿಸಿ ತಿಳಿಯುವುದರಲ್ಲಿಯೂ ಬಹಳಚತುರಳು ಈಕೆಯು ಯಾವುದಾದರೂ ಒಂದು ಅಭಿಪ್ರಾಯವನ್ನು ತಿಳಿಸಿದಪಕ್ಷದಲ್ಲಿ ಅದು ಬೇರೆವಿಧವಾಗಿ ತಿರುಗಲಾರದು ಆದುದರಿಂದ ಇವಳು ಯಾವುದನ್ನು ಯುಕ್ತವೆಂದು ಹೇಳುವಳೋ,ಅದನ್ನು ನಿಸ್ಸಂಶಯವಾಗಿ ನೀನು ನಡೆಸಬಹುದು ಮತ್ತು ನೀನು ರಾಮನಕಾರ್ಯವನ್ನು ಕೂಡ ಎಷ್ಟುಮಾತ್ರವೂ ಶಂಕಿಸದೆ ಅವಶ್ಯವಾಗಿ ನಡೆಸಬೇಕು ಆ ವಿಷಯದಲ್ಲಿಮಾತ್ರ ನೀನು ಸ್ವಲ್ಪಮಾತ್ರವಾದರೂ ಹಿಂಜರಿದರೆ,ನಿನಗೆ ಅಧರ್ಮವು ಬರುವುದೊಂದಲ್ಲದೆ, ಮಾತಿಗೆ ತಪ್ಪಿದ ನಿನ್ನನ್ನು ರಾಮನು ಆಕ್ಷಣವೇ ಕೊಂದುಬಿಡುವನು ಆತನನ್ನವಮಾನಪಡಿಸಿ

ಅವನ ಕೋಪಕ್ಕೆಮಾತ್ರ ನೀನು ಪಾತ್ರನಾಗಬೇಡ ಎಲೆ ವತ್ಸನೆ!'ಇದೋ' ನನಗೆ ದೇವೇಂದ್ರನು ಅನುಗ್ರಹಿಸಿಕೊಟ್ಟ ಈ ಕಾಂಚನಮಾಲಿಕೆಯೆನ್ನು ಕೊಡುವೆನು ಈಗಲೇ ಇದನ್ನು ನೀನು ಸ್ವೀಕರಿಸು ಇದರೊಡನೆಯೇ ನಾನು ಸತ್ತರೆ ಇದರಲ್ಲಿರುವ ದಿವ್ಯತೇಜಸ್ಸು ನನ್ನ ಪ್ರಾಣಗಳೊಡನೆಯೇ ಹಾರಿ ಹೋಗುವುದು ಅದುದರಿಂದ ನನ್ನ ಪ್ರಾಣಗಳು ಹೋಗುವುದಕ್ಕೆ ಮೊದಲೇ ಇದನ್ನು ನೀನು ಧರಿಸು"ಎಂದನು ಹೀಗೆ ವಾಲಿಯು ಒಡಹುಟ್ಟಿದ ಪ್ರೇಮದಿಂದ ಹೇಳಿದ ಮಾತನ್ನು ಕೇಳಿ, ಸುಗ್ರೀವನ ಕಣ್ಣುಗಳಿಂದ ಪಳಪಳನೆ ನೀರು ಸುರಿಯಿತು ಆತನ ಉತ್ಸಾಹವೆಲ್ಲವೂ ಅಡಗಿತು ಸಹಿಸಲಾರದ ಸಂಕಟವುಂಟಾಯಿತು ರಾಹುಗ್ರಸ್ತನಾದ ಚಂದ್ರನಂತೆ ಕಳೆಗುಂದಿದ್ದನು ಹೀಗೆ ಸುಗ್ರೀವನು ದುಃಖದಿಂದ ಹಿಂದುಮುಂದುತೋರದೆ ಸ್ತಬ್ಧನಾಗಿ ನಿಂತಿರಲು, ಅಂಗದನು ಕಾಲಜ್ಞನಾದುದರಿಂದ, ವಾಲಿಯ ಮಾತನ್ನು ಯುಕ್ತವೆಂದು ಗ್ರಹಿಸಿ,ಮನಸ್ಸಿನಲ್ಲಿ ಶಾಂತಿಯನ್ನು ಹೊಂದಿ, ತಂದೆಯ ಅನುಮತಿಯನ್ನು ಪಡೆದು, ಅವನ ಕೊರಳಿನಿಂದ ಆ ಕಾಂಚನಮಾಲಿಕೆಯನ್ನು ತೆಗೆದುಬಿಟ್ಟನು ಆಗ ವಾಲಿಯು ಆ ಮಾಲಿಕೆಯನ್ನು ಸುಗ್ರೀವನ ಕೈಗೆ ಕೊಡಿಸಿ, ತಾನು ಪರಲೋಕಪ್ರಯಾಣಕ್ಕೆ ಸಿದ್ಧನಾಗಿ, ಇದಿರಿಗೆ ನಿಂತಿದ್ದ ತನ್ನ ಕುಮಾರನಾದ ಅಂಗದನನ್ನು ನೋಡಿ ಸ್ನೇಹಪೂರ್ವಕವಾಗಿ, " ಎಲೆ ವತ್ಸನೆ ! ಇನ್ನು ನಾನು ಹೋಗುವೆನು ಇನ್ನು ಮೇಲೆ ನೀನು ಕಾಲದೇಶಗಳನ್ನರಿತು ನಡೆಯಬೇಕು ಪ್ರಿಯವಾಗಲಿ ಅಪ್ರಿಯವಾಗಲಿ, ಪ್ರಭುವಾದ ಸುಗ್ರೀವನು ಹೇಳಿದಮಾತನ್ನು ಸ್ವಲ್ಪವೂ ಮೀರದೆ ನಡೆಸುತ್ತಿರು ಒಂದುವೇಳೆ ಅವನಮಾತು ನಿನಗೆ ಅಪ್ರಿಯವಾಗಿ ತೋರಿದರೂ ಅದನ್ನು ಪ್ರಿಯವಾದಂತೆಯೇ ಆದರಿಸಬೇಕು ದುಃಖಕಾಲದಲ್ಲಿ ಬರತಕ್ಕ ಸುಖವನ್ನೂ, ಸುಖಕಾಲಗಳಲ್ಲಿ ಬಂದೊದಗುವ ದುಃಖವನ್ನೂ, ಸಹಿಸಿಕೊಂಡು ಸಮಸ್ತವಿಧದಲ್ಲಿಯೂ ಸುಗ್ರೀವನಿಗೆ ಪರತಂತ್ರನಾಗಿ ನಡೆದುಕೊಳ್ಳಬೇಕು ಎಲೈ ಮಹಾಬಾಹುವೆ! ಇದುವರೆಗೆ ಯಾವಾಗಲೂ ನೀನು ನನ್ನಿಂದ ಲಾಲಿಸಲ್ಪಡುತಿದ್ದಂತೆಯೇ, ಮುಂದೆಯೂ ನಡೆಯುವುದೆಂಬ ನಿರೀಕ್ಷಣೆಯನ್ನು ಬಿಟ್ಟುಬಿಡು ಆ ಮುದ್ದಾಟಗಳೆಲ್ಲವೂ ಇನ್ನುಮೇಲೆ ಸುಗ್ರೀವನ ಮನಸ್ಸಿಗೆ ಸರಿಬಿಳದಿರಬ

ಹುದು ಇದರಿಂದ ಅವನಿಗೆ ನಿನ್ನಲ್ಲಿರತಕ್ಕ ಪ್ರೀತಿಯೂ ತಪ್ಪಿಹೋಗುವುದು ಆದುದರಿಂದ ನೀನೇ ಆತನ ಮನಸ್ಸನ್ನನುವರ್ತಿಸಿ ನಡೆಯಬೇಕು ಈ ಸುಗ್ರೀವನ ಶತ್ರುಗಳೊಡನೆಯಾಗಲಿ, ಅವನ ಶತ್ರುಗಳ ಕಡೆಯವರೊಡನೆಯಾಗಲಿ ನೀನು ಸೇರಬಾರದು ಪ್ರಭುವಾದ ಆತನ ಕೋರಿಕೆಯಲ್ಲಿಯೇ ಯಾವಾಗಲೂ ದೃಷ್ಟಿಯಿಟ್ಟು ಆದನ್ನು ನಡೆಸುತ್ತಿರಬೇಕು ತಾಳ್ಮೆಯಿಂದ ಆತನಿಗಧೀನನಾಗಿಯೇ ನಡೆದುಕೂಳ್ಳಬೇಕು ಅತಿಸ್ನೇಹವನ್ನೂ ತೋರಿಸಬೇಡ, ಸ್ನೇಹವಿಲ್ಲದಂತೆಯೂ ಇರಬೇಡ ರಾಜರಲ್ಲಿ ಅತಿಸ್ನೇಹವಾಗಲಿ, ಸ್ವಲ್ಪವೂ ಸ್ನೇಹವಿಲ್ಲದಿರುವುದಾಗಲಿ, ಇವರಡೂ ಬಹಳದೋಷಾಸ್ಪದವಾದುದು ಆದುದರಿಂದ ನೀನು ಇವೆರಡಕ್ಕೂ ಮಧ್ಯರೀತಿಯಲ್ಲಿ ವರ್ತಿಸು"ಎಂದನು ಹೀಗೆ ಹೇಳುವಷ್ಟರಲ್ಲಿಯೇ ಆ ವಾಲಿಗೆ ಬಾಣದ ವೇದನೆಯು ಪ್ರಬಲವಾಯಿತು ಕಣ್ಣಾಲಿಗಳು ತಿರುಗಲಾರಂಭಿಸಿದವು ಭಯಂಕರವಾದ ಹಲ್ಲುಗಳನ್ನು ತರದು ಬಾಯಗಲಿಸಿ ಪ್ರಾಣವನ್ನು ಬಿಟ್ಟನು ಇದನ್ನು ನೋಡಿದೊಡನೆ ಅಲ್ಲಿದ್ದ ವಾನರಶ್ರೇಷ್ಠರೆಲ್ಲರೂ ಉಚ್ಚಸ್ವರದಿಂದಳುವುದಕ್ಕಾರಂಭಿಸಿದರು ಅವರೆಲ್ಲರೂ ಗುಂಪಾಗಿ ಸೇರಿ" ಅಯ್ಯೋ! ಕಪಿರಾಜನಾದ ವಾಲಿಯು ಸ್ವರ್ಗಸ್ಥನಾದನೆ! ಇನ್ನು ನಮ್ಮ ಕಿಷ್ಕಿಂಧೆಯೇ ಹಾಳಾಯಿತು ಇಲ್ಲಿನ ಉದ್ಯಾನಗಳೂ, ಪರ್ವತಗಳೂ, ಕಾಡುಗಳೂ, ಶೂನ್ಯವಾದುವಲ್ಲಾ! ನಮ್ಮೆಲ್ಲರಿಗೂ ಸಿಹ್ಮನಂತಿದ್ದ ವಾಲಿಯು ಹತನಾದಮೇಲೆ ನಮ್ಮಗತಿಯೇನು? ಇವನೊಡನೆಯೇ ನಮ್ಮೆಲ್ಲರ ತೇಜಸ್ಸೂ ಹೋಯಿತಲ್ಲಾ! ಅಹಾ! ಈ ವಾಲಿಯು ಸಂಚರಿಸುತ್ತಿರುವಾಗ, ಇವನ ತೊಡೆಯ ವೇಗಕ್ಕೆ, ಇಲ್ಲಿನ ಅರಣ್ಯಗಳೆಲ್ಲವೂ ತಮ್ಮ ತಮ್ಮ ಪುಷ್ಪಸಮೃದ್ಧಿಗಳೊಡನೆ ಹಿಂಬಾಲಿಸಿ ಹೋಗುವಂತಿದ್ದುವಲ್ಲಾ! (ಯಾವನ ಪರಾಕ್ರಮದಿಂದಲೇ ಇಲ್ಲಿನ ತೋಟಗಳೂ, ಸರೋವರಗಳೂ ಭಯಪಟ್ಟು ತಮ್ಮತಮ್ಮ ಪುಷ್ಪಫಲಸಮೃದ್ಧಿಯನ್ನು ತೋರಿಸುತಿದ್ದುವೋ ಅಂತಹ ಸಮರ್ಥನಾದ ವೀರನು ಇನ್ನುಮೇಲೆ ಬೇರೆಲ್ಲಿ ಸಿಕ್ಕುವನು) ಈತನ ವೀರ್ಯಾತಿಶಯವು ಇನ್ನಾರಿಗುಂಟು? ಇವನು ಪೂರ್ವದಲ್ಲಿ ಮಹಾಭುಜನೆನಿಸಿಕೊಂಡ ಮಹಾತ್ಮನಾದ ಗೋಲಭನೆಂಬ ಗಂಧರ್ವನೊಡನೆ,ಹದಿನೈದು ವರುಷಗಳವರೆಗೆ ಹಗಲುರಾತ್ರಿಯೂ ಬಿಡದೆ ಯುದ್ಧಮಾಡಿ, ಹದಿನಾರನೆಯ

ವರುಷದಲ್ಲಿ ಆ ಗಂಧರ್ವನನ್ನು ಕೊಂದು ಕೆಡಹಿದನು ಹೀಗೆ ಮಹಾವೀರನಾದ ಆಗೋಲಭನನ್ನೂ ಕೊಂದು, ಕ್ರೂರದಂಷ್ಟ್ರಗಳುಳ್ಳವನೆಂದು ಪ್ರಸಿದ್ಧಿ ಹೊಂದಿದ ಈ ವಾಲಿಯೇ ಹತನಾಗಿ ಬಿದ್ದನಲ್ಲಾ! ಸಮಸ್ತಲೋಕಕ್ಕೂ ಆ ಭಯವನ್ನು ಕೊಡಬಲ್ಲ ಈತನಿಗೂ,ಹೇಗೆ ಈ ಸ್ಥಿತಿಯುಂಟಾಯಿತೋ ಕಾಣೆವು" ಎಂದು ದುಃಖದಿಂದಲೂ, ಆಶ್ಚರ್ಯದಿಂದಲೂ ಗೋಳಿಡುತಿದ್ದರು ಮಹಾರಣ್ಯದಲ್ಲಿ ಸಿಕ್ಕಿದಂತೆ ಹತವಾದ ಗೂಳಿಯನ್ನು ನೋಡಿ, ಗೋವುಗಳೆಲ್ಲವೂ ಕೂಗಿಕೊಳ್ಳುವಂತೆ, ಅಲ್ಲಿದ್ದ ಕಪಿಗಳೆಲ್ಲರೂ ಸತ್ತುಬಿದ್ದವಾಲಿಯನ್ನು ಸುತ್ತಲೂ ನಿಂತು ಅಳುತಿದ್ದರು ಯಾರಮನಸ್ಸಿಗೂ ಸ್ವಲ್ಪವಾದರೂ ನೆಮ್ಮದಿಯಿರಲಿಲ್ಲ ಹಾಗೆಯೇ ತಾರೆಯೂ ತನ್ನ ಪತಿಯ ಮುಖವನ್ನು ನೋಡಿ ನೋಡಿ ದುಃಖಸಮುದ್ರದಲ್ಲಿ ಮುಳುಗಿದವಳಂತೆ ಸಂಕಟಪಡುತಿದ್ದಳು ದೊಡ್ಡ ಮರವನ್ನು ಸುತ್ತಿಬೆಳೆದ ಒಳ್ಳಿಯು, ಆ ಮರವು ಬೀಳುವಾಗ ತಾನೂ ಬೀಳುವಂತೆ, ಆಗಾಗ ಆ ವಾಲಿಯ ದೇಹವನ್ನಪ್ಪಿಕೊಂಡು ನೆಲದಲ್ಲಿ ಹೊರಳುತಿದ್ದಳು ಇಲ್ಲಿಗೆ ಇಪ್ಪತ್ತೆರಡನೆಯಸರ್ಗವು

ವಾಲಿಯು ಮೃತನಾದುದನ್ನು ಕಂಡು ತಾರೆಯು ವಿಲಾಪವು

ಹೀಗೆ ತಾರೆಯು ವಾನರರಾಜನಾದ ವಾಲಿಯ ಮುಖವನ್ನಾಘ್ರಾಣಿಸುತ್ತ, ಪರಲೋಕಗತನಾದ ಆ ಪತಿಯನ್ನು ನೋಡಿ,,ಎಲೈ ವೀರಾಗ್ರಣಿಯೇ! ನೀನು ಮೊದಲೇ ನನ್ನಮಾತನ್ನು ಲಾಲಿಸದೆ ಹೋದೆಯಲ್ಲಾ! ಅದರಿಂದಲೇ ಹೀಗೆ ಸುಕುಮಾರವಾದ ಈ ನಿನ್ನ ದೇಹವನ್ನು, ಹಿತಕರವಲ್ಲದ ಈ ಕಲ್ಲುಭೂಮಿಯಲ್ಲಿ,ಹಳ್ಳತಿಟ್ಟಾದ ಪ್ರದೇಶದಲ್ಲಿ ಕಷ್ಟದಿಂದ ಮಲಗಿಸಬೇಕಾಯಿತು ಹಾ! ಕಪಿರಾಜನೆ! ನೀನು ಈ ಭೂದೇವಿಯನ್ನಪ್ಪಿ ಮಲಗಿ ನನಗೆ ಪ್ರತ್ಯುತ್ತರವನ್ನೂ!ಕೊಡದಿರುವೆಯಾ!ನನಗಿಂತಲೂ, ಈ ಭೂಮಿಯೇ ಪ್ರಿಯಳಾದಳೆ?ಎಲೆ ಸಾಹಸಿಯೇ!ಇದುವರೆಗೆ ಅನೇಕಾವರ್ತಿ ನಿನ್ನನ್ನಿರಿಸಿ ಪಲಾಯಿತನಾದ ಸುಗ್ರೀವನಿಗೂ, ಈಗ ನೀನು ಈಡಾಗಿಬಿಟ್ಟೆಯಾ?ಮೊದಲು ಭಯಪಟ್ಟು ಪಲಾಯಿತನಾದ,ಆಸುಗ್ರೀವನೇ ಈಗನಿನಗಿಂತಲೂಪರಾಕ್ರಮಿಯಾದನೆ?ಅಹಾ!ದೈವಗತಿಯ ವೈಚಿತ್ರ್ಯವನ್ನು ನಾನೇನು ಹೇಳಲಿ!ಹಾ!ನಾ

ಥಾ! ಈಗ ನಿನ್ನ ಸುತ್ತಲೂ ಎಷ್ಟೋಮಂದಿ ಭಲ್ಲೂಕವರರೂ, ವಾನರಶ್ರೇಷ್ಠರೂ ನಿಂತು ಸೇವಿಸುತ್ತಿರುವರು ಅವರೆಲ್ಲರನ್ನೂ ನೀನು ಉಪೇಕ್ಷಿಸುತ್ತಿರುವೆಯೆಲ್ಲಾ? ಇವರ ರೋದನಧ್ವನಿಗಳಾಗಲಿ, ದುಃಖಿತನಾದ ಅಂಗದನ ಗೋಳಾಟವಾಗಲಿ,ನನ್ನ ವಿಲಾಪವಾಗಲಿ ನಿನ್ನ ಕಿವಿಗೆ ಬೀಳುವುದಿಲ್ಲವೆ?ನಾವು ಇಷ್ಟುಗಟ್ಟಿಯಾಗಿ ಕೂಗಿದರೂ ನಿನಗೆ ಎಚ್ಚರವಾಗುವುದಿಲ್ಲವೆ? ಮೊದಲು ನೀನು ಯುದ್ಧದಲ್ಲಿ ಕೊಂದಶತ್ರುಗಳನ್ನು ಎಲ್ಲೆಮಲಗಿಸುತಿದ್ದೆಯೋ ಅಂತಹ ವೀರಶಯನದಲ್ಲಿ ಈಗ ನೀನೇ ಮಲಗಬೇಕಾಯಿತೆ? ನೀನು ಯುದ್ಧಪರಾಯಣನಾದುದರಿಂದ ಯುದ್ಧದಲ್ಲೆಯೇ ನಿನಗೆ ಮರಣವುಂಟಾಯಿತು ಈಗ ನಿನ್ನ ಬಲವೂ ಪರಿಶುದ್ಧವಾಯಿತು ನಿನ್ನ ವಂಶವೂ ಶುದ್ಧವಾಯಿತು ಹಾ! ಪ್ರಿಯನೆ! ಅನಾಥೆಯಾದ ನನ್ನನ್ನು ಇಲ್ಲಿ ಒಂಟಿಯಾಗಿ ಬಿಟ್ಟು ಹೋಗುವುದುಚಿತವೆ? ಲೋಕದಲ್ಲಿ ಬುದ್ಧಿಶಾಲಿಯಾದವನು ಶೂರರಿಗೆ ಹೆಣ್ಣನ್ನು ಕೂಟ್ಟು ಮದುವೆಮಾಡಬಾರದು ಶೂರನಾದ ನಿನ್ನನ್ನು ಕೈಹಿಡಿದುದರಿಂದಲೇ ಈಗ ನಾನು ಈ ವೈಧವ್ಯವನ್ನು ಹೊಂದಿ ಕೆಟ್ಟೆನಲ್ಲವ? ನನ್ನ ಮಾನವೂ ಕೆಟ್ಟಿತು ನನ್ನ ಗೌರವವೂ ಹಾಳಾಯಿತು ನನಗೆ ಶಾಶ್ವತಫಲಪ್ರದವಾದ ಪತಿಶುಶ್ರೂಷೆಯಂಬ ಸದ್ಗತಿಯೂ ಕಟ್ಟಿತು ಇಷ್ಟೇಸಾಲದೆ, ವಿಶಾಲವಾದ ಶೋಕಸಾಗರದಲ್ಲಿಯೂ ನಾನು ಮುಳುಗಿಹೋದೆನು ಕರುನವಾದ ನನ್ನ ಹೃದಯವನ್ನು ತಿಲಾಮಯವೆಂದೇ ಹೇಳಬೇಕು ಕೈಹಿಡಿದ ಗಂಡನು ಮುಂದೆ ಸತ್ತು ಬಿದ್ದಿರುವುದನ್ನುನೋಡಿಯೂ ಇದು ಸಹಸ್ರಭಾಗವಾಗಿ ಒಡೆಯದಿರುವುದಲ್ಲವೆ? ನೀನು ನನಗೆ ಪತಿಯುಮಾತ್ರವೇ ಅಲ್ಲ ! ನನ್ನಲ್ಲಿ ಕೇವಲಮಿತ್ರನಂತೆಯೂ ಇದ್ದು, ಸಹಜವಾದ ಪ್ರೀತಿಯಿಂದ ಪೋಷಿಸುತಿದ್ದೆಯಲ್ಲಾ' ಇಂತಹ ಪ್ರಾಣಪ್ರಿಯನಾದ ನಿನ್ನನ್ನು ಕಳೆದುಕೊಂಡರೂ ನನ್ನ ಎದೆಯು ಸೀಳಿಹೋಗದೆ ಕಲ್ಲಿನಂತೆ ದೃಢವಾಗಿರುವುದು ಯುದ್ಧದಲ್ಲಿ ಮಹಾಪರಾಕ್ರಮಿಯೆನಿಸಿಕೊಂಡ ನಿನಗೂ ಹೀಗೆ ಮರಣವುಂಟಾಯಿತೆ ಎಷ್ಟುಮಕ್ಕಳಿದ್ದರೇನು? ಎಷ್ಟು ಧನಧಾನ್ಯಸಮೃದ್ಧಿಯಿದ್ದರೇನು? ಗಂಡನಿಲ್ಲದ ಹೆಂಗಸು ಮುಂಡೆಯೆನಿಸಿಕೊಳ್ಳುವಳು ಎಲೈ ವೀರನೆ! ಅರಗಿನ ಬಣ್ಣವುಳ್ಳ (ಇಂದ್ರಗೋಪದಂತೆ ಕೆಂಪಾದ) ಮೇಲುಹೊದ್ದಿಕೆಯಿಂದ ಕೂ

ಡಿದ ಸುಪ್ಪತಿಗೆಯಲ್ಲಿ ಮಲಗಿರುವಂತೆ, ನಿನ್ನ ದೇಹದಿಂದ ಹೊರಟ ಈ ರಕ್ತ ಪ್ರವಾಹದಲ್ಲಿಯೇ ನೀನು ಮಲಗಬೇಕಾಯಿತೆ? ನೆಲದ ಮಣ್ಣಿನಿಂದಲೂ ರಕ್ತ ದಿಂದಲೂ ತುಂಬಿದ ಈ ನಿನ್ನ ದೇಹವನ್ನು, ಈಗ ನಾನು ನನ್ನ ತೋಳುಗಳಿಂ ದ ಹೇಗೆ ಅಪ್ಪಿಕೊಳ್ಳಲಿ! ನಿನ್ನೊಡನೆ ಭಯಂಕರವಾದ ವೈರವನ್ನು ಬಳಸಿ, ಪ್ರಾಣಭಯದಿಂದ ತತ್ತ್ವಳಿಸುತಿದ್ದ ಸುಗ್ರೀವನು, ಈಗ ಕೃತಕೃತ್ಯನಾದನು ರಾಮನ ಹಿಂದೇ ಬಾಣದಿಂದ ಅವನ ಭಯವೆಲ್ಲವೂ ನೀಗಿತು ಹಾನಾಥನೆ! ನಿನ್ನ ಎದೆಯಲ್ಲಿ ನಾಟಿಕೊಂಡಿರುವ ಈ ಕ್ರೂರಬಾಣವು ನಾನು ನಿನ್ನನ್ನು ಆಲಿಂಗಿಸಿಕೊಳ್ಳದಂತೆ ತಪ್ಪಿಸುತ್ತಿರುವುದಲ್ಲಾ! ಮೃತನಾದ ನಿನ್ನನ್ನು ನೋಡುತ್ತಿರುವುದರಿಂದಲೇ ನನ್ನ ಆಸೆಯನ್ನು ತೀರಿಸಿಕೊಳ್ಳಬೇಕಾಗಿರುವುದು" ಎಂದು ನಾನಾವಿಧದಲ್ಲಿ ಗೋಳಿಡುತಿದ್ದಳು ಇಷ್ಟರಲ್ಲಿ ನೀಲನೆಂಬ ವಾನ ರಶ್ರೇಷ್ಠನು, ವಾಲಿಯಬಳಿಗೆ ಬಂದು, ಪರ್ವತಗುಹೆಯಲ್ಲಿ ಹೊಕ್ಕಿರುವ ಹಾವ ನ್ನು ಹೊರಕ್ಕಳೆಯುವಂತ, ಅವನ ಎದೆಯಲ್ಲಿ ನಾಟಿದ್ದ ಬಾಣವನ್ನು ಕಿತ್ತುಬಿ ಟ್ಟನು ಆಗ ಕಿತ್ತ ಬಾಣದ ಕಾಂತಿಯು ಅಸ್ತಗಿರಿಯ ಶಿಖರದಿಂದ ಹೊರಟು ಬರುವ ಸೂರ್ಯಪ್ರಭೆಯಂತೆ ಜ್ವಲಿಸುತಿತ್ತು ಸುಗ್ರೀವನ ಮುಷ್ಟಿಘಾತಗ ಳಿಂದಲೂ, ರಾಮನ ಬಾಣಹತಿಯಿಂದಲೂ ಉಂಟಾದ ಗಾಯಗಳಿಂದ ಆವಾ ಲಿಯ ಸರ್ವಾಂಗಗಳಿಂದಲೂ ರಕ್ತವು ಸೋರುತ್ತ, ಕಮ್ಮಣ್ಣಿನಿಂದ ಕಲೆತು ಬೆಟ್ಟದಿಂದ ಬೀಳುವ ಮಳಯ ನೀರಿನ ಪ್ರವಾಹದಂತೆ ಕಾಣುತಿತ್ತು ತಾರೆ ಯು ಬಾರಿಬಾರಿಗೂ ಆವಾಲಿಯ ಮೈಮೇಲಿನ ಧೂಳಿಯನ್ನೊರೆಸುತ್ತ, ಅಸ್ತ್ರ ಹತನಾಗಿ ಬಿದ್ದಿರುವ ಅವನ ಮುಂದೆ ಕುಳಿತು, ತನ್ನ ಕಣ್ಣೀರುಗಳಿಂದ ಅವನ ಮೈಯನ್ನು ನೆನೆಸುತಿದ್ದಳು ಹೀಗೆ ತಾರೆಯು ರಕ್ತದಿಂದ ತೊಯ್ದಮೈಯು ಳ್ಳವನಾಗಿ ಬಿದ್ದಿರುವ ವಾಲಿಯನ್ನು ನೋಡುತ್ತ, ತನ್ನ ಮಗನಾದ ಅಂಗದ ನನ್ನು ಕುರಿತು, "ಎಲೈವತ್ಸನೆ! ನಿನ್ನ ತಂದೆಗುಂಟಾಗಿರುವ ಭಯಂಕರವಾದ ಈ ಚರಮಾವಸ್ಥೆಯನ್ನು ನೋಡಿದೆಯಾ? ಪಾಪಿಯಾದ ಸುಗ್ರೀವನು ತನ್ನ ವೈರವನ್ನು ಕೊನೆಗಾಣಿಸಿಬಿಟ್ಟನು ಎಲೈಪುತ್ರನೆ! ಬಾಲಸೂರ್ಯನಂತೆ ಹೊ ಳೆಯುವ ಮೈಯುಳ್ಳವನಾಗಿ ಯಮಲೋಕಪ್ರಯಾಣಕ್ಕೆ ಸಿದ್ಧನಾಗಿರುವ ನಿನ್ನ ತಂದೆಗೆ ನಮಸ್ಕರಿಸು!"ಎಂದಳು ಆಗ ಅಂಗದನು ಆಕ್ಷಣವೇ ಮುಂದೆ

ಬಂದು, ಮುಂಡಾದ ತನ್ನ ಎರಡು ಭುಜಗಳಿಂದಲೂ ತಂದೆಯ ಪಾದಗಳನ್ನು ಹಿಡಿದುಕೊಂಡು, ''ಎಲೈತಾತನೆ! ಅಂಗದನಾದ ನಾನು ನಮಸ್ಕರಿಸುವೆನು" ಎಂದನು ಆಗ ತಾರೆಯು ದುಃಖದಿಂದ, ''ಎಲೆ ನಾಥಾ! ಈ ಅಂಗದನು ನಮಸ್ಕರಿಸುವಾಗ ''ಪುತ್ರಾ! ದೀರ್ಘಾಯುಷ್ಮಂತನಾಗು" ಎಂದು ಆಶೀರ್ವಾದಮಾಡುತಿದ್ದ ನೀನು ಈಗ ಮಾತಾಡದಿರುವುದೇಕೆ? ಸಿಂಹದಿಂದ ಹತವಾಗಿ ಬಿದ್ದಿರುವ ವೃಷಭವನ್ನು ವತ್ಸಸಹಿತವಾದ ಹಸುವು ಬಂದು ನಕ್ಕುವಂತೆ, ಗತಪ್ರಾಣನಾದ ನಿನ್ನನ್ನು ನಾನೂ, ಈ ಅಂಗದನೂ ಬಂದು ಎಷ್ಟುಲಾಲಿಸಿದರೇನು? ಮುಖ್ಯವಾಗಿ ನೀನು ಯುದ್ಧವೆಂಬ ಯಜ್ಞವನ್ನಾರಂಭಿಸಿ, ರಾಮಬಾಣವೆಂಬ ನೀರಿನಲ್ಲಿ ಅವಭೃತಸ್ನಾನವನ್ನೂ ನಡೆಸಿಬಿಟ್ಟೆ! ಆದರೆ ನನ್ನನ್ನು ಬಿಟ್ಟು ಅಪತ್ನೀಕನಾದ ನಿನ್ನ ಅವಭೃತಸ್ನಾನವು ಹೇಗೆ ಸಫಲವಾದೀತು? ಅಯ್ಯೋ ನಾಥನೆ! ಇದೇನು? ಇಂದ್ರನು ನಿನ್ನಲ್ಲಿ ಪ್ರಸನ್ನನಾಗಿ ಅನುಗ್ರಹಿಸಿಕೊಟ್ಟ ಆ ಕಾಂಚನಮಾಲಿಕೆಯು, ಈಗ ನಿನ್ನ ಕಂಠದಲ್ಲಿಲ್ಲದಿರುವುದಕ್ಕೆ ಕಾರಣವೇನು? ಎಲೈವೀರನೆ! ಸೂರ್ಯನು ಅಸ್ತಂಗತನಾದರೂ ಅವನ ಪ್ರಭೆಯು ಮೇರುವನ್ನು ಬಿಡದಂತೆ, ಪ್ರಾಣವು ನಿನ್ನನ್ನು ಬಿಟ್ಟುಹೋದರೂ ರಾಜಲಕ್ಷ್ಮಿಯು ನಿನ್ನನ್ನು ಬಿಡುವುದಿಲ ಎಷ್ಟಾದರೇನು? ಮೊದಲು ನನ್ನ ಹಿತವಾದವನ್ನು ನೀನು ಕೇಳಲಿಲ್ಲ ನಿನ್ನನ್ನು ತಡೆಯುವುದಕ್ಕೂ ನನಗೆ ಸಾಧ್ಯವಿಲ್ಲದೆಹೋಯಿತು ಮುಖ್ಯವಾಗಿ ಈಗ ನೀನೊಬ್ಬನೇ ಹತನಾದೆಯೆಂದೆಣಿಸಬೇಡ! ನಾನೂ ಕೆಟ್ಟೆನು ಈ ಅಂಗದನೂ ಕೆಟ್ಟನು ಇಂದಿಗೆ ನಮ್ಮ ಸಮಸ್ತಭಾಗ್ಯವೂ ಕೈಬಿಟ್ಟುಹೋದಂತೆಯೇ ಎಣಿಸಬೇಕಾಗಿದೆ" ಎಂದಳು ಇಲ್ಲಿಗೆ ಇಪ್ಪತ್ತ್ಮೂರನೆಯ ಸರ್ಗವು

ಸುಗ್ರೀವನ ದುಃಖವು ತಾರೆಯು ಆತನನ್ನು ಸಮಾಧಾನಪಡಿಸಿ ರಾಮನಲ್ಲಿ ತನ್ನ ಪ್ರತಿಪತ್ತಿಯನ್ನು ತೋರಿಸಿದುದು

ಹೀಗೆ ಮಿತಿಮೀರಿ ಕಣ್ಣೀರನ್ನು ಸುರಿಸುತ್ತ, ದುಃಖಸಮುದ್ರದಲ್ಲಿ ಮುಳುಗಿದಂತಿದ್ದ ತಾರೆಯನ್ನು ನೋಡಿದಾಗ, ಸುಗ್ರೀವನಿಗೂ ಪಶ್ಚಾತ್ತಾಪವು ಹುಟ್ಟಿತು ತನ್ನಣ್ಣನ ಸಾವಿಗಾಗಿ ಮನಸ್ಸಿನಲ್ಲಿ ಸಂಕಟವುಂಟಾಯಿತು ಹೀಗೆ

ದುಃಖದಿಂದ ತಪಿಸುತ್ತ, ಆಗಾಗ ತಾರೆಯನ್ನು ನೋಡಿನೋಡಿ ತಾನೂ ಕಣ್ಣೀರುಬಿಡುತಿದ್ದನು ಹಾಗೆಯೇ ಮೆಲ್ಲಗೆ ರಾಮನ ಬಳಿಗೆ ಬಂದು ನಿಂತನು ಕೈಯಲ್ಲಿ ಧನುಸ್ಸನ್ನೂ, ಸರ್ಪಸಮಾನಗಳಾದ ಬಾಣಗಳನ್ನೂ ಧರಿಸಿನಿಂತಿರುವ ಸರ್ವಲಕ್ಷಣಲಕ್ಷಿತನಾದ ಆ ರಾಮನ ಪಕ್ಕದಲ್ಲಿ ನಿಂತು, ಯಶಸ್ವಿಯಾದ ಆತನನ್ನು ಕುರಿತು, ''ಎಲೈ ರಾಜೇಂದ್ರನೆ! ನೀನಂತೂ ನನಗೆ ಪ್ರತಿಜ್ಞೆಮಾಡಿಕೊಟ್ಟ ಕಾರ್ಯವನ್ನು ನಿರ್ವಹಿಸಿಬಿಟ್ಟೆ! ಆ ಕಾರ್ಯಕ್ಕೆ ಫಲವೂ ಸನ್ನಿಹಿತನಾಗಿರುವುದು ಆದರೇನು? ಈಗ ನನಗೆ ರಾಜ್ಯಭೋಗಗಳಲ್ಲಿ ಆಸಯೇ ತಪ್ಪಿಹೋಯಿತು ಕೊನೆಗೆ ನನ್ನ ಜೀವದಮೇಲೆಯೇ ನನಗೆ ಆಸಯಿಲ್ಲ ಇದೋ! ಇತ್ತಲಾಗಿ ನನ್ನಣ್ಣನ ಪ್ರಿಯಪತ್ನಿಯಾದ ತಾರೆಯು, ತಡೆಯಲಾರದ ಸಂಕಟದಿಂದ ರೋದಿಸುತ್ತಿರುವಳು ಅತ್ತಲಾಗಿ ನಮ್ಮ ನಗರವಾಸಿಗಳೆಲ್ಲರೂ ದುಃಖದಿಂದ ಕೊರಗಿ ಕೂಗಿಡುತ್ತಿರುವರು ಈ ಅಂಗದನ ದುಃಖವನ್ನು ನೋಡಿದರೆ, ಇನ್ನುಮೇಲೆ ಇವನು ಬದುಕಿರುವನೋ ಇಲ್ಲವೋ ಎಂಬ ಸಂದೇಹವೇ ಉಂಟಾಗುತ್ತಿರುವುದು ನಾನು ಅಜ್ಞಾನದಿಂದ ನನ್ನಣ್ಣನನ್ನೇ ಕೊಲ್ಲಿಸಿದುದಲ್ಲದೆ, ಈ ಸ್ಥಿತಿಯಲ್ಲಿ ರಾಜ್ಯಸುಖವನ್ನೂ ಅನುಭವಿಸಬೇಕೆ? ರಾಮಾ! ಈಗ ನನಗೆ ರಾಜ್ಯದಲ್ಲಿ ಆಸೆಯೇ ಹೋಯಿತು ಏನೋ ಕೋಪದಿಂದಲೂ, ಈರ್ಷ್ಯೆಯಿಂದಲೂ, ಬಹುಕಷ್ಟದಶೆಗೆ ಸಿಕ್ಕಿಬಿದ್ದ ಜಿಹಾಸೆಯಿಂದಲೂ ನಾನು ಮೊದಲು ಅಜ್ಞಾನವಶನಾಗಿ, ಅಣ್ಣನನ್ನೇ ಕೊಲ್ಲಿಸಿಬಿಟ್ಟೆನು ಈಗ ವಾನರೇಂದ್ರನಾದ ಆತನು ಸತ್ತುಬಿದ್ದಿರುವುದನ್ನು ನೋಡಿದಮೇಲೆ, ಆ ಕ್ರೋಧೋತ್ಸಾಹಗಳೆಲ್ಲವೂ ಅಡಗಿಹೋದುವು ಈಗ ತೀವ್ರದುಃಖದಿಂದ ತಪಿಸುತ್ತಿರುವೆನು ಈಗ ನನಗೆ ಋಶ್ಯಮೂಕಪರ್ವತವಾಸವೇ ಮೇಲೆಂದು ತೋರಿರುವುದು ವಾನರಯೋಗ್ಯವಾದ ನಮ್ಮ ಸ್ವವೃತ್ತಿಯನ್ನೇ ಅವಲಂಬಿಸಿ, ಆ ಚಿತ್ರಕೂಟದಲ್ಲಿಯೇ ಹೇಗೋ ಕಾಲವನ್ನು ಕಳೆದುಬಿಡುವುದು ಉತ್ತಮವೆಂದು ನನಗೆ ತೋರಿರುವುದೇಹೊರತು, ಈಗ ಸ್ವರ್ಗವೇ ಕೈಗೆ ಸೇರಿದರೂ ನನಗೆ ರುಚಿಸುವುದಿಲ್ಲ ರಾಮಾ! ಈಗ ನಾನು ಇನ್ನೆಷ್ಟುಹೇಳಿದರೇನು? ಹಿಂದೆ ಅನೇಕಯುದ್ಧಗಳಲ್ಲಿ ಈ ನನ್ನಣ್ಣನು ನನ್ನನ್ನು ಹೊಡೆದೋಡಿಸುವಾಗಲೂ, ''ನಾನು ನಿನ್ನನ್ನು ಕೊಲ್ಲಲಾರೆನು!

ಬದುಕು! ಹೋಗು " ಎಂದು ಮರುಕದಿಂದ ಕೊಲ್ಲದೆ ಬಿಟ್ಟಿರುವನು ಕೃತ ಘ್ನನಾದ ನಾನಾದರೋ ಆ ಅಣ್ಣನನ್ನೇ ಕೊಲ್ಲಿಸಿದೆನಲ್ಲಾ ! ಮುಖ್ಯ ವಾಗಿ ಆತನು ಮಹಾತ್ಮನಾದುದರಿಂದ,ಅವನ ಗುಣಕ್ಕೆ ತಕ್ಕ ಮಾತುಗಳನ್ನೇ ಆಡಿದನು.ಪಾಪಿಯಾದ ನಾನಾದರೋ ನನ್ನ ಯೋಗ್ಯತೆಗೆ ತಕ್ಕಂತೆ ಈ ಪಾ ಪಕೃತ್ಯವನ್ನು ನಡೆಸಿಬಿಟ್ಟೆನು ಲೋಕದಲ್ಲಿ ಬೇರೆಯಾವನು ನನ್ನಂತೆ ದುರಾಸೆ ಗೊಳಗಾಗಿ ರಾಜ್ಯಸುಖಕ್ಕೂ,ಅಣ್ಣನ ಸಾಪಿನಿಂದುಂಟಾದ ದುಃಖಕ್ಕೂ ಇ ರುವತಾರತಮ್ಯವನ್ನೂ ವಿಚಾರಿಸದೆ,ಹೀಗೆ ಮಹಾತ್ಮನಾದ ಅಣ್ಣನನ್ನೇ ಕೊ ಲ್ಲಿಸುವನು/ನನ್ನಣ್ಣನಾದರೋ ತನ್ನ ಮಹತ್ತ್ವಕ್ಕೆ ಲೋಪವು ಬರಬಾರದೆಂ ಬುದಕ್ಕಾಗಿಯೇ, ಹಿಂದೆ ಅನೇಕಯುದ್ಧಗಳಲ್ಲಿ ನನ್ನನ್ನು ಕೊಲ್ಲದೆ ಮನ್ನಿಸಿಬಿಟ್ಟ ನು ನಾನಾದರೋ ನನ್ನ ದುರ್ಬುದ್ಧಿಗೆ ತಕ್ಕಂತೆ ನೀತಿಯನ್ನು ಮೀರಿ ಆ ಅಣ್ಣ ನನ್ನೇ ಕೊಲ್ಲಿಸಿದೆನು ಹಿಂದಿನ ಯುದ್ಧದಲ್ಲಿ ಒಮ್ಮೆ ಈತನು ಬೀಸಿಬಡಿದ ಮರ ದ ಕೊಂಬೆಗಳಿಂದ, ನಾನು ಮೈಮುರಿಸಿಕೊಂಡು ಅಳುತ್ತ ಕುಳಿತಿರುವಾಗ, ಈ ನನ್ನಣ್ಣನು ಎಷ್ಟೋ ಮರುಕದಿಂದ ಬಂದು, ನನ್ನನ್ನು ನೋಡಿ ಸಮಾ ಧಾನವಾಕ್ಯದಿಂದ ''ಇನ್ನು ಮೇಲಾದರೂ ನೀನು ಯುದ್ಧಕ್ಕೆ ಬರಬೇಡ ! ಹೋಗು!" ಎಂದು ಹೇಳಿ ಕಳುಹಿಸಿಬಿಟ್ಟನು ಇದರಿಂದ ಅವನು ತನ್ನ ಒಡ ಹುಟ್ಟಿದ ಪ್ರೇಮವನ್ನೂ, ತನ್ನ ಸೌಜನ್ಯವನ್ನೂ,ಧರ್ಮವನ್ನೂ ಬಿಡದೆ ಕಾ ಪಾಡಿಕೊಂಡನು ಪಾಪಿಯಾದ ನಾನಾದರೋ ಈ ದುಷ್ಕೃತ್ಯದಿಂದ ನನ್ನ ಕೋಪವನ್ನೂ, ನನ್ನ ದುರಾಸೆಯನ್ನೂ, ನನ್ನ ಕಪಿಸ್ವಭಾವವನ್ನೂ ಜೆನ್ನಾಗಿ ಹೊರಪಡಿಸಿಬಿಟ್ಟೆನು ರಾಮಾ ! ಈಗ ನಾನು ಎಷ್ಟುಪರಿತಪಿಸಿದ ರೇನು! ಇಂದ್ರನು ತ್ವಷ್ಟೃಪುತ್ರನಾದ ವಿಶ್ವರೂಪವನ್ನು ಕೊಂದು,ಮಹಾ ಪಾತಕಕ್ಕೊಳಗಾದಂತೆ, ನಾನೂ ಒಡಹುಟ್ಟಿದ ಅಣ್ಣನನ್ನೇ ಕೊಂದು ಪಾ ಪಿಯಾದೆನು ಈಗ ನಾನು ನಡೆಸಿದ ಪಾಪಕೃತ್ಯವು ಸಮಸ್ತಲೋಕನಿಂದಿತ ವಾದುದು ಮನಸ್ಸಿನಿಂದಲೂ ನೆನೆಸತಕ್ಕುದಲ್ಲ ಈ ದುರಾಶೆಯು ಯಾವ ಘೌತುಕನಿಗೂ ಹುಟ್ಟತಕ್ಕುದಲ್ಲ ಹೆಚ್ಚಾಗಿ ಹೇಳಿದುದರಿಂದೇನು? ಕಣ್ಣಿಂದ ನೋಡಿ ಸಹಿಸಬಾರದ ಪಾಪಕಾರ್ಯವನ್ನು ಮಾಡಿಬಿಟ್ಟೆನು ಎಲೈ ಮಿತ್ರನೆ! ಪೂರ್ವದಲ್ಲಿ ಇಂದ್ರನಿಗೆ ವಿಶ್ವರೂಪನನ್ನು ಕೊಂದುದರಿಂದ ಬಂದ ಪಾಪವ

ನ್ನು * ಈ ಭೂಮಿಯೂ, ನೀರೂ, ಮರಗಳೂ, ಸ್ತ್ರೀಯರೂ ಹಂಚಿ ಕೊಂಡುಬಿಟ್ಟರು ಭಾಗ್ಯವಂತರಿಗೆ ನಾಲ್ಕುಕಡೆಗಳಿಂದಲೂ ಸಹಾಯಸಂ ಪತ್ತು ಒದಗಿಬರುವುದು ಕಾಡುಕಪಿಯಾದ ನನ್ನ ಪಾಪವನ್ನು ಹೊತ್ತು ಕೊಳ್ಳುವುದಕ್ಕೆ ಯಾರುತಾನೇ ಇಷ್ಟಪಡುವರು? ಅಧರ್ಮಯುಕ್ತವಾಗಿ ವಂಶನಾಶಕ್ಕೆ ಹೇತುವಾದ ಈ ಘೋರಕೃತ್ಯವನ್ನು ನಡೆಸಿಬಿಟ್ಟಮೇಲೆ, ನಾ ನು ಯಾವ ಪ್ರಜೆಗಳ ಗೌರವಕ್ಕ ಪಾತ್ರನಾಗುವೆನು? ನಾನು ಯೌ ವರಾಜ್ಯಕ್ಕೂ ಅರ್ಹನಲ್ಲ ಇನ್ನು ನನಗೆ ಮುಖ್ಯರಾಜ್ಯಾಭಿಷೇಕವೆಂದರೇನು? ಕೇವಲಸಿಂಧ್ಯವಾಗಿಯೂ, ತುಚ್ಛವಾಗಿಯೂ, ಸರ್ವಲೋಕಕ್ಕೂ ತ್ಯಾಜ್ಯವಾ ಗಿಯೂ ಇರುವ ಪಾಪವನ್ನು ನಡೆಸಿಬಿಟ್ಟಿರುವೆನು ಮಳೆಯ ನೀರಿನ ಪ್ರವಾ ಹವು ಒಟ್ಟಾಗಿಸೇರಿ, ವೇಗದಿಂದ ಬಂದು ಹಳ್ಳದಲ್ಲಿ ದುಮ್ಮಿಕ್ಕುವಂತೆ,ತಡೆಯ ಲಾರದ ಶೋಕಭಾರವು ನನ್ನ ಮನಸ್ಸನ್ನು ತುಂಬಿಬಿಟ್ಟಿರುವುದು ಭ್ರಾತೃ ಹತ್ಯೆಯೆಂಬ ಬೆನ್ನು ಮತ್ತು ಬಾಲಗಳಿಂದಲೂ,ಅವನ ಮನಸ್ಸಂತಾಪಗಳೆಂಬ ಸುಂಡಿಲು, ಕಣ್ಣು, ತಲೆ, ಕೊಂಬುಗಳೆಂಬ ಮುಂದಿನ ಅವಯವಗಳಿಂದ ಲೂ ಕೂಡಿದ ಮಹಾಪಾತಕವೆಂಬ ಮದದಾನೆಯು, ನದಿಯ ದಡವನ್ನು ತಿ ವಿದು ಕೆಡಹುವಂತೆ, ನಾನಾವಿಧವಾಗಿ ನನ್ನನ್ನು ಹಿಂಸಿಸುತ್ತಿರುವುದು ಬ ಣ್ಣಗೆಟ್ಟ ಬೆಳ್ಳಿಯನ್ನು ಬೆಂಕಿಯಲ್ಲಿಟ್ಟ ಊದುವಾಗ, ಅದು ಕಿಟ್ಟವನ್ನು ಬಿ ಟ್ಟು ಬೇರ್ಪಡುವಂತೆ, ನನಗೆ ಕುಲಕ್ರಮಾಗತವಾಗಿರುವ ಸಚ್ಚರಿತ್ರಗಳೆಲ್ಲ ವೂ, ನನ್ನ ಮನಸ್ಸಿನಲ್ಲಿರುವ ಘೋರಪಾಪವನ್ನು ನೋಡಿ ಸಹಿಸಲಾರದೆ, ನ ನ್ನ ಸಂಬಂಧವನ್ನೇ ಬಿಟ್ಟು ಹಿಂತಿರುಗಿ ಹೋಗುತ್ತಿರುವುವು ಎಲೈ ಮಿತ್ರನೆ! ತಂದೆಯ ಮರಣಕ್ಕಾಗಿ ಈ ಅಂಗದನು ತಾಳಲಾರದ ಸಂಕಟದಿಂದ ತಪಿ ಸುವುದನ್ನು ನೋಡಿ, ಮಹಾಬಲಾಢ್ಯರಾದ ಈ ವಾನರರೆಲ್ಲರಿಗೂ ಈಗಲೇ ಅರ್ಧಪ್ರಾಣವು ಹೋದಂತೆ ಕಾಣುವುದು ಈ ಅನರ್ಥಗಳಿಗೆಲ್ಲಾ ನಾನೇ ಮೂಲವಾದೆನಲ್ಲಾ! ಸೌಜನ್ಯದಿಂದಲೂ, ತಂದೆತಾಯಿಗಳಲ್ಲಿ ವಿಧೇಯತೆ ಯಿಂದಲೂ ನಡೆದುಕೊಳ್ಳುವ ಪುತ್ರರನ್ನು ಲೋಕದಲ್ಲಿ ಸುಲಭವಾಗಿ

---

* ಭೂಮಿಯೆಲ್ಲಿ ಊಷರರೂಪದಿಂದಲೂ, ನೀರಿನಲ್ಲಿ ನೊರೆಯ ರೂಪದಿಂದ ಲೂ, ಮರಗಳಲ್ಲಿ ಅಂಟಿನರೂಪದಿಂದಲೂ, ಸ್ತ್ರೀಯರಲ್ಲಿ ರಜಸ್ಸಿನ ರೂಪದಿಂದಲೂ ಇಂದ್ರನ ಪಾಪವು ಹಂಚಿಡಲ್ಪಟ್ಟಿರುವುದೆಂದು ಪೂರ್ವಕಥೆಯು

ನೋಡಬಹುದು ಆದರೆ ಈ ಅಂಗದನಂತಿರುವ ಸುಪುತ್ರನನ್ನು ಪಡೆಯು
ವುದುನಾತ್ರ ದುರ್ಲಭವು ಮತ್ತು ಯಾವ ದೇಶದಲ್ಲಿಯಾದರೂ ಇತರ
ಬಂಧುಗಳನ್ನು ಪಡೆಯಬಹುದೇಹೊರತು ಒಡಹುಟ್ಟಿದವರ ಸಾನ್ನಿಧ್ಯವು
ಸಿಕ್ಕಲಾರದು ಎಲೆ ವೀರಾಗ್ರಣಿ! ಒಂದುವೇಳೆ ಅಂಗದನು ಜೀವಿಸಿರು
ವಪಕ್ಷದಲ್ಲಿ, ಅವನ ತಾಯಿಯಾದ ತಾರೆಯು ಅವನನ್ನು ರಕ್ಷಿಸುವ ಉದ್ದೇಶ
ದಿಂದಲಾದರೂ ಬದುಕಿರಬಹುದು ಹಾಗಿಲ್ಲದೆ ಅಂಗದನು ಪಿತೃವಿಯೋ
ಗದುಃಖದಿಂದ ಈಗಲೇ ಪ್ರಾಣವನ್ನು ಬಿಡುವಪಕ್ಷದಲ್ಲಿ, ತಾರೆಯೂ ಬ
ದುಕಲಾರಳೆಂಬುದೇ ನಿಶ್ಚಯವು ಇನ್ನು ಮಹಾಪಾಪಿಯಾದ ನಾನು ಬದು
ಕಿ ಫಲವೇನು? ನಾನೂ ಈಗಲೇ ಈ ನನ್ನ ಸಹೋದರನೊಡನೆಯೂ, ವತ್ಸ
ನಾದ ಈ ಅಂಗದನೊಡನೆಯೂ ಸೇರಿ, ಅವರಿಬ್ಬರಿಗೂ ಸಂಗಡಿಗನಾಗಿ ಉ
ರಿಯುವ ಬೆಂಕಿಯಲ್ಲಿ ಬಿದ್ದುಬಿಡುವೆನು ರಾಮಾ! ಇದರಿಂದ ನಿನ್ನ ಕಾರ್ಯವು
ಕೆಟ್ಟುಹೋಗುವುದೆಂದೆಣಿಸಬೇಡ! ಈ ವಾನರವೀರರೆಲ್ಲರೂ ನಿನ್ನ ಆಜ್ಞೆಗೆ
ಅಧೀನರಾಗಿ ಸೀತೆಯನ್ನು ಹುಡುಕಿಬರುವರು ಇದಕ್ಕಾಗಿ ನಾನಿರಬೇಕಾದು
ದಿಲ್ಲ! ನೀನೇ ಅಸಾಧಾರಣಶಕ್ತಿಯುಳ್ಳವನಾದುದರಿಂದ, ನಾನು ಸತ್ತರೂ
ನಿನ್ನ ಕಾರ್ಯವು ಪೂರ್ಣವಾಗಿ ಸಿದ್ಧಿಯನ್ನು ಹೊಂದುವುದರಲ್ಲಿ ಸಂದೇಹವಿಲ್ಲ
ಇಂತಹ ಪಾಪಕಾರ್ಯವನ್ನು ಮಾಡಿದ ಕುಲಗೇಡಿಯಾದ ನಾನು, ಇನ್ನು ಮೇ
ಲೆ ಭೂಮಿಯಲ್ಲಿ ತಲೆಯೆತ್ತಿ ಬದುಕಿರುವುದೇ ಉಚಿತವಲ್ಲ ಇನ್ನು ಅಗ್ನಿಪ್ರ
ವೇಶಕ್ಕೆ ನನಗೆ ಅನುಜ್ಞೆಯನ್ನು ಕೊಡು " ಎಂದನು ಹೀಗೆ ದುಃಖದಿಂದ
ಕೊರಗುತ್ತಿರುವ ಸುಗ್ರೀವನ ಮಾತನ್ನು ಕೇಳಿ ರಾಮನ ಕಣ್ಣುಗಳಲ್ಲಿಯೂ
ಪಳಪಳನೆ ನೀರು ಸುರಿಯಿತು ಅವನಿಗೂ ಪರಿತಾಪವುಂಟಾಯಿತು ಭೂದೇ
ವಿಯಂತೆ ತಾಳ್ಮೆಯುಳ್ಳವನಾಗಿಯೂ, ಲೋಕರಕ್ಷಕನಾಗಿಯೂ ಇರುವ ಆ
ಶ್ರೀರಾಮನೂಕೂಡ ಒಂದು ಮುಹೂರ್ತಕಾಲದವರೆಗೆ ಏನೂ ತೋರದೆ
ಸ್ತಬ್ಧನಾಗಿದ್ದನು ಅತ್ತಲಾಗಿ ವ್ಯಸನಸಮುದ್ರದಲ್ಲಿ ಮುಳುಗಿ ಆಗಾಗ
ತನ್ನನ್ನೇ ನೋಡಿ ರೋದಿಸುತ್ತಿರುವ ತಾರೆಯನ್ನು ನೋಡಿದಾಗ, ಅವಳಲ್ಲಿ
ಯೂ ರಾಮನಿಗೆ ಬಹಳ ಮರುಕವು ಹುಟ್ಟಿ ಅವಳನ್ನು ಸಮಾಧಾನಪಡಿಸಬೇ
ಕೆಂದು ಬಂದನು ಅಷ್ಟರಲ್ಲಿ ತನ್ನ ಪತಿಯೆನ್ನು ಆಗಾಗ ಅಪ್ಪಿಕೊಳ್ಳು
ತ್ತ, ನೆಲದಮೇಲೆ ಹೊರಳುತಿದ್ದ ಆ ತಾರೆಯನ್ನು, ಅಲ್ಲಿದ್ದ ಕಪಿಶ್ರೇಷ್ಠರೆ

ಲ್ಲರೂ ಮೇಲಕ್ಕೆತ್ತಿ ಕುಳ್ಳಿರಿಸಿ ಅನೇಕವಿಧದಿಂದ ಸಮಾಧಾನಪಡಿಸಿದರು ತಾರೆಯು ಪತಿಯನ್ನಗಲಲಾರದೆ ದುಃಖಾತಿಶಯದಿಂದ ರೋದಿಸುತ್ತ, ಆ ವನಮೇಲೆ ಬಿದ್ದು ಹೊರಳುತಿದ್ದಳು ಕಪಿಮಂತ್ರಿಗಳು ಬಲಾತ್ಕಾರದಿಂದ ಅವಳನ್ನು ಕರೆತಂದರು ಆಗ ತಾರೆಯು ರಾಮನಬಳಿಗೆ ಬಂದು, ಧನುರ್ಧಾರಿಯಾಗಿ ಸೂರ್ಯನಂತೆ ಜ್ವಲಿಸುತಿದ್ದ ಆ ರಾಮನನ್ನು ನಟ್ಟದೃಷ್ಟಿಯಿಂದ ನೋಡುತಿದ್ದಳು,ಮೃಗನೇತ್ರೆಯಾದ ಆ ತಾರೆಯು, ಸಮಸ್ತರಾಜ ಲಕ್ಷಣಗಳಿಂದ ಕೂಡಿದವನಾಗಿಯೂ, ಹಿಂದೆ ಎಂದೂ ಕಾಣದ ರೂಪಾತಿಶಯವುಳ್ಳವನಾಗಿಯೂ ಪುಂಡರೀಕಾಕ್ಷನಾಗಿಯೂ ಪುರುಷೋತ್ತಮನಾಗಿಯೂ ಇರುವ ಆತನನ್ನು ನೋಡಿ, ಇವನೇ ವಾಲಿಯನ್ನು ಕೊಂದ ಆ ರಾಮನೆಂದು ತಿಳಿದುಕೊಂಡಳು ಪೂಜ್ಯಳಾದ ಆ ತಾರೆಯು ದುಃಖಿತೆಯಾಗಿ ಸಂಕಟದಿಂದ ಆಗಾಗ ಪ್ರಜ್ಞೆತಪ್ಪುತ್ತ, ಇಂದ್ರಸಮಾನನಾಗಿಯೂ, ಮಹಾನುಭಾವನಾಗಿಯೂ ಇರುವ ಆ ರಾಮನ ಸಮೀಪಕ್ಕೆ ಆತುರದಿಂದ ಬಂದಳು ದುಃಖದಿಂದ ಆಕಗೆ ತಡೆಯಲಾರದ ಕೋಪವುಂಟಾಯಿತು ಅವಳ ದೇಹವೇ ಅವಳ ಸ್ವಾಧೀನವಿಲ್ಲದೆ ಹೋಯಿತು ಅವಳು ಉದಾರಮನಸ್ಸುಳ್ಳವಳಾಗಿಯೂ, ಶುದ್ಧಸ್ವಭಾವಳಾಗಿಯೂ ಇದ್ದರೂ, ಕ್ರೂರಬಾಣದಿಂದ ತನ್ನ ಪತಿಯನ್ನು ಕೊಂದ ರಾಮನನ್ನು ನೋಡಿ, ಕೋಪವನ್ನು ತಡೆಯಲಾರದ, ತನಗೆ ತೋರಿದವರಗೂ ಅವನನ್ನು ಕುರಿತು ಪರುಷವಾಕ್ಯಗಳನ್ನಾಡಿಬಿಡಬೇಕಂಬ ನಿಶ್ಚಯದಿಂದ ಮುಂದೆ ನಿಂತಳು ಆದರೇನು ! ಅವಳು ರಾಮನ ಮುಂದೆ ಬಂದು ನಿಂತಾಗಲೇ, ಆತನ ಸಾನ್ನಿಧ್ಯದ ಮಹಿಮೆಯಿಂದ ಅವಳ ಮಾತುಗಳೆಲ್ಲವೂ ಸ್ತುತಿರೂಪಗಳಾಗಿಯೇ ಪರಿಣಮಿಸಿದುವು ಆಗ ತಾರೆಯು ರಾಮನನ್ನು ಕುರಿತು ' ಎಲೈ ರಾಮನೆ ! * ನೀನಾದರೋ ಹೀಗೆಂ

---

* ಇಲ್ಲಿ ''ತ್ವಮಪ್ರಮೇಯಶ್ಚ ದುರಾಸದಶ್ಚ ಜಿತೇಂದ್ರಿಯಶ್ಚೋತ್ತಮಧಾರ್ಮಿಕಶ್ಚ । ಅಕ್ಷಯ್ಯಕೀರ್ತಿಶ್ಚ ವಿಚಕ್ಷಣಶ್ಚ ಕ್ಷಿತಿಕ್ಷಮಾವಾನ್ ಕ್ಷತಜೋಪಮಾಕ್ಷ!'' ಎಂದು ಮೂಲವು ಇದರಿಂದ ತಾರೆಯು ರಾಮನ ಪರತ್ವವನ್ನು ಕೊಂಡಾಡುವಳೆಂದು ಗ್ರಾಹ್ಯವು (ತ್ವಂ ಅಪ್ರಮೇಯಃ)ಇಲ್ಲಿ ನನಗಿದಿರಾಗಿ ಧನುರ್ಬಾಣಗಳನ್ನು ಹಿಡಿದಿರುವ ನೀನು, ಇಷ್ಟು ಶೌಲಭ್ಯದಶೆಯನ್ನು ತೋರಿಸುತಿದ್ದರೂ,ನಿನ್ನಮಹಿಮೆಯು ಇಷ್ಟೆಂದು ನಿರ್ಣಯಿಸಲಸಾಧ್ಯವಾಗಿರುವುದು.''ವೇದಾಹಂ . ಮಹಾನ್ತಂ ಕ ಇತ್ಯಾದಿವೇದ" ಎಂಬಂ

ದು ನಿರ್ಣಯಿಸಲಾರದ ಮಹಾಮಹಿಮೆಯುಳ್ಳವನು. ಲೋಕದಲ್ಲಿ ಯಾ

ತೆ ವೇದಗಳಿಗೂ ನಿರ್ಣಯಿಸಲಸಾಧ್ಯನಾಗಿರುವೆಯೆಂದು ಭಾವವು. ಅಥವಾ (ತ್ವಂ ಅಪ್ರಮೇಯಃ)ಸೋऽಂಗೆ ವೇದ ಯೆದಿವಾ ನವೇದ"ಎಂಬಂತೆ ನೀನೇ ನಿನ್ನ ಮಹಿಮೆಯನ್ನು ಇಷ್ಟೆಂದು ನಿರ್ಣಯಿಸಲಾರದವನೆಂದೂ ಅರ್ಥವು ಹೀಗೆ ಅಂತಃಕರಣಕ್ಕೇ ಗೋಚರನಾಗದ ನೀನು ಬಾಹ್ಯಕರಣಗಳಿಗೆ ಹೇಳಬೇಕಾದುದೇನು?(ದುರಾಸದಶ್ಚ) ಬೇರೆಯಾವ ಪ್ರಕಾರಾಂತರಗಳಿಂದಲೂ ಹೊಂದಲು ಶಕ್ಯನು ಮತ್ತು ಇಲ್ಲಿ"ಷದಲೃ ಧಾತುವಿಗೆ, ವಿಶರಣ,ಗತಿ,ಅವಸಾದನೆಗಳೆಂಬ ಮೂರರ್ಥಗಳಿರುವುದರಿಂದ(ದುರಾಸದಃ)ಎಂಬುದಕ್ಕೆ ನಾಶವಿಲ್ಲದುದರಿಂದನಿತ್ಯಾತ್ಮಕನೆಂದೂ,ಕಾಲನವಿಲ್ಲದುದರಿಂದಸರ್ವವ್ಯಾಪಕನೆಂದೂ,ದುಃಖವಿಲ್ಲದವನೆಂಬುದರಿಂದ ನಿತ್ಯಾನಂದೈಸ್ವರೂಪನೆಂದೂ ಭಾವವು (ಜಿತೇಂದ್ರಿಯಶ್ಚ)ಪಶ್ಯತ್ಯಚಕ್ಷುಃಸ್ಪಶೃಣೋತ್ಯಕರ್ಣಃ, ಅಪಾಣಿಪಾದೋ ಜವನೋ ಗೃಹೀತಾ' ಕಣ್ಣುಗಳಿಲ್ಲದೆ ನೋಡುವವನು, ಕಿವಿಗಳಿಲ್ಲದೆ ಕೇಳುವವನು, ಕಾಲಿಲ್ಲದೆ ಓಡುವವನು, ಕೈಗಳಿಲ್ಲದೆ ಕೆಲಸಮಾಡುವವನು, ಹೀಗೆ ನೀನು ಸಾಮಾನ್ಯಮನುಷ್ಯರಂತೆ ಇಂದ್ರಿಯವ್ಯಾಪಾರಗಳಿಲ್ಲದವನಾದರೂ ಯಾವಾಗಲೂ ಎಲ್ಲವನ್ನೂ ತಿಳಿಯುವ ಮಹಿಮೆಯುಳ್ಳವನೆಂದು ಭಾವವು ಮತ್ತು(ಜಿತೇಂದ್ರಿಯ)"ದುರ್ಗ್ರಹಮನಸಾಪ್ಯನೈರಿಂದ್ರಿಯೈರಪಿದುರ್ಜಯೈಃ" ಎಂಬಂತೆ, ಇತರರ ಇಂದ್ರಿಯಗಳನ್ನೂ ಜಯಿಸಿದವನು ಅವಾಙ್ಮನಸಗೋಚರನೆಂದು ಭಾವವು (ತ್ವಂ ಜಿತೇಂದ್ರಿಯ)"ಸರ್ವಂವಾಕ್ಯಂಸಾವಧಾರಣಂ" ಎಂಬ ನ್ಯಾಯದಿಂದ ನೀನೊಬ್ಬನೇ ಜಿತೇಂದ್ರಿಯನೆಂದರ್ಥವು"ಅಹಲ್ಯಾಯೈ ಜಾರಸ್ಯರಪತಿ ರಭೂದಾತ್ಮತನಯಾಂ ಪ್ರಜಾನಾಥೋಯಾಮೀದಭಜತ ಗುರೋರಿಂದುರಬಲಾಂ" ಸಮಸ್ತದೇವತೆಗಳಿಗೂ ರಾಜನಾದ ಇಂದ್ರನೊಕೊಡ ಋಷಿಪತ್ನಿಯಾದ ಅಹಲ್ಯೆಯನ್ನು ಕಾಮಿಸಿದನು ಲೋಕಪಿತಾಮಹನೆನಿಸಿಕೊಂಡ ಬ್ರಹ್ಮನೂ ತನ್ನ ಮಗಳೆನ್ನೇ ವರಿಸಿದನು ಲೋಕಾಹ್ಲಾದಕನಾದ ಚಂದ್ರನು ಗುರುಭಾರ್ಯೆಯನ್ನು 'ಹೊಂದಿದನು ಹೀಗೆ ದೇವಾದಿಗಳೂ ಚಪಲಸ್ವಭಾವವನ್ನು ತೋರಿಸಿರುವರು ನೀನೊಬ್ಬನೇ ಜಿತೇಂದ್ರಿಯನೆಂದು ಭಾವವು (ಉತ್ತಮೋಧಾರ್ಮಿಕಶ್ಚ) ಸ್ವಾಶ್ರಿತರಕ್ಷಣಾರ್ಥವಾಗಿ ಸತ್ಕಾರ್ಯಗಳನ್ನು ನಡೆಸುತ್ತಿರುವುದರಿಂದ ನೀನು ಉತ್ತಮಧಾರ್ಮಿಕನೆಂದು ಭಾವವು ತನ್ನೆ ಸದ್ಗತಿಯನ್ನಪೇಕ್ಷಿಸಿ, ಅದಕ್ಕೆ ಸಾಧಕಗಳಾದ ಕರ್ಮಗಳನ್ನುಮಾತ್ರವೇ ನಡೆಸುವವನು ಅಧಮಧಾರ್ಮಿಕನು ತನಗೂ ಪರರಿಗೂ ಪ್ರಯೋಜನಕರಗಳಾದ ಸತ್ಕಾರ್ಯಗಳನ್ನು ನಡೆಸುವವನು ಮಧ್ಯಮಧಾರ್ಮಿಕನು ಪರಪ್ರಯೋಜನಾಪೇಕ್ಷೆಯಿಂದಲೇಸದ್ಧರ್ಮಗಳನ್ನು ನಡೆಸುವವನು ಉತ್ತಮಧಾರ್ಮಿಕನು ಆವಾಪ್ತಸಮಸ್ತಕಾಮನಾದ ನೀನು ನಡೆಸತಕ್ಕ ಸತ್ಕಾರ್ಯಗಳೆಲ್ಲವೂ ಆಶ್ರಿತರಕ್ಷಣಾರ್ಥವಾಗಿಯೇ

ರಿಗೂ ನೀನು ಈಡಾಗುವವನಲ್ಲ ಜಿತೇಂದ್ರಿಯನು. ಧಾರ್ಮಿಕರಲ್ಲಿ ನೀನೇ ಮೇಲೆನಿಸಿಕೊಂಡಿರುವವನು ಕಂದುಕುಂದಿಲ್ಲದ ಆಪಾರಕೀರ್ತಿಯುಳ್ಳವನು ಅಪಾರಬುದ್ಧಿಯುಳ್ಳವನು ಭೂಮಿಯಂತೆ ತಾಳ್ಮೆಯುಳ್ಳವನು ರಕ್ತದಂತೆ ಕೆಂಪಾಗಿ, ರಾಜಲಕ್ಷಣಗಳಿಂದಕೂಡಿದ ಕಣ್ಣುಳ್ಳವನು ಮಹಾಬಲಾಢ್ಯನು ಆ ಮಹಾಬಲಕ್ಕೆ ತಕ್ಕ ಮೈಕಟ್ಟುಳ್ಳವನು ಈ ವಿಥಗಳಾದ ಅವಯವಸಂಸ್ಥಾನಗಳು ಸಾಮಾನ್ಯದೇಹಕ್ಕೆ ಲಭಿಸವು ನೀನು ಮನುಷ್ಯರೂಪದಿಂದಿದ್ದರೂ, ನಿನ್ನ ದೇಹವು ಮನುಷ್ಯಲಕ್ಷಣಗಳನ್ನು ಬಿಟ್ಟು ದಿವ್ಯಸೌಭಾಗ್ಯದಿಂದಲೇ ಕೂಡಿರುವುದು ಎಲೆ ವೀರನೆ! ನನ್ನ ಪತಿಯನ್ನುಕೊಂದ ಧನುರ್ಬಾಣಗಳೆರಡೂ, ಈಗಲೂ ನಿನ್ನ ಕೈಯಲ್ಲಿ ಸಿದ್ಧವಾಗಿಯೇ ಇರುವುವಲ್ಲವೆ? ಯಾವ ಒಂದೇ ಬಾಣದಿಂದ ನೀನು ನನ್ನ ಪ್ರಿಯನನ್ನುಕೊಂದೆಯೋ, ಅದೇಬಾಣದಿಂದ ನನ್ನನ್ನೂ ಕೊಂದುಬಿಡು! ನಿನ್ನಿಂದ ಹತಳಾಗಿ ನಾನೂ ನನ್ನ ಪತಿಯೊಡನೆ ಸೇರುವೆನು ನೀನು ಸಮಸ್ತಜಗತ್ತನ್ನೂ ರಂಜಿಸತಕ್ಕವನಾದುದರಿಂದಲೇ, ನಿನ್ನನ್ನು ಎಲ್ಲರೂ ರಾಮನೆಂದು ಕರೆಯುವರು ಈಗ ನೀನು ನಮ್ಮಿಬ್ಬರನ್ನುಮಾತ್ರ ಅಗಲಿಸಿ ಸಂಕಟಪಡಿಸುವುದೇಕೆ? ನನ್ನನ್ನೂ ಕೊಂದು ವಾಲಿಯ ಬಳಿಗಿ ಸೇರಿಸಿ, ಅವನಿಗೆ ನನ್ನುಪಯೋಗವನ್ನು ತಪ್ಪಿಸಿ ಸಂತೋಷಪಡಿಸು! ನನ್ನನ್ನಗಲಿ ವಾಲಿಯು ಎಷ್ಟುಮಾತ್ರವೂ ನೆಮ್ಮದಿಯಿಂದಿರುವವನಲ್ಲ ನೀರಸ್ವರ್ಗದಲ್ಲಿ ಕಮಲನೇತ್ರೆಯರಾದ ಅಪ್ಸರಸ್ಸುಗಳು ತನ್ನಸುತ್ತಲೂ ಬಂದು ನೆರೆದಿದ್ದರೂ, ಆವಾಲಿಯು ನನ್ನನ್ನು ಕಾಣದಿದ್ದರೆ ತಪಿಸುವನು ನಾನಿಲ್ಲದಿದ್ದರೆ ವಿಚಿತ್ರಪುಷ್ಪಾಭರಣಗಳಿಂದಲಂಕೃತರಾದ ಆ ಅಪ್ಸರಸ್ತ್ರೀಯರನ್ನೂ ಆ ನಾದರಿಸಿಬಿಡುವನು ರಾಮಾ! ನಿನಗೆ ಬಹುದಿನಗಳ: ಅನುಭವದಿಂದಲೇ ತಿಳಿದಿರುವ ಈ ವಿಷಯವನ್ನು ನಾನು ಹೇಳಿ ತಿಳಿಸಬೇಕೆ? ಇಷ್ಟುರಮಣೀಯ

ಇರುವುದರಿಂದ, ನೀನೊಬ್ಬನೇ ಉತ್ತಮೆಧಾರ್ಮಿಕನೆಂದು ಭಾವವು (ಅಕ್ಷಯ್ಯಕೀರ್ತಿಶ್ಚ) "ತಸ್ಯನಾಮಮಹದ್ಯಶ" ಎಂಬಂತೆ ಪರತ್ವಪ್ರಯುಕ್ತವಾದ ಕೀರ್ತಿಯುಳ್ಳವನು (ವಿಚಕ್ಷಣಶ್ಚ)ದೂರದೃಷ್ಟಿಯುಳ್ಳವನು ಎಂದರೆ ಪರೋಕ್ಷಜ್ಞಾನವುಳ್ಳವನು (ಕ್ಷಿತಿಕ್ಷಮಾವಾನ್) ಭೂಮಿಯಂತೆ ತಾಳ್ಮೆಯುಳ್ಳವನು "ಇತ್ಯಾದಿರೀತಿಯಲ್ಲಿ ತಾರೆಯು ಈ ಶ್ಲೋಕದಿಂದ ರಾಮನ ಪರತ್ವವನ್ನು ಹೇಳಿದುದಾಗಿ ಅಂತರಾಶಯವು.

ನಾದ ಬೆಟ್ಟದ ತಪ್ಪಲಲ್ಲಿರುವಾಗಲೂ, ನೀನು ಸೀತೆಯನ್ನು ಕಾಣದೆ ಹೇಗೆ ಪರಿತಪಿಸುತ್ತಿರುವೆಯೋ ನೋಡು! ಹಾಗೆಯೇ ವಾಲಿಯೂ ಸರ್ವಭೋಗ ನಿಧಾನವಾದ ಸ್ವರ್ಗದಲ್ಲಿದ್ದರೂ ನನ್ನನ್ನು ಬಿಟ್ಟು ತಪಿಸಲಾರನೆ! ಯಾವನ ವಂತನಾದ ಪುರುಷನಿಗೆ ಪತ್ನೀವಿಯೋಗದಿಂದ ಎಷ್ಟು ದುಃಖವುಂಟಾಗುವು ದೋ, ಅದು ನಿನಗೇ ಚೆನ್ನಾಗಿ ತಿಳಿದಿರುವುದು ಒಂದುವೇಳೆ ನನ್ನನ್ನು ಕೊ ಲ್ಲುವುದರಿಂದ ಸ್ತ್ರೀಹತ್ಯಾಪಾತಕವು ಬರುವುದೆಂದು ನೀನೆಣಿಸಬಹುದು ಅ ದು ಯುಕ್ತವಲ್ಲ ನಾನು ಈ ವಾಲಿಗೆ ಆತ್ಮವೇದೇ ತಿಳಿದುಕೊಂಡು ನನ್ನ ನ್ನುಕೊಂದುಬಿಡು! ನಿನಗೆ ಸ್ತ್ರೀವಧಪಾಪವು ಬರಲಾರದು * ಅನೇಕಶಾ ಸ್ತ್ರಪ್ರಮಾಣಗಳಿಂದಲೂ, ವೇದವಿಧಿಗಳಿಂದಲೂ, ಪುರುಷನಿಗೆ ಪತ್ನಿಯರೇ ಆತ್ಮವೆಂದು ಸ್ಪಷ್ಟವಾಗಿ ತಿಳಿದುಬರುವುದು ನೀನು ನನ್ನನ್ನು ನನ್ನ ಪತಿ ಯೊಡನೆ ಸೇರಿಸಿ ಬಿಡುವುದರಿಂದ ಪುಣ್ಯವೂ ಉಂಟೆಂದು ತಿಳಿ! ಲೋಕ ದಲ್ಲಿ ಸ್ತ್ರೀದಾನಕ್ಕಿಂತಲೂ ಉತ್ತಮವಾದ ಬೇರೆ ದಾನವಿಲ್ಲ ಆದು ದರಿಂದ ನೀನು ಈ ಧರ್ಮಸೂಕ್ಷ್ಮವನ್ನು ಪರ್ಯಾಲೋಚಿಸಿ,ನನ್ನನ್ನು ನನ್ನ ಪ್ರಿ ಯನೊಡನೆ ಸೇರಿಸಿಬಿಡು! ಈ ವಿಧವಾದ ಸ್ತ್ರೀದಾನದಿಂದ, ನಿನಗೆ ಮೊದಲು ನಿರಪರಾಧಿಯಾದ ಆ ವಾಲಿಯನ್ನುಕೊಂದ ಅಧರ್ಮವೂ ನೀಗುವುದು ಪತಿಯನ್ನಗಲಿ ದುಃಖಿತೆಯಾಗಿ ದಿಕ್ಕಿಲ್ಲದೆ ಗೋಳಿಡುತ್ತಿರುವ ನನ್ನ ಸಂಕಟವೂ ನೀಗುವುದು ಆನೆಯಂತೆ ಗಂಭೀರವಾದ ನಡಗೆಯುಳ್ಳವ ನಾಗಿಯೂ, ಕಪಿಸಿಹ್ಮನಾಗಿಯೂ, ಬುದ್ಧಿವಂತನಾಗಿಯೂ, ಸರ್ವೋ ತ್ತಮವಾದ ಕಾಂಚನಮಾಲೆಯನ್ನು ಧರಿಸಿದವನಾಗಿಯೂ ಇರುವ ಆ ನನ್ನ ಪ್ರಿಯನನ್ನು ಬಿಟ್ಟು ನಾನು ಬದುಕಿರಲಾರೆನು" ಎಂದಳು ಇದನ್ನು ಕೇಳಿ ಲೋಕವಿಭುವಾಗಿಯೂ ಮಹಾತ್ಮನಾಗಿಯೂ ಇರು ವ ರಾಮನು, ಆ ತಾರೆಯನ್ನು ಸಮಾಧಾನಪಡಿಸುತ್ತ ಹಿತವಾಕ್ಯಗಳ ನ್ನು ಹೇಳುವನು "ಎಲೆ ವೀರಪತ್ನಿ! ಧೈರ್ಯಗುಂದಬೇಡ! ಈ ಸಮಸ್ತ ಲೋಕವೂ ಬ್ರಹ್ಮನಿರ್ಮಿತವಾದುದಲ್ಲವೆ? ಆ ಬ್ರಹ್ಮನ ಸಂಕಲ್ಪದಂತೆ ಯೇ ಸುಖದುಃಖಗಳುಂಟಾಗುವುವೆಂಬುದನ್ನು ಲೋಕವೆಲ್ಲವೂ ಬಲ್ಲುದು

* "ಆರೊ೭ವಾ ಎಷ ಆತ್ಮನೋ ಯತ್ಪತ್ನೀ, ಆತ್ಮಾವೈದಾರಾ:"ಎಂಬಿವೇ ವೊದಲಾದ ವೇದವಾಕ್ಯಗಳ ಅರ್ಥವೇ ಇಲ್ಲಿ ನಿರೂಪಿಸಲ್ಪಟ್ಟಿರುವುದಾಗಿ ಊಹ್ಯವು

ಈ ತ್ರೈಲೋಕ್ಯವೂಕೂಡ ಆ ಬ್ರಹ್ಮಸಂಕಲ್ಪಕ್ಕೆ ಅಧೀನವಾಗಿ ನಡೆಯಬೇಕೇಹೊರತು, ಆದನ್ನು ವೀರಿ ನಡೆಯಲು ಯಾರಿಗೂ ಸಾಧ್ಯವಲ್ಲ. ನೀನು ವಾಲಿಯಿದ್ದಾಗ ಯಾವಯಾವ ಸುಖಗಳನ್ನನುಭವಿಸುತಿದ್ದೆಯೋ, ಮುಂದೆಯೂ ಹಾಗೆಯೇ ಭೋಗಗಳನ್ನನುಭವಿಸುತ್ತ ಸುಖದಿಂದಿರುವೆ ನಿನ್ನ ಮಗನಾದ ಅಂಗದನೇ ಯೌವರಾಜ್ಯವನ್ನು ಹೊಂದುವನು ಹೀಗೆ ನಡೆಯಬೇಕೆಂಬುದೇ ದೈವಸಂಕಲ್ಪವಾಗಿರುವಾಗ, ನಿನ್ನಂತಹ ವೀರಪತ್ನಿಯೆರು ದುಃಖಿಸುವುದೆಂದರೇನು?" ಎಂದನು ಹೀಗೆ ಮಹಾತ್ಮನಾದ ರಾಮನ ಸಮಾಧಾನವಾಕ್ಯಗಳನ್ನು ಕೇಳಿದೊಡನೆ, ತಾರೆಯ ಮುಖದಲ್ಲಿ ಉಲ್ಲಾಸವುಂಟಾಯಿತು ಮನಸ್ಸಮಾಧಾನವನ್ನು ಹೊಂದಿ ಸುಮ್ಮನಿದ್ದಳು ಅಲ್ಲಿಗೆ ಇಪ್ಪತ್ತುನಾಲ್ಕನೆಯ ಸರ್ಗವು

ರಾಮನು ದುಃಖಿತರಾದವರೆಲ್ಲರನ್ನೂ ಸಮಾಧಾನಪಡಿಸಿ ವಾಲಿಗೆ ಸಂಸ್ಕಾರವನ್ನು ಮಾಡಿಸಿದುದು

ಹೀಗೆ ಒಂದುಕಡೆಯಲ್ಲಿ ತಾರೆಯೂ, ಮತ್ತೊಂದುಕಡೆಯಲ್ಲಿ ಅಂಗದನೂ, ಬೇರೊಂದುಕಡೆಯಲ್ಲಿ ಸುಗ್ರೀವನೂ ದುಃಖದಿಂದಳುವುದನ್ನು ಕಂಡು, ರಾಮಲಕ್ಷ್ಮಣರಿಗೂ ಮರುಕವುಂಟಾಯಿತು ಅವರೊಡನೆ ಈ ರಾಮಲಕ್ಷ್ಮಣರೂ ಸಮವಾಗಿ ದುಃಖಿಸುತ್ತಿದ್ದರು ಆದರೆ ರಾಮನು ಧೀರಸ್ವಭಾವವುಳ್ಳವನಾದುದರಿಂದ, ಎಲ್ಲರನ್ನೂ ತಾನೇ ಸಮಾಧಾನಪಡಿಸುತ್ತ, ಅಮೂವರನ್ನೂ ಕುರಿತು ''ದುಃಖದಿಂದ ಸುಮ್ಮನೆ ಕೊರಗುವುದರಿಂದೇನು? ಇದರಿಂದ ಸತ್ತವರಿಗೆ ಸದ್ಗತಿಯುಂಟಾಗಲಾರದು ಮೇಲೆ ನಡೆಸಬೇಕಾದ ಔರ್ಧ್ವದೈಹಿಕಕರ್ಮವೇ ಈಗ ಶ್ರೇಯಸ್ಕರವು. ಅದಕ್ಕೆ *ತಡೆಮಾಡಬಾರದು ಆ ಕಾರ್ಯವನ್ನು ಅತ್ಯವಶ್ಯವಾಗಿ ನಡೆಸಿಯೇ ತೀರಬೇಕಲ್ಲವೆ ? ಕಣ್ಣೀರುಬಿಡುವುದು ಲೋಕಾಚಾರದಿಂದ ಬಂದ ಸಂಪ್ರದಾಯವಾದುದರಿಂದ,

---

* ಇಲ್ಲಿ ''ಅನ್ಯಥಾ ಕೃತಮಕೃತಂ" ಎಂಬ ಪ್ರಮಾಣದಿಂದ ವಿಹಿತಕಾಲಗಳಲ್ಲಿಯೇ ಕರ್ಮಗಳನ್ನು ನಡೆಸದಿದ್ದರೆ, ಆಮೇಲೆ ಅಂತಹ ಕರ್ಮಗಳನ್ನು ನಡೆಸಿಯೂ ಫಲವಿಲ್ಲವೆಂದು ಭಾವವು

ಅದನ್ನೂ ಅನುಷ್ಠಿಸಬೇಕಾದುದೇ ನ್ಯಾಯವು ನೀವೂ ಹಾಗೆಯೇ ನಡೆಸಿದು ದಾಯಿತಲ್ಲವೆ?ಇನ್ನು ಸಾಕು! ನಿಮ್ಮ ವಿಲಾಪವನ್ನು ನಿಲ್ಲಿಸಿರಿ! ಈಗ ವಾಲಿಗಾ ಗಿ ನೀವು ಮಾಡಬೇಕಾದುದು ಅಪರಸಂಸ್ಕಾರವಲ್ಲದೆ ಬೇರೆ ಕಾರ್ಯವಲ್ಲ ನೀ ವು ಎಷ್ಟೇಪ್ರಯತ್ನಪಟ್ಟರೂ ಸತ್ತವನನ್ನು ಬದುಕಿಸಲಾರಿರಿ! ಈಶ್ವರಾಜ್ಞೆ ಯನ್ನು ಮೀರಬೇಕೆಂದರೆ ಯಾರಿಗೆ ಸಾಧ್ಯವು? ಸಮಸ್ತಲೋಕಗಳಿಗೂ ಈ ಶ್ವರನೇ ಕಾರಣನು ಸಮಸ್ತಕಾರ್ಯಗಳಿಗೂ * ಕಾಲವೇ ಮುಖ್ಯಸಾಧನವು. ಸಮಸ್ತಭೂತಗಳಿಗೂ, ದೈವವೇ ನಿಯಾಮಕವು ಲೋಕದಲ್ಲಿ ಅದನ್ನು ಮೀ ರಿದುದೊಂಡೂ ಇಲ್ಲವು ಸಮಸ್ತಲೋಕವೂ ಆ ಸರ್ವೇಶ್ವರನಿಗೆ ಪರತಂತ್ರ ವಾಗಿಯೇ ಕಾರ್ಯಗಳನ್ನು ನಡೆಸಬೇಕೇಹೊರತು ಸ್ವತಂತ್ರವಲ್ಲ ಯಾವ ನಾಗಲಿ, ಯಾವಕಾರ್ಯಕ್ಕೂ ಸ್ವತಂತ್ರವಾಗಿ ಕರ್ತನಾಗುವುದಿಲ್ಲ ಒಬ್ಬನು ಮತ್ತೊಬ್ಬನನ್ನು ನಿಯಮಿಸುವುದಕ್ಕೂ ಸಮರ್ಥನಲ್ಲ ಸಮಸ್ತಲೋಕವೂ ಸ್ವಭಾವಕ್ಕೆ (ಈಶ್ವರನಿಗೆ) ಈಡಾಗಿಯೇ ನಡೆಯುತ್ತಿರುವುದು ಆದುದರಿಂದ ಕಾಲವೇ ಲೋಕಗಳಿಗೆಲ್ಲಕ್ಕೂ ಮುಖ್ಯಗತಿಯು ಈಶ್ವರನೊಬ್ಬನೇ ಸ್ವತಂತ್ರ ನು ಆತನೊಬ್ಬನುಮಾತ್ರ ಯಾರಿಗೂ ಆಧೀನನಲ್ಲ ಅವನಿಗೆ ಪಾಪವಾಗಲಿ, ವಿ ಕಾರವಾಗಲಿ ಉಂಟಾಗವು ಅವನ ಸ್ವತಂತ್ರಪ್ರವರ್ತನೆಗೆ ಎಲ್ಲಿಯೂ ತಡೆಯಿ ರದು ಅದರೆ ತಾನು ಮಾಡಿದ ವ್ಯವಸ್ಥೆಯನ್ನು ತಾನೂ ಅತಿಕ್ರಮಿಸಲಾರನು. ಅವನಿಗೆ ಇತರರಲ್ಲಿ ಬಂಧುತ್ವವೆಂಬುದೇ ಇಲ್ಲವಾದುದರಿಂದ, ಪಕ್ಷಪಾತವೂ ಇರದು ಅವನನ್ನು.ಅವನ ಅನುಗ್ರಹದಿಂದಲೇ ವಶಪಡಿಸಿಕೊಳ್ಳಬೇಕೇಹೊರ ತು ಅದಕ್ಕೆ ಬೇರೊಂದುಸಾಯವಿಲ್ಲ!ಆತನನ್ನು ಜಯಿಸತಕ್ಕ ಪರಾಕ್ರಮಿಯೂ ಇಲ್ಲ ಅವನಿಗೆ ಮತ್ತೊಬ್ಬರಲ್ಲಿ, ''ಇವರು ಮಿತ್ರರು, ಇವರು ಜ್ಞಾತಿಗಳು'' ಎಂಬ ಸಂಬಂಧವೂ ಇಲ್ಲ ಅಪರಾಧಿಗಳೆಲ್ಲರೂ ಆತನಿಗೆ ವೈರಿಗಳೇ ಆದುದರಿಂ ದ,ಸಮಸ್ತಲೋಕಕ್ಕೂ ಕಾರಣಭೂತನಾದ ಈಶ್ವರನು,ಜೀವಾತ್ಮನಿಗೆ ಪರ

---

* ಇಲ್ಲಿ ಈಶ್ವರ ಕಾಲ ನಿಯತಿ ಸ್ವಭಾವಗಳೆಂಬ ಬೇರೆಬೇರೆ ಶಬ್ದಗಳಿರುವುವು ಹೀಗಿದ್ದರೂ ಅವೆಲ್ಲವೂ ಸರ್ವೇಶ್ವರವಾಚಕಗಳೆಂದೇ ಗ್ರಾಹ್ಯವು ಹಾಗಿಲ್ಲದಿದ್ದರೆ ಲೋ ಕಕ್ಕೆ ಬಹುನಾಥತ್ವವು ಸಿದ್ಧಿಸುವುದು ರಾಮನು ತನ್ನರಹಸ್ಯವನ್ನು ಹೊರಪಡಿಸಬಾ ರದೆಂಬುದಕ್ಕಾಗಿಯೇ ಹೀಗೆ ಬೇರೆಬೇರೆ ಪದಗಳಿಂದ ಈಶ್ವರನ ಶಕ್ತಿಯನ್ನು ತಿಳಿಸಿದು ದಾಗಿ ಗ್ರಹಿಸಬೇಕು

ತಂತ್ರನಲ್ಲ ಅವರವರ ಕರ್ಮಾನುಸಾರವಾಗಿ ಜೀವಿಗಳನ್ನು ನಡೆಸುತ್ತಿರುವನು. ಜೀವನು, ಯಾವ ವಿಷಯದಲ್ಲಿಯೂ ತನಗೆ ಸ್ವಾತಂತ್ರ್ಯವಿಲ್ಲವೆಂಬ ಶಾಸ್ತ್ರತತ್ವವನ್ನು ಚೆನ್ನಾಗಿ ನಿಷ್ಕರ್ಷಿಸಿ, ಎಲ್ಲವೂ ಈಶ್ವರನ ವ್ಯಾಪಾರವೆಂದೇ ತಿಳಿಯಬೇಕು ಧರ್ಮವಾಗಲಿ, ಕಾಮವಾಗಲಿ, ಅರ್ಥವಾಗಲಿ ಈಶ್ವರಸಂಕಲ್ಪದಿಂದಲೇ ಪ್ರಾಪ್ತವಾಗುವುವು ನನ್ನ ಬಾಣಹತಿಯೇ ಈಗ ವಾಲಿಗೆ ಪ್ರಾಯಶ್ಚಿತ್ತವೆಂದು ತಿಳಿಯಿರಿ! ಇದರಿಂದ ಈತನ ದೋಷಗಳೆಲ್ಲವೂ ನೀಗಿ ಶುದ್ಧಿಯನ್ನು ಹೊಂದಿರುವನು ಈಗ ವಾಲಿಯು ಧರ್ಮಾರ್ಥಕಾಮಸಂಬಂಧಗಳಿಂದ ಅತಿಪವಿತ್ರವಾದ ಕರ್ಮಫಲವನ್ನು ಹೊಂದಿ ಸ್ವರ್ಗವನ್ನೇ ಸೇರುವನು ಮೊದಲು ತನ್ನ ಧರ್ಮಾನುಷ್ಠಾನದಿಂದ, ಇವನು ಸಾಧಿಸುತಿದ್ದ ಸ್ವರ್ಗವನ್ನು, ಈಗ ತನ್ನ ಶೌರ್ಯೋಚಿತವಾಗಿ ಯುದ್ಧದಲ್ಲಿ ಪ್ರಾಣವನ್ನು ಬಿಟ್ಟುದರಿಂದ ಕೈಸೇರಿಸಿಕೊಂಡುಬಿಟ್ಟನು ಎಲೆತಾರ! ಈಗ ಈತನು ಹೊಂದಿರುವ ಮೃತಿಯೇ ಸರ್ವೋತ್ತಮವಾದುದೆಂದು ತಿಳಿ! ಇನ್ನು ಪರಿತಾಪವನ್ನು ಬಿಡು! ಪ್ರಕೃತದಲ್ಲಿ ನಡೆಸಬೇಕಾದ ಮುಂದಿನ ಕಾರ್ಯವನ್ನು ನೋಡು!" ಎಂದನು. ರಾಮನು ಈ ಮಾತನ್ನು ಹೇಳಿ ಮುಗಿಸಿದಮೇಲೆ, ಲಕ್ಷ್ಮಣನು, ದುಃಖದಿಂದ ಪ್ರಜ್ಞೆತಪ್ಪಿದವನಂತೆ ನಿಂತಿದ್ದ ಸುಗ್ರೀವನನ್ನು ಕುರಿತು, ವಿನಯಪೂರ್ವಕವಾದ ಮಾತಿನಿಂದ" ಎಲೈ ಸುಗ್ರೀವನೆ! ವಾಲಿಗೆ ಮುಂದೆ ನಡೆಸಬೇಕಾದ ಪ್ರೇತಕಾರ್ಯವನ್ನು ಶೀಘ್ರದಲ್ಲಿ ನಡೆಸುವ ಪ್ರಯತ್ನವನ್ನು ಮಾಡು! ತಾರೆಯನ್ನೂ ಅಂಗದನನ್ನೂ ಮುಂದಿಟ್ಟುಕೊಂಡು, ವಾಲಿಯ ದಹನಕಾರ್ಯಕ್ಕೆ ಆರಂಭಿಸು ವಾಲಿಯ ಸಂಸ್ಕಾರಕ್ಕಾಗಿ ಚೆನ್ನಾಗಿ ಒಣಗಿದ ಚಂದನಕಾಷ್ಠಗಳನ್ನು ಸಾಕಾದಷ್ಟು ತರಿಸು! ಮನಸ್ಸಿನಲ್ಲಿ ಕೊರಗುತ್ತಿರುವ ಅಂಗದನಿಗೆ ನೀನೂ ಸಮಾಧಾನವಾಕ್ಯಗಳನ್ನು ಹೇಳು! ನೀನೂ ಈಗ ಅಜ್ಞಾನಿಯಂತೆ ದುಃಖಿಸುತ್ತಿರಬೇಡ! ಈಗ ಈ ಸಮಸ್ತವಾನರರಾಜ್ಯವೂ ನಿನಗಧೀನವಾಗಿರುವುದು ಇನ್ನು ಮುಂದಿನ ಕೆಲಸಕ್ಕೆ ಬೇಕಾದ ಪುಷ್ಪಗಳು, ಬಟ್ಟೆಗಳು, ತುಪ್ಪ, ಎಣ್ಣೆ, ಸುಗಂಧಗಳು, ಮುಂತಾದ ಸಾಮಗ್ರಿಗಳೆಲ್ಲವನ್ನೂ ಅಂಗದನು ತಂದಿಡಲಿ! ಎಲೈ ತಾರನೆ! ನೀನು ಬೇಗನೆ ಹೋಗಿ ಪಲ್ಲಕ್ಕಿಯನ್ನು ತರಿಸಿಕೊಂಡುಬಾ! ಯಾವಾಗಲೂ ಕಾರ್ಯಗಳನ್ನು ತಡವಿಲ್ಲದೆ ಮಾಡುವುದರಲ್ಲಿ ಗುಣವುಂಟು! ಅದರಲ್ಲಿಯೂ ಇಂತಹಕಾಲಗಳಲ್ಲಿ ತಡಮಾಡಲೇಬಾರದು ಪಲ್ಲಕ್ಕಿಯನ್ನು ಹೊರು-

ವುದಕ್ಕೆ ಸಮರ್ಥರಾಗಿಯೂ ಬಲಾಢ್ಯರಾಗಿಯೂ ಇರುವ ಕೆಲವು ವಾನರರು ಸಿದ್ಧವಾಗಿರಲಿ!"ಎಂದನು ಹೀಗೆ ಲಕ್ಷ್ಮಣನು ಸುಗ್ರೀವನಿಗೆ ಹೇಳಿ,ತನ್ನಣ್ಣನಾದ ರಾಮನ ಸಮೀಪದಲ್ಲಿ ನಿಂತಿದ್ದನು ಆ ಕ್ಷಣವೇ ತಾರನು ಲಕ್ಷ್ಮಣನ ಮಾತಿನಂತೆ ಪಲ್ಲಕ್ಕಿಯೆನ್ನು ತರುವುದಕ್ಕಾಗಿ ಗುಹೆಗೆ ಹೋಗಿ, ಶೀಘ್ರದಲ್ಲಿಯೇ ವಾಹನವನ್ನು ಹೊರಿಸಿಕೊಂಡು ಬಂದನು ವಾಹನವನ್ನು ಹೊತ್ತು ಬಲಿಕೆಯುಳ್ಳ ಬಲಾಢ್ಯರಾದ ಕೆಲವು ವಾನರರು ಅದನ್ನು ಶೀಘ್ರದಲ್ಲಿಯೇ ಹೊತ್ತುತಂದರು ಆ ಪಲ್ಲಕ್ಕಿಯಾದರೋ ದೇವಯೋಗ್ಯವಾದ ವಿಮಾನದಂತೆ ಅತಿಮನೋಹರವಾಗಿ ತೋರುತಿತ್ತು ರಥದಂತೆ ವಿಸ್ತಾರವಾಗಿ, ನಡುವೆ ರಾಜಾಸನದಿಂದ ಕೂಡಿ ಶೋಭಿಸುತಿತ್ತು ಅದರ ಸುತ್ತಲೂ ಚಿತ್ರಕಾರ್ಯಗಳಿಂದ ಮಾಡಲ್ಪಟ್ಟ ಬಗೆಬಗೆಯ ಪಕ್ಷಿಗಳೂ ವೃಕ್ಷಗಳೂ ನೇತ್ರಾನಂದಕರಗಳಾಗಿದ್ದುವು ನಡುನಡುವೆ ಚಿತ್ರವಿಚಿತ್ರಗಳಾದ ರೇಖೆಗಳು ಕೆತ್ತಲ್ಪಟ್ಟಿದ್ದುವು ಒಟ್ಟಾಗಿ ಅದರ ಆಕಾರಸನ್ನಿವೇಶವು ಅಂದವಾಗಿಯೂ,ದೃಢವಾಗಿಯೂ ಇದ್ದಿತು ಮತ್ತು ಅದು ಆಕಾಶದಲ್ಲಿ ಸಂಚರಿಸುವ ಸಿದ್ಧವಿಮಾನದಂತೆ ಸಣ್ಣಕಿಟಕಿಗಳಿಂದಲೂ, ದೊಡ್ಡಗವಾಕ್ಷಗಳಿಂದಲೂ, ಕೂಡಿ ಬಲವಾದ ಕೀಲುಗಳುಳ್ಳದಾಗಿತ್ತು ವಿಸ್ತಾರವಾದ ಆ ಪಲ್ಲಕ್ಕಿಯನ್ನು ವಿಶ್ವಕರ್ಮನು ತನ್ನ ಚಾತುರ್ಯವೆಲ್ಲವನ್ನೂ ಉಪಯೋಗಿಸಿ ರಚಿಸಿದಂತೆ ತೋರುತಿತ್ತು ಅದರಲ್ಲಿ ಅಲ್ಲಲ್ಲಿ ಮರಗಳಿಂದ ಕೆತ್ತಲ್ಪಟ್ಟ ಕ್ರೀಡಾಪರ್ವತಗಳು ಕಂಗೊಳಿಸುತಿದ್ದುವು ಮತ್ತು ಅದು ಸುತ್ತಲೂ ನಯಗೆಲಸಗಳಿಂದ ವಿರಾಜಿಸಲ್ಪಟ್ಟು,ಥಳಥಳಿಸುತಿತ್ತು ಸುತ್ತಲೂ ರತ್ನದ ಕೆತ್ತನೆಗಳಿಂದಲೂ ಹಾರಗಳಿಂದಲೂ ಪುಷ್ಪಮಾಲಿಕಗಳಿಂದಲೂ ಅಲಂಕೃತವಾಗಿತ್ತು ಮತ್ತು ಅದರ ಸುತ್ತಲೂ ಅಲ್ಲಲ್ಲಿ ಕೃತ್ರಿಮಗಳಾದ ಗುಹೆಗಳೂ,ಆಡವಿಗಳೂ ಕೆತ್ತಲ್ಪಟ್ಟಿದ್ದುವು ಅಲ್ಲಲ್ಲಿ ರಕ್ತಚಂದನಾನುಲೇಪನದಿಂದಲೂ ಪುಷ್ಪೋಪಹಾರದಿಂದಲೂ ಅಲಂಕೃತವಾಗಿತ್ತು ಬಾಲಸೂರ್ಯಬಿಂಬಗಳಂತಿರುವ ಕೆಂದಾವರೆಯ ಹೂಗಳಿಂದ ಶೋಭಿಸುತಿತ್ತು ಹೀಗೆ ಸರ್ವೋತ್ತಮವಾದ ಪಲ್ಲಕ್ಕಿಯು ಸಿದ್ಧವಾಗಿ ಬಂದೊಡನೆ, ಅದನ್ನು ನೋಡಿ ರಾಮನು, ಲಕ್ಷ್ಮಣನನ್ನುಕುರಿತು ''ವತ್ಸನೆ! ಶೀಘ್ರದಲ್ಲಿಯೇ ವಾಲಿಯನ್ನು ಸಾಗಿಸಿ ಅವನಿಗೆ ಪ್ರೇತಕಾರ್ಯಗಳನ್ನು ನಡೆಸುವಂತೆ ಮಾಡಬೇಕು,"ಎಂದನು ಇದನ್ನು ಕೇಳಿದೊಡನೆ ಸುಗ್ರೀ

ವನೂ ಅಂಗದನೂಸೇರಿ, ದುಃಖದಿಂದ ಗೋಳಿಡುತ್ತ ಬಂದು, ಆ ವಾಲಿಯ ದೇಹವನ್ನೆತ್ತಿ ಪಲ್ಲಕ್ಕಿಯಮೇಲೆ ಏರಿಸಿದರು ಆ ಮೃತದೇಹವನ್ನು ವಾಹನದಲ್ಲಿಟ್ಟೊಡನೆ, ಅದನ್ನು ನಾನಾವಿಧಗಳಾದ ವಸ್ತ್ರಾಭರಣಗಳಿಂದಲಂಕರಿಸಿದರು ಆಮೇಲೆ ಸುಗ್ರೀವನು ಅಲ್ಲಿದ್ದ ವಾನರಾನುಚರರೆಲ್ಲರನ್ನೂ ಕರೆದು ,,ಆರ್ಯನಾದ ವಾಲಿಗೆ ಕ್ರಮವಾಗಿ ಉತ್ತರಕ್ರಿಯೆಗಳನ್ನು ನಡೆಸಬೇಕು! ಕೆಲವು ವಾನರರು ನವರತ್ನರಾಶಿಗಳನ್ನು ಚೆಲ್ಲುತ್ತ ಪಲ್ಲಕ್ಕಿಯ ಮುಂದೆನಡೆಯಲಿ! ಅವರನ್ನು ಹಿಂಬಾಲಿಸಿ ಈ ಪಲ್ಲಕ್ಕಿಯು ನಡೆಯಲಿ!" ಎಂದಾಜ್ಞಾಪಿಸಿದನು ರಾಜರಿಗೆ ಅವರವರ ಭಾಗ್ಯಕ್ಕನುರೂಪವಾಗಿ ಯಾವ ವಿಧವಾದ ವೈಭವದಿಂದ ಉತ್ತರಕ್ರಿಯೆಗಳನ್ನು ನಡೆಸುವರೋ, ಅದೇ ರೀತಿಯಲ್ಲಿ ಸುಗ್ರೀವಾದಿವಾನರರೆಲ್ಲರೂ ಸಮಸ್ತವೈಭವಗಳೊಡನೆ ವಾಲಿಗೆ ಉತ್ತರಕ್ರಿಯೆಗಳನ್ನು ನಡೆಸಿದರು ಆಗ ವಾಲಿಗೆ ಸಮೀಪಬಂಧುಗಳಾದ ತಾರನೇ ಮೊದಲಾದವರೆಲ್ಲರೂ, ಅಂಗದನ ಸುತ್ತಲೂ ಸೇರಿ, ಅವನನ್ನು ಹಿಡಿದುಕೊಂಡು ರೋದಿಸುತ್ತ, ಮುಂದೆ ನಡೆಯುತಿದ್ದರು ಹಾಗೆಯೇ ವಾಲಿಗೆ ಕೇವಲ ವಶವರ್ತಿನಿಯರಾಗಿಯೂ, ಸಮೀಪಬಂಧುಗಳಾಗಿಯೂ ಇದ್ದ ಕೆಲವು ವಾನರಸ್ತ್ರೀಯರೂ ಅಲ್ಲಲ್ಲಿ ಗುಂಪಾಗಿ ಸೇರಿಕೊಂಡು, ,,ಹಾವೀರನೆ! ಹಾ ಶೂರನೆ!"ಎಂದು ಗಟ್ಟಿಯಾಗಿ ಗೋಳಿಟ್ಟುಕೂಗುತಿದ್ದರು ತಾರೆ ಮೊದಲಾದ ಆತನ ಪ್ರಿಯಪತ್ನಿಯರು ಒಂದುಕಡೆಯಲ್ಲಿ ಸೇರಿ, ಕಲ್ಲುಗಳನ್ನು ಕೂಡ ಕರಗಿಸುವಂತೆ ದೈನ್ಯದಿಂದ ವಿಲಪಿಸುತ್ತಬಂದರು ಹೀಗೆ ಒಟ್ಟಾಗಿ ಸೇರಿದ ಈ ವಾನರಸ್ತ್ರೀಯರೆಲ್ಲರ ಆಕ್ರಂದನಧ್ವನಿಗಳಿಂದ ಅಲ್ಲಿನ ವನಪರ್ವತಗಳೆಲ್ಲವೂ ಪ್ರತಿಧ್ವನಿಯನ್ನುಕೊಡುತ್ತ, ಅವೂ ಒಟ್ಟಾಗಿ ಕೂಗಿಕೊಳ್ಳುವಂತೆ ತೋರುತಿತ್ತು ಹೀಗೆ ವಾಲಿಯನ್ನು ಸಾಗಿಸಿಕೊಂಡು ಬರುವಷ್ಟರಲ್ಲಿ, ಕೆಲವು ವಾನರರು ಮುಂದಾಗಿಹೋಗಿ, ಒಂದುಬೆಟ್ಟದ ತೊರೆಯ ಬಳಿಯಲ್ಲಿ, ಏಕಾಂತವಾಗಿಯೂ ಶುದ್ಧವಾಗಿಯೂ ಇರುವ ಜಲಸಮೃದ್ಧಿಯುಳ್ಳ ಒಂದುಸ್ಥಳವನ್ನುನೋಡಿ, ಅಲ್ಲಿ ಚಿತೆಯನ್ನೊಡ್ಡಿದರು. ಆ ಸ್ಥಳದಲ್ಲಿ ವಾಹಕರು ಪಲ್ಲಕ್ಕಿಯನ್ನಿಳಿಸಿ ದುಃಖಿತರಾಗಿ ಒಂದು ಕಡೆಯಲ್ಲಿ ನಿಂತಿದ್ದರು ಪಲ್ಲಕ್ಕಿಯನ್ನಿಳಿಸಿದೊಡನೆ ತಾರೆಯು ಸಮೀಪಕ್ಕೆ ಬಂದು, ಅದರಲ್ಲಿ ಮಲಗಿಸಲ್ಪಟ್ಟಿದ್ದ ತ

ನ್ನ ಪ್ರಿಯಪತಿಯನ್ನು ನೋಡಿ,ಸಂಕಟವನ್ನು ತಡೆಯಲಾರದೆ,ಅವನ ತಲೆಯ ನ್ನೆತ್ತಿ ತನ್ನ ತೊಡೆಯಮೇಲಿಟ್ಟುಕೊಂಡು, ''ಹಾನಾಥನೆ! ಹಾ ವಾನರೇ ಶ್ವರನೆ! ಹಾ ವತ್ಸಲನೆ! ಹಾ ಪೂಜ್ಯನೆ! ಹಾ ಮಹಾಬಾಹುವೆ! ಹಾ ನನ್ನ ಮೋಹಪ್ರಿಯನೆ! ನನ್ನನ್ನು ಕಣ್ಣೆತ್ತಿನೋಡಬಾರದೆ? ನಾನು ಹೀಗೆ ಗೋಳಿ ಟ್ಟು ಸಂಕಟಪಡುವಾಗಲೂ ನಿನಗೆ ನನ್ನಲ್ಲಿ ಮರುಕವಿಲ್ಲವೆ? ಹಾಪ್ರಿಯನೆ! ಈಗ ನೀನು ಮೃತನಾಗಿದ್ದರೂ ನಿನ್ನ ಮುಖದಲ್ಲಿ ಜೀವಕಳೆಯು ಉಕ್ಕುತ್ತಿ ರುವುದು ಸಂತೋಷದಿಂದ ನಗುವಂತಿರುವುದು ಸಾಯಂಕಾಲದ ಸೂರ್ಯ ಬಿಂಬದಂತೆ ದಿವ್ಯತೇಜಸ್ಸು ಹೊಮ್ಮುತ್ತಿರುವುದು ಹಾ ಕಷ್ಟವೆ! ಯಮನೇ ಹೀಗೆ ರಾಮರೂಪದಿಂದ ಬಂದು, ಒಂದೇಬಾಣದಿಂದ ನಮ್ಮಿಬ್ಬರನ್ನೂ ವಿಧ ವೆಯರನ್ನಾಗಿ ಮಾಡಿ, ನಿನ್ನನ್ನು ಸೆಳೆದುಕೊಂಡುಹೋದನಲ್ಲಾ! ಎಲ್ಲ ರಾಜ ಶ್ರೇಷ್ಠನೆ! ನಿನಗೆ ಪರಮಪ್ರಿಯೆಯರಾಗಿಯೂ, ಸುಖಾರ್ಹರಾಗಿಯೂ, ಸುಕುಮಾರಾಂಗಿಯರಾಗಿಯೂ ಇರುವ ಈ ವಾನರಸ್ತ್ರೀಯರೆಲ್ಲರೂ ಈಗ ಎಷ್ಟೋ ದೂರದಿಂದ ಕಾಲುನಡೆಯಲ್ಲಿಯೇ ನಿನ್ನನ್ನು ಹಿಂಬಾಲಿಸಿ ಬರುತ್ತಿ ರುವುದನ್ನು ಕಾಣೆಯಾ? ಇವರ ಕಷ್ಟವನ್ನು ನೋಡಿಯಾದರೂ ನಿನಗೆ ಮ ರುಕವು ಹುಟ್ಟಲಿಲ್ಲವೆ? ಚಂದ್ರಮುಖಿಯರಾದ ಅವರೆಲ್ಲರೂ ನಿನಗೆ ಮೋಹ ದ ಪತ್ನಿಯರಲ್ಲವೆ? ಇನ್ನೂ ನೀನೇಕೆ ಸುಮ್ಮನಿರುವೆ? ನಿನ್ನ ಪ್ರಿಯಸಹೋ ದರನಾದ ಸುಗ್ರೀವನನ್ನಾದರೂ ನೋಡಬಾರದೆ? ತಾರನೇ ಮೊದಲಾದ ನಿನ್ನ ಮಂತ್ರಿಗಳೂ, ಇತರಪ್ರಜನಗಳೂ ಈಗ ನಿನ್ನನ್ನು ಹಿಂಬಾಲಿಸಿ ಬರು ತ್ತಿರುವರು ನೋಡು! ಇವರೆಲ್ಲರಿಗೂ ಅವರವರ ಗೌರವಕ್ಕೆ ತಕ್ಕಂತೆ ರಾಜಾ ಜ್ಞೆಯನ್ನಿತ್ತು ಕಳುಹಿಸು ನಾವೆಲ್ಲರೂ ಸೇರಿ ವಿನೋದದಿಂದ ಕ್ರೀಡಿ ಸಬೇಡವೆ?" ಎಂದಳುತಿದ್ದಳು ಹೀಗೆ ಪತಿಯನ್ನು ಬಿಡಲಾರದೆ ತಾ ರೆಯು ಸಂಕಟಪಡುವುದನ್ನು ನೋಡಿ, ಕೆಲವು ವಾನರಸ್ತ್ರೀಯರು ಬಂದು, ಅವಳನ್ನೆತ್ತಿ ಕುಳ್ಳಿರಿಸಿ ಹಿಂದಕ್ಕೆ ಕರೆದುಕೊಂಡು ಹೋದರು ಆಮೇಲೆ ಸುಗ್ರೀವನೂ ಅಂಗದನೂ ಬಂದು ದುಃಖದಿಂದ ರೋದಿಸುತ್ತ ವಾಲಿಯ ದೇಹವನ್ನು ಚಿತೆಯಮೇಲಕ್ಕೆ ಎರಿಸಿದರು ಅಂಗದನು ಶಾಸ್ತ್ರೋಕ್ತವಾ ಗಿ ಅಗ್ನಿಯನ್ನಿಟ್ಟು ಚಿತೆಗೆ ಪ್ರದಕ್ಷಿಣವನ್ನು ಮಾಡಿ ತಂದೆಗೆ ದಹನಸಂ ಸ್ಕಾರಗಳನ್ನು ನಡೆಸಿದನು ಆಗಲೇ ಕೆಲವು ವಾನರರು ಜಲತರ್ಪಣಕಾರ್ಯ

ಕ್ಕಾಗಿ ಅಂಗದನನ್ನು ನಮಿಯಬಳಿಗೆ ಕರೆತಂದರು ಅಲ್ಲಿ ಸಮಸ್ತವಾನರರೂ ಸುಗ್ರೀವನನ್ನೂ, ತಾರೆಯನ್ನೂ, ಅಂಗದನನ್ನೂ ಮುಂದಿಟ್ಟುಕೊಂಡು ವಾಲಿಗೆ ಜಲತರ್ಪಣಗಳನ್ನು ನಡೆಸಿದರು ಮಹಾಬಲಾಢ್ಯನಾದ ರಾಮನೂ ಕೂಡ, ಅವರೆಲ್ಲರೊಡನೆ ಸಮಾನದುಃಖವುಳ್ಳವನಾಗಿ, ಸುಗ್ರೀವನ ಮೂಲಕವಾಗಿ ವಾಲಿಗೆ ಸಮಸ್ತಪ್ರೇತಕಾರ್ಯಗಳನ್ನೂ ತಾನೇ ಮಾಡಿಸಿದನು ಹೀಗೆ ಜಗತ್ಪ್ರಸಿದ್ಧನಾಗಿಯೂ, ಮಹಾಪುರುಷವುಳ್ಳವನಾಗಿಯೂ ಇದ್ದು ರಾಮಬಾಣದಿಂದ ಹತನಾದ ವಾಲಿಗೆ ದಹನಸಂಸ್ಕಾರಗಳೆಲ್ಲವನ್ನೂ ಮಾಡಿ ಮುಗಿಸಿದಮೇಲೆ, ಸುಗ್ರೀವನು ಲಕ್ಷ್ಮಣಸಹಿತನಾಗಿ ನಿಂತಿದ್ದ ರಾಮನಬಳಿಗೆ ಬಂದನು ಇಲ್ಲಿಗೆ ಇಪ್ಪತ್ತೈದನೆಯಸರ್ಗವು

ಸುಗ್ರೀವಪಟ್ಟಾಭಿಷೇಕವು.

ಸುಗ್ರೀವನು ಅಣ್ಣನಾದ ವಾಲಿಗೆ ಅಪರಕಾರ್ಯಗಳನ್ನು ನಡೆಸಿದಾಗ ಉಟ್ಟಿದ್ದ ಆರ್ದ್ರವಸ್ತ್ರದೊಡನೆಯೇ ರಾಮನ ಸಮೀಪದಲ್ಲಿ ದುಃಖದಿಂದ ನಿಂತಿದ್ದನು ಅಲ್ಲಿದ್ದ ವಾನರಮಂತ್ರಿಗಳೆಲ್ಲರೂ ಆತನನ್ನು ಸುತ್ತಿನಿಂತರು ಬ್ರಹ್ಮನ ಸುತ್ತಲೂ ದೇವರ್ಷಿಗಳು ನಿಂತಂತೆ ಸುಗ್ರೀವಾದಿವಾನರರೆಲ್ಲರೂ ರಾಮನಮುಂದೆ ಕೈಮುಗಿದು ವಿನಯದಿಂದ ನಿಂತಿದ್ದರು ಅವರಲ್ಲಿ ಮೇರುಪರ್ವತದಂತೆ ಹೊಂಬಣ್ಣವಾದ ದೇಹಕಾಂತಿಯುಳ್ಳವನಾಗಿಯೂ, ಬಾಲಸೂರ್ಯಬಿಂಬದಂತೆ ತೇಜೋವಿಶಿಷ್ಟವಾದ ಮುಖವುಳ್ಳವನಾಗಿಯೂ ಇದ್ದ ಆಂಜನೇಯನು, ಮುಂದೆ ಬಂದು, ರಾಮನಿಗೆ ಕೈಮುಗಿದು ''ಸ್ವಾಮೀ! ತಮ್ಮ ಅನುಗ್ರಹದಿಂದ ಸುಗ್ರೀವನು ತನಗೆ ಪಿತೃಪಿತಾಮಹಪರಂಪರೆಯಾಗಿ ಬಂದ ವಾನರರಾಜ್ಯವನ್ನು ಪಡೆದಿರುವನು ಬೇರೆ ಯಾರಿಗೂ ಸುಲಭವಾಗಿ ಸಿಕ್ಕದ ಈದೊಡ್ಡರಾಜ್ಯವು, ತಮ್ಮ ಅನುಗ್ರಹವಿಶೇಷದಿಂದಲೇ ಇವನ ಕೈಗೆ ಲಭಿಸಿರುವುದು ಇನ್ನು ಈಸುಗ್ರೀವನು ತಮ್ಮ ಅನುಜ್ಞೆಯನ್ನು ಪಡೆದು, ಕಿಷ್ಕಿಂಧೆಯನ್ನು ಪ್ರವೇಶಿಸಿ, ತನ್ನ ಮಿತ್ರರೊಡಗೂಡಿ ಮುಂದೆ ನಡೆಸಬೇಕಾದ ಸಮಸ್ತಕಾರ್ಯಗಳನ್ನೂ ನಡೆಸಬೇಕಾಗಿರುವುದು ತಾವು ಅನುಜ್ಞೆಯನ್ನು ಕೊಡಬೇಕು. ಇವನು ಶಾಸ್ತ್ರೋಕ್ತವಾಗಿ, ನಾನಾವಿಧಗಂಧಗಳಿಂದಲೂ, ಓಷಧಿಗಳಿಂದ


ಲೂ, ಸ್ನಾನಮಾಡಿ ಪಟ್ಟಾಭಿಷಿಕ್ತನಾದಮೇಲೆ, ತಮ್ಮನ್ನೂ ವಿಶೇಷವಾದ ರತ್ನಮಾಲ್ಯಗಳಿಂದ ಅರ್ಚಿಸಿ ಸತ್ಕರಿಸಬೇಕಲ್ಲವೆ? ಆದುದರಿಂದ ಎಲೈ ಮಹಾತ್ಮರೆ! ಈಗಲೇ ನೀವು ಇಲ್ಲಿಂದ ಹೊರಟು, ಮನೋಹರವಾದ ನಮ್ಮ ಕಿಷ್ಕಿಂಧೆಯ ಗುಹೆಗೆ ದಯೆಮಾಡಬೇಕು ಅನಾಥರಾಗಿರುವ ಕಪಿಗಳಿಗೆ, ರಾಜನನ್ನು ನಿಯಮಿಸಿ ಸಮಸ್ತವಾನರರನ್ನೂ ಸಂತೋಷಪಡಿಸಬೇಕು" ಎಂದು ಪ್ರಾರ್ಥಿಸಿದನು ಹನುಮಂತನು ಹೇಳಿದ ಈ ವಾಕ್ಯವನ್ನು ಕೇಳಿ ಮಾತಿನಲ್ಲಿ ಚತುರನಾದ ರಾಮನು ಆತನನ್ನು ಕುರಿತು "ಎಲೈಸೌಮ್ಯನೆ! ಹದಿನಾಲ್ಕುವರ್ಷಗಳವರೆಗೆ ನಾನು ಯಾವ ಪಟ್ಟಣವನ್ನಾಗಲಿ, ಗ್ರಾಮವನ್ನಾಗಲಿ ಪ್ರವೇಶಿಸದೆ ಕಾಡಿನಲ್ಲಿರಬೇಕೆಂಬುದೇ ನನ್ನ ತಂದೆಯ ಆಜ್ಞೆಯು, ಪಿತೃವಾಕ್ಯ ಪರಿಪಾಲನವೆಂಬ ವ್ರತವನ್ನು ನಡೆಸುತ್ತಿರುವ ನಾನು, ಈಗ ನಿಮ್ಮ ಕಿಷ್ಕಿಂಧೆಯನ್ನು ಪ್ರವೇಶಿಸಿದರೆ, ಆ ನನ್ನ ವ್ರತಕ್ಕೆ ಭಂತವುಂಟಾಗುವುದಿಲ್ಲವೆ? ಆದುದರಿಂದ ನೀವೇ ಸೇರಿ, ವೀರನಾದ ಈ ಸುಗ್ರೀವನನ್ನು ಕಿಷ್ಕಿಂಧೆಗೆ ಕರೆದುಕೊಂಡುಹೋಗಿ, ಬೇಕಾದ ವೈಭವಗಳಿಂದ ಶಾಸ್ತ್ರೋಕ್ತವಾಗಿ ಇವನಿಗೆ ರಾಜ್ಯಾಭಿಷೇಕವನ್ನು ನಡೆಸಿಬಿಡಿರಿ ಎಲೈ ಆಂಜನೇಯನೆ! ನೀನೇ ಮುಂದಾಗಿ ನಿಂತು ಈಕಾರ್ಯವನ್ನು ನಡೆಸು" ಎಂದನು ಆಮೇಲೆ ಸುಗ್ರೀವನಕಡೆಗೆ ತಿರುಗಿ "ಎಲೆಸುಗ್ರೀವನೇ! ನೀನು ಪಟ್ಟಾಭಿಷಿಕ್ತನಾದ ಕೂಡಲೆ ಈ ಅಂಗದನಿಗೆ ನೀನಾಗಿಯೇ ನಿಂತು ಯೌವರಾಜ್ಯಾಭಿಷೇಕವನ್ನೂ ಮಾಡಿಬಿಡು! ಯುವರಾಜಪದವಿಗೆ ಈತನೇ ಅರ್ಹನು ಇವನು ನಡತೆಯನ್ನು ಬಲ್ಲವನು. ಸದಾಚಾರವುಳ್ಳವನು ಸರ್ವೋತ್ತಮವಾದ ಬಲಪರಾಕ್ರಮವುಳ್ಳವನು. ಇವನು ನಿನ್ನಣ್ಣನಿಗೆ ಜ್ಯೇಷ್ಠಪುತ್ರನಾಗಿಯೂ, ಪರಾಕ್ರಮದಲ್ಲಿ ನಿನಗೆಣೆಯಾಗಿಯೂ, ಕುಂದದ ಧೈರ್ಯವುಳ್ಳವನಾಗಿಯೂ ಇರುವುದರಿಂದ, ಯುವರಾಜಪದವಿಗೆ ಇವನೇ ಅರ್ಹನು ಎಲಸೌಮ್ಯನೆ! ಮಳೆಗಾಲಕ್ಕೆ ಮೊದಲಿನ ಭಾಗವಾದ ಶ್ರಾವಣಮಾಸವು ಈಗ ನಡೆಯುತ್ತಿರುವುದು ಆದರೆ ಆಷಾಢದಿಂದ ನಾಲ್ಕುತಿಂಗಳುಗಳೂ ಮಳೆಗಾಲವೆನಿಸುವುವು ಈಕಾಲದಲ್ಲಿ ನಾವು ಯಾವ

*ಶ್ರಾವಣ ಭಾದ್ರಪದಗಳೆಂಬ ಎರಡುತಿಂಗಳುಗಳಿಗೆ ಮಾತ್ರವೇ ವರ್ಷಾಕಾಲವೆಂಬ ಸಂಕೇತವಿದ್ದರೂ, ಅವುಗಳಿಗೆ ಹಿಂದಿನ ಆಷಾಢವೂ, ಮುಂದಿನ ಆಶ್ವಯುಜವೂ ಸೇರಿ ಈನಾಲ್ಕುತಿಂಗಳುಗಳಲ್ಲಿಯೂ ಮಳೆಯು ಬಿಳುವುದರಿಂದ ಇವುನಾಲ್ಕುತಿಂಗಳುಗಳೂ

ದೊಂದು ಪ್ರಯತ್ನ ವನ್ನು ಮಾಡುವುದಕ್ಕೂ ಸಾಧ್ಯವಿಲ್ಲ ಅದುವರೆಗೆ ನೀನು ನಿನ್ನ ಪಟ್ಟಣದಲ್ಲಿರು ನಾನೂ ಲಕ್ಷ್ಮಣನೊಡನೆ ಈ ಪರ್ವತದಲ್ಲಿ ಇರುವೆನು ಇಲ್ಲಿನ ಪರ್ವತಗುಹೆಯೂಕೂಡ ರಮ್ಯವಾಗಿಯೂ,ವಿಸ್ತಾರವಾಗಿಯೂ ಇರುವುದು ತಕ್ಕಷ್ಟು ಗಾಳಿಯೂ ಬೀಸುತ್ತಿರುವುದು ಇಲ್ಲಿ ಜಲಸಮೃದ್ಧಿಯೂ ಚೆನ್ನಾಗಿರುವುದು ತಾವರ, ನೈದಿಲೆ ಮೊದಲಾದ ಹೂಗಳೂ ಸಮೃದ್ಧವಾಗಿ ಸಿಕ್ಕುವುವು ಆದರೆ ಎಲೆಮಿತ್ರನೆ! ಮುಂದಿನ *ಕಾರ್ತಿಕಮಾಸವು ಆರಂಭಿಸುವುದರೊಳಗಾಗಿ ನೀನು ರಾವಣವಧಕ್ಕೆ ತಕ್ಕಪ್ರಯತ್ನ ವನ್ನು ಮಾಡಬೇಕು ಈ ಸಂಕೇತವನ್ನು ಮಾತ್ರ ನೀನು ಮರೆಯದೆ ಮನಸ್ಸಿನಲ್ಲಿಟ್ಟಿರ

ಯುದ್ಧಾರ್ಹಗಳಲ್ಲವೆಂಬುದಕ್ಕಾಗಿ, ಇಲ್ಲಿ ನಾಲ್ಕುತಿಂಗಳುಗಳೆಂದು ಹೇಳಲ್ಪಟ್ಟಿವೆ ಅಥವಾ ''ಪಕ್ಷಾವೈಮಾಸಾಃ''ಎಂಬ ಶ್ರುತಿಯಂತೆ, ಇಲ್ಲಿ ಮಾಸಗಳೆಂಬುದಕ್ಕೆ ಪಕ್ಷಗಳೆಂಬ ಅರ್ಥವನ್ನುಮಾಡಿ ನಾಲ್ಕುಪಕ್ಷಗಳಿಂದ ಕೂಡಿದ ವರ್ಷರ್ತುವೆಂದೂ ಹೇಳಬಹುದು-

* ಇಲ್ಲಿ ''ಕಾರ್ತಿಕೇ ಸಮನುಪ್ರಾಪ್ತೇ'' ಎಂದುಮೂಲವು ಕಾರ್ತಿಕಮಾಸವು ಸಮೀಪಿಸುವುದನ್ನು ಹೇಳಿರುವುದರಿಂದ,ಆಶ್ವಯುಜಮಾಸದ ಕೊನೆಯೆಂದು ಗ್ರಹಿಸಬೇಕು ಇದು ಅಶ್ವಯುಜಾಂತವೆಂಬುದನ್ನು ರಾಮನೇ ಇನ್ನೊಂದುಕಡೆಯಲ್ಲಿ ''ವಯಂ ಮಾಶ್ವಯುಜೇ ಮಾಸಿ ಪಿಂಗಾಕ್ಷಪ್ರತಿಚೋದಿತಾಃ'' ಎಂದು ಸ್ಪಷ್ಟವಾಗಿ ಹೇಳಿರುವನು ಆದರೆ ಇಲ್ಲಿ ಪ್ರಚೋದನವೆಂದರೆ ಪ್ರೇರಣಾದಿಸನ್ನಾಹಗಳೇಹೊರತು ಪ್ರಯಾಣವಲ್ಲ ಮಾರ್ಗಶೀರ್ಷದಲ್ಲಿ ಪ್ರಯಾಣವು ಹೀಗೆ ವಾನರರೆಲ್ಲರೂ ಸೀತಾನ್ವೇಷಣಾರ್ಥವಾಗಿ ಮಾರ್ಗಶೀರ್ಷದಲ್ಲಿ ಗುಹೆಯನ್ನುಬಿಟ್ಟು ಹೊರಟಮೇಲೆ, ಸ್ವಯಂಪ್ರಭೆಯ ಬಲದಲ್ಲಿ ಬಹಳಕಾಲವಿದ್ದು,ಅಲ್ಲಿಂದ ಹಿಂತಿರುಗಿದಾಗ''ದ್ರುಮೋ ವಾಸಂತಿಕಾ ದೃಷ್ಟ್ವಾ'' ಎಂದು, ವಸಂತಕಾಲದ ಗಿಡಗಳನ್ನು ನೋಡಿದುದಾಗಿ ಹೇಳಿದ್ದರೂ,ಆಗ ವಸಂತಕ್ಕೆ ಮೊದಲಿನ ತಿಂಗಳಾದ ಫಾಲ್ಗುನಮಾಸವೆಂದೇ ಗ್ರಾಹ್ಯವು ಅಥವಾ ಫಾಲ್ಗುನಚೈತ್ರಮಾಸಗಳೇ ವಸಂತಕಾಲವೆಂದು ಹೇಳಿದುದಾಗಿ ಕೆಲವರ ಮತವು ಮುಖ್ಯವಾಗಿ ''ಉತ್ತರಸ್ಯಾದಿನಾ ಪೂರ್ವಸ್ಯಾವಧಿಂಜಾನೀಯಾತ್''ಎಂಬ ನ್ಯಾಯದಿಂದ,ಮುಂದಿನ ಕಾಲದ ಆರಂಭವನ್ನು ಹೇಳುವುದರಿಂದ,ಅದರ ಪೂರ್ವಕಾಲದ ಕೊನೆಯೆಭಾಗವನ್ನು ಸೂಚಿಸುವುದು ವಾಲ್ಮೀಕಿಯಪದ್ಧತಿಯು. ಆದುದರಿಂದ ವಸಂತಾರಂಭವೆಂಬುದಕ್ಕೆ ಫಾಲ್ಗುನವೆಂದು ಗ್ರಹಿಸಿ, ವಾನರರು ಸ್ವಯಂಪ್ರಭೆಯ ಬಲವನ್ನುಬಿಟ್ಟು ಹೊರಟುದು ಫಾಲ್ಗುನಮಾಸವೆಂದೇ ನಿಶ್ಚಯಿಸಬೇಕು ಇಲ್ಲಿ ತಿಳಿಯಬೇಕಾದ ಕಾಲಕ್ರಮವೇನೆಂದರೆ:—ಚೈತ್ರಮಾಸದಲ್ಲಿ ರಾಮನು ಅಯೋಧ್ಯೆಯನ್ನು ಬಿಟ್ಟು ಹೊರಟುದು,ಅಗಸ್ತ್ಯಾಶ್ರಮವನ್ನು ಸೇರುವುದಕ್ಕೆ



1489. ಸುಗ್ರೀವಪಟ್ಟಾಭಿಷೇಕವು.

ದೊಂದು ಪ್ರಯತ್ನ ವನ್ನು ಮಾಡುವುದಕ್ಕೂ ಸಾಧ್ಯವಿಲ್ಲ ಆದುವರೆಗೆ ನೀನು ನಿನ್ನ ಪಟ್ಟಣದಲ್ಲಿರು ನಾನೂ ಲಕ್ಷ್ಮಣನ್ನೊಡನೆ ಈ ಪರ್ವತದಲ್ಲಿ ಇರುವೆನು ಇಲ್ಲಿನ ಪರ್ವತಗುಹೆಯೂಕೂಡ ರಮ್ಯವಾಗಿಯೂ,ವಿಸ್ತಾರವಾಗಿಯೂ ಇರುವುದು ತಕ್ಕಷ್ಟು ಗಾಳಿಯೂ ಬೀಸುತ್ತಿರುವುದು ಇಲ್ಲಿ ಜಲಸಮೃದ್ಧಿಯೂ ಚೆನ್ನಾಗಿರುವುದು ತಾವರ, ನೈದಿಲೆ ಮೊದಲಾದ ಹೂಗಳೂ ಸಮೃದ್ಧವಾಗಿ ಸಿಕ್ಕುವುವು ಆದರೆ ಎಲೆಮಿತ್ರನೆ! ಮುಂದಿನ *ಕಾರ್ತಿಕಮಾಸವು ಆರಂಭಿಸುವುದರೊಳಗಾಗಿ ನೀನು ರಾವಣವಧಕ್ಕೆ ತಕ್ಕಪ್ರಯತ್ನವನ್ನು ಮಾಡಬೇಕು ಈ ಸಂಕೇತವನ್ನು ಮಾತ್ರ ನೀನು ಮರೆಯದೆ ಮನಸ್ಸಿನಲ್ಲಿಟ್ಟಿರ

ಯುದ್ಧಾರ್ಹಗಳಲ್ಲವೆಂಬುದಕ್ಕಾಗಿ, ಇಲ್ಲಿ ನಾಲ್ಕುತಿಂಗಳುಗಳೆಂದು ಹೇಳಲ್ಪಟ್ಟಿವೆ ಅಥವಾ ''ಪಕ್ಷಾವೈಮಾಸಾಃ''ಎಂಬ ಶ್ರುತಿಯಂತೆ, ಇಲ್ಲಿ ಮಾಸಗಳೆಂಬುದಕ್ಕೆ ಪಕ್ಷಗಳೆಂಬ ಅರ್ಥವನ್ನುಮಾಡಿ ನಾಲ್ಕುಪಕ್ಷಗಳಿಂದ ಕೂಡಿದ ವರ್ಷರ್ತುವೆಂದೂ ಹೇಳಬಹುದು-

* ಇಲ್ಲಿ ''ಕಾರ್ತಿಕೇ ಸಮನುಪ್ರಾಪ್ತೇ'' ಎಂದುಮೂಲವು ಕಾರ್ತಿಕಮಾಸವು ಸಮೀಪಿಸುವುದನ್ನು ಹೇಳಿರುವುದರಿಂದ,ಆಶ್ವಯುಜಮಾಸದ ಕೊನೆಯೆಂದು ಗ್ರಹಿಸಬೇಕು ಇದು ಅಶ್ವಯುಜಾಂತವಂಬುದನ್ನು ರಾಮನೇ ಇನ್ನೊಂದುಕಡೆಯಲ್ಲಿ ''ವಯಮಾಶ್ವಯುಜೇ ಮಾಸಿ ಪಿಂಗಾಕ್ಷಪ್ರತಿಚೋದಿತಾಃ'' ಎಂದು ಸ್ಪಷ್ಟವಾಗಿ ಹೇಳಿರುವನು ಆದರೆ ಇಲ್ಲಿ ಪ್ರಚೋದನವೆಂದರೆ ಸ್ಮೇರಣಾದಿಸನ್ನಾಹಗಳೇಹೊರತು ಪ್ರಯಾಣವಲ್ಲ ಮಾರ್ಗಶೀರ್ಷದಲ್ಲಿ ಪ್ರಯಾಣವು ಹೀಗೆ ವಾನರರೆಲ್ಲರೂ ಸೀತಾನ್ವೇಷಣಾರ್ಥವಾಗಿ ಮಾರ್ಗಶೀರ್ಷದಲ್ಲಿ ಗುಹೆಯನ್ನುಬಿಟ್ಟು ಹೊರಟಮೇಲೆ,ಸ್ವಯಂಪ್ರಭೆಯ ಬಲದಲ್ಲಿ ಬಹಳಕಾಲವಿದ್ದು,ಅಲ್ಲಿಂದ ಹಿಂತಿರುಗಿದಾಗ''ದ್ರುಮೋ ವಾಸಂತಿಕಾ ದೃಷ್ಟ್ವಾ'' ಎಂದು, ವಸಂತಕಾಲದ ಗಿಡಗಳನ್ನು ನೋಡಿದುದಾಗಿ ಹೇಳಿದ್ದರೂ,ಆಗ ವಸಂತಕ್ಕೆ ಮೊದಲಿನ ತಿಂಗಳಾದ ಫಾಲ್ಗುನಮಾಸವೆಂದೇ ಗ್ರಾಹ್ಯವು ಅಥವಾ ಫಾಲ್ಗುನಚೈತ್ರಮಾಸಗಳೇ ವಸಂತಕಾಲವೆಂದು ಹೇಳಿದುದಾಗಿ ಕೆಲವರ ಮತವು ಮುಖ್ಯವಾಗಿ ''ಉತ್ತರಸ್ಯಾದಿನಾ ಪೂರ್ವಸ್ಯಾವಧಿಂಜಾನೀಯಾತ್''ಎಂಬ ನ್ಯಾಯದಿಂದ,ಮುಂದಿನ ಕಾಲದ ಆರಂಭವನ್ನು ಹೇಳುವುದರಿಂದ,ಅದರ ಪೂರ್ವಕಾಲದ ಕೊನೆಯಭಾಗವನ್ನು ಸೂಚಿಸುವುದು ವಾಲ್ಮೀಕಿಯಪದ್ಧತಿಯು ಆದುದರಿಂದ ವಸಂತಾರಂಭವೆಂಬುದಕ್ಕೆ ಫಾಲ್ಗುನವೆಂದು ಗ್ರಹಿಸಿ, ವಾನರರು ಸ್ವಯಂಪ್ರಭೆಯ ಬಲವನ್ನುಬಿಟ್ಟು ಹೊರಟುದು ಫಾಲ್ಗುನಮಾಸವೆಂದೇ ನಿಶ್ಚಯಿಸಬೇಕು. ಇಲ್ಲಿ ತಿಳಿಯಬೇಕಾದ ಕಾಲಕ್ರಮವೇನೆಂದರೆ:—ಚೈತ್ರಮಾಸದಲ್ಲಿ ರಾಮನು ಅಯೋಧ್ಯೆಯನ್ನುಬಿಟ್ಟು ಹೊರಟುದು.ಅಗಸ್ತ್ಯಾಶ್ರಮವನ್ನು ಸೇರುವುದಕ್ಕೆ

ಬೇಕು ಇನ್ನು ನೀನು ಹೊರಡು! ನಿನ್ನ ರಾಜ್ಯದಲ್ಲಿ ಅಭಿಷಿಕ್ತನಾಗಿ ನಿನ್ನ ಮಿತ್ರರೆಲ್ಲರನ್ನೂ ಸಂತೋಷಪಡಿಸು" ಎಂದನು. ಹೀಗೆ ರಾಮನು ಅನುಜ್ಞೆಯನ್ನು ಕೊಟ್ಟೊಡನೆಯೇ ಸುಗ್ರೀವನು ಅಲ್ಲಿದ್ದ ವಾನರರೊಡಗೂಡಿ ಕಿಷ್ಕಿಂಧೆಗೆ ಬಂದನು ಪುರಪ್ರವೇಶಮಾಡುವಾಗ ಸಾವಿರಾರುಮಂದಿ ವಾನರರು ಸುಗ್ರೀವನನ್ನು ಹಿಂಬಾಲಿಸಿ ಬಂದು ಆತನಿಗೆ ಸಮುಸ್ಕರಿಸುತಿದ್ದರು ಇನ್ನೂ ಅಲ್ಲಿದ್ದ ಸಮಸ್ತವಾನರಪ್ರಜೆಗಳೂ, ತಮಗೆ ಪಾಲಕನಾಗಿ ಬಂದ ಸುಗ್ರೀವನನ್ನು ನೋಡಿ ಸಂತೋಷದಿಂದ ತಲೆಬಗ್ಗಿ ನಮಸ್ಕರಿಸಿ,ವಿನಯದಿಂದ ನಿಂತಿದ್ದರು ಸಂತೋಷಪರವಶರಾಗಿ ತನಗೆ ನಮಸ್ಕರಿಸುತ್ತಿದ್ದ ಆ ಪ್ರಜಗಳೆಲ್ಲರನ್ನೂ ಸುಗ್ರೀವನು ಪ್ರೀತಿಯಿಂದ ಮಾತನಾಡಿಸಿ, ಅವರನ್ನು ಮೇಲಕ್ಕೆತ್ತಿ, ಅವರೆಲ್ಲರನ್ನೂ ಮನ್ನಿಸಿ, ಅಲ್ಲಿಂದ ನೆಟ್ಟನೆ ವಾಲಿಯ ಅಂತಃಪುರವನ್ನು ಪ್ರವೇಶಿಸಿದನು ಅಲ್ಲಿ ತಾರೆಯನ್ನು ಸಮಾಧಾನಪಡಿಸಿ ಅಲ್ಲಿಂದ ಹಿಂತಿರುಗಿದನು ಅಂತಃಪುರದಿಂದ ಹಿಂತಿರುಗಿದ ಸುಗ್ರೀವನನ್ನು, ಅಲ್ಲಿನ ವಾನರರೆಲ್ಲರೂ ಅತಿವೈಭವದಿಂದ ಕರೆತಂದು,ದೇವತೆಗಳು ಇಂದ್ರನಿಗೆ ಪಟ್ಟವನ್ನು ಕಟ್ಟುವಂತೆ ಸಂಭ್ರಮದಿಂದ ಆತನಿಗೆ ರಾಜ್ಯಾಭಿಷೇಕವನ್ನು ನಡೆಸಲಾರಂಭಿಸಿದರು ಕೆಲವು ವಾ

ಮೊದಲೇ ಹತ್ತು ವರ್ಷಗಳು ಕಳೆದುಹೋದುವೆಂದು ಹಿಂದೆಯೇ ತಿಳಿಸಲ್ಪಟ್ಟಿರುವುದು ಆಮೇಲೆ ಪಂಚವಟಿಯಲ್ಲಿ ಮೂರುವರ್ಷಗಳು ಕಳೆದುಹೋದುವು ಆಗಿನ ಚೈತ್ರಮಾಸದಲ್ಲಿಯೇ ಶೂರ್ಪನಖಾಭಂಗವೂ,ಖರಾದಿರಾಕ್ಷಸವಧವೂ ನಡೆದುದಾಗಿ ತಿಳಿದುಬಂದಿದೆ. ರಾವಣನು ಮಾರೀಚನನ್ನೊಪ್ಪಿಸುವುದರಲ್ಲಿ ಸ್ವಲ್ಪಕಾಲವು ಕಳೆದುಹೋದರೂ, ಆಚೈತ್ರದ ಕೊನೆಯಲ್ಲಿಯೇ ಸೀತಾಪಹರಣವೂ ನಡೆಯಿರಬೇಕು ರಾಮನು ಮೊದಲು ಸೀತಾವಿರಹದಿಂದ ಪೀಡಿತನಾಗಿದ್ದಾಗ ಚೈತ್ರಾನಿಲಗಳೇ ಮೊದಲಾದ ವಸಂತಋತುವಿನ ಸ್ವಭಾವವನ್ನೇ ವರ್ಣಿಸುತಿದ್ದುದರಿಂದಲೂ,ಸೀತೆಯು ಲಂಕೆಯಲ್ಲಿದ್ದುದು ಸರಿಯಾಗಿ ಒಂದುವರ್ಷಕಾಲವೆಂದು ನಿರ್ಣಯಿಸಲ್ಪಟ್ಟಿರುವುದರಿಂದಲೂ, ಚೈತ್ರದಲ್ಲಿಯೇ ಸೀತಾಪಹರಣವೆಂದು ಸಿದ್ಧವಾಗುವುದು ಫಾಲ್ಗುನದಲ್ಲಿ ರಾವಣವಧವು ಇದಕ್ಕೆ ಮೊದಲು ಆಷಾಢದಲ್ಲಿಯೇ ವಾಲಿವಧವು ಶರದೃತುವಿನಲ್ಲಿ ವಾನರರ ಸೇನಾಸನ್ನಾಹವು ಮಾರ್ಗಶೀರ್ಷದಲ್ಲಿ ವಾನರರ ಪ್ರಯಾಣವು ಫಾಲ್ಗುನಶುದ್ಧತ್ರಯೋದಶಿಯಲ್ಲಿ ಹನುಮಂತನು ಸಮುದ್ರವನ್ನು ದಾಟಿದುದು, ಚತುರ್ದಶಿಯಲ್ಲಿಯೇ ಲಂಕೆಯಿಂದ ಹಿಂತಿರುಗಿದುದು ಪೂರ್ಣಿಮೆಯಲ್ಲಿ ದಂಡಯಾತ್ರೆಯೆಂದು ಗ್ರಾಹ್ಯವು ಮುಂದಿನ ವಿಷಯವು ಯುದ್ಧಕಾಂಡದಲ್ಲಿ ಸ್ಪಷ್ಟವಾಗುವುದು

ನರರು ಆತನಿಗೆ ಸುವರ್ಣದಂಡವುಳ್ಳ ಶ್ವೇತಚ್ಛತ್ರವನ್ನು ತಂದುಹಿಡಿದರು ಕೆಲವರು ಚಿನ್ನದ ಹಿಡಿಗಳುಳ್ಳ ಚಾಮರಗಳನ್ನು ತಂದುಬೀಸಿದರು ಮಂಗಳಾರ್ಥವಾಗಿ ನವರತ್ನಗಳನ್ನೂ ತಂದಿರಿಸಿದರು ಸಮಸ್ತವಿಧಗಳಾದ ಮಂಗಳೌಷಧಿಗಳೂ,ಮಂಗಳಬೀಜಗಳೂ ತಂದಿರಿಸಲ್ಪಟ್ಟುವು ಹಾಲು ಸೋರುತ್ತಿರುವ ಮರದ ಚಿಗುರುಗಳನ್ನೂ,ಹೂಗಳನ್ನೂ ತಂದಿಟ್ಟರು ಬಿಳೀಬಟ್ಟೆಗಳೂ, ಬಿಳೀ ಗಂಧಗಳೂ, ಸುವಾಸನೆಯುಳ್ಳ ಪುಷ್ಪಹಾರಗಳೂ, ನೆಲದಲ್ಲಿಯೂ ನೀರಿನಲ್ಲಿಯೂ ಬೆಳೆಯತಕ್ಕ ಬಗೆಬಗೆಯ ಹೂಗಳೂ ಸಿದ್ಧಪಡಿಸಲ್ಪಟ್ಟುವು ದಿವ್ಯಚಂದನಗಳೂ, ಬೇರೆಬೇರೆ ಸುಗಂಧದ್ರವ್ಯಗಳೂ ತಂದಿರಿಸಲ್ಪಟ್ಟುವು ಮಂತ್ರಾಕ್ಷತೆ, ಗಸೆಗಸೆ, ಜೇನು, ತುಪ್ಪ, ಮೊಸರು ಹುಲಿಯಚರ್ಮ, ಹಂದಿಯ ಚರ್ಮದಿಂದ ಮಾಡಿದ ಪಾವುಗೆ, ಮೊದಲಾದ ಮಂಗಳಸಾಮಗ್ರಿಗಳೆಲ್ಲವೂ ಸಿದ್ಧವಾದುವು ಈಕಾಲಕ್ಕೆ ಸರಿಯಾಗಿ ಹದಿನಾರುಮಂದಿ ಉತ್ತಮಕನ್ಯೆಯರು ವಿಲೇಪನಗಳನ್ನೂ,ಗೋರೋಚನವನ್ನೂ, ಮಣಿತೆಲೆಯನ್ನೂ ಕೈಯಲ್ಲಿ ಹಿಡಿದು ಸಂತೋಷದಿಂದ ಬಂದುನಿಂತರು ಆಮೇಲೆ ವಾನರರೆಲ್ಲರೂ ಶುಭ ಮುಹೂರ್ತಕ್ಕೆ ಸರಿಯಾಗಿ ಸುಗ್ರೀವನಿಗೆ ಶಾಸ್ತ್ರೋಕ್ತವಾಗಿ ಪಟ್ಟವನ್ನು ನಡೆಸಿದರು ಈ ಉತ್ಸವಕ್ಕಾಗಿ ಕರೆಸಿದ್ದ ಬ್ರಾಹ್ಮಣೋತ್ತಮರೆಲ್ಲರಿಗೂ, ರತ್ನಗಳನ್ನೂ, ವಸ್ತ್ರಗಳನ್ನೂ, ಭಕ್ಷ್ಯಭೋಜ್ಯಗಳನ್ನೂ ಕೊಟ್ಟು ಸಂತೋಷಪಡಿಸಿದರು ಆಮೇಲೆ ಮಂತ್ರಜ್ಞರಾದ ಬ್ರಾಹ್ಮಣರು ದರ್ಭಪರಿಸ್ತರಣದ ನಡುವೆ ಜ್ವಲಿಸುತ್ತಿರುವ ಅಗ್ನಿಯಲ್ಲಿ ಮಂತ್ರಪೂತವಾದ ಹವಿಸ್ಸನ್ನು ಹೋಮಮಾಡಿದರು ಆಮೇಲೆ ವಾನರಶ್ರೇಷ್ಠರೆಲ್ಲರೂ ಸುಗ್ರೀವನನ್ನು ಕರೆತಂದು ಉಪ್ಪರಿಗೆಯನ್ನೇರಿಸಿ,ಅಲ್ಲಿ ಸುವರ್ಣಮಯವಾದ ಕಾಲುಗಳುಳ್ಳದಾಗಿಯೂ, ಉತ್ತಮಾಸ್ತರಣದಿಂದ ಕೂಡಿದುದಾಗಿಯೂ, ಚಿತ್ರವಿಚಿತ್ರಗಳಾದ ಪುಷ್ಪಮಾಲಿಕೆಗಳಿಂದಲಂಕೃತವಾಗಿಯೂ ಇದ್ದ ಒಂದು ದಿವ್ಯಾಸನದಲ್ಲಿ ಪೂರ್ವಾಭಿಮುಖವಾಗಿ ಕುಳ್ಳಿರಿಸಿ,ನಾನಾವಿಧವಾದ ಮಂತ್ರಗಳನ್ನುಚ್ಚರಿಸುತಿದ್ದರು ಇಷ್ಟರಲ್ಲಿ ಕೆಲವು ವಾನರರು ಪುಣ್ಯನದಿಗಳಿಂದಲೂ, ನದಿಗಳಿಂದಲೂ, ಸಮುದ್ರಗಳಿಂದಲೂ, ಪುಣ್ಯತೀರ್ಥಗಳಿಂದಲೂ ತೀರ್ಥಗಳನ್ನು ಸಂಗ್ರಹಿಸಿ ತಂದು ಸುವರ್ಣಕುಂಭಗಳಲ್ಲಿ ಸಿದ್ಧಪಡಿಸಿಟ್ಟರು. ಆಗ ವೇದಗಳಲ್ಲಿಯೂ,

ಮನ್ವಾದಿಸ್ಮೃತಿಗಳಲ್ಲಿಯೂ, ವಿಹಿತಗಳಾದ ಕ್ರಮವನ್ನೇ ಅನುಸರಿಸಿ, ಗಜ, ಗವಾಕ್ಷ, ಗವಯ, ಶರಭ, ಗಂಧಮಾದನ, ಮೈಂದ, ದ್ವಿವಿದ, ಹನುಮಂತ, ಜಾಂಬವಂತ, ನಳರೇ ಮುಂತಾದ ಕಪಿಶ್ರೇಷ್ಠರೆಲ್ಲರೂ ಸೇರಿ, ಎತ್ತಿನಕೊಂಬುಗಳಿಂದಲೂ, ಸುವರ್ಣಪಾತ್ರೆಗಳಿಂದಲೂ ಆ ಸುಗಂಧತೀರ್ಥವನ್ನೆತ್ತಿ, ಅಷ್ಟವಸುಗಳು ಇಂದ್ರನಿಗೆ ಅಭಿಷೇಕಮಾಡುವಂತೆ ಆ ಸುಗ್ರೀವನಿಗೆ ಅಭಿಷೇಕವನ್ನೂ ನಡಿಸಿದರು ಅಲ್ಲಲ್ಲಿ ಅನೇಕ ವಾನರಶ್ರೇಷ್ಠರು ಗುಂಪುಗುಂಪಾಗಿ ಸೇರಿ ಈ ಸುಗ್ರೀವಪಟ್ಟಾಭಿಷೇಕೋತ್ಸವಸಂಭ್ರಮವನ್ನು ಸಂತೋಷದಿಂದ ಕೂಗಿ ಕೊಂಡಾಡುತಿದ್ದರು ಆಮೇಲೆ ವಾನರರಾಜನಾದ ಸುಗ್ರೀವನು ರಾಮಾಜ್ಞೆಯನ್ನು ಜ್ಞಾಪಿಸಿಕೊಂಡು ತನ್ನಣ್ಣನಮಗನಾದ ಅಂಗದನನ್ನು ಸಂತೋಷದಿಂದಪ್ಪಿ ಕರತಂದು ಪೀಠದಲ್ಲಿರಿಸಿ, ಅವನಿಗೆ ಯೌವರಾಜ್ಯಾಭಿಷೇಕವನ್ನೂ ಮಾಡಿದನು. ಈ ಅಂಗದನ ಯೌವರಾಜ್ಯಾಭಿಷೇಕವನ್ನು ನೋಡಿ ಅಲ್ಲಿನ ವಾನರರಿಗೆ ಎಂದಿಗಿಂತಲೂ ಮಿತಿಮೀರಿದ ಸಂತೋಷವುಂಟಾಯಿತು ಎಲ್ಲರೂ ಸುಗ್ರೀವನನ್ನು ನೋಡಿ "ಭಲೆ! ಭಲೆ! ಶಹಬಾಸ್!" ಎಂದು ಕೊಂಡಾಡುತಿದ್ದರು ಈಮಹೋತ್ಸವಗಳಿಗೆಲ್ಲಾ ಮುಖ್ಯಕಾರಣನಾದ ಶ್ರೀರಾಮನನ್ನೂ, ಲಕ್ಷ್ಮಣನನ್ನೂ ಎಬೆಬಿಡದೆ ಸ್ತುತಿಸುತಿದ್ದರು ಅಲ್ಲಿನ ಪುರವಾಸಿಗಳೆಲ್ಲರೂ ಸಂತೋಷದಿಂದುಬ್ಬುತಿದ್ದರು ಆ ಪಟ್ಟಣದಲ್ಲಿ ಎಲ್ಲೆಲ್ಲಿ ನೋಡಿದರೂ ಧ್ವಜಪತಾಕಗಳು ಕಂಗೊಳಿಸುತಿದ್ದುವು, ಕಿಷ್ಕಿಂಧೆಯೆಂಬ ಆಬೆಟ್ಟದ ಗುಹೆಗೆ ಆಗ ಒಂದು ಅಪೂರ್ವಶೋಭೆಯೇ ಉಂಟಾದಂತೆ ಕಾಣುತಿತ್ತು ಈಪಟ್ಟಾಭಿಷೇಕೋತ್ಸವವು ಮುಗಿದೊಡನೆಯೇ, ಕಪಿರಾಜನಾದ ಸುಗ್ರೀವನು ತಾನಾಗಿಯೇ ಮಹಾತ್ಮನಾದ ರಾಮನಬಳಿಗೆ ಬಂದು, ತನ್ನ ಪಟ್ಟಾಭಿಷೇಕವೈಭವಗಳೆಲ್ಲವನ್ನೂ ಅತನಿಗೆ ತಿಳಿಸಿ ಬಂದು, ಇಂದ್ರನು ಸ್ವರ್ಗಾಧಿಪತ್ಯವನ್ನನುಭವಿಸುವಂತೆ ವಾನರರಾಜ್ಯಾಧಿಪತ್ಯದಲ್ಲಿ ರಾಜಭೋಗಗಳನ್ನನುಭವಿಸುತ್ತ, ತನ್ನ ಪ್ರಿಯಪತ್ನಿಯಾದ ರುಮೆಯೊಡಗೂಡಿ ಸುಖದಿಂದಿದ್ದನು ಇಲ್ಲಿಗೆ ಇಪ್ಪತ್ತಾರನೆಯ ಸರ್ಗವು

ರಾಮನು ಪರ್ವತಗುಹೆಯಲ್ಲಿ ಏಕಾಂತವಾಗಿ ಕುಳಿತು,
ಸೀತೆಯನ್ನು ನೆನೆಸಿಕೊಂಡು ವಿರಹತಾಪದಿಂದ
ದುಃಖಿಸುವುದನ್ನು ನೋಡಿ, ಲಕ್ಷ್ಮಣನು
ಆತನನ್ನು ಸಮಾಧಾನಪಡಿಸಿದುದು

ಹೀಗೆ ಪಟ್ಟಾಭಿಷಿಕ್ತನಾದ ಸುಗ್ರೀವನು ಕಿಷ್ಕಿಂಧೆಯನ್ನು ಪ್ರವೇಶಿಸಿ ಅಲ್ಲಿ ಸುಖದಿಂದಿರುತ್ತಿರಲು, ರಾಮನು ಲಕ್ಷ್ಮಣನೊಡಗೂಡಿ ಅತ್ತಲಾಗಿ ಮಾಲ್ಯವತ್ಪರ್ವತಕ್ಕೆ ಹೋಗಿ ಸೇರಿದನು ಆ ಪರ್ವತದಲ್ಲಿ ಯಾವಾಗಲೂ ಹುಲಿಗಳೂ ಇತರ ಮೃಗಗಳೂ, ಕೂಗುತ್ತಿರುವುವು ಸಿಂಹಗಳು ಭಯಂಕರವಾದ ಗರ್ಜನೆಯನ್ನು ಮಾಡುತ್ತಿರುವುವು ಪೊದೆಗಳಿಂದಲೂ, ಬಳ್ಳಿಗಳಿಂದಲೂ, ಬಗೆಬಗೆಯ ಮರಗಳಿಂದಲೂ, ತುಂಬಿದ ಆ ಬೆಟ್ಟದಲ್ಲಿ ಕರಡಿಗಳೂ, ಕಪಿಗಳೂ, ಗೋಲಾಂಗೂಲಗಳೂ, ಕಾಡುಬೆಕ್ಕುಗಳೂ ಸುತ್ತಲೂ ಸಂಚರಿಸುತ್ತಿರುವುವು ಆ ಪರ್ವತವು ಮೇಘಗಳೇ ಗುಂಪುಗೂಡಿದಂತೆ ಕಾಣುತಿತ್ತು ಎಲ್ಲೆಲ್ಲಿ ನೋಡಿದರೂ ನಿರ್ಮಲವಾದ ನೀರುಳ್ಳ ಮಡಗಳು ತುಂಬಿದ್ದುವು ಆ ಬೆಟ್ಟದ ಶಿಖರದಲ್ಲಿ ರಾಮನು ಲಕ್ಷ್ಮಣನೊಡನೆ ಒಂದು ವಿಸ್ತಾರವಾದ ಗುಹೆಯನ್ನು ನೋಡಿ, ಅದನ್ನು ತನ್ನ ವಾಸಕ್ಕಾಗಿ ನಿಶ್ಚಯಿಸಿಕೊಂಡನು ಆಮೇಲೆ ಶ್ರೀರಾಮನು, ತಾನು ಸುಗ್ರೀವನೊಡನೆ ಮಾಡಿಕೊಂಡ ಸಂಕೇತವನ್ನು ಸ್ಮರಿಸಿಕೊಂಡು, ಸಮೀಪದಲ್ಲಿ ವಿನಯದಿಂದ ನಿಂತಿದ್ದ ಲಕ್ಷ್ಮಣನನ್ನು ಕುರಿತು, ತತ್ಕಾಲೋಚಿತವಾಗಿ ಒಂದಾನೊಂದು ಮಾತನ್ನು ಹೇಳುವನು "ವತ್ಸ, ಲಕ್ಷ್ಮಣನೆ! ಈ ಬೆಟ್ಟದ ಗುಹೆಯು ಬಹಳ ರಮ್ಯವಾಗಿರುವುದು ವಿಸ್ತಾರವಾಗಿಯೂ ಇರುವುದು ತಕ್ಕಷ್ಟುಗಾಳಿಯೂ ಬೀಸುತ್ತಿರುವುದು ಈ ಮಳೆಗಾಲವು ಮುಗಿಯುವವರೆಗೂ ನಾವಿಬ್ಬರೂ ಇಲ್ಲಿಯೇ ವಾಸವಾಡುವೆವು ಇದರ ಶಿಖರವು ಎಷ್ಟು ವಿಸ್ತಾರವಾಗಿಯೂ, ಉನ್ನತವಾಗಿಯೂ ಇರುವುದು ನೋಡು ಅಲ್ಲಲ್ಲಿ ಬಿಳುಪು, ಕಪ್ಪು, ಕೆಂಪು ಮೊದಲಾದ ಬಗೆಬಗೆಯ ಬಣ್ಣಗಳಿಂದ ಕೂಡಿದ ಕಲ್ಲುಗಳು ಈಶ್ವಳಕ್ಕೆ ಎಷ್ಟೋ ಅಂಚವನ್ನುಂಟುಮಾಡುತ್ತಿರುವುವು ಬಗೆಬಗೆಯ ಧಾತುಗಳೂ ತುಂಬಿರುವುವು ಅಲ್ಲಲ್ಲಿ ಗುಹೆಗಳೂ ಗಿರಿನದಿಗಳೂ ಶೋಭಿಸುವುವು ಬಗೆಬಗೆಯ ಮರದ ಗುಂಪುಗಳು ದಟ್ಟನಾಗಿ ಬೆಳೆದಿರುವುವು ಮನೋಹರಗಳಾದ ಬಗೆಬಗೆಯ ಬಳ್ಳಿಗಳು ಹಬ್ಬಿರುವುವು ಅನೇಕಪಕ್ಷಿಗಳು ಕೊಗುತ್ತಿರುವು

ವು. ನವಿಲುಗಳು ಕೇಕಾಧ್ವನಿಯನ್ನು ಮಾಡುವುವು. ಮಾಲತಿ, ಮೊಲ್ಲೆ ಮೊದಲಾದ ಹೂಗಿಡಗಳ ಪೊದೆಗಳು ಎಷ್ಟೋ ಮನೋಹರವಾಗಿರುವುವು ಇನ್ನೂ ಅಲ್ಲಲ್ಲಿ ಪುಷ್ಪಿತಗಳಾದ ಸಿಂಧುವಾರ, ಗೋರಂಟೆ, ಕಡವು, ಅರ್ಜುನ ಸರ್ಜಕ ಮುಂತಾದ ಹೂಗಿಡಗಳ, ಶೋಭಿಸುತ್ತಿರುವುವು ಇದೋ! ಇಲ್ಲಿ ಅರಳಿದ ಕಮಲಗಳಿಂದ ಶೋಭಿಸುವ ಈ ಕಮಲಸರೋವರವು ಎಷ್ಟು ಮನೋಹರವಾಗಿರುವುದು ನೋಡಿದೆಯಾ? ನಮ್ಮಗುಹೆಗೆ ಇದು ಸಮೀಪವಾಗಿಯೇ ಇರುವುದು ನೈಋತ್ಯಾಭಿಮುಖವಾದ ಬಾಗಿಲುಳ್ಳುದಾಗಿ ಈಶಾನ್ಯದ ಕಡೆಗಿರುವ ಈ ಗುಹೆಯು, ನಮಗೆ ಬಹುವಿಧದಲ್ಲಿ ಅನುಕೂಲವಾಗಿರುವುದು ಇದಲ್ಲದೆ ಇದರ ಹಿಂಭಾಗವು ತಿಟ್ಟಾಗಿಯೂ ಇರುವುದರಿಂದ, ವಿಶೇಷವಾದ ಗಾಳಿಯು ಬಡಿಯದಂತೆ ಮರೆಯಾಗಿಯೂ ಇರುವುದು ಈ ಗುಹೆಯ ಬಾಗಿಲಲ್ಲಿರುವ ಕಲ್ಲುಬಂಡೆಯೂಕೂಡ ಹೆಚ್ಚು ತಗ್ಗಿಲ್ಲದೆ ಸಮವಾಗಿಯೂ, ನುಣುಪಾಗಿಯೂ, ವಿಸ್ತಾರವಾಗಿಯೂ ಇರುವುದು ಇದು ಕಾಡಿಗೆಯ ಹರಳಿನಂತೆ ಎಷ್ಟು ಕಪ್ಪಾಗಿರುವುದು ನೋಡು ಎಲೆ ವತ್ಸನೆ! ಇದೋ ಇತ್ತಲಾಗಿ ಉತ್ತರದಿಕ್ಕಿನಲ್ಲಿ ಕಾಣುವ ತಿಖರವನ್ನು ನೋಡು ಮೇಲೇಳುತ್ತಿರುವ ಕರೀಮೇಘ ಸಮೂಹದಂತೆಯೇ ಕಾಣುತ್ತಿರುವುದು! ಈ ದಕ್ಷಿಣದಿಕ್ಕಿನಲ್ಲಿಯೂಕೂಡ ಬಗೆಬಗೆಯ ಧಾತುಗಳಿಂದ ಶೋಭಿತವಾಗಿ ಕೈಲಾಸತಿಖರದಂತೆ ಕಾಣುವ ಬಿಳೀತಿಖರವು ಎಷ್ಟು ಮನೋಹರವಾಗಿರುವುದು ನೋಡು ನಮ್ಮಗುಹೆಯ ಮುಂಭಾಗದಲ್ಲಿ ಸ್ವಲ್ಪವೂ ಕಸರಿಲ್ಲದೆ ಪೂರ್ವಾಭಿಮುಖವಾಗಿ ಹರಿಯುತ್ತಿರುವ ಈ ನದಿಯನ್ನು ನೋಡಿದೆಯಾ? ಇದರ ಬಣ್ಣವನ್ನು ನೋಡಿದರೆ ತ್ರಿಕೂಟಗಿರಿಯಲ್ಲಿರುವ ಗಂಗಾನದಿಯಂತೆಯೇ ಕಾಣುತ್ತಿರುವುದು ಮತ್ತು ಇಲ್ಲಿ ಸಂಪಗೆ, ತಿಲಕ, ತಾಳೆ, ಹೊಂಗೆ, ಆದಿಮುತ್ತೆ, ಪದ್ಮ ಪರ್ಣಿ, ಸರಳ, ಅಶೋಕ, ಆಲ, ಸ್ಯಂದನ, ವಾನೀರ, ಪಗಡೆ, ಕೇಗದೆ, ಆಲ, ಹಿಂತಾಲ, ತಿಲ್ವ, ಬೆತ್ತ, ಕಡವು, ಕೃತಮಾಲ ಇವೇ ಮೊದಲಾದ ತೀರವೃಕ್ಷಗಳು, ಪುಷ್ಪಫಲಗಳಿಂದ ತುಂಬಿ, ಈ ನದಿಗೆ ಎಷ್ಟೊಂದು ಅಪೂರ್ವಶೋಭೆಯನ್ನುಂಟುಮಾಡುತ್ತಿರುವುವು ನೋಡು! ಇವುಗಳಿಂದ ಈ ನದಿಯು ಅನೇಕ ವಸ್ತ್ರಾಭರಣಗಳಿಂದಲಂಕೃತಳಾದ ಉತ್ತಮಸ್ತ್ರೀಯಂತೆಯೇ ತೋರುತ್ತಿ

ರುವುದು ಇಲ್ಲಿ ನಾನಾಜಾತಿಯ ಹಕ್ಕಿಗಳು ನೂರಾರು ಕಡೆಗಳಲ್ಲಿ ಗುಂಪು ಗುಂಪಾಗಿ ಸೇರಿ ಬಗೆಬಗೆಯ ಸ್ವರಗಳಿಂದ ಕೂಗುತ್ತಿರುವುವು ಒಂದಕ್ಕೊಂದಕ್ಕೆ ಸಮಾನವಾದ ಅನುರಾಗವುಳ್ಳ ಚಕ್ರವಾಕಪಕ್ಷಿಗಳು ಅಲ್ಲಲ್ಲಿ ಜತೆಜತೆಯಾಗಿ ಸೇರಿ ವಿಹರಿಸುತ್ತಿರುವ ಸೊಗಸನ್ನು ನೋಡು! ಒಂದುಕಡೆಯಲ್ಲಿ ಕರೀನೈದಿಲೆಗಳೂ, ಮತ್ತೊಂದು ಕಡೆಯಲ್ಲಿ ಕೆಂಪುತಾವರೆಗಳೂ, ಬೇರೊಂದು ಕಡೆಯಲ್ಲಿ ಬಿಳೀನೈದಿಲಗಳೂ ಈ ನದಿಯಮೇಲೆ ದಟ್ಟವಾಗಿ ಮುಚ್ಚಿಕೊಂಡು ಎಷ್ಟು ಮನೋಹರವಾಗಿರುವುದು ನೋಡು ಅಲ್ಲಲ್ಲಿ ನೂರಾರುಕೂಕ್ಕರೆಗಳೂ, ನವಿಲುಗಳೂ ಕ್ರೌಂಚಗಳೂ ಕಿವಿಗಿಂಪಾಗಿ ಕೂಗುತ್ತಿರುವುವು ವತ್ಸನೆ! ಇದೋ! ಇದರ ತೀರದಲ್ಲಿ, ಹಂಸಗಳಿಂದಲೂ, ಸಾರಸಪಕ್ಷಿಗಳಿಂದಲೂ ಶೋಭಿತಗಳಾಗಿ ಅತಿಮನೋಹರಗಳಾದ ಈ ಮಳಲು ದಿಣ್ಣೆಗಳನ್ನು ನೋಡಿದೆಯಾ? ಇವೆಲ್ಲವನ್ನೂ ನೋಡಿದರೆ, ಸರ್ವಾಂಗಸುಂದರಿಯಾಗಿ ಸಮಸ್ತಾಭರಣಗಳಿಂದಲಂಕೃತಳಾದ ಹೆಂಗಸೊಬ್ಬಳು ನಮ್ಮಮುಂದೆ ನಿಂತು ನಗುವಂತೆಯೇ ಕಾಣುತ್ತಿರುವುದು ಎಲೈ ಸೌಮ್ಯನೆ! ಅನೇಕಮಹರ್ಷಿಗಳಿಂದ ಸೇವಿತವಾದ ಈ ನದಿಯ ಡಡದಲ್ಲಿ ಒಂದಕ್ಕೊಂದಕ್ಕ ಜೋಡಿಸಿದಂತೆ ಸಾಲಾಗಿ ಬೆಳದಿರುವ ಚಂಡನವೃಕ್ಷಗಳನ್ನು ನೋಡು! ಇದೋ! ಇಲ್ಲಿ ಚಂಡನವೃಕ್ಷಗಳ ಸಾಲುಗಳೂಕೂಡ ಮನಸ್ಸಂಕಲ್ಪದಿಂದಲೇ ಉದ್ಭವಿಸಿದಂತೆ ಎಷ್ಟು ಮನೋಹರವಾಗಿರುವುವು ನೋಡು! ಆಹಾ! ಎಲೈ ಶತ್ರುಸೂದನನೆ! ಈ ಪ್ರದೇಶವೇನೋ ಬಹಳರಮಣೀಯವಾಗಿ ಇರುವುದು ಇದು ನಮ್ಮ ಮನಸ್ಸಿಗೂ ಬಹಳ ಹಿತಕರವಾಗಿರುವುದು ಇಲ್ಲಿಯೇ ನಾವುಮಾಡುವೆವು ಚಿತ್ರಚಿತ್ರಗಳಾದ ಕಾಡುಗಳುಳ್ಳ ಸುಗ್ರೀವನಗರಿಯಾದ ಕಿಷ್ಕಿಂಧೆಯೂ ಕೂಡ ಇಲ್ಲಿಗೆ ಬಹಳ ದೂರವಾಗಿಲ್ಲವೆಂದೇ ತೋರುವುದು ಆಪಟ್ಟಣದಲ್ಲಿ ಮೃದಂಗಧ್ವನಿಗಳೊಡನೆ ಉತ್ಸಾಹದಿಂದ ಕೂಗಿಡುತ್ತಿರುವ ಅನೇಕವಾನರರ ಘೋಷವೂ, ಅವರ ಗಾನಧ್ವನಿಗಳೂ, ವಾದ್ಯಧ್ವನಿಗಳೂ ಇಲ್ಲಿಗೇ ಕೇಳಿಸುತ್ತಿರುವುವಲ್ಲವೆ? ಕಪಿರಾಜನಾದ ಸುಗ್ರೀವನು ಕೈತಪ್ಪಿಹೋಗಿದ್ದ ತನ್ನ ರಾಜ್ಯವನ್ನೂ, ತನ್ನ ಪತ್ನಿಯನ್ನೂ ಪಡೆದು, ತನ್ನ ಮಿತ್ರರೊಡಗೂಡಿ, ಮಹಾಭಾಗ್ಯವನ್ನು ಹೊಂದಿ ಸಂತೋಷಿಸುತ್ತಿರುವುದಲ್ಲಿ ಸಂದೇಹವಿಲ್ಲ" ಎಂದು ಹೇಳಿ, ರಾಮನು ಆ ಲಕ್ಷ್ಮಣನೊಡಗೂಡಿ, ಅನೇಕವಸ್ತುಸಮೃದ್ಧಗಳಾದ ಗುಹೆಗಳಿಂದಲೂ, ಪೊದರು

ಗಳಿಂದಲೂ ಕೂಡಿದ ಆ ಪ್ರಸ್ರವಣಪರ್ವತದಲ್ಲಿಯೇ ವಾಸಮಾಡುತಿದ್ದನು ಹೀಗೆ ಅನೇಕವಸ್ತುಸಂಪೂರ್ಣವಾದ ಆ ಬೆಟ್ಟವು ವಿಶೇಷಸುಖಾಸ್ಪದವಾಗಿದ್ದರೂ, ಅಲ್ಲಿನ ವಾಸವು ರಾಮನಿಗೆ ಸ್ವಲ್ಪವಾದರೂ ಸಂತೋಷವನ್ನುಂಟುಮಾಡಲಿಲ್ಲ ಪ್ರಾಣಕ್ಕಿಂತಲೂ ಪ್ರಿಯಳಾದ ಸೀತೆಯ ಸ್ಮರಣೆಯಿಂದ ಆತನಿಗೆ ಮೇಲೆಮೇಲೆ ಸಂಕಟವೇ ಹೆಚ್ಚುತಿತ್ತು ಇದರಮೇಲೆ ಸಾಯಂಕಾಲಗಳಲ್ಲಿ ಉದಯಪರ್ವತದಮೇಲೆ ಚಂದ್ರೋದಯವಾಗುವುದನ್ನು ನೋಡಿದೊಡನೆ, ಅವನ ವಿರಹತಾಪವು ಮತ್ತಷ್ಟುಹೆಚ್ಚಿ, ಅವನಿಗೆ ಸಿದ್ರೆಯೇ ಹತ್ತುತ್ತಿರಲಿಲ್ಲ ಬೆಳಗಾಗುವವರೆಗೂ ಹಾಸಿಗೆಯಲ್ಲೆ ಹೊರಳುತಿದ್ದನು ಹೀಗೆ ಸೀತಾವಿರಹದುಃಖದಿಂದ ಕೊರಗುತ್ತ, ರಾಮನು ಅಹೋರಾತ್ರವೂ ಕಣ್ಣೀರು ಬಿಟ್ಟು ಸಂಕಟಪಡುವುದನ್ನುನೋಡಿ, ಅವನ ದುಃಖಕ್ಕೆ ಸಮಭಾಗಿಯಾದ ಲಕ್ಷ್ಮಣನು ಅಣ್ಣನನ್ನು ಸಮಾಧಾನಪಡಿಸುತ್ತ ಒಂದಾನೊಂದು ವಾಕ್ಯವನ್ನು ಹೇಳುವನು ''ಎಲೈವೀರನೆ! ಹೀಗೇಕ ಸಂಕಟಪಟ್ಟು ದುಃಖಿಸುವೆ? ಈ ಶೋಕವನ್ನು ಬಿಡು! ಧೀರನಾದ ನೀನೇ ಹೀಗೆ ದುಃಖಿಸುವುದು ಉತ್ಸಾಹವನ್ನು ಬಿಟ್ಟು ದುಃಖವಶರಾದವರಿಗೆ ಯಾವ ಪುರುಷಾರ್ಥಗಳೂ ಕೈಗೂಡಲಾರವು ನೀನೂ ಈವಿಚಾರಗಳನ್ನು ತಿಳಿಯದವನಲ್ಲ ಕಾರ್ಯಸಿದ್ಧಿಗೆ ಕಾರಣರಾದ ಪುರುಷಪ್ರಯತ್ನವೂ,ದೈವದಲ್ಲಿನಂಬಿಕೆಯೂ ನಿನಗೆ ಚೆನ್ನಾಗಿರುವುದು ಆಸ್ತಿಕತೆಯೂ, ಧರ್ಮತೀಲತೆಯೂ, ಕಾರ್ಯೋದ್ಯೋಗವೂ ನಿನ್ನಲ್ಲಿ ಪೂರ್ಣವಾಗಿ ತುಂಬಿರುವುವು ನೀನು ಹೀಗೆ ಧೈರ್ಯಗುಂದಿದ್ದರ ಎಂದಿಗೂ ನಿನ್ನ ಶತ್ರುವನ್ನು ನಿಗ್ರಹಿಸಲಾರೆ! ಆದರಲ್ಲಿಯೂ ಕಪಟಿಯಾದ ರಾಕ್ಷಸನನ್ನು ಯುದ್ಧದಲ್ಲಿ ನಿನ್ನ ಪರಾಕ್ರಮದಿಂದ ಕೊಲ್ಲಬೇಕೆಂದರೆ ಹೀಗೆ ಎಂದೆಗುಂದಿ ಉತ್ಸಾಹಹೀನನಾದ ನಿನಗೆ ಸಾಧ್ಯವೇಇಲ್ಲ ದುಃಖವನ್ನು ನಿಶ್ಶೇಷವಾಗಿ ಬಿಟ್ಟುಬಿಡು ನಿನ್ನ ವ್ಯವಸಾಯನವನ್ನುಮಾತ್ರ ಬಿಡದೆ ಸ್ಥಿರವಾಗಿ ಹಿಡಿ!ಆಗ ಆ ರಾಕ್ಷಸನನ್ನು ಅವನ ಪರಿವಾರಗಳೊಡನೆ ನಿರ್ಮೂಲಮಾಡಬಹುದು ಅಣ್ಣಾ! ಕಾಡುಗಳಿಂದಲೂ ಗುಡ್ಡಗಳಿಂದಲೂ, ಸಮುದ್ರಗಳಿಂದಲೂ ಕೂಡಿದ ಈ ಸಮಸ್ತಭೂಮಿಯನ್ನೂ ತಲೆಕಳಗಾಗಿ ಮಾಡಬಲ್ಲ ನಿನಗೆ ಆರಾವಣನನ್ನು ಕೊಲ್ಲುವುದೊಂದು ಸಾಧ್ಯವೆ? ಎಂದಿಗೂಇಲ್ಲ! ಉತ್ಸಾಹವನ್ನುಮಾತ್ರ ಬಿಡಬೇಡ! ಈಗ ಮಳೆಗಾಲವು ಬಂದುಬಿಟ್ಟಿತು ಶರತ್ಕಾಲದವರೆಗೆ ನಿರೀಕ್ಷಿಸು!ಆಮೇಲೆ ನೀನು ಆ

ರಾವಣನನ್ನೂ, ಅವನ ರಾಷ್ಟ್ರವನ್ನೂ, ಅವನ ಪರಿವಾರಗಳನ್ನೂ ಹುಟ್ಟು ಡಗಿಸಬಹುದು ಅಣ್ಣಾ 'ಈಗ ನಾನು ನಿನಗೆ ಉಪದೇಶಿಸುವೆನೆಂದು ತಿಳಿಯ ಬೇಡ' ಬೂದಿಯಲ್ಲಿ ಮುಚ್ಚಿ ಹೋದ ಬೆಂಕಿಯನ್ನು ಅಗ್ನ್ಯುದ್ದೀಪಕಗಳಾದ ಆಹುತಿಗಳಿಂದ ಉರಿಸುವಂತೆ, ಈಗ ಸೀತಾವಿರಹದುಃಖದಿಂದ ನಿದ್ರೆಮಾ ಡುತ್ತಿರುವ ನಿನ್ನ ವೀರ್ಯವನ್ನು ಎಚ್ಚರಗೊಳಿಸುತ್ತಿರುವೆನೇ ಹೊರತು ಬೇರೆ ಯಲ್ಲ" ಎಂದನು ಹೀಗೆ ಹಿತವಾಗಿಯೂ ಶ್ರೇಯಸ್ಕರವಾಗಿಯೂ ಇರುವ ಲಕ್ಷ್ಮಣನ ಮಾತನ್ನು ಕೇಳಿ, ರಾಮನು ಅದನ್ನಭಿನಂದಿಸುತ್ತ ಆತನನ್ನು ಕು ರಿತು ಸ್ನೇಹಪೂರ್ವಕವಾಗಿ 'ವತ್ಸನೆ' ನಿಜವಾದ ಅನುರಾಗವುಳ್ಳವನಾಗಿಯೂ ಪ್ರಿಯನಾಗಿಯೂ, ಹಿತನಾಗಿಯೂ, ಸತ್ಯಪರಾಕ್ರಮಗಳುಳ್ಳವನಾಗಿಯೂ ಇರುವ ಮಿತ್ರನು ಯಾವಮಾತುಗಳನ್ನಾಡಬೇಕೋ,ಅಂತಹ ಮಾತುಗಳನ್ನೇ ನೀನೂ ಆಡಿರುವೆ ಇದೋ' ಈಗಲೇ ನಾನು ನನ್ನ ಸಮಸ್ತ ಕಾರ್ಯಗಳಿಗೂ ಭಂಗವನ್ನುಂಟುಮಾಡುತ್ತಿರುವ ಈ ನನ್ನ ಶೋಕವನ್ನು ಬಿಟ್ಟುಬಿಟ್ಟೆನು ಇನ್ನು ನಾನು ಎಂತಹ ಪರಾಕ್ರಮಕಾರ್ಯಗಳಲ್ಲಿಯೂ ನಿರಂಕುಶವಾಗಿ ಪ್ರವರ್ತಿಸ ತಕ್ಕ ನನ್ನ ವೀರ್ಯವನ್ನೆ ಪ್ರೋತ್ಸಾಹಿಸುವೆನು ಮುಂದಿನ ಶರತ್ಕಾಲವನ್ನೇ ಇದಿರು ನೋಡುತ್ತಿರುವೆನು ಎಲೆವತ್ಸನೆ!ನೀನು ಹೇಳಿದಂತೆಯೇ ನಡೆಸುವೆನು ಸುಗ್ರೀವನ ಅನುಗ್ರಹವನ್ನೂ ನದಿಗಳ 'ಪ್ರಸನ್ನತೆಯನ್ನೂ ನಿರೀಕ್ಷಿಸುತ್ತಿರು ವೆನು ಲೋಕದಲ್ಲಿ ಕೃತಜ್ಞನಾದ ವೀರನು, ತಾನು ಇತರರಿಂದ ಪಡೆದ ಉ ಪಕಾರಕ್ಕೆ ಪ್ರತ್ಯುಪಕಾರವನ್ನು ಮಾಡದಿರಲಾರನು ಕೃತಜ್ಞತೆಯಿಲ್ಲದವ ನಾದರೋ ತಾನು ಹೊಂದಿದ ಉಪಕಾರವನ್ನು ಸ್ಮರಿಸದೆ, ಪ್ರತ್ಯುಪಕಾರ ವನ್ನೂ --ಾಡದೆ ಮಹಾತ್ಮರ ಮನಸ್ಸನ್ನು ನೋಯಿಸುವನು" ಎಂದನು ಇದನ್ನು ಕೇಳಿ ಲಕ್ಷ್ಮಣನು,ರಾಮನ ಮಾತನ್ನು ಮನ್ನಿಸಿ, ಆತನಿಗೆ ವಿನಯದಿಂ ದ ಕೈಮುಗಿದುನಿಂತು. ಮುಂದಿನಕಾರ್ಯವನ್ನು ಮನಸ್ಸಿನಲ್ಲಿ ಚಿಂತಿಸುತ್ತ ಆ ರಾಮನನ್ನು ಕುರಿತು, 'ಅಣ್ಣಾ' ನೀನು ಹೇಳಿದುದು ನಿಜವು ಸುಗ್ರೀವ ನು ನಿನ್ನ ಕೋರಿಕೆಯನ್ನು ಶೀಘ್ರದಲ್ಲಿಯೇ ಕೈಗೂಡಿಸುವನು ಈಮಳೆಗಾಲ ವು ಮುಗಿದು ಶರತ್ಕಾಲವು ಬರುವವರೆಗೂ ಸಹಿಸಿಕೊಂಡಿರು ನಿನ್ನ ಶತ್ರುವ ನ್ನು ನಿಗ್ರಹಿಸುವವಿಷಯದಲ್ಲಿ ಎದೆಗುಂದದೆ ಉತ್ಸಾಹಯುಕ್ತನಾಗಿರು' ಅ

ದುವರೆಗೆ ನಿನಗೆ ಆಗಾಗ ಶತ್ರುವಿನಮೇಲೆ ಬರತಕ್ಕ ಕೋಪವನ್ನೂ ತಡೆದು ಕೊಂಡು, ಮುಂದಿನ ಶರತ್ಕಾಲವನ್ನು ನಿರೀಕ್ಷಿಸುತ್ತ ಈ ನಾಲ್ಕುತಿಂಗಳು ಗಳನ್ನೂ ಕಳೆದುಬಿಡು! ಶತ್ರುವಧ ವಿಷಯದಲ್ಲಿಮಾತ್ರ ಮೇಲಮೇಲೆ ಉ ತ್ಸಾಹವನ್ನೇ ತಂದುಕೊಳ್ಳುತ್ತ, ಅನೇಕ ಸಿಂಹಗಳಿಗೆಡೆಯಾದ ಈಬೆಟ್ಟದಲ್ಲಿ ಯೇ ವಾಸಮಾಡುತ್ತಿರು ನಾನೂ ಸಮಸ್ತವಿಷಯಗಳಲ್ಲಿಯೂ ನಿನಗೆ ಸ ಹಾಯಕ ನಾಗಿರುವೆನು" ಎಂದನು ಇಲ್ಲಿಗೆ ಇಪ್ಪತ್ತೇಳನೆಯ ಸರ್ಗವು

---

* ರಾಮನು ಲಕ್ಷ್ಮಣನಿಗೆ ಮಳೆಗಾಲವನ್ನು ವರ್ಣಿಸಿ ಹೇಳಿದುದು

ಹೀಗೆ ರಾಮನು ವಾಲಿಯನ್ನುಕೊಂದು, ಸುಗ್ರೀವನಿಗೆ ವಾನರರಾಜ್ಯ ದಲ್ಲಿ ಪಟ್ಟಾಭಿಷೇಕವನ್ನೂ ಮಾಡಿಸಿ,ಸೌಲ್ಯವಂತವೆನಿಸುವ ಆ ಪ್ರಸ್ರವಣ ಪರ್ವತದಲ್ಲಿ ವಾಸಮಾಡುತ್ತಿರುವಾಗ, ಲಕ್ಷ್ಮಣನನ್ನು ನೋಡಿ "ಎಲ ವತ್ಸ ನೆ! ನಾವು ಸುಗ್ರೀವನೊಡನೆ ಸಂಕೇತಮಾಡಿಕೊಂಡು ಬಂದಿರುವ ಮಳೆ ಗಾಲವು ನಡೆಯುತ್ತಿರುವುದು ನೋಡು ಆಕಾಶದಲ್ಲಿ ಪರ್ವತಾಕಾರಗಳಾದ ಮೇಘಗಳು ಸುತ್ತಲೂ ನೆರೆದಿರುವುವು ಇದೋ! † ಆಕಾಶವೆಂಬ ಸ್ತ್ರೀಯು ಸೂರ್ಯಕಿರಣಗಳ ಸಂಬಂಧದಿಂದ, ಸಮುದ್ರಜಲವನ್ನೊಳಕೊಂಡು, ಕಾರ್ತಿ ಕದಿಂದ ಆಷಾಢದವರೆಗೆ ನ,ಒಂಬತ್ತು ತಿಂಗಳವರೆಗೂ ಗರ್ಭವನ್ನು ಧರಿಸಿ ಈ ಗ ಸಮಸ್ತರಸಗಳಿಗೂ ಮೂಲವಾದ ಜಲವನ್ನು ಪ್ರಸವಿಸುತ್ತಿರುವುದು ಮೇಲೆ ಕಾಣುವ ಮೇಘಗಳ ಪದರಗಳನ್ನು ನೋಡಿದಿಯಾ? ನಾವು ಈ ಮೇಘಗಳೆಂಬ ಸೋಪಾನವಲ್ಕೆಗಳಿಂದಲೇ ಆಕಾಶವನ್ನೇರಿ, ಈಗ ಸಮೃ ದ್ಧವಾಗಿ ಸಿಕ್ಕುವ ಗಿರಿಮಲ್ಲಿಕೆಗಳ ಮತ್ತು ಸರಳಪುಷ್ಪಗಳ ಮಾಲಿಕೆಯಿಂ

---

* ಇಲ್ಲಿ ರಾಮನು ವರ್ಷಾಕಾಲವರ್ಣನವ್ಯಾಜದಿಂದ ತನ್ನ ಆಕಿತರ ವಿರಹವ ನ್ನು ತಾನು ಸಹಿಸಲಾರದುದನ್ನು ಅನ್ಯಾಪದೇಶದಿಂದ ತಿಳಿಸುವುದಾಗಿ ಗ್ರಾಹ್ಯವು

† ಇಲ್ಲಿ "ಯಾಭಿರಾದಿತ್ಯಸ್ತಪತಿ ರಶ್ಮಿಭಿಸ್ತಾಭಿಃ ಪರ್ಜನ್ಯೋ ವರ್ಷತಿ" ಎಂಬ ಶ್ರುತಿಯು ಸೂಚಿತವಾಗುವುದು

ದ * ಸೂರ್ಯನನ್ನರ್ಚಿಸಿ ಬರಬಹುದೆಂದು ತೋರುವುದು ಇದೋ ಆಕಾಶದ ಲ್ಲಿ ಸಣ್ಣಮೇಘಗಳು, ನಡುವೆ ಸಂಧ್ಯಾರಾಗದಿಂದ ಕೆಂಪಾಗಿಯೂ, ಸು ತ್ತಲೂ ಬಿಳುಪಾಗಿಯೂ, ಜಲದಿಂದ ಆರ್ದ್ರವಾಗಿಯೂ ಇರುವುದರಿಂದ, ಬೇಸಗೆಯ ಕಾವಿನಿಂದಾದ ಇದರ ಹುಣ್ಣುಗಳಿಗೆ ಅಲ್ಲಲ್ಲಿ ಕಟ್ಟುಕಟ್ಟಿದಂತೆ ಕಾಣುತ್ತಿರುವುದುನೋಡು ಈ ಆಕಾಶವು ಮಂದಮಾರುತಗಳೆಂಬ ನಿಟ್ಟುಸಿರನ್ನು ಬಿಡುತ್ತ, ಶೈತ್ಯೋಪಚಾರಾರ್ಥವಾದ ಚಂದನಾನುಲೇಪನಗಳಂತಿರುವ ಸಂಧ್ಯಾರಾಗಗಳಿಂದ ಕೂಡಿ, ವಿರಹತಾಪದಿಂದ ಬಿಳುಪೇರಿದಂತೆ ಬಿಳೀ ಮೇಘಗಳೂಡಗೂಡಿರುವುದು ನೋಡಿದೆಯಾ? ಈ ಆಕಾಶವೂಕೂಡ ನನ್ನಂತೆ ತನ್ನ ಪತ್ನಿಯವಿರಹದಿಂದ ಪೀಡಿತವಾದಂತೆಯೇ ಕಾಣುವುದು ಇದುವರೆಗೂ ಭೂಮಿಯು ಬೇಸಗೆಯ ಬಿಸಿಲಿನಿಂದಕಾದು ಈಗಲೇ ಹೊಸನೀರುಬಿದ್ದು ನೆನೆಯುತ್ತಿರುವುದರಿಂದ,ಅಲ್ಲಲ್ಲಿ ಹೊಗೆಯು ಹೊರಡುತ್ತಿರುವುದನ್ನು ನೋಡು ವಿರಹತಾಪದಿಂದ ಕಂದಿದ ನಮ್ಮ ಸೀತೆಯು ಆಗಾಗ ಬಾಷ್ಪವನ್ನು (ಕಣ್ಣೀರನ್ನು) ಬಿಡುವಂತೆ ಇದೂ ಬಾಷ್ಪವನ್ನುಬಿಡುತ್ತಿರುವುದು ಆಶ್ಚರ್ಯವಲ್ಲವೆ? ಮೇಘಗಳ ಗುಂಪಿನಿಂದ ಮಲ್ಲಗೆ ನುಗ್ಗಿಬಂದು, ಸೌಂಗಂಧಿಕದಂತೆ ಸುಖಶೀತಲವಾಗಿ, ತಾಳೆಹೂಗಳ ಸುವಾಸನೆಯಿಂದಕೂಡಿ, ದಟ್ಟವಾಗಿ ಬೀಸುವ ಈಗಿನಗಾಳಿಯನ್ನು ನೋಡಿದೆಯಾ? ಇದನ್ನು ನಾವು ಬೊಗಸೆಯಲ್ಲಿ ತುಂಬಿ ಕುಡಿದು ಬಿಡಬಹುದೆಂದೇ ತೋರುತ್ತಿರುವುದು ಅರ್ಜುನ ವೃಕ್ಷಗಳ ಅರಳುಗಳಿಂದಲೂ, ತಾಳೆಹೂಗಳ ಸುವಾಸನೆಯಿಂದಲೂ ಕೂಡಿದ ಈ ಪರ್ವತದಮೇಲೆ, ಎಡೆಬಿಡದೆ ವರ್ಷಧಾರೆಯು ಬಿಳುತ್ತಿರುವುದನ್ನು ನೋಡಿದಿರೆ, ವೈರಿಯನ್ನಡಗಿಸಿ, ಪುಷ್ಪಚಂದನಾದಿಗಳಿಂದಲಂಕೃತನಾದ ಸುಗ್ರೀವನು, ವಾನರರಿಂದಭಿಷಿಕ್ತನಾದ ರೀತಿಯನ್ನು ಕಾಣಿಸುತ್ತಿರುವುದು ಇಲ್ಲಿನ ಪರ್ವತಶಿಖರಗಳೆಲ್ಲವೂ ಮೇಘಗಳೆಂಬ ಕೃಷ್ಣಾಜಿನಗಳನ್ನುಟ್ಟು, ಜಲಧಾರೆಗಳೆಂಬ ಯಜ್ಞೋಪವೀತಗಳನ್ನು ಧರಿಸಿ, ಅಲ್ಲಲ್ಲಿನ ಗುಹೆಗಳಲ್ಲಿ ತುಂಬಿ ಬರುವ ಗಾಳಿಯ ಧ್ವನಿಯಿಂದ ವೇದಾಧ್ಯಯನವನ್ನು ಪಕ್ರಮಿಸಿದಂತೆ ತೋರುತ್ತಿರುವುವು ನೋಡು ಈಗಿನ ಗಗನಪ್ರದೇಶವು ನಮ್ಮಂ

* ಇಲ್ಲಿ ಸೂರ್ಯಶಬ್ದದಿಂದ ಸೂರ್ಯಬಿಂಬಮಧ್ಯಗತನಾಗಿ ಸದಾಧ್ಯೇಯನಾದ ನಾರಾಯಣನೆಂದು ತತ್ವಾರ್ಥವು

ತಹ ವಿರಹಿಗಳನ್ನು ಸಂಕಟಪಡಿಸುತ್ತಿರುವುದನ್ನು ನೋಡಿ,ಅದನ್ನು ದೇವೇಂ
ದ್ರನು ಚಿನ್ನದಚಾಟಿಗಳಿಂದ ಹೊಡೆಯುವಂತೆ ಆಗಾಗ ಮಿಂಚುಗಳು ಹೊ
ರಡುವುದನ್ನು ನೋಡಿದೆಯಾ ಈ ಮಿಂಚುಗಳು ಕಾಣಿಸಿದೊಡನೆಯೇ ಆ ಕ
ಶಾಘಾತದ ವೇದನೆಗಾಗಿ ಆಕಾಶವು ಕೂಗಿಡುವಂತೆ ಭಯಂಕರವಾದ ಗು
ಡುಗುಗಳೂ ಕೇಳಿಸುತ್ತಿರುವುವು. ಕಾರ್ಮೇಘಗಳ ನಡುವೆ ಥಳಥಳಿಸಿ ಬರುವ
ಈ ಮಿಂಚಿನ ಕಾಂತಿಯು ರಾವಣನ ತೊಡೆಯಲ್ಲಿಸಿಕ್ಕಿ ಸಂಕಟಪಡುತ್ತಿರುವ
ಸೀತೆಯ ಸ್ಥಿತಿಯನ್ನು ಜ್ಞಾಪಿಸುತ್ತಿರುವುದು ಮೇಘಗಳನ್ನು ಲೇಪಿಸಿ
ದಂತೆ ಚಂದ್ರಾದಿಗಳೆಲ್ಲವನ್ನೂ ಮರಸಿ, ಸುತ್ತಲೂ ಕತ್ತಲೆ ಕವಿದಂತಿರು
ವ ಈ ದಿಗ್ಭಾಗಗಳನ್ನು ನೋಡಿದೆಯಾ? ಇವು ಈಗ ತಮ್ಮತಮ್ಮ ಪತ್ನಿಯ
ರೊಡಗೂಡಿ ಕಾಮೋಪಭೋಗವನ್ನನುಭವಿಸುವವರಿಗೆ ಮಾತ್ರವೇ ಹಿತಕ
ರಗಳಾಗಿರುವುವೇ ಹೊರತು ನಮ್ಮಂತವರಿಗೆ ದುಃಖವನ್ನೇ ಹೆಚ್ಚಿಸುವುವು
ಈ ಕಡೆಯಲ್ಲಿ ಬಟ್ಟಬದ ತಪ್ಪಲಲ್ಲಿರುವ ಗಿರಿಮಲ್ಲಿಕೆಗಳು, ಮಳೆಬಿದ್ದುದರಿಂದ
ಉಲ್ಲಾಸಹೊಂದಿ, ಪುಷ್ಪಿತಗಳಾಗಿ, ಭೂಮಿಯಿಂದೇಳುವ ಹೊಗೆಯನಡುವೆ
ನಾಯಿಕಾಸಮಾಗಮದಿಂದ ಆನಂದಬಾಷ್ಪವುಳ್ಳವರಾಗಿ ನಗುತ್ತಿರುವ
ಕಾಮುಕರಂತೆ ಕಾಣುವುವು ನೋಡು ಇದನ್ನು ನೋಡಿದಷ್ಟೂ ನನಗೆ ಕಾ
ಮವು ಉತ್ತೇಜನಹೊಂದುತ್ತಿರುವುದು ಎಲೆ ವತ್ಸನೆ! *ಈಗ ನೆಲದ ಧೂಳಿ
ಯೆಲ್ಲವೂ ಶಾಂತವಾಗಿ ಆಕಾಶವು ನಿರ್ಮಲವಾಗಿರುವುದು ಗಾಳಿಯು ಮಂಜಿ
ನೊಡಗೂಡಿ ಬೀಸುತ್ತಿರುವುದು ಬೇಸಗೆಯಿಂದುಂಟಾದ ತಾಪವೇ

---

* ಇಲ್ಲಿ "ರಜ ಪ್ರಶಾಂತಂಸಹಿಮೋದ್ಗಮಾಯು ನಿಪಾಘದೋಷಪ್ರಸರಾಃಪ್ರಶಾಂ
ತಾಃ।ಸ್ಥಿತಾಹಿಯಾತ್ರಾನಸುಧಾಘಿಘಾನಾಂ ಪ್ರಯಾನಿನೋಯಾಂತಿನರಾಸ್ಸ ದೇಶಾಃ॥'
ಎಂದುಮೂಲವು ಇದು ಮೊದಲಾಗಿ ಭಗವತ್ಕಟಾಕ್ಷ ಸ್ವರೂಪವೇ ಅನ್ಯಾಪದೇಶವಾಗಿ
ಸೂಚಿಸಲ್ಪಡುವುದು ಇಲ್ಲಿ ರಜಶ್ಶಾಂತಿಯಿಂದ ರಜೋಗುಣಶಾಂತಿಯೂ, ವಾಯುಶ
ಬ್ದಪ್ರಯೋಗದಿಂದ ವಾಯುವಿನಂತೆ ಎಡೆಬಿಡದೆ ವರ್ತಿಸುವ ಸಂಸಾರಸಂಬಂಧವ್ಯಕ್ತಿ
ಜನರಸ್ಥಿತಿಯೂ ಹಿಮಮಿಶ್ರತೆಯೆನ್ನು ಹೇಳಿರುವುದರಿಂದ ಅವರ ಶೀತಲಹೃದಯತ್ವ
ವೂ, ನಿಪಾಘಾದಿ ದೋಷಶಾಂತಿಗಳಿಂದ, ಆಧ್ಯಾತ್ಮಿಕಾದಿ ತಾಪತ್ರಯಶಾಂತಿಯೂ,
ಜೈತ್ರಯಾತ್ರೆಯು ನಿಂತಿರುವುದಾಗಿ ಹೇಳಿದುದರಿಂದ ಸಂಸಾರಗತಿಯು ಬಿಟ್ಟುಹೋ
ಗುವುದೂ, ಸ್ವದೇಶಪ್ರಾಪ್ತಿಯೆನ್ನು ಹೇಳಿರುವುದರಿಂದ ತನಗೆ ಪ್ರಾಪ್ಯಭೂತವಾದ ಪ
ರಮಪದಪ್ರಾಪ್ತಿಯೂ ಸೂಚಿತವು

ಮೊದಲಾದ ದೋಷಗಳೆಲ್ಲವೂ ತಗ್ಗಿಹೋಗುವು ರಾಜರ ದಂಡಯಾತ್ರೆಗಳು ತತ್ಕಾಲಕ್ಕೆ ನಿಲ್ಲಿಸಲ್ಪಟ್ಟಿರುವುವು ದೇಶಾಂತರಕ್ಕೆ ಹೋದವರೆಲ್ಲರೂ ತಮ್ಮ ತಮ್ಮ ನಿವಾಸಗಳನ್ನು ಸೇರುತ್ತಿರುವರು * ಈಗ ಹಂಸಗಳೆಲ್ಲವೂ ಅತ್ಯಾತುರದಿಂದ ವಾಸಾರ್ಥವಾಗಿ ಮಾನಸಸರಸ್ಸಿಗೆ ಹೊರಡುತ್ತಿರುವುವು ಚಕ್ರವಾಕದಂಪತಿಗಳು ಕಾಮೋದ್ರೇಕದಿಂದ ಒಂದನ್ನೊಂದು ಗಲದಿರುವುವು ಮಳೆಯ ನೀರಿನಿಂದ ಸಾರ್ಗವೆಲ್ಲವೂ ಕೆಟ್ಟು, ರಥಾದಿವಾಹನಗಳ ಸಂಚಾರವೇ ನಿಂತುಹೋಗಿರುವುದು ಆಕಾಶದಲ್ಲಿ ಮೋಡಗಳು ಅಲ್ಲಲ್ಲಿ ಬೇರೆಬೇರೆಯಾಗಿ ಕೂಡಿರುವುದರಿಂದ, ಕಲವುಕಡೆಯಲ್ಲಿ † ಪ್ರಕಾಶವಾಗಿಯೂ ಮತ್ತೆ ಕೆಲವುಕಡೆಗಳಲ್ಲಿ ಕತ್ತಲಾಗಿಯೂ ಇರುವುದು ಮತ್ತು ಈಗ ವನಪ್ರದೇಶವು ಒಂದೊಂದುಕಡೆಯಲ್ಲಿ ಪರ್ವತಗಳಿಂದ ಮರೆಸಲ್ಪಟ್ಟು ಅಲೆಯಿಲ್ಲದೆ ಶಾಂತವಾಗಿರುವ ಮಹಾಸಮುದ್ರದಂತಿರುವುದು ಇದೋ ಇತ್ತಲಾಗಿ ಬೆಟ್ಟದಿಂದ ಬಿಳುವ ನದಿಗಳ ನೀರನ್ನು ನೋಡಿದೆಯಾ? ‡ ಈನದಿಗಳು ಬೆಟ್ಟದ ಮೇಲಿನ ಗೈರಿಕಾದಿಧಾತುಗಳ ಬಣ್ಣದಿಂದ ಕೆಂಪಾಗಿ, ಅಲ್ಲಲ್ಲಿ ಉದಿರಿ ಬೀಳುವ ಸರ್ಜಪುಷ್ಪಗಳಿಂದಲೂ, ಕದಂಬಪುಷ್ಪಗಳಿಂದಲೂ

---

* ಇಲ್ಲಿ ಹಂಸಗಳಿಗೆ ಮಾನಸವಾಸಾಭಿಕಾಂಕ್ಷೆಯನ್ನು ಹೇಳಿರುವುದರಿಂದ, ಪರಮಹಂಸರೆನಿಸಿದ ಸನ್ಯಾಸಿಗಳು ಚಾತುರ್ಮಾಸ್ಯವನ್ನು ಹಿಡಿದು ಸಂಚಾರರಹಿತರಾಗಿರುವರೆಂದು ಸೂಚಿತವು ಮತ್ತು ಚಕ್ರವಾಕಗಳು ತಮ್ಮ ಪ್ರಿಯೆಯರೊಡಗೂಡಿರುವುದಾಗಿ ಹೇಳಿದುದರಿಂದ, ಭಗವದ್ಭಕ್ತಿಯುಕ್ತರಾದ ಯೋಗಿಹೃದಯಗಳು ಸೂಚಿತವು ವರ್ಷಧಾರೆಯಿಂದ ಯಾನಗಳು ನಿಂತುದಾಗಿ ಹೇಳಲ್ಪಟ್ಟಿರುವುದರಿಂದ ಭಗವತ್ಕಟಾಕ್ಷವರ್ಷದಿಂದಾಗುವ ಕರ್ಮನಿವೃತ್ತಿಯು ಸೂಚಿತವಾಗಿದೆ

† ಇಲ್ಲಿ ಆಕಾಶದ ಪ್ರಕಾಶಾಪ್ರಕಾಶಗಳನ್ನು ಹೇಳಿರುವುದರಿಂದ, ಮಂದಾಜ್ಞಾನದಿಂದ ಬ್ರಹ್ಮವು ರೂಪವು ಕಂಡೂ ಕಾಣದಂತಿರುವುದೆಂದು ಸೂಚಿತವು

‡ ಇಲ್ಲಿ ಪುಷ್ಪಗಳ ಬಿಳುಪಿನಿಂದಲೂ, ಧಾತುಗಳ ಕೆಂಪಿನಿಂದಲೂ ಮಿಶ್ರವಾಗಿ ಹರಿಯುವ ನದಿಗಳ ವೇಗವನ್ನೂ, ಅವುಗಳ ಸುತ್ತಲೂ ನವಿಲುಗಳ ಕೇಕಾಧ್ವನಿಯನ್ನೂ ಹೇಳಿರುವುದರಿಂದ, ಸಾತ್ವಿಕ ರಾಜಸಜ್ಞಾನಮಿಶ್ರವಾಗಿ, ಭಗವದ್ವಿಷಯಾನುರಾಗದಿಂದ ಕೂಡಿರುವ ಭಕ್ತರು, ತಮ್ಮ ಸುತ್ತಲೂ ನಿಂತು ಭಕ್ತಿಪ್ರೇರಿತರಾಗಿ ಭಗವಂತನನ್ನು ಸ್ತುತಿಸುವ ಇತರಭಕ್ತರ ಸ್ತುತಿರವವನ್ನು ಕೇಳಿ ಉತ್ಸಾಹದಿಂದುಬ್ಬುವರೆಂದು ಸೂಚಿತವು.

ಬಿಳುಪಾಗಿ, ಹೊಸನೀರಿನೊಡನೆ ಕಲೆತು, ಎಷ್ಟುವೇಗವಾಗಿ ಹರಿಯುತ್ತಿರುವುದು ನೋಡು. ಇವುಗಳ ಪ್ರವಾಹಘೋಷವು, ಅಲ್ಲಲ್ಲಿ ಕೂಗುತ್ತಿರುವ ನವಿಲುಗಳ ಕೇಕಾಧ್ವನಿಯೊಡನೆ ಕಲೆತಿರುವುದು *ದುಂಬಿಯಂತೆ ಕಪ್ಪಾಗಿ ರಸಮಿಶ್ರವಾಗಿ ಬಿಳುತ್ತಿರುವ ಈ ನೇರಳೆಯ ಹಣ್ಣುಗಳನ್ನು ಈಗ ಜನಗಳು ಯಥೇಚ್ಛವಾಗಿಭುಜಿಸುತ್ತಿರುವರು,ಇದೋಇತ್ತಲಾಗಿ ಚೆನ್ನಾಗಿ ಮಾಗಿ, ಗಾಳಿಯಿಂದುದುರಿ ನೆಲದಮೇಲ ಬಿದ್ದಿರುವ ಬಗೆಬಗೆಯ ಬಣ್ಣಗಳುಳ್ಳ ಮಾವಿನ ಹಣ್ಣುಗಳನ್ನು ನೋಡಿದೆಯಾ! ಮಿಂಚುಗಳಿಂದಲೂ,ಹಂಸಗಳಿಂದಲೂ, ಶೋಭಿತಗಳಾಗಿ ಬೆಟ್ಟದ ಶಿಖರಗಳಂತಿರುವ ಈ ಮೇಘುಗಳು, ಧ್ವಜಗಳಿಂದಲೂ ನಕ್ಷತ್ರಮಾಲಿಕೆಗಳಿಂದಲೂ ಅಲಂಕೃತಗಳಾಗಿ,ಯುದ್ಧಕ್ಕೆ ನಿಂತಿರುವ † ಮದದಾನೆಗಳಂತೆ ಉಚ್ಚಧ್ವನಿಯಿಂದ ಗರ್ಜಿಸುತ್ತಿರುವುವು ಎಲೆ ವತ್ಸನೆ! ಈ ಅರಣ್ಯಪ್ರದೇಶಗಳನ್ನು ನೋಡು ಇಲ್ಲಿನ ತೃಣಭೂಮಿಗಳೆಲ್ಲವೂ ಮಳೆಯಿಂದ ಚಿಗುರಿರುವುವು ಅಲ್ಲಲ್ಲಿ ನವಿಲುಗಳು ಸಂತೋಷದಿಂದ ನರ್ತಿಸುತ್ತಿರುವುವು. ಇದರ ಸುತ್ತಲೂ ಮೇಘುಗಳು ವರ್ಷಧಾರೆಯನ್ನು ಕರೆಯುತ್ತಿರುವುವು ಸಾಯಂಕಾಲಗಳಲ್ಲಿ ಇವುಗಳ ಶೋಭಾತಿಶಯವು ವಿಶೇಷಮನೋಹರವಾಗಿರುವುದು ‡ಬಹಳವಾದ ನೀರಿನ ಭಾರವನ್ನು ಹೊತ್ತು ಗರ್ಜಿಸುತ್ತಿರುವ ಈ ಮೇಘುಗಳು, ಆ ಜಲಗರ್ಭಭಾರದಿಂದ ಬೇಗನೆ ನಡೆಯಲಾರದೆ,ಅಲ್ಲಲ್ಲಿನ ಶಿಖರಗಳಲ್ಲಿ ವಿಶ್ರಮಾರ್ಥವಾಗಿ ನಿಂತುನಿಂತು ನಡೆಯುತ್ತಿರುವುದನ್ನು ನೋಡು

---

* ಇದರಿಂದ ಜೀವರಿಗೆ ಭಗವತ್ಕೃಪೆಯಿಂದನುಭವಿಸಬಹುದಾದ ಫಲಸನ್ಯೆದ್ಧಿಯು ಸೂಚಿತವು

† ಇದರಿಂದ ವೇದಮಾರ್ಗಪ್ರತಿಷ್ಠೆಗಾಗಿ ಪಾದನೂಡುವ ಅಸ್ತಿಕರು ಸೂಚಿತರಾಗುವರು.

‡ ಇಲ್ಲಿ ಮೇಘುಗಳು ಜಲಭಾರವನ್ನುಹೊತ್ತು ಕೊಕ್ಕರೆಗಳ ಸಮೂಹದಿಂದ ಕೂಡಿ ಗರ್ಜಿಸುತ್ತ,ಪರ್ವತದ ಬಂದೊಂದು ಶಿಖರವನ್ನೂ ದಾಟಿ ಹೋಗುವುವೆಂಬುದರಿಂದ, ''ಹೃದಯೇನೋದ್ವಹ್ಯಹರಿಂ'' ಎಂಬಂತೆ ಭಗವದ್ಧ್ಯಾನಪರರಾಗಿ,ವಿಶದವಾದ ಜ್ಞಾನವನ್ನುಹೊಂದಿ, ಯಾವಾಗಲೂ ಸ್ತುತಿಶೀಲರಾಗಿ, ಪೂರ್ವಾಘೋತ್ತರಾಘಗಳ ಕ್ಲೇಶವೆಲ್ಲವನ್ನೂ ಕ್ರಮವಾಗಿ ದಾಟಿ, ಪರಾಕಾಷ್ಠೆಯನ್ನು ಹೊಂದುವವರು ಸೂಚಿಸಲ್ಪಡುವರು.

ಮೇಘಗಳಲ್ಲಿ ಮೋಹಗೊಂಡು, ಮೇಲೇಳುತ್ತಿರುವ*ಈ ಕೊಕ್ಕರೆಗಳ ಸಾಲನ್ನು ನೋಡಿದೆಯಾ? ಆಕಾಶದ ಅಲಂಕಾರಾರ್ಥವಾಗಿ ರಚಿಸಲ್ಪಟ್ಟ ಬಿಳೀ ಕಮಲದಮಾಲಿಕೆಯು ಗಾಳಿಯಿಂದಾಡುತ್ತಿರುವಂತೆ ತೋರುವುದು ಈ ಹಸುರುಹುಲ್ಲಿನಮೇಲೆ, ನಡುನಡುವೆ ಇಂದ್ರಕೋಪಗಳೆಂಬ ಮಳೆಯ ಹುಳುಗಳು ಬಿದ್ದಿರುವುದರಿಂದ ಚಿತ್ರಿತವಾದ ಹಸುರುಬಟ್ಟೆಯನ್ನುಟ್ಟಿರುವ ಸ್ತ್ರೀಯಂತೆ ಕಾಣುತ್ತಿರುವುದು ನೋಡು ! ಯೋಗನಿದ್ರೆಯು ಶ್ರೀಮಹಾವಿಷ್ಣುವನ್ನೂ, ನದಿಯು ಸಮುದ್ರವನ್ನೂ, ಬಲಾಕಪಙ್ಕ್ತಿಗಳು ಆಕಾಶದಲ್ಲಿರುವ ಮೇಘವನ್ನೂ, ಕಾಮವುಳ್ಳ ಸ್ತ್ರೀಯರು ತಮ್ಮತಮ್ಮ ನಾಯಕರನ್ನೂ ಸೇರುವ ಕಾಲವೇ ಇದು ಈಗಲೇ ವನಪ್ರದೇಶಗಳೆಲ್ಲವೂ ನವಿಲುಗಳ ನರ್ತನದಿಂದ ಶೋಭಿಸುವುವು ಕದಂಬವೃಕ್ಷಗಳು ಪುಷ್ಪಸಮೃದ್ಧಿಯನ್ನು ಹೊಂದಿರುವುವು ಈಗ ವೃಷಭಗಳು ಗೋವುಗಳಲ್ಲಿ ಸಮಾನವಾದ ಕಾಮವುಳ್ಳವುಗಳಾಗಿರುವುವು ಈಗ ಭೂಮಿಯು ಅನೇಕ ಸಸ್ಯಗಳಿಂದ ಮನೋಹರವಾಗಿ ಕಾಣುತ್ತಿರುವುದು ಈ ಕಾಲದಲ್ಲಿ ನದಿಗಳೆಲ್ಲವೂ ತುಂಬಿ ತುಳುಕುತ್ತಿರುವುವು ಮೇಘಗಳು ಯಥೇಚ್ಛವಾಗಿ ವರ್ಷಿಸುವುವು ಮದದಾನೆಗಳು ಸಂತೋಷದಿಂದ ಗರ್ಜಿಸುವುವು ವನಭೂಮಿಗಳೆಲ್ಲವೂ ಕಾಂತಿವಿಶಿಷ್ಟವಾಗಿರುವುವು ವಿರಹಿಗಳು ಅನವರತವೂ ತಮ್ಮತಮ್ಮ ಪ್ರಿಯರನ್ನೇ ಧ್ಯಾನಿಸುತ್ತಿರುವರು ನವಿಲುಗಳು ಅತ್ಯಾನಂದದಿಂದ ನರ್ತಿಸುತ್ತಿರುವುವು ಈ ಕಾಲದಲ್ಲಿ ಕಪಿಗಳಿಗೆ ಇದ್ದ ಕಡೆಯಲ್ಲೆಯೇ ಸಮೃದ್ಧವಾದ ಆಹಾರವು ಸಿಕ್ಕುವುದರಿಂದ ಅವು ನೆಮ್ಮದಿಯಿಂದಿರುವುವು ಅಲ್ಲಲ್ಲಿ ಕಾಡಾನೆಗಳು ತಾಳೆಯ ಹೂವಿನ ಸುವಾಸನೆಯಿಂದ ಹರ್ಷಿತಗಳಾಗಿ, ಗಿರಿನದಿಗಳ ಪ್ರವಾಹವೇಗದಿಂದುಂಟಾದ ಶಬ್ದವನ್ನು ಕೇಳಿ ರೇಗುತ್ತ, ಅಲ್ಲಲ್ಲಿ ಕೂಗಿಡುತ್ತಿರುವ ನವಿಲುಗಳ ಧ್ವನಿಯನ್ನನುಸರಿಸಿ ಮದದಿಂದ ಗರ್ಜಿಸುವುದನ್ನು ಕೇಳಿದೆಯಾ? ಇದೋ! ಇತ್ತಲಾಗಿ ಕದಂಬಪುಷ್ಪಗಳಲ್ಲಿ ಮಕರಂದಪಾನಕ್ಕಾಗಿ

---

* ಇಲ್ಲಿ ಕರೀಮೋಡಗಳಲ್ಲಿ ಸೇರಿರುವ ಬಿಳೀಕೊಕ್ಕರೆಗಳ ಸಾಲನ್ನು ವರ್ಣಿಸುವುದರಿಂದ, ಕಾಲಮೇಘಶ್ಯಾಮನಾದ ಭಗವಂತನಲ್ಲಿ ಸೇರುವ ಭಕ್ತರೂಪನಾದ ಬುದ್ಧಿಯು ಸೂಚಿತವು.

ಬರುತ್ತಿರುವ ದುಂಬಿಗಳ ದುರವಸ್ಥೆಯನ್ನು ನೋಡು ಇವು ಈ ಪುಷ್ಪಗಳಲ್ಲಿ ಸಮೃದ್ಧವಾಗಿರುವ ಮಕರಂದವನ್ನು ಕುಡಿಯುವುದರಿಂದ, ಕ್ಷಣಮಾತ್ರದಲ್ಲಿ ಮದವೇರಿದ್ದರೂ, ಮೇಲೆ ಬಿಳುವ ಮಳೆಯ ಬಡಿತಕ್ಕೆ ತಡೆಯಲಾರದೆ ಕ್ಷಣಕ್ಷಣಕ್ಕೂ ಕೂಂಬೆಗಳ ಮರೆಯಲ್ಲಿ ಅವಿತುಕೊಳ್ಳುವುವು ಇರರಿಂದ ಅವುಗಳ ಮದವೆಲ್ಲವೂ ನಿಮಿಷಮಾತ್ರದಲ್ಲಿ ಉಡುಗಿಹೋಗುತ್ತಿರುವುದು ಇದ್ದಲಿನ ರಾತಿಯಂತೆ ಕಪ್ಪಾಗಿಯೂ, ರಸಪೂರ್ಣವಾಗಿಯೂ ಇರುವ ಹಣ್ಣುಗಳಿಂದ ತುಂಬಿದ ಈ ನೇರಳೆಯ ಮರದ ಕೊಂಬೆಗಳನ್ನು ನೋಡಿದೆಯಾ?ಇವುಗಳ ಸುತ್ತಲೂ ದುಂಬಿಗಳು ಬಂದು ಮುತ್ತಿರುವಂತೆ ತೋರುವುವು ಮಿಂಚುಗಳೊಡಗೂಡಿ ಗಂಭೀರವಾಗಿ ಗರ್ಜಿಸುತ್ತಿರುವ ಈ ಮೇಘಗಳು, ಪತಾಕೆಗಳಿಂದ ಲಂಕೃತಗಳಾಗಿ ಯುದ್ಧದಲ್ಲಿ ನಿಂತು ಗರ್ಜಿಸುವ ಆನೆಗಳಂತಿರುವುವು ಈಬೆಟ್ಟದ ಮೇಲಿನ ಆಡವಿಗಳ ದಾರಿಯನ್ನು ಹಿಡಿದು ಹೋಗುತ್ತಿರುವ ಈ ಕಾಡಾನೆಗಳು,ಆಗಾಗ ಮೇಘಧ್ವನಿಯನ್ನು ಕೇಳಿ, ಪ್ರತಿಗಜಗರ್ಜನೆಯೆಂಬ ಭ್ರಾಂತಿಯಿಂದ ಕೋಪಗೊಂಡು,ಅದರೊಡನೆ ಹೋರಾಡಬೇಕೆಂದು ವೇಗದಿಂದ ಹಿಂತಿರುಗುತ್ತಿರುವುದನ್ನು ನೋಡು, ವತ್ಸನೆ! ಚಿತ್ರವಿಚಿತ್ರಗಳಾದ ಅನೇಕವಿಷಯಗಳನ್ನೊಳಕೊಂಡ ಈ ಕಾಡುಗಳ ಸನ್ನಿವೇಶವನ್ನು ನೋಡಿದೆಯಾ ? ಭ್ರಮರಸಮೂಹಗಳಿಂದ ಈ ವನವೇ ಅಲ್ಲಲ್ಲಿ ಗಾನಮಾಡುವಂತಿರುವುದು ನವಿಲುಗಳಿಂದ ಕುಣಿಯುವಂತಿರುವುದು ಮದದಾನೆಗಳಿಂದ ಮತ್ತೇರಿದಂತಿರುವುದು ಅಲ್ಲಲ್ಲಿ ಕಡವು,ಮತ್ತಿ,ಬಾಳೆ ಮುಂತಾದ ಹೂಗಳು ಕಾಣುತ್ತಿರುವುದರಿಂದಲೂ, ಅಲ್ಲಲ್ಲಿ ಸ್ವಚ್ಛವಾದ ಹೊಸನೀರು ನಿಂತಿರುವುದರಿಂದಲೂ, ಅಲ್ಲಲ್ಲಿ ಮದವೇರಿದ ನವಿಲುಗಳು ಕುಣಿಯುತ್ತಿರುವುದರಿಂದಲೂ, ಈ ವನಭೂಮಿಯು ಒಂದುಪಾನಭೂಮಿಯಂತೆಯೇ ನನಗೆ ತೋರುತ್ತಿರುವುದು, ಅಲ್ಲಲ್ಲಿ ಮರದೆಲೆಗಳಮೇಲೆ ಮುತ್ತಿನಮಣಿಗಳಂತೆ ಅಂಟಿಕೊಂಡಿರುವ ಸ್ವಚ್ಛವಾದ ಮಳೆಯಹನಿಯನ್ನು ನೋಡಿ, ವಿಚಿತ್ರವಾದ ಗರಿಗಳುಳ್ಳ ಈ ಚಾತಕಪಕ್ಷಿಗಳು, ಪರಮಸಂತೋಷಗೊಂಡು, ತಮಗೆ ದೇವೇಂದ್ರದತ್ತವಾದ ಆ ನೀರನ್ನು ಬಹುಕಾಲದಿಂದ ತಮಗಿದ್ದ ದಾಹವೆಲ್ಲವೂ ಆಡಗುವಂತೆ ಕುಡಿಯುವುವು ನೋಡು. ಭ್ರಮರಝಂಕಾರಗಳೆಂಬ ತಂತ್ರೀಧ್ವನಿಗಳಿಂದಲೂ, ಕಪಿಗಳ

ಕೂಗೆಂಬ ಕರತಾಳಗಳಿಂದಲೂ ಈಗ ಈ ಕಾಡುಗಳೆಲ್ಲವೂ ಸಂಗೀತವನ್ನಾ ರಂಭಿಸಿದಂತಿರುವುವು ಅಲ್ಲಲ್ಲಿ ಕೆಲವುನವಿಲುಗಳು ನರ್ತನಗಳನ್ನು ಮಾ ಡುತ್ತಿರುವುವು ಮತ್ತೆ ಕೆಲವು ಕೇಕಾಧ್ವನಿಗಳನ್ನು ತೋರಿಸುತ್ತಿರುವುವು ಮತ್ತೆ ಕೆಲವು ಮರಗಳನ್ನಪ್ಪಿ ಸ್ತಬ್ಧವಾಗಿ ನಿಂತಿರುವುವು ಇದನ್ನು ನೋ ಡಿದರ ನರ್ತಕರಿಂದಲೂ, ಗಾಯಕರಿಂದಲೂ, ಅವುಗಳನ್ನು ಅಭಿನಂದಿಸು ತ್ತಿರುವ ಸಾಮಾಜಿಕರಿಂದಲೂ, ತುಂಬಿದ ದೊಡ್ಡ ಗಾನಸಭೆಯೊಂದು ಈ ಕಾಡಿನಲ್ಲಿ ನಡೆಯುವಂತಿರುವುದು ನೋಡು' ಬಗೆಬಗೆಯಾದ ಆಕಾರಗ ಳಿಂದಲೂ, ಬಣ್ಣಗಳಿಂದಲೂ, ಧ್ವನಿಗಳಿಂದಲೂ ಕೂಡಿದ ಇಲ್ಲಿನ ಕಪಿಗಳು, ಮೇಘುಗಳ ಗರ್ಜನವನ್ನು ಕೇಳಿ ಬಹುಕಾಲದಿಂದ ತಾವು ಅನುಭವಿಸುತಿದ್ದ ನಿದ್ರೆಯನ್ನೂ ಬಿಟ್ಟು ಎಚ್ಚತ್ತು,ಮಳೆಯ ಬಡಿತಕ್ಕೆ ಸಿಕ್ಕಿ ಆರಚಿಕೊಳ್ಳುವುವು ನೋಡು ಕಾಮಮದದಿಂದುಬ್ಬಿದ ಯುವತಿಯರು ತಮ್ಮತಮ್ಮ ಹಿರಿಯರ ನ್ನೂ,ಪರಿಜನರನ್ನೂ ಲಕ್ಷ್ಯಮಾಡದೆ,ಉಬ್ಬಿದ ಸ್ತನಗಳು ಜಗ್ಗುವಂತೆ,ನವೋ ಢೆಯರಾದ ಸ್ತ್ರೀಯರಿಗಿರಬೇಕಾದ ಲಜ್ಜೆಯನ್ನೂ ಬಿಟ್ಟು,ಉತ್ತಮವಾದಫಲಾ ದ್ಯುಪಹಾರಗಳನ್ನೂ, ಚಂದನಕರ್ಪೂರ ಕುಸುಮತಾಂಬೂಲಾದಿ ಭೋಗ ದ್ರವ್ಯಗಳನ್ನೂ ಕೈಕಾಣಿಕೆಯಾಗಿ ತೆಗೆದುಕೂಂಡು, ತಮ್ಮತಮ್ಮ ಪ್ರಿಯರ ಬಳಿಗೆ ಅತ್ಯಾತುರದಿಂದೋಡುವಂತೆ, ಈ ನದಿಗಳೂಕೂಡ, ಉಕ್ಕಿಬರುವ ತ ಮ್ಮಪ್ರವಾಹವೇಗದಿಂದ ಎರಡುಪಕ್ಕದ ದಡಗಳನ್ನೂ ಒದರಿಕೂಂಡು, ತ ಮ್ಮಮೇಲೆ ತೇಲಾಡುವ ಚಕ್ರವಾಕದಂಪತಿಗಳೊಡನೆಯೂ,ಪ್ರವಾಹವೇಗ ದಲ್ಲಿ ಕೂಚ್ಚಿಬರುವ ಪುಷ್ಪಫಲಾದಿಗಳೊಡನೆಯೂ ಕೂಡಿ, ತಮ್ಮಪತಿಯಾ ದ ಸಮುದ್ರರಾಜನಕಡೆಗೆ ವೇಗದಿಂದೋಡುತ್ತಿರುವುವು ಕಾಡುಗಿಚ್ಚಿನಿಂದ ಬೆಂದ ಬೆಟ್ಟಗಳು ಒಂದರಮೇಲೊಂದು ಕಾಣುವಂತೆ,ಡೊಡ್ಡದೊಡ್ಡ ಕರೀ ಮೇಘುಗಳನಡುವೆ ಹೊಸನೀರಿನಿಂದ ತುಂಬಿ ಕಪ್ಪಾದ ಸಣ್ಣಮೇಘುಗಳ ಪದರಗಳು ಕಾಣುವುವು ಸಂತೋಷದಿಂದ ಕೇಕಾಧ್ವನಿಯೆನ್ನುಮಾಡುವ ನವಿ ಲುಗಳಿಂದಲೂ, ಇದ್ರಕೋಪಗಳೆಂಬ ಕೆಂಪುಹುಳುಗಳಿಂದ ತುಂಬಿದ ಹ ಸುರುಹುಲ್ಲಿನ ನೆಲದಿಂದಲೂ, ಕಡವು ಮುಂತಾದ ಹೂಗಳ ವಾಸನೆಯಿಂದ ಲೂ, ಸರ್ವೇಂದ್ರಿಯಗಳಿಗೂ ಆನಂದವನ್ನುಂಟುಮಾಡುವ ಈ ಅಡವಿಗಳ

ಸುತ್ತಲೂ, ಕಾಡಾನೆಗಳು ಸಂತೋಷದಿಂದ ಸಂಚರಿಸುತ್ತಿರುವುವು ಈಗ ವಿಶೇಷವಾದ ಮಳೆಯ ವೇಗದಿಂದ ಕಮಲಗಳಲ್ಲಿ ಕೇಸರಗಳಿಲ್ಲವೂ ಉಳಿರಿ ಹೋದುದನ್ನು ನೋಡಿ, ಭ್ರಮರಗಳು ಆ ಕ್ಷಣವೇ ಆ ಕಮಲಗಳನ್ನು ಬಿಟ್ಟು, ಕೇಸರಗಳಿಂದ ತುಂಬಿದ ಕಡಪಿನ ಮರಗಳ ಹೊಸಹೂಗಳಲ್ಲಿ ಅತ್ಯಾದರದಿಂದ ಬಂದುಬಿಳುವುವು ಈಗ ಆನೆಗಳು ವಿಶೇಷವಾದ ಮದದಿಂದ ಕೊಬ್ಬಿರುವುವು ಗೋವುಗಳು ಸಂತೋಷದಿಂದುಬ್ಬಿರುವುವು ಸಿಂಹಗಳು ಕಾಡಿನಲ್ಲಿ ವಿಶ್ರಾಂತಿಯಿಂದ ಮಲಗಿರುವುವು ಬೆಟ್ಟಗಳು ಹೂಗಳಿಂದಲೂ ಚಿಗುರುಗಳಿಂದಲೂ ತುಂಬಿ ರಮ್ಯವಾಗಿರುವುವು ರಾಜರು ಯುದ್ಧಯಾತ್ರೆಗಳನ್ನು ಬಿಟ್ಟು ಅತ್ತಿತ್ತ ಕದಲದೆ ಸುಮ್ಮನಿರುವರು ದೇವೇಂದ್ರನೊಬ್ಬನು ಮೇಘುಗಳಿಂದ ಆಟವಾಡುತ್ತಿರುವನು ಮೇಘುಗಳು ಜಲಭರಿತಗಳಾಗಿ ಆಕಾಶದಲ್ಲಿ ಸುತ್ತುತ್ತ, ಸಮುದ್ರಘೋಷವನ್ನೂ ಮರೆಸುವಂತೆ ಗರ್ಜಿಸುತ್ತ, ಕೊಳಬಾವಿಗಳನ್ನೂ, ಕೆರೆತೊರೆಗಳನ್ನೂ, ಸಮಸ್ತಭೂಮಿಯನ್ನೂ ತೇಲಾಡಿಸುವಂತೆ ಮಳೆಯನ್ನು ಸುರಿಸುತ್ತಿರುವುವು ಈಗ ಎಡೆಬಿಡದೆ ಮಳೆ ಬೀಳುತ್ತಿರುವುದು ಗಾಳಿಯು ಮಹಾಘೋಷದಿಂದ ವೇಗವಾಗಿ ಬೀಸುತ್ತಿರುವುದು. ನದಿಗಳು ಪೂರ್ಣಪ್ರವಾಹದಿಂದ ದಡವನ್ನು ಮೀರಿ ದಾರಿತಪ್ಪಿ ಪ್ರವಹಿಸುವುವು ಪಟ್ಟಕ್ಕೆ ಬಂದ ರಾಜರು ಜಲಕುಂಭಗಳಿಂದಭಿಷಿಕ್ತರಾದಮೇಲೆ ಆವರಲ್ಲಿ ರಾಜಲಕ್ಷ್ಮಿಯು ಕಾಣುವಂತೆ, ದೇವೇಂದ್ರನು ಮೇಘುಗಳೆಂಬ ಕುಂಭಗಳಿಂದ ಈ ಪರ್ವತಗಳಿಗೆ ಅಭಿಷೇಕಮಾಡಿದೊಡನೆ,ಇವು ನೈರ್ಮಲ್ಯರೂಪವಾದ ತನ್ನ್ಮಕಾಂತಿಯನ್ನು ತೋರಿಸುವಂತಿರುವುವು ಆಕಾಶವು ಮೋಡಗಳಿಂದ ಮುಚ್ಚಿ, ಹಗಲಲ್ಲಿ ಸೂರ್ಯನಾಗಲಿ, ರಾತ್ರಿಯಲ್ಲಿ ನಕ್ಷತ್ರಗಳಾಗಲಿ ಗೋಚರಿಸುವುದಿಲ್ಲ ನೆಲವೆಲ್ಲವೂ ಜಲಪ್ರವಾಹದಿಂದ ತುಂಬಿ ಹೋಗಿರುವುದು ಕತ್ತಲೆಯಿಂದ ಲೇಪಿಸಲ್ಪಟ್ಟಂತೆ ದಿಕ್ಕುಗಳೊಂದೂ ಕಾಣುವುದಿಲ್ಲ. ಮಳೆಯನೀರಿನಿಂದ ತೊಳೆಯಲ್ಪಟ್ಟ ಈ ದೊಡ್ಡದೊಡ್ಡ ಪರ್ವತಶಿಖರಗಳನ್ನು ಮುತ್ತಿನ ಹಾರಗಳಿಂದಲಂಕರಿಸಿಟ್ಟಂತೆ, ಅವುಗಳ ಸುತ್ತಲೂ ಗಿರಿನದಿಗಳು ಪ್ರವಹಿಸುತ್ತಿರುವುವು ಅಲ್ಲಲ್ಲಿ ಕಲ್ಲುಬಂಡೆಗಳಿಂದ ತಡೆಯಲ್ಪಟ್ಟ ವೇಗವುಳ್ಳ ಈ ಗಿರಿನದಿಗಳು, ನವಿಲುಗಳ ಕೇಕಾಧ್ವನಿಯಿಂದ ಕೂಡಿದ ಪರ್ವತಗುಹೆ

ಗಳ ದ್ವಾರದಲ್ಲಿ ಅತ್ತಿತ್ತ ಕದಲಿ ಬಿಳುವಾಗ, ಮುತ್ತಿನಹಾರವನ್ನು ಕಿತ್ತು ಚೆಲ್ಲಿದಂತೆ ಕಾಣುವುವು ಅಲ್ಲಲ್ಲಿನ ಕಲ್ಲುಬಂಡೆಗಳನ್ನು ತೊಳೆದುಕೊಂಡು ಅತಿವೇಗದಿಂದ ಬಿಳುವ ಈ ಪ್ರವಾಹಗಳು, ಮುತ್ತಿನ ಹಾರಗಳಂತೆ ಕಾಣುತ್ತ ಅಲ್ಲಲ್ಲಿನ ಗುಹಾದ್ವಾರಗಳಲ್ಲಿ ತಂಗಿ ಬರುತ್ತಿರುವುದನ್ನು ನೋಡು ಆಕಾಶದಿಂದ ನಾಲ್ಕುದಿಕ್ಕುಗಳಲ್ಲಿಯೂ ಚದರಿ ಬಿಳುವ ಜಲಧಾರೆಗಳು, ಸಂಭೋಗಸಮಯಗಳಲ್ಲಿ ಕಿತ್ತುಹೋದ ದೇವತಾಸ್ತ್ರೀಯರ ಹಾರದಿಂದುದಿರಿಬಿದ್ದ ಮುತ್ತುಗಳೋ ಎಂಬಂತೆ ಕಾಣುವುವು ಪಕ್ಷಿಗಳು ಗೂಡಿಗೆ ಸೇರುವುದರಿಂದಲೂ, ತಾವರಗಳು ಮುಚ್ಚಿಕೊಳ್ಳುವುದರಿಂದಲೂ, ಜಾಜಿಯ ಹೂಗಳು ಅರಳುವುದರಿಂದಲೂ, ಈಗ ಸೂರ್ಯನು ಅಸ್ತಂಗತನಾಗುವನೆಂದು ಸೂಚಿತವಾಗುವುದು ಈಗ ರಾಜರ ಯುದ್ಧಯಾತ್ರೆಗಳು ನಂತುಹೋಗಿವೆ ಇದಕ್ಕೆ ಮೊದಲೇ ಯುದ್ಧೋದ್ಯುಕ್ತವಾಗಿ ಹೊರಟ ಸೇನೆಯೂಕೂಡ ಹಿಂತಿರುಗಿ ತನ್ನಪುರಕ್ಕೆ ಬಂದು ಸೇರುತ್ತಿರುವುದು ಈ ಮಳೆಗಾಲವು ಯುದ್ಧಪ್ರಯತ್ನವನ್ನು ನಿಲ್ಲಿಸುವುದು ಮಾತ್ರವೇಅಲ್ಲದೆ, ಅಲ್ಲಲ್ಲಿ ಜಲಪ್ರವಾಹಗಳ ಹೆಚ್ಚಿಗೆಯಿಂದ ಅತ್ತಿತ್ತ ಕದಲುವುದಕ್ಕೂ ಅವಕಾಶವಿಲ್ಲದೆ ರಾಜರಿಗಿರುವ ಪರಸ್ಪರವೈರವನ್ನೇ ಅಡಗಿಸಿ ಬಿಡುವಂತಿರುವುದು ಎಲ್ಲೆಲ್ಲಿಯೂ ನೀರು ತುಂಬಿಕೂಂಡಿರುವುದರಿಂದ, ಸಂಚಾರಯೋಗ್ಯವಾದ ದಾರಿಯಾವುದೆಂದು ತಿಳಿಯುವುದಕ್ಕೂ ಸಾಧ್ಯವಿಲ್ಲದೆ, ಸಮಸ್ತಪ್ರದೇಶಗಳೂ ಜಲಮಯವಾಗಿ ಒಂದೇಸಮನಾಗಿ ಕಾಣುವುವು ಸಾಮವೇದಿಗಳಾದ ಬ್ರಾಹ್ಮಣರಿಗೆ ಅಧ್ಯಯನಾರಂಭಸಮಯವಾದ ಭಾದ್ರಪದಮಾಸದ ಹಸ್ತನಕ್ಷತ್ರವು ಸನ್ನಿಹಿತವಾಯಿತು ಕೋಸಲದೇಶಾಧೀಶ್ವರನಾದ ನಮ್ಮಭರತನು, ಗೃಹೋಪಕರಣಗಳಾಗಲಿ, ಇತರವಸ್ತುಗಳಾಗಲಿ ಈ ಮಳೆಗಾಲದ ನಾಲ್ಕುತಿಂಗಳಲ್ಲಿ ಸಿಕ್ಕುವುದು ಕಷ್ಟವೆಂಬುದಕ್ಕಾಗಿ, ಆಷಾಢಮಾಸದ ಹುಣ್ಣಿಮಗೆ ಮೊದಲೇ, ಮನೆಗೆ ಬೇಕಾದ ಸಾಮಗ್ರಿಗಳನ್ನು ಸಂಗ್ರಹಿಸುವ ಕಾರ್ಯವೆಲ್ಲವನ್ನೂ ತೀರಿಸಿಕೂಂಡು, ಧನಧಾನ್ಯಗಳನ್ನೂ ಸಂಗ್ರಹಿಸಿಟ್ಟುಕೊಂಡು, * ಆಷಾಢದ ಹುಣ್ಣಿಮೆಯನ್ನೇ

* ಈ ಚಾತುರ್ಮಾಸ್ಯ ಕ್ರಮವು ಭಾರತದಲ್ಲಿಯೂ "ಆಷಾಢಸ್ಯ ಸಿತೇ ಪಕ್ಷೇ ಏಕಾದಶ್ಯಾಮುಪೋಷಿತಃ। ಚಾತುರ್ಮಾಸ್ಯ ವ್ರತಂ ಕುರ್ಯಾದ್ಯತ್ಕಿಂಚಿತ್ಪ್ರಯತೋನರಃ

ವ್ರತಾಂಗವಾಗಿ ಸ್ವೀಕರಿಸಿರುವನೆಂಬುದರಲ್ಲಿ ಸಂದೇಹವಿರದು ನಾನು ಎಲ್ಲಿಗಾದರೂ ಹೋಗಿ ಹಿಂತಿರುಗಿಬಂದಾಗ,ಅಯೋಧ್ಯಾವಾಸಿಗಳು ನನ್ನ ಪ್ರತ್ಯಾಗಮನವನ್ನು ನೋಡಿ ಆನಂದದಿಂದ ಕೋಲಾಹಲವನ್ನು ಮಾಡುತಿದ್ದಂತೆ,ಮಳೆಗಾಲದಲ್ಲಿ ಜಲಪೂರಿತವಾದ ಸರಯೂನದಿಯು, ಈಗ ಕೋಲಾಹಲದಿಂದ ಧ್ವನಿಮಾಡುತ್ತಿರಬಹುದಲ್ಲವೆ? ಸುಗ್ರೀವನು ತನ್ನ ವೈರಿಯನ್ನು ನಿಗ್ರಹಿಸಿ,ರಾಜ್ಯವನ್ನೂ, ತನ್ನ ಪತ್ನಿಯಾದ ರುಮೆಯನ್ನೂ ವಶಪಡಿಸಿಕೊಂಡಿರುವುದರಿಂದ ಈ ಮನೋಹರವಾದ ಮಳೆಗಾಲವೆಲ್ಲವನ್ನೂ ಎಷ್ಟೋಸುಖದಿಂದ ಕಳೆಯುತ್ತಿರುವನು ವತ್ಸನೆ! ನನಗೆ ಅಭಾಗ್ಯವೆಲ್ಲಿಯದು ? ಇಂತಹ ಭೋಗ್ಯವಾದ ಕಾಲದಲ್ಲಿಯೂಕೂಡ ನಾನು ಹೆಂಡತಿಯನ್ನೂ, ರಾಜ್ಯವನ್ನೂ ಕಳೆದುಕೊಂಡು, ಈ ಕಾಡಿನಲ್ಲಿ ಕಷ್ಟಪಡುತ್ತ, ಈಗ ಅಲ್ಲಲ್ಲಿ ಪ್ರವಾಹವೇಗದಿಂದ ಕಿತ್ತು ಹೋದ ನದಿಯ ದಡದಂತೆ ಹೀನದಶೆಯನ್ನನುಭವಿಸುತ್ತಿರುವೆನು ನನ್ನ ದುಃಖವೋ ಅಪರಿಮಿತವಾಗಿರುವುದು ಈಮಳೆಗಾಲದಲ್ಲಿ ಒಂದೊಂದು ಮುಹೂರ್ತವನ್ನು ಕಳೆಯುವುದೂ ಎಷ್ಟೋ ಕಷ್ಟವಾಗಿರುವುದು ರಾವಣನಾದರೋ ನಮಗೆ ದೊಡ್ಡ ಶತ್ರುವಾಗಿರುವನು ಈ ಮೂರನ್ನೂ ಬಾಟುವುದೇ ನಮಗೆಶಕ್ಯವಲ್ಲವೆಂದು ತೋರುವುದು ಯುದ್ಧಯಾತ್ರೆಗೆ ಈ ಕಾಲವು ಎಷ್ಟುಮಾತ್ರವೂ ಉಚಿತವಾಗಿ ತೋರಲಿಲ್ಲ ದಾರಿಯಲ್ಲಿ ನಡೆಯುವುದೇ ಅಶಕ್ಯವಾಗಿರುವುದು ಇದನ್ನು ನೋಡಿಯೇ ನಾನು,ಈಗಲೇ ರಾವಣನನ್ನು ಕೊಂದು ಸೀತೆಯನ್ನು ತರುವುದಕ್ಕೆ ಪ್ರಯತ್ನಿಸಬೇಕೆಂದು ಸುಗ್ರೀವನು ನನ್ನನ್ನೇನಿರ್ಬಂಧಿಸುತಿದ್ದರೂ ಅದಕ್ಕೊಪ್ಪದೆ ಹೋದೆನು ಇದಲ್ಲದೆ ಸುಗ್ರೀವನು ಇದುವರಗೂ ಎಷ್ಟೋಕಷ್ಟಗಳಿಂದ ಕಂದಿಕುಂದಿ,ಕೃಶನಾಗಿ ಬಹುಕಾಲಕ್ಕೆ ಈಗಲೇ ತನ್ನ ಪತ್ನಿಯನ್ನು ಪಡೆದಿರುವನು ನಮ್ಮ ಕಾರ್ಯವೋ ಬಹಳ ಮಹತ್ತಾಗಿರುವುದು. ಸ್ವಲ್ಪ ಪ್ರಯತ್ನದಿಂದಾಗಲಿ,ಸ್ವಲ್ಪಕಾಲದಲ್ಲಾಗಲಿ ಸಾಧ್ಯವಾಗತಕ್ಕುದಲ್ಲ. ಇದಕ್ಕಾಗಿಯೇ ನಾನು ಅವನನ್ನು ಈಗ ನಮ್ಮ ಕಾರ್ಯದಲ್ಲಿ ಪ್ರಯತ್ನಿಸುವುದಕ್ಕೊಪ್ಪಲಿಲ್ಲ' ಸುಗ್ರೀವನು ಕೃತಜ್ಞತೆಯುಳ್ಳವನಾದುದರಿಂದ ಈ ಮಳೆ

ವಾರ್ಷಿಕಾಂಶ್ಚತುರೋ ಮಾಸಾನ್ ವ್ರತಂ ಕಿಂಚಿತ್ಸಮಾಪಯೇತ್ । ಅಸಂಭವೇ ತು ಲಾರ್ಕೇಽಪಿ ಕರ್ತವ್ಯಂ ತತ್ಪ್ರಯತ್ನತಃ" ಎಂಬುದಾಗಿ ಹೇಳಿಲ್ಪಟ್ಟಿದೆ

ಗಾಲದಲ್ಲಿ ವಿಶ್ರಮಿಸಿಕೊಂಡಿದ್ದು, ಶರತ್ಕಾಲವು ಬಂದೊಡನೆತಾನಾಗಿಬಂದು ನನ್ನ ಉಪಕಾರಕ್ಕೆ ಪ್ರತ್ಯುಪಕಾರವನ್ನು ಮಾಡುವುದರಲ್ಲಿ ಸಂದೇಹವಿಲ್ಲ ಎಲೆ ವತ್ಸನೆ! ಆದುದರಿಂದ ನಾನು ಶರತ್ಕಾಲವು ಬಂದಮೇಲೆ, ಈ ನದಿಗಳ ನೀರೂ, ಸುಗ್ರೀವನ ಮನಸ್ಸೂ ಪ್ರಸನ್ನವಾಗುವುದನ್ನೇ ನಿರೀಕ್ಷಿಸುತ್ತಿರುವೆನು ವೀರನಾದ ಪುರುಷನು ತನಗುಪಕಾರವನ್ನು ಮಾಡಿದವರಿಗೆ ಪ್ರತ್ಯುಪಕಾರಮಾಡದಿರನು ಹಾಗೆ ಕೃತಜ್ಞತೆಯಿಲ್ಲದೆ ಪ್ರತ್ಯುಪಕಾರವನ್ನು ಮಾಡದ ಪಕ್ಷದಲ್ಲಿ, ಸಾತ್ವಿಕರಾದ ಸತ್ಪುರುಷರ ಮನಸ್ಸಿಗೆ ಸಂಕಟವನ್ನುಂಟುಮಾಡಿದಂತಾಗುವುದು ಆದುದರಿಂದ ಸುಗ್ರೀವನು ನಮ್ಮವಿಷಯದಲ್ಲಿ ಹೇಗಿದ್ದರೂ ಸತ್ಪುರುಷರ ಮನಸ್ಸನ್ನು ನೋಯಿಸಬಾರದೆಂಬುದಕ್ಕಾಗಿ ನನಗೆ ತಪ್ಪದೆ ಪ್ರತ್ಯುಪಕಾರವನ್ನು ಮಾಡಬಹುದು" ಎಂದನು ಇವೆಲ್ಲವನ್ನೂ ಕೇಳುತಿದ್ದ ಲಕ್ಷ್ಮಣನು ಆತನ ಮಾತುಗಳನ್ನು ಗೌರವಿಸುತ್ತ, ಅವನಿಗೆ ಕೈಮುಗಿದು, ಮುಂದೆ ನಡೆಸಬೇಕಾದ ಕಾರ್ಯವನ್ನು ತನ್ನ ಮನಸ್ಸಿನಲ್ಲಿಯೇ ಆಲೋಚಿಸಿಕೂಂಡು, ತನ್ನ ಮನೋಭಿಪ್ರಾಯವೂ ಅದೇ ಎಂಬುದನ್ನು ರಾಮನಿಗೆ ತಿಳಿಸಬೇಕೆಂದು ನಿಶ್ಚಯಿಸಿ "ಅಣ್ಣಾ! ವಾನರೇಂದ್ರನಾದ ಸುಗ್ರೀವನು ಆಡಿದಮಾತಿಗೆ ತಪ್ಪುವವನಲ್ಲ ನಿನ್ನ ಕೋರಿಕೆಗಳನ್ನು ಶೀಘ್ರದಲ್ಲಿಯೇ ಈಡೇರಿಸುವನು ನೀನುಮಾತ್ರ ಧೈರ್ಯಗುಂದಬೇಡ ಶರತ್ಕಾಲವು ಬರುವವರೆಗೂ ಧೈರ್ಯದಿಂದ ಸಹಿಸಿಕೊಂಡು ಈ ಮಳೆಗಾಲವನ್ನು ಕಳೆದುಬಿಡು" ಎಂದನು ಇಲ್ಲಿಗೆ ಇಪ್ಪತ್ತೆಂಟನೆಯಸರ್ಗವು

ವರ್ಷಾಕಾಲವು ಕಳೆಯುತ್ತಬಂದುದನ್ನುನೋಡಿ, ಹನುಮಂತನು ಸುಗ್ರೀವನಿಗೆ ರಾಮಕಾರ್ಯವನ್ನು ಜ್ಞಾಪಿಸಿದುದು ಸುಗ್ರೀವನು ನೀಲನನ್ನು ಕರೆದು ಸಮಸ್ತ ಸೈನ್ಯಗಳನ್ನೂ ಕರೆಸುವಂತೆ ನಿಯಮಿಸಿದುದು.

ಕ್ರಮಕ್ರಮವಾಗಿ ಮಳೆಗಾಲವು ಕಳೆಯುತ್ತಬಂದಿತು ಆಕಾಶದಲ್ಲಿ ಮಿಂಚುಗಳೂ ಮೇಘಗಳೂ ತಗ್ಗುತ್ತ ಬಂದುವು ದಿಕ್ಕುಗಳೆಲ್ಲವೂ ಸ್ವಚ್ಛವಾದುವು ಸಾರಸಪಕ್ಷಿಗಳು ಕೂಗಿಡಲಾರಂಭಿಸಿದುವು ಬೆಳ್ಳಿಂಗಳನ್ನು ಲೇಪಿಸಿದಂತೆ ಆಕಾಶವೂ ಸ್ವಚ್ಛವಾಗುತ್ತಬಂದಿತು. ಅತ್ತಲಾಗಿ ಕಿಷ್ಕಿಂಧೆಯಲ್ಲಿ

ತನ್ನ ಶತ್ರುವಾದ ವಾಲಿಯನ್ನು ಕೊಲ್ಲಿಸಿ, ರಾಜ್ಯಸಿಂಹಾಸನವನ್ನು ಹೊಂದಿದ ಸುಗ್ರೀವನೂಕೂಡ, ರತ್ನವಸ್ತ್ರಾಭರಣಗಳೇ ಮೊದಲಾದ ಸಮಸ್ತ ಭೋಗಸಾಮಗ್ರಿಗಳನ್ನೂ ಸಮೃದ್ಧವಾಗಿ ಪಡೆದು ಸುಖಿಸುತ್ತಿದ್ದನು ಅವನ ಮನೋರಥಗಳೆಲ್ಲವೂ ಸಂಪೂರ್ಣವಾಗಿ ಈಡೇರಿದುವು ಯಾವಾಗಲೂ ಸ್ತ್ರೀಯರೊಡನೆ ಕಾಮಸುಖದಲ್ಲಿಯೇ ಮಗ್ನನಾಗಿದ್ದನು ತನ್ನ ಪತ್ನಿಯಾದ ರುಮೆಯನ್ನೂ, ತಾನು ಬಹುಕಾಲದಿಂದ ಕಣ್ಣಿಟ್ಟುಕಾದಿದ್ದ ತಾರೆಯನ್ನೂ ಕೈವಶಮಾಡಿಕೊಂಡು, ಅವರೊಡನೆ ಅಹೋರಾತ್ರವೂ ಸುಖಿಸುತಿದ್ದನು ಹೀಗೆ ಸುಗ್ರೀವನು ಕೃತಾರ್ಥನಾಗಿ, ಮನಸ್ಸಿನಲ್ಲಿ ಯಾವುದೊಂದು ಚಿಂತೆಯೂ ಇಲ್ಲದೆ, ಕಾಮುಕರ ಮಾರ್ಗವನ್ನನುಸರಿಸಿ, ಧರ್ಮಾರ್ಥಗಳೆರಡರಲ್ಲಿಯೂ ಅಷ್ಟಾಗಿ ಶ್ರದ್ಧೆಯಿಲ್ಲದೆ, ಕಾಮಪುರುಷಾರ್ಥವೊಂದರಲ್ಲಿಯೇ ನಟ್ಟ ಮನಸ್ಸುಳ್ಳವನಾಗಿದ್ದನು ರಾಜಕಾರ್ಯಗಳೆಲ್ಲವನ್ನೂ ಮಂತ್ರಿಗಳಮೇಲೆ ಹೊರಿಸಿಬಿಟ್ಟನು ಆ ಮಂತ್ರಿಗಳು ಹೇಗೆ ನಡೆಸುವರೆಂಬುದನ್ನೂ ಪರಾಮರ್ಶಿಸುತ್ತಿರಲಿಲ್ಲ ನಂದನವನದಲ್ಲಿ ಅಪ್ಸರಸ್ಸುಗಳೊಡನೆ ಕ್ರೀಡಿಸುತ್ತಿರುವ ದೇವೇಂದ್ರನಂತೆ ಅನವರತವೂ ಸ್ತ್ರೀಯರೊಡನೆಯೇ ವಿಹರಿಸುತ್ತ ರಾಜ್ಯದ ಚಿಂತೆಯನ್ನೇ ಬಿಟ್ಟುಬಿಟ್ಟನು ಆಗ ಹನುಮಂತನು, ಸುಗ್ರೀವನು ಕೇವಲಕಾಮವೃತ್ತನಾಗಿರುವುದನ್ನೂ, ಆಕಾಶವು ನಿರ್ಮಲವಾಗಿರುವುದನ್ನೂ ನೋಡಿದನು ಭಾವಿಕಾರ್ಯವನ್ನು ತಿಳಿದವನಾಗಿಯೂ, ಕಾರ್ಯಾಕಾರ್ಯಗಳ ತತ್ವವನ್ನು ಬಲ್ಲವನಾಗಿಯೂ, ಕಾಲೋಚಿತಗಳಾದ ಧರ್ಮವಿಶೇಷಗಳನ್ನರಿತವನಾಗಿಯೂ ಇದ್ದ ಆ ಹನುಮಂತನು, ಮುಂದೆ ನಡೆಸಬೇಕಾದುದೇನೆಂಬುದನ್ನು ತನ್ನ ಮನಸ್ಸಿನಲ್ಲಿ ನಿಶ್ಚಯಿಸಿಕೊಂಡು, ಸುಗ್ರೀವನನ್ನು ನೋಡುವುದಕ್ಕಾಗಿ ಬಂದನು ಈತನು ಮಾತುಬಲ್ಲವನಾದುದರಿಂದ ಯುಕ್ತಿಯುಕ್ತವಾಗಿಯೂ, ಹಿತವಾಗಿಯೂ, ಕಿವಿಗಿಂಪಾಗಿಯೂ ಇರುವ ಮಾತುಗಳಿಂದ ರಾಜನಾದ ಸುಗ್ರೀವನ್ನು ಮೊದಲು ಪ್ರಸನ್ನನನ್ನಾಗಿ ಮಾಡಿಕೊಂಡು, ಆಮೇಲೆ ಅವನಿಗೆ ಹಿತವಾಗಿಯೂ, ಯಥಾರ್ಥವಾಗಿಯೂ, ಸಾಮಯುಕ್ತವಾಗಿಯೂ, ಧರ್ಮಾರ್ಥಗಳಿಂದಲೂ, ನ್ಯಾಯದಿಂದಲೂ, ಕೂಡಿದುದಾಗಿಯೂ, ತನಗೆ ಆತನಲ್ಲಿರುವ ಸ್ನೇಹವಾತ್ಸಲ್ಯಗಳಿಗೆ ತಕ್ಕುದಾಗಿಯೂ, ನಂಬಿಕೆಯನ್ನು ಹು

ಟ್ಟಿಸತಕ್ಕುದಾಗಿಯೂ ಇರುವ ಮಾತನ್ನು ಹೇಳತೊಡಗಿದನು "ಎಲೈ ಕಪಿರಾಜನೆ! ನಿನಗೆ ರಾಜ್ಯವು ಕೈಸೇರಿತು ನೀನು ಅಪಾರವಾದ ಕೀರ್ತಿಯನ್ನೂ ಹೊಂದಿದೆ' ನಿನ್ನ ಕುಲಕ್ರಮಾಗತವಾದ ರಾಜ್ಯಶ್ರೀಯನ್ನೂ ಹೆಚ್ಚಿಸಿಕೊಂಡುದಾಯಿತು ಇಷ್ಟಾದರೂ ಇದರಿಂದಲೇ ನೀನು ಕೃತಾರ್ಥನೆಂದೆಣಿಸಬಾರದು ನೀನು ನಡೆಸಬೇಕಾದ ಪ್ರಧಾನಕಾರ್ಯವೊಂದು ಇನ್ನೂ ಉಳಿದಿರುವುದು ಅದೇನೆಂದು ಬಲ್ಲೆಯಾ ? ಮಿತ್ರಸಂಗ್ರಹವು ಇನ್ನು ಮೇಲೆ ನೀನು ಆ ಕಾರ್ಯಕ್ಕೆ ಪ್ರಯತ್ನಿಸಬೇಕು ಯಾವನು ಕಾಲವನ್ನರಿತು ಮಿತ್ರರೊಡನೆ ಸೇರಿ, ಅವರವರ ಮನಸ್ಸಿಗೆ ಕಿಂಕೃತಿಯುಂಟಾಗದಂತೆ ಸರಿಯಾಗಿ ನಡೆದುಕೊಳ್ಳುವನೋ, ಅವನ ರಾಜ್ಯವೂ, ಖ್ಯಾತಿಯೂ, ಪರಾಕ್ರಮವೂ ಮೇಲೆಮೇಲೆ ವೃದ್ಧಿಹೊಂದುವುವು ಯಾವ ರಾಜನಿಗೆ ಬಂಡಾರವೂ, ಸೇನೆಯೂ, ಮಿತ್ರರೂ, ನಡತೆಯೂ ಲೋಪವಿಲ್ಲದೆ ಚೆನ್ನಾಗಿ ಹೊಂದಿರುವುವೋ ಅವನು ದೊಡ್ಡರಾಜ್ಯಕ್ಕೆ ಅಧಿಪತಿಯಾಗುವನು ನೀನು ಸದಾಚಾರಸಂಪನ್ನನಾಗಿಯೂ, ಸನ್ಮಾರ್ಗಪ್ರವೃತ್ತನಾಗಿಯೂ ಇರುವುದರಿಂದ, ಮೊದಲು ನಿನ್ನ ಮಿತ್ರರ ಕೋರಿಕೆಗಳನ್ನೀಡೇರಿಸಿಕೊಟ್ಟು, ಅವರನ್ನು ಸಂತೋಷಪಡಿಸಬೇಕು ಯಾವನು ತನ್ನ ಸಮಸ್ತಕಾರ್ಯಗಳನ್ನಾದರೂ ಬಿಟ್ಟು ಆದರದಿಂದಲೂ, ಉತ್ಸಾಹದಿಂದಲೂ ತನ್ನ ಮಿತ್ರರ ಕಾರ್ಯವನ್ನು ಎಡೆಬಿಡದೆ ನಡೆಸುತ್ತಿರುವನೋ,ಅವನು ಯಾವ ಅನರ್ಥಗಳನ್ನಾದರೂ ತಪ್ಪಿಸಿಕೊಳ್ಳಬಹುದು ಯಾವನು ಮಿತ್ರರ ಕಾರ್ಯಗಳನ್ನು ಸಕಾಲದಲ್ಲಿ ನಡೆಸದೆ ಅಲಕ್ಷ್ಯದಿಂದಿರುವನೋ ಅವನು ಕಾಲಾಂತರದಲ್ಲಿ ಅವರಿಗಾಗಿ ಎಷ್ಟೇ ದೊಡ್ಡಕಾರ್ಯಗಳನ್ನು ನಡೆಸಿದರೂ ನಡೆಸದಂತೆಯೇ ಆಗುವುದು, ಎಲೆ ವೀರನೆ' ಇದುವರೆಗೆ ನಾನು ಸಾಮಾನ್ಯವಾಗಿ ಹೇಳಿದೆನು ವ್ಯಕ್ತವಾಗಿಯೇ ತಿಳಿಸುವೆನು ಕೇಳು ಈಗ ನಾವು ಮೊದಲು ನಡೆಸಬೇಕಾದ ಮಿತ್ರಕಾರ್ಯವು ರಾಮನ ಕಾರ್ಯವೇಹೊರತು ಬೇರೆಯಲ್ಲ ಸೀತೆಯನ್ನು ಹುಡುಕಿಸಬೇಕಾದುದೇ ಅವನಿಗಾಗಿ ಈಗ ನಾವು ಮಾಡಬೇಕಾದ ಸಹಾಯವು ಎಲೈ ವೀರನೆ 'ಈಗ ನೀನು ಅವಶ್ಯವಾಗಿ ನಡೆಸಬೇಕಾದ ಆ ಮಿತ್ರಕಾರ್ಯಕ್ಕೂಕೂಡ ಕಾಲವು ಮೀರಿ ಹೋಗುತ್ತ ಬಂದಿರುವುದು. ಪ್ರಾಜ್ಞನಾದ ರಾಮನು ಕಾಲಜ್ಞನಾಗಿಯೂ

ಸೀತೆಯನ್ನು ಪಡೆಯುವುದಕ್ಕಾಗಿ ಅತ್ಯಾತುರವುಳ್ಳವನಾಗಿಯೂ ಇದ್ದರೂ, ನಿನ್ನ ಮನಸ್ಸನ್ನು ನೋಯಿಸದೆ ಅದನ್ನನುಸರಿಸಿಯೇ ಹೋಗಬೇಕೆಂಬ ದಯಾಸ್ವಭಾವವುಳ್ಳವನಾದುದರಿಂದ,ಈಗ ವೀರಿಹೋದ ಸ್ವಲ್ಪಕಾಲಕ್ಕಾಗಿ ಆತನು ನಿನ್ನನ್ನು ಆಕ್ಷೇಪಿಸಲಾರನು ಆ ರಾಮನು ಸಾಮಾನ್ಯನೆಂದೆಣಿಸಬೇಡ, ಮಹಾವಂಶದಲ್ಲಿ ಹುಟ್ಟಿ ತನ್ನ ನಡತೆಯಿಂದ ಆ ವಂಶಕ್ಕೇ ಒಂದುಮೇಲ್ಮೆಯನ್ನುಂಟುಮಾಡಿರುವನು, ನಮಗೆ ಯಾವಾಗಲೂ ಆಪ್ತನಾಗಿರುವವನು ಎಣೆಯಿಲ್ಲದ ಮಹಿಮೆಯುಳ್ಳವನು ನಿನ್ನಲ್ಲಿಯೂ ಆತನಂತೆಯೇ ಅಸಾಧಾರಣವಾದ ಗುಣಗಳು ತುಂಬಿರುವುವು ಆದುದರಿಂದ ರಾಮನ ಕಾರ್ಯವನ್ನು ನೀನು ತಪ್ಪದೆ ಈಗಲೇ ನಡೆಸಬೇಕು ಅವನು ಮೊದಲೇ ನಿನ್ನ ಕಾರ್ಯವನ್ನು ನಡೆಸಿಕೊಟ್ಟಿರುವನಲ್ಲವೆ? ಆ ಕೃತಜ್ಞತೆಯನ್ನಾದರೂ ನೀನು ಮನಸ್ಸಿನಲ್ಲಿಟ್ಟು ಸೀತೆಯನ್ನು ಹುಡುಕುವುದಕ್ಕಾಗಿ ವಾನರಸೈನ್ಯವನ್ನು ಕಳುಹಿಸು ಈಗಲೇ ಕಾಲಾತಿಕ್ರಮವಾಗಿದ್ದರೂ ಚಿಂತೆಯಿಲ್ಲ ರಾಮನು ಕೋಪದಿಂದ ಬಂದು ನಮ್ಮನ್ನು ನಿರ್ಬಂಧಿಸುವುದಕ್ಕೆ ಮೊದಲೇ, ನಾವು ಆ ಕಾರ್ಯದಲ್ಲಿ ಪ್ರವರ್ತಿಸಿಬಿಟ್ಟರೆ, ನಮ್ಮ ದೋಷವು ಅಷ್ಟಾಗಿ ಹೊರಬೀಳದು ಈಗಲೂ ನಾವು ಸುಮ್ಮನಿದ್ದು,ಅವನು ಬಂದು ಪ್ರೇರಿಸಿದಮೇಲೆ ಆ ಕಾರ್ಯಕ್ಕಾರಂಭಿಸಿದರೆ ಆಗ ದೋಷಭಾಗಿಗಳಾಗುವೆವು ಎಲೈ ವಾನರೇಂದ್ರನೆ ! ಯಾವುದೊಂದು ಪಕಾರವನ್ನೂ ಮಾಡದವರಿಗೆಕೂಡ ನೀನು ಉಪಕರಿಸುವ ಸ್ವಭಾವವುಳ್ಳವನು ಹೀಗಿರುವಾಗ ನಿನಗೆ ರಾಜ್ಯವನ್ನೂ, ಧನವನ್ನೂ ಕೊಟ್ಟು, ಮಹೋಪಕಾರವನ್ನು ಮಾಡಿದ ಆ ರಾಮನ ವಿಷಯದಲ್ಲಿ ನೀನು ಕೃತಜ್ಞತೆಯನ್ನು ತೋರಿಸಬೇಕೆಂಬುದನ್ನು ಕೇಳಬೇಕೆ? ರಾಮನ ಕಾರ್ಯವನ್ನು ನಡೆಸುವ ವಿಷಯದಲ್ಲಿ ನೀನು ಶಕ್ತಿಯಿಲ್ಲದವನಲ್ಲ ! ನಿನ್ನ ಪರಾಕ್ರಮವೂ ಕಡಿಮೆಯಾದುದಲ್ಲ ಅಸಂಖ್ಯಾತವಾದ ವಾನರಭಲ್ಲೂಕಸಮೂಹವು ನಿನ್ನ ಅಧೀನವಾಗಿರುವುದು ಇಷ್ಟು ಸಹಾಯಸಂಪತ್ತಿರುವಾಗಲೂ, ನೀನು ಆ ರಾಮನ ಮನೋರಥವನ್ನೀಡೇರಿಸದೆ ಸುಮ್ಮನಿರುವುದೇಕೆ? ಎಲೈ ಕಪಿಸಾರ್ವಭೌಮನೆ! ರಾಮನು ತನ್ನಿಂದ ಸಾಧ್ಯವಾಗದುದಕ್ಕಾಗಿ ನಿನ್ನ ಸಹಾಯವನ್ನೇ ನಿರೀಕ್ಷಿಸುತ್ತಿರುವನೆಂದೆಣಿಸಬೇಡ! ಅವನು ತನ್ನ ಬಾಣಗಳಿಂದ ದೇವಾಸುರಮಹೋ

ರಗರನ್ನೂ ವಶಪಡಿಸಿಕೊಳ್ಳಬಲ್ಲನು ಆದರೆ ತಾನು ಸತ್ಯಸಂಧನೆನಿಸಿಕೊಂ ಡಿರುವಂತೆ ಇತರರ ಮಾತನ್ನೂ ಉಳಿಸಬೇಕೆಂಬುದೇ ಅವನ ಉದ್ದೇಶವು. ಆ ದರಿಂದ ನೀನು ಅವನಿಗೆ ಮಾಡಿಕೊಟ್ಟಿರುವ ಪ್ರತಿಜ್ಞೆಯು ಕೆಡಬಾರದೆಂಬು ದಕ್ಕಾಗಿಯೇ ಅವನು ಇದಿರುನೋಡುತ್ತಿರುವನೆಂದು ತಿಳಿ! ತನ್ನ ಪ್ರಾಣಗಳ ಮೇಲೆಯೂ ಲಕ್ಷ್ಯವಿಡದೆ ಆತನು ನಿನಗೆ ಉಪಕಾರವನ್ನು ಮಾಡಿರುವನು ಅಂತವನಿಗಾಗಿ ನಾವು ಸೀತೆಯನ್ನು ಭೂಮ್ಯಾಕಾಶಗಳಲ್ಲಿ ಎಲ್ಲಿದ್ದರೂ ಹು ಡುಕಿ ತರಬೇಡವೆ? ದೇವತೆಗಳಾಗಲಿ, ಗಂಧರ್ವರಾಗಲಿ, ದಾನವರಾಗಲಿ, ಮ ರುದ್ಗಣಗಳಾಗಲಿ, ಆತನನ್ನು ಹೆದರಿಸಲಾರರು ಇನ್ನು ಅವನು ರಾಕ್ಷಸರಿ ಗಂಜುವನೆ? ಆದುದರಿಂದ ರಾಮನು ತಾನಾಗಿ ಶಕ್ತಿಯುಳ್ಳವನಾಗಿದ್ದರೂ ಮೊದಲು ನಿನ್ನ ಕಾರ್ಯವನ್ನು ಈಡೇರಿಸಿಕೊಟ್ಟಿರುವನಾದುದರಿಂದ, ಸರ್ವವಿ ಧದಲ್ಲಿಯೂ ನೀನಾಗಿ ಅವನಿಗೆ ಪ್ರಿಯವನ್ನುಂಟುಮಾಡಬೇಕಾದುದೇ ನ್ಯಾ ಯವು ಎಲೈ ಕಪೀಂದ್ರನೆ! ನೀನುಮಾತ್ರ ಆಜ್ಞೆಯನ್ನು ಕೊಟ್ಟಿಯಾದರೆ, ಪಾ ತಾಳದಲ್ಲಿಯಾಗಲಿ, ಭೂಮಿಯಲ್ಲಿಯಾಗಲಿ, ನೀರಿನಲ್ಲಿಯಾಗಲಿ, ಆಕಾಶದಲ್ಲಿ ಯೇ ಆಗಲಿ ನಮ್ಮ ವಾನರರು ತಡೆಯಿಲ್ಲದೆ ಸಂಚರಿಸಬಲ್ಲರು ನಿನಗೆ ಪ್ರಿಯ ರಾಗಿಯೂ, ಪಾಪದೂರರಾಗಿಯೂ ಎಂತವರಿಗೂ ದುರ್ಜಯರಾಗಿಯೂ ಇರುವ ವಾನರರು ಕೋಟಿಕೋಟಿಸಂಖ್ಯೆಯಿಂದ ನಿನ್ನ ವಶದಲ್ಲಿರುವರು ಆದರೆ ನಿನಗಾಗಿ ಯಾರುಯಾರು ಯಾವಯಾವಕಾರ್ಯವನ್ನು ಮಾಡಬೇಕೆಂ ಬುದನ್ನು ನೀನು ನಿಯಮಿಸಬೇಕು" ಎಂದನು ಹೀಗೆ ಕಾಲೋಚಿತವಾಗಿ ಹೇ ಳಿದ ಹನುಮಂತನ ವಾಕ್ಯವನ್ನು ಕೇಳಿದಮೇಲೆ ಬಲಾಢ್ಯನಾದ ಸುಗ್ರೀವ ನಿಗೆ ಮಿತ್ರಕಾರ್ಯವನ್ನು ನಡೆಸಬೇಕೆಂಬ ಮನಸ್ಸು ಹುಟ್ಟಿತು ಆಗಲೇ ಅ ವನು ತನ್ನ ಮನಃಪ್ರಿಯನಾಗಿಯೂ, ಯಾವಾಗಲೂ, ಕಾರ್ಯೋದ್ಯೋಗಪ ರನಾಗಿಯೂ ಇರುವ ನೀಲನೆಂಬ ವಾನರಸೈನ್ಯಾಧಿಪತಿಯನ್ನು ಕರೆದು, ಸ ಮಸ್ತ ದಿಕ್ಕುಗಳಿಂದಲೂ ಕಪಿಸೈನ್ಯಗಳೆಲ್ಲವನ್ನೂ ಕರೆಸುವಂತೆ ನಿಯಮಿಸಿ ''ಎಲೆ ಸೇನಾಪತಿ! ಯೂಥಪಾಲಕರೊಡನೆ ಸಮಸ್ತವಾನರವೀರರೂ ಇ ಲ್ಲಿಗೆ ಈಗಲೇ ಬಂದು ಸೇರುವಂತೆ ಆಜ್ಞಾಪಿಸು! ಪ್ರಯತ್ನಪರರಾಗಿಯೂ, ಶೀಘ್ರಗಾಮಿಗಳಾಗಿಯೂ ಇರುವ ಸೈನ್ಯಾಧಿಪತಿಗಳು, ಅಲ್ಲಲ್ಲಿರುವ ತಮ್ಮ

ಸೇನೆಯನ್ನೂ ಸೇರಿಸಿಕೊಂಡು,ಈಗಲೇ ಇಲ್ಲಿಗೆ ಬರುವಂತೆ ನಾನು ಆಜ್ಞೆಮಾಡಿರುವುದಾಗಿ ತಿಳಿಸು ಈ ಸಮೀಪಪ್ರದೇಶಗಳಲ್ಲಿರುವ ಸಮಸ್ತ ಸೈನ್ಯಗಳನ್ನೂ ನೀನೇ ಹೋಗಿ ನೋಡಿ ಇಲ್ಲಿಗೆ ತಂದು ಸೇರಿಸು' ಇದು ಮೊದಲು ಇನ್ನು ಹದಿನೈದುದಿನಗಳೊಳಗಾಗಿ ಯಾವವಾನರನು ಇಲ್ಲಿಗೆ ಬಂದು ಸೇರದಿರುವನೋ, ಅವನಿಗೆ ಆ ಕ್ಷಣವೇ ಮರಣಾಂತವಾದ ಶಿಕ್ಷೆಯು ವಿಧಿಸಲ್ಪಡುವುದೆಂದೂ ತಿಳಿಸು ಈ ವಿಷಯದಲ್ಲಿ ಸ್ವಲ್ಪವೂ ಸಂದೇಹಿಸಬೇಕಾದುದಿಲ್ಲ' ನನ್ನ ಆಜ್ಞೆಯು ಎಂದಿಗೂ ಮಾರ್ಪಡದು ಆದುದರಿಂದ ನೀನು ಸನ್ನಾಜ್ಞೆಯಂತೆ ಅಂಗದನನ್ನೂ ಸಂಗಡಕರೆದುಕೊಂಡು, ಸಮಸ್ತ ವಾನರರಲ್ಲಿಗೂ, ವೃದ್ಧನಾದ ಜಾಂಬವಂತನೇ ಮೊದಲಾದವರಲ್ಲಿಗೂ ಹೋಗಿ, ಈ ನನ್ನಾಜ್ಞೆಯನ್ನು ತಿಳಿಸಿ ಬಾ" ಎಂದನು ಹೀಗೆ ವೀರ್ಯವಂತನಾದ ಸುಗ್ರೀವನು ವ್ಯವಸ್ಥೆಯನ್ನು ಮಾಡಿ ಹಿಂತಿರುಗಿ ತನ್ನ ಅಂತಃಪುರವನ್ನು ಪ್ರವೇಶಿಸಿದನು ಇಲ್ಲಿಗೆ ಇಪ್ಪತ್ತೊಂಬತ್ತನೆಯಸರ್ಗವು

ಶರತ್ಕಾಲವರ್ಣನೆಯು ಸುಗ್ರೀವನು ತಿರುಗಿ ಕಾಮಾಸಕ್ತನಾಗಿ ಸುಮ್ಮನಿರುವುದನ್ನು ನೋಡಿ ರಾಮನು ಕೋಪಗೊಂಡುದು

ಅತ್ತಲಾಗಿ ಸುಗ್ರೀವನು ಹೋಗಿ ಗುಹೆಯಲ್ಲಿ ಸೇರಿಬಿಟ್ಟನು ಸ್ವಲ್ಪವೂ ಮೇಘಗಳಿಲ್ಲದೆ ಆಕಾಶವು ನಿರ್ಮಲವಾಗುತ್ತ ಬಂದಿತು ರಾಮನು ಹಿಂದಿನ ಮಳೆಗಾಲವೆಲ್ಲವನ್ನೂ ವಿಶೇಷವಾದ ಮನ್ಮಥವೇದನೆಯಿಂದಲೇ ಕಳೆಯುತ್ತಿದ್ದನು ಅದರಮೇಲೆ ಈಗ ನಿರ್ಮಲವಾದ ಆಕಾಶವನ್ನೂ, ಸ್ವಚ್ಛವಾದ ಚಂದ್ರಬಿಂಬವನ್ನೂ, ಬೆಳ್ದಿಂಗಳಿಂದ ಮನೋಹರಬಾದ ಶರತ್ಕಾಲದ ರಾತ್ರಿಯನ್ನೂ ನೋಡಿದಮೇಲೆ ಅವನಿಗೆ ಮೊದಲಿಗಿಂತಲೂ ಕಾಮತಾಪವು ಹೆಚ್ಚಿ ಬರುತಿತ್ತು ಆತ್ತಲಾಗಿ ಸುಗ್ರೀವನು ಕಾಮವೆಶನಾಗಿರುವುದನ್ನೂ, ಇತ್ತಲಾಗಿ ತಾನು ಸೀತೆಯನ್ನು ಕಳೆದುಕೊಂಡು ಕಷ್ಟಪಡುವುದನ್ನೂ ನೆನೆಸಿಕೊಂಡನು ಸುಗ್ರೀವನು ತನಗೆ ಹೇಳಿದ್ದ ಸಂಕೇತಕಾಲವೂ ಕಳೆದುಹೋಯಿತು.ಇದೆಲ್ಲವನ್ನೂನೋಡಿ ರಾಮನಿಗೆ ತಡೆಯಲಾರ

ದ ಸಂಕಟವುಂಟಾಯಿತು ಹಾಗೆಯೇ ಮೂರ್ಛೆಹೋದನು ಆದರೆ ಆತನುಧೀರನಾದುದರಿಂದ, ಮೂಹೂರ್ತದೊಳಗಾಗಿ ಪುನಃ ಚೇತರಿಸಿಕೊಂಡು, ಸೀತೆಯು ತನ್ನ ಮನಸ್ಸಿನಲ್ಲಿಯೇ ಇರುತಿದ್ದರೂ ಆವಳ ವಿಷಯವಾದ ಚಿಂತೆಯನ್ನು ತಂದುಕೊಂಡು ಕೊರಗುತಿದ್ದನು ಸುವರ್ಣದಿಂದಲೂ, ಗೈರಿಕಾದಿ ಧಾತುಗಳಿಂದಲೂ ವಿಚಿತ್ರಿತವಾದ ಆಪರ್ವತದ ಒಂದುತೆಖರದಮೇಲೆ ಕುಳಿತು, ಶರತ್ಕಾಲಸಂಬಂಧದಿಂದ ನಿರ್ಮಲವಾದ ಆಕಾಶವನ್ನು ನೋಡಿದನು ಆ ಸನ್ನಿವೇಶದ ಸೂಗಸನ್ನು ನೋಡಿದಷ್ಟೂ ಇವನಿಗೆ ಸೀತೆಯ ಚಿಂತೆಯು ಪ್ರಬಲವಾಗಿಹೋಯಿತು ಏಂಜುಮೋಡಗಳಿಲ್ಲದೆ ನಿರ್ಮಲವಾದ ಆಕಾಶವನ್ನೂ, ಆಲ್ಲಲ್ಲಿ ಕೂಗುತ್ತಿರುವ ಸಾರಸಪಕ್ಷಿಗಳ ಕಿವಿಗಿಂಪಾದ ಕೂಗನ್ನೂ ಕೇಳಿ ಅತಿದುಃಖದಿಂದ ವಿಲಪಿಸುತಿದ್ದನು ಆಗ ಅವನು ತನ್ನ ಮನಸ್ಸಿನಲ್ಲಿ ,,ಆಹಾ! ಈ ಸಾರಸಪಕ್ಷಿಯಂತೆಯೇ ಇಂಪಾದ ಧ್ವನಿಯೆಳ್ಳ ನನ್ನ ಪ್ರಿಯೆಯು, ಮೊದಲು ಈ ಪಕ್ಷಿಗಳ ಧ್ವನಿಯನ್ನು ಕೇಳಿದೊಡನೆ ಎಷ್ಟೋ ಆನಂದಿಸುತಿದ್ದಳು ಈಗ ಯಾವಾಗಲೂ ರಾಕ್ಷಸರ ಕ್ರೂರವಚನಗಳನ್ನು ಕೇಳುತ್ತಿರುವ ಆಕೆಗೆ ಯಾವವಿಧದಲ್ಲಿ ಸಂತೋಷವುಂಟು! ಬಂಗಾರದಂತೆ ನಿರ್ಮಲವಾಗಿ ಹೊಳೆಯುತ್ತಿರುವ ಈಗಿನ ಬಂಥೂಕಪುಷ್ಪಗಳನ್ನು ನೋಡಿಯೂ,ಅಪ್ರಿಯೆಯಾದ ನನ್ನನ್ನು ನೋಡದಿದ್ದರೆ ಹೇಗೆ ಸಂತೋಷಹೊಂದುವಳು! ಇಂಪಾದ ಮುದ್ದು ಮಾತುಗಳುಳ್ಳವಳಾಗಿ,ಯಾವ ಅವಯವಗಳಲ್ಲಿಯೂ ಕಂದುಕುಂದಿಲ್ಲದ ಆ ನನ್ನ ಕಾಂತೆಯು, ಮೊದಲು ಇಂತಹ ಕಲಹಂಸಗಳ ಧ್ವನಿಯನ್ನು ಕೇಳಿದೊಡನೆ ಎಚ್ಚರಗೊಳ್ಳುತಿದ್ದಳಲ್ಲಾ! ಈಗ ಹೇಗೆ ಎಚ್ಚರಗೊಳ್ಳುವಳು?ತನ್ನ ಸುತ್ತಲೂ ಸಂಚರಿಸುತಿದ್ದ ಚಕ್ರವಾಕಪಕ್ಷಿಗಳ ಧ್ವನಿಯನ್ನು ಕೇಳಿ ಸಂತೋಷಿಸುತಿದ್ದಪುಂಡರೀಕಾಕ್ಷಿಯಾದ ಆ ನನ್ನ ಪ್ರಿಯೆಯು ಇನ್ನು ಬದುಕಿರುವ ಬಗೆಯೇನು? ಜಿಂಕೆಯ ಕಣ್ಣಿನಂತೆ ಕಣ್ಣುಳ್ಳ ಆನನ್ನ ಪ್ರಿಯೆಯಿಲ್ಲದುದರಿಂದ,ಮನೋಹರಗಳಾದ ಇಲ್ಲಿನ ಕೊಳಗಳೂ,ನದಿಗಳೂ, ಬಾವಿಗಳೂ, ಆಡವಿಗಳೂ, ತೋಟಗಳೂ ನನಗೆ ಸ್ವಲ್ಪವಾದರೂ ಹಿತಕರವಾಗಿಲ್ಲ ಈಶರತ್ಕಾಲದಲ್ಲಿ, ವಿರಹಿಗಳಿಗೆ ವಿಶೇಷವಾದ ಉದ್ದೀಪನವನ್ನು ಂಟುಮಾಡುವ ಈಪರಿಕರಗಳನ್ನಿಟ್ಟುಕೊಂಡಿರುವ ಮನ್ಮಥನು, ಸುಕುಮಾರಾಂಗಿಯಾದ ಆ ಸೀತೆಯು ನನ್ನನ್ನಗಲಿರುವ

ಕಾಲದಲ್ಲಿ ಆಕೆಯನ್ನು ಬಾಧಿಸದೆ ಸುಮ್ಮನಿರುವನೆ!ಎಂದಿಗೂ ಇರಲಾರನು ಆ ವಳಿಗೆ ಪ್ರಾಣಾಂತಕರವಾದ ವಿಪತ್ತನ್ನೇ ತಂದಿಡುವನು"ಎಂದುನಾನಾವಿಧ ದಿಂದ ವಿಲಪಿಸುತಿದ್ದನು ಜಾತಕಪಕ್ಷಿಯು,ಮಳೆಯ ನೀರಿಗಾಗಿ ಇಂದ್ರನನ್ನು ಕುರಿತು ಕೂಗಿಡುವಂತೆ,ಪುರುಷಶ್ರೇಷ್ಠನಾದ ರಾಮನು ಹೀಗೆ ನಾನಾವಿಧದ ಲ್ಲಿ ದೈನ್ಯದಿಂದ ವಿಲಪಿಸುತ್ತಿರಲು, ಇಷ್ಟರಲ್ಲಿ ಆ ಬೆಟ್ಟದ ತಪ್ಪಲುಗಳಲ್ಲಿಹ ಣ್ಣುಗಳನ್ನು ಕಿತ್ತುತರುವುದಕ್ಕಾಗಿ ಹೋಗಿದ್ದ ಲಕ್ಷ್ಮಣನು,ಅಲ್ಲಲ್ಲಿಸುತ್ತಿಹಿಂ ತಿರುಗಿ ಬಂದು,ದೈನ್ಯದಿಂದ ಕೊರಗುತ್ತಿರುವ ಅಣ್ಣನ ಸ್ಥಿತಿಯನ್ನು ನೋಡಿದ ನು ಯಾರೂ ಇಲ್ಲದ ಸ್ಥಳದಲ್ಲಿ ಏಕಾಕಿಯಾಗಿ ಕುಳಿತು,ಸಹಿಸಲಾರದ ಸಂಕ ಟದಿಂದ ಕೊರಗುತ್ತ,ಪ್ರಜ್ಞೆತಪ್ಪಿದವನಂತಿರುವ ರಾಮನಸ್ಥಿತಿಯನ್ನೂ,ಅವನ ದುಃಖವನ್ನೂ ನೋಡಿ ಲಕ್ಷ್ಮಣನಿಗೆ ಬಹಳಸಂಕಟವುಂಟಾಯಿತು ಧೀರಮ ನಸ್ಸುಳ್ಳ ಆ ಸೌಮಿತ್ರಿಯು ರಾಮನನ್ನು ಕುರಿತು ,,ಅಣ್ಣಾ!ಇದೇನು?ಬಹಳ ಚೆನ್ನಾಯಿತು!ನೀನೂ ಹೀಗೆ ಕಾಮಪರವಶನಾಗಿರುವುದೆಂದರೇನು?ನಿನ್ನ ಸಹ ಜವಾದ ಪೌರುಷವನ್ನು ಬಿಡುವುದೆಂದರೇನು? ಧೈರ್ಯವೆಂಬುದನ್ನು ಆಗಾಗ ಎಷ್ಟೋ ಪ್ರಯತ್ನದಿಂದ ಸಾಧಿಸಿಕೊಳ್ಳಬೇಕು ನೀನು ಅದರಲ್ಲಿಯೂ ಈ ಕಾಲದಲ್ಲಿ ಅಂತಹ ಧೈರ್ಯವನ್ನೇ ಬಿಟ್ಟಮೇಲೆ ಇನ್ನೇನಿರುವುದು ಮುಂದೆ ನಡೆಯಬೇಕಾದ ಕಾರ್ಯವನ್ನು ನೋಡು ! ಮನಸ್ಸನ್ನು ಪ್ರಸ ನ್ನವಾಗಿಸು ! ಕಾಲೋಚಿತವಾದ ಧೈರ್ಯೋಪಾಯಗಳನ್ನವಲಂಬಿಸು ! ನಿನಗೆ ಸಹಾಯಕರಾದ ಸುಗ್ರೀವಾದಿಗಳ ಸಾಮರ್ಥ್ಯವನ್ನೂ ಚೆನ್ನಾಗಿ ಪರ್ಯಾ ಲೋಚಿಸಿ, ಧೈರ್ಯಗೊಂಡು, ನಮ್ಮ ಕಾರ್ಯಸಿದ್ಧಿಗೆ ಸಾಧನಗಳಾದ ದೇವತಾ ಪ್ರಾರ್ಥನಾದಿಕರ್ಮಗಳಲ್ಲಿ ಮನಸ್ಸಿಡು! ಈಗ ನಾವು ನಡೆಸಬೇಕಾದ ಕಾರ್ಯ ವೇನೆಂಬುದನ್ನುನೋಡು ಎಲೆವೀರನೆ! ನೀನು ನಾಥನಾಗಿರುವಾಗ ಸೀತೆ ಯನ್ನು ದಕ್ಕಿಸಿಕೊಳ್ಳಬೇಕೆಂದರೆ ಮತ್ತೊಬ್ಬನಿಗೆ ಸಾಧ್ಯವೆ ? ಅಗ್ನಿಜ್ವಾಲೆ ಯನ್ನು ಕೈಯಿಂದಮುಟ್ಟಿ,ಕೈಸುಡಿಸಿಕೊಳ್ಳದಿರುವನಾವನುಂಟು?"ಎಂದನು ಹೀಗೆ ಲಕ್ಷ್ಮಣನು, ಕಾಲೋಚಿತವಾಗಿಯೂ, ಹಿತವಾಗಿಯೂ, ನೀತಿಯುಕ್ತ ವಾಗಿಯೂ, ಧರ್ಮಾರ್ಥಸಹಿತವಾಗಿಯೂ ಹೇಳಿದ ಮಾತನ್ನು ಕೇಳಿ ರಾಮನು, ಆತನನ್ನು ಕುರಿತು,,ಎಲೈ ವತ್ಸನೆ! ನೀನು ಹೇಳಿದಂತೆ ಉದ್ದೇ

ತಿಸಿವ ಕಾರ್ಯವನ್ನು ತಕ್ಕ ಧೈರ್ಯದಿಂದ ಸಾಧಿಸಬೇಕೆಂಬುದೇ ನ್ಯಾಯವು' ಇದರಲ್ಲಿ ಸಂದೇಹವಿಲ್ಲ ಆ ಕಾರ್ಯಸಾಧನೆಗೆ ಬೇಕಾದ ಉತ್ಸಾಹಾದಿಸಾಧನಗಳೂ ಇರಬೇಕಾದುದೇ ನ್ಯಾಯವು ಈಗ ನಾವು ಉದ್ದೇಶಿಸಿರುವ ಕಾರ್ಯವು ಫಲಿಸಬೇಕಾದ ರೀತಿಯಾವುದೆಂಬುದನ್ನು ಆಲೋಚಿಸಬೇಕಾದುದೂ ಅವಶ್ಯವಲ್ಲವೆ?" ಎಂದನು ಹೀಗೆಂದು ಹೇಳಿ ರಾಮನು ಪುನಃ ಪತ್ನಿಯಾದ ಸೀತೆಯನ್ನೇ ಚಿಂತಿಸುತ್ತ, ಬಾಡಿದ ಮುಖದಿಂದ ಲಕ್ಷ್ಮಣನನ್ನುಕುರಿತು ,,ಎಲೆ ವತ್ಸನೆ! ದೇವೇಂದ್ರನು ಭೂಮಿಗೆ ಬೇಕಾದಷ್ಟು ಮಳೆಯನ್ನು ಸುರಿಸಿ, ತಂಪೇರಿಸಿ, ಪೈರುಗಳಿಗೂ ಉಲ್ಲಾಸವನ್ನು ಕೊಟ್ಟು,ಈಗ ಕೃತಕೃತ್ಯನಾಗಿರುವನು ಮೇಘುಗಳೂಕೂಡ ಇಂಪಾದ ಗಂಭೀರಧ್ವನಿಗಳನ್ನು ತೋರಿಸುತ್ತ, ಪರ್ವತಗಳಮೇಲೆಯೂ,ಮರಗಳಮೇಲೆಯೂ ಸಂಚರಿಸಿ, ಬೇಕಾದಷ್ಟು ಮಳೆಯನ್ನೂ ಸುರಿಸಿ,ಆ ಆಯಾಸದಿಂದ ಬಳಲಿದಂತೆ ಈಗ ವಿಶ್ರಾಂತಿಯನ್ನು ಹೊಂದಿರುವುವು. ನೀಲೋತ್ಪಲದಳಗಳಂತೆ ಶ್ಯಾಮವರ್ಣವುಳ್ಳ ಮೋಡಗಳು ಇದುವರಗೂ ಸಮಸ್ತದಿಕ್ಕುಗಳನ್ನೂ ತಮ್ಮಬಣ್ಣದಿಂದ ಕಪ್ಪಾಗಿಸಿದ್ದರೂ, ಈಗ ಮದವುಡುಗಿದ ಆನೆಗಳಂತೆ ಶಾಂತವಾಗಿರುವುವು ಮಳೆಗಾಳಿಯೂಕೂಡ ಇದುವರೆಗೆ ಜಲಮಿಶ್ರಿತವಾಗಿ, ಗಿರಿಮಲ್ಲಿಗೆ ಮೊದಲಾದ ಹೂಗಳ ಸುವಾಸನೆಯನ್ನು ಹರಡುತ್ತ ಅತಿವೇಗದಿಂದ ಎಡೆಬಿಡದೆ ಬೀಸುತಿದ್ದು ಈಗ ಶಾಂತವಾಗಿರುವುದು ಮೇಘುಗಳೂ, ಆನೆಗಳೂ, ನವಿಲುಗಳೂ, ಪ್ರವಾಹಗಳೂ ಇದುವರೆಗೆ ಅಟ್ಟಹಾಸದಿಂದ ತೋರಿಸುತಿದ್ದ ಮೊರೆತಗಳೆಲ್ಲವೂ ಈಗ ಅಡಗಿಹೋಗಿರುವುವು ಸುತ್ತಲೂ ಮೇಘುಗಳು ವರ್ಷಿಸಿರುವುದರಿಂದ ಕೊಳೆಯಿಲ್ಲದೆ ಸ್ವಚ್ಛವಾಗಿರುವ ಈ ಬೆಟ್ಟದ ತಪ್ಪಲುಗಳಲ್ಲಿ,ಬಗೆಬಗೆಯ ಬಣ್ಣಗಳುಳ್ಳ ಗೈರಿಕಾದಿಧಾತುಗಳು ಸ್ಪಷ್ಟವಾಗಿ ಕಾಣುತ್ತಿರುವುದರಿಂದ, ಇವು ನಾಲ್ಕುಕಡೆಗಳಿಗೂ ಬಣ್ಣವನ್ನು ಲೇಪಿಸಿ ಅಲಂಕರಿಸಿದಂತೆ ಕಾಣುವುದು ಪ್ರಥಮಸಂಭೋಗಕ್ಕೆ ಬಂದ ಸ್ತ್ರೀಯರು ಲಜ್ಜೆಯಿಂದ ಸ್ವಲ್ಪಸ್ವಲ್ಪವಾಗಿ ತಮ್ಮ ಜಘನಗಳನ್ನು ತೆರೆಯುವಂತೆ,ನದಿಗಳಲ್ಲಿ ಮೆಲ್ಲಮೆಲ್ಲಗೆ ನೀರಿಳಿದು,ಅಲ್ಲಲ್ಲಿನ ಮಳಲುದಿಣ್ಣೆಗಳು ಕ್ರಮಕ್ರಮವಾಗಿ ಹೊರಕ್ಕೆ ಕಾಣುವುವು ,ಎಲೆ ವತ್ಸನೆ! ಈಗಿನ ಶರತ್ಕಾಲವು,ಎಳೆಲೆಬಾಳೆಗಳ ಕೊಂಬೆಗಳಲ್ಲಿಯೂ

ಸೂರ್ಯಚಂದ್ರನಕ್ಷತ್ರಗಳ ಕಾಂತಿಗಳಲ್ಲಿಯೂ, ವಾನರಶ್ರೇಷ್ಠರ ಲೀಲೆಗಳಲ್ಲಿಯೂ ತನ್ನ ಕಾಂತಿಯನ್ನು ವಿಭಾಗಿಸಿಟ್ಟಂತೆ ಪ್ರಕಾಶಿಸುತ್ತಿರುವುದುನೋಡು. ಶರತ್ಕಾಲದ ಗುಣದಿಂದ ಉತ್ಕರ್ಷವನ್ನು ಹೊಂದಿದ ಈಗಿನ ದಿನಲಕ್ಷ್ಮ್ಯಯು, ಸೂರ್ಯಕಿರಣಗಳ ಸ್ಪರ್ಶದಿಂದ ವಿಕಸಿತವಾದ ತಾವರೆಕೊಳಗಳಲ್ಲಿ, ಕಪ್ಪು, ಕೆಂಪು, ಬಿಳುಪು, ಮುಂತಾದ ಬಣ್ಣಗಳುಳ್ಳ ತಾವರೆಗಳಿಂದ ವಿಚಿತ್ರಶೋಭೆಯನ್ನು ಹೊಂದಿ ವಿಶೇಷವಾಗಿ ಪ್ರಕಾಶಿಸುವುದು ಈಗ ವನದಲ್ಲಿ ಬೀಸುವ ಗಾಳಿಯು ಏಳೆಲೆಬಾಳೆಯ ಹೂಗಳ ಸುವಾಸನೆಯಿಂದಲೂ, ಭ್ರಮರಗಳ ಝೇಂಕಾರದಿಂದಲೂ ಇಲ್ಲಿನ ಮದದಾನೆಗಳ ಮದವನ್ನು ಮತ್ತಷ್ಟು ಹೆಚ್ಚಿಸುತ್ತಿರುವುದು ಅಲ್ಲಲ್ಲಿ ಹಂಸದಂಪತಿಗಳೂ, ಚಕ್ರವಾಕದಂಪತಿಗಳೂ ಜತೆಜತೆಯಾಗಿ ಸೇರಿ,ಪ್ರೀತಿಯಿಂದ ಒಂದಕ್ಕೊಂದು ಇದಿರಾಗಿ ಕುಳಿತು,ಕಮಲಧೂಳಿಗಳಿಂದ ತುಂಬಿದ ಗರಿಗಳನ್ನು ಬಿಚ್ಚಿಕೊಂಡು ನದೀತೀರದ ಮಳಲು ದಿಣ್ಣೆಗಳಮೇಲೆ ಆನಂದದಿಂದ ವಿಹರಿಸುತ್ತಿರುವುವು ವಿಶೇಷವಾಗಿ ಮದವೇರಿದ ಆನೆಗಳಲ್ಲಿಯೂ, ಕೊಬ್ಬಿದ ಎತ್ತುಗಳ ಮಂದೆಯಲ್ಲಿಯೂ, ಸ್ವಚ್ಛವಾದ ನೀರುಳ್ಳ ನದಿಗಳಲ್ಲಿಯೂ ಈ ಶರತ್ಕಾಲದ ಸೊಬಗನ್ನು ಅನೇಕವಿಧವಾಗಿ ವಿಭಾಗಿಸಿಟ್ಟಂತಿರುವುದು ಆಕಾಶದಲ್ಲಿ ಮೇಘಗಳಿಲ್ಲದುದನ್ನು ನೋಡಿ,ಕಾಡಿನಲ್ಲಿರುವ ನವಿಲುಗಳು, ವ್ಯಸನದಿಂದ ತಮಗಲಂಕಾರಭೂತಗಳಾದ ಗರಿಗಳನ್ನುಡುಗಿಸಿಕೊಂಡು, ತಮ್ಮ ಪ್ರಿಯೆಯರಲ್ಲಿಯೂ ಆಸಕ್ತಿಯನ್ನು ಬಿಟ್ಟು, ಕಾಂತಿಗುಂದಿ, ಅಂದಗೆಟ್ಟು, ಕೇಕಾಧ್ವನಿಯನ್ನೂ ತೋರಿಸದೆ ಚಿಂತಾಕುಲವಾಗಿ ಏನೋಧ್ಯಾನವನ್ನು ಮಾಡುವಂತಿರುವುವು ಮನೋಹರವಾದ ಸುವಾಸನೆಯುಳ್ಳುದಾಗಿಯೂ, ಹೂಗಳ ಭಾರದಿಂದ ಬಗ್ಗಿದ ಕೊನೆಗಳುಳ್ಳುದಾಗಿಯೂ, ಬಂಗಾರದ ಬಣ್ಣವುಳ್ಳುದಾಗಿಯೂ, ನೇತ್ರಾನಂದಕರವಾಗಿಯೂ ಇರುವ ಅನೇಕಬಂಧೂಕಪುಷ್ಪಸಮೂಹದಿಂದ ಇಲ್ಲಿನ ಅರಣ್ಯಗಳಿಗೆ ದೀಪವಿಟ್ಟಂತೆ ಒಂದು ಅಪೂರ್ವಶೋಭೆಯುಂಟಾಗಿರುವುದು ನೋಡು ಇದೋ! ಆನೆಗಳು ತಮ್ಮತಮ್ಮ ಹೆಣ್ಣಾನೆಗಳೊಡಗೂಡಿ ತಾವರೆಕೊಳಗಳಲ್ಲಿಯೂ, ವನಗಳಲ್ಲಿಯೂ ವಿಹರಿಸಬೇಕೆಂಬ ಆತುರದಿಂದ,ಅಲ್ಲಲ್ಲಿ ಸುತ್ತುತ್ತ,ಮದವೇರಿದವುಗಳಾಗಿ,ಗಂಡಸ್ಥಲಗಳಿಂದ ಮದಜಲವನ್ನು ಸುರಿಸುತ್ತ,ಮೆ

ಲ್ಲಗೆ ಸಂಚರಿಸುವುವು.ಆಕಾಶವು ತೊಳೆದ ಕತ್ತಿಯಂತೆ ಮೋಡಗಳಿಲ್ಲದೆ ಎಷ್ಟು ಶುದ್ಧವಾಗಿರುವುದು ನೋಡು ನದೀಪ್ರವಾಹಗಳೆಲ್ಲವೂ ಸಣ್ಣನಾಗುತ್ತಬರುವುವು ಗಾಳಿಯು ಸೌಗಂಧಿಕಪುಷ್ಪಗಳ ವಾಸನೆಯೊಡಗೂಡಿ ಬೀಸುತ್ತಿರುವುದು ದಿಕ್ಕುಗಳೆಲ್ಲವೂ ಕತ್ತಲೆಯಡಗಿ ಪ್ರಕಾಶಮಾನವಾಗಿರುವುವು ' ಬಿಸಿಲು ಕಾಯುತ್ತಿರುವುದರಿಂದ ನೆಲದ ಕಸರೆಲ್ಲವೂ ಒಣಗಿರುವುದು ಈಗಲೇ ನೆಲದಿಂದ ಧೂಳಿಯು ಸ್ವಲ್ಪಸ್ವಲ್ಪವಾಗಿ ಏಳುತ್ತಿರುವುದು ಪರಸ್ಪರವೈರದಿಂದಲೂ, ಕೋಪದಿಂದಲೂ, ಕಾದಿರುವ ರಾಜರಿಗೆ ಹಗೆತೀರಿಸಿಕೊಳ್ಳುವುದಕ್ಕೆ ತಕ್ಕಸಮಯವು ಬಂದೊದಗಿರುವುದು ಅಲ್ಲಲ್ಲಿ ಗೋವುಗಳ ಮಂದೆಯನಡುವೆ ಗರ್ಜಿಸುತ್ತಿರುವ ವೃಷಭಗಳನ್ನು ನೋಡು' ಈ ಶರತ್ಕಾಲದಿಂದ ಆವುಗಳ ರೂಪವೂ ಕಾಂತಿಯೂ ಹೆಚ್ಚಿರುವುದಲ್ಲದೆ, ಇವುಗಳ ಸಂತೋಷಕ್ಕೆ ಪಾರವೇಇಲ್ಲದಿರುವುದು ಇವು ಮೈನವೆಯನ್ನಾರಿಸುವುದಕ್ಕಾಗಿ ಮಣ್ಣನ್ನು ತಿವಿದು, ಆ ಧೂಳಿನಿಂದ ತುಂಬಿದ ದೇಹವುಳ್ಳವುಗಳಾಗಿ ಮದದಕೂಬ್ಬಿನಿಂದ ಹೋರಾಟಕ್ಕೆ ಸಿದ್ಧವಾಗಿನಿಂತಿರುವುವುನೋಡು ಕಾಡಿನಲ್ಲಿ ಆನೆಗಳೆಲ್ಲವೂಮದದಿಂದ ಕೊಬ್ಬಿ ತಮ್ಮತಮ್ಮ ಹಿಂಡುಗಳೊಡಗೂಡಿ ಹೋಗುವಾಗ, ಕಾಮಪೀಡಿತವಾಗಿ ಮೆಲ್ಲಗೆ ನಡೆಯುತ್ತಿರುವ ಗಂಡಾನೆಯನ್ನು,ಹೆಣ್ಣಾನೆಗಳು ಎಡೆಬಿಡದೆ ಹಿಂಬಾಲಿಸುತ್ತಿರುವುವು ನೋಡು ಮೊದಲು ಧನವಂತರಾಗಿದ್ದು ಕೂನೆಗೆ ಕಾಲಪರ್ಯಯದಿಂದ ದರಿದ್ರರಾದವರು, ಹೊಸಹಣಗಾರರು ತಮಗೆ ಮಾಡುವ ಅವಮಾನಕ್ಕೆ ಯಾವ ಪ್ರತಿಕ್ರಿಯೆಯನ್ನೂ ಮಾಡಲಾರದೆ,ಮನಸ್ಸಿನಲ್ಲಿಯೇ ಕೊರಗುತ್ತ,ದೈನ್ಯದಿಂದ ಸುಮ್ಮನಿರುವಂತೆ.ಈಗ ನವಿಲುಗಳು ತನುಗೆ ಅಲಂಕಾರವಾದ ಗರಿಗಳನ್ನೂ ಬಿಚ್ಚಲಾರದೆ ಉಡುಗಿಸಿಕೊಂಡು, ಈ ಶರತ್ಕಾಲದ ಸಂಬಂಧದಿಂದ ಗರ್ವಹೊಂದಿದ ಹಂಸಗಳು ತಮ್ಮನ್ನು ಹೆದರಿಸುವಂತೆ ಕೂಗುತಿದ್ದರೂ ಕೋಪಿಸದೆ, ದೈನ್ಯದಿಂದ ಸುಮ್ಮನೆ ಹೋಗುತ್ತಿರುವುವು ಮದವೇರಿದ ಆನೆಗಳು ತಾವರೆಗಳಿಂದ ಶೋಭಿಸುತ್ತಿರುವ ಕೊಳಗಳಲ್ಲಿ ಪ್ರವೇತಿಸಿ, ಅಲ್ಲಿರುವ ಕಾರಂಡವಗಳನ್ನೂ, ಚಕ್ರವಾಕಗಳನ್ನೂ ತಮ್ಮ ಮಹಾಧ್ವನಿಗಳಿಂದ ಹೆದರಿಸುತ್ತ,ಆ ಕೊಳವನ್ನು ಕಲಕಿ ನೀರನ್ನು ಕುಡಿಯುತ್ತಿರುವುವು ಈ ಕಾಲದಲ್ಲಿ ಹಂಸಗಳು ಕೆಸರಿಲ್ಲದೆ ಸ್ವಚ್ಛವಾದ ನೀರುಳ್ಳ

ದಾಗಿಯೂ, ಮಳಲುದಿಣ್ಣೆಗಳಿಂದ ಕೂಡಿದುದಾಗಿಯೂ, ಗೋಸಮೂಹಗಳಿಂದ ಪರಿವೃತವಾಗಿಯೂ,ಸಾರಸಪಕ್ಷಿಗಳಧ್ವನಿಗಳಿಂದ ಶೋಭಿತವಾಗಿಯೂ ಇರುವ ನದಿಗಳಲ್ಲಿ ಎಷ್ಟೋ ಸಂತೋಷದಿಂದ ಈಜಾಡುತ್ತಿರುವುವು ಈಗ ನದಿಗಳಲ್ಲಿಯೂ,ಮೇಘುಗಳಲ್ಲಿಯೂ, ಗಿರಿನದಿಗಳಲ್ಲಿಯೂ, ಗಾಳಿಯಲ್ಲಿಯೂ, ನವಿಲುಗಳಲ್ಲಿಯೂ, ಮೊದಲಿದ್ದ ಸದ್ದಡಗಿ ಶಾಂತವಾಗಿರುವುದು ಕಪಿಗಳಲ್ಲಿಯೂ ಉತ್ಸಾಹವು ತಪ್ಪಿ ಅವುಗಳ ಧ್ವನಿಯೂ ಅಡಗಿ ಹೋಗಿರುವುದು ಇದಕ್ಕೆ ಮೊದಲು ಆಕಾಶದಲ್ಲಿ ಮೇಘುಗಳು ತುಂಬಿ ಎಡೆಬಿಡದೆ ಮಳೆಯು ಸುರಿಯುತಿದ್ದುದರಿಂದ, ಇದುವರಗೂ ಹೊರಕ್ಕೆ ಬಾರದೆ ಬಿಲದಲ್ಲಿಯೇ ಅಡಗಿ, ಆಹಾರವೂ ಇಲ್ಲದೆ, ಹಸಿವಿನಿಂದ ಕೃಶವಾದ ದೇಹವುಳ್ಳವುಗಳಾಗಿದ್ದ ಬಗೆಬಗೆಯ ಬಣ್ಣದಿಂದ ಕೂಡಿದ ವಿಷಸರ್ಪಗಳು, ಈಗ ಅತ್ಯಾತುರದಿಂದ ತಮ್ಮ ಬಿಲವನ್ನು ಬಿಟ್ಟು ಹೊರಟು, ಸುತ್ತಲೂ ವ್ಯಾಪಿಸುತ್ತಿರುವುವು- ವತ್ಸನೆ! ಈ ವೈಚಿತ್ರ್ಯವನ್ನು ನೋಡಿದೆಯಾ ? ಸ್ವಭಾವದಿಂದಲೇ ರಾಗವಿಶಿಷ್ಟವಾದ (ಕಂಪಾದ) ಸಂಜೆಯು, ಈಗ ಚಂದ್ರನ ಕರಗಳ (ಕೈಗಳ) ಸ್ಪರ್ಶದಿಂದ ಆನಂದಪರವಶವಾಗಿ, ನಕ್ಷತ್ರಗಳೆಂಬ ಅರಳಿದ ಕಣ್ಣುಳ್ಳುದಾಗಿ, ತಾನಾಗಿಯೇ ಅಂಬರವನ್ನು ಬಿಟ್ಟು (ಉಟ್ಟಬಟ್ಟೆಯನ್ನು ಸಡಿಲಿಸಿಕೊಂಡು) ಹೋಗುವುದನ್ನು ನೋಡಿದೆಯಾ? ಚಂದ್ರನೆಂಬ ಪ್ರಸನ್ನಮುಖದಿಂದಲೂ, ನಕ್ಷತ್ರಗಳೆಂಬ ಬಿಚ್ಚಿದ ಕಣ್ಣುಗಳಿಂದಲೂ, ಬೆಳ್ದಿಂಗಳಂಬ ಬಟ್ಟೆಯಿಂದಲೂ ಶೋಭಿಸುವ ಈ ರಾತ್ರಿಯು, ದುಕೂಲವನ್ನುಟ್ಟ ಒಬ್ಬಸುಂದರಿಯಂತೆ ಕಾಣುವುದು ಮನೋಹರವಾದ ಈ ಸಾರಸಪಕ್ಷಿಗಳ ಸಮೂಹವು ಚೆನ್ನಾಗಿ ಪಕ್ವವಾದ ಧಾನ್ಯಗಳನ್ನು ಬಾಯಲ್ಲಿ ತುಂಬಿಕೊಂಡು, ಸಂತೋಷದಿಂದ ಆಕಾಶದಲ್ಲಿ ಸುತ್ತುವುದನ್ನು ನೋಡಿದರ, ಆಕಾಶಕ್ಕೆ ಅಲಂಕಾರಾರ್ಥವಾಗಿ ಕಟ್ಟಿಟ್ಟ ಪುಷ್ಪಮಾಲಿಕೆಯು ಗಾಳಿಯಿಂದಾಡುವಂತೆ ತೋರುವುದು ಇದೋ!ಇತ್ತಲಾಗಿ ಅನೇಕಕಮುದಗಳಿಂದ ಕೂಡಿದ ಈ ದೊಡ್ಡಮಡುವಿನ ನಡುವೆ, ಒಂದೇ ಹಂಸವು ಮಲಗಿರುವ ರೀತಿಯನ್ನು ನೋಡಿದರೆ, ರಾತ್ರಿಯಲ್ಲಿ ಮೇಘುಗಳಿಲ್ಲದ ಅನೇಕನಕ್ಷತ್ರಸಮೂಹಗಳಿಂದಲೂ, ಪೂರ್ಣಚಂದ್ರನಿಂದಲೂ ಶೋಭಿಸುವ ಆಕಾಶದಂತೆ ಕಾಣುತ್ತಿರುವುದು ಸುತ್ತ

ಳೂ ನಿಂತಿರುವ ಹಂಸಗಳೆಂಬ ಮೇಖಲೆಗಳಿಂದಲೂ, ಅರಳಿದ ತಾವರೆ ನೈದಿಲೆಗಳೆಂಬ ಪುಷ್ಪಮಾಲಿಕೆಗಳಿಂದಲೂ ಶೋಭಿತಗಳಾದ ಈ ನಡೆಬಾವಿಗಳು ಆಭರಣಾಲಂಕೃತರಾದ ಉತ್ತಮಸ್ತ್ರೀಯರಂತೆ ಕಾಣುವುವು ಪ್ರಾತಃಕಾಲಗಳಲ್ಲಿ ಗೋಪಾಂಗನೆಯರು ಮೊಸರನ್ನು ಕಡೆಯುವುದರಿಂದುಂಟಾದ ಶಬ್ದವೂ, ಗೋವುಗಳ ಧ್ವನಿಯೂ, ಕಾಡಿನಲ್ಲಿ ಹೊರಟುಬರುವ ವೇಣುಧ್ವನಿಯೂ ಒಟ್ಟುಗೂಡಿ, ಬೆಳಗಿನ ಗಾಳಿಯಿಂದ ಹೆಚ್ಚಿಸಲ್ಪಟ್ಟು, ಸಮಸ್ತದಿಕ್ಕುಗಳನ್ನೂ ತುಂಬುವಂತಿರುವುದು ಇಲ್ಲಿನ ನದೀತೀರಗಳು, ಮಂದ ಮಾರುತದಿಂದಲುಗಿಸಲ್ಪಟ್ಟ ಹೊಸಹೂಗಳ ಗೊಂಚಲಿನಿಂದ ತುಂಬಿದ ಈ ನೊದೆಹುಲ್ಲುಗಳಿಂದ, ಬಿಳೀಪಟ್ಟೆಯ ದುಕೂಲವನ್ನುಟ್ಟ, ಸ್ತ್ರೀಯರ ಜಘನಗಳಂತೆ ಪ್ರಕಾಶಿಸುವುವು ತೋಟಗಳಲ್ಲಿ ಮಕರಂದಪಾನವನ್ನು ಮಾಡಿ ಮದದಿಂದ ಕೊಬ್ಬಿ, ತಮ್ಮತಮ್ಮ ಪ್ರಿಯೆಯರೊಡಗೂಡಿರುವ ಈ ಭ್ರಮರಗಳು, ಅಲ್ಲಲ್ಲಿ ತಾವರ ಮತ್ತು ಬಂದುಗೆಹೂಗಳ ಧೂಳಿಯಿಂದ ಹೊಂಬಣ್ಣವಾದ ಮೈಯುಳ್ಳವುಗಳಾಗಿ, ಈಗಿನ ಗಾಳಿಯಲ್ಲಿರುವ ಸುವಾಸನೆಗಾಗಿ ಅಲ್ಲನ್ನೇ ಹಿಂಬಾಲಿಸಿ ಹೋಗುತ್ತಿರುವುವು ಸ್ವಚ್ಛವಾದ ಈಗಿನ ನದೀಜಲವೂ, ಅರಳಿದ ನೈದಿಲೆಯೂ, ಕ್ರೌಂಚಪಕ್ಷಿಗಳ ಕೆವಿಗಿಂಪಾದ ಧ್ವನಿಯೂ, ಚೆನ್ನಾಗಿ ಪಕ್ವವಾದ ಹೊಲಗದ್ದೆಗಳ ಪೈರುಗಳೂ, ಮೆಲ್ಲಗೆ ಬೀಸುವ ಗಾಳಿಯೂ, ಸ್ವಚ್ಛವಾದ ಚಂದ್ರಬಿಂಬವೂ, ಈಗ ಮಳಗಾಲವು ಕಳೆದು ಶರತ್ಕಾಲವು ಬಂದೊದಗಿರುವುದನ್ನು ಸ್ಪಷ್ಟವಾಗಿ ತಿಳಿಸುತ್ತಿರುವುವು ರಾತ್ರಿಯಲ್ಲಿ ತಮ್ಮ ಪ್ರಿಯರೊಡನೆ ಸಂಭೋಗಿಸಿ, ಬೆಳಗಾದಮೇಲೆ ಆಯಾಸದಿಂದ ಮೆಲ್ಲಗೆ ನಡೆದುಹೋಗುವ ಸ್ತ್ರೀಯರಂತೆ, ಈ ನದಿಗಳತಮ್ಮಲ್ಲಿ ಥಳಥಳಿಸುವ ಮೀನುಗಳೆಂಬ ಮೇಖಲೆಗಳನ್ನು ತೋರಿಸುತ್ತ, ಮಂದವಾಗಿ ಪ್ರವಹಿಸುವುವು ಚಕ್ರವಾಕಗಳಿಂದಲೂ, ಪಾಚಿಗಳಿಂದಲೂ, ದುಕೂಲದಂತಿರುವ ನೊದೆಯಹೂಗಳಿಂದಲೂ ಶೋಭಿಸುವ ಈ ನದೀಮುಖಗಳು, ಗೋರೋಚನದ ತಿಲಕದಿಂದಲೂ, ಕಪೋಲಪತ್ರಗಳಿಂದಲೂ ಅಲಂಕೃತವಾದ ಸ್ತ್ರೀಯರ ಮುಖದಂತೆ ಕಾಣುವುವು ನೋಡು ಅರಳಿದ ಗೋರಂಟಿಯ ಹೂಗಳಿಂದಲೂ, ಹಾಲೆಯ ಹೂಗಳಿಂದಲೂ ಚಿತ್ರಿತವಾಗಿ, ಭ್ರಮ

ರಗಳ ಮದರೆಯೋಂಕಾರಗಳಿಂದ ಕೂಡಿದ ವನಗಳಲ್ಲಿ, ಈಗ ಮನ್ಮಥನು ಬಿಲ್ಲು ಬಾಣಗಳನ್ನು ಧರಿಸಿ, ವಿರಹಿಗಳಿಗೆ ಭಯವನ್ನುಂಟುಮಾಡುತ್ತ ಉದ್ದಂಡವಾಗಿ ತಿರುಗುತ್ತಿರುವನು ಇದುವರೆಗೂ ಮೇಘಗಳು ಎಡೆಬಿಡದೆ ಮಳೆಯನ್ನು ಸುರಿಸಿ, ಪ್ರಜೆಗಳನ್ನು ಸಂತೋಷಪಡಿಸಿ, ಕೆರೆತೊರೆಗಳನ್ನೆಲ್ಲಾ ತುಂಬಿ, ಪೈರುಗಳನ್ನೂ ವೃದ್ಧಿಗೊಳಿಸಿ, ಈಗ ಆಕಾಶವನ್ನು ಬಿಟ್ಟು ಹೊರಟು ಹೋಗಿವೆ ಎಲೆ ಸೌಮ್ಯನೆ! ಈಗ ಜಲಾಶಯಗಳೆಲ್ಲವೂ ಸ್ವಚ್ಛವಾದ ನೀರಿನಿಂದತುಂಬಿ, ಕ್ರೌಂಚಪಕ್ಷಿಗಳ ಧ್ವನಿಗಳಿಂದಲೂ, ಚಕ್ರವಾಕಗಳ ಸಮೂಹದಿಂದಲೂ, ಸರ್ವೇಂದ್ರಿಯಗಳಿಗೂ ಆನಂದವನ್ನುಂಟುಮಾಡುವುವು ಬೆಟ್ಟದ ತಪ್ಪಲುಗಳಲ್ಲ, ಬಂಧೂಕವೃಕ್ಷಗಳೂ, ಏಳೆಲೆಬಾಳೆಗಳೂ, ಕಾಂಚನವೃಕ್ಷಗಳೂ, ಕೋವಿದಾರಗಳೂ, ದಾಸವಾಳದ ಗಿಡಗಳೂ, ಪ್ರಿಯಂಗುಲತೆಗಳೂ ಸಮೃದ್ಧವಾದ ಪುಷ್ಪಸಮೂಹದಿಂದ ಶೋಭಿಸುತ್ತಿರುವುವು ಈಗ ನದಿಯ ದಡದಲ್ಲಿ ಕಾಣುವ ಮಳಲುದಿಣ್ಣೆಗಳೆಲ್ಲವೂ ಹಂಸಗಳಿಂದಲೂ, ಸಾರಸಗಳಿಂದಲೂ, ಚಕ್ರವಾಕಗಳಿಂದಲೂ, ಕ್ರೌಂಚಗಳಿಂದಲೂ ತುಂಬಿರುವುದನ್ನು ನೋಡಿದೆಯಾ? ಪರಸ್ಪರವೈರವನ್ನು ಬಳೆಸಿ ಜಯಾಪೇಕ್ಷೆಯಿಂದ ಆತುರಗೊಂಡಿರುವ ರಾಜರಿಗೆ, ಯುದ್ಧೋದ್ಯಮಕಾಲವು ಬಂದೊದಗಿತು ರಾಜರು ಯುದ್ಧಕ್ಕಾಗಿ ಪ್ರಥಮಪ್ರಯಾಣಮಾಡುವುದಕ್ಕೆ ಇದೇ ಸಮಯವು ಹೀಗಿದ್ದರೂ ಈಗ ಸುಗ್ರೀವನ ಸುಳಿವನ್ನೇ ಕಾಣಲಿಲ್ಲ ಆವನು ನಮಗಾಗಿ ಯಾವಪ್ರಯತ್ನವನ್ನಾದರೂ ಮಾಡುತ್ತಿರುವಂತೆಯೂ ತೋರಲಿಲ್ಲ ಸೀತೆಯನ್ನು ಕಾಣದೆ ದುಃಖಪೀಡಿತನಾದ ನನಗೆ ಈ ಮಳೆಗಾಲದ ನಾಲ್ಕುತಿಂಗಳನ್ನು ಕಳೆಯುವುದೇ ನೂರಾರುವರ್ಷಗಳನ್ನು ಕಳೆದಷ್ಟು ಕಷ್ಟವಾಯಿತು ಅದನ್ನೂ ಹೇಗೋ ಕಳೆದುದಾಯಿತು ಚಕ್ರವಾಕಿಯು ತನ್ನ ಪತಿಯಾದ ಚಕ್ರವಾಕವನ್ನು ಎಡೆಬಿಡದೆ ಹಿಂಬಾಲಿಸುವಂತೆ, ಸೀತೆಯು ನನ್ನನ್ನು ಬಿಟ್ಟಿರಲಾರದೆ ಅರಣ್ಯಕ್ಕೂ ಹೊರಟುಬಂದಳು. ಅತಿಘೋರವಾದ ದಂಡಕಾರಣ್ಯಕ್ಕೆ ಬಂದಾಗಲೂ ನನ್ನ ಸಹವಾಸಸಂತೋಷದಿಂದ, ಸಮಸ್ತ ಕಷ್ಟಗಳನ್ನೂ ಸಹಿಸಿಕೊಂಡು ಉದ್ಯಾನಗಳಲ್ಲಿರುವಂತೆಯೇ ಸಂತೋಷದಿಂದಿದ್ದಳು ಎಲೆ ವತ್ಸನೆ! ಆ ಪ್ರಿಯಪತ್ನಿಯನ್ನೇ ಕಳೆದುಕೊಂಡುದಲ್ಲದೆ, ಇನ್ನೂ ಎಷ್ಟೋ

ಕಷ್ಟಗಳಿಗೂ ಈಡಾದೆನು ರಾಜ್ಯಭ್ರಷ್ಟನಾಗಿ ಬಂದು ಕಾಡುಕಾಡಾಗಿ ಯೂ ತಿರುಗುತ್ತಿರುವೆನು ಈ ಸ್ಥಿತಿಯನ್ನು ನೋಡಿಯೂ ಸುಗ್ರೀವನಿಗೆ ನನ್ನ ಲ್ಲಿ ಮರುಕವಿಲ್ಲದಿರುವುದನ್ನು ನೋಡಿದೆಯಾ? ಲಕ್ಷ್ಮಣಾ! ಈಗ ನನಗೊಂ ದು ತೋರಿರುವುದು ನಾನು ರಾಜ್ಯಭ್ರಷ್ಟನಾಗಿ ದಿಕ್ಕಿಲ್ಲದೆ ಅಲೆಯುತ್ತಿರು ವುದನ್ನೂ, ರಾವಣನಿಂದ ಭಂಗಹೊಂದಿದುದನ್ನೂ, ಮನೆ ಮರಗಳನ್ನೂ ಹೆಂಡತಿಯನ್ನೂ ಕಳೆದುಕೊಂಡು ಇಷ್ಟು ದೂರದೇಶಕ್ಕೆ ಹೊರಟುಬಂದಿರು ವುದನ್ನೂ ನೋಡಿ, ದುರಾತ್ಮನಾದ ಸುಗ್ರೀವನು ನನ್ನನ್ನು ಕೇವಲತುಚ್ಛೀ ಭಾವದಿಂದ ಕಾಣುವಂತಿದೆ ಇದರಮೇಲೆ ನಾನು ದೈನ್ಯದಿಂದ ಆತನಲ್ಲಿಗೆ ಹೋಗಿ ''ನೀನೇ ಗತಿ"ಯೆಂದು ಮರೆಬಿದ್ದುದನ್ನೂ ನೋಡಿ ಆತನಿಗೆ ನನ್ನಲ್ಲಿ ಇನ್ನೂ ಅಲಕ್ಷ್ಯವುಂಟಾಯಿತು ಈ ಕಾರಣಗಳಿಂದಲೇ ಅವನು ನನ್ನ ನ್ನು ಉದಾಸೀನಮಾಡಿ ತಿರಸ್ಕರಿಸುವನಲ್ಲದೆ ಬೇರೆಯಲ್ಲ ಸುಗ್ರೀವನು ಅವನಿಗೆ ಪಟ್ಟವಾಗುವುದಕ್ಕೆ ಮೊದಲು, ಸೀತೆಯನ್ನು ಹುಡುಕುವವಿಷಯದ ಲ್ಲಿ ನನಗೆ ಕಾಲನಿರ್ಣಯವನ್ನು ಮಾಡಿಕೊಟ್ಟು ಆವಿಷಯದಲ್ಲಿ ದೃಢಪ್ರತಿಜ್ಞೆ ಯನ್ನೂ ಮಾಡಿದ್ದನು ಆದರೇನು? ಈಗ ತನ್ನ ಕೆಲಸವಾದಮೇಲೆ ನಮ್ಮ ನ್ನು ಉಪೇಕ್ಷಿಸುತ್ತಿರುವನು ಸ್ವಕಾರ್ಯಧುರಂಧರನಾದ ಆ ದುರಾತ್ಮನು, ತಾನು ಮೊದಲು ಮಾಡಿಕೊಟ್ಟ ಪ್ರತಿಜ್ಞೆಯನ್ನೂ, ನನ್ನನ್ನೂ ಮರೆತು ಬಿ ಟ್ಟಿರುವನು ವತ್ಸ ಲಕ್ಷ್ಮಣಾ! ಈಗಲೂ ನೀನು ಕಿಷ್ಕಿಂಧೆಗೆ ಹೋಗಿ ಕೇವ ಲಗ್ರಾಮ್ಯಸುಖದಲ್ಲಿ ಮುಳುಗಿ ಮೈಮರೆತಿರುವ ಮೂರ್ಖನಾದ ಆ ಸು ಗ್ರೀವನಿಗೆ ನನ್ನ ಮಾತಿನಿಂದ ಹೀಗೆಂದುತಿಳಿಸು!''ಕಾರ್ಯಾರ್ಥಿಯಾಗಿ ಬಂದು ತನ್ನಲ್ಲಿ ಮರೆಹೊಕ್ಕು, ಮೊದಲು ತನಗೆ ಉಪಕಾರವನ್ನೂ ಮಾಡಿರುವವ ನಿಗೆ, ಯಾವನು ಮಾತುಕೂಟ್ಟು, ಆಮೇಲೆ ಆಶಾಭಂಗವನ್ನು ಮಾಡು ವನೋ, ಅವನೇ ಲೋಕದಲ್ಲಿ ಪುರುಷಾಧಮನೆನಿಸುವನು ಯಾವನು ಒಳ್ಳೇ ದಾಗಲಿ, ಕೆಟ್ಟುದಾಗಲಿ, ಆಡಿದ ಮಾತನ್ನು ತಪ್ಪದೆ ನಡೆಸುವನೋ ಅಂತಹ ವೀರನೇ ಪುರುಷೋತ್ತಮನೆನಿಸುವನು ಯಾರು ಮತ್ತೊಬ್ಬರಿಂದ ಉಪಕಾ ರವನ್ನು ಪಡೆದು, ತಮ್ಮ ಕಾರ್ಯವು ಕೈಗೂಡಿದಮೇಲೆ ಆ ಉಪಕಾರಿಗಳ ಕೋ ರಿಕೆಯನ್ನು ಈಡೇರಿಸದೆ, ಉದಾಸೀನರಾಗಿದ್ದುಬಿಡುವರೋ, ಅಂತವರು

ಸತ್ತಮೇಲೆಕೃತಘ್ನರಾದ ಅವರ ದೇಹವನ್ನು ಮಾಂಸಭಕ್ಷಕಗಳಾದ ನಾಯಿನರಿಗಳೂ ತಿನ್ನಲಾರವು" ಎಂದುತಿಳಿಸು' ಎಲೆವತ್ಸನೆ' ಇನ್ನೆಷ್ಟು, ಹೇಳಿದರೇನು?ಮುಖ್ಯವಾಗಿ ಆ ಸುಗ್ರೀವನಿಗೆ ಈಗ ನಾನು ರಣರಂಗದಲ್ಲಿ ನಿಂತು, ಚಿನ್ನದ ಕಟ್ಟುಗಳುಳ್ಳ ಈ ನನ್ನ ಬಿಲ್ಲನ್ನು ಆ ಕರ್ಣಾಂತವಾಗಿ ಎಳೆಯುವಾಗ, ಮಿಂಚಿನಂತೆ ಜಾಜ್ವಲ್ಯಮಾನವಾದ ಅದರ ಸ್ವರೂಪವನ್ನು ನೋಡಬೇಕೆಂಬ ಆಸೆಯಿರುವಂತಿದೆ' ನಾನು ಯುದ್ಧರಂಗದಲ್ಲಿ ನಿಂತು ನನ್ನ ಧನುಸ್ಸಿನ ನಾಣನ್ನು ಕೋಪದಿಂದ ಮಿಡಿಯುವಾಗ,ಅದರಿಂದ ಸಿಡಿಲಿಗೆ ಸಮಾನವಾಗಿಹೊರಡುವ ಧ್ವನಿಯನ್ನು ಪುನಃ ಕೇಳಿಬೇಕೆಂಬ ಕುತೂಹಲವೂ ಅವನಿಗೆ ಹುಟ್ಟಿರುವಂತಿದೆ ಸಾಲವೃಕ್ಷಭೇದನದಿಂದಲೂ, ವಾಲಿವಧೆಯಿಂದಲೂ ನನ್ನ ಪರಾಕ್ರಮವನ್ನು ಆ ಸುಗ್ರೀವನು ಚೆನ್ನಾಗಿ ಬಲ್ಲನು ಇದರಮೇಲೆ ಮಹಾವೀರನಾದ ನೀನು ನನಗೆ ಬೆಂಬಲವಾಗಿರುವುದನ್ನೂ ಬಲ್ಲನು ಆದರೂ ನಮ್ಮ ವಿಷಯವಾಗಿ ಸ್ವಲ್ಪವೂ ವಿಚಾರವಿಲ್ಲದಿರುವನಲ್ಲಾ' ಮೊದಲು ತನ್ನ ಕಾರ್ಯವನ್ನು ಕೈಗೂಡಿಸಿಕೊಂಡ ಸುಗ್ರೀವನು' ನಾನು ಅವನೊಡನೆ ಸಖ್ಯವನ್ನು ಮಾಡಿದುದಕ್ಕೂ ವಾಲಿಯನ್ನು ಕೂಂದುದಕ್ಕೂ ಮುಖ್ಯವಾದ ಉದ್ದೇಶವೇನೆಂಬುದನ್ನು ಈಗ ಮರೆತು ಬಿಟ್ಟಂತಿದೆ ಮಳಗಾಲವು ಮುಗಿದೊಡನೆಯೇ ಬರುವುದಾಗಿ ಅವನು ನನಗೆ ಪ್ರತಿಜ್ಞೆಮಾಡಿಕೊಟ್ಟಿದ್ದರೂ, ಈಗ ಕಾಮೋಪಭೋಗಗಳಲ್ಲಿ ಮುಳುಗಿ ಮೈಮರೆತಿರುವುದರಿಂದ, ಆ ನಾಲ್ಕುತಿಂಗಳುಗಳೂ ಆಗಲೇ ಕಳೆದು ಹೋದುದನ್ನೂ ಕಾಣದಿರುವನಲ್ಲಾ' ಮೊದಲೇ ಕಪಿಯಾದ ಆ ಸುಗ್ರೀವನು ತನ್ನ ನಂಟರಿಷ್ಟರೊಡನೆ ಸೇರಿಕೊಂಡು, ಎಡೆಬಿಡದೆ ಮದ್ಯವನ್ನು ಕುಡಿಯುತ್ತ ಅದರಿಂದ ತನ್ನ ಮೈಯನ್ನೇ ತಾನು ಮರೆತುಹೋಗಿರುವಾಗ ಅವನಿಗೆ ನಮ್ಮ ಸ್ಮರಣೆಯೆಲ್ಲಿ ಬರುವುದು? ನಮ್ಮ ಕಷ್ಟವನ್ನು ಅವನೇನುಬಲ್ಲನು ? ಎಲೆವತ್ಸನೆ' ನೀನು ಬಲಾಢ್ಯನಾದುದರಿಂದ ಯಾವುದಕ್ಕೂ ಅಂಜುವವನಲ್ಲ ಈಗಲೇ ಕಿಷ್ಕಿಂಧೆಗೆ ಹೋಗು ಸುಗ್ರೀವನಿಗೆ ನನ್ನ ಕೋಪವನ್ನು ಧೈರ್ಯವಾಗಿ ತಿಳಿಸು ಅವನೊಡನೆ ನೀನು ಹೇಳಬೇಕಾದ ಮತ್ತೊಂದು ಮುಖ್ಯವಿಷಯವುಂಟು!ನನ್ನ ಮಾತಿನಿಂದ ಅದನ್ನೂ ಅವನಿಗೆ ಸ್ಪಷ್ಟವಾಗಿ ತಿಳಿಸಿಬಿಡು'ಏನೆಂದರೆ,,ಎಲೆ ಸುಗ್ರೀವನೆ! ನಾವು ವಾಲಿಯನ್ನು ಕಳುಹಿಸಿದ ದಾರಿಯು ಇನ್ನೂ

ಮಾಸಿಹೋಗಿಲ್ಲ ನಿನಗೂ ಅದೇ ದಾರಿಯು ಸಿದ್ಧವಾಗಿರುವುದು ಆದುದರಿಂದ ನೀನು ಆಡಿದ ಮಾತಿಗೆ ತಪ್ಪಿ ಆ ವಾಲಿಯ ದಾರಿಯನ್ನು ಹಿಂಬಾಲಿಸಿ ಹೋಗ ಬೇಡ! ನಾನು ಮೊದಲು ವಾಲಿಯೊಬ್ಬನನ್ನೇ ಕೊಂದೆನು ಆಡಿದಮಾತಿಗೆ ತ ಪ್ಪಿದ ನಿನ್ನ ನ್ನಾದರೋ, ಬಂಧುಮಿತ್ರಪರಿವಾರಗಳೊಡನೆ ಸೇರಿಸಿ, ಆವಾಲಿಯ ಹಿಂದೆ ಕಳುಹಿಸಿಬಿಡುವೆನು!" ಎಂದುತಿಳಿಸು ಈಗಿನ ಕಾರ್ಯಸ್ಥಿತಿಯಂತೂ ಹೀ ಗಿರುವುದು ಇದಕ್ಕನುಸಾರವಾಗಿ ಏನೇನು ಹೇಳಬೇಕೋ ಅದೆಲ್ಲವನ್ನೂ ಅವನಿ ಗೆ ಚೆನ್ನಾಗಿ ವಿವರಿಸಿ ತಿಳಿಸು ಮುಖ್ಯವಾಗಿ ಕಾಲವು ಮೀರಿ ಹೋಗಬಾರದು ನೀನು ತಡೆಮಾಡದೆ ಬೇಗನೆ ಹೋಗು ! ನೀನು ಹೋಗಿ ಸುಗ್ರೀವನೊಡನೆ 'ಎಲೈ ಕಪೀಂದ್ರನೆ! ನೀನು ನಮಗೆ ಮಾಡಕೊಟ್ಟ ಪ್ರತಿಜ್ಞೆಯನ್ನನುಸರಿಸಿ, ನಡೆಯುವುದೇ ಅಕ್ಷಯವಾದ ಧರ್ಮವೆಂದು ತಿಳಿದು, ಅದನ್ನು ತಪ್ಪದೆ ನೆಡೆಸಿಬಿ ಡು! ಹಾಗಿಲ್ಲದಿದ್ದರ ನೀನು ಅಧರ್ಮಕ್ಕೊಳಗಾಗುವೆಯಲ್ಲದೆ, ನನ್ನ ಬಾಣಗಳಿಂದ ಹತನಾಗಿ ಯಮಲೋಕದಲ್ಲ ವಾಲಿಯೊಡನೆ ಸೇರಬೇಕಾಗುವುದು ಅಂತಹ ಗತಿಯನ್ನು ತಂದುಕೊಳ್ಳಬೇಡ! ಎಂದು ಹೇಳು"ಎಂದನು ಹೀಗೆ ರಾಮನು ಮೇಲೆಮೇಲೆ ಉಕ್ಕಿಬರುತ್ತಿರುವ ಕೋಪದಿಂದಲೂ, ದೈನ್ಯದಿಂದಲೂ ವಿಲಪಿ ಸುವುದನ್ನು ನೋಡಿ, ಉಗ್ರತೇಜಸ್ಸುಳ್ಳ ಲಕ್ಷ್ಮಣನಿಗೂ ಸುಗ್ರೀವನ ವಿಷಯ ದಲ್ಲಿ ವಿಶೇಷವಾದ ಕ್ರೋಧವುಂಟಾಯಿತು ಇಲ್ಲಿಗೆ ಮೂವತ್ತನೆಯಸರ್ಗವು

ಲಕ್ಷ್ಮಣನು ಕೋಪಗೊಂಡು 'ಬರುವುದನ್ನು ಕಂಡು ಅಂಗದನು ಸುಗ್ರೀವನಲ್ಲಿ ತಿಳಿಸಿದುದು

ಹೀಗೆ*ಸೀತೆಯನ್ನು ಕಾಣದ ಸಂಕಂಟವೊಂದು, ಶರತ್ಕಾಲದ ಸೊಗ ಸನ್ನು ನೋಡಿ ಹೆಚ್ಚಿದ ಕಾಮವಿಕಾರವೊಂದು, ಸುಗ್ರೀವನಮೇಲೆ ಆಗ್ರಹ ವೊಂದು, ಈ ನಾನಾನಿಧದಿಂದ ರಾಜೇಂದ್ರಪುತ್ರನಾದ ರಾಮನ ಮನಸ್ಸು

---

* ಇಲ್ಲಿ "ನರೇಂದ್ರಸೂನುರ್ನತದೇವಪುತ್ರಂ" ಎಂದು ಮೂಲವು ಇದರಲ್ಲಿರು ವ "ದೇ" ಎಂಬ ವರ್ಣವು ಗಾಯಿತ್ರಿಯ ಹನ್ನೊಂದನೆಯ ವರ್ಣವಾದುದರಿಂದ, ಇದು ವರೆಗೆ ರಾಮಾಯಣದಲ್ಲಿ ಹತ್ತು ಸಹಸ್ರಗ್ರಂಥಗಳು ಮುಗಿದು, ಈ ಶ್ಲೋಕದಿಂದ ಹ ನ್ನೊಂದನೆಯಸಹಸ್ರವು ಆರಂಭಿಸುವುದೆಂದು ಗ್ರಾಹ್ಯವು

ಕಳವಳಗೊಂಡಿತು. ಅದರಿಂದ ಅತಿದೀನನಾಗಿ ಕೊರಗುತ್ತಿರುವುದನ್ನು ನೋಡಿ,ಅವನ ತಮ್ಮನಾದ ಲಕ್ಷ್ಮಣನು ಮರುಕಗೊಂಡು, ಅಣ್ಣನನ್ನು ಕುರಿತು ' ಅಣ್ಣಾ 'ನನಗೂ ನೀನು ಹೇಳಿದಂತೆಯೇ ತೋರಿರುವುದು ಆ ಕಪಿಯು ಸಾಧು ಜನಗಳ ನಡತೆಯಲ್ಲಿರುವಂತೆ ತೋರಲಿಲ್ಲ ಮಾತಿಗೆ ತಪ್ಪಿದ ಪಾಪಕ್ಕೆ ಫಲವೇನೆಂಬುದನ್ನೂ ಅವನು ತಿಳಿಯಲಿಲ್ಲ ಮುಖ್ಯವಾಗಿ ಅವನು ಇನ್ನು ಮುಂದೆ ವಾನರರಾಜ್ಯವನ್ನನುಭವಿಸಲಾರನು ಅದಕ್ಕಾಗಿಯೇ ಅವನಿಗೆ ಸರಿಯಾದ ಬುದ್ಧಿಯು ಹುಟ್ಟಲಿಲ್ಲ ಅವನು ಕೇವಲಬುದ್ಧಿಹೀನನಾದುದರಿಂದಲೇ ಗ್ರಾಮ್ಯ ಸುಖದಲ್ಲಿ ಮುಳುಗಿಹೋಗಿರುವನು ನೀನು ಅವನಲ್ಲಿ ತೋರಿಸಿದ ಪರಮಾನುಗ್ರಹಕ್ಕೆ ತಕ್ಕ ಪ್ರತ್ಯುಪಕಾರವನ್ನು ಮಾಡಬೇಕೆಂಬ ಬುದ್ಧಿಯೂ ಅತನಿಗೆ ಹುಟ್ಟಲಿಲ್ಲ ಅಣ್ಣಾ ! ಆದರೇನು? ಅವನೂ ನಮ್ಮಿಂದ ಹತನಾಗಿ ತನ್ನಣ್ಣನಾದ ವಾಲಿಯ ಬಳಿಗೇ ಹೋಗಿ ಸೇರಲಿ! ಹೀಗೆ ದುರ್ಗುಣವುಳ್ಳವನಿಗೆ ರಾಜ್ಯವನ್ನು ಕೊಡುವುದೇ ಉಚಿತವಲ್ಲ ಅಣ್ಣಾ ! ನಿನ್ನ ಕೋಪವೂ ಹಾಗಿರಲಿ! ಈಗ ನನಗಂತೂ ತಡೆಯಲಾರದ ಕೋಪವು ಉಕ್ಕಿಬರುತ್ತಿರುವುದು ಸುಳ್ಳಾಡಿದ ಆ ಸುಗ್ರೀವನನ್ನು ಈ ಕ್ಷಣವೇ ,ಕೊಂದುಬರುವೆನು ಅವನನ್ನು ಕೊಂದುಬಿಟ್ಟಮಾತ್ರಕ್ಕೆ ನಮ್ಮಕೆಲಸವು ಕೆಡುವುದೆಂದೆಣಿಸಬೇಡ ! ವಾಲಿಪುತ್ರನಾದ ಅಂಗದನಿಗೆ ಪಟ್ಟವನ್ನು ಕಟ್ಟಿಬಿಟ್ಟರೆ, ಅವನೇ ಕಪಿವೀರರೂಡನೆ ಸೇರಿ ಸೀತೆಯನ್ನು ಹುಡುಕುವನು" ಎಂದು ಹೇಳಿ, ಅಗಲೇ ಧನುಸ್ಸನ್ನು ಕೈಗೆತ್ತಿಕೊಂಡು ಪ್ರಚಂಡಕೋಪದಿಂದ ಮೇಲಕ್ಕೆದ್ದನು ಇದನ್ನು ನೋಡಿದೂರದೃಷ್ಟಿಯುಳ್ಳ ರಾಮನು, ಆ ಲಕ್ಷ್ಮಣನನ್ನು ಕುರಿತು, ಅನುನಯಪೂರ್ವಕವಾಗಿ, ''ಎಲೆ ವತ್ಸನೆ! ಇಷ್ಟು ಕೋಪವೇಕೆ ? ಲೋಕದಲ್ಲಿ ನಿನ್ನಂತಹ ಗುಣಾಢ್ಯನು ಮಿತ್ರವಧರೂಪವಾದ ಪಾಪಕಾರ್ಯಕ್ಕೆ ಪ್ರವರ್ತಿಸಬಾರದು ಒಂದುವೇಳೆ ಆಕಸ್ಮಿಕವಾಗಿ ಅಂತಹ ಕೋಪವುಂಟಾದರೂ, ಆ ಕೋಪವನ್ನು ಯಾವನು ವಿವೇಕದಿಂದ ಅಡಗಿಸಿಕೊಳ್ಳುವನೋ ಅಂತಹ ವೀರನೇ ಪುರುಷರಲ್ಲಿ ಮೇಲೆನಿಸಿಕೊಳ್ಳುವನು ಸಾಧುವೃತ್ತವುಳ್ಳ ನೀನೇ ಹೀಗೆ ಮಿತ್ರವಧವೆಂಬ ಪಾಪಕೃತ್ಯವನ್ನು ಚಿಂತಿಸಬಾರದು ಸುಗ್ರೀವನಲ್ಲಿ ಮೊದಲಿದ್ದಪ್ರೀತಿಯನ್ನೇ ನೀನು ಅನುವರ್ತಿಸುತ್ತಿರು ಮೊದಲು ನಮಗೂ

ಅವನಿಗೂ ನಡೆದ ಸ್ನೇಹವೃತ್ತಾಂತವನ್ನೂ ಚೆನ್ನಾಗಿ ಮನಸ್ಸಿನಲ್ಲಿಟ್ಟಿರು ಸುಗ್ರೀವನು ನಮಗೆ ನಿರ್ಣಯಿಸಿದ ಕಾಲಕ್ಕೆ ಸರಿಯಾಗಿ ಬಾರದೆ ಹೋದನೆಂಬುದೊಂದುಮಾತ್ರವೇ ಅವನ ತಪ್ಪೇಹೊರತು, ಬೇರೊಂದು ವಿಧದಿಂದಲೂ ಅವನು ನಮಗೆ ಅಪರಾಧಿಯಲ್ಲ ಇಷ್ಟುಮಾತ್ರಕ್ಕೆ ನೀನು ಅವನನ್ನು ಕೊಂದುಬಿಡುವುದಾಗಿ ಹೇಳಬಾರದು ಮೊದಲು ನೀನು ಅವನೊಡನೆ ಪರುಷವಾಕ್ಯಗಳನ್ನಾದರೂ ಆಡಬಾರದು ಒಳ್ಳೆಯ ಮಾತುಗಳಿಂದಲೇ ಅವನಿಗೆ ನಾನು ಹೇಳಿದ ಬುದ್ಧಿವಾದಗಳನ್ನು ಹೇಳು " ಎಂದನು ಹೀಗೆ ರಾಮನು ಧರ್ಮಾತಿಕ್ರಮವಿಲ್ಲದಂತೆ ನಡೆಸಬೇಕಾದ ಕಾರ್ಯವನ್ನು ನಿಯಮಿಸಲು, ಲಕ್ಷ್ಮಣನು ಆಗಲೇ ಅಣ್ಣನಾಜ್ಞೆಯಂತೆ ಕಿಷ್ಕಿಂಧೆಯಕಡೆಗೆ ಹೊರಟನು ಲಕ್ಷ್ಮಣನು ಬಹಳ ಸುಸ್ವಭಾವವುಳ್ಳವನಾಗಿ, ಯುಕ್ತಾಯುಕ್ತಗಳೆಲ್ಲವನ್ನೂ ಚೆನ್ನಾಗಿ ಬಲ್ಲವನಾಗಿದ್ದರೂ, ಯಾವಾಗಲೂ ತನ್ನಣ್ಣನಾದ ರಾಮನ ಕ್ಷೇಮಚಿಂತೆಯಲ್ಲಿಯೇ ಅತ್ಯಾಸಕ್ತನಾದುದರಿಂದ, ರಾಮನ ದೈನ್ಯವನ್ನು ನೋಡಿದಾಗ ಆತನಿಗುಂಟಾದ ಕೋಪವು ಚೆನ್ನಾಗಿ ಶಾಂತವಾಗಲೇ ಇಲ್ಲ ಆದರೆ ಸುಗ್ರೀವನನ್ನು ಕೊಂದುಬಿಡಬೇಕೆಂಬ ಉದ್ದೇಶವುಮಾತ್ರ ತಗ್ಗಿಹೋಯಿತು ಆ ಕೋಪವನ್ನು ಪ್ರಯತ್ನದಿಂದ ತನ್ನಲ್ಲೆಯೇ ಅಡಗಿಸಿಕೊಂಡು, ಸುಗ್ರೀವನ ನಿವಾಸಕ್ಕೆ ಬಂದನು ಇಂದ್ರಧನುಸ್ಸಿನಂತೆಯೂ, ಬೆಟ್ಟದ ತಿಖರದಂತೆಯೂ ಮಹತ್ತಾದ ಧನುಸ್ಸನ್ನು ಕೈಯಲ್ಲಿ ಹಿಡಿದು, ಕಾಲಾಂತಕನಂತೆ ಕೋಪಗೊಂಡು ಬರುತಿದ್ದ ಆ ಲಕ್ಷ್ಮಣನು, ತಪ್ಪಲಿನಿಂದ ಕೂಡಿದ ಮಂದರಪರ್ವತದಂತೆ ಕಾಣುತಿದ್ದನು ರಾಮಾಜ್ಞೆಯನ್ನು ಸ್ವಲ್ಪವೂ ಮೀರದೆ ನಡೆಯತಕ್ಕವನಾದ ಆಲಕ್ಷ್ಮಣನು,ಬುದ್ಧಿಯಲ್ಲಿ ಬೃಹಸ್ಪತಿಗೆ ಸಮಾನನಾದುದರಿಂದ, ತಾನು ಸುಗ್ರೀವನೊಡನೆ ಹೇಳಬೇಕಾದ ಮಾತಿನ ಕ್ರಮವನ್ನೂ. ಅದಕ್ಕೆ ಸುಗ್ರೀವನು ಹೇಳಬಹುದಾದ ಪ್ರತ್ಯುತ್ತರವೇನೆಂಬುದನ್ನೂ, ಅದಕ್ಕೆ ತಾನು ಪುನಃ ಹೇಳಬೇಕಾದ ಉತ್ತರಗಳನ್ನೂ ಮನಸ್ಸಿನಲ್ಲಿಯೇ ಆಲೋಚಿಸುತ್ತ ಬಂದನು ಸೀತಾವಿಷಯಕವಾದ ಕಾಮದಿಂದಲೂ, ಸುಗ್ರೀವನ ಮೇಲಿನ ಕೋಪದಿಂದಲೂ, ರಾಮನಿಗುಂಟಾಗಿದ್ದ ಮನಃಕಾಲುಷ್ಯವೆಂಬ ಬೆಂಕಿಯು, ಈ ಲಕ್ಷ್ಮಣನ ಮನಸ್ಸಿ

ನಲ್ಲಿ ಕುಡಿಯುತಿತ್ತು ಅದನ್ನು ನೆನೆಸಿಕೊಂಡ ಹಾಗೆಲ್ಲಾ ಕೋಪಯುಕ್ತ ನಾಗಿ,ಅಗ್ನಿಸಹಿತವಾದ ವಾಯುವಿನಂತೆ ಅತಿವೇಗದಿಂದ ಕಿಷ್ಕಿಂಧೆಗೆ ಬಂದು ಸೇರಿದನು ಬರುವದಾರಿಯಲ್ಲಿ ಅಡ್ಡಲಾಗಿದ್ದ. ಸಾಲೆ, ತಾಳೆ, ಅಶ್ವಕರ್ಣಿ ಮೊದಲಾದ ಗಿಡಗಳನ್ನೂ, ಇನ್ನೂ ಬೇರಬೇರೆ ವೃಕ್ಷಗಳನ್ನೂ, ತನ್ನ ಕೈ ಯಿಂದಲೇ ಮುರಿದು ಕೆಡಹುತ್ತ, ಅಲ್ಲಲ್ಲಿದ್ದ ಬೆಟ್ಟದ ಶಿಖರಗಳನ್ನುರುಳಿಸು ತ್ತ, ತನ್ನ ಕಾಲುಗಳ ತುಳಿತದಿಂದಲೇ ಕಲ್ಲುಗಳನ್ನು ಪುಡಿಪುಡಿಯಾಗಿಸುತ್ತ, ವೇಗದಿಂದೋಡುವ ಆನೆಯಂತೆ ಕಾಯಾ ತುರದಿಂದ ದೂರದೂರಕ್ಕೆ ಹೆ ಜ್ಜೆಯಿಟ್ಟಿಡುತ್ತ ಅತಿವೇಗದಿಂದ ಒಂದನು ಇಕ್ಷ್ವಾಕುಕುಲಸಿಂಹನಾದ ಲಕ್ಷ್ಮಣನು ಹೀಗೆ ವೇಗದಿಂದ ಬಂದು, ಮುಂದೆ ಕಿಕ್ಕಿರಿಸಿದ ಪರ್ವತಗಳ ನಡುವೆ ಅನೇಕವಾನರಸೈನ್ಯದಿಂದ ರಕ್ಷಿತವಾಗಿ, ಇತರರಿಗೆ ದುರ್ಗಮವಾದ ವಾನರ ರಾಜಧಾನಿಯಾದ ಕಿಷ್ಕಿಂಧೆಯನ್ನು ಕಂಡನು ಅದನ್ನು ನೋಡಿದಾಗ ಇವ ನಿಗೆ ಇನ್ನೂ ಕೋಪವು ಹೆಚ್ಚಿತು ಈ ಕೋಪದಿಂದ ನೆಲವನ್ನು ನಡುಗಿಸು ವಂತ ಹೆಜ್ಜೆಯಿಡುತ್ತ ಇನ್ನೂ ಮುಂದೆ ಬಂದಮೇಲೆ, ಆ ಪಟ್ಟಣದ ಹೊರ ಗೆ ಸಂಚರಿಸುತಿದ್ದ ಭಯಂಕರಸ್ವರೂಪವುಳ್ಳ ಕಲವು ವಾನರರನ್ನು ಕಂಡ ನು ಆನೆಗಳಂತೆ ಕೊಬ್ಬಿದ ಮೈಯುಳ್ಳ ಆ ಕಪಿಗಳು, ಲಕ್ಷ್ಮಣನು ಬಂದುದ ನ್ನು ಕಂಡೊಡನೆ, ಯಾವನೋ ಶತ್ರುವು ತಮ್ಮ ಪಟ್ಟಣಕ್ಕೆ ಪ್ರವೇಶಿಸುವ ನೆಂದೆಣಿಸಿ,ಕೋಪದಿಂದ ಎಲ್ಲರೂ ಗುಂಪಾಗಿ ಸೇರಿದರು ಅಗಲೇ ಕಲವರು ಅ ಲ್ಲಲ್ಲಿದ್ದ ದೊಡ್ಡಮರಗಳನ್ನು ಕಿತ್ತುಕೊಂಡರು ಲಕ್ಷ್ಮಣನನ್ನು ಹೊಡೆ ದೋಡಿಸುವುದಕ್ಕಾಗಿ ಕೆಲವರು ದೊಡ್ಡದೊಡ್ಡ ಬೆಟ್ಟದ ಶಿಖರಗಳನ್ನೇ ಕೈ ಗೆತ್ತಿಕೊಂಡು ನಿಂತರು ಹೀಗೆ ಜಗಳಕ್ಕೆ ಸಿದ್ಧರಾಗಿ, ಆಯುಧಗಳನ್ನು ಹಿಡಿದಿ ರುವ ಆಕಪಿಗಳನ್ನು ಕಂಡೊಡನೆ, ಲಕ್ಷ್ಮಣನ ಕೋಪವು ಇಮ್ಮಡಿಯಾಗಿ ಅಗ್ನಿಯಂತೆ ಜ್ವಲಿಸುತಿದ್ದನು ಆದರೆ ಪ್ರಳಯಕಾಲದ ಮೃತ್ಯುವಿನಂತೆ ಬರುತ್ತಿರುವ ಲಕ್ಷ್ಮಣನ ಕೋಪವನ್ನು ನೋಡಿದೊಡನೆ, ಆ ವಾನರರೆಲ್ಲರ ಆ ರ್ಭಟವೂ ಅಡಗಿಹೋಯಿತು ಅವರ ಮೈ ನಡುಗಲಾರಂಭಿಸಿತು ನಾಲ್ಕು ಕ ಡೆಗಳಿಗೂ ಚದರಿ ಓಡಿಹೋದರು ಆ ಕ್ಷಣವೇ ಕೆಲವರು ಸುಗ್ರೀವನ ಮನೆ ಗೆ ಬಂದು,ಲಕ್ಷ್ಮಣನು ಕೋಪದಿಂದ ಕಿಷ್ಕಿಂಧೆಗೆ ಬರುತ್ತಿರುವನೆಂಬುದನ್ನು

ತಿಳಿಸಿದರು ಆ ಕಾಲದಲ್ಲಿ ಸುಗ್ರೀವನಾದರೋ ಕಾಮಮೋಹಿತನಾಗಿ ತಾರೆಯೊಡನೆ ಏಕಾಂತದಲ್ಲಿ ಕ್ರೀಡಿಸುತ್ತ ಮಲಗಿದ್ದನು ಈವಾನರರು ಹೇಳಿದಮಾತುಗಳೊಂದೂ ಅವನ ಕಿವಿಗೇರಲಿಲ್ಲ ಆಗ ಅಲ್ಲಿದ್ದ ಮಂತ್ರಿಗಳು ಕೆಲವು ವಾನರವೀರರನ್ನು ಕರೆದು,ಆ ಸಂಗತಿಯೇನೆಂದು ವಿವರವಾಗಿತಿಳಿದುಬರುವುದಕ್ಕಾಗಿ ಕಳುಹಿಸಿದರು ಆಗಲೇ ಆ ಮಂತ್ರಿಗಳಾಜ್ಞೆಯಿಂದ ಬೆಟ್ಟಗಳಂತೆಯೂ, ಆನೆಗಳಂತೆಯೂ, ಮೇಘಗಳಂತೆಯೂ, ಮಹತ್ತಾದ, ಮತ್ತು ಭಯಂಕರವಾದ ರೂಪವುಳ್ಳ ಕೆಲವು ಕಪಿವೀರರು, ಕಿಷ್ಕಿಂಧೆಯಿಂದ ಹೊರಟುಬಂದರು ಅವರೆಲ್ಲರಿಗೂ ಅವರವರ ಉಗುರುಗಳು ಮತ್ತು ದಂತಗಳೇ ಆಯುಧಗಳಾಗಿದ್ದುವು ಆವರೆಲ್ಲರೂ ವಿಕಾರರೂಪವುಳ್ಳವರು ಎಲ್ಲರೂ ಹೆಬ್ಬುಲಿಗಳಂತೆ ಬಲದಿಂದ ಕೊಬ್ಬಿದವರಾಗಿದ್ದರು ಎಲ್ಲರ ಮುಖಗಳೂ ನೋಡುವಾಗಲೇ ಭಯವನ್ನುಂಟುಮಾಡುವಂತೆ ವಿಕಾರದಿಂದಿದ್ದುವು ಅವರಲ್ಲಿ ಹತ್ತಾನೆಗಳ ಒಲವುಳ್ಳವರು ಕೆಲವರು ನೂರಾನೆಗಳ ಬಲವುಳ್ಳವರು ಕೆಲವರು ಸಾವಿರಾನೆಗಳ ಬಲವುಳ್ಳವರು ಕೆಲವರು ಹೀಗೆ ಮಹಾಬಲಾಢ್ಯರಾಗಿ, ಕೈಯಲ್ಲಿ ದೊಡ್ಡದೊಡ್ಡ ಮರಗಳನ್ನು ಹಿಡಿದು ಬರುತ್ತಿರುವ ಕಪಿವೀರರನ್ನು ನೋಡಿದೊಡನೆ, ಮೊದಲೇ ಕೋಪಗೊಂಡಿದ್ದ ಲಕ್ಷ್ಮಣನಿಗೆ ಮತ್ತಷ್ಟು ಕೋಪವು ಹೆಚ್ಚಿತು ಇಂತಹ ವೀರರಾದ ಕಪಿಗಳು ಆ ಕಿಷ್ಕಿಂಧೆಯ ಸುತ್ತಲೂ ತುಂಬಿರುವುದನ್ನು ನೋಡಿದನು ಪ್ರಚಂಡಪರಾಕ್ರಮವುಳ್ಳ ಆ ಕಪಿವೀರರಲ್ಲರೂ ಕಿಷ್ಕಿಂಧೆಯ ಕೋಟೆಯ ಬಾಗಿಲಿನ ಬಳಿಗೆ ಬಂದು, ಆ ಬಾಗಿಲಿಗೆ ಹಾಕಿದ್ದ ಅಗಳಿಯಕೆಳಗೆ ಲಕ್ಷ್ಮಣನಿಗೆ ಕಾಣುವಂತೆ ನಿಂತಿದ್ದರು ಅತ್ತಲಾಗಿ ಸುಗ್ರೀವನು ತಮ್ಮಲ್ಲಿ ಅಲಕ್ಷ್ಯದಿಂದಿರುವುದನ್ನೂ, ಇತ್ತಲಾಗಿ ರಾಮನು ದುಃಖದಿಂದ ಕೊರಗುವುದನ್ನೂ ನೆನೆಸಿಕೊಂಡು ಲಕ್ಷ್ಮಣನಿಗೆ ಮೈಮರೆಯುವಷ್ಟು ಕೋಪವುಂಟಾಯಿತು ಒಂದಾವರ್ತಿ ಬಿಸಿಬಿಸಿಯಾಗಿ ನಿಟ್ಟುಸಿರನ್ನು ಬಿಟ್ಟನು ಅವನ ಕಣ್ಣುಗಳರಡೂ ಕೆಂಪಾದುವು ಹೊಗೆಯೊಡನೆ ಬುಸುಗುಟ್ಟುವ ಕಾಲಾಗ್ನಿಯಂತೆ ಕಾಣುತಿದ್ದನು ಬಾಣದ ಅಲಗುಗಳೆಂಬ ನಾಲಗೆಗಳಿಂದಲೂ, ಬಿಲ್ಲೆಂಬ ಉದ್ದವಾದ ಮೈಯಿಂದಲೂ, ವೀರ್ಯವೆಂಬ ವಿಷದಿಂದಲೂ ಕೂಡಿದ ಐದುಹೆಡೆಗಳುಳ್ಳ ಮಹಾಸರ್ಪದಂತಿದ್ದ

ನು ಹಿಂಗೆ ಉರಿಯುವ ಕಾಲಾಗ್ನಿಯಂತೆಯೂ,ಕೋಪಗೊಂಡ ಮಹಾಸರ್ಪ ದಂತೆಯೂ ರೌದ್ರಾವೇಶದಿಂದಿರುವ ಲಕ್ಷ್ಮಣನನ್ನು ಕಂಡೊಡನೆ, ಅಲ್ಲಿದ್ದ ಅಂಗದನಿಗೆ ಮಹತ್ತಾದ ಭಯವೂ ಚಿಂತೆಯೂ ಉಂಟಾಯಿತು ಇಷ್ಟರಲ್ಲಿ ಕೋಪದಿಂದ ಕೆಂಪೇರಿದ ಕಣ್ಣುಳ್ಳ ಮಹಾಯಶಸ್ವಿಯಾದ ಲಕ್ಷ್ಮಣನು ಆ ಅಂಗದನನ್ನು ನೋಡಿ,,ಎಲೆ ವತ್ಸನೆ' ನಾನು ಬಂದಿರುವವಿಷಯವನ್ನು ಈಗಲೇ ಹೋಗಿ ಸುಗ್ರೀವನಿಗೆ ತಿಳಿಸು' ಯಾವಶತ್ರುಗಳನ್ನಾದರೂ ಹುಟ್ಟಡಗಿಸತಕ್ಕ ಲಕ್ಷ್ಮಣನು ನಿನ್ನನ್ನು ನೋಡುವುದಕ್ಕಾಗಿ ಬಂದು ಬಾಗಿಲಲ್ಲಿ ನಿಂತಿರುವ" ನೆಂದು ಹೇಳು' ಮತ್ತು ,,ತನ್ನಣ್ಣನಿಗುಂಟಾದ ವ್ಯಸನವನ್ನು ನೋಡಿ ತಡೆಯಲಾರದೆ ಲಕ್ಷ್ಮಣನು ಬಾಗಿಲಲ್ಲಿ ಬಂದುನಿಂತಿರುವನು ಅವನ ಮಾತನ್ನು ಕೇಳುವುದಕ್ಕೆ ನಿನಗಿಷ್ಟನಿದ್ದಪಕ್ಷದಲ್ಲಿ ಈಗಲೇ ನೀನು ಅವನಲ್ಲಿಗೆ ಹೊರಡು ' ಇಲ್ಲವೇ ಅವನನ್ನೇ ಇಲ್ಲಿಗೆ ಕರಸು ನಿನಗೆ ಹೇಗೆ ಯುಕ್ತವೆಂದು ತೋರುವುದೋ ಹಾಗೆ ನಡೆಸು-" ಎಂದು ಹೇಳಿ ಬೇಗನೆ ಹಿಂತಿರುಗಿ ಬಾ!" ಎಂದನು ಇದನ್ನು ಕೇಳಿ ಅಂಗದನು ಮನಸ್ಸಿನಲ್ಲಿ ಭಯದಿಂದ ತತ್ತಳಿಸುತ್ತ, ತನ್ನ ಚಿಕ್ಕಪ್ಪನಾದ ಸುಗ್ರೀವನಬಳಿಗೆ ಬರುವಾಗಲೇ ,, ಅದೋ ಲಕ್ಷ್ಮಣನು ಬಂದು ನಿಂತಿರುವನು" ಎಂದು ಸಂಭ್ರಮದಿಂದ ಕೂಗಿಕೊಂಡು ಮುಂದೆ ಹೋದನು ಲಕ್ಷ್ಮಣನ ಮಾತನ್ನು ಕೇಳಿಬಾಗಿನಿಂದ ಅವನ ಮನಸ್ಸು ಭಯದಿಂದ ತತ್ತಳಿಸುತಿತ್ತು ಅವನ ಮುಖವು ಕಳೆಗುಂದಿತು ಅತಿದೈನ್ಯದಿಂದ ಸುಗ್ರೀವನಬಳಿಗೆ ಬಂದು, ಮೊದಲು ಅವನ ಪಾದಗಳರಡನ್ನೂ ಹಿಡಿದು ನಮಸ್ಕರಿಸಿದನು ಹೀಗೆ ತಂದೆಯ ಪಾದಗಳನ್ನು ಹಿಡಿದು ನಮಸ್ಕರಿಸಿದಮೇಲೆ ತನ್ನ ತಾಯಿಯಾದ ತಾರೆಯ ಪಾದಗಳಿಗೂ ನಮಸ್ಕರಿಸಿದನು ಆ ಮೇಲೆ ತನ್ನ ಚಿಕ್ಕತಾಯಿಯಾದ ರುಮೆಗೂ ಪಾದವಂದನವನ್ನು ಮಾಡಿ, ಲಕ್ಷ್ಮಣನು ತನಗೆ ಹೇಳಿದ ವಾಕ್ಯಗಳನ್ನೇ ಹೇಳತೊಡಗಿದನು ಆದರೆ ಸಿದ್ರೆಯಿಂದಲೂ,ಮದ್ಯಮದಿಂದಲೂ ಮೈಮರೆತು ಮಲಗಿದ್ದ ಸುಗ್ರೀವನಿಗೆ,ಇದೊಂದೂ ತಿಳಿಯಲಿಲ್ಲ ಇಷ್ಟರಲ್ಲಿ ಅತ್ತಲಾಗಿ ಪುರದ್ವಾರಕ್ಕೆ ಹೋಗಿದ್ದ ವಾನರರೆಲ್ಲರೂ ಲಕ್ಷ್ಮಣನ ಕೋಪವನ್ನು ಕಂಡು,ಭಯದಿಂದ ಮೈತಿಳಿಯದವರಾಗಿ, ದೈನ್ಯದಿಂದ ಲಕ್ಷ್ಮಣನ ಮನ್ನಣೆಯನ್ನು ಬೇಡುತ್ತ,ದೊಡ್ಡಕಿಲಕಿಲಧ್ವನಿಯ

ನ್ನು ಮಾಡುತಿದ್ದರು ಮಹಾಪ್ರವಾಹವು ಬರುವಂತೆ ತಡೆಯಿಲ್ಲದೆ ಕಿಷ್ಕಿಂ
ಧೆಗೆ ಬಂದು, ಸಿಡಿಲಿನಂತೆ ಆರ್ಭಟಿಸುತ್ತ ಕ್ರೂರನಾಗಿರುವ ಆ ಲಕ್ಷ್ಮಣನನ್ನು
ನೋಡಿ ವಾನರರೆಲ್ಲರೂ ಒಟ್ಟಾಗಿ ಸೇರಿ,ಆ ಲಕ್ಷ್ಮಣನ ಸಮೀಪದಲ್ಲಿ ನಿಂತು,
ಒಬ್ಬರಿಗೊಬ್ಬರು ಸಿಡಿಲುಬಡಿದಂತೆ ಘಟ್ಟಿಯಾಗಿ ಗದ್ದಲವನ್ನು ಮಾ
ಡುತಿದ್ದರು ಈ ಮಹಾಧ್ವನಿಯುಸುಗ್ರೀವನ ಕಿವಿಗೆ ಬಿದ್ದಿತು ಆಗಲೇ ಅವನಿಗೆ
ಎಚ್ಚರವಾಯಿತು ಮದ್ಯಮದದಿಂದ ಕೆಂಪೇರಿದ ಕಣ್ಣುಳ್ಳವನಾಗಿಯೂ,
ಕೆದರಿದ ಪುಷ್ಪಾಭರಣಗಳುಳ್ಳವನಾಗಿಯೂ ಹಾಸಿಗೆಯಿಂದ ಎದ್ದನು ಇಷ್ಟ
ರಲ್ಲಿ ಸುಗ್ರೀವನಿಗೆ ಹಿತರಾಗಿಯೂ, ಕಾಲೋಚಿತವಾದ ಮಂತ್ರಾಲೋಚನ
ಶಕ್ತಿಯುಳ್ಳವರಾಗಿಯೂ,ಅಂತಃಪುರದೊಳಗೆ ಪ್ರವೇಶಿಸುವ ಸ್ವಾತಂತ್ರ್ಯವು
ಳ್ಳವರಾಗಿಯೂ ಇದ್ದ ಪ್ಲಕ್ಷ ಪ್ರಭಾವರೆಂಬ ಮಂತ್ರಿಗಳಿಬ್ಬರು, ಅಂಗದನ
ಮಾತನ್ನು ಕೇಳಿದೊಡನೆ ಅಂತಃಪುರದೊಳಗೆ ಪ್ರವೇಶಿಸಿದರು ಅಲ್ಲಿ ಸುಗ್ರೀ
ವನನ್ನುನೋಡಿ ''ಸ್ವಾಮಿ' ಲಕ್ಷ್ಮಣನು ನಿಮ್ಮ ಧರ್ಮಾರ್ಥಗಳ ವಿಷಯವಾಗಿ
ಕೆಲವು ಮಾತುಗಳನ್ನಾಡಬೇಕಂದು ನಿಮ್ಮಲ್ಲಿಗೆ ಬಂದಿರುವನು " ಎಂದರು
ದೇವೇಂದ್ರನಂತೆ ಉತ್ತಮಾಸನದಲ್ಲಿ ಕುಳಿತಿದ್ದ ಸುಗ್ರೀವನನ್ನು, ಅವರಿಬ್ಬ
ರೂ ಮೊದಲು ಹೀಗೆ ಸಾಮವಾಕ್ಯದಿಂದ ಪ್ರಸನ್ನನಾಗಿ ಮಾಡಿಕೊಂಡು,
ಅವನ ಪಕ್ಕದಲ್ಲಿ ಕುಳಿತು,''ಎಲೈ ಕಪೀಂದ್ರನೆ' ರಾಮಲಕ್ಷ್ಮಣರಿಬ್ಬರೂ ಸತ್ಯ
ಸಂಧರು'ಮಹಾತ್ಮರು ಆ ಒಡಹುಟ್ಟಿದವರಿಬ್ಬರೂ ತಾವಾಗಿಯೇ ಈ ನಮ್ಮ
ರಾಜ್ಯವನ್ನು ವಶಪಡಿಸಿಕೊಂಡು ಪಾಲಿಸಬಲ್ಲವರಾಗಿದ್ದರೂ, ನಿನ್ನೊಡನೆ ಸ
ಖ್ಯವನ್ನು ಮಾಡಿದುದಕ್ಕಾಗಿ ನಿನಗೆ ರಾಜ್ಯವನ್ನು ಕೊಟ್ಟಿರುವರು ಆಇಬ್ಬರಲ್ಲಿ
ಲಕ್ಷ್ಮಣನೆಂಬವನು ಈಗ ಧನುರ್ಧಾರಿಯಾಗಿ ಬಾಗಿಲಲ್ಲಿ ನಿಂತಿರುವನು ಅವನ
ನ್ನುನೋಡಿ ನಮ್ಮ ವಾನರವೀರರೆಲ್ಲರೂ ಭಯದಿಂದ ನಡುಗುತ್ತಾ ಕೂಗಿಕೊ
ಳ್ಳುತ್ತಿರುವನು ಆ ಲಕ್ಷ್ಮಣನು ತಾನು ಏಕಾಗಿಯಾಗಿದ್ದರೂ, ಈ
ನಮ್ಮ ಗುಹೆಯು ಎಂತವರಿಗೂ ದುರ್ಗಮವಾಗಿದ್ದರೂ, ರಾಮಾಜ್ಞೆಯ
ಬಲದಿಂದ ಅದನ್ನೇ ಸಾರಥಿಯನ್ನಾಗಿಯೂ ತನ್ನ ಮನೋರಥವನ್ನೇ ರಥವ
ನ್ನಾಗಿಯೂ ಮಾಡಿಕೊಂಡು ಬಂದು, ಅಂಗದನನ್ನು ನಿನ್ನಲ್ಲಿಗೆ ಕಳು
ಹಿಸಿರುವನು ವೀರ್ಯಶಾಲಿಯಾದ ಆ ಲಕ್ಷ್ಮಣನ ಕಣ್ಣುಗಳಲ್ಲಿ ಕೋಪವು

ಉಕ್ಕುತ್ತಿರುವುದು. ತನ್ನ ದೃಷ್ಟಿಯಿಂದಲೇ ನಮ್ಮ ವಾನರರೆಲ್ಲರನ್ನೂ ದಹಿಸಿಬಿಡುವಂತೆ ಬಾಗಿಲಲ್ಲಿ ಕಾದಿರುವನು ಎಲೆ ವಾನರೇಂದ್ರನೆ ! ನೀನು ಈಗಲೇ ನಿನ್ನ ಮಗನಾದ ಅಂಗದನನ್ನೂ, ನಿನ್ನ ಬಂಧುಗಳನ್ನೂ ಸಂಗಡಕರೆದುಕೊಂಡು ಲಕ್ಷ್ಮಣನಬಳಿಗೆ ಹೋಗಿ, ಅವನಿಗೆ ಸಾಷ್ಟಾಂಗಪ್ರಣಾಮವನ್ನು ಮಾಡಿ ಅವನಕೋಪವನ್ನು ನೀಗಿಸು ! ರಾಮನು ಹೇಳಿ ಕಳುಹಿಸಿದ ಮಾತನ್ನು ಜಾಗರೂಕತೆಯಿಂದ ಶೀಘ್ರದಲ್ಲಿ ನಡೆಸಿಬಿಡು ಮರ್ಯಾದೆಯನ್ನು ಬಿಡದೆ ಕಾಪಾಡಿಕೊಳ್ಳುವನಾಗು ! ಮಾಡಿದ ಪ್ರತಿಜ್ಞೆಯನ್ನು ತಪ್ಪದೆ ನೆರವೇರಿಸು ''ಎಂದರು ಇಲ್ಲಿಗೆ ಮೂವತ್ತೊಂದನೆಯಸರ್ಗವು

ಅಂಗದನ ಮಾತನ್ನು ಕೇಳಿ ಸುಗ್ರೀವನು ಹಾಸಿಗೆಯಿಂದೆದ್ದು ಬರಲು, ಹನುಮಂತನು ಸುಗ್ರೀವನಿಗೆ ಹಿತೋಪದೇಶವನ್ನು ಮಾಡಿದುದು

ಹೀಗೆ ಅಂಗದನು ಪ್ರಮುಖರಾದ ವಾನರಮಂತ್ರಿಗಳೊಡನೆ ಬಂದು, ಲಕ್ಷ್ಮಣನು ಕುಪಿತನಾಗಿ ಬಂದಿರುವ ವಿಷಯವನ್ನು ತಿಳಿಸಿದಮೇಲೆ, ಸುಗ್ರೀವನಿಗೆ ಆದರಲ್ಲಿ ಗಮನವುಂಟಾಯಿತು ಮನಸ್ಸಿನಲ್ಲಿ ಭಯವೂ ಹುಟ್ಟಿತು ಮೆಲ್ಲಗೆ ಆಸನವನ್ನು ಬಿಟ್ಟು ಎದ್ದುಬಂದನು ಆದರೆ ಸುಗ್ರೀವನು ಮಂತ್ರಾಲೋಚನೆಯಲ್ಲಿ ಕುಶಲನಾದುದರಿಂದ, ಮೊದಲು ತನ್ನ ಮನಸ್ಸಿನಲ್ಲಿಯೇ ನ್ಯೂನಾತಿರೇಕಗಳನ್ನು ಚೆನ್ನಾಗಿ ನಿಶ್ಚಯಿಸಿಕೊಂಡು, ಮಂತ್ರಾಲೋಚನೆಗಳ ವಿಷಯದಲ್ಲಿ ಬಹುಕಾಲದ ಅನುಭವವುಳ್ಳವರಾಗಿಯೂ, ಮಂತ್ರಾಲೋಚನೆಯರೀತಿಯನ್ನು ಚೆನ್ನಾಗಿ ಬಲ್ಲವರಾಗಿಯೂ ಇರುವ ಆ ಮಂತ್ರಿಗಳನ್ನು ಕುರಿತು ''ಎಲೈ ಅಮಾತ್ಯರೆ ! ನಾನು ರಾಮನ ವಿಷಯದಲ್ಲಿಯಾಗಲಿ, ಲಕ್ಷ್ಮಣನ ವಿಷಯದಲ್ಲಿಯಾಗಲಿ ಎಂದಾದರೂ ತಪ್ಪುಮಾತುಗಳನ್ನಾಡಿದವನಲ್ಲ ಅವರಿಗೆ ಯಾವವಿಧದಲ್ಲಿಯೂ ಕೆಡುಕುಮಾಡಿದವನೂ ಅಲ್ಲ ಹೀಗಿದ್ದರೂ ರಾಮನ ತಮ್ಮನಾದ ಆ ಲಕ್ಷ್ಮಣನು, ಕೋಪಗೊಂಡಿರುವುದಕ್ಕೆ ಕಾರಣವೇನೆಂದು ಚಿಂತಿಸುತ್ತಿರುವೆನು ನನ್ನಮೇಲೆ ವೈರದಿಂದ ಸಮಯವನ್ನು ಕಾದಿದ್ದ ಯಾರೋ ದುರಾತ್ಮರು, ಆ ಲಕ್ಷ್ಮಣನಲ್ಲಿಗೆಹೋಗಿ ನನ್ನಲ್ಲಿ ಇಲ್ಲದ ದೋ

ಷಗಳನ್ನಾರೋಪಿಸಿ ಹೇಳಿರಬಹುದು. ಹೇಗಾದರೂ ಆಗಲಿ ! ಮೊದಲು ನೀವೆಲ್ಲರೂ ಹೋಗಿ,ನಿಮ್ಮ ನಿಮ್ಮ ಬುದ್ಧಿಚಾತುರ್ಯವನ್ನು ಪಯೋಗಿಸಿ ಅವರ ನಿಶ್ಚಯವನ್ನು ಕ್ರಮವಾಗಿ ತಿಳಿದು ಬರಬೇಕು ಅವನಿಗೆ ಕೋಪವುಂಟಾದುದಕ್ಕೆ ಕಾರಣವೇನು! ಅದಕ್ಕಾಗಿ ಈಗ ನಾವು ಮಾಡಬೇಕಾದುದೇನು? ಎಂಬಿವೆಲ್ಲವನ್ನೂ ಮೆಲ್ಲಮೆಲ್ಲಗೆ ನಿಮ್ಮ ಚಾತುರ್ಯದಿಂದ ಚೆನ್ನಾಗಿ ನಿಶ್ಚಯಿಸಿ ತಿಳಿದುಕೊಳ್ಳಬೇಕು ಎಲೈ ಮಂತ್ರಿಗಳೆ! ನಾನು ಈಗ ಭಯದಿಂದ ಹೊರಗೆದ್ದು ಬಂದೆನೆಂದು ತಿಳಿಯಬೇಡಿರಿ! ಲಕ್ಷ್ಮಣನಿಂದಾಗಲಿ,ರಾಮನಿಂದಾಗಲಿ ನನಗೆ ಸ್ವಲ್ಪವೂ ಭಯವಿಲ್ಲ ಆದರೆ ತನ್ನಲ್ಲಿ ಸ್ನೇಹವುಳ್ಳವರು ನಿಷ್ಕಾರಣವಾಗಿ ಕೋಪಗೊಂಡು ಬಂದಾಗ ಎಂತವನಿಗಾದರೂ ಮನಸ್ಸಿನಲ್ಲಿ ಕಳವಳವುಂಟಾಗದೆ ಇರದು ಸ್ನೇಹಿತರನ್ನು ಸಂಪಾದಿಸುವುದೇನೋ ಸುಲಭವೇ ಆ ಸ್ನೇಹವನ್ನು ಕಾಪಾಡಿಕೊಳ್ಳುವುದು ಬಹಳಕಷ್ಟವು ಯಾರ ಮನಸ್ಸೂ ಒಂದೇ ಸ್ಥಿರವಾಗಿ ನಿಲ್ಲುವುದಲ್ಲ ಅತ್ಯಲ್ಪಕಾರಣದಿಂದಲೇ ಪರಸ್ಪರಪ್ರೀತಿಯು ಕಟ್ಟುಹೋಗುವುದು ಈ ಕಾರಣದಿಂದ ನಾನು ಹೆದರುತ್ತಿರುವೆನು ಮಹಾತ್ಮನಾದ ಆ ರಾಮನು ನನಗೆ ಮಾಡಿರುವ ಮಹೋಪಕಾರಕ್ಕೆ ತಕ್ಕ ಪ್ರತ್ಯುಪಕಾರವನ್ನು ಮಾಡಬೇಕೆಂದರೆ ಎಂದಿಗೂ ನನಗೆ ಸಾಧ್ಯವಲ್ಲ ಇದಕ್ಕಾಗಿ ನನ್ನ ಮನಸ್ಸು.ಕಳವಳಿಸುತ್ತಿರುವುದು" ಎಂದನು ಸುಗ್ರೀವನು ಹೇಳಿದ ಈ ಮಾತುಗಳನ್ನು ಕೇಳಿ, ಕಪಿಪುಂಗವನಾದ ಹನುಮಂತನು ಆ ಮಂತ್ರಿಗಳನಡುವೆ ಸ್ವಬುದ್ಧಿಯಿಂದಾಲೋಚಿಸಿ, ಸುಗ್ರೀವನನ್ನುದ್ದೇಶಿಸಿ ಹೇಳುವನು ''ಎಲೈ ವಾನರೇಂದ್ರನೆ! ನಿನಗೆ ಮಹೋಪಕಾರವನ್ನು ಮಾಡಿ ನಿನ್ನಲ್ಲಿ ಸ್ನೇಹವನ್ನು ಬಳೆಸಿದ ಗುಣಾಢ್ಯನಾದ ಮಿತ್ರನನ್ನು ನೀನು ಮರೆಯದಿರುವುದೇನೂ ಆಶ್ಚರ್ಯವಲ್ಲ ಇದು ನಿನಗೆ ಸಹಜಗುಣವಾಗಿಯೇ ಇರುವುದು ನಿನ್ನಪ್ರೀತಿಗಾಗಿಯೇ ವೀರನಾದ ರಾಮನು,ಸ್ವಲ್ಪಮಾತ್ರವೂ ಭಯವಿಲ್ಲದೆ ಇಂದ್ರನಿಗೆಣೆಯಾದ ಪರಾಕ್ರಮವುಳ್ಳ ಆವಾಲಿಯನ್ನು ಕೊಂದನಲ್ಲವೆ? ಅಷ್ಟುಪ್ರೇಮವುಳ್ಳ ರಾಮನು ಮನಃಪೂರ್ವಕವಾಗಿ ನಿನ್ನಲ್ಲಿ ಕೋಪಗೊಂಡಿರಲಾರನು ಏನೋ ಪ್ರಣಯಕೋಪದಿಂದ ಲಕ್ಷ್ಮಣನನ್ನು ನಿನ್ನಲ್ಲಿಗೆ ಕಳುಹಿಸಿರುವನೆಂಬುದರಲ್ಲಿ ಸಂದೇಹವೇ ಇಲ್ಲ ಆದರೆ ನಿನ್ನಲ್ಲಿಯೂ ತಪ್ಪಿಲ್ಲವೆಂ

ದು ಹೇಳುವುದಕ್ಕಿಲ್ಲ ಕಾಲವನ್ನರಿತು ನಡೆಯುವವರಲ್ಲಿ ನೀನು ಮೇಲೆನಿಸಿ ಕೊಂಡವನಾಗಿದ್ದರೂ, ಈಗ ಪ್ರಮಾದವಶದಿಂದ ಎಚ್ಚರಿಕೆಯನ್ನು ಬಿಟ್ಟು ಈಗ ಯಾವ ಕಾಲವೆಂಬುದನ್ನೇ ಅರಿಯದಿರುವೆ ಈಗ ನಡೆಯುವಕಾಲವೇನೆಂದು ಬಲ್ಲೆಯಾ? ಉಲ್ಲಾಸಗೊಂಡು ಚೆನ್ನಾಗಿ ಹಸುರೇರಿರುವ ಈಎಳೆಯಬಾಳೆಯ ಗಿಡಗಳನ್ನು ನೋಡು! ಈ ಕಾಲದ ಸೊಬಗು ಎಷ್ಟು ಮನೋಹರವಾಗಿರುವುದು ನೋಡು ಗ್ರಹನಕ್ಷತ್ರಗಳೆಲ್ಲವೂ ಎಷ್ಟು ನಿರ್ಮಲವಾಗಿರುವುವು ನೋಡು! ಆಕಾಶದಲ್ಲಿ ಒಂದು ಮೇಘವಾದರೂ ಇಲ್ಲದಿರುವುದನ್ನು ಕಾಣಲಿಲ್ಲವೆ? ದಿಕ್ಕುಗಳೂ, ನದಿಗಳೂ, ಕೊಳಗಳೂ ಎಷ್ಟುಪ್ರಸನ್ನವಾಗಿರುವುವು ನೋಡು ಇದೇ ರಾಜರಿಗೆ ಉದ್ಯೋಗಕಾಲವೆಂಬುದನ್ನು ನೀನು ತಿಳಿಯದೇ ಹೋದೆಯಲ್ಲಾ! ನೀನು ಎಚ್ಚರಿಕೆಯಿಲ್ಲದಿರುವುದನ್ನು ನೋಡಿಯೇ ಲಕ್ಷ್ಮಣನು ಇಲ್ಲಿಗೆ ಬಂದಿರುವನು ಎಲ ವಾನರರಾಜನೆ! ನೀನು ಮುಖ್ಯವಾಗಿ ಗಮನದಲ್ಲಿಡಬೇಕಾದ ಮತ್ತೊಂದುವಿಷಯವುಂಟು * ಈಗ ರಾಮನಾದರೋ ಪತ್ನಿಯನ್ನು ಕಳೆದುಕೊಂಡು ದುಃಖಿತನಾಗಿರುವನು ನಿನಗುಪಕಾರಮಾಡಿದ ಮಹಾತ್ಮನಾದ ಆತನು ಈಗ ಬೇರೊಬ್ಬನ ಮೂಲಕವಾಗಿ ಹೇಳಿ ಕಳುಹಿಸಿರುವ ಮಾತುಗಳು ಒಂದುವೇಳೆ ಪರುಷವಾಗಿದ್ದರೂ ನೀನು ಸಹಿಸಿಕೊಳ್ಳಬೇಕು ನೀನಂತೂ ದೊಡ್ಡ ತಪ್ಪನ್ನು ಮಾಡಿಬಿಟ್ಟಿರುವೆ? ಆದುದರಿಂದ ಈಗ ಕುಪಿತನಾಗಿ ಬಂದಿರುವ ಲಕ್ಷ್ಮಣನಿಗೆ ಕೈಮುಗಿದು, ಯಾವವಿಧದಿಂದಲಾದರೂ ಆತನನ್ನು ಪ್ರಸನ್ನನನ್ನಾಗಿ ಮಾಡುವುದುಹೊರತು, ಈ ಕಾಲಕ್ಕೆ ಬೇರೊಂದೂ ನಿನಗೆ ಯುಕ್ತವಾಗಿ ತೋರಲಿಲ್ಲ ಇದರಿಂದ ಗೌರವಕ್ಕೆ ಹಾನಿಯೆಂದೆಣಿಸಬೇಡ! ಲೋಕದಲ್ಲಿ ಮಂತ್ರಿಗಳು ರಾಜನಿಗಧೀನರಾಗಿದ್ದರೂ, ಸಮಯಗಳಲ್ಲಿ ಆ ರಾಜನಿಗೆ ಅವರು ಹಿತವನ್ನು ಬೋಧಿಸಬೇಕಾದುದೇ

---

* ಇಲ್ಲಿ ಹೇಳಿರುವ ವಿಷಯಗಳೇ ರಾಮನ ಪರುಷವಾಕ್ಯಗಳನ್ನು ಸಹಿಸಿಕೊಳ್ಳುವುದಕ್ಕೆ ಕಾರಣಗಳೆಂದು ಗ್ರಾಹ್ಯವು ಅವನು ನಿನಗೆಉಪಕಾರಮಾಡಿದ ಮಹಾತ್ಮನಾದುದರಿಂದ, ಅವನು ಎಷ್ಟೇ ಪರುಷವಾಕ್ಯಗಳನ್ನು ಹೇಳಿದರೂ ನೀನು ಸಹಿಸಿಕೊಳ್ಳಬೇಕು ಇದರಮೇಲೆ ದುಃಖಿತನಾಗಿರುವುದರಿಂದ ಇನ್ನೂ ಸಹಿಸಿಕೊಳ್ಳಬೇಕು ಇವಲ್ಲದೆ ಅವು ಬೇರೊಬ್ಬನಮೂಲಕವಾಗಿ ಹೇಳಿಕಳುಹಿಸಿದ ಮಾತುಗಳಾದುದರಿಂದ ನೀನು ಕೋಪಿಸಲೇಬಾರದೆಂದು ಭಾವವು.

ಅವಶ್ಯವಾಡುದರಿಂದ,ಈಗ ನಾನೂ ನಿನ್ನಲ್ಲಿ ಭಯವನ್ನು ಬಿಟ್ಟು ನನಗೆ ತೋರಿದ ಹಿತವನ್ನು ಹೇಳುತ್ತಿರುವೆನು ಆ ರಾಮನುಮಾತ್ರ ಕೋಪಗೊಂಡು ಕೈಯಲ್ಲಿ ಬಿಲ್ಲನ್ನೆತ್ತಿ ಹಿಡಿದರೆ, ದೇವಾಸುರಗಂಧರ್ವರಿಂದ ಕೂಡಿದ ಈ ಸಮಸ್ತಜಗತ್ತನ್ನಾದರೂ ತನ್ನ ವಶದಲ್ಲಿರಿಸಿಕೊಳ್ಳಬಲ್ಲನು ಯಾವಾಗಲೂ ನಮುಗಿಂತಲೂ ಪ್ರಬಲರಾದವರು ಕೋಪಗೊಂಡಾಗ ನಾವು ಅವರನ್ನು ಪ್ರಸನ್ನರನ್ನಾಗಿ ಮಾಡಿಕೊಳ್ಳಬೇಕೇ ಹೊರತು ಅವರನ್ನು ಮತ್ತಷ್ಟು ಕೋಪಗೊಳಿಸಬಾರದು ಆದುದರಿಂದ ಈಗ ನಾವು ನಮ್ರತೆಯಿಂದಲೇ ಆತನನ್ನು ಪ್ರಸನ್ನನನ್ನಾಗಿ ಮಾಡಬೇಕು ಅದರಲ್ಲಿಯೂ ಮೊದಲು ನಾವು ಅವನಿಂದ ಉಪಕಾರವನ್ನು ಪಡೆದವರಾದುದರಿಂದ, ಆ ಕೃತಜ್ಞತೆಯನ್ನು ಸ್ಮರಿಸಿಕೊಳ್ಳುವಪಕ್ಷದಲ್ಲಿ ಎಂದಿಗೂ ಕೋಪಗೊಳಿಸಬಾರದು ಎಲೆ ರಾಜನೆ ! ಈಗ ನೀನು ನಿನ್ನಪುತ್ರನಾದ ಅಂಗದನೊಡನೆಯೂ, ಇತರ ಬಂಧುಜನಗಳೊಡನೆಯೂಕೂಡಿ ಅವನಿಗೆ ಸಾಷ್ಟಾಂಗಪ್ರಣಾಮವನ್ನು ಮಾಡಿ, ಪತ್ನಿಯರು ಪತಿಗೆ ವಶರಾಗಿರುವಂತೆ ಆತನ ಗೆರೆಯನ್ನು ಮೀರದ, ನಿನ್ನ ಪ್ರತಿಜ್ಞೆಯನ್ನೂ ತಪ್ಪದೆ ನಡೆಸು ಮುಖ್ಯವಾಗಿ ನೀನು ರಾಮನ ಮಾತನ್ನಾಗಲಿ, ಲಕ್ಷ್ಮಣನ ಮಾತನ್ನಾಗಲಿ ಸ್ವಲ್ಪಮಾತ್ರವೂ ಮನಸ್ಸಿನಿಂದಲಾದರೂ ಮೀರಿನಡೆಯುವುದು ಯುಕ್ತವಲ್ಲ ಇಂದ್ರತೇಜಸ್ಸುಳ್ಳ ಆ ರಾಮಲಕ್ಷ್ಮಣರ ದಿವ್ಯಾಸ್ತ್ರಬಲವನ್ನು ಮಾತ್ರವೇ ಅಲ್ಲದೆ, ಮನುಷ್ಯರಿಗೆ ಸಹಜವಾದ ಆವರ ದೇಹಬಲವನ್ನೂ ಕೂಡ ನಿನ್ನಮನಸ್ಸೇ ಬಲ್ಲುದು " ಎಂದನು ಇಲ್ಲಿಗೆ ಮೂವತ್ತೆರಡನೆಯ ಸರ್ಗವು

ಅಂತಃಪುರಕ್ಕೆ ಬಂದ ಲಕ್ಷ್ಮಣನನ್ನು ತಾರೆಯು ಪ್ರಸನ್ನನನ್ನಾಗಿ ಮಾಡಿದುದು

ಇಷ್ಟರಲ್ಲಿ ಸುಗ್ರೀವನಬಳಿಗೆ ಹೋಗಿದ್ದ ಅಂಗದನು ಹಿಂತಿರುಗಿ ಬಂದು ಲಕ್ಷ್ಮಣನನ್ನು ಕರೆಯಲು, ಆತನೊಡನೆ ಲಕ್ಷ್ಮಣನು ಭಯಂಕರವಾದ ಕಿಷ್ಕಿಂಧೆಯೆಂಬ ಗುಹೆಯನ್ನು ಪ್ರವೇಶಿಸಿದನು. ಅದರ ಬಾಗಿಲಲ್ಲಿ ಮಹಾಬಲಾಢ್ಯರಾಗಿಯೂ, ದೊಡ್ಡದೇಹವುಳ್ಳವರಾಗಿಯೂ ಇದ್ದ ಅನೇಕ ವಾನರರು ಕಾವಲಿದ್ದರು ಅವರೆಲ್ಲರೂ ಈ ಲಕ್ಷ್ಮಣನನ್ನು ಕಂಡೊಡನೆ


ಕೈಮುಗಿದು ನಿಂತರು ಕೋಪದಿಂದ ನಿಟ್ಟುಸಿರನ್ನು ಬಿಡುತ್ತ ಮುಂದೆಬರುತ್ತಿರುವ ದಶರಥಪುತ್ರನಾದ ಆ ಲಕ್ಷ್ಮಣನನ್ನು ಕಂಡೊಡನೆ ಅವರಿಗೆ ಮಹಾಭಯವೂ ಹುಟ್ಟಿತು ಯಾರೂ ಅವನ ಸಮೀಪಕ್ಕೆ ಬರಲಾರದೆ ಹಿಂದಾಗಿಯೇ ಇದ್ದರು ಲಕ್ಷ್ಮಣನು ಮುಂದೆಹೋಗಿ ಆ ಗುಹೆಯನ್ನು ಸುತ್ತಲೂ ಕಣ್ಣಿಟ್ಟುನೋಡಿದನು ಆ ಪ್ರದೇಶವೆಲ್ಲವೂ ಕೇವಲರತ್ನಮಯವಾದಂತೆಯೇ ಕಾಣುತಿತ್ತು ಅಲ್ಲಿನ ತೋಟಗಳೆಲ್ಲವೂ ಪುಷ್ಪಭರಿತಗಳಾಗಿ ದೇವಯೋಗ್ಯವಾದ ಪ್ರದೇಶದಂತೆ ಕಾಣುತಿತ್ತು ಎಲ್ಲೆಲ್ಲಿಯೂ ರತ್ನರಾತಿಗಳನ್ನೆ ರಚಿದಂತೆ ಅತಿರಮ್ಯವಾಗಿದ್ದಿತು ಅದರಲ್ಲಿ ಉಪ್ಪರಿಗೆಗಳೂ, ದೇವಾಲಯಗಳೂ ಹೇರಳವಾಗಿದ್ದುವು ಬಗೆಬಗೆಯ ಅಂಗಡಿಗಳೂ ಶೋಭಿಸುತಿದ್ದುವು ಬೇಕಾದ ಹಣ್ಣುಗಳಿಂದಲೂ, ಪುಷ್ಪಗಳಿಂದಲೂ ತುಂಬಿದ ವೃಕ್ಷಗಳು ಕಂಗೊಳಿಸುತಿದ್ದುವು ದೇವಗಂಧರ್ವರ ಅಂಶಗಳಿಂದ ಜನಿಸಿದವರಾಗಿಯೂ, ಕಾಮರೂಪಿಗಳಾಗಿಯೂ, ದಿವ್ಯಮಾಲಿಕೆಗಳನ್ನೂ, ದಿವ್ಯವಸ್ತ್ರಗಳನ್ನೂ ಧರಿಸಿದವರಾಗಿಯೂ, ಪ್ರಿಯದರ್ಶನ ವುಳ್ಳವರಾಗಿಯೂ ಇದ್ದ ಅನೇಕವಾನರರು ತುಂಬಿದ್ದರು ಅಗರು ಚಂದನ ಪದ್ಮಗಳೆಂಬ ಬಗೆಬಗೆಯ ಸುಗಂಧವುಳ್ಳ ಲೇಪನದ್ರವ್ಯಗಳಿಂದಲೂ, ಬಗೆಬಗೆಯ ಮದ್ಯಗಳಿಂದಲೂ,ಅಲ್ಲಿನ ರಾಜವೀಥಿಗಳೆಲ್ಲವೂ ಸುವಾಸಿತಗಳಾಗಿ ಘಮಘಮಿಸುತ್ತಿದ್ದುವು ಸ್ವಚ್ಛವಾದ ನೀರುಳ್ಳ ಗಿರಿನದಿಗಳು ಅಲ್ಲಲ್ಲಿ ಪ್ರವಹಿಸುತಿದ್ದುವು ಈ ಶೋಭಾತಿಶಯಗಳೆಲ್ಲವನ್ನೂ ನೋಡುತ್ತ ಲಕ್ಷ್ಮಣನು,ಆ ಗುಹೆಯ ರಾಜಬೀಥಿಯಲ್ಲಿ ಹೋಗುತಿರ್ಪಾಗ, ಅಲ್ಲಲ್ಲಿ ನಡುನಡುವೆ ಆಪುರದಲ್ಲಿ ಪ್ರಮುಖರಾದ ವಾನರವೀರರ ಮನೆಗಳನ್ನು ನೋಡಿದನು ಮೊದಲು ಅತಿಮನೋಹರವಾದ ಅಂಗದನ ಆರಮನೆಯನ್ನು ಕಂಡನು ಹಾಗೆಯೇ ಮೈಂದ, ದ್ವಿವಿದ, ಗವಯ, ಗವಾಕ್ಷ, ಗಜ, ಶರಭ, ವಿದ್ಯುನ್ಮಾಲಿ, ಸಂಪಾತಿ, ಸೂರ್ಯಾಕ್ಷ, ಹನುಮಂತ, ವೀರಬಾಹು, ಸುಬಾಹು, ಮಹಾತ್ಮನಾದ ನಳಿ, ಕುಮುದ, ಸುಷೇಣ, ತಾರ, ಜಾಂಬವಂತ, ದಧಿಮುಖ, ನೀಲ, ಸುಪಾಟಲ, ಸುನೇತ್ರರೇ ಮುಂತಾಗಿ ಮಹಾತ್ಮರಾದ ಅನೇಕಕಪಿಮುಖ್ಯರು ವಾಸಮಾಡುತ್ತಿದ್ದ ದೃಢವಾದ ದೊಡ್ಡಮನೆಗಳ ಸಾಲನ್ನು ನೋಡುತ್ತ ಹೋದನು. ಒಂದೊಂದು

ಮನೆಯೂ ಬಿಳೀಮೇಘದಂತೆ ಪ್ರಕಾಶಿಸುತಿತ್ತು. ಒಂದೊಂದುಮನೆಯೂ ಅನೇಕ ದಿವ್ಯಪುಷ್ಪಮಾಲಿಕೆಗಳಿಂದಲಂಕೃತವಾಗಿರುತ್ತಿತ್ತು ಒಂದೊಂದು ಮನೆಯಲ್ಲಿಯೂ ನೂರಾರುಮಂದಿ ಉತ್ತಮಸ್ತ್ರೀಯರು ನೆರೆದಿದ್ದರು ಒಂದೊಂದುಮನೆಯೂ ಧನಧಾನ್ಯಸಮೃದ್ಧವಾಗಿ ಶೋಭಿಸುತಿತ್ತು ಇವೆಲ್ಲವನ್ನೂ ನೋಡುತ್ತ ಮುಂದೆ ಹೋಗಿ, ಕೊನೆಗೆ ಸುಗ್ರೀವನ ಅರಮನೆಯನ್ನೂ ಕಂಡನು ಅದು ಸಾಕ್ಷಾನ್ಮಹೇಂದ್ರಭವನದಂತೆಯೇ ಅತಿಮನೋಹರವಾಗಿ, ಇತರರಿಗೆ ಪ್ರವೇಶಿಸಲಸಾಧ್ಯವಾದ ಬಿಳೀಪ್ರಾಕಾರದಿಂದ ಸುತ್ತಲೂ ಪರಿವೃತವಾಗಿತ್ತು ಕೈಲಾಸಶಿಖರದಂತೆ ಬಿಳುಪಾದ ಅನೇಕಪ್ರಾಕಾರಶಿಖರಗಳಿಂದಲೂ, ಬೇಕುಬೇಕಾದ ಫಲವೃಕ್ಷಗಳಿಂದಲೂ, ಹೂಗಿಡಗಳಿಂದಲೂ, ನಿಬಿಡವಾಗಿತ್ತು. ಸಾಮಾನ್ಯವೃಕ್ಷಗಳೇ ಅಲ್ಲದೆ, ವಾಲಿಗಾಗಿ ದೇವೇಂದ್ರನು ಅನುಗ್ರಹಿಸಿಕೊಟ್ಟ ಅನೇಕದಿವ್ಯವೃಕ್ಷಗಳೂ ತುಂಬಿದ್ದುವು ಈ ವೃಕ್ಷಗಳಿಂದ ಅಲ್ಲಿ ಒಂದು ಅಪೂರ್ವಶೋಭೆಯು ತುಳುಕುತಿತ್ತು ಕರೀಮೇಘಗಳಂತೆ ಹಸುರಾಗಿ ಕಾಣುತಿದ್ದ ಆ ದಿವ್ಯವೃಕ್ಷಗಳೆಲ್ಲವೂ ದಿವ್ಯಫಲಗಳಿಂದಲೂ, ದಿವ್ಯಪುಷ್ಪಗಳಿಂದಲೂ ತುಂಬಿ, ಶೀತಲಚ್ಛಾಯೆಯುಳ್ಳವುಗಳಾಗಿದ್ದುವು ಆ ಅರಮನೆಯ ಬಾಗಿಲಲ್ಲಿ ಮಹಾಬಲಾಢ್ಯರಾದ ಕಪಿಗಳು ಶಸ್ತ್ರಧಾರಿಗಳಾಗಿ ಕಾವಲಿರುತಿದ್ದರು ಅನೇಕದಿವ್ಯನೂತನಕಗಳಿಂದಲೂ ಚಿನ್ನದ ತೋರಣಗಳಿಂದಲೂ ಅಲಂಕೃತವಾಗಿ,ಅತಿಶುಭ್ರವಾಗಿ,ನೇತ್ರಾನಂದಕರವಾಗಿದ್ದ ಆ ಸುಗ್ರೀವನ ಅರಮನೆಯನ್ನು ಪ್ರವೇಶಿಸಿದನು ಸೂರ್ಯನು ಮಹಾಮೇಘದನಡುವೆ ನುಗ್ಗುವಂತೆ,ಲಕ್ಷ್ಮಣನು ಅಲ್ಲಿ ಯಾರತಡೆಯೂ ಇಲ್ಲದೆ ಧಾರಾಳವಾಗಿ ಬಾಗಿಲನ್ನು ದಾಟಿ, ಅನೇಕಜನಸಮೂಹದಿಂದ ತುಂಬಿದ ಆ ಅರಮನೆಯ ಏಳು ತೊಟ್ಟಿಗಳನ್ನೂ ಅತಿಕ್ರಮಿಸಿಹೋದನು ಕೊನೆಗೆ ಅತಿರಹಸ್ಯವಾದ ಸುಗ್ರೀವನ ಅಂತಃಪುರವನ್ನೂ ಪ್ರವೇಶಿಸಿದನು ಚಿನ್ನ ಬೆಳ್ಳಿಯ ಮಂಚಗಳಿಂದಲೂ, ಬಗೆಬಗೆಯ ಉತ್ತಮಾಸನಗಳಿಂದಲೂ, ಬೆಲೆಯುಳ್ಳ ಹಾಸಿಗೆಗಳಿಂದಲೂ ಶೋಭಿತವಾದ ಆ ಅಂತಃಪುರವನ್ನು ಪ್ರವೇಶಿಸುತ್ತಿರುವಾಗಲೇ, ಕಿವಿಗಿಂಪಾದ ಸಂಗೀತಸ್ವರವು ಇವನ ಕಿವಿಗೆ ಬಿದ್ದಿತು ಆ ಸಂಗೀತವು ಮನೋಹರವಾದ ಶ್ರುತಿಯಿಂದಲೂ, ತಂತಿಯಿಂದ ನುಡಿಯುವ ನಾನಾವಿಧಸ್ವರಗಳಿಂದಲೂ

ಕಲೆತು, ಹೆಚ್ಚುತಗ್ಗಿಲ್ಲದೆ ಸಮಸ್ಥಾಯಿಯಾಗಿ, ಅಕ್ಷರಗಳೂ ಪದಗಳೂ ಸ್ಪಷ್ಟವಾಗಿ, ಕೇಳಿಬರುವ ಬಾಯಿಹಾಡುಗಳಿಂದಲೂ ಕೂಡಿ, ಕರ್ಣಾನಂದವನ್ನುಂಟುಮಾಡುತಿತ್ತು ಆ ಅಂತಃಪುರದಲ್ಲಿ ನಾನಾವಿಧಗಳಾದ ವೇಷಭೂಷಣಗಳನ್ನು ಧರಿಸಿ, ರೂಪದಿಂದಲೂ ಯೌವನದಿಂದಲೂ ಮೇಲೆನಿಸಿಕೊಂಡ ಅನೇಕಸ್ತ್ರೀಯರನ್ನು ನೋಡಿದನು ಅಲ್ಲಿ ಸತ್ಕುಲಪ್ರಸೂತರಾಗಿ ಉತ್ತಮಾಭರಣಗಳಿಂದಲಂಕೃತರಾಗಿ, ಫಲಸಮೂಹಗಳನ್ನೂ, ಪುಷ್ಪಮಾಲೆಗಳನ್ನೂ ಸಂಗ್ರಹಿಸುವುದರಲ್ಲಿ ನಿರತರಾದ ಅನೇಕಚೇಟಿಯರನ್ನೂ ಕಂಡನು ಧನಧಾನ್ಯರತ್ನಾದಿಗಳಿಂದ ನಿತ್ಯತೃಪ್ತರಾಗಿ, ತಮಗೆ ನಿಯಮಿಸಲ್ಪಟ್ಟ ಕಾರ್ಯಗಳಲ್ಲಿ ಬಹಳ ಜಾಗರೂಕರಾಗಿ, ಉತ್ತಮವಸ್ತ್ರಾಭರಣಗಳಿಂದ ಅಲಂಕೃತರಾಗಿಯೂ ಇದ್ದ ಸೇವಕರನ್ನೂ ಕಂಡನು ಹಾಗೆಯೇ ಅಲ್ಲಿ ವಾನರಸ್ತ್ರೀಯರ ಸುರತಸಂಭ್ರಮದಿಂದುಂಟಾದ ಕಾಲಂದುಗೆಯ ಧ್ವನಿಗಳನ್ನೂ, ಅವರ ನಡುಗೆಜ್ಜೆಗಳ ಶಬ್ದವನ್ನೂ ಕೇಳಿ, ಈ ಲಕ್ಷ್ಮಣನಿಗೆ ಒಳಗೊಳಗೆ ನಾಚಿಕೆಯುಂಟಾಯಿತು ಹೀಗೆ ಸುಗ್ರೀವನು ಆ ವಾನರಸ್ತ್ರೀಯರೊಡನೆ ಕ್ರೀಡಿಸುತ್ತ ಮೈಮರೆತಿರುವುದನ್ನುನೋಡಿ ಲಕ್ಷ್ಮಣನಿಗೆ ತಡೆಯಲಾರದ ಕೋಪವುಂಟಾಯಿತು ಸನುಸ್ತದಿಕ್ಕುಗಳನ್ನೂ ಶಬ್ದದಿಂದ ತುಂಬುವಂತೆ ತನ್ನ ಧನುಸ್ಸನ್ನೆತ್ತಿ ಅದರ ನಾಣೊತ್ತಿ ಟಂಕಾರಮಾಡಿದನು ತನ್ನಣ್ಣನಾದ ರಾಮನ ಕಷ್ಟವನ್ನು ನೆನೆಸಿಕೊಂಡಷ್ಟೂ ಇವನ ಕೋಪವು ಮೇಲೆಮೇಲೆ ಉಕ್ಕಿ ಬರುತಿತ್ತು. ಅದರೂ ಈತನು ಸಚ್ಚರಿತ್ರವುಳ್ಳವನಾದುದರಿಂದ,ಆ ವಾನರಸ್ತ್ರೀಯರಿರುವ ಪ್ರದೇಶಕ್ಕೆ ನೆಟ್ಟನೆ ಪ್ರವೇತಿಸಲಾರದೆ ಸ್ತ್ರೀಯರಿಲ್ಲದ ವಿವಿಕ್ತವಾದ ಒಂದುಸ್ಥಳದಲ್ಲಿ ನಿಂತಿದ್ದನು ಲಕ್ಷ್ಮಣನು ಮಾಡಿದ ಧನುಷ್ಟಂಕಾರಧ್ವನಿಯು ಅತ್ತಲಾಗಿ ಸುಗ್ರೀವನ ಕಿವಿಗೂ ಬಿದ್ದಿತು ಲಕ್ಷ್ಮಣನು ಅಂತಃಪುರಕ್ಕೆಬಂದುಬಿಟ್ಟನೆಂದು ತಿಳಿದುಕೊಂಡು,ಭಯದಿಂದ ಬೆಜ್ಜರಬಿದ್ದು, ಆಗಲೇ ಥಿಗ್ಗನೆ ಆಸನದಿಂದೆದ್ದು ಹೊರಟುಬರುತ್ತ,ತನ್ನಲ್ಲಿ ತಾನು ''ಓಹೋ!ಅಂಗದನು ಹೇಳಿದಂತೆ ಭ್ರಾತೃವತ್ಸಲನಾದ ಲಕ್ಷ್ಮಣನು ನಿಜವಾಗಿ ಇಲ್ಲಿಗೆ ಬಂದೇಬಿಟ್ಟನೆ?ಅದರಲ್ಲಿ ಸಂದೇಹವೇನಿದೆ"ಎಂದು ತತ್ತಳಿಸುತಿದ್ದನು ಮೊದಲೇ ಅಂಗದನು ಲಕ್ಷ್ಮಣನ ಕೋಪವನ್ನು ತಿಳಿಸಿದ್ದುದಲ್ಲದೆ,ಈಗ ಭಯಂಕರವಾಗಜರ್ಜ್ಯ

ಘೋಷವೂ ಸುಗ್ರೀವನ ಕಿವಿಗೆ ಬಿದ್ದುದರಿಂದ, ಲಕ್ಷ್ಮಣನು ಕೋಪದಿಂದ ಬಂದಿರುವನೆಂಬುದು ಅವನ ಮನಸ್ಸಿಗೆ ಚೆನ್ನಾಗಿ ನಿರ್ಧರವಾಯಿತು ಆಗಲೇ ಅವನ ಮುಖವು ಬಾಡಿಹೋಯಿತು ಆಗ ಸುಗ್ರೀವನು ಭಯದಿಂದ ಚಂಚಲವಾದ ಮನಸ್ಸುಳ್ಳವನಾದರೂ,ತನ್ನ ಮನಸ್ಸನ್ನು ಸ್ವಾಧೀನಪಡಿಸಿಕೊಂಡು ಮುಂಥೆ ತನಗೆ ಹಿತಕರವಾದ ರೀತಿಯನ್ನೂ ಚಿಂತಿಸಿ ಸಮೀಪದಲ್ಲಿದ್ದ ತಾರೆಯನ್ನು ಕುರಿತು ,,ಎಲೆ ಸುಭ್ರು! ಲಕ್ಷ್ಮಣನ ಮನಸ್ಸಾದರೋ ಸ್ವಾಭಾವಿಕವಾಗಿಯೇ ಬಹಳಮೃದುವಾದುದು ಹೀಗಿದ್ದರೂ ಅವನು ನಿಷ್ಕಾರಣವಾಗಿ ಕೋಪಗೊಂಡು ಬಂದಿರುವಂತಿದ ಇದಕ್ಕೆ ಕಾರಣವೇನಿರಬಹುದು? ರಾಜಕುಮಾರನಾದ ಆ ಲಕ್ಷ್ಮಣನು ಹೀಗೆ ಕುಪಿತನಾಗಿ ಬರುವುದಕ್ಕೆ ನೀನು ಎಣಿಸಿರುವ ಕಾರಣವೇನು? ಲಕ್ಷ್ಮಣನು ಸಾಮಾನ್ಯನಲ್ಲ ಪುರುಷಸತ್ತಮನು' ಎಂದಿಗೂ ಆತನು ನಿಷ್ಕಾರಣವಾಗಿ ಕೋಪಿಸುವನಲ್ಲ ನಾವೇನಾದರೂ ಈ ಲಕ್ಷ್ಮಣನಿಗೆ ಅಪ್ರಿಯವನ್ನು ಮಾಡಿದುದಾಗಿ ನಿನಗೆ ಜ್ಞಾಪ್ತಿಯುಂಟೆ? ಚೆನ್ನಾಗಿ ನಿನ್ನ ಮನಸ್ಸಿನಲ್ಲಿ ಪರ್ಯಾಲೋಚಿಸಿ, ನಿನ್ನ ಬುದ್ಧಿಚಾತುರ್ಯದಿಂದ ನಿನಗೆ ತೋರಿದುದನ್ನು ಹೇಳು ಅದಕ್ಕಿಂತಲೂ ಈಗ ನೀನೇ ಆ ಲಕ್ಷ್ಮಣನಬಳಿಗೆ ಹೋಗಿ ಆತನನ್ನು ನೋಡಿಬರುವುದು ಯುಕ್ತವಾಗಿರುವುದು ನೀನೇ ಮೊದಲು ಆತನನ್ನು ನೋಡಿ ಸಾಮವಾಕ್ಯದಿಂದ ಪ್ರಸನ್ನನಾಗಿ ಮಾಡಿಬರುವುದೇ ಉತ್ತಮವು. ದೊಡ್ಡವರು ಯಾವಾಗಲೂ ಸ್ತ್ರೀಯರಲ್ಲಿ ಅಷ್ಟು ತೀವ್ರವಾಗಿ ನಡೆಯಲಾರರು ಆದುದರಿಂದ ನಿನ್ನನ್ನು ನೋಡಿದೊಡನೆ ಲಕ್ಷ್ಮಣನ ಮನಸ್ಸು ಪ್ರಸನ್ನವಾಗಬಹುದು ಆತನ ಕೋಪವೂ ಅಡಗಿಹೋಗುವುದು ಮೊದಲು ನೀನು ಹೋಗಿ ಆ ಲಕ್ಷ್ಮಣನಿಗೆ ಸಾಂತ್ವವಾಕ್ಯಗಳನ್ನು ಹೇಳಿ ಇದರಿಂದ ಅವನ ಮನಸ್ಸು ಪ್ರಸನ್ನವಾದರೆ,ಆಮೇಲೆ ನಾನು ಹೋಗಿ ನೋಡುವೆನು"ಎಂದನು ಈ ಉಪಾಯವೇ ತಾರೆಗೂ ಉಚಿತವೆಂದು ತೋರಿತು ಆಗಲೇ ಅವಳು ಆ ಲ್ಲಿಂದ ಹೊರಟಳು ರಾತ್ರಿಯೆಲ್ಲವೂ ಸುಗ್ರೀವನೊಡನೆ ರತಿಕ್ರೀಡೆಯಿಂದುಂಟಾದ ಆಯಾಸದಿಂದ ಬೇಗ ನಡೆಯಲಾರದೆ ತಪ್ಪುಹೆಜ್ಜೆಯನ್ನಿಡುತ್ತ, ಪಾನ ಮದದಿಂದ ತೊಳಲುವ ಕಣ್ಣಾಲೆಯುಳ್ಳವಳಾಗಿ, ಸ್ವಲ್ಪವಾಗಿ ನಡಿಲಿದ ಒಡ್ಯಾಣದಿಂದಲೂ,ಎದೆಕಟ್ಟಿನಿಂದಲೂ ಕೂಡಿದವಳಾಗಿ, ಬಗ್ಗಿ ಸಮ್ಮೆಯ್ಯ್ಯೆ

ಳ್ಳವಳಾಗಿ ಹೊರಟುಬರುತಿದ್ದುದರಿಂದ, ಸಂಭೋಗಚಿಹ್ನಗಳೆಲ್ಲವೂ ಅವಳಲ್ಲಿ ಸ್ಪಷ್ಟವಾಗಿ ಕಾಣುತಿದ್ದುವು ಹೀಗೆ ತಾರೆಯು ಸಮೀಪದಲ್ಲಿ ಬಂದು ನಿಂತರೂ ಮಹಾತ್ಮನಾದ ಲಕ್ಷ್ಮಣನು ಪರಸ್ತ್ರೀಯರನ್ನು ಕಣ್ಣೆತ್ತಿ ನೋಡಬಾರದೆಂಬ ದೃಢಮನಸ್ಸಿನಿಂದ, ಅವಳನ್ನುಕಂಡೂ ಕಾಣದಂತೆ ಉದಾಸೀನನಾಗಿ ತಲೆಯನ್ನು ಬಗ್ಗಿಸಿಕೊಂಡು ನಿಂತಿದ್ದನು ಆ ಸ್ತ್ರೀಯು ಸಮೀಪಕ್ಕೆ ಬಂದೊಡನೆಯೇ ಅವನ ಮನಸ್ಸಿನಲ್ಲಿದ್ದ ರಾಮಾವೇಶವೂ ಅಡಗಿಹೋಯಿತು ತಾರೆಯು ಹಾಗೆ ಸಂಭೋಗಚಿಹ್ನಗಳೊಡನೆ ಬಂದಿದ್ದರೂ, ಪಾನಮದದಿಂದಲಜ್ಜೆಯನ್ನು ಮರೆತು, ಲಕ್ಷ್ಮಣನು ತನ್ನನ್ನು ಕಂಡೊಡನೆ ಪ್ರಸನ್ನನಾದುದನ್ನೂ ತಿಳಿದು,ಧೈರ್ಯವನ್ನು ತಂದುಕೊಂಡಳು ಆಮೇಲೆ ಆಕೆಯು ಮೊದಮೊದಲು ಬಹಳಸಲಿಗೆಯಿಂದ ಸಾಮವಾಕ್ಯಗಳನ್ನೇ ಆಡುತ್ತಿದ್ದು ಕೊನೆಗೆ ಸಾರವತ್ತಾದವಾಕ್ಯಗಳಿಂದ ''ಎಲೈರಾಜಕುಮಾರನೆ! ನಿನ್ನ ಈ ಕೋಪಕ್ಕೆ ಕಾರಣವೇನು? ನಿನ್ನ ಮಾತನ್ನು ಮೀರಿ ನಡೆದವನಾವನು? ಒಣಗಿದಮರಗಳಿಂದ ತುಂಬಿದಕಾಡಿನಲ್ಲಿ ಹತ್ತಿಕೊಂಡು ಉರಿಯುವ ಕಾಡುಗಿಚ್ಚಿಗೆ ಪ್ರವೇಶಿಸುವಂತೆ,ವಿವೇಕವಿಲ್ಲದ ಯಾವಮೂಢನು ನಿರ್ಭಯವಾಗಿ ನಿನ್ನನ್ನು ಕಣಕುವನು?" ಎಂದಳು ಹೀಗೆ ತಾರೆಯು ತನ್ನಮುಂದೆ ನಿಂತು ಮೊದಮೊದಲು ಮೃದುವಾಕ್ಯಗಳನ್ನಾಡಿ,ಕೊನೆಗೆ ನಿಷ್ಕಪಟವಾಗಿಯೂ, ಪ್ರೇಮಸೂಚಕವಾಗಿಯೂ ಹೇಳಿದ ಮಾತನ್ನು ಕೇಳಿ ಲಕ್ಷ್ಮಣನು ಆಕೆಯನ್ನು ಕುರಿತು ''ಎಲೆ ತಾರೆ! ನೀನು ಪತಿಹಿತದಲ್ಲಿಯೇ ಆಸಕ್ತಿಯುಳ್ಳವಳಾಗಿ ಇತರವಿಷಯವೊಂದನ್ನೂ ಗಮನಿಸದಂತಿದೆ ನಿನ್ನಪ್ರಿಯನಾದ ಈ ಸುಗ್ರೀವನು ಕೇವಲ ಕಾಮವ್ಯಾಪಾರದಲ್ಲಿಯೇ ಮುಳುಗಿ, ಧರ್ಮಾರ್ಥಗಳಲ್ಲಿ ದೃಷ್ಟಿಯೇಇಲ್ಲದೆ ನಡೆದುಕೊಳ್ಳುವನೆಂಬುದನ್ನು ನೀನರಿಯೆಯಾ?ಅವನು ಈಗ ತನ್ನ ರಾಜ್ಯದ ವಿಚಾರವನ್ನೂ ಗಮನಿಸುವುದಿಲ್ಲ. ಅತ್ತಲಾಗಿ ದುಃಖಪರಾಯಣರಾಗಿರುವ ನಮ್ಮಲ್ಲಿಯೂ ಅವನಿಗೆ ಗಮನವಿಲ್ಲ. ತನ್ನ ಮಂತ್ರಿಪರಿವಾರಗಳೊಡನೆ ಸೇರಿ ಯಾವಾಗಲೂ ಮದ್ಯಪಾನಮಾಡುತ್ತ ಮೈಮರೆತಿರುವನು ಹೀಗೆ ಮದೋನ್ಮತ್ತನಾಗಿ ಕಾಮಕ್ರೀಡೆಗಳಲ್ಲಿರುವ ಆ ಸುಗ್ರೀವನು,ಮೊದಲು ನಮಗೆ ಪ್ರತಿಜ್ಞೆಮಾಡಿಕೊಟ್ಟುಬಂದ ನಾಲ್ಕುತಿಂಗಳಕಾಲವು ಕಳೆದುಹೋದುದನ್ನೂ ಕಾಣದಿರುವನು. ಧರ್ಮವನ್ನಾಗಲಿ,ಅರ್ಥ



1540. ಅಂತಃಪುರಕ್ಕೆ ಬಂದ ಲಕ್ಷ್ಮಣನನ್ನು ತಾರೆಯು ಪ್ರಸನ್ನನಾಗಿ ಮಾಡಿದುದು.

ವನ್ನಾಗಲಿ ಸಾಧಿಸಬೇಕೆಂಬ ಉದ್ದೇಶವುಳ್ಳವರಿಗೆ ಈಪಾನವು ಎಂದಿಗೂ ಯೋಗ್ಯವಲ್ಲ ಪಾನದಿಂದ ಧರ್ಮಾರ್ಥಕಾಮಗಳೆಲ್ಲವೂ ಕೆಡುವುವು ಉಪಕಾರ ಮಾಡಿದವನಿಗೆ ಪ್ರತ್ಯುಪಕಾರವನ್ನು ಮಾಡದಿದ್ದರೆ ಅದರಿಂದ ಧರ್ಮಕ್ಕೆ ವಿ ಶೇಷವಾದ ಹಾನಿಯುಂಟು ಇದರಮೇಲೆ ಹಾಗೆ ಪ್ರತ್ಯುಪಕಾರವನ್ನು ಮಾ ಡದುದರಿಂದ ಗುಣವಂತನಾದ ಮಿತ್ರನನ್ನು ಕಳೆದುಕೊಂಡರೆ, ಅರ್ಥಕ್ಕೂ ಲೋಪವುಂಟಾಗುವುದೇ ನಿಶ್ಚಯವು ಸತ್ಯದಲ್ಲಿಯೂ ಅರ್ಥದಲ್ಲಿಯೂ ನಿರ ತನಾದ ಮಿತ್ರನೇ ಆ ಧರ್ಮಕಾಮಗಳಿಗೆ ಮೂಲವಾದುದರಿಂದ ಇವೆರಡ ಕ್ಕಿಂತಲೂ ಅವನೇ ಮೇಲೆನಿಸುವನು ಈಗ ಸುಗ್ರೀವನು ಮಿತ್ರನನ್ನು ಕಳೆದು ಕೊಳ್ಳುವುದರಿಂದ, ಅರ್ಥಕಾಮಗಳೆರಡನ್ನೂ ಬಿಟ್ಟಂತಾಗುವುಲ್ಲದೆ ಧರ್ಮ ವನ್ನೂ ತಪ್ಪಿಹೋಗುತ್ತಿರುವನು ನೀನು ಕಾರ್ಯಸ್ವರೂಪನ್ನು ಚೆನ್ನಾಗಿ ಬಲ್ಲ ವಳಾದುದರಿಂದ ನೀನೇ ನಿನ್ನಬುದ್ಧಿಯಿಂದ ಪರ್ಯಾಲೋಚಿಸಿ ಹೇಳು ಪ್ರ ಕೃತದಲ್ಲಿ ಮಿತ್ರರಾದ ನಮ್ಮನ್ನೇ ಸುಗ್ರೀವನು ಪರಿತ್ಯಜಿಸಿದಮೇಲೆ, ನಾವು ಮುಂದೆ ನಡೆಸಬೇಕಾದ ಕಾರ್ಯವೇನೆಂಬುದನ್ನು ನೀನೇಹೇಳು "ಎಂದನು ಹೀ ಗೆ ಧರ್ಮಾರ್ಥಗಳನ್ನು ನಿರ್ಣಯಿಸತಕ್ಕುದಾಗಿಯೂ, ಮೃದುವಾಗಿಯೂ ಇ ರುವ ಲಕ್ಷ್ಮಣನ ಮಾತನ್ನು ಕೇಳಿ,ತಾರೆಯು ರಾಮನ ಕಾರ್ಯಾರ್ಥವಾಗಿ ಬಂ ದಿರುವ ಆಲಕ್ಷ್ಮಣನ ಮನೋಭಾವವನ್ನು ತಿಳಿದುಕೊಂಡು, ಅವನಿಗೆ ನಂಬಿಕೆ ಯು ಹುಟ್ಟುವ ಮಾತುಗಳಿಂದ ಅವನನ್ನುಕುರಿತು ''ಎಲೈರಾಜಕುಮಾರನೆ! ನೀನು ಹೇಳಿದುದು ವಾಸ್ತವವು ಸುಗ್ರೀವನು ಕಾಮಕ್ರೀಡೆಗಳಲ್ಲಿಯೇ ಮು ಳುಗಿಹೋಗಿರುವುದೂ ನಿಜವು ಹಾಗಿದ್ದರೂ ನೀವು ಅವನಮೇಲೆ ಕೋಪಗೊ ಳ್ಳುವುದಕ್ಕೆ ಇದುಕಾಲವಲ್ಲ ಇದರಮೇಲೆ ನಿಮ್ಮಗೆ ಸ್ವಜನದಂತಿರುವ ಆತನ ಲ್ಲಿ ಕೋಪಿಸಲೇ ಬಾರದು ಆ ಸುಗ್ರೀವನು ಈಗ ಏನೋ ಪ್ರಮಾದವಶದಿಂ ದ ಹೀಗಿದ್ದರೂ, ನಿಮ್ಮ ಕಾರ್ಯವನ್ನು ಸಾಧಿಸುವವಿಷಯದಲ್ಲಿ ಅವನಿಗೆ ಮನಃ ಪೂರ್ವಕವಾದ ಆಸಕ್ತಿಯುಂಟು ಅವನು ಹೀಗೆ ಎಚ್ಚರಿಕೆಯಿಲ್ಲದಿರುವುದನ್ನು ಈಗ ನೀವು ಮನ್ನಿಸಿಬಿಡಬೇಕಾದುದೇ ಉಚಿತವು ಎಲೈರಾಜಕುಮಾರನೆ! ವೀ ರ್ಯಾದಿಗುಣಗಳಿಂದ ಮೇಲೆನಿಸಿಕೊಂಡ ಮಹಾತ್ಮರು,ತಮಗಿಂತಲೂಕೀಳಾಗಿ ಯೂ,ಅಲ್ಪಬಲವುಳ್ಳವರಾಗಿಯೂ ಇರುವವರಲ್ಲಿ ಎಂದಿಗೂ ಕೋಪಿಸಲಾರ

ರು ಕಾರ್ಯಪರನಾಗಿಯೂ, ತಾಳ್ಮೆಯೆಂಬ ತಪಸ್ಸಿಗೆ ಜನ್ಮಸ್ಥಾನನಾಗಿಯೂ ಇರುವ ನಿನ್ನಂತಹ ಮಹಾಪುರುಷನು ಯಾವನುತಾನೇ ಹೀಗೆ ಕೋಪವಶನಾಗುವನು? ಸುಗ್ರೀವನಿಗೆ ಪರಮಮಿತ್ರನಾದ ಆ ರಾಮನ ಕೋಪದ ಸ್ವರೂಪವನ್ನು ನಾನು ಚೆನ್ನಾಗಿ ಬಲ್ಲೆನು ಅವನ ಕಾರ್ಯಕ್ಕಾಗಿ ನಿರ್ಣಯಿಸಿರುವ ಕಾಲವೇನೆಂಬುದನ್ನೂ ನಾನುಬಲ್ಲೆನು ಸುಗ್ರೀವನು ಕಾಲವಿಳಂಬಮಾಡುತ್ತಿರುವನೆಂಬುದೂ ನನಗೆ ಚೆನ್ನಾಗಿ ತಿಳಿದಿರುವುದು ನೀವು ನಮಗೆಸಾಡಿದ ಮಹೋಪಕಾರವನ್ನೂ ಬಲ್ಲೆನು ಅದಕ್ಕಾಗಿ ನಾವು ಈಗ ನಡೆಸಬೇಕಾದ ಕಾರ್ಯವೇನೆಂಬುದೂ ನನಗೆ ತಿಳಿದಿರುವುದು'ಲಕ್ಷ್ಮಣಾ' ಆದರೇನು? ದೇಹದಲ್ಲಿ ಹುಟ್ಟಿದ ಕಾಮದ ಪ್ರಾಬಲ್ಯವು ತಡೆಯಲಸಾಧ್ಯವೆಂಬುದನ್ನೂ ನಾನು ತಿಳಿದಿರುವೆನಲ್ಲವೆ? ಈ ಕಾಮದಿಂದ ಸುಗ್ರೀವನು ಯಾರಲ್ಲಿ ಎಡೆಬಿಡದೆ ಆಸಕ್ತನಾಗಿರುವನೋ ಆ ಸ್ತ್ರೀವ್ಯಕ್ತಿಯನ್ನೂ ನಾನು ಚೆನ್ನಾಗಿ ಬಲ್ಲೆನು ಆದರ ನೀನು ಹೀಗೆ ಕೋಪವಶನಾಗಿರುವುದನ್ನು ನೋಡಿದರೆ,ನಮ್ಮಂತೆ ನಿನಗೆ ರತಿಕ್ರೀಡೆಗಳೇ ಮೊದಲಾದ ಕಾಮತಂತ್ರಗಳಲ್ಲಿ ಆಷ್ಟಾಗಿ ಪರಿಶ್ರಮವಿಲ್ಲವೆಂದೇ ಎಣಿಸಬೇಕಾಗಿದೆ. ಅವುಗಳಲ್ಲಿ ಆಷ್ಟಾಗಿನಿನಗೆ ಜ್ಞಾನವಿಲ್ಲದುದರಿಂದಲೇ ನೀನು ಹೀಗೆ ಕೋಪಗೊಂಡಿರುವೆ ನೀನೂ ಆ ಕಾಮತಂತ್ರಗಳಲ್ಲಿ ರುಚಿಯನ್ನು ಬಲ್ಲವನಾಗಿದ್ದಪಕ್ಷದಲ್ಲಿ, ನಿನಗೆ ಸುಗ್ರೀವನಲ್ಲಿ ಇಷ್ಟು ಕೋಪವುಂಟಾಗಿರಲಾರದು ಕಾಮಲೋಲನಾದ ಮನುಷ್ಯನು ದೇಶಕಾಲಗಳನ್ನಾಗಲಿ ಧರ್ಮಾರ್ಥಗಳನ್ನಾಗಲಿ ಅಪೇಕ್ಷಿಸುವವನಲ್ಲ ಎಲೆ ಶತ್ರುಸೂದನನೆ' ಈಗಲಾದರೂ ನೀನು ಚೆನ್ನಾಗಿ ಪರ್ಯಾಲೋಚಿಸಿ,ನಿನಗೆ ಸಹೋದರನಂತಿರುವ ಆಸುಗ್ರೀವನನ್ನು ಮನ್ನಿಸಿಬಿಡಬೇಕು ಆತನು ಕಾಮಲೋಲನಾಗಿ ನನ್ನೊಡನೆ ಸೇರಿ ತನ್ನ ಕಾರ್ಯೋದ್ಯೋಗದಿಂದ ನಾಚಿಕೆಯನ್ನು ಬಿಟ್ಟಿರುವುದೂ ನಿಜವು ಆದರೆ ಧರ್ಮವೇ ತಪಸ್ಸೆಂದೆಣಿಸಿರುವ ಮಹರ್ಷಿಗಳೂಕೂಡ ಕಾಮವಶರಾಗಿ, ಸ್ತ್ರೀಯರಲ್ಲಿ ಎಡೆಬಿಡದ ವ್ಯಾಮೋಹವನ್ನು ಹೊಂದಿರುವಾಗ ಸ್ವಭಾವದಿಂದಲೇ ಚಪಲವಾದ ಕಪಿಯೆನಿಸಿಕೊಂಡ ಆ ಸುಗ್ರೀವನಿಗೆ ಕಾಮಚಾಪಲ್ಯವಿಲ್ಲದಿರುವುದೇ?" ಎಂದಳು ಹೀಗೆ ತಾರೆಯು ಲಕ್ಷ್ಮಣನೊಡನೆ ಕಾಲೋಚಿತವಾದ ಮಾತನ್ನಾಡಿ,ತಿರುಗಿ ಆತನನ್ನು ನೋಡಿ ಬಹಳಸಲಿಗೆಯಿಂದ ತನ್ನ ಪತಿಯಾದ ಸುಗ್ರೀವನಿಗೆ ಕ್ಷೇಮಕರವಾದ ಮತ್ತೊಂದುಮಾತನ್ನು ಹೇಳು

ವಳು ''ಎಲೆ ರಾಜಕುಮಾರನೆ! ಸುಗ್ರೀವನು ಈಗ ಕಾಮವಶನಾಗಿದ್ದರೂ ಸುಮ್ಮನಿರುವನೆಂದೆಣಿಸಬೇಡ! ಬಹುಕಾಲಕ್ಕೆ ಹಿಂದೆಯೇ ನಿಮ್ಮ ಕಾರ್ಯಸಾಧನೆಗಾಗಿ ಪ್ರಯತ್ನಿಸಬೇಕೆಂದು ಅನೇಕವಾನರರಿಗೆ ಆಜ್ಞೆ ಮಾಡಿರುವನು ಬಲಾಢ್ಯರಾಗಿಯೂ, ಕಾಮರೂಪಿಗಳಾಗಿಯೂ ಇರುವ ಅನೇಕ ವಾನರವೀರರು ಸುಗ್ರೀವನ ಆಜ್ಞೆಯಂತೆ ಬೆಟ್ಟಗುಡ್ಡಗಳೇ ಮೊದಲಾದ ತಮ್ಮ ವಾಸಸ್ಥಾನಗಳನ್ನು ಬಿಟ್ಟು ಕೋಟಿಕೋಟಿಸಂಖ್ಯೆಯಿಂದ ಬಂದು ಸೇರುತ್ತಿರುವರು ಎಲೈ ಪುರುಷಶ್ರೇಷ್ಠನೆ! ನೀನು ಕೋಪವನ್ನು ಬಿಟ್ಟು ಪ್ರಸನ್ನನಾಗಿ ನಮ್ಮ ಅಂತಃಪುರಕ್ಕೆ ದಯಮಾಡು ಇದುವರೆಗೆ ನೀನು ಅಂತಃಪುರಸ್ತ್ರೀಯರಿರುವ ಸ್ಥಳಕ್ಕೆ ಬರಬಾರದೆಂದು ಹೊರಗೆ ನಿಂತಿದ್ದೆಯಲ್ಲವೆ? ಇಷ್ಟೇಸಾಕು ಇಷ್ಟರಿಂದಲೇ ನಿನ್ನ ನಡತೆಯನ್ನು ರಕ್ಷಿಸಿಕೊಂಡಂತಾಯಿತು ಇನ್ನು ಮೇಲಆ ಭಾವವನ್ನು ಬಿಟ್ಟುಬಿಡು ಸ್ನೇಹವಿಷಯದಲ್ಲಿರುವಾಗ ಮಿತ್ರರ ಭಾರ್ಯೆಯರನ್ನು ನೋಡುವುದರಲ್ಲಿ ದೋಷವಿಲ್ಲ"ಎಂದಳು ಹೀಗೆ ತಾರೆಯು ಅಂತಃಪುರಪ್ರವೇಶಕ್ಕೆ ಸಮ್ಮತಿಸಿದುದರಿಂದಲೂ, ರಾಮಕಾರ್ಯದಲ್ಲಿ ತನಗಿರುವ ಆತುರರಿಂದಲೂ ಆ ಲಕ್ಷ್ಮಣನು ಹಿಂಜರಿಯದೆ ಧಾರಾಳವಾಗಿ ಅಂತಃಪುರವನ್ನು ಪ್ರವೇಶಿಸಿದನು ಅಲ್ಲಿ ಉತ್ತಮವಾದ ಮೇಲುಹೊದ್ದಿಕೆಯಿಂದ ಕೂಡಿದ ಒಂದು ಸುವರ್ಣಪೀಠದಲ್ಲಿ ಸೂರ್ಯನಂತೆ ಪ್ರಕಾಶಿಸುತ್ತಾ ಕುಳಿತಿದ್ದ ಸುಗ್ರೀವನನ್ನು ಕಂಡನು ಅನೇಕ ದಿವ್ಯಾಭರಣಗಳಿಂದ ಚಿತ್ರಿತವಾದ ದೇಹವುಳ್ಳವನಾಗಿಯೂ, ದಿವ್ಯರೂಪವುಳ್ಳವನಾಗಿಯೂ, ದಿವ್ಯಮಾಲಿಕೆಗಳನ್ನೂ, ದಿವ್ಯವಸ್ತ್ರಗಳನ್ನೂ ಧರಿಸಿ ಇಂದ್ರನಂತೆ ದುರ್ಜಯನಾಗಿಯೂ, ಮಹಾಯಶಸ್ವಿಯಾಗಿಯೂ ಇದ್ದ ಆ ಸುಗ್ರೀವನಸುತ್ತಲೂ ದಿವ್ಯಪುಷ್ಪಾಭರಣಗಳಿಂದಲಂಕೃತರಾದ ಅನೇಕವಾನರಸ್ತ್ರೀಯರೂ ನೆರೆದಿದ್ದರು ಈ ವೈಭವಗಳನ್ನು ನೋಡಿದಾಗ ಲಕ್ಷ್ಮಣನಿಗೆ ತಡೆಯಲಾರದ ಕೋಪವುಂಟಾಯಿತು ಅವನ ಕಣ್ಣುಗಳು ಕೆಂಪೇರಿದುವು ಕಾಲಯಮನಂತೆಯೇ ತೋರುತಿದ್ದನು ಇಷ್ಟರಲ್ಲಿ ಅತ್ತಲಾಗಿ ರಾಜಾಸನದಲ್ಲಿ ಕುಳಿತು ತನ್ನ ಪ್ರಿಯಪತ್ನಿಯಾದ ರುಮೆಯನ್ನು ಆಗಾಗ ಅಪ್ಪಿಮುದ್ದಿಡುತ್ತ ಸಂತೋಷದಿಂದಿದ್ದ ಸುಗ್ರೀವನು, ಮಹಾವೀರನಾದ ಲಕ್ಷ್ಮಣನು ಕೋಪದಿಂದ ಬಂದು ತನ್ನ ಮುಂದೆ ನಿಂತಿರುವುದನ್ನು ಕಂಡನು. ಇಲ್ಲಿಗೆ ಮೂವತ್ತುಮೂರನೆಯ ಸರ್ಗವು

ರಾಮನು ಹೇಳಿಕಳುಹಿಸಿದ ಮಾತನ್ನು ಲಕ್ಷ್ಮಣನು ಸುಗ್ರೀವನಿಗೆ ತಿಳಿಸಿದುದು

ಹೀಗೆ ತಡೆಯಿಲ್ಲದೆ ಅಂತಃಪುರಕ್ಕೆ ಬಂದು ಕೋಪದಿಂದ ನಿಂತಿದ್ದ ಲಕ್ಷ್ಮಣನನ್ನು ಕಂಡೊಡನೆ, ಸುಗ್ರೀವನ ಮನಸ್ಸು ಭಯದಿಂದ ತತ್ತಳಿಸಿತು ಅಣ್ಣನ ವ್ಯಸನಕ್ಕಾಗಿ ಮನಸ್ಸಿನಲ್ಲಿ ಕೊರಗುತ್ತ, ಕೋಪದಿಂದ ನಿಟ್ಟುಸಿರುಬಿಡುತ್ತಿರುವ, ಆತನನ್ನು ಕಂಡೊಡನೆ ಸುಗ್ರೀವನು ಥಟ್ಟನೆ ತಾನು ಕುಳಿತಿದ್ದ ಸ್ವರ್ಣಪೀಠದಿಂದೆದ್ದು ಬಂದು ಉತ್ಸವಾರ್ಥವಾಗಿ ಅಲಂಕರಿಸಿ ನಿಲ್ಲಿಸಿಟ್ಟ ಇಂದ್ರಧ್ವಜದಂತೆ ನೆಟ್ಟಗಾಗಿ ನಿಂತಿದ್ದನು ಆಕಾಶದಲ್ಲಿ ಪೂರ್ಣಚಂದ್ರನು ಉದಯಿಸಿದೊಡನೆ ಅವನನ್ನು ಹಿಂಬಾಲಿಸಿ ಬರುವ ನಕ್ಷತ್ರಗಳಂತೆ, ರುಮೆಮೊದಲಾದ ವಾನರಸ್ತ್ರೀಯರೂ ಆ ಸುಗ್ರೀವನೊಡನೆ ಥಿಗ್ಗನೆ ಎದ್ದುನಿಂತರು. ಪಾನಮದದಿಂದ ಕೆಂಪೇರಿದ ಕಣ್ಣುಳ್ಳ ಆ ಸುಗ್ರೀವನು, ಲಕ್ಷ್ಮಣನಿಗಿದಿರಾಗಿ ಬಂದು ಮೊಡ್ಡಕಲ್ಪವೃಕ್ಷದಂತೆ ಅವನಮುಂದೆ ಕೈಮುಗಿಯುತ್ತ ನಿಂತಿದ್ದನು ನಕ್ಷತ್ರಗಳನಡುವೆ ಶೋಭಿಸುವ ಚಂದ್ರನಂತೆ ಅನೇಕಸ್ತ್ರೀಯರ ಮಧ್ಯದಲ್ಲಿ ರುಮೆಯೊಡಗೂಡಿ ಬಂದುನಿಂತಿದ್ದ ಸುಗ್ರೀವನನ್ನು ನೋಡಿ ಲಕ್ಷ್ಮಣನು, ಅತಿಕೋಪದಿಂದ "ಎಲೆ ಸುಗ್ರೀವಾ! ಲೋಕದಲ್ಲಿ ಬಲವಂತನಾಗಿಯೂ, ಕುಲೀನನಾಗಿಯೂ, ದಯಾಳುವಾಗಿಯೂ, ಜಿತೇಂದ್ರಿಯನಾಗಿಯೂ, ಕೃತಜ್ಞನಾಗಿಯೂ, ಸತ್ಯಸಂಧನಾಗಿಯೂ ಇರುವ ರಾಜನೇ ಎಲ್ಲರಿಂದಲೂ ಗೌರವಿಸಲ್ಪಡುವನೇ ಹೊರತು, ಯಾವರಾಜನು ಅಧರ್ಮನಿರತನಾಗಿ, ತನಗೆ ಮೊದಲು ಉಪಕಾರಮಾಡಿದ ಮಿತ್ರರಿಗೆ ಕೊಟ್ಟಮಾತನ್ನು ತಪ್ಪಿನಡೆಯುವನೋ, ಅವನಿಗಿಂತಲೂ ಪರಮಪಾತಕನಾವನುಂಟು? ಒಂದು ಕುದುರೆಯ ವಿಷಯವಾಗಿ ಸುಳ್ಳಾಡಿದರೆ ನೂರುಕುದುರೆಗಳನ್ನು ಕೊಂದದೋಷವು ಬರುವುದು ಒಂದು ಗೋವಿನವಿಷಯವಾಗಿ ಸುಳ್ಳಾಡಿದವನಿಗೆ ಸಾವಿರಗೋವುಗಳನ್ನು ಕೊಂದ ಪಾಪವು ಬರುವುದು ಒಬ್ಬ ಪುರುಷನ ವಿಷಯವಾಗಿ ಸುಳ್ಳಾಡಿದವನು, ಆತ್ಮಹತ್ಯೆಯಿಂದಲೂ, ಸ್ವಜನಹತ್ಯೆಯಿಂದಲೂ ಉಂಟಾಗುವ ಮಹಾದೋಷಕ್ಕೆ ಭಾಗಿಯಾಗುವನು. ಇನ್ನು ಮಹಾಪುರುಷನಾದ ರಾಮನವಿಷಯದಲ್ಲಿಯೇ ಸುಳ್ಳಾಡಿದಮೇಲೆ ಕೇಳಬೇಕೆ? ಮಿತ್ರನಿಂದ

ಮೊದಲು ತನ್ನ ಕಾರ್ಯವನ್ನು ಮಾಡಿಸಿಕೊಂಡು,ಆಮೇಲೆ ಆ ಮಿತ್ರನ ಕಾರ್ಯವನ್ನು ನಡೆಸುವ ವಿಷಯದಲ್ಲಿ, ತಾನು ಬಾಯಿಂದಾಡಿದಂತೆ ಯಾವನು ನಡೆಡುಕೊಳ್ಳುವುದಿಲ್ಲವೋ ಅವನೇ ಕೃತಘ್ನನೆನಿಸುವನು ಅಂತವನನ್ನು ಕಣ್ಣಿಗೆ ಕಂಡಾಗಲೇ ಕೊಂದುಬಿಡಬಹುದು ಅದರಿಂದ ದೋಷವಿಲ್ಲ ಪೂರ್ವದಲ್ಲಿ ಸ್ವಾಯಂಭುವಮನುವು ಒಬ್ಬ ಕೃತಘ್ನನನ್ನು ನೋಡಿ ಕೋಪದಿಂದ ಹೇಳಿರುವ ಶ್ಲೋಕವೊಂದುಂಟು ಲೋಕಪೂಜಿತವಾದ ಆ ಶ್ಲೋಕಾರ್ಥವನ್ನೂ ಹೇಳುವೆನು ಕೇಳು * ''ಬ್ರಹ್ಮಹತ್ಯೆಯನ್ನು ಮಾಡಿದವನಿಗಾಗಲಿ, ಸುರಾಪಾನ ಮಾಡಿದವನಿನಾಗಲಿ, ಸುವರ್ಣವನ್ನು ಕದ್ದವನಿಗಾಗಲಿ,ಹಿಡಿದ ವ್ರತವನ್ನು ಕೆಡಿಸಿಕೂಂಡವನಿಗಾಗಲಿ, ಶಾಸ್ತ್ರವಿಹಿತಗಳಾದ ಬೇರೆಬೇರೆ ಪ್ರಾಯಶ್ಚಿತ್ತಗಳುಂಟು ಕೃತಘ್ನನಿಗೆಮಾತ್ರ ಪ್ರಾಯಶ್ಚಿತ್ತವೆಂಬುದೇ ಇಲ್ಲ" ಎಂಬುದು ಸುಗ್ರೀವಾ' ಇದನ್ನು ನೀನು ಚೆನ್ನಾಗಿ ಮನಸ್ಸಿನಲ್ಲಿಡು' ನೀನು ಮೊದಲು ರಾಮನಿಂದ ಕಾರ್ಯವನ್ನು ಮಾಡಿಸಿಕೂಂಡು ಕೃತಕೃತ್ಯನಾಗಿ, ಈಗ ಅವನ ಕಾರ್ಯವನ್ನು ಗಮನಿಸದಿರುವೆಯಾ? ನಿನ್ನ ನಡತೆಯು ಬಹಳಹೀನವಾದುದು ನೀನು ಕೃತಘ್ನನು ಸುಳ್ಳಾಡುವವನು ಎಲೆ ಕಪಿರಾಜನೆ'ನೀನು ರಾಮನಿಂದ ನಿನ್ನ ಕಾರ್ಯವನ್ನು ಮಾಡಿಸಿಕೊಂಡಮೇಲೆ, ಅದಕ್ಕೆ ಪ್ರತಿಫಲವಾಗಿ ಯಾದರೂ ಸೀತೆಯನ್ನು ಹುಡುಕುವುದಕ್ಕೆ ತಕ್ಕ ಪ್ರಯತ್ನವನ್ನು ಮಾಡಬೇಕಲ್ಲವೆ? ಹಾವುಗಳು ಕಪ್ಪೆಯನ್ನು ಹಿಡಿದು ನುಂಗುವುದಕ್ಕಾಗಿ ಅದರಂತೆಯೇ ಧ್ವನಿಯನ್ನು ತೋರಿಸುವಂತೆ,ನೀನೂ ಮೊದಲು ನಿನ್ನ ಕಾರ್ಯವನ್ನು ನಡೆಸಿಕೊಳ್ಳುವುದಕ್ಕಾಗಿ,ರಾಮನಮುಂದೆ ಬಹಳ ಸತ್ಯಸಂಧನಂತೆ ಅಭಿನಯಿಸಿ,ಈಗ ಗ್ರಾಮ್ಯಭೋಗಗಳಲ್ಲಿ ಮುಳುಗಿ, ಮಾಡಿದಪ್ರತಿಜ್ಞೆಯನ್ನೇ ಮರೆತಿರುವೆಯೆಲ್ಲಾ' ರಾಮನು ನಿನ್ನನ್ನು ಕಪ್ಪೆಯಂತೆ ಕೂಗುವ ಸರ್ಪವೆಂದು ತಿಳಿಯದೆ ಮೋಸಹೋದನು ಎಲೆ ಪಾಪಿ' ಮಹಾತ್ಮನಾಗಿಯೂ, ಧರ್ಮರತನಾಗಿಯೂ ಇರುವ ಆ ರಾಮನು,ನೀನು ಪಾಪಾತ್ಮನೆಂಬುದನ್ನು ಅರಿಯದೆ ವಾನರರಾಜ್ಯವನ್ನೂ ಕೊಟ್ಟನು ರಾಮನು ಎಂತಹಕಾರ್ಯಗಳನ್ನಾಗಲಿ ಲೀಲಾಮಾತ್ರ

---

* ಇಲ್ಲಿ ''ಬ್ರಹ್ಮಘ್ನೇಚ ಸುರಾಪೇಚ ಚೋರೇ ಭಗ್ನವ್ರತೇ ತಥಾ।ನಿಷ್ಕೃತಿರ್ವಿಹಿತಾ ಶಾಸ್ತ್ರೇ ಕೃತಘ್ನೇ ನಾಸ್ತಿ ನಿಷ್ಕೃತಿಃ" ಎಂಬುದು ಮೂಲಶ್ಲೋಕವು

ದಿಂದಲೇ ನಡೆಸಬಲ್ಲನು ಆ ರಾಮನು ನಿನಗೆ ಮಾಡಿದ ಉಪಕಾರವನ್ನೂ ಎಣಿಸದೆ ಮರೆತುಹೋದಪಕ್ಷದಲ್ಲಿ, ಇದೋ' ಈಗಲೇ ಈ ನನ್ನ ಕ್ರೂರಬಾಣಗಳಿಂದ ಹತನಾಗಿ ನೀನೂ ವಾಲಿಯಬಳಿಗೆ ಹೋಗಬೇಕಾಗುವುದೆಂದು ತಿಳಿ! ಎಲೆ ಸುಗ್ರೀವಾ' ವಾಲಿಯು ಹೋದ ದಾರಿಯು ಇನ್ನೂ ಅಳಿಸಿಹೋಗಿಲ್ಲ. ನೀನು ಮಾಡಿದ ಪ್ರತಿಜ್ಞೆಗೆ ತಪ್ಪಿ ಆ ವಾಲಿಯನ್ನು ಹಿಂಬಾಲಿಸಬೇಡ' ಎಲೆ ವಾನರನೆ' ಇಕ್ಷ್ವಾಕುಕುಲತಿಲಕನಾದ ಆ ರಾಮನ ಬಿಲ್ಲಿನಿಂದ ಹೊರಟುಬರುವ ವಜ್ರಸಮಾನಗಳಾದ ಬಾಣಗಳನ್ನು ನೀನು ಇನ್ನೂ ಚೆನ್ನಾಗಿ ಕಂಡಿಲ್ಲವೆಂದು ತೋರುವುದು ಅದರಿಂದಲೇ ಹೀಗೆ ವಿಷಯಲೋಲನಾಗಿ ಮೈಮರೆತು, ಆ ರಾಮನ ಕಾರ್ಯವನ್ನು ಮನಸ್ಸಿನಿಂದಲೂ ಆಲೋಚಿಸದಿರುವೆ" ಎಂದನು ಇಲ್ಲಿಗೆ ಮೂವತ್ತ್ನಾಲ್ಕನೆಯಸರ್ಗವು

ತಾರೆಯು ಪುನಃ ಲಕ್ಷ್ಮಣನನ್ನು ಸಮಾಧಾನಪಡಿಸಿದ್ದು

ಲಕ್ಷ್ಮಣನು ತೇಜಸ್ಸಿನಿಂದ ಜ್ವಲಿಸುವಂತೆ ಕಾಣುತ್ತ, ಅತಿಪರುಷವಾಗಿ ಹೇಳುತಿದ್ದ ಮಾತುಗಳನ್ನು ಕೇಳಿ ಆಗ ಸುಗ್ರೀವನ ಸಮೀಪದಲ್ಲಿದ್ದ ತಾರೆಯು ಆತನನ್ನು ಕುರಿತು "ಲಕ್ಷ್ಮಣಾ' ನೀನೇ ಈ ಮಾತುಗಳನ್ನಾಡಬಾರದು ಸುಗ್ರೀವನು ಬಹಳಮೃದುಸ್ವಭಾವವುಳ್ಳವನಾದುದರಿಂದ, ಇಷ್ಟು ಪರುಷವಾಕ್ಯಗಳಿಗೆ ಅರ್ಹನಲ್ಲ ಅದರಲ್ಲಿಯೂ ಕೇವಲಪ್ರಿಯನಿಮಿತ್ತನಾದ ನಿನ್ನ ಬಾಯಿಂದ ಈ ಮಾತುಗಳನ್ನು ಕೇಳಿಲಾರನು ಸಮಸ್ತವಾನರರಿಗೂ ರಾಜನೆನಿಸಿಕೊಂಡ ಈತನನ್ನು ನೀನು ಹೀಗೆ ನಿರಾಕರಿಸಲಾರದು ನೀನುಮೊದಲು ಇವನಲ್ಲಿ ಕೃತಘ್ನತೆಯೇ ಮೊದಲಾದ ಎಷ್ಟೊಂದೋಷಗಳನ್ನು ಹೇಳಿದೆಯಲ್ಲವೆ? ಲಕ್ಷ್ಮಣಾ' ಎಂದಿಗೂ ಹಾಗೆನ್ನಿಸಬೇಡ' ಇವನು ಕೃತಘ್ನನಲ್ಲ ವಂಚಕನೂ ಅಲ್ಲ ಕ್ರೂರನೂ ಅಲ್ಲ ಸುಳ್ಳಾಡುವವನೂ ಅಲ್ಲ ಇವನಲ್ಲಿ ಕುಟಿಲಬುದ್ಧಿಯೂ ಇಲ್ಲ ಎಲೈ ಮಿತ್ರನೆ' ಈ ಸುಗ್ರೀವನು ರಾಮನನ್ನು ಮತೆತಿರುವೆನೆಂದೂ ತಿಳಿಯಬೇಡ ವಾಲಿಯುದ್ಧದಲ್ಲಿ ರಾಮನು ಬೇರೆಯಾರಿಗೂ ಅಸಾಧ್ಯವಾದ ಮಹೋಪಕಾರವನ್ನು ಮಾಡಿರುವನೆಂಬುದು ಎಷ್ಟುಮಾತ್ರವೂ ಇವನ ಮನಸ್ಸನ್ನು ಬಿಟ್ಟು ಹೋಗತಕ್ಕುದಲ್ಲ ಆ ರಾಮನ ಅನುಗ್ರಹದಿಂದ ಇವನಿಗುಂಟಾ

ದ ಲಾಭಗಳನ್ನೂ ಅಷ್ಟಿಷ್ಟೆಂದು ಹೇಳಲಸಾಧ್ಯವು ಆತನ ಅನುಗ್ರಹದಿಂದ ಲೇ ಇವನಿಗೆ ಶಾಶ್ವತವಾದ ಕೀರ್ತಿಯು ಲಭಿಸಿತು ಸ್ಥಿರವಾದ ವಾನರರಾಜ್ಯ ವೂ ಕೈಸೇರಿತು ಅಗಲಿ ಹೋದ ತನ್ನ ಪತ್ನಿಯಾದ ರುಮೆಯನ್ನೂ ಪಡೆದನು ಬಹುಕಾಲದಿಂದ ಕಣ್ಣಿಟ್ಟಿದ್ದ ನನ್ನನ್ನೂ ಕೈಸೇರಿಸಿಕೊಂಡನು ಇವನುಮೊದ ಲು ಬಹುಕಾಲದವರೆಗೆ ಕಷ್ಟಪಡುತಿದ್ದವನಾದುದರಿಂದ, ಈಗ ಈ ಮಹಾ ಸುಖವನ್ನು ಹೊಂದಿ ಮೈಮರೆತಿರುವನು ಮೇನಕೆಯಲ್ಲಿ ಮೋಹಗೊಂಡ ವಿಶ್ವಾಮಿತ್ರನಂತ ಕಳೆದುಹೋದ ಕಾಲವನ್ನೂ ತಿಳಿಯದಿರುವನು ಲಕ್ಷ್ಮಣಾ' ಪೂರ್ವದಲ್ಲಿ ಧರ್ಮಾತ್ಮನಾದ ವಿಶ್ವಾಮಿತ್ರನು ಮೇನಕೆಯೊಡನೆ ಮನ್ಮಥಸುಖದಲ್ಲಿ ಬಿದ್ದು ಹತ್ತುವರುಷಗಳನ್ನು ಒಂದುಹಗಲಿನಂತೆ ಎಣಿ ಸಿದನಲ್ಲವ? ತೇಜಸ್ವಿಯಾದ ವಿಶ್ವಾಮಿತ್ರನು ಕಾಲಜ್ಞರಲ್ಲಿ ತಾನೇ ಮೇ ಲೆನಿಸಿಕೊಂಡಿದ್ದರೂ, ಕಾಮಪರವಶನಾಗಿದ್ದ ಕಾಲದಲ್ಲಿ ಕಾಲಪರಿಮಾಣ ವನ್ನೇ ತಿಳಿಯದೆ ಹೋದನು ಯೋಗಿಗಳೇ ಈ ಸ್ಥಿತಿಯಲ್ಲಿರುವಾಗ ಬೇರೆಯ ವರ ಸಂಗತಿಯನ್ನು ಹೇಳಬೇಕಾದುದೇನು?ಬಹುಕಾಲದಿಂದ ಕಷ್ಟದಲ್ಲೆಸಕ್ಕಿ ಕಂದಿಕುಂದಿದ ಈತನು, ಪ್ರಾಣಿಸಾಮಾನ್ಯಕ್ಕೆ ಶರೀರಜನ್ಯವಾದ ಮನ್ಮಥ ವ್ಯಾಪಾರದಲ್ಲಿ ಈಗಲೇ ಬಿದ್ದಿರುವನು ಇಷ್ಟರಲ್ಲಿ ಈತನಿಗೆ ತೃಪ್ತಿಯುಂಟಾ ಗುವುದೆಂದರೇನು?ಸ್ವಭಾವದಿಂದಲೇ ಚಪಲನಾದ ಈ ವಾನರನನ್ನು ನೀನು ಮನ್ನಿಸಬೇಕು ಲಕ್ಷ್ಮಣಾ' ಸುಗ್ರೀವನ ನಿಜವಾದ ಅಭಿಪ್ರಾಯವೇನೆಂಬು ದನ್ನೂ ತಿಳಿಯದೆ, ಹಿಂಬುಗುಂದುನೋಡದೆ,ಪ್ರಾಕೃತನಂತೆ ನೀನು ಹೀಗೆ ತಟ್ಟನೆ ಕೋಪವಶನಾಗುವುದು ಯುಕ್ತವಲ್ಲ ಕಾರ್ಯಸಾಧಕರಾದ ನಿನ್ನಂತ ಹ ಮಹಾಪುರುಷರು ಯುಕ್ತಾಯುಕ್ತವನ್ನರಿಯದೆ ಹೀಗೆ ಕೋಪಕ್ಕೆ ಅವ ಕಾಶಕೊಡಬಾರದು ನೀನು ಸಮಸ್ತಧರ್ಮಗಳನ್ನೂ ಬಲ್ಲವನು ಸುಗ್ರೀವನಿ ಗಾಗಿ ನಾನೇ ನಿನ್ನ ಮನ್ನಣೆಯನ್ನು ಬೇಡುತ್ತಿರುವೆನು ಅತ್ಯಾಕ್ರೋಶದಿಂ ದುಂಟಾದ ಈ ಕಳವಳವನ್ನು ಬಿಟ್ಟುಬಿಡು ಪ್ರಸನ್ನನಾಗು, ಇನ್ನು ಸ್ವಲ್ಪ ಕಾಲದೊಳಗಾಗಿ ಈ ಸುಗ್ರೀವನು ರಾಮನ ಕಾರ್ಯಾರ್ಥವಾಗಿ, ತನ್ನ ಪ್ರಿಯ ಪತ್ನಿಯಾದ ರುಮೆಯನ್ನೂ, ನನ್ನನ್ನೂ, ತನ್ನ ರಾಜ್ಯವನ್ನೂ ಧನಧಾನ್ಯರತ್ನಗ ಳನ್ನೂ ಇತರಭೋಗಗಳನ್ನೂ ಬಿಟ್ಟು ಅವನೊಡನೆ ಹೊರಟುಬೆಡುವನೆಂದೇ

ನನಗೆ ತೋರಿರುವುದು ಸುಗ್ರೀವನೇ ಯುದ್ಧದಲ್ಲಿ ರಾವಣನನ್ನು ಕೊಂದು, ರೋಹಿಣಿಯೊಡನೆ ಚಂದ್ರನನ್ನು ಸೇರಿಸಿದಂತೆ, ಈ ರಾಮನನ್ನು ಸೀತೆಯೊಡನೆ ಸೇರಿಸುವನು ಎಲೈ ರಾಜಪುತ್ರನೆ! ಲಂಕೆಯಲ್ಲಿರುವ ರಾಕ್ಷಸರು ಒಬ್ಬರಲ್ಲ! ಇಬ್ಬರಲ್ಲ! ಲಕ್ಷಕೋಟಿ ರಾಕ್ಷಸರಿರುವರು ಇದುಹೊರತು ಮುನ್ನೂರರವತ್ತು ಸಾವಿರಮಂದಿ ರಾಕ್ಷಸರು ಬೇರೆಯಾಗಿರುವರು ಇವರೂಅಲ್ಲದೆ ಇನ್ನೊಂದು ಲಕ್ಷ ರಾಕ್ಷಸರ ಪಂಗಡವೂ ಪ್ರತ್ಯೇಕವಾಗಿರುವುದು ಅವರೆಲ್ಲರೂ ಕಾಮರೂಪಿಗಳು ಯಾರಿಂದಲೂ ಅವರನ್ನು ದಿರಿಸುವುದಕ್ಕೆ ಸಾಧ್ಯವಿಲ್ಲ ಮೊದಲು ಆ ರಾಕ್ಷಸರನ್ನು ಕೊಂದಹೊರತು ಸೀತೆಯನ್ನ ಪಹರಿಸಿದ ರಾವಣನನ್ನು ಕೊಲ್ಲುವುದಸಾಧ್ಯವು ಮೊದಲು ಆ ರಾಕ್ಷಸರೊಡನೆ ಯುದ್ಧಮಾಡಿ ಜಯಿಸುವುದೇ ಸಾಧ್ಯವಲ್ಲ ಅದರಲ್ಲಿಯೂ ವಿಶೇಷವಾಗಿ ಕ್ರೂರಕರ್ಮಿಯಾದ ಆ ರಾವಣನನ್ನು ಕೊಲ್ಲಬೇಕೆಂದರೆ, ಈ ಸುಗ್ರೀವನಿಗಾದರೂ ತಕ್ಕಸಹಾಯವಿದ್ದಹೊರತು ಎಷ್ಟು ಮಾತ್ರವೂ ಶಕ್ಯವಲ್ಲ ಆ ರಾವಣನ ಪೂರ್ವೋತ್ತರಗಳೆಲ್ಲವನ್ನೂ ನಾನು ಚೆನ್ನಾಗಿ ಬಲ್ಲೆನು, ನನ್ನ ಪತಿಯಾದ*ವಾಲಿಯು ಇದೆಲ್ಲವನ್ನೂ ಚೆನ್ನಾಗಿ ತಿಳಿದವನಾದುದರಿಂದ ಅವನು ಈ ವಿಷಯಗಳನ್ನು ನನಗೂ ಹೇಳಿದ್ದನು ಅದರಿಂದ ನಾನುಬಲ್ಲೆನೇ ಹೊರತು ನಾನಾಗಿಯೇ ಕಂಡವಳಲ್ಲ ಅವನಿಂದ ನಾನು ಕೇಳಿದ್ದುದಕ್ಕಾಗಿ ನಿನಗೆ ಹೇಳುವೆನು ನಿಮಗೆ ಸಹಾಯಾರ್ಥವಾಗಿಯೇ ಸುಗ್ರೀವನು, ತನ್ನ ಕಡೆಯ ಅನೇಕವಾನರರನ್ನೂ, ವಾನರಯೂಥಾಧಿಪತಿಗಳನ್ನೂ ಕರೆತರುವುದಕ್ಕಾಗಿ ಅಲ್ಲಲ್ಲಿಗೆ ವಾನರರನ್ನು ಕಳುಹಿಸಿರುವನು ಈಗಲೂ ಸುಗ್ರೀವನು ಆ ವಾನರವೀರರ ಪ್ರತ್ಯಾಗಮನವನ್ನೇ ಇದಿರುನೋಡುತ್ತಿರುವನು ಆ ನಿರೀಕ್ಷಣೆಯಿಂದಲೇ ಹೊರಕ್ಕೆ ಹೊರಡದಿರುವನು ರಾಮನ ಕಾರ್ಯಸಿದ್ಧಿಗಾಗಿ ಈತನು ಎಷ್ಟೋ ಆತುರದಿಂದ ನಿಂತಿರುವನು ನೀನು ಬರುವುದಕ್ಕೆ

---

* ವಾಲಿಯು ಸುಗ್ರೀವನೊಡನೆ ಯುದ್ಧಕ್ಕಾಗಿ ಹೊರಟಾಗ, ತಾರೆಯು ಅವನನ್ನು ತಡೆದು, ರಾವಣನಥಾರ್ಥವಾಗಿಯೇ ಸುಗ್ರೀವನೂ, ರಾಮನೂ ಸ್ನೇಹಮಾಡಿರುವುದಾಗಿ ಅಂಗದನು ತನಗೆ ಹೇಳಿದ್ದ ಸೂಚನೆಯನ್ನು ತಿಳಿಸಲು, ಅದಕ್ಕವನು ರಾವಣನ ಮಹಾಬಲವನ್ನೂ, ಸುಗ್ರೀವನ ದೌರ್ಬಲ್ಯವನ್ನೂ ಹೋಲಿಸುವ ಪ್ರಸ್ತಾವದಲ್ಲಿ ರಾವಣನ ಸ್ಥಲಬಲಾದಿಗಳೆಲ್ಲವನ್ನೂ ತಿಳಿಸಿರಬಹುದೆಂದು ಊಹ್ಯವು

ಮೊದಲೇ ಸುಗ್ರೀವನು,ಸೀತಾನ್ವೇಷಣಾರ್ಥವಾಗಿ ವಾನರರೆಲ್ಲರೂ ಹದಿನೈದು ದಿನಗಳೊಳಗಾಗಿ ಇಲ್ಲಿಗೆ ಬಂದು ಸೇರಬೇಕೆಂದೂ,ಬಾರದಿದ್ದವನಿಗೆ ಮರಣ ದಂಡನೆಯೆಂದೂ ಕ್ರೂರಶಾಸನವನ್ನು ಮಾಡಿರುವನು ಆ ಗಡುವಿಗೆ ಇದೇ ಕೊನೆಯದಿವಸವು ಲಕ್ಷ್ಮಣಾ' ಇನ್ನು ಸ್ವಲ್ಪಕಾಲದವರೆಗೆಮಾತ್ರ ನಿರೀಕ್ಷಿಸುತ್ತಿರು ಸಹಸ್ರಕೋಟಿಭಲ್ಲೂಕ (ಕರಡಿ) ಗಳೂ, ನೂರಾರುಸಂಖ್ಯೆಯುಳ್ಳ ಗೋಲಾಂಗೂಲ (ಸಿಂಗಳೀಕ) ಗಳೂ ಲಕ್ಷೋಪಲಕ್ಷವಾನರರೂ ಈಗಲೇ ಬಂದು ನಿನ್ನ ಸೇವೆಮಾಡುವರು ನೋಡು 'ಕೋಪವನ್ನು ಬಿಟ್ಟು ಪ್ರಸನ್ನನಾಗು ಹಿಂದೆ ವಾಲಿವಧಕಾಲದಲ್ಲಿಯೇ ನಿಮ್ಮ ಬಾಣದ ಕೌಶ್ಯವನ್ನು ಕಂಡುಬಲ್ಲ ಈ ಸುಗ್ರೀವಪತ್ನಿಯರೆಲ್ಲರೂ, ಈಗ ಕೋಪದಿಂದ ಕೆಂಪೇರಿದ ನಿನ್ನ ಕಣ್ಣುಗಳನ್ನುನೋಡಿ, ಈಗ ಯಾವ ಅತ್ಯಾಹಿತವುಂಟಾಗುವುದೋ ಎಂದು ಭಯದಿಂದ ತತ್ತಳಿಸಿ ನಡುಗುತ್ತಿರುವುದನ್ನು ಕಾಣೆಯಾ' ಪ್ರಸನ್ನನಾಗಿ ಅವರ ಭಯವನ್ನು ತಪ್ಪಿಸು" ಎಂದಳು ಇಲ್ಲಿಗೆ ಮೂವತ್ತೈದನೆಯಸರ್ಗವು

{ ಲಕ್ಷ್ಮಣಸುಗ್ರೀವರಿಬ್ಬರೂ ಸ್ನೇಹಪೂರ್ವಕವಾಗಿ ಸಂಭಾಷಿಸಿದುದು }

ಹೀಗೆ ತಾರೆಯು ಸವಿನಯವಾಗಿಯೂ, ಧರ್ಮಯುಕ್ತವಾಗಿಯೂ ಹೇಳಿದ ಮಾತನ್ನು ಕೇಳಿ, ಮೃದುಸ್ವಭಾವವುಳ್ಳ ಲಕ್ಷ್ಮಣನು ಅವಳಮಾತಿಗೊಪ್ಪಿ ಕೋಪವನ್ನು ಬಿಟ್ಟು ಪ್ರಸನ್ನನಾದನು ಹೀಗೆ ಲಕ್ಷ್ಮಣನು ತಾರೆಯ ಮಾತುಗಳಿಗೊಪ್ಪಿ ಪ್ರಸನ್ನನಾಗಿರುವುದನ್ನು ತಿಳಿದೊಡನೆ, ಸುಗ್ರೀವನು ಅತಿಶೈತ್ಯದಿಂದ ಮೈಯನ್ನು ನಡುಗಿಸುತ್ತಿರುವ ಒದ್ದೆಬಟ್ಟೆಯನ್ನು ಕಿತ್ತು ಬಿಸುಡುವಂತೆ, ಲಕ್ಷ್ಮಣನ ವಿಷಯವಾಗಿ ತನಗಿದ್ದಭಯವನ್ನು ನಿಶ್ಶೇಷವಾಗಿ ಬಿಟ್ಟುಬಿಟ್ಟನು ಆಮೇಲೆ ಸುಗ್ರೀವನು ತನ್ನಕೊರಳಿನಲ್ಲಿದ್ದ ವಿಚಿತ್ರವಾದ ಮತ್ತು ಬಹುವಿಧಭೋಗಪ್ರದವಾದ ಮದಜನಕವಾದ ದೊಡ್ಡಪುಷ್ಪಮಾಲಿಕೆಯನ್ನೂ ಕಿತ್ತು ಬಿಸುಟನು ಆಗಲೇ ಅವನ ಮನಸ್ಸಿನಲ್ಲಿದ್ದ ಮದವೆಲ್ಲವೂ ಉಡುಗಿಹೋಯಿತು ಆಮೇಲೆವಾನರೋತ್ತಮನಾದ ಸುಗ್ರೀವನು ಭೀಮಪರಾಕ್ರಮವುಳ್ಳ ಲಕ್ಷ್ಮಣನನ್ನುನೋಡಿ ವಿನಯವಾಕ್ಯಗಳಿಂದ, ಆತನನ್ನು

ಸಂತೋಷಪಡಿಸುತ್ತ "ಎಲೆ, ಸೌಮಿತ್ರಿ! ನಾನು ಬಹುಕಾಲದಿಂದ ಕಳೆದು ಕೊಂಡಿದ್ದ ಭಾಗ್ಯವೂ, ಕೀರ್ತಿಯೂ, ಶಾಶ್ವತವಾದ ಕಪಿರಾಜ್ಯವೂ ಶ್ರೀ ರಾಮನ ಅನುಗ್ರಹದಿಂದಲೇ ಪುನಃ ನನ್ನ ಕೈಗೆ ಸೇರಿತು ಲೋಕವಿಖ್ಯಾತ ನಾಗಿ ಮಹಾಪುರುಷನೆನಿಸಿಕೊಂಡ ಆ ರಾಮನು,ನನಗಾಗಿ ತೋರಿಸಿದ ಎಣೆ ಯಿಲ್ಲದ ಪರಾಕ್ರಮಕ್ಕೆ ತಕ್ಕ ಪ್ರತ್ಯುಪಕಾರವನ್ನು ಮಾಡಲು ಯಾರಿಗೆ ತಾ ನೇ ಸಾಧ್ಯವು? ಸಪ್ತಸಾಲಗಳನ್ನೂ, ಪರ್ವತವನ್ನೂ, ಭೂಮಿಯನ್ನೂ ಒಂದೇ ಬಾಣದಿಂದ ಭೇದಿಸಿದ ಆ ಮಹಾವೀರನಿಗೆ ಬೇರೊಬ್ಬರ ಸಹಾಯ ವೇಕೆ? ಲಕ್ಷ್ಮಣಾ! ಆ ರಾಮನು ತನ್ನ ಬಿಲ್ಲಿನ ನಾಣನ್ನು ಮಿಡಿದು,ಒಂದಾವ ರ್ತಿ ಟಂಕಾರಮಾಡಿದಮಾತ್ರಕ್ಕೆ ಆ ಮಹಾಧ್ವನಿಯಿಂದ ಈ ಭೂಮಿಯೂ ಪರ್ವತಗಳೂ ನಡುಗಿ ಹೋದುವಲ್ಲವೆ? ಅಂತಹ ವೀರಾಗ್ರಣಿಗೆ ಇತರರ ಸಹಾ ಯವಿಂದ ಆಗಬೇಕಾದುದೇನು?ಅವನು ಈಗಲೂ ತನ್ನ ಶಕ್ತಿಯಿಂದಲೇ ಸೀ ತೆಯನ್ನು ಪಡೆಯುವನು ತನ್ನ ವೀರ್ಯದಿಂದಲೇ ರಾವಣನನ್ನೂ ಕೊಲ್ಲುವನು ಹೆಸರಿಗೆನುಮಾತ್ರ ನಾನು ಸಹಾಯಕನಾಗಿರಬೇಕೇಹೊರತು ಬೇರೆಯಲ್ಲ ಎಲೈ ಪುರುಷೋತ್ತಮನೆ!ವೈರಿಯಾದ ರಾವಣನ್ನು ಅವನ ಪರಿವಾರಗಳೊಡನೆ ಕೊ ಲ್ಲುವುದಕ್ಕಾಗಿ ಹೊರಡುವಾಗ, ನಾನು ಅವನನ್ನು ಹಿಂಬಾಲಿಸಿ ಅವನ ಆಜ್ಞೆ ಯಂತೆ ನಡೆದುಕೊಳ್ಳುವೆನು ನಾನು ಕೇವಲಭೃತ್ಯನಾಮಾತ್ರನೇಹೊರತು ಬೇ ರೆಯಲ್ಲ ಒಂದುವೇಳೆ ನಾನು ಅವನಲ್ಲಿ ನಂಬಿಕೆಯಿಂದಲೋ, ಸ್ನೇಹದ ಸ ಲಿಗೆಯಿಂದಲೋ, ಯಾವುದಾದರೂ ಸ್ವಲ್ಪವಿಷಯದಲ್ಲಿ ತಪ್ಪಿನಡೆದಿದ್ದರೂ, ನೀವಿಬ್ಬರೂ ಅದನ್ನು ಮನ್ನಿಸಿಬಿಡಬೇಕು ಲೋಕದಲ್ಲಿ ತಪ್ಪುಮಾಡದ ವನೊಬ್ಬನೂ ಇಲ್ಲ " ಎಂದನು ಮಹಾತ್ಮನಾದ ಸುಗ್ರೀವನು ಈ ಮಾತು ಗಳನ್ನಾಡಿದೊಡನೆ,ಲಕ್ಷ್ಮಣನಿಗೆ ಅವನಲ್ಲಿ ಪರಮಪ್ರೇಮವುಂಟಾಯಿತು ಆಗ ಕೋಪವನ್ನು ಬಿಟ್ಟು, ಪ್ರೀತಿಪೂರ್ವಕವಾಗಿ ಆ ಸುಗ್ರೀವನನ್ನುಕುರಿತು ,ಎ ಲೈ ವಾನರೇಂದ್ರನೆ!ನೀನು ರಾಮನಿಗೆ ನಾಥನಾಗಿ,ಅದರಲ್ಲಿಯೂ ವಿಶೇಷವಾ ಗಿ ಆತನಲ್ಲಿ ವಿನಯಸಂಪನ್ನನಾಗಿರುವುದರಿಂದ, ನನ್ನಣ್ಣನಾದ ರಾಮನು ಸ ರ್ವವಿಧದಲ್ಲಿಯೂ ಈಗ ಸನಾಥನೆಂಬುದರಲ್ಲಿ ಸಂದೇಹವಿಲ್ಲ ಎಲೆ ಸುಗ್ರೀವ ನೆ! ನಿನ್ನ ಮಹಿಮೆಯನ್ನೂ, ನಿನ್ನ ನಡತೆಯನ್ನೂ ನೋಡಿದರೆ, ಸರ್ವೋತ್ತಮ

ವಾದ ಈ ವಾನರರಾಜ್ಯಲಕ್ಷ್ಮಿಯನ್ನನುಭವಿಸುವುದಕ್ಕೆ ನೀನೇ ಅರ್ಹನು ರಾಮನಿಗೆ ನಿನ್ನ ಸಹಾಯವಿರುವಾಗ ಇನ್ನು ತೀಕ್ಷ್ಣದಲ್ಲೆಯೇ ಶತ್ರುಗಳನ್ನಡಗಿಸುವುದರಲ್ಲಿ ಸಂದೇಹವಿಲ್ಲ ಎಲೈ ಕಪಿರಾಜನೆ! ಈಗ ನೀನು ಹೇಳಿದ ಮಾತುಗಳು, ಧರ್ಮಜ್ಞನಾಗಿಯೂ, ಕೃತಜ್ಞನಾಗಿಯೂ, ಯುದ್ಧಗಳಲ್ಲಿ ಹಿಂತಿರುಗದವನಾಗಿಯೂ ಇರುವ ಸತ್ಪುರುಷನು ಹೇಳತಕ್ಕ ಮಾತುಗಳೆಂಬುದರಲ್ಲಿ ಸಂದೇಹವಿಲ್ಲ ನೀನು ಹೇಳಿದುದು ಯುಕ್ತಿಯುಕ್ತವಾಗಿಯೇ ಇರುವುದು ನನ್ನಣ್ಣನಾದ ರಾಮನೊಬ್ಬನು ಮತ್ತು ನೀನೊಬ್ಬನು ಹೊರತು, ನಿಗ್ರಹಾನುಗ್ರಹಗಳಲ್ಲಿ ಸಂಪೂರ್ಣವಾದ ಸಾಮರ್ಥ್ಯವನ್ನು ಹೊಂದಿಯೂ ತನ್ನ ದೋಷಗಳನ್ನು ತಿಳಿದುಕೊಂಡು, ತಾವುಮಾಡಿದುದು ತಪ್ಪೆಂದು ಒಪ್ಪಿಕೊಳ್ಳುವವರು ಬೇರಯಾರುಂಟು? ಇದಲ್ಲದೆ ನೀನು ಪರಾಕ್ರಮದಲ್ಲಿಯೂ, ಬಲದಲ್ಲಿಯೂ ಆ ರಾಮನಿಗೆ ಸಾಟಿಯೆಂಬುದರಲ್ಲಿ ಸಂದೇಹವಿಲ್ಲ ಬಹುಕಾಲಕ್ಕೆ ಈ ನಿನ್ನ ಸಹಾಯವು ನನಗೆ ದೇವತಾನುಗ್ರಹದಿಂದ ಬಂದುದೇ ಹೊರತು ಬೇರೆವಿಧದಿಂದ ನಿನ್ನಂತವನ ಸಹಾಯವನ್ನು ಹೊಂದುವುದು ಎಂದಿಗೂ ಸಾಧ್ಯವಲ್ಲ ಎಲೈ ವೀರನೆ! ಅವೆಲ್ಲವೂ ಹಾಗಿರಲಿ! ಈಗ ನೀನು ಮಾಡಬೇಕಾದ ಕೆಲಸವೇನೆಂದರೆ, ಈಗಲೇ ನೀನು ನನ್ನೊಡನೆ ರಾಮನಬಳಿಗೆ ಬಂದು ಸೀತಾವಿರಹದುಃಖದಿಂದ ಕೊರಗುತ್ತಿರುವ ನಿನ್ನಮಿತ್ರನಾದ ಆತನನ್ನು ಸಮಾಧಾನಪಡಿಸಬೇಕು ನೀನು ಮೊದಲು ಮಾಡಬೇಕಾದ ಸಹಾಯವೇ ಇದು. *ರಾಮನು ದುಃಖದಿಂದ ವಿಲಪಿಸುವಾಗ, ದೈನ್ಯದಿಂದ ಹೇಳಿದ ಮಾತುಗಳ

---

* ಇಲ್ಲಿ ದುಃಖದಿಂದ ಮೈಮರೆತಿದ್ದ ರಾಮನ ಮಾತೆಂಬುದರಿಂದ,ರಾಮನು''ಉಚ್ಯಮಾನೋಪಿ ಪರುಷಂ ನೋತ್ತರಂ ಪ್ರತಿಪದ್ಯತೇ,ಮತ್ತೊಬ್ಬರು ಪರುಷವಾಗಿ ಹೇಳಿದರೂ ಇದಿರುಮಾತಾಡುವವನಲ್ಲವೆಂಬುದರಿಂದ ರಾಮನು ಸ್ವಭಾವದಿಂದ ಪರುಷವಾಕ್ಯವನ್ನಾಡುವವನಲ್ಲವೆಂದು ಸಿದ್ಧವಾಗುವುದು."ಮತ್ತು ''ಅಂತಹ ರಾಮನು ದುಃಖದಿಂದ ಹೇಳಿದುದನು ಕೇಳಿ,ನಾನೂ ನಿನ್ನೊಡನೆ'ಈ ಪರುಷವಾಕ್ಯವನ್ನಾಡಿದೆ''ನೆಂದು ಲಕ್ಷ್ಮಣನು ನಾನು ಹೇಳಿದುದು ರಾಮನ ಮಾತಿನ ಅನುವಾದವಾದುದರಿಂದ ದೋಷವಲ್ಲವೆಂದು,ಸೂಚಿಸಿದುದಾಗಿ ತಿಳಿಯಬೇಕು ಈ ಸಂದರ್ಭದಲ್ಲಿ ತಿಳಿಯಬೇಕಾದ ತತ್ವವೇನೆಂದರೆ:—ಮಹಾರಾಜನಾದ ಸುಗ್ರೀವನು ತನ್ನ ಸ್ವಾಮಿಯಾದ ರಾಮನಕಾರ್ಯವನ್ನು ನಡೆಸಬೇಕಾದ ಸಮಯದಲ್ಲಿಯೂ, ಭೋಗಲೋಲನಾಗಿ,ಕಾಲಾತಿಕ್ರಮವೆಂಬ ಮಹಾಪರಾಧವ

ನ್ನು ಕೇಳಿ ನನಗೆ ಸಹಿಸಲಾರದ ಸಂಕಟವುಂಟಾದುದರಿಂದ, ನಿನ್ನೊಡನೆ ಪರುಷವಾಕ್ಯಗಳನ್ನಾಡಿಬಿಟ್ಟೆನು ಅವುಗಳನ್ನು ಮನಸ್ಸಿನಲ್ಲಿಡದೆ ನೀನು ಮನ್ನಿಸಬೇಕು" ಎಂದನು ಇಲ್ಲಿಗೆ ಮೂವತ್ತಾರನೆಯಸರ್ಗವು

ಸುಗ್ರೀವನು ಸಮಸ್ತವಾನರರನ್ನೂ ಕರೆಸಿದುದು

ಮಹಾತ್ಮನಾದ ಲಕ್ಷ್ಮಣನು ಹೀಗೆ ಹೇಳಿದೊಡನೆ, ಸುಗ್ರೀವನು ತನ್ನಪಕ್ಕದಲ್ಲಿದ್ದ ಹನುಮಂತನನ್ನು ನೋಡಿ, "ಎಲೈ, ಆಂಜನೇಯನೆ! ಮಹೇಂದ್ರಗಿರಿ, ಹಿಮವಂತ ವಿಂಧ್ಯ ಕೈಲಾಸಪರ್ವತಗಳು, ಬಿಳೀತಿಳಿಗಲ್ಲಿನಿಂದ ಕೂಡಿದ ಮಂದರಪರ್ವತ, ಈ ಐದುಪರ್ವತಗಳಲ್ಲಿಯೂ ಇರುವ ವಾನರರೂ, ಪಶ್ಚಿಮದಿಕ್ಕಿನ ಸಮುದ್ರತೀರದಲ್ಲಿ ಬಾಲಸೂರ್ಯವರ್ಣದಿಂದ ಪ್ರಕಾಶಿಸುವ

ನ್ನು ನಡಸಿಬಿಟ್ಟನು ಅದಕ್ಕಾಗಿ ಲಕ್ಷ್ಮಣನು ಕುಪಿತನಾಗಿ ಬಂದುದನ್ನು ನೋಡಿ ಹನುಮಂತನು ಸುಗ್ರೀವನನ್ನು ಕುರಿತು, "ನೀನು ಮಾಡಿದ ಅಪರಾಧಕ್ಕೆ ಅಂಜಲಿಯೊಂದಲ್ಲದೆ ಬೇರೆ ಪ್ರಾಯಶ್ಚಿತ್ತವಿಲ್ಲ" ಎಂದೂ ಉಪದೇಶಿಸಿದನು ಈ ಮಾತನ್ನು ಗೌರವಿಸಿ ಮಹಾರಾಜನಾದ ಸುಗ್ರೀವನೂಕೂಡ ಆ ಮಾತಿನಂತಯೇ ಲಕ್ಷ್ಮಣನಿಗೆ ಕೈಮುಗಿದು 'ನಂಬಿಕೆಯಿಂದಲೋ, ಸಲಿಗೆಯಿಂದಲೋ, ನಾನು ಏನಾದರೂ ಅಲ್ಪಸ್ವಲ್ಪಾಪರಾಧವನ್ನು ಮಾಡಿದ್ದರೂ, ನಾನು ನಿನ್ನ ಭೃತ್ಯನಾದುದರಿಂದ ಕ್ಷಮಿಸಿಬಿಡಬೇಕು. ತಪ್ಪುಮಾಡದವನೊಬ್ಬನೂ ಇಲ್ಲವು" ಎಂದು ಶರಣಾಗತಿಯನ್ನು ಮಾಡಿದನು ಈ ವಿಷಯಗಳಿಂದ ಭಗವಂತನಲ್ಲಿ ತಪ್ಪಿನಡದರೂ, ಭಾಗವತರ ಕ್ಷಮೆಯನ್ನು ಪಡದರೆ, ಆ ಭಾಗವತರ ಮುಖದಿಂದ ಭಗವಂತನ ಕ್ಷಮೆಯನ್ನೂ ಸಂಪಾದಿಸಬಹುದೆಂದೂ, ಇದರಿಂದ ಪುರುಷನು ಭಗವದಪಚಾರರಹಿತನಾಗಿ ಭಗವತ್ಕೈಂಕರ್ಯಕ್ಕೆ ಯೋಗ್ಯನಾಗುವನೆಂದೂ ಸೂಚಿತವಾಗುವುದು ಮತ್ತು ಈಗ ಲಕ್ಷ್ಮಣನು ಶೋಕಾವಿಷ್ಟನಾದ ರಾಮನ ಮಾತುಗಳನ್ನೇ ತಾನೂ ಅನುವಾದಿಸಿದುದಾಗಿ ತನ್ನ ಪರುಷವಾಕ್ಯಗಳಿಗೆ ತಕ್ಕ ಕಾರಣವನ್ನು ತೋರಿಸಿ, ತನ್ನ ಅಪರಾಧನಿವೃತ್ತಿಗಾಗಿ ಸುಗ್ರೀವನ ಮನ್ನಣೆಯನ್ನು ಕೇಳಿದುದರಿಂದ, ಅಪರಾಧಮಾಡಿದ ಭಕ್ತರು, ಪಶ್ಚಾತ್ತಾಪರೂಪವಾದ ಪ್ರಾಯಶ್ಚಿತ್ತದಿಂದ, ಆ ಅಪರಾಧವನ್ನು ಬಿಟ್ಟವರಾದರೆ, ಅವರು ಅಪರಾಧಿಗಳಾಗಿದ್ದಾಗ ಇತರರು ಅವರಿಗೆ ಮಾಡಿದ ಅಪಚಾರಗಳನ್ನು ನೀಗಿಸುವುದಕ್ಕಾಗಿ ಅವರನ್ನು ಪ್ರಸನ್ನರನ್ನಾಗಿ ಮಾಡಿಕೊಳ್ಳಬೇಕೆಂಬ ಶಾಸ್ತ್ರಾರ್ಥವೂ ಇಲ್ಲಿ ಪ್ರಕಟಿತವಾಗುವುದು

ಅನೇಕಪರ್ವತಗಳಲ್ಲಿ ವಾಸಮಾಡುವವರೂ, ಕಾಡಿಗೆಯಂತೆಯೂ, ಕರೀಮೇ
ಘುಗಳಂತಯೂ ಕಪ್ಪಾದ ಮೈಬಣ್ಣವುಳ್ಳವರಾಗಿ ಅಂಜನಪರ್ವತದಲ್ಲಿಯಾವ
ಯಾವನಾನರರಿರುವರೋ,ಅವರೂ,ನನ್ನಾಜ್ಞೆಯಿಂದ ಈಗಲೇಇಲ್ಲಿಗೆಬಂದು
ಸೇರುವಂತೆ ಹೇಳಿಕಳುಹಿಸು ಮತ್ತು ಮೇರುಪರ್ವತದ ಪಾರ್ಶ್ವದಲ್ಲಿ ಮಣಿ
ಶಿಲೆಗಳಿಂದ ತುಂಬಿದ ಗುಹೆಗಳೊಳಗೆ, ಬಂಗಾರದಂತೆ ಹೊಂಬಣ್ಣವಾದ
ಮೈಯುಳ್ಳ ಕಲವು ವಾನರರಿರುವರು ಧೂಮ್ರಗಿರಿಯೆಲ್ಲಿ ಕೆಲವರು ಸೇರಿಕೊಂ
ಡಿರುವರು ಸಂಜೆಯ ಮೇಘದಂತೆ ಕಂಪಾದ ಉದಯಪರ್ವತದಮೇಲೆ, ಭ
ಯಂಕರವಾದ ಪದ್ಮತಾಳಿವಂಬ ವನದಲ್ಲಿ ಕಲವು ವಾನರೋತ್ತಮರಿರುವರು
ಮಹಾರುಣವೆಂಬ ಬೆಟ್ಟದಲ್ಲಿ ಬಾಲಸೂರ್ಯನಂತೆ ಮೈಬಣ್ಣವುಳ್ಳವರಾಗಿ,
ಮೈರೇಯವಂಬ ಮದ್ಯವನ್ನು ಕುಡಿದು ಕೂಬ್ಬಿ, ವೇಗಶಾಲಿಗಳೆನಿಸಿಕೂಂಡ
ಕೆಲವುವಾನರರುಂಟು ಮತ್ತು ಪುಷ್ಪಗಂಧದಿಂದ ಮನೋಹರಗಳಾಗಿ ಮಹ
ರ್ಷಿಗಳ ವಾಸಕ್ಕೆ ಯೋಗ್ಯಗಳಾದ ಅಲ್ಲಲ್ಲಿನ ಮಹಾವನಗಳಲ್ಲಿಯೂ ಕಲವರು
ವಾಸಮಾಡುತ್ತಿರುವರು ಇಷ್ಟೇಅಲ್ಲದೆ ಈ ಭೂಮಿಯ ಬೇರೆಕಡೆಗಳಲ್ಲಿ ವಾ
ಸಮಾಡುತ್ತಿರುವ ಸಮಸ್ತವಾನರರನ್ನೂ ಇಲ್ಲಿಗೆ ಶೀಘ್ರದಲ್ಲಿ ಕರಸು ಅವ
ರನ್ನು ಕರಯುವುದಕ್ಕಾಗಿ ಕೆಲವು ವಾನರದೂತರಿಗೆ ಸಾಮದಾನಾದ್ಯುಪಾ
ಯಗಳಿಂದ ಮನಸ್ತೃಪ್ತಿಯನ್ನುಂಟುಮಾಡಿ ಆಯಾಸ್ಥಳಗಳಿಗೆ ಕಳುಹಿಸು
ನಾನು ಮೊದಲೇ ಮಹಾವೇಗವುಳ್ಳ ಕೆಲವುದೂತರನ್ನು ಕಳುಹಿಸಿರುವನಷ್ಟೆ?
ಅವರನ್ನೂ ಶೀಘ್ರದಲ್ಲೆ ಬರುವಂತ ತ್ವರೆಪಡಿಸುವುದಕ್ಕಾಗಿ, ಈಗ ನೀನುಮ
ತ್ತೆ ಕೆಲವು ವಾನರರನ್ನು ಕಳುಹಿಸು' ಕಾಮಸುಖದಲ್ಲಿ ಮುಳುಗಿ ಸೋ
ಮಾರಿಗಳಾಗಿ ಶೀಘ್ರದಲ್ಲಿ ಕೆಲಸಮಾಡಲಾರದ ವಾನರರಿದ್ದರೂ ಅವರನ್ನೂ
ಬಿಡದೆ ನನ್ನಬಳಿಗೆ ಕರೆದುಕೂಂಡುಬಾ ? ಈ ನನ್ನಾಜ್ಞೆಯಂತೆ ಇನ್ನು
ಹತ್ತುದಿನಗಳೂಳಗಾಗಿ ಯಾರು ಇಲ್ಲಿಗೆ ಬಂದು ಸೇರುವುದಿಲ್ಲವೋ, ಆ ದು
ರ್ಬುದ್ಧಿಗಳನ್ನು, ರಾಜಾಜ್ಞೆಯನ್ನು ಮೀರಿ ನಡೆದ ಅಪರಾಧಕ್ಕಾಗಿ ಆಗಲೇ
ಕೊಂದುಬಿಡಬೇಕು? ಇನ್ನು ಲಕ್ಷಕೋಟಿಸಂಖ್ಯೆಯುಳ್ಳ ಕಪಿದೂತರು ಈಗ
ಲೇ ನನ್ನಾಜ್ಞೆಯಿಂದ ಇಲ್ಲಿಂದ ಹೊರಡಬೇಕು ಅವರೆಲ್ಲರೂ ಈ ರಾಜಾಜ್ಞೆ
ಯನ್ನು ಸ್ವಲ್ಪವೂ ಮೀರದೆ ನಡೆಯತಕ್ಕವರಾಗಿರಬೇಕು ಮೇಘಗಳಂತೆ

ಯೂ, ಪರ್ವತಗಳಂತೆಯೂ, ಮಹಾಕಾರವುಳ್ಳವರಾಗಿಯೂ, ಭಯಂಕರಸ್ವರೂಪವುಳ್ಳವರಾಗಿಯೂ ಇರುವ ಆ ಕಪಿಶ್ರೇಷ್ಠರೆಲ್ಲರೂ ಸೇರಿ ಆಕಾಶವನ್ನೇ ಮರೆಸುವಂತೆ ಗುಂಪಾಗಿ ಇಲ್ಲಿಂದ ಹೊರಡಲಿ' ಭೂಮಿಯಲ್ಲಿರುವ ಸಮಸ್ತವಾನರರ ಸ್ಥಿತಿಗತಿಗಳನ್ನೂ ಚೆನ್ನಾಗಿ ತಿಳಿದ ಬುದ್ಧಿಶಾಲಿಗಳಾದವಾನರರೇ ಅಲ್ಲಲ್ಲಿಗೆ ಹೋಗಿ ತಿಳಿಸಬೇಕು " ಎಂದನು ಸುಗ್ರೀವಾಜ್ಞೆಯನ್ನು ಕೇಳಿ ಹನುಮಂತನು ಪರಾಕ್ರಮಿಗಳಾದ ವಾನರರನ್ನು ಕರಸಿ ದಿಕ್ಕುದಿಕ್ಕುಗಳಿಗೆ ಕಳುಹಿಸಿದನು ಹೀಗೆ ಹನುಮಂತನಿಂದ ಪ್ರೇರಿತರಾದ ವಾನರರೆಲ್ಲರೂ ರಾಜಾಜ್ಞೆಗೆ ಕಟ್ಟುಬಿದ್ದು ಆಕ್ಷಣವೇ ಅಲ್ಲಿಂದ ಹೊರಟು ಅತಿವೇಗದಿಂದ ಆಕಾಶಮಾರ್ಗದಲ್ಲಿಯೇ ಹಾರಿಬರುತಿದ್ದರು ರಾಮಕಾರ್ಯಾರ್ಥದಿಂದ ಹೊರಟ ಆ ವಾನರವೀರರು ಅಲ್ಲಲ್ಲಿ ಸಮುದ್ರಗಳಲ್ಲಿಯೂ, ದ್ವೀಪಗಳಲ್ಲಿಯೂ, ಪರ್ವತಗಳಲ್ಲಿಯೂ, ವನಗಳಲ್ಲಿಯೂ ವಾಸಮಾಡುತ್ತಿದ್ದ ವಾನರರೆಲ್ಲರಿಗೂ ಸುಗ್ರೀವಾಜ್ಞೆಯನ್ನು ತಿಳಿಸಿ ಕಿಷ್ಕಿಂಧೆಗೆ ಹೊರಟು ಬರುವಂತೆ ಪ್ರೇರಿಸಿದರು ರಾಜರಾಜನಾದ ಸುಗ್ರೀವನು ಅಪರಾಧಿಗಳ ವಿಷಯದಲ್ಲಿ ಕಾಲಮೃತ್ಯುವಂತೆ ಕ್ರೂರನಾದುದರಿಂದ, ಆ ಸುಗ್ರೀವಾಜ್ಞೆಯನ್ನು ಕೇಳಿದೊಡನೆ ಸಮಸ್ತವಾನರರೂ ಕಿಷ್ಕಿಂಧೆಗೆ ಹೊರಟುಬಿಟ್ಟರು ಕಾಡಿಗೆಯಂತೆ ಕಪ್ಪಾದ ಮೈಯ್ಯುಳ್ಳವರಾಗಿ, ಮಹಾವೇಗಶಾಲಿಗಳೆನಿಸಿಕೊಂಡು, ಅಂಜನಪರ್ವತದಲ್ಲಿದ್ದ ಮೂರುಕೋಟಿವಾನರರೂ ರಾಮನಿದ್ದಕಡೆಗೆ ಬಂದು ಸೇರಿದರು. ಅಸ್ತಪರ್ವತದಲ್ಲಿ ಚಿನ್ನದಂತೆ ಮೈಬಣ್ಣವುಳ್ಳವರಾಗಿ ವಾಸಮಾಡುತಿದ್ದ ಹತ್ತುಕೋಟಿಮಂದಿ ವಾನರರೂ ಆಗಲೇ ಕಿಷ್ಕಿಂಧೆ ಬಂದು ಸೇರಿಬಿಟ್ಟರು ಸಿಹ್ಮದ ಕೇಸರಗಳಂತೆ 'ಮೈಬಣ್ಣವುಳ್ಳ ಸಹಸ್ರಕೋಟಿವಾನರರು ಕೈಲಾಸಶಿಖರಗಳಿಂದ ಹೊರಟುಬಂದರು ಹಿಮವತ್ಪರ್ವತದಲ್ಲಿ ಸೇರಿಕೊಂಡು ಫಲಮೂಲಗಳಿಂದಲೇ ಜೀವಿಸುತಿದ್ದ ಲಕ್ಷಕೋಟಿವಾನರರು ಆಗಲೇ ಆ ಪರ್ವತವನ್ನು ಬಿಟ್ಟು ಹೊರಟುಬಂದರು ಹಾಗೆಯೇ ಅಂಗಾರಕಗ್ರಹದಂತೆ ಕೆಂಪಾಗಿಯೂ, ಭಯಂಕರಸ್ವರೂಪವುಳ್ಳವರಾಗಿಯೂ, ಭಯಂಕರಕಾರ್ಯವುಳ್ಳವರಾಗಿಯೂ ಇದ್ದ ಸಹಸ್ರಕೋಟಿವಾನರರು ವಿಂಧ್ಯಪರ್ವತದಿಂದ ಹೊರಟು ಬಂದರು. ಇಷ್ಟೇ ಅಲ್ಲದೆ ಕ್ಷೀರಸಮುದ್ರತೀರದ

ಲ್ಲಿಯೂ, ತಮಾಲವನವೆಂದು ಪ್ರಸಿದ್ಧವಾದ ಹೊಂಗೆಯ ಕಾಡಿನಲ್ಲಿಯೂ, ನಾರಿಕೇಳವನದಲ್ಲಿಯೂ ವಾಸಮಾಡುತಿದ್ದ ವಾನರರೆಲ್ಲರೂ ಬಂದು ಸೇರಿದರು ಆ ವಾನರರ ಸಂಖ್ಯೆಯನ್ನು ಇಷ್ಟೆಂದು ನಿರ್ಣಯಿಸುವುದಕ್ಕೇ ಸಾಧ್ಯವಿಲ್ಲದಂತಿತ್ತು. ಹಾಗೆಯೇ ಅಲ್ಲಲ್ಲಿನ ಕಾಡುಗಳಿಂದಲೂ, ಗುಹೆಗಳಿಂದಲೂ ನದಿಗಳಿಂದಲೂ, ಮಹಾವೇಗವುಳ್ಳ ಅನೇಕವಾನರಸೈನ್ಯವು ಸೂರ್ಯನನ್ನೇ ನುಂಗಿಬಿಡುವಂತೆ ಗುಂಪುಗುಂಪಾಗಿ ಬಂದುಸೇರಿತು ಅಲ್ಲಲ್ಲಿ ವಾನರರನ್ನು ತ್ವರಪಡಿಸುವುದಕ್ಕಾಗಿ ಹೋಗಿದ್ದ ವಾನರದೂತರು ಹಿಮವತ್ಪರ್ವತವನ್ನು ಸೇರಿ, ಅಲ್ಲಿ ಒಂದು ಸುಪ್ರಸಿದ್ಧವಾದ ಮಹಾವೃಕ್ಷವನ್ನು ಕಂಡರು ಮೊದಲು ರಮಣೀಯವಾದ ಆ ಹಿಮವತ್ಪರ್ವತದಲ್ಲಿ ಸಮಸ್ತದೇವತೆಗಳಿಗೂ ಸಂತೋಷಕರವಾದ ಒಂದು ಮಾಹೇಶ್ವರಯಾಗವು ನಡೆಸಲ್ಪಟ್ಟಿತು ಯಜ್ಞಕಾಲದಲ್ಲಿ ಹೋಮಮಾಡುವಾಗ ಆ ಯಜ್ಞವು ನಡೆದ ಸ್ಥಳದಲ್ಲಿ ಅಲ್ಲಲ್ಲಿ ಚೆಲ್ಲಿದ ಆಜ್ಯಾದಿಹವಿಸ್ಸುಗಳ ಸಂಬಂದದಿಂದ ಹುಟ್ಟಿದುವುಗಳಾಗಿಯೂ, ಅಮೃತದಂತೆ ರುಚಿಕರಗಳಾಗಿಯೂ ಇದ್ದ ಫಲಮೂಲಗಳನ್ನು ಈ ವಾನರರು ಮೊದಲು ನೋಡಿದರು ಆ ಫಲಮೂಲಗಳನ್ನು ಒಂದಾವರ್ತಿ ಭುಜಿಸಿದವರಿಗೆ ಇನ್ನೊಂದುತಿಂಗಳವರೆಗೂ ಹಸಿವು ಬಾಯಾರಿಕೆಗಳೇ ಉಂಟಾಗವು ಈ ವಾನರವೀರರೆಲ್ಲರೂ ಆ ಫಲಮೂಲಗಳನ್ನು ಭುಜಿಸಿದುದಲ್ಲದೆ, ಅಲ್ಲಿದ್ದ ದಿವ್ಯೌಷಧಿಗಳನ್ನೂ ಸಂಗ್ರಹಿಸಿಟ್ಟುಕೊಂಡರು ತಮ್ಮೊಡೆಯನಾದ ಸುಗ್ರೀವನ ಪ್ರೀತ್ಯರ್ಥವಾಗಿ ಆ ಯಜ್ಞಸ್ಥಲದಲ್ಲಿದ್ದ ಫಲಮೂಲಗಳಲ್ಲಿಯೂ,ಸುವಾಸನೆಯುಳ್ಳ ಹೂಗಳಲ್ಲಿಯೂ ಕೆಲವನ್ನು ಸಂಗ್ರಹಿಸಿಕೊಂಡರು ಈವಾನರರೆಲ್ಲರೂ ಸಮಸ್ತದಿಕ್ಕುಗಳಲ್ಲಿರುವಬೇರೆವಾನರರಿಗೂ ಈಸುಗ್ರೀವಾಜ್ಞೆಯನ್ನು ತಿಳಿಸಿ, ಅವರಿಗೆ ಮೊದಲೇ ಕಿಷ್ಕಿಂಧೆಗೆ ಬಂದು ಸೇರಿದ್ದರು.ಇವರೆಲ್ಲರೂ ಮನೋವೇಗವುಳ್ಳವರಾದುದರಿಂದ ಸುಗ್ರೀವನೂ ಲಕ್ಷ್ಮಣನೂ ಸೇರಿದ್ದ ಮುಹೂರ್ತದೊಳಗಾಗಿಯೇ ಹಿಂತಿರುಗಿ ಬಂದು,ತಾವು ತಂದಿದ್ದ ಫಲಮೂಲೌಷಧಿಗಳೆಲ್ಲವನ್ನೂ ಸುಗ್ರೀವನಿಗೆ ಕಾಣಿಕೆಯಾಗಿ ಸಮರ್ಪಿಸಿ ಅತನ ಮುಂದೆ ಕೈಮುಗಿದು ನಿಂತು ''ಸ್ವಾಮಿ!, ನಾವು ಸಮಸ್ತಪರ್ವತಗಳನ್ನೂ, ಸಮುದ್ರಗಳನ್ನೂ, ವನಗಳನ್ನೂ ಸುತ್ತಿ, ಅಲ್ಲಲ್ಲಿರುವ ವಾನರರೆಲ್ಲರಿಗೂ ನಿ

ಮ್ಮಾಜ್ಞೆಯನ್ನು ತಿಳಿಸಿ ಬಂಧಿರುವೆವು ಎಲ್ಲರೂ ನಿಮ್ಮಾಜ್ಞೆಯಿಂದ ಇಲ್ಲಿಗೆ ಬರುತ್ತಿರುವರು " ಎಂದರು ಇದನ್ನು ಕೇಳಿ ಸುಗ್ರೀವನು ಪರಮಸಂತುಷ್ಟ ನಾಗಿ,ಅವರು ತಂದಿಟ್ಟ ಕಾಣಿಕೆಯನ್ನು ಪ್ರೀತಿಯಿಂದ ಸ್ವೀಕರಿಸಿ ಅವರನ್ನು ಮನ್ನಿಸಿದನು ಇಲ್ಲಿಗೆ ಮೂವತ್ತೇಳನೆಯ ಸರ್ಗವು

ಸುಗ್ರೀವನೂ ಲಕ್ಷ್ಮಣನೂ ರಾಮನಬಳಿಗೆ ಹೋದುದು

ಹೀಗೆ ಸುಗ್ರೀವನು ಆ ವಾನರರು ಕೊಟ್ಟ ಕಾಣಿಕೆಯನ್ನಂಗೀಕರಿಸಿ, ಅವರೆಲ್ಲರನ್ನೂ ಪ್ರಿಯವಾಕ್ಯಗಳಿಂದ ಮನ್ನಿಸಿ ಕಳುಹಿಸಿದನು ತಾನು ನಿಯಮಿಸಿದ ಕಾರ್ಯವನ್ನು ತನ್ನ ಮನಸ್ತೃಪ್ತಿಯಾಗುವಂತೆ ನಿರ್ವಹಿಸಿಬಂದ ಆ ವಾನರದೂತರೆಲ್ಲರನ್ನೂ ಸನ್ಮಾನಿಸಿದಮೇಲೆ ಸುಗ್ರೀವನ ಮನಸ್ಸಿಗೆ ನೆಮ್ಮದಿಯುಂಟಾಯಿತು ಇನ್ನು ಮಹಾಬಲಾಢ್ಯನಾದ ರಾಮನೂ ತಾನೂ ಕೃತಾರ್ಥರಂದೆಣಿಸಿ ಸಂತೋಷಪರವಶನಾಗಿದ್ದನು ಇಷ್ಟರಲ್ಲಿ ಲಕ್ಷ್ಮಣನು ವಾನರಾಗ್ರೇಸರನಾದ ಆ ಸುಗ್ರೀವನನ್ನು ಕುರಿತು, ವಿನಯದಿಂದ ಪ್ರಿಯವಾಕ್ಯಗಳನ್ನಾಡಿ ಸಂತೋಷಪಡಿಸುತ್ತ, ಆತನೊಡನೆ, ''ಎಲೆ ಸೌಮ್ಯನೆ! ನಿನಗೆ ಇಷ್ಟವಿದ್ದಪಕ್ಷದಲ್ಲಿ ನೀನು ಈಗಲೇ ಇಲ್ಲಿಂದ ಹೊರಡು ! ರಾಮನ ಬಳಿಗೆ ಹೋಗುವೆವು" ಎಂದನು ಇದನ್ನು ಕೇಳಿ ಸುಗ್ರೀವನು ಪರಮಸಂತುಷ್ಟನಾಗಿ ಲಕ್ಷ್ಮಣನನ್ನು ಕುರಿತು, ''ಎಲೈ ಮಹಾತ್ಮನೆ ! ಆದಕ್ಕೆ ತಡೆಯೇನು? ನಡೆ! ರಾಮನಬಳಿಗೆ ಹೋಗುವೆವು ನಾನು ನಿಮ್ಮಾಜ್ಞೆಯನ್ನನುವರ್ತಿಸಿ ನಡೆಯುವವನೇ ಹೊರತು ಸ್ವತಂತ್ರನಲ್ಲ " ಎಂದನು ಹೀಗೆ ಸುಗ್ರೀವನು ಲಕ್ಷ್ಮಣನೊಡನೆ ಹೇಳಿ, ಆಮೇಲೆ ತಾರೆಯನ್ನೂ, ಇತರಸ್ತ್ರೀಯರನ್ನೂ ಅಂತಃಪುರಕ್ಕೆ ಹೋಗುವಂತೆ ಅನುಜ್ಞೆಯನ್ನು ಕೊಟ್ಟು ಕಳುಹಿಸಿಬಿಟ್ಟನು. ಆಮೇಲೆ ಅಲ್ಲಿದ್ದ ಕೆಲವು ವಾನರಸೇವಕರನ್ನು ನೋಡಿ, ''ಎಲೈ ವಾನರರೆ! ಬನ್ನಿರಿ!" ಎಂದು ಗಟ್ಟಿಯಾಗಿ ಕೂಗಿದನು ಇದನ್ನು ಕೇಳಿದೊಡನೆ, ಅಂತಃಪುರಸ್ತ್ರೀಯರನ್ನು ನೋಡುವುದಕ್ಕರ್ಹರಾಗಿದ್ದ ಕೆಲವು ವಾನರರು ಬೇಗನೆ ಬಂದು ವಿನಯದಿಂದ ಕೈಮುಗಿದು ನಿಂತರು ಆಗ ಸುಗ್ರೀವನು ಆ ವಾನರರನ್ನುನೋಡಿ, ''ಎಲೈ ವಾನರರೆ! ಶೀಘ್ರದಲ್ಲಿ ನನ್ನ ಪಲ್ಲಕ್ಕಿ

ಯನ್ನು ತೆಗೆದುಕೊಂಡು ಬನ್ನಿರಿ!" ಎಂದನು ಆ ಕ್ಷಣವೇ ಶೀಘ್ರಗಾಮಿಗಳಾದ ಕೆಲವು ವಾನರರು ಹೋಗಿ, ಸರ್ವೋತ್ತಮವಾದ ಒಂದು ಪಲ್ಲಕ್ಕಿಯನ್ನು ತಂದಿರಿಸಿದರು ಆಮೇಲೆ ಸುಗ್ರೀವನು ಲಕ್ಷ್ಮಣನನ್ನು ಕುರಿತು, "ಲಕ್ಷ್ಮಣಾ! ಇನ್ನು ಪಲ್ಲಕ್ಕಿಯನ್ನೇರು!" ಎಂದನು ಸುವರ್ಣಯಮವಾಗಿ ಸೂರ್ಯನಂತೆ ಜ್ವಲಿಸುತ್ತಿರುವ ಆ ಪಲ್ಲಕ್ಕಿಯನ್ನು ಲಕ್ಷ್ಮಣಸುಗ್ರೀವರಿಬ್ಬರೂ ಏರಿ ಕುಳಿತರು ಮಹಾಕಾಯವುಳ್ಳ ಕೆಲವು ವಾನರರು ಆ ಪಲ್ಲಕ್ಕಿಯನ್ನು ಹೊತ್ತುನಿಂತರು, ಆಗಲೇ ಕೆಲವರು ಆಪಲ್ಲಕ್ಕಿಯಮೇಲೆ ದಿವ್ಯವಾದ ಶ್ವೇತಚ್ಛತ್ರವನ್ನು ತಂದುಹಿಡಿದರು ಕೆಲವುವಾನರರು ಆ ಪಲ್ಲಕ್ಕಿಯನ್ನು ಸುತ್ತಿನಿಂತು ಚಾಮರಗಳನ್ನು ಬೀಸುತಿದ್ದರು ಆ ಪಲ್ಲಕ್ಕಿಯ ಮುಂದೆ ಶಂಖಧ್ವನಿಗಳೂ ಭೇರೀಧ್ವನಿಗಳೂ ಆರಂಭಿಸಲ್ಪಟ್ಟವು ಕಲವು ವಾನರರು ಹೊಗಳುಭಟರಾಗಿ ನಿಂತು ಮಂಗಳಸ್ತುತಿಗಳನ್ನಾರಂಭಿಸಿದರು? ಹೀಗೆ ಸುಗ್ರೀವನು ತನ್ನ ಸಮಸ್ತರಾಜವೈಭವಗಳೊಡನೆ ಲಕ್ಷ್ಮಣನನ್ನು ಕರೆದುಕೊಂಡು ಹೊರಟನು ಕ್ರೂರತೇಜಸ್ಸುಳ್ಳವರಾಗಿಯೂ, ಶಸ್ತ್ರಧಾರಿಗಳಾಗಿಯೂ ಇದ್ದ ಕೆಲವು ಕಪಿಭಟರು ಆ ಪಲ್ಲಕ್ಕಿಮನ್ನು ಸುತ್ತಿಬರುತಿದ್ದರು ಈ ವೈಭವಗಳೊಡನೆಯೇ ಸುಗ್ರೀವನು ರಾಮನಿರುವಸ್ಥಳಕ್ಕೆ ಬಂದು ಸೇರಿದನು. ಶ್ರೀರಾಮಸಂಬಂಧದಿಂದ ಸರ್ವೋತ್ತಮವೆನಿಸಿಕೊಂಡ ಆಸ್ಥಳಕ್ಕೆ ಬಂದೊಡನೆಯೇ, ಮಹಾತೇಜಸ್ವಿಯಾದ ಸುಗ್ರೀವನು ಲಕ್ಷ್ಮಣನೊಡಗೂಡಿ ಪಲ್ಲಕ್ಕಿಯಿಂದ ಕೆಳಕ್ಕಿಳಿದು, ರಾಮನನ್ನು ಕಂಡೊಡನೆ ಕೈಮುಗಿಯುತ್ತಮುಂದೆ ಬಂದು ನಿಂತನು ಹಾಗೆಯೇ ಅಲ್ಲಿದ್ದ ವಾನರರೆಲ್ಲರೂ ರಾಮನಮುಂದೆ ಬದ್ಧಾಂಜಲಿಗಳಾಗಲಿ ನಿಂತರು ಹೀಗೆ ವಾನರರೆಲ್ಲರೂ ಕೈಜೋಡಿಸಿಕೊಂಡು ಸುಗ್ರೀವನ ಸುತ್ತಲೂ ನಿಂತಿದ್ದರು ಹೀಗೆ ಸಮಸ್ತವಾನರರೂ ಕೈಜೋಡಿಸಿ ನಿಂತಿರಲು, ತಾವರೆಯ ಮೊಗ್ಗುಗಳಿಂದ ತುಂಬಿದ ದೊಡ್ಡ ಕೆರೆಯಂತೆ ತೋರುತಿದ್ದ ಆಮಹಾಸೇನೆಯನ್ನುಕಂಡಾಗ ರಾಮನಿಗೆ ಪರಮಸಂತೋಷವುಂಟಾಯಿತು.ಅವನಿಗೆ ಸುಗ್ರೀವನಲ್ಲಿ ಅಸಾಧಾರಣವಾದ ಪ್ರೇಮವು ಹುಟ್ಟಿತು ಸುಗ್ರೀವನು ಮುಂದೆ ಬಂದು ರಾಮನ ಪಾದಗಳೆರಡನ್ನೂ ಹಿಡಿದು ಸಾಷ್ಟಾಂಗಪ್ರಣಾಮವನ್ನು ಮಾಡಿದನು ರಾಮನು ಅವ

ನನ್ನು ಮೇಲಕ್ಕೆತ್ತಿ, ಪ್ರೇಮದಿಂದಲೂ, ಗೌರವದಿಂದಲೂ ಆತನನ್ನು ಬಿಗಿಯಾಗಿ ಅಪ್ಪಿಕೊಂಡು,"ಎಲೈ ಮಿತ್ರನೆ! ಕುಳ್ಳಿರು" ಎಂದನು ಸುಗ್ರೀವನು ವಿನಯದಿಂದ ನೆಲದಮೇಲೆಯೇ ಕುಳಿತನು. ಆಗ ರಾಮನು ಅವನನ್ನು ನೋಡಿ, "ಎಲೈ ವೀರನೆ! ಯಾವನು ಧರ್ಮವನ್ನೂ,ಅರ್ಥವನ್ನೂ, ಕಾಲೋಚಿತವಾಗಿ ವಿಭಾಗಿಸಿಕೊಂಡು, ಆಯಾಕಾಲಗಳಲ್ಲಿಯೇ ಅವನ್ನು ಸೇರಿಸುವನೋ, ಅವನೇ ರಾಜನೆಂದು ಹೇಳಿಸಿಕೊಳ್ಳುವುದಕ್ಕೆ ಯೋಗ್ಯನು ಧರ್ಮಾರ್ಥಗಳೆರಡನ್ನೂ ಬಿಟ್ಟು, ಕಾಮವನ್ನೇ ಯಾವನು ಹೆಚ್ಚಾಗಿ ಸೇವಿಸುವನೋ ಅವನು, ಮರದಮೇಲೆ ಮಲಗಿ ಮೈಮರೆತವನು ಕೆಳಗೆ ಬಿದ್ದ ಮೇಲೆ ಎಚ್ಚರಗೊಳ್ಳುವಂತೆ,ಅಧೋಗತಿಯನ್ನು ಹೊಂದಿದಮೇಲೆಯೇ ಜಾಗರೂಕನಾಗುವನು. ಶತ್ರುಗಳನ್ನು ಕೊಲ್ಲುವುದರಲ್ಲಿಯೂ ಮಿತ್ರರನ್ನು ಆದರಿಸುವುದರಲ್ಲಿಯೂ ಯಾವಾಗಲೂ ಜಾಗರೂಕನಾಗಿದ್ದು, ಧರ್ಮಾರ್ಥಕಾಮಗಳೆಂಬ ತ್ರಿವರ್ಗದ ಫಲವನ್ನೂ ಕಾಲೋಚಿತವಾಗಿ ಯಾವನು ಸೇವಿಸುವನೋ, ಆ ರಾಜನುಮಾತ್ರವೇ ತನ್ನ ರಾಜಧರ್ಮವನ್ನು ಚೆನ್ನಾಗಿ ನಿರ್ವಹಿಸಿದವನಾಗುವನು ಎಲೈ ಶತ್ರುಸೂದನನೆ! ಯುದ್ಧಪ್ರಯತ್ನಕ್ಕೆ ತಕ್ಕಕಾಲವು ಬಂದೊದಗಿರುವುದು ಶರದೃತುವು ಪ್ರಾಪ್ತವಾಯಿತು ಈಗ ನೀನು ನಡೆಸಬೇಕಾದ ಕಾರ್ಯವನ್ನು ಕುರಿತು ನಿನ್ನ ವಾನರಮಂತ್ರಿಗಳೊಡನೆ ಚೆನ್ನಾಗಿ ಆಲೋಚಿಸು!" ಎಂದನು ಇದನ್ನು ಕೇಳಿ ಸುಗ್ರೀವನು ರಾಮನನ್ನು ಕುರಿತು, "ಎಲೈ ಆರ್ಯನೆ! ನಾನು ಬಹುಕಾಲದಿಂದ ಕಳೆದುಕೊಂಡಿದ್ದ ಭಾಗ್ಯವೂ ನನ್ನ ಯಶಸ್ಸೂ ಶಾಶ್ವತವಾದ ಈ ನನ್ನ ವಾನರರಾಜ್ಯವೂ, ನಿನ್ನ ಮತ್ತು ನಿನ್ನ ತಮ್ಮನ ಅನುಗ್ರಹದಿಂದಲೇ ಈಗ ತಿರುಗಿ ನನಗೆ ಲಭಿಸಿರುವುವು. ಯಾವನು ತನಗೆ ಬೇರೊಬ್ಬರು ಮಾಡಿದ ಉಪಕಾರಕ್ಕೆ ಪ್ರತ್ಯುಪಕಾರವನ್ನು ಮಾಡುವುದಿಲ್ಲವೋ ಅವನು ಪುರುಷಾಧಮನು ಎಲೈ ವೀರನೆ! ಈಗ ನೂರಾರುಮಂದಿ ವಾನರವೀರರು ಸಮಸ್ತಭೂಮಿಯನ್ನೂ ಸುತ್ತಿ ಬಲಾಢ್ಯರಾದ ಅನೇಕವಾನರರನ್ನು ಕರೆತಂದಿರುವರು ದೊಡ್ಡದೊಡ್ಡ ಕಾಡುಗಳನ್ನೂ, ವನಗಳನ್ನೂ, ದುರ್ಗಗಳನ್ನೂ, ಸಂದುದೊಂದುಗಳನ್ನೂ ಹುಡುಕಿ, ಅಲ್ಲಲ್ಲಿರುವ ಭಯಂಕರಾಕಾರವುಳ್ಳ ಭಲ್ಲೂಕಗೋಲಾಂಗೂಲಗಳೇ ಮೊದ

ಲಾದ ಸೇನೆಯನ್ನೂ ಕರೆತಂದಿರುವರು. ದೇವಗಂಧರ್ವಾಂಶದಿಂದ ಹುಟ್ಟಿ ಕಾಮರೂಪಿಗಳಾದ ಅನೇಕವಾನರವೀರರೂ ತಮ್ಮಸೇನೆಗಳೊಡನೆ ಬಂದಿರುವರು ಇನ್ನೂ ಬರುತ್ತಲೂ ಇರುವರು. ವೀರರಾದ ಈ ವಾನರಶ್ರೇಷ್ಠರಲ್ಲಿ ಕೆಲವರು * ನೂರುವಾನರರೊಡನೆಯೂ, ಕೆಲವರು ಲಕ್ಷವಾನರರೊಡನೆಯೂ, ಕೆಲವರು ಕೋಟಿವಾನರರೊಡನೆಯೂ, ಕೆಲವರು ಹತ್ತುಸಾವಿರಮಂದಿ ವಾನರರೊಡನೆಯೂ ಸೇರಿ ಬಂದಿರುವರು ಮತ್ತು ಈ ವಾನರಸೇನಾಧಿಪತಿಗಳಲ್ಲಿ, ಕೆಲವರಲ್ಲಿ ಅರ್ಬುದಸಂಖ್ಯೆಯುಳ್ಳ ಸೇನೆಯೂ, ಕೆಲವರಲ್ಲಿ ಖರ್ವವೂ, ಕಲವರಲ್ಲಿ ಮಧ್ಯವೂ, ಕೆಲವರಲ್ಲಿ ಅಂತವೂ,ಕೆಲವರಲ್ಲಿ ಸಮುದ್ರವೂ, ಕೆಲವರಲ್ಲಿ ಪರಾರ್ಧವೂ ಇರುವುದು ಇಂತಹ ದೊಡ್ಡ ಸೇನೆಯೊಡನೆ ಅವರೆಲ್ಲರೂ ಬರುತ್ತಿರುವರು. ರಾಮಾ! ಮಹೇಂದ್ರಪರಾಕ್ರಮವುಳ್ಳವರಾಗಿಯೂ, ಮೇರುಮಂದರಪರ್ವತಗಳಂತೆ ಧೀರರಾಗಿಯೂ, ವಿಂಧ್ಯಮೇರುಪರ್ವತಗಳಲ್ಲಿ ವಾಸಮಾಡತಕ್ಕ ಎಷ್ಟೋವಾನರರು ನಿನ್ನ ಕಾರ್ಯಕ್ಕಾಗಿಯೇ ಬರುತ್ತಿರುವರು ತಾವಾಗಿಯೇ ರಾವಣನನ್ನು ಬಂಧುಸಹಿತವಾಗಿ ಯುದ್ಧದಲ್ಲಿ ಕೊಂದು, ಸೀತೆಯೆನ್ನು ತಂದು ನಿನಗೊಪ್ಪಿಸಬಲ್ಲ ಮಹಾಧೀರರಾದ ವಾನರರೇ ನಿನ್ನ ಸೇವೆಗೆ ಬರುತ್ತಿರುವರು"ಎಂದನು ಆಗ ರಾಮನಿಗೆ ಸುಗ್ರೀವನು ತನ್ನಾಜ್ಞೆಯನ್ನನುಸರಿಸಿ ತನ್ನ ಕಾರ್ಯಾರ್ಥವಾಗಿ ಮಾಡಿರುವ ಪ್ರಯತ್ನವನ್ನು ನೋಡಿ, ಪರಮಸಂತೋಷವುಂಟಾಯಿತು ಹೀಗೆ ಸಂತೋಷದಿಂದ ಉಲ್ಲಾಸಹೊಂದಿದ್ದ ರಾಮನು, ಆಗ ಅರಳಿದ ನೀಲೋತ್ಪಲದಂತೆ ಪ್ರಿಯದರ್ಶನನಾಗಿದ್ದನು ಇಲ್ಲಿಗೆ ಮೂವತ್ತೆಂಟನೆಯ ಸರ್ಗವು

---

* "ಏಕಂ ದಶ ಶತಮಸ್ಮಾತ್ಪಹಸ್ರಮುಯುತಂ ತತಃಪರಂ ಲಕ್ಷಂ । ಪ್ರಯುತಂ ಕೋಟಿಮಥಾರ್ಬುದಬ್ಯನ್ದೇ ಖರ್ವಂ ನಿಖರ್ವಂಚ॥ತಸ್ಮಾನ್ಮಹಾಸರೋಜಂ ಶಂಕುಂ ಸರಿತಾಂಪತಿಂ ತ್ವಂಶಂ । ಮಧ್ಯಂಪರಾರ್ಧಮಾಹುರ್ಮಥೋತ್ತರಂ ದಶಗುಣಂ ತಥಾಜ್ಞೇಯಂ॥" ಎಕ, ದಶಕ,]ಶತಕ, ಸಹಸ್ರ, (ದಶಸಹಸ್ರ,) ಲಕ್ಷ, (ದಶಲಕ್ಷ), ಕೋಟಿ (ದಶಕೋಟಿ) ಅರ್ಬುದ, (ದಶಾರ್ಬುದ) ಬೃಂದ, (ದಶಬೃಂದ) ಖರ್ವ, (ದಶಖರ್ವ),ನಿಖರ್ವ (ದಶನಿಖರ್ವ), ಮಹಾಪದ್ಮ (ದಶಮಹಾಪದ್ಮ), ಶಂಕು (ದಶಶಂಕು), ಸಮುದ್ರ (ದಶಸಮುದ್ರ, ಅಂತ (ದಶಾಂತ), ಮಧ್ಯ (ದಶಮಧ್ಯ) ಪರಾರ್ಧ ಎಂದು ಸಂಖ್ಯಾಕ್ರಮವನ್ನು ತಿಳಿಯಬೇಕು

ವಾನರಸೈನ್ಯಗಳೆಲ್ಲವೂ ಬಂದು ಸೇರಿದುದು

ಧಾರ್ಮಿಕಶಿರೋಮಣಿಯಾದ ರಾಮನು, ತನ್ನ ಮುಂದೆ ಕೈಮುಗಿದು ನಿಂತು ಹೀಗೆ ಹೇಳುತಿದ್ದ ಸುಗ್ರೀವನನ್ನು ತೋಳುಗಳಿಂದಪ್ಪಿಕೊಂಡು, ಆತನನ್ನು ಕುರಿತು,-"ಎಲ್ಲೆ ಮಿತ್ರನೆ! ಇಂದ್ರನು ಮಳೆಯನ್ನು ಸುರಿಸುವುದಾಗಲಿ, ಸೂರ್ಯನು ಕತ್ತಲೆಯನ್ನು ನೀಗಿಸಿ ಈ ಸಮಸ್ತ ಪ್ರಪಂಚವನ್ನೂ ಪ್ರಕಾಶಪಡಿಸುವುದಾಗಲಿ, ಅವರಿಗೆ ಸಹಜಧರ್ಮವೇ ಆದುದರಿಂದ ಅದೇನೂ ಆಶ್ಚರ್ಯವಲ್ಲ ಹಾಗೆಯೇ ಚಂದ್ರನು ತನ್ನ ಕಿರಣಗಳಿಂದ ಲೋಕಾಹ್ಲಾದವನ್ನು ಮಾಡುವುದೂ ಅವನ ಸಹಜಧರ್ಮವೇ ಹೊರತು ಅದರಲ್ಲಿಯೂ ಆಶ್ಚರ್ಯವಿಲ್ಲ ಅದರಂತೆಯೇ ನೀನೂ ನಿನ್ನ ಮಿತ್ರರಾದವರಿಗೆ ಒಂದು ಪ್ರತ್ಯುಪಕಾರವನ್ನು ಮಾಡಿದರೂ ಅದು ನಿನ್ನಂತವನಿಗೆ ಸಹಜವಾಗಿಯೇ ಇರುವುದು ಆದುದರಿಂದ ನೀನೂ ನಿನ್ನ ಮಿತ್ರನಾದ ನನಗೆ ಉಪಕಾರಮಾಡುವುದೇನೂ ಆಶ್ಚರ್ಯವಲ್ಲ ಎಲ್ಲೆ ಸುಗ್ರೀವನೆ! ನೀನು ಯಾವಾಗಲೂ ಪ್ರಿಯವಾದಿಯೆಂಬುದನ್ನು ನಾನು ಬಲ್ಲೆನು ನಿನ್ನ ಸಹಾಯವಿದ್ದಮೇಲೆ ಯಾವಶತ್ರುಗಳನ್ನಾದರೂ ನಾನು ಯುದ್ಧದಲ್ಲಿ ಜಯಿಸಬಲ್ಲೆನು ಈಗ ನೀನೊಬ್ಬನೇ ನನ್ನಲ್ಲಿ ಸಹೃದಯವುಳ್ಳ ಮಿತ್ರನು ನೀನೇ ನನಗೆ ಸಹಾಯವನ್ನು ಮಾಡತಕ್ಕವನು ಪೂರ್ವದಲ್ಲಿ ಅನುಹ್ಲಾದನೆಂಬವನು ಇಂದ್ರನನ್ನು ವಂಚಿಸಿ ಶಚಿಯನ್ನು ಕದ್ದು ತಂದಂತೆ, ರಾಕ್ಷಸಾಧಮನಾದ ರಾವಣನು ನನ್ನನ್ನು ವಂಚಿಸಿ ನನ್ನ ಪ್ರಿಯಪತ್ನಿಯಾದ ಸೀತೆಯನ್ನು ಕದ್ದುಯ್ದನು! ಇಂದ್ರನು ಯುದ್ಧದಲ್ಲಿ ಶಚಿಯ ತಂದೆಯಾದ ಪುಲೋಮನನ್ನು ಕೊಂದು ಆ ಶಚಿಯನ್ನು ತಂದಂತೆಯೇ, ತೀಕ್ಷ್ಣದಲ್ಲಿ ನಾನೂ ರಾವಣನನ್ನು ಕೊಂದು ಸೀತೆಯನ್ನು ತರುವೆನು" ಎಂದನು. ಹೀಗೆ ಸಂಭಾಷಿಸುತ್ತಿರುವಷ್ಟರಲ್ಲಿಯೇ ಆಕಾಶದಲ್ಲಿ ಸೂರ್ಯನನ್ನೇ ಮರೆಸುವಂತೆ ದೊಡ್ಡ ಧೂಳಿಯು ನೆಲದಿಂದ ಮೇಲಕ್ಕೆದ್ದಿತು ಆ ಧೂಳಿಯಿಂದ ದಿಕ್ಕುಗಳೆಲ್ಲವೂ ಮಾಸಿದಂತಾದುವು ಪರ್ವತಗಳಿಂದಲೂ, ಮಹಾರಣ್ಯಗಳಿಂದಲೂ ತುಂಬಿದ ಈ ಸಮಸ್ತಭೂಮಿಯೂ ಅಕಸ್ಮಾತ್ತಾಗಿ ನಡುಗಿದಂತಾಯಿತು ಸ್ವಲ್ಪಕಾಲದೊಳಗಾಗಿ ಪರ್ವತಾಕಾರವುಳ್ಳವರಾಗಿಯೂ, ತೀಕ್ಷ್ಣವಾದ ಕೋರೆಗಳುಳ್ಳವರಾಗಿಯೂ, ಮಹಾಬಲಾಢ್ಯರಾಗಿಯೂ ಇರುವ ವಾನರರು

ಲೆಕ್ಕವಿಲ್ಲದಂತೆ ಬಂದು ಅಲ್ಲಿನ ಸಮಸ್ತಭೂಪ್ರದೇಶವನ್ನೂ ವ್ಯಾಪಿಸಿಬಿಟ್ಟರು ಕಾಮರೂಪಿಗಳಾಗಿಯೂ ಬಲಿಷ್ಠರಾಗಿಯೂ ಇರುವ ಅನೇಕವಾನರ ವೀರರು ಮಹಾಮೇಘುಗಳಂತೆ ಬೊಬ್ಬೆಯಿಡುತ್ತ ಎವೆಹಾರಿಸುವಷ್ಟರಲ್ಲಿ ಬಂದು ಸೇರಿಬಿಟ್ಟರು ಆ ಯೂಥನಾಥರಲ್ಲಿ ಒಬ್ಬೊಬ್ಬರೂ ಕೋಟಿಕೋಟಿವಾನರಸೇನೆಯೊಡನೆ ಬಂದಿದ್ದರು ಅವರಲ್ಲಿ ನದೀತೀರವಾಸಿಗಳು ಕೆಲವರು ಪರ್ವತವಾಸಿಗಳು ಕಲವರು ಸಮುದ್ರತೀರವಾಸಿಗಳು ಕೆಲವರು ಹಾಗೆಯೇ ಇನ್ನೂ ಬೇರೆಬೇರೆಸ್ಥಳಗಳಲ್ಲಿದ್ದ ವಾನರರೆಲ್ಲರೂ ಬಂದು ನೆರೆದರು ಪರಾಕ್ರಮವಂತನಾಗಿಯೂ,ಶ್ರೀಮಂತನಾಗಿಯೂ ಇದ್ದ ಶತಬಲಿಯೆಂಬ ವಾನರವೀರನು, ತಾನಿದ್ದ ಮೇರುಪರ್ವತಪ್ರಾಂತಗಳಿಂದ ಹತ್ತುಸಹಸ್ರಕೋಟಿವಾನರಸೈನ್ಯದೊಡನೆ ಬಂದು ಸೇರಿದನು ಆ ವಾನರಸೈನ್ಯದಲ್ಲಿ ಬಾಲಸೂರ್ಯನಂತೆ ಹೊಳೆಯುವ ಮೈಬಣ್ಣವುಳ್ಳವರು ಕೆಲವರು' ಕಲವರು ಚಂದ್ರನಂತೆ ಬಿಳುಪಾದ ದೇಹಕಾಂತಿಯುಳ್ಳವರು' ತಾವರೆಯಸಳಿನಂತೆ ಎಳಗೆಂಪುಬಣ್ಣದಿಂದ ಶೋಭಿಸುವ ಮೈಬಣ್ಣವುಳ್ಳವರು ಕಲವರು' ಹೀಗೆ ಕಾಂತಿವಿಶಿಷ್ಟವಾದ ದೇಹವುಳ್ಳ ವಾನರರೆಲ್ಲರೂ ಒಂದುಕಡೆಯಲ್ಲಿ ಬಂದು ಸೇರಿದ್ದರು ಮೇರುವಿನಂತೆ ಮೈಬಣ್ಣವುಳ್ಳ ತಾರೆಯ ತಂದೆಯಾದ ಸುಷೇಣನೆಂಬ ವಾನರವೀರನು, ಹತ್ತುಸಹಸ್ರಕೋಟಿವಾನರಸೈನ್ಯದೊಡನೆ ಬಂದು ಸೇರಿದನು ಸುಗ್ರೀವಪತ್ನಿಯಾದ ರುಮೆಯ ತಂದೆಯಾದ ತಾರನೆಂಬ ವಾನರಯೂಥಪನು ಸಹಸ್ರಕೋಟಿವಾನರರೊಡನೆ ಬಂದು ಸೇರಿದನು ಮತ್ತು ಹನುಮಂತನ ತಂದೆಯಾಗಿ, ಕಮಲಕಿಂಜಲ್ಕದಂತಿರುವ ದೇಹಚ್ಛಾಯೆಯಿಂದಲೂ, ಬಾಲಸೂರ್ಯನಂತಿರುವ ಮುಖದಿಂದಲೂ ಕೂಡಿದ ಕೇಸರಿಯೆಂಬ ವಾನರೋತ್ತಮನು,ಒಂದೊಂದರಲ್ಲಿ ಇಪ್ಪತ್ತೊಂದು ಸಾವಿರದ ಎಂಟು ನೂರೆಪ್ಪತ್ತುಮಂದಿ (ಅಕ್ಷೌಹಿಣೀ ಸಂಖ್ಯೆಯ) ವಾನರರುಳ್ಳ ಸೇನೆಗಳನ್ನು ಸಹಸ್ರಾಧಿಕಸಂಖ್ಯೆಯಿಂದ ಸೇರಿಸಿ ಕರೆತಂದನು ಗೋಲಾಂಗೂಲಗಳಿಗೆ ರಾಜನಾದ ಗವಾಕ್ಷನೆಂಬವನು ಸಹಸ್ರಕೋಟಿವಾನರೊಡನೆ ಬಂದು ಸೇರಿದನು ಯಾವ ಶತ್ರುಗಳನ್ನಾದರೂ ಹುಟ್ಟಡಗಿಸತಕ್ಕ ಮಹಾವೀರ್ಯವುಳ್ಳ ಧೂಮ್ರನೆಂಬವನು ಎರಡುಸಹಸ್ರಭಲ್ಲೂಕವೀರರೊಡನೆ ಬಂದು ಸೇರಿದನು.

ವೀರನಾದ ಪನಸನೆಂಬ ವಾನರನು ದೊಡ್ಡಪರ್ವತಗಳಂತೆ ದೇಹವುಳ್ಳವ
ರಾಗಿಯೂ, ಭಯಂಕರಸ್ವರೂಪರಾಗಿಯೂ ಇರುವ ಮೂರುಕೋಟಿವಾ
ನರರೊಡನೆ ಬಂದನು ಕಾಡಿಗೆಯ ರಾತಿಯಂತೆ ಕಪ್ಪಾದ ಮೈಯ್ಯುಳ್ಳ ವೀರ
ನೆಂಬವನು ಹತ್ತುಕೋಟಿವಾನರರೊಡನೆ ಬಂದನು ಮಹಾಪರಾಕ್ರಮಿ
ಯಾಗಿ, ಮೇರುಪರ್ವತದಂತೆ ಮೈಯುಳ್ಳ ಗವಯನು ಹತ್ತುಕೋಟಿವಾ
ನರರೊಡನೆ ಬಂದು ಸೇರಿದನು ಬಲಾಢ್ಯನಾದ ವಲೀಮುಖನೆಂಬ ಕಪಿ
ಯೂಥಪನು ಸಹಸ್ರಕೋಟಿವಾನರರಿಂದ ಪರಿವೃತನಾಗಿ ಬಂದು ಸುಗ್ರೀ
ವನ ಮುಂದೆ ನಿಂತನು ಅಶ್ವಿನೀದೇವತೆಗಳ ಮಕ್ಕಳಾದ ಮೈಂದದ್ವಿವಿದ
ರೆಂಬ ವಾನರರಿಬ್ಬರೂ ಸಹಸ್ರಕೋಟಿವಾನರಸೈನ್ಯದೊಡನೆ ಬಂದು ಸೇ
ರಿದರು ವೀರಾಗ್ರಣಿಯಾಗಿ, ಮಹಾತೇಜಸ್ವಿಯೆನಿಸಿದ ಗಜನು ಮೂರು
ಕೋಟಿ ವಾನರರೊಡನೆ ಬಂದನು ಮಹಾತೇಜಸ್ವಿಯಾದ ಜಾಂಬವಂತನೆಂಬ
ಭಲ್ಲೂಕರಾಜನು ಹತ್ತುಕೋಟಿಭಲ್ಲೂಕರೊಡನೆ ಬಂದು ನಿಂತನು ಬಲಾ
ಢ್ಯನಾದ ರುಣ್ಮುಂತನು ಮೂರುಕೋಟಿಸೈನ್ಯದೊಡನೆ ಬಂದನು ಗಂಧ
ಮಾದನನೆಂಬ ಕಪಿವೀರನು ಒಂದುಕಡೆಯಲ್ಲಿ, ಹತ್ತು ಲಕ್ಷ ಕೋಟಿ ವಾನರ
ರನ್ನೂ,ಮತ್ತೊಂದುಕಡೆಯಲ್ಲಿ ಲಕ್ಷಕೋಟಿ ವಾನರರನ್ನೂ ಸೇರಿಸಿಕೊಂಡು
ಬಂದನು ಪರಾಕ್ರಮದಲ್ಲಿ ತಂದೆಗೆ ಸಮಾನನೆನಿಸಿಕೊಂಡ ಯುವರಾಜನಾ
ದ ಅಂಗದನು ಸಹಸ್ರಪದ್ಮಸಂಖ್ಯೆಯುಳ್ಳ ಒಂದು ದೊಡ್ಡವಾನರಸೇನೆಯ
ನ್ನೂ, ನೂರುಶಂಖಸಂಖ್ಯೆಯುಳ್ಳ ಮತ್ತೊಂದು ಸೇನೆಯನ್ನೂ ಕಟ್ಟಿಕೊಂ
ಡು ಸುಗ್ರೀವನ ಕಡೆಗೆ ಬಂದನು ನಕ್ಷತ್ರದಂತೆ ಹೊಳೆಯುವ ದೇಹಕಾಂತಿ
ಯುಳ್ಳವನಾಗಿ, ಮಹಾವೀರನೆನಿಸಿಕೊಂಡ * ತಾರನೆಂಬವನು ಐದುಕೋಟಿ
ವಾನರರೊಡನೆ ಬಂದು ಸೇರಿದನು ಇಂದ್ರಜಾನುವೆಂಬ ಯೂಥಪತಿಯು
ಹನ್ನೊಂದುಕೋಟಿ ವಾನರಸೈನ್ಯದೊಡನೆ ಬಂದು ಸೇರಿದನು ಬಾಲಸೂ
ರ್ಯನಂತೆ ಮೈಬಣ್ಣವುಳ್ಳ ರಂಭನೆಂಬವನು ದಶಸಹಸ್ರಸಂಖ್ಯೆಯಿಂದಲೂ,
ಸಹಸ್ರಸಂಖ್ಯೆಯಿಂದಲೂ, ಶತಸಂಖ್ಯೆಯಿಂದಲೂ ಕೂಡಿದ ಬೇರೆಬೇರೆ
ಸೈನ್ಯಗಳನ್ನು ಸಿದ್ಧಪಡಿಸಿಕೊಂಡು ಬಂದನು. ಯೂಥಪತಿಯಾದ ಗುರ್ಮು

* ಇವನು ರಂಭೆಯ ತಂದೆಯಲ್ಲದ ಬೇರೊಬ್ಬ ತಾರನೆಂದು ತಿಳಿಯಬೇಕು.

ಮುನೆಂಬ ವಾನರವೀರನು,ಎರಡುಕೋಟಿವಾನರರಿಂದ ಪರಿವೃತನಾಗಿ ಬಂದು ಸುಗ್ರೀವನಮುಂದೆ ನಿಂತನು ಹನುಮಂತನು ಕೈಲಾಸಶಿಖರಾಕಾರವುಳ್ಳವ ರಾಗಿಯೂ, ಘೋರಪರಾಕ್ರಮವುಳ್ಳವರಾಗಿಯೂ ಇದ್ದ ಸಹಸ್ರಕೋಟಿ ವಾನರರಿಂದ ಪರಿವೃತನಾಗಿ ನಿಂತು ಶೋಭಿಸುತಿದ್ದನು ವೀರ್ಯಸಂಪನ್ನ ನಾದ ನಲನು ನೂರುಕೋಟಿವಾನರರಿಂದ ಪರಿವೇಷ್ಟಿತನಾಗಿ ನಿಂತಿದ್ದನು ಸುಗ್ರೀ ವನಿಗೆ ಬಹಳಪ್ರೇಮಪಾತ್ರನಾದ ದಧಿಮುಖನೆಂಬ ಮತ್ತೊಬ್ಬ ವಾನರನು ಹತ್ತುಕೋಟಿ ವಾನರರಿಂದ ಪರಿವೃತನಾಗಿ ಬಂದನು ಶತಭನೂ, ಕುಮು ದನೂ, ವಹ್ನಿಯೂ, ರಂಹನೂ, ವೀರನೂ, ಇನ್ನೂ ಕಾಮರೂಪಿಗಳಾದ ಅನೇಕವಾನರಯೂಥಪತಿಗಳೂ ಬಂದು ಅಲ್ಲಿನ ಸಮಸ್ತಭೂಮಿಯನ್ನೂ, ಪರ್ವತಗಳನ್ನೂ, ಕಾಡುಗಳನ್ನೂ ವ್ಯಾಪಿಸಿ ನಿಂತರು ಅಲ್ಲಿ ಬಂದ ವಾನರರ ಸಂಖ್ಯೆಯನ್ನು ಎಣಿಸಲಸಾಧ್ಯವಾಯಿತು. ಭೂಲೋಕದಲ್ಲಿ ದೇವಯೋನಿ ಯಿಂದ ಹುಟ್ಟಿ ಅಪ್ರಾಕೃತರಾದ ವಾನರರೂ, ಸಾಮಾನ್ಯವಾನರರೂ ಮಿತಿ ಯಿಲ್ಲದೆ ಬಂದುಸೇರಿದರು ಈ ವಾನರರೆಲ್ಲರೂ ಮಹೋತ್ಸಾಹದಿಂದ ಹಾ ರುತ್ತಲೂ,ನೆಗೆಯುತ್ತಲೂ ಗರ್ಜಿಸುತ್ತಲೂ, ಮುಂದೆ ಬಂದು ಮೇಘಗಳು ಸೂರ್ಯನನ್ನು ಸುತ್ತಿ ನಿಂತಂತೆ ಸುಗ್ರೀವನ ಸುತ್ತಲೂ ನಿಂತಿದ್ದರು.ಅವರಲ್ಲಿ ಒಬ್ಬೊಬ್ಬರೂ ಸಿಹ್ಮನಾದಗಳನ್ನು ಮಾಡುತ್ತ ಮುಂದೆಬಂದು,ತಮ್ಮತಮ್ಮ ಹೆಸರುಗಳೊಡನೆ ತಮ್ಮ ಆಗಮನವನ್ನು ತಿಳಿಸಿ, ಸುಗ್ರೀವನಿಗೆ ತಮ್ಮ ಮು ಖವನ್ನೆತ್ತಿ ತೋರಿಸಿ ನಮಸ್ಕರಿಸುತಿದ್ದರು ಆಗ ಸುಗ್ರೀವನ ಸಮೀಪಕ್ಕೆ ಹೋಗತಕ್ಕವರಾದ ಮತ್ತೆ ಕೆಲವು ವಾನರಶ್ರೇಷ್ಠರು, ವಿನಯಸೂಚಕವಾ ಗಿ ತಮ್ಮ ವಸ್ತ್ರಗಳನ್ನಿರುಕಿಸಿಕೊಂಡು ಅವನ ಸಮೀಪದಲ್ಲಿ ಕೈಮುಗಿದು ನಿಂತಿದ್ದರು ಧರ್ಮಜ್ಞನಾದ ಸುಗ್ರೀವನು ರಾಮನಿಗೆ ಕೈಮುಗಿದು ಅಸಮ ಸ್ತವಾನರಸೇನೆಯನ್ನೂ ರಾಮನ ವಶಕ್ಕೊಪ್ಪಿಸಿ ಆಮೇಲೆ ಆ ಸೇನೆಯನ್ನು ನೋಡಿ ''ಎಲೈ ವಾನರೋತ್ತಮರೆ! ನಿಮ್ಮಲ್ಲಿ ಯೂಥಪತಿಗಳಾದವರು ತ ಮ್ಮ ತಮ್ಮ ಸೇನೆಯೆಲ್ಲವನ್ನೂ 'ಅಲ್ಲಲ್ಲಿ ಬೆಟ್ಟಗಳಮೇಲೆಯೂ, ಗಿರಿನದಿಗಳ ತೀರದಲ್ಲಿಯೂ, ಕಾಡುಗಳಲ್ಲಿಯೂ, ಅವರವರ ಅನುಕೂಲಕ್ಕೆ ತಕ್ಕಂತೆ ಕ್ರ ಮವಾಗಿ ಇಳಿಸಬೇಕು." ಎಂದು ಆಜ್ಞೆಗೆ ವಿಧ್ಯುಕ್ತವಿಸಿ,ಆ ಸೇನೆಯು ಎಷ್ಟುದ

ಬಹುದೆಂದು ತಿಳಿಯಬೇಕೆಂಬ ಇಚ್ಛೆಯುಳ್ಳವನಾಗಿದ್ದನು ಇಲ್ಲಿಗೆ ಮೂವತ್ತೊಂಬತ್ತನೆಯ ಸರ್ಗವು

ಸುಗ್ರೀವನು ಸೀತಾನ್ವೇಷಣಾರ್ಥವಾಗಿ, ವಿನತೆನೆಂಬ ವಾನರ ಯೂಥಾಧಿಪತಿಯನ್ನು ಪೂರ್ವದಿಕ್ಕಿಗೆ ಕಳುಹಿಸಿದುದು

ಹೀಗೆ ಸಮೃದ್ಧವಾದ ಸೇನಾಸಾಧನಗಳುಳ್ಳ ಸುಗ್ರೀವನು, ಪುರುಷೋತ್ತಮನಾದ ರಾಮನನ್ನು ಕುರಿತು ,, ರಾಮಾ ! ನನಗೆ ತಿಳಿದಮಟ್ಟಿಗೆ ಸಮಸ್ತದೇಶಗಳಲ್ಲಿಯೂ, ನನ್ನ ರಾಜ್ಯದಲ್ಲಿಯೂ ಇರತಕ್ಕ ಬಲಾಢ್ಯರೂ, ಕಾಮರೂಪಿಗಳೂ, ಆನೆಯಂತೆ ಕೊಬ್ಬಿದವರೂ ಆಗಿರುವ ವಾನರರೆಲ್ಲರೂ ಬಂದಿಳಿದಿರುವರು ಭಯಂಕರಾಕಾರವುಳ್ಳ ದೈತ್ಯದಾನವರನ್ನೇ ಹೋಲತಕ್ಕ ಈ ವಾನರಯೂಥಪತಿಗಳೆಲ್ಲರೂ ತಮ್ಮ ತಮ್ಮ ಶಕ್ತಿಗೆ ತಕ್ಕಂತೆ ಮಹಾಪರಾಕ್ರಮಿಗಳಾಗಿಯೂ, ಶೀಘ್ರಗಾಮಿಗಳಾಗಿಯೂ ಇರುವ ಅನೇಕವಾನರಸೈನಿಕರನ್ನೂ ಕರೆತಂದಿರುವರು ಇವರು ಪೂರ್ವದಲ್ಲಿ ನಡೆಸಿರುವ ಒಂದೊಂದುಕಾರ್ಯವೂ ಬಹಳ ಹೆಸರುಗೊಂಡುದಾಗಿದೆ ಇವರ ಪೂರ್ವಚರಿತ್ರಗಳೂ ಬಹಳ ವಿಖ್ಯಾತಗಳಾಗಿವೆ ಇವರೆಲ್ಲರೂ ಮಹಾಬಲಶಾಲಿಗಳು ಎಷ್ಟೇ ಶ್ರಮವನ್ನಾದರೂ ಲಕ್ಷ್ಯಮಾಡುವವರಲ್ಲ ಪರಾಕ್ರಮಗಳಲ್ಲಿಯೂ ಸಾಹಸಗಳಲ್ಲಿಯೂ ಇವರೆಲ್ಲರೂ ಬಹಳ ಹೆಸರುಗೊಂಡವರು ಭೂಮಾರ್ಗದಲ್ಲಿಯಾಗಲಿ, ಜಲಮಾರ್ಗದಲ್ಲಿಯಾಗಲಿ ತಡೆಯಿಲ್ಲದೆ ಸಂಚರಿಸಬಲ್ಲರು ಅನೇಕಪರ್ವತಗಳಲ್ಲಿದ್ದು ಅಲ್ಲಲ್ಲಿನ ರಹಸ್ಯಗಳೆಲ್ಲವನ್ನೂ ಚೆನ್ನಾಗಿ ಬಲ್ಲವರು. ಇಂತಹ ವಾನರರು ಕೋಟಿಕೋಟಿ ಸಂಖ್ಯೆಯಿಂದ ನಿನ್ನ ಸೇವಾರ್ಥವಾಗಿ ಬಂದಿರುವರು ಇವರೆಲ್ಲರೂ ನಿನ್ನ ಕಿಂಕರರು! ಯಾವಮಾತ್ರವಾದರೂ ನಿನ್ನಾಜ್ಞೆಯನ್ನು ಮೀರಿ ನಡೆಯಲಾರರು ಎಲ್ಲರೂ ಸ್ವಾಮಿಹಿತದಲ್ಲಿಯೇ ನಿರತರಾಗಿರುವರು ನಿನ್ನ ಇಷ್ಟಾನುಸಾರವಾಗಿ ನಡೆದುಕೊಳ್ಳುವುದಕ್ಕೆ ಶಕ್ತರಾಗಿಯೂ ಇರುವರು ಅದೋ! ನೋಡು ಆ ವಾನರಯೂಥಪತಿಗಳಲ್ಲಿ ಒಬ್ಬೊಬ್ಬರೂ ಭಯಂಕರಪರಾಕ್ರಮವುಳ್ಳ ಅನೇಕಸಹಸ್ರಸೈನ್ಯಗಳೊಡನೆ ಬಂದು ಸಿದ್ಧರಾಗಿರುವರು. ಎಲೈ ಪುರುಷೋತ್ತಮನೆ! ಮುಂದೆ ನಿನಗೆ ಯಾವ

ಮಾರ್ಗವು ಉಚಿತವೆಂದು ತೋರುವುದೋ ಅದನ್ನು ಇವರಿಗೆ ತಿಳಿಸು ಇವೆಲ್ಲವೂ ನಿನ್ನ ಸೇನೆಗಳೆಂದೇ ತಿಳಿ! ನಿನ್ನ ಅಧೀನವಾಗಿಯೇ ಇರುವುವು ನಿನ್ನ ಇಚ್ಛಾನುಸಾರವಾಗಿ ಇವರಿಗೆ ಆಜ್ಞೆಯನ್ನು ಮಾಡಬಹುದು ಈ ವಾನರರು ಈಗ ನಡೆಸಬೇಕಾದ ಕಾರ್ಯವೇನೆಂಬುದನ್ನು ನಾನೂ ಯಥಾಸ್ಥಿತವಾಗಿ ಬಲ್ಲೆನು ಅದರೂ ನಿನ್ನ ಬಾಯಿಂದ ನೀನೇ ಇವರಿಗೆ ಕಾಲೋಚಿತವಾಗಿ ಆಜ್ಞೆಯನ್ನಿತ್ತು ಕಳುಹಿಸು!"ಎಂದನು ಹೀಗೆ ಹೇಳಿದ ಸುಗ್ರೀವನ ವಾಕ್ಯವನ್ನು ಕೇಳಿ ದಶರಥಪುತ್ರನಾದ ರಾಮನು, ಪರಮಸಂತೋಷದಿಂದ ಆತನನ್ನು ಎರಡು ತೋಳುಗಳಿಂದಲೂ ಅಪ್ಪಿಕೊಂಡು, ''ಎಲೈ ಮಿತ್ರನೆ! ನಿನಗೆ ತಿಳಿಯದ ವಿಷಯವೇನಿದೆ? ನೀನು ಮಹಾಪ್ರಾಜ್ಞನಲ್ಲವ? ಈಗ ನಮಗೆ ಮೊದಲು ನಡೆಯಬೇಕಾದ ಕಲಸವೇನೆಂದರೆ, ನನ್ನ ಪ್ರಿಯಯಾದ ಸೀತೆಯು ಇನ್ನೂ ಬದುಕಿರುವುದನ್ನೂ, ಇಲ್ಲದುದನ್ನೂ ಮೊದಲು ತಿಳಿದುಕೊಳ್ಳುವುದಲ್ಲದೆ, ಆ ಕ್ರೂರರಾಕ್ಷಸನು ಈಗ ಎಲ್ಲಿರುವನೆಂಬುದನ್ನೂ ಕಂಡು ಹಿಡಿಯಬೇಕು ಇವೆರಡನ್ನೂ ಮೊದಲು ತಿಳಿದುಕೊಂಡರೆ, ಆಮೇಲೆ ಆಯಾಕಾಲಕ್ಕೆ ಏನುಚಿತವೋ ಅದನ್ನು ನೀನೂ ನಾನೂ ಸೇರಿ ಚೆನ್ನಾಗಿ ಆಲೋಚಿಸಿಕೊಂಡು ಸಮಯೋಚಿತವಾಗಿ ನಡೆಸಬಹುದು ಎಲೈ ವಾನರೇಂದ್ರನೆ! ಈ ಕಾರ್ಯದ ವಿಷಯವಾಗಿ, ನಾನಾಗಲಿ, ಲಕ್ಷ್ಮಣನಾಗಲಿ ನಿಯಾಮಕರಲ್ಲ ನೀನೇ ಈ ವಾನರರೆಲ್ಲರಿಗೂ ಪ್ರಭುವಾದುದರಿಂದ ಈ ಕಾರ್ಯವನ್ನು ನೀನೇ ನಡೆಸಬೇಕು ಆದುದರಿಂದ ಈಗ ನಡೆಸಬೇಕಾದ ಕಾರ್ಯದ ರೀತಿಯನೆಂಬುದನ್ನು ನೀನೇಆಜ್ಞಾಪಿಸು! ನನ್ನ ಮನೋನಿಶ್ಚಯವನ್ನು ನೀನೂ ಬಲ್ಲೆಯೆಂಬುದರಲ್ಲಿ ಸಂದೇಹವೇ ಇಲ್ಲ ನೀನು ನನ್ನ ಪ್ರಿಯಮಿತ್ರರಲ್ಲಿ ಲಕ್ಷ್ಮಣನಿಗೆರಡನೆಯವನು ಎಣೆಯಿಲ್ಲದ ಪರಾಕ್ರಮವುಳ್ಳವನು ನಿನಗೆ ತಿಳಿಯದ ವಿಷಯವಿಲ್ಲ ಕಾಲವಿಶೇಷವನ್ನೂ ಚೆನ್ನಾಗಿ ತಿಳಿದವನು ಮನಃಪೂರ್ವಕವಾಗಿ ನನಗೆ ಹಿತವನ್ನು ಕೋರತಕ್ಕವನು ಕಾರ್ಯಾಕಾರ್ಯಗಳ ಸ್ವರೂಪವನ್ನು ಬಲ್ಲವರಲ್ಲಿ ಮೇಲೆನಿಸಿಕೊಂಡವನು ಇನ್ನು ನನಗಾಗಬೇಕಾದುದೇನು?"ಎಂದನು ಈ ಮಾತನ್ನು ಕೇಳಿದೊಡನೆ ಸುಗ್ರೀವನು, ರಾಮಲಕ್ಷ್ಮಣರಿಬ್ಬರೂ ಕೇಳುತ್ತಿರುವಾಗಲೇ ಮುಂದೆ ಪರ್ವತದಂತೆ ಮಹಾಕಾಯವುಳ್ಳವನಾಗಿಯೂ, ಮೇಘದಂತೆ ಗಂಭೀರಗರ್ಜನವುಳ್ಳವನಾಗಿಯೂ, ದೃಢಾಂಗನಾಗಿಯೂ ಇದ್ದ ವಿನತನೆಂಬ

ಯೂಥಪತಿಯೆನ್ನು ಕರೆದು. ''ಎಲೈ ವಾನರೋತ್ತಮನೆ! ನೀನು ಒಳ್ಳೇ ಬಲಾಢ್ಯರಾದ ಲಕ್ಷವಾನರರೊಡಗೂಡಿ ಪೂರ್ವದಿಕ್ಕಿಗೆ ಹೊರಡು! ನಿನ್ನೊಡನೆ ಬರತಕ್ಕ ವಾನರರೆಲ್ಲರೂ, ಆಯಾ ಕಾಲದೇಶಸ್ಥಿತಿಗಳಿಗನುಗುಣವಾದ ನೀತಿಯನ್ನನುಸರಿಸಿ ಕಾರ್ಯಾಕಾರ್ಯಗಳನ್ನು ನಿಶ್ಚಯಿಸತಕ್ಕವರಾಗಿರಬೇಕು ಮತ್ತು ಚಂದ್ರಸೂರ್ಯಾಂಶಜರಾದ ವಾನರರನ್ನೇ ಸಹಾಯಕ್ಕೆ ಕರದುಕೊಂಡು, ಅನೇಕವನಗಿರಿಗಳಿಂದ ತುಂಬಿದ ಪೂರ್ವದಿಕ್ಕನ್ನು ನೀನು ಸುತ್ತಿ ಬರಬೇಕು ಆ ದಿಕ್ಕಿನಲ್ಲಿ ಕಾಣುವ ಸಮಸ್ತ ಪರ್ವತಶಿಖರಗಳಲ್ಲಿಯೂ, ವನಗಳಲ್ಲಿಯೂ, ನದಿಗಳಲ್ಲೆಯೂ, ಸೀತಾದೇವಿಯನ್ನೂ, ರಾವಣನ ವಾಸಸ್ಥಳವನ್ನೂ ಹುಡುಕಿ ನೋಡಬೇಕು ನೀವೆಲ್ಲರೂ ರಮಣೀಯವಾದ ಗಂಗೆ, ಸರಯು, ಕೌತಿಕಿ, ಯಮುನೆ ಮುಂತಾದ ನದಿಗಳಿಗೂ, ಆ ಯಮುನೆಗೆ ಸೇರಿದ ಪರ್ವತಗಳಿಗೂ, ಸರಸ್ವತೀನದಿಗೂ, ಸ್ವಚ್ಛಜಲವುಳ್ಳ ಶೋಣನದಕ್ಕೂ, ಪರ್ವತಗಳಿಂದಲೂ, ಅರಣ್ಯಗಳಿಂದಲೂ ಶೋಭಿಸುವ ಮಹೀದೇಶ ಕಾಲಮಹೀದೇಶಗಳೆಂಬ ಪ್ರದೇಶಗಳಿಗೂ, ಬ್ರಹ್ಮಮಾಲ, ವಿದೇಹ, ಮಾಳವ, ಕಾತೀ ಕೋಸಲದೇಶಗಳಿಗೂ, ದೊಡ್ಡದೊಡ್ಡ ಗ್ರಾಮಗಳುಳ್ಳ ಮಗಧದೇಶಕ್ಕೂ, ಪುಂಡ್ರವಂಗದೇಶಗಳಿಗೂ, ಕೋಶಕಾರರೆಂಬ ಅರಸರ ರಾಜಧಾನಿಗೂ, ಬೆಳ್ಳಿಯ ಗನಿಯುಳ್ಳ ಭೂಮಿಗೂ * ಹೋಗಿ ಅಲ್ಲಲ್ಲಿ ಚೆನ್ನಾಗಿ ಹುಡುಕಿ ರಾಮನ ಪ್ರಿಯಭಾರ್ಯೆಯಾಗಿಯೂ, ದಶರಥಚಕ್ರವರ್ತಿಯ ಸೊಸೆಯಾಗಿಯೂ ಇರುವ ಸೀತೆಯೆಲ್ಲಿರುವಳೆಂಬುದನ್ನು ಕಂಡುಹಿಡಿಯಬೇಕು ಸಮುದ್ರಮಧ್ಯದಲ್ಲಿರುವ ಪರ್ವತಗಳನ್ನೂ, ಅಲ್ಲಿನ ಪಟ್ಟಣಗಳನ್ನೂ, ವಿಶಾಲವಾದ ಮಂದರಪರ್ವತಶಿಖರವನ್ನೂ, ಭಯಂಕರಾಕಾರವುಳ್ಳ ಕೆಲವು ಮನುಷ್ಯರು ಆಶ್ರಯಿಸಿಕೊಂಡಿರುವರು ಅವರಲ್ಲಿ ಕೆಲವರಿಗೆ ಕಿವಿಗಳೇ ಇಲ್ಲ ಕೆಲವರಿಗೆ ತುಟಿಯಲ್ಲಿ ಕಿವಿಗಳು ಭಯಂಕರವಾದ ಉಕ್ಕಿನ ಮೂತಿಯುಳ್ಳವರು ಕೆಲವರು. ಒಂದೇ ಕಾಲಿನಿಂದ ಅತಿವೇಗವಾಗಿ ಓಡುವವರು ಕೆಲವರು. ಕೆಲವ

* ಹಿಮವದ್ಗಿರಿಕ್ಕೂ, ವಿಂಧ್ಯಕ್ಕೂ ನಡುವೆ ಶರಾವತಿಯೆಂಬ ಒಂದು ನದಿಯು ಕಲಿಯಾಕಾರವಾಗಿ ಪ್ರವಹಿಸುತ್ತಿರುವುದು. ಅದರ ಪೂರ್ವಪ್ರದೇಶವನ್ನು ಹುಡುಕುವುದಾಗಿ ಇಲ್ಲಿ ಹೇಳಲ್ಪಟ್ಟಿರುವುದೇ ಹೊರತು, ಕಿಷ್ಕಿಂಧೆಗಾಗಲಿ ಮೇರುವಿಗಾಗಲಿ ಇದು ಪೂರ್ವವೆಂದು ಗ್ರಹಿಸಕೂಡದೆ.

ರು ಮನುಷ್ಯಭಕ್ಷಕರಾಗಿ ಮರಣವನ್ನೇ ಕಂಡರಿಯದಿರುವರು ಮತ್ತು ಅಲ್ಲಲ್ಲಿ ನ ದ್ವೀಪಗಳಲ್ಲಿ ವಾಸಮಾಡುವ ಕಿರಾತಜಾತಿಯ ಕೆಲವು ಮನುಷ್ಯರುಂಟು ಅವರಿಗೆ ಕಿವಿಗಳಲ್ಲಿ ಜುಟ್ಟು ಜೋಲುತ್ತಿರುವುದು ಆದರೆ ಅವರು ಹೊಂಬಣ್ಣವಾದ ಮೈಯುಳ್ಳವರಾಗಿ ನೋಡುವುದಕ್ಕೆ ಅಂದವಾಗಿಯೇ ಇರುವರು ಅವರು ಹಸಿಯ ಮೀನನ್ನು ತಿಂದು ಜೀವಿಸುತ್ತಿರುವರು ಅವರು ಯಾವಾಗಲೂ ನೀರಿನೊಳಗೇ ಸಂಚಾರಮಾಡುತ್ತಿರುವರು ಅವರ ದೇಹವು ಅರ್ಧಭಾಗದವರೆಗೆ ಮನುಷ್ಯಾಕಾರದಿಂದಲೂ, ಇನ್ನರ್ಧಭಾಗವು ಹುಲಿಯ ಆಕಾರದಿಂದಲೂ ಕೂಡಿ ಅತಿಭಯಂಕರವಾಗಿರುವುದು ಈ ಕಿರಾತರ ನಿವಾಸಗಳೆಲ್ಲವನ್ನೂ ಸುತ್ತಿ ಸೀತೆಯನ್ನು ಹುಡುಕಬೇಕು ಎಲೈ ವಾನರರ! ಹೀಗೆ ನೀವು ಜಂಬೂದ್ವೀಪವನ್ನೆಲ್ಲಾ ಹುಡಕಬೇಕಲ್ಲದೆ, ಇನ್ನೂ ಅಲ್ಲಲ್ಲಿ ಪರ್ವತವನ್ನೇರಿ ಹೋಗಬೇಕಾದ ದ್ವೀಪಗಳೂ, ಪರ್ವತಶಿಖರದಿಂದ ಹಾರಿಬಂದು ಸೇರಬೇಕಾದ ದ್ವೀಪಗಳೂ, ತೆಪ್ಪದಿಂದ ದಾಟಿಹೋಗಿ ಸೇರಬೇಕಾದ ದ್ವೀಪಗಳೂ ಎಷ್ಟೋ ಇರುವುವು ಅವೆಲ್ಲವನ್ನೂ ಚಿನ್ನಾಗಿ ಹುಡುಕಿನೋಡಿರಿ! ಇವೆಲ್ಲವನ್ನೂ ದಾಟಿ ಮುಂದೆ ಹೋದರೆ, ಅನೇಕರತ್ನದ ಗನಿಗಳಿಂದ ತುಂಬಿದುದಾಗಿಯೂ, ಏಳು ಖಂಡಗಳಾಗಿ ವಿಭಾಗಿಸಲ್ಪಟ್ಟುದಾಗಿಯೂ ಇರುವ ಯವದ್ವೀಪವಿರುವುದು ಅದಕ್ಕೂ ಹೋಗಿ ನೋಡಬೇಕು. ಅಲ್ಲಿಂದ ಮುಂದೆ ಚಿನ್ನದಗನಿಗಳಿಂದ ಶೋಭಿಸುವ ಸುವರ್ಣರೂಪ್ಯಕವೆಂಬ ಒಂದು ದ್ವೀಪವಿರುವುದು ಆ ದ್ವೀಪವನ್ನು ದಾಟಿದಮೇಲೆ ತಿಮಿರವೆಂಬ ಪರ್ವತವಿರುವುದು ಅದು ಅನೇಕದೇವದಾನವರಿಗೆ ನಿವಾಸವಾಗಿರುವುದು ಅದರ ಶಿಖರವು ಆಕಾಶವನ್ನು ಮುಟ್ಟುವಂತೆ ಮಹೋನ್ನತವಾಗಿರುವುದು. ನೀವೆಲ್ಲರೂ ಆ ಪರ್ವತದ ದುರ್ಗಗಳಲ್ಲಿಯೂ, ಕಮರಿಗಳಲ್ಲಿಯೂ ನುಗ್ಗಿ, ಯಶಸ್ವಿನಿಯಾದ ಆ ಸೀತೆಯನ್ನು ಹುಡುಕಿಬರಬೇಕು ಹಾಗೆಯೇ ಮುಂದೆ ಹೋದರೆ ಲವಣಸಮುದ್ರದ ಕೊನೆಯದಡವನ್ನು ಸೇರುವಿರಿ! ಅಲ್ಲಿ ಕೆಂಪಾದ ನೀರಿನಿಂದ ತುಂಬಿ, ಅತಿವೇಗದಿಂದ ಪ್ರವಹಿಸುವ ಅಗಾಧವಾದ ಶೋಣನದವು ಕಾಣುವುದು ಅನೇಕ ಸಿದ್ಧಚಾರಣರಿಂದ ಸೇವಿತವಾದ ಆ ಶೋಣನದದ ತೀರಗಳಲ್ಲಿಯೂ, ಅದರ ತೀರದ ಅಡವಿಗಳಲ್ಲಿಯೂ ಚೆನ್ನಾಗಿ ಹುಡುಕಿ ರಾವಣನೂ ಸೀತೆಯೂ ಎಲ್ಲಿರುವರೆಂಬುದನ್ನು ಕಂಡು ಬರಬೇಕು. ಅಲ್ಲಿಂದ ಮುಂದೆ ಪ್ಲಕ್ಷದ್ವೀಪದಲ್ಲಿ ಮು

ನೋಹರಗಳಾದ ಉದ್ಯಾನಗಳಿಂದ ಶೋಭಿತವಾದ ಎಷ್ಟೋ ಗಿರಿನದಿಗಳಿರುವುವು. ಎಷ್ಟೋ ಪರ್ವತಗಳಿರುವುವು ಎಷ್ಟೋ ಕಾಡುಗಳಿರುವುವು ಅಲ್ಲಲ್ಲಿ ಪರ್ವತಗುಹೆಗಳೂ ಇರುವುವು ಅವೆಲ್ಲವನ್ನೂ ಹುಡುಕಿನೋಡಿ, ಮುಂದೆ ಇಕ್ಷುಸಮುದ್ರದಲ್ಲಿರುವ ಮಹಾಭಯಂಕರಗಳಾದ ಸಮುದ್ರದ್ವೀಪಗಳನ್ನೂ ನೋಡಿ ಬರಬೇಕು ಬಿರುಗಾಳಿಯಿಂದ ಉಲ್ಲೋಲಕಲ್ಲೋಲವಾಗಿ ಘೋಷಿಸುತ್ತಿರುವ ಆ ಇಕ್ಷುಸಮುದ್ರವನ್ನೂ ಚೆನ್ನಾಗಿ ನೋಡಬೇಕು ಆ ಸಮುದ್ರದಲ್ಲಿ ಮಹಾಕಾಯವುಳ್ಳವರಾಗಿ, ಬಹುಕಾಲದಿಂದ ಹಸಿದಿರುವ ಕೆಲವು ಅಸುರರು ತುಂಬಿರುವರು ಅವರು ಬ್ರಹ್ಮನಿಂದವರನ್ನು ಪಡೆದು, ಮನುಷ್ಯರ ಛಾಯೆಯನ್ನು ಹಿಡಿಯುವಶಕ್ತಿಯನ್ನೆ ಹೊಂದಿರುವರು ಆ ನೆಳಲನ್ನು ಹಿಡಿದೇ ಮನುಷ್ಯರನ್ನು ನುಂಗಿಬಿಡುವರು ನೀವು ಆಚ್ಚೆಗೆ ಹೋದಾಗ ಆ ರಾಕ್ಷಸರಕೈಗೆಸಿಕ್ಕದೆ ಉಪಾಯದಿಂದ ಆ ಸ್ಥಳವನ್ನು ದಾಟಿ ಹೋಗಬೇಕು ಪ್ರಳಯಕಾಲಮೇಘದಂತೆ ಮಹಾಭಯಂಕರವಾಗಿಯೂ, ದೊಡ್ಡದೊಡ್ಡಸರ್ಪಗಳಿಗೆ ವಾಸಸ್ಥಾನವಾಗಿಯೂ, ಮಹಾಘೋಷವುಳ್ಳುದಾಗಿಯೂ ಇರುವ, ಆ ಇಕ್ಷುಸಮುದ್ರವನ್ನು ದಾಟಿದ ಮೇಲೆ, ರಕ್ತದಂತೆ ಕೆಂಪಾದ ನೀರುಳ್ಳ, ಭಯಂಕರವಾದ ಲೋಹಿತವೆಂಬ ಸಮುದ್ರವನ್ನೂ, ಅಲ್ಲಿ ವಿಸ್ತಾರವಾಗಿ ಬಹಳಪ್ರಸಿದ್ಧಿಹೊಂದಿದ ಒಂದು ಬೂರಗದ ಮರವನ್ನೂ ಕಾಣುವಿರಿ ಅದಕ್ಕಾಶ್ರಯವಾದ ಶಾಲ್ಮಲಿದ್ವೀಪದಲ್ಲಿ ವಿಶ್ವಕರ್ಮನಿರ್ಮಿತವಾಗಿ, ಕೈಲಾಸದಂತೆ ಶುಭ್ರವಾಗಿ, ಮಹೋನ್ನತಕಾಗಿ, ನವರತ್ನಗಳಿಂದ ಲಂಕೃತಕಾದ ಗರುತ್ಮಂತನ ಮನೆಯನ್ನು ನೋಡುವಿರಿ ಆ ಶಾಲ್ಮಲಿದ್ವೀಪದ ಪರ್ವತಶಿಖರಗಳಲ್ಲಿ ನಾನಾರೂಪವನ್ನು ಹೊಂದಿ ಭಯಂಕರಾಕಾರವುಳ್ಳ *ಮಂದೇಹರೆಂಬ ರಾಕ್ಷಸರು ವಾಸಮಾಡುತ್ತಿರುವರು ಆ ಮಂದೇಹರು ಪ್ರತಿದಿನವೂ ಸೂರ್ಯೋದಯಕಾಲದಲ್ಲಿ ಸೂರ್ಯನನ್ನಡ್ಡಗಟ್ಟಿ, ಆಗ ಬ್ರಾಹ್ಮಣರು ಜಪಿಸುವ ಗಾಯತ್ರೀಮಂತ್ರಗಳ ಪ್ರಭಾವ

* ಮಂದೇಹರೆಂಬ ರಾಕ್ಷಸರು ಪ್ರತಿದಿನವೂ ಪ್ರಾತಃಕಾಲದಲ್ಲಿ ಸೂರ್ಯಸಂಚಾರಕ್ಕಡ್ಡಲಾಗಿ ಬರುವರೆಂದೂ, ಆಗ ಬ್ರಾಹ್ಮಣರು ಗಾಯತ್ರಿಯನ್ನು ಜಪಿಸಿ ಅರ್ಘ್ಯಪ್ರದಾನಮಾಡುವಾಗ ಅದರ ಪ್ರಭಾವದಿಂದ ಆ ರಾಕ್ಷಸರು ದೂರಕ್ಕೊಯ್ದೊಡಿಸಲ್ಪಡುವರೆಂದೂ ಶ್ರುತಿಸಿದ್ಧವು.

ದಿಂದ ಹತರಾಗಿ ಸಮುದ್ರದಲ್ಲಿ ಬಿಳುವರು. ಪುನಃ ಮೇಲಕ್ಕೆದ್ದು ಆ ತಿಮಿಂಗಲಗಳನ್ನೇರುವರು ನೀವು ಯಾರಿಗೂ ಈಡಾಗದ ಮಹಾಪರಾಕ್ರಮವುಳ್ಳವರಾದುದರಿಂದ, ಅವೆಲ್ಲವನ್ನೂ ದಾಟಿಹೋಗಬಲ್ಲಿರಿ' * ದಾರಿಯಲ್ಲಿ ಸಿಕ್ಕುವ ಘೃತಸಮುದ್ರವನ್ನೂ, ಕುಶದ್ವೀಪವನ್ನೂ, ದಧಿಸಮುದ್ರವನ್ನೂ, ಕ್ರೌಂಚದ್ವೀಪವನ್ನೂ, ಅತಿಕ್ರಮಿಸಿಹೋದಮೇಲೆ, ಬಿಳೀಮೇಘದಂತೆ ಕಾಂತಿಯುಳ್ಳ ಕ್ಷೀರೋದವೆಂಬ ಸಮುದ್ರವನ್ನು ನೋಡುವಿರಿ ! ಮುತ್ತಿನಹಾರದಂತಿರುವ ಅಲೆಗಳ ಪರಂಪರೆಯಿಂದ ಕೂಡಿದ ಆ ಸಮುದ್ರದ ಮಧ್ಯದಲ್ಲಿ, ಬಹಳಬಿಳುಪಾದ ಋಷಭವೆಂಬ ಒಂದು ಪರ್ವತವು ಕಾಣುವುದು ಆ ಪರ್ವತವು ದಿವ್ಯಗಂಧದಿಂದ ಕೂಡಿದ ಹೂಗಳಿಂದ ಸುವಾಸಿತಗಳಾದ ಅನೇಕವೃಕ್ಷಗಳಿಂದ ತುಂಬಿರುವುದು ಆ ವೃಕ್ಷಗಳೆಲ್ಲವೂ ರಜತಮಯವಾಗಿಯೇ ಇರುವುವು ಅಲ್ಲಿ ಚಿನ್ನದ ಕೇಸರಗಳಿಂದ ಕೂಡಿದ ಬೆಳ್ಳಿಯ ಕಮಲಗಳಿಂದಲೂ, ರಾಜಹಂಸಗಳಿಂದಲೂ ತುಂಬಿದ ಒಂಬಾನೊಂದು ಸರೋವರವಿರುವುದು ಅದಕ್ಕೆ ಸುದರ್ಶನವೆಂದು ಹೆಸರು ದೇವತೆಗಳೂ, ಯಕ್ಷರೂ, ಚಾರಣರೂ, ಕಿನ್ನರರೂ ಅಪ್ಸರಸ್ಸುಗಳೂ ಕ್ರೀಡಾರ್ಥವಾಗಿ ಆ ಸರೋವರಕ್ಕೆ ಬರುವರು ಎಲೈ ವಾನರರ! ನೀವು ಆ ಕ್ಷೀರಸಮುದ್ರವನ್ನೂ ದಾಟಿದಮೇಲೆ, ಸರ್ವಭೂತಭಯಂಕರವಾಗಿ ಸಮಸ್ತಸಮುದ್ರಗಳಿಗೂ ಮೇಲೆನಿಸಿಕೊಂಡ ಶುದ್ಧಜಲಸಮುದ್ರವನ್ನು ನೋಡುವಿರಿ! ಔರ್ವಮುನಿಯ ಕೋಪದಿಂದ ಹುಟ್ಟಿ ಬಡಬಾಗ್ನಿಯೆಂದು ಪ್ರಸಿದ್ಧಿಹೊಂದಿದ ಕುದುರೆಯ ಮುಖವುಳ್ಳ ಒಂದು ಮಹಾತೇಜಸ್ಸು ಆ ಸಮುದ್ರದ ನೀರಿನಲ್ಲಿ ಅಡಗಿರುವುದು ಆ ತೇಜಸ್ಸಿಗೆ ಪ್ರಳಯಕಾಲದಲ್ಲಿ ಜಂಗ

---

* ಇಲ್ಲಿ ಮಧುಸಮುದ್ರದಿಂದಾಚೆಗೆ ಘೃತದಧಿಸಮುದ್ರಗಳನ್ನೂ, ಕುಶಕ್ರೌಂಚದ್ವೀಪಗಳನ್ನೂ ಹುಡುಕಬೇಕೆಂದು ಕಂರೋಕ್ತವಾಗಿ ಹೇಳಿದ್ದರೂ, "ಲವಣೇಕ್ಷುಸುರಾಸರ್ಪಿರ್ದಧಿಕ್ಷೀರಜಲಾರ್ಣವಾಃ" ಎಂದು ಹೇಳಲ್ಪಟ್ಟಿರುವ ಸಮುದ್ರಕ್ರಮವನ್ನೆನುಸರಿಸಿ, ಕ್ರಮವಾಗಿ ಸಪ್ತಸಮುದ್ರಗಳನ್ನೂ ಸಪ್ತದ್ವೀಪಗಳನ್ನೂ ಹೇಳಿದಂತೆಯೇ ಗ್ರಹಿಸಬೇಕು. ಅವುಗಳಲ್ಲಿ ಅಷ್ಟಾಗಿ ವಿಶೇಷವೇನೂ ಇಲ್ಲದುದರಿಂದಲೇ ಅವನ್ನು ವಾಚ್ಯವಾಗಿ ಹೇಳಲಿಲ್ಲವೆಂದು ಗ್ರಾಹ್ಯವು

ಮಸ್ಥಾವರಸಹಿತವಾದ ಆ ಸಮುದ್ರಜಲವೆಲ್ಲವೂ ಇಂಥನರೂಪವಾಗಿ ಬಿಡುವುದೆಂದು ಹೇಳುವರು ಆ ಸಮುದ್ರದಲ್ಲಿರುವ ಪ್ರಾಣಿಗಳೆಲ್ಲವೂ ಎಣೆಯಿಲ್ಲದ ಬಲಪರಾಕ್ರಮಗಳಿಂದ ಕೂಡಿದವುಗಳಾಗಿದ್ದರೂ, ಆ ಬಡಬಾಗ್ನಿಯ ಬೇಗೆಗೆ ಸಹಿಸಲಾರದೆ, ಭಯದಿಂದ ಅರಚಿಕೊಳ್ಳುವ ಧ್ವನಿಯು ನಿಮ್ಮಕಿವಿಗೆ ಬೀಳುತ್ತಿರುವುದು ಆ ಜಲಸಮುದ್ರದ ಉತ್ತರತೀರದಲ್ಲಿ ಮೂರುಗಾವುದಗಳ ದೂರಕ್ಕೆ ವ್ಯಾಪಿಸಿರುವ ಜಾತರೂಪಶಿಲೆಯೆಂದು ಹೆಸರುಗೊಂಡ ದೊಡ್ಡ ಸುವರ್ಣಪರ್ವತವಿರುವುದು ಅಲ್ಲಿ ಜಂದ್ರನಂತೆ ಪ್ರಕಾಶಿಸುತ್ತ, ಭೂಮಿಯನ್ನು ಹೊತ್ತಿರುವ ಮಹಾಸರ್ಪವನ್ನು ಕಾಣುವಿರಿ ಕಮಲದಳದಂತೆ ಕಣ್ಣುಳ್ಳವನಾಗಿ, ಸಮಸ್ತಭೂತಗಳಿಂದಲೂ ನಮಸ್ಕೃತನಾದ ಆತನು, ಸಹಸ್ರಫಣಿಗಳೊಡಗೂಡಿ, ನೀಲವಸ್ತ್ರವನ್ನುಧರಿಸಿ ಆ ಪರ್ವತಾಗ್ರದಲ್ಲಿರುವನು ಆ ಮಹಾತ್ಮನಿಗೆ ಸುವರ್ಣಮಯವಾದ ತಾಲವೃಕ್ಷವೇ ಧ್ವಜವು ಆ ಧ್ವಜವು ಮೂರುತಿಖರಗಳುಳ್ಳದಾಗಿ, ವೇದಿಕೆಯೊಡನೆ ಆ ಪರ್ವತಾಗ್ರದಲ್ಲಿ ಸ್ಥಿರವಾಗಿ ಪ್ರಕಾಶಿಸುತ್ತಿರುವುದು ದೇವತಾ ಪ್ರಭುಗಳಾದ ತ್ರಿಮೂರ್ತಿಗಳೂ ಆ ಧ್ವಜವನ್ನು ಪೂರ್ವದಿಕ್ಕಿನ ಎಲ್ಲೆಯ ಗುರುತಿಗಾಗಿ ಸ್ಥಾಪಿಸಿರುವರು ಅದರಿಂದಾಚೆಗೆ ಸುವರ್ಣಮಯವಾದ ಉದಯಪರ್ವತವು ದೇದೀಪ್ಯಮಾನವಾಗಿ ಕಾಣುತ್ತಿರುವುದು ಆ ಪರ್ವತದ ಸುವರ್ಣಮಯವಾದ ತಿಖರವು ಸ್ವರ್ಗವನ್ನು ಮುಟ್ಟುವಂತೆ ನೂರುಗಾವುದದುದ್ದವುಳ್ಳದಾಗಿ,ವೇದಿಕೆಯೊಡನೆ ಶೋಭಿಸುತ್ತಿರುವುದು ಅದರಲ್ಲಿ, ಸಾಲೆ, ತಾಳೆ, ಹೊಂಗೆ,ಕರ್ಣಿಕಾರ ಮುಂತಾದ ಹೂಗಿಡಗಳು ಹೇರಳವಾಗಿ ತುಂಬಿರುವುವು ಅವೆಲ್ಲವೂ ಸುವರ್ಣಮಯವಾಗಿ ಸೂರ್ಯನಂತೆ ಜ್ವಲಿಸುತ್ತಿರುವುವು ಆ ಪರ್ವತದ ಕೊನೆಯಲ್ಲಿ ಬಂದು ಗಾವುದದಗಲವೂ, ಹತ್ತು ಗಾವುದದ ಉನ್ನತವೂ ಆದ ಸೌಮನಸವೆಂಬ ಸುವರ್ಣಮಯವಾದ ಮತ್ತೊಂದು ತಿಖರವುಂಟು ಪೂರ್ವದಲ್ಲಿ ಶ್ರೀಮಹಾವಿಷ್ಣುವು ಬಲಿಚಕ್ರವರ್ತಿಯಿಂದ ಮೂರಡಿಗಳ ನೆಲವನ್ನು ಯಾಚಿಸಿ ತೆಗೆದುಕೊಂಡಾಗ,ಅವನಮೊದಲನೆಯ ಅಡಿಯು, ಪೂರ್ವದಿಕ್ಕಿಗೆ ಅವಧಿಯಾದ ಈ ಉದಯಪರ್ವತದ ಸೌಮನಸಶೃಂಗದಲ್ಲಿಯೂ, ಎರಡನೆಯ ಅಡಿಯು ಪಶ್ಚಿಮದಿಕ್ಕಿಗೆ ಎಲ್ಲೆಯಾದ

*ಸಾವರ್ಣಿಮೇರುಶಿಖರದಲ್ಲಿಯೂ ಇಡಲ್ಪಟ್ಟಿತು ಸೂರ್ಯನು ಅಸ್ತಮಯಾನಂತರದಲ್ಲಿ ಜಂಬೂದ್ವೀಪವನ್ನು ಉತ್ತರದಿಂದ ಸುತ್ತಿಬಂದು,ಮಹೋನ್ನತವಾದ ಈ ಸೌಮನಸಶಿಖರಕ್ಕೆ ಸೇರಿದಮೇಲೆಯೇ ಮೇರುವಿನ ದಕ್ಷಿಣಪಾರ್ಶ್ವದಲ್ಲಿರುವ ನಮ್ಮೆಲ್ಲರಿಗೂ ಚೆನ್ನಾಗಿ ಗೋಚರಿಸುವನು ಆ ಸೌಮನಸಶಿಖರದಲ್ಲಿ ಮಹಾತಪಸ್ವಿಗಳಾಗಿಯೂ, ಸೂರ್ಯತೇಜಸ್ಸುಳ್ಳವರಾಗಿಯೂ ಇರುವ ವೈಖಾನಸ ವಾಲಖಿಲ್ಯರೆಂಬ ಮಹರ್ಷಿಗಳು ದೇದೀಪ್ಯಮಾನರಾಗಿ ಕಾಣಿಸುವರು ಆ ಉದಯಪರ್ವತದ ಪಕ್ಕದಲ್ಲಿ ಸುದರ್ಶನವೆಂಬ ದ್ವೀಪವಿರುವುದು ಯಾವ ತೇಜಸ್ಸಿನ ಸಾನ್ನಿಧ್ಯದಿಂದಲೇ ಸಮಸ್ತಪ್ರಾಣಿಗಳ ಕಣ್ಣಿಗೂ ಪ್ರಕಾಶವುಂಟಾಗುವುದೋ,ಅಂತಹ ಸೂರ್ಯನೆಂಬ ತೇಜಸ್ಸಿಗೆ ಪ್ರಥಮಾಶ್ರಯವಾಗಿ ಪ್ರಕಾಶಿಸುವ ಆ ದ್ವೀಪಕ್ಕ ಸುದರ್ಶನವೆಂಬ ಆ ಹೆಸರು ಅನ್ವರ್ಥವಾಗಿಯೇ ಇರುವುದು ಆ ಉದಯಪರ್ವತದ ಶಿಖರಗಳನ್ನೂ,ಗುಹೆಗಳನ್ನೂ, ವನಗಳನ್ನೂ ಸುತ್ತಿ, ಅಲ್ಲಲ್ಲಿ ನೀವು ಸೀತೆಯನ್ನೂ, ರಾವಣನನ್ನೂ ಹುಡಕಬೇಕು ಸುವರ್ಣಮಯವಾದ ಆ ಉದಯಪರ್ವತದ ಕಾಂತಿಯೂ, ಸೂರ್ಯನ ಕಾಂತಿಯೂ, ಪ್ರಾತಃಕಾಲದಲ್ಲಿ ಒಂದಾಗಿ ಸೇರಿ ಬೆಳಗುವುದರಿಂದಲೇ ಬೆಳಗಿನ ಸಂಜೆಯು ರಕ್ತವರ್ಣವಾಗಿ ಕಾಣುವುದು ಬ್ರಹ್ಮನು ತನ್ನ ಸೃಷ್ಟ್ಯಾರಂಭದಲ್ಲಿ ಈ ದಿಕ್ಕನ್ನು ಭೂಮಿಗೂ, ಇತರಲೋಕಗಳಿಗೂ ಪ್ರಥಮದ್ವಾರವಾಗಿಯೂ, ಸೂರ್ಯನಿಗೆ ಉದಯಸ್ಥಾನವಾಗಿಯೂ, ಕಲ್ಪಿಸಿರುವುದರಿಂದಲೇ ಇದು ಪೂರ್ವದಿಶೆಯೆಂದು ಹೇಳಲ್ಪಡುವುದು ಆ ಪ

---

* ಇಲ್ಲಿ ಪೂರ್ವಪಶ್ಚಿಮದಿಕ್ಕುಗಳಿಗೆ ಎಲ್ಲೆಗಳಾದ ಉದಯ ಸಾವರ್ಣಿಮೇರುಪರ್ವತಗಳಮೇಲೆ ವಿಷ್ಣುವು ಅಡಿಯನ್ನಿಟ್ಟುದಾಗಿ ಹೇಳಿದುದು, ಬಲಿಯ ರಾಜ್ಯವನ್ನು ಸಾಕಲ್ಯವಾಗಿ ಗ್ರಹಿಸಿದನೆಂಬುದಕ್ಕಾಗಿಯೇಹೊರತು ಬೇರೆಯೆಲ್ಲ ಭೂಮಿಧ್ಯಮೇರು ವಿನಲ್ಲಿಯೇ ಕಾಲಿಟ್ಟುದಾಗಿ ಹೇಳಿದರೆ ಸಾಕಲ್ಯವಾಗಿ ಬಲಿರಾಜ್ಯವನ್ನು ಗ್ರಹಿಸಿದಂತಾಗುವುದಿಲ್ಲ ಆದರೆ ವಾಸ್ತವದಿಂದ ಮೇರುಶಿಖರದಲ್ಲಿಯೇ ದ್ವಿತೀಯಪಾದವು ಇಡಲ್ಪಟ್ಟುದಾಗಿ ಗ್ರಾಹ್ಯವು ಮೇರುಶಿಖರವೇ ಸ್ವರ್ಗವೆನಿಸುವುದು ಒಂದಡಿಯಿಂದ ಭೂಮಿಯನ್ನೂ, ಎರಡನೆಯದರಿಂದ ಸ್ವರ್ಗವನ್ನೂ, ಮೂರನೆಯದರಿಂದ ಬ್ರಹ್ಮಲೋಕವನ್ನೂ ಆಕ್ರಮಿಸಿದುದಾಗಿ ಕೆಲವು ಪುರಾಣಗಳಲ್ಲಿ ಪ್ರಸಿದ್ಧಿಯು

ರ್ವತದ ಪೃಷ್ಠಭಾಗಗಳಲ್ಲಿಯೂ, ಗಿರಿನದಿಗಳಲ್ಲಿಯೂ, ಗುಹೆಗಳಲ್ಲಿಯೂ, ಸೀತೆಯನ್ನೂ, ರಾವಣನನ್ನೂ ನೀವು ಹುಡುಕಬೇಕು ಆ ಉದಯಪರ್ವತದಿಂದಾಚೆಗಿರುವ ಪೂರ್ವದಿಗ್ಭಾಗದಲ್ಲಿ, ಚಂದ್ರಸೂರ್ಯಸಂಚಾರವೇ ಇಲ್ಲದೆ, ಅಂಧಕಾರಾವೃತವಾಗಿ ಅದೃಶ್ಯವಾಗಿರುವುದರಿಂದ, ಅಲ್ಲಿಂದಾಚೆಗೆ ನೀವು ಹೋಗಲಾರಿರಿ' ಆಲ್ಲಿ ದೇವತೆಗಳುಮಾತ್ರವೇ ವಾಸಮಾಡುತ್ತಿರುವರಲ್ಲದೆ ಬೇರೊಬ್ಬರಿಗೆ ಹೋಗಲು ಸಾಧ್ಯವಲ್ಲ ಎಲೈ ಕಪಿವೀರರೆ' ನಾನು ಇದುವರೆಗೆ ಹೇಳಿದ ಸ್ಥಳಗಳಲ್ಲಿಯೇ ಅಲ್ಲದೆ, ನೀವು ಹೋಗುವ ದಾರಿಯಲ್ಲಿ ಕಾಣುವ ಇತರ ಪರ್ವತಗಳನ್ನೂ, ಗುಹೆಗಳನ್ನೂ, ವನಗಳನ್ನೂ, ದೇಶಗಳನ್ನೂ ಚೆನ್ನಾಗಿ ಹುಡುಕಿ ನೋಡಬೇಕು ನಾನು ಹೇಳದಿದ್ದರೂ ನಿಮ್ಮ ಕಣ್ಣಿಗೆ ಬಿದ್ದಕಡೆಗಳೆಲ್ಲವನ್ನೂ ಚೆನ್ನಾಗಿ ಪರಿಶೋಧಿಸಬೇಕು ಎಲೈ ವಾನರೋತ್ತಮರೆ ! ವಾನರರಾದ ನಮಗೆ ಆ ಉದಯಪರ್ವತದವರೆಗೆಮಾತ್ರವೇ ಹೋಗಲು ಸಾಧ್ಯವೇಹೊರತು, ಅದರ ಮುಂದಿನ ಪ್ರದೇಶದಲ್ಲಿ ಸೂರ್ಯಸಂಚಾರವಾಗಲಿ, ಗ್ರಾಮ,ನಗರ, ಪರ್ವತಾರಣ್ಯಗಳೆಂಬ ವಿಭಾಗಗಳಾಗಲಿ ಇಲ್ಲದಿರುವುದರಿಂದ ಅದರ ಸ್ವರೂಪವೇ ನಮಗೆ ತಿಳಿಯದು ಹೇಗಾದರೂ ನೀವು ಆ ಉದಯಾದ್ರಿಯವರಗೆ ಹೋಗಿ, ಸೀತೆಯಾಗಲಿ, ರಾವಣನಾಗಲಿ ಇರುವ ಸ್ಥಳವನ್ನು ತಿಳಿದು, ಇನ್ನೊಂದು ತಿಂಗಳೊಳಗಾಗಿಯೇ ಹಿಂತಿರುಗಿ ಬರಬೇಕು ಒಂದು ತಿಂಗಳಿಗಿಂತ ಒಂದು ಮುಹೂರ್ತಕಾಲವಾದರೂ ವೀರಕೂಡದು ಅಷ್ಟರಲ್ಲಿ ಬಾರದವರು ನನ್ನಿಂದ ಮರಣದಂಡನೆಗೆ ಪಾತ್ರರಾಗುವರು ಮುಖ್ಯವಾಗಿ ನೀವು ಸೀತೆಯನ್ನು ಹುಡುಕಿ ಕಾರ್ಯಸಿದ್ಧಿಯನ್ನು ಹೊಂದಿ ಬರಬೇಕು ಎಲೈ ವಾನರೋತ್ತಮರೆ ! ನಾನಾವಿಧವನಸಮೂಹಗಳಿಂದ ಶೋಭಿಸುತ್ತ, ಮಹೇಂದ್ರನಿಗೆ ಪ್ರಿಯವಾದ ಪೂರ್ವದಿಕ್ಕಿನ ಪ್ರದೇಶಗಳೆಲ್ಲವನ್ನೂ ಸುತ್ತಿ, ನೀವು ರಾಮನ ಪ್ರಿಯಪತ್ನಿಯನ್ನು ಕಂಡುಹಿಡಿದರೆ ನಿಮಗೆ ಸುಖವುಂಟು " ಎಂದನು ಇಲ್ಲಿಗೆ ನಾಲ್ವತ್ತನೆಯ ಸರ್ಗವು

ಸುಗ್ರೀವನು ಹನುಮದಾದಿಗಳನ್ನು ದಕ್ಷಿಣದಿಕ್ಕಿಗೆ ಕಳುಹಿಸಿದುದು

ಹೀಗೆ ಸುಗ್ರೀವನು ಆ ದೊಡ್ಡವಾನರಸೈನ್ಯವನ್ನು ಪೂರ್ವದಿಕ್ಕಿಗೆ ಕಳುಹಿಸಿದಮೇಲೆ, ಅನೇಕಯುದ್ಧಗಳಲ್ಲಿ ಪ್ರಖ್ಯಾತವಾದ ವೀರ್ಯವುಳ್ಳ ಮತ್ತೆ ಕೆಲವು ವಾನರರನ್ನು ದಕ್ಷಿಣಾಭಿಮುಖವಾಗಿ ಕಳುಹಿಸಿದನು ವಾನರೇಂದ್ರನಾದ ಸುಗ್ರೀವನು ವಾನರರ ಬಲತಾರತಮ್ಯವನ್ನು ಚೆನ್ನಾಗಿ ಬಲ್ಲವನಾದುದರಿಂದ, ಅಗ್ನಿಪುತ್ರನಾದ ನೀಲನನ್ನೂ, ಹನುಮಂತನನ್ನೂ, ಬ್ರಹ್ಮಪುತ್ರನಾಗಿ ಬಹಾಬಲಾಢ್ಯನೆನಿಸಿಕೊಂಡ ಜಾಂಬವಂತನನ್ನೂ, ಮತ್ತು ಸುಹೋತ್ರ, ಶರಾರಿ, ಶರಗುಲ್ಮ, ಗಜ, ಗವಾಕ್ಷ, ಗವಯ, ಸುಷೇಣ, ಋಷಭ, ಮೈಂದ, ದ್ವಿವಿದ, ವಿಜಯ, ಗಂಧಮಾದನ ಮುಂತಾದವರನ್ನೂ, ಅಗ್ನಿಕುಮಾರರಾದ ಉಲ್ಕಾಮುಖ ಮತ್ತು ಅನಂಗಸೆಂಬ ಇಬ್ಬರು ವಾನರವೀರರನ್ನೂ, ಮತ್ತು ವೇಗದಲ್ಲಿಯೂ, ಪರಾಕ್ರಮದಲ್ಲಿಯೂ ಹೆಸರುಗೊಂಡ ಅಂಗದನೇ ಮೊದಲಾದ ವೀರರನ್ನೂ ಕರೆದು ದಕ್ಷಿಣದಶೆಗೆ ಹೋಗುವುದಕ್ಕಾಗಿ ಆಜ್ಞಾಪಿಸಿದನು ಶೀಘ್ರಗಾಮಿಗಳಾದ ಇನ್ನು ಕೆಲವು ವಾನರಸೈನಿಕರನ್ನು ಇವರ ಸಹಾಯಕ್ಕಾಗಿ ಮುಂದೆ ಕಳುಹಿಸಿಕೊಟ್ಟನು ಆ ವಾನರರಲ್ಲರಿಗೂ ದಕ್ಷಿಣದಿಕ್ಕಿನಲ್ಲಿ ಅವರಿಗೆ ತಿಳಿಯದ ಕೆಲವು ದೇಶಗಳನ್ನು ವಿವರಿಸಿ ತಿಳಿಸುವುದಕ್ಕಾಗಿ ಅವರನ್ನು ಕುರಿತು, ''ಎಲೈ ವಾನರರೆ! ನೀವು ಸಹಸ್ರಶಿಖರಗಳಿಂದ ಶೋಭಿತವಾಗಿ ನಾನಾವಿಧವೃಕ್ಷಗಳಿಗೂ, ಬಗೆಬಗೆಯ ಬಳ್ಳಿಗಳಿಗೂ, ಆಶ್ರಯವಾದ *ವಿಂಧ್ಯಪರ್ವತವನ್ನೂ, ಮಹಾಸರ್ಪಗಳಿಗೆ ನೆಲೆಯಾಗಿ ದುರ್ಗಮವಾದ ನರ್ಮದಾನದಿಯನ್ನೂ, ವಿಂಧ್ಯಪರ್ವತದ ಸಮೀಪದಲ್ಲಿ ರಮಣೀಯವಾದ ಗೋದಾವರೀನದಿಯ ಭಾಗವನ್ನೂ, ಮಹಾನದಿಯಾದ ಕೃಷ್ಣೆಯನ್ನೂ, ಬಹಳ ಪೂಜ್ಯವಾಗಿಯೂ, ಮಹಾಸರ್ಪಗಳಿಗೆಡೆಯಾಗಿಯೂ ಇರುವ ವರದಾ

---

* ಇಲ್ಲಿಯೂ ಶರಾವತಿಗೆ ದಕ್ಷಿಣವೆಂದು ಗ್ರಹಿಸಬೇಕು ಮಧ್ಯದೇಶಕ್ಕೆ ವಿಂಧ್ಯವು ದಕ್ಷಿಣದಲ್ಲಿರುವುದರಿಂದಲೇ ಇಲ್ಲಿ ಅದಕ್ಕೆ ದಕ್ಷಿಣತ್ವವ್ಯಪದೇಶವು ಇದುವೊದಲು ಕ್ರಮವಾಗಿ ವಿಂಧ್ಯದ ದಕ್ಷಿಣಪಶ್ಚಿಮಭಾಗಗಳಲ್ಲಿರುವ ನದೀನಗರದೇಶಾದಿಗಳನ್ನು ತಿಳಿಸಿ, ಮುಂದೆ ವಿದರ್ಭಗಳೇ ಮೊದಲಾದ ಅದರ ಪೂರ್ವಪ್ರದೇಶಗಳನ್ನೂ ತಿಳಿಸುವನು

ನದಿಯನ್ನೂ, ಮೇಖಲೆ, ಉತ್ಕಲೆ ಎಂಬ ನದಿಗಳನ್ನೂ, ಕ್ರಮವಾಗಿ ದಾಟಿ ಹೋಗಬೇಕು ಅದಕ್ಕೆ ಮುಂದಿರುವ ದಶಾರ್ಣದೇಶದ ಪಟ್ಟಣಗಳನ್ನೂ, ಅಶ್ವವಂತಪುರವನ್ನೂ, ಅಶ್ವಸಮೃದ್ಧಿಯುಳ್ಳ ಅವಂತೀಪುರವನ್ನೂ, ಚೆನ್ನಾಗಿ ಹುಡುಕಿ ನೋಡಿರಿ ವಿದರ್ಭ, ಋಷಿಕ, ಮಾಹಿಷಿಕ, ವಂಗ, ಕಳಿಂಗ, ಕೌಶಿಕ, ಮುಂತಾದ ದೇಶಗಳೆಲ್ಲವನ್ನೂ ಚೆನ್ನಾಗಿ ಸುತ್ತಿ, ಒಂದೊಂದು ಕಡೆಯನ್ನೂ ಶೋಧಿಸಬೇಕು ಪರ್ವತಗಳಿಂದಲೂ, ಗುಹೆಗಳಿಂದಲೂ, ನದಿಗಳಿಂದಲೂ, ಶೋಭಿತವಾದ ದಂಡಕಾರಣ್ಯವನ್ನೂ, ಆ ದಂಡಕಾರಣ್ಯದೊಳಗಿನ ಗೋದಾವರೀನದಿಯನ್ನೂ ಸುತ್ತಿ ನೋಡಬೇಕು ಹಾಗೆಯೇ ಮುಂದೆ ಆಂಧ್ರದೇಶವನ್ನೂ, ಪುಂಡ್ರಚೋಳಪಾಂಡ್ಯದೇಶಗಳನ್ನೂ, ಕೇರಳದೇಶವನ್ನೂ ನೋಡಬೇಕು ಆಮೇಲೆ ಗೈರಿಕಾದಿಧಾತುಗಳಿಂದ ಚಿತ್ರಿತವಾದ ಸಹ್ಯಪರ್ವತಕ್ಕೆ ಹೋಗಿರಿ ! ಆ ಪರ್ವತವು ವಿಚಿತ್ರಶಿಖರಗಳಿಂದಲೂ, ಪುಷ್ಪಿತಗಳಾದ ಗಿಡಗಳಿಂದಲೂ ತುಂಬಿರುವುದರಿಂದ, ಆದರ ಕಾಡುಗಳೆಲ್ಲವೂ ಚಿತ್ರಿಸಿದಂತೆಯೇ ತೋರುವುವು ಅಲ್ಲಿ ಚಂದನವೃಕ್ಷಗಳು ಹೇರಳವಾಗಿರುವುವು ನೀವು ಆ ಪರ್ವತಪ್ರಾಂತಗಳೊಳಗೆಲ್ಲಾ ಸೀತೆಯನ್ನು ಹುಡುಕಿ ನೋಡಬೇಕು ಅದರ ನೀರು ಬಹಳ ನಿರ್ಮಲವಾಗಿರುವುದು ಆ ನದಿಯು ಸರ್ವ ಮಂಗಳಪ್ರದವಾದುದು ಅನವರತವೂ ಅಪ್ಸರಸ್ಸುಗಳು ಬಂದು ಆ ಪುಣ್ಯನದಿಯನ್ನು ಪೂಜಿಸುತ್ತಿರುವರು ಪ್ರಸಿದ್ಧವಾದ ಆ ಮಲಯಪರ್ವತದ ಶಿಖರದಲ್ಲಿ, ಮಹಾತಪೋನಿಧಿಯಾಗಿ, ಸೂರ್ಯನಂತೆ ತೇಜೋವಿಶಿಷ್ಟನಾದ ಅಗಸ್ತ್ಯಮಹರ್ಷಿಯನ್ನು ನೋಡಬಹುದು ಮಹಾತ್ಮನಾದ ಆ ಅಗಸ್ತ್ಯನನ್ನು ನಮಸ್ಕರಿಸಿ, ಅವನ ಅನುಗ್ರಹವನ್ನು ಪಡೆದು ಮುಂದೆ ಹೊರಟರೆ, ವಿಶೇಷವಾಗಿ ಮೊಸಳೆಗಳಿಂದ ತುಂಬಿದ ತಾಮ್ರಪರ್ಣಿಯೆಂಬ ಮಹಾನದಿಯು ಸಿಕ್ಕುವುದು ಅದನ್ನೂ ದಾಟಿ ಹೋಗಿರಿ ! ಉಬ್ಬಿದಸ್ತನಗಳುಳ್ಳ ಒಬ್ಬಯುವತಿಯು, ಚಂದನಾದ್ಯನುಲೇಪನಗಳಿಂದ ಮೈಯನ್ನಲಂಕರಿಸಿಕೊಂಡು, ತನ್ನ ಪತಿಯ ಸಂಕೇತಸ್ಥಳಕ್ಕೆ ಹೋಗುವಂತೆ, ಚಂದನವನಗಳಿಂದ ಪರಿವೃತವಾಗಿ, ನಡುನಡುವೆ ಉಬ್ಬಿದ ದ್ವೀಪಗಳಿಂದ ಶೋಭಿತವಾದ ಆ ತಾಮ್ರಪರ್ಣೀನದಿಯು ಸಮುದ್ರಾಭಿಮುಖವಾಗಿ ಹೋಗುತ್ತಿರುವುದು ಎ

ಲ್ಲೆ ವಾನರರೆ! ಅಲ್ಲಿಂದ ನೀವು ಮುಂದೆ ಹೋದರೆ, ಪಾಂಡ್ಯನಗರದ ದ್ವಾರವು ಸಿಕ್ಕುವುದು ಅದರ ಕವಾಟವು ಸುವರ್ಣಮಯವಾಗಿ, ಬೆಲೆಯುಳ್ಳ ಮುತ್ತಿನ ಮಣಿಗಳಿಂದಲಂಕೃತವಾಗಿ ಶೋಭಿಸುತ್ತಿರುವುದನ್ನು ನೋಡಬಹುದು ಅಲ್ಲಿಂದ ಮುಂದೆ ಸಮುದ್ರತೀರವನ್ನು ಸೇರಿ,ಮುಂದೆ ಸೀತಾನ್ವೇಷಣಕ್ಕಾಗಿ ಆ ಸಮುದ್ರವನ್ನು ಜಾಟಬೇಕಾದ ವಿಷಯವನ್ನು ಆಲೋಚಿಸಿ ನಿಶ್ಚಯಿಸಿಕೊಳ್ಳಿರಿ! ಅಲ್ಲಿ ಸಮುದ್ರದ ಪಕ್ಕದಲ್ಲಿ ಅಗಸ್ತ್ಯನಿಂದಿಡಲ್ಪಟ್ಟ ಮಹೇಂದ್ರವೆಂಬ ಒಂದು ಪರ್ವತೋತ್ತಮವಿರುವುದು ಅದು ಚಿತ್ರಮಯವಾದ ಬಗೆಬಗೆಯ ವೃಕ್ಷಗಳಿಂದಲೂ, ಪುಷ್ಪಫಲಾದಿಸಮೃದ್ಧಿಗಳಿಂದಲೂ ನಿಬಿಡವಾಗಿ, ಸುವರ್ಣಮಯವಾಗಿ ಪ್ರಕಾಶಿಸುತ್ತಿರುವುದು ಆ ಪರ್ವತದ ಒಂದುಭಾಗವು ಮಹಾಸಮುದ್ರದ ಜಲದಲ್ಲಿ ಚಾಚಿಕೊಂಡಿರುವುದು ಅಲ್ಲಿ ಸಮಸ್ತವಿಧಗಳಾದ ಗಿಡುಬಳ್ಳಿಗಳೂ ಬಳದಿರುವುವು ಸಿದ್ಧಚಾರಣಗಂಧರ್ವಾಪ್ಸರಸ್ಸುಗಳೇ ಮೊದಲಾದ ಸಮಸ್ತದೇವಜಾತಿಯವರೂ ಅದರಲ್ಲಿ ನಿತ್ಯವಾಸಮಾಡುತ್ತಿರುವರು ಆ ಪರ್ವತವು ಅತಿಮನೋಹರವಾಗಿರುವುದು ದೇವೇಂದ್ರನು ಪ್ರತಿಪರ್ವಕಾಲಗಳಲ್ಲಿಯೂ ತಪ್ಪದೆ ಸಮುದ್ರಸ್ನಾನಾರ್ಥವಾಗಿ ಆ ಪರ್ವತಪ್ರಾಂತಕ್ಕೆ ಬರುವನು ಆ ಸಮುದ್ರದ ಈ ಕಡೆಯ ತೀರದಲ್ಲಿ,ಶತಯೋಜನವಿಸ್ತೀರ್ಣವಾಗಿ ಮನುಷ್ಯರಿಗೆ ದುಷ್ಪ್ರವೇಶವಾದ ಒಂದು(ಲಂಕಾ)ದ್ವೀಪವಿರುವುದು ಆ ದ್ವೀಪದಲ್ಲಿ ಸ್ವಲ್ಪಮಾತ್ರವನ್ನೂ ಬಿಡದೆ ಸುತ್ತಲೂ ಸೀತೆಯನ್ನು ಹುಡುಕಬೇಕು ಇತರಸ್ಥಳಗಳಿಗಿಂತಲೂ ವಿಶೇಷವಾಗಿ ನಿಮ್ಮ ಸಮಸ್ತಪ್ರಯತ್ನಗಳಿಂದಲೂ ಅಲ್ಲಿ ಸೀತಾದೇವಿಯನ್ನು ಹುಡುಕಬೇಕು ಏಕಂದರೆ, ದುರಾತ್ಮನಾಗಿಯೂ, ಇಂದ್ರಪುರಾಕ್ರಮವುಳ್ಳವನಾಗಿಯೂ, ರಾಕ್ಷಸಪ್ರಭುವಾಗಿಯೂ,ನಮ್ಮ ಕೊಲೆಗೆ ಪಾತ್ರನಾಗಿಯೂ ಇರುವ *ರಾವಣನಿಗೆ ಅದೇ ವಾಸ್ಥಳವು ಆ ದ್ವೀಪಕ್ಕೆ ಉತ್ತರದಲ್ಲಿ ದಕ್ಷಿಣ

---

* "ಸುಗ್ರೀವನು ರಾವಣನಿವಾಸವು ಈ ಲಂಕೆಯೆಂದೇ ತಿಳಿದಿರುವಾಗ,ಬೇರೆ ದಿಕ್ಕುಗಳಿಗೂ ವಾನರರನ್ನು ಕಳುಹಿಸಿದುದೇಕೆ" ಎಂದರೆ, ರಾವಣನು ಸೀತೆಯನ್ನು ಕದ್ದು ಬಹಳದಿನಗಳಾದುದರಿಂದ,ಇಷ್ಟರೊಳಗಾಗಿ ಬೇರೆಲ್ಲಿಗಾದರೂ ಸಾಗಿಸಿಬಿಟ್ಟಿರಬಹುದೆಂಬ ಶಂಕೆಯಿಂದಲೇಹೊರತು ಬೇರೆಯಲ್ಲ ಹಾಗೆ ಮೊದಲೇ ತಿಳಿದಿದ್ದರೆ ಹಿಂದೆ ರಾಮನು

ಸಮುದ್ರದನಡುವೆ ಅಂಗಾರಕೆಯೆಂಬ ರಾಕ್ಷಸಿಯೊಬ್ಬಳಿರುವಳು ಆ ಭೂತವು ನೆಳಲನ್ನು ಹಿಡಿದೇ ಮನುಷ್ಯರನ್ನು ನುಂಗಿಬಿಡುವುದು ಎಲ್ಲೆ ವಾನರರೆ! ರಾವಣನು ಅಲ್ಲಿ ಯಾವಯಾವಕಡೆಯಲ್ಲಿ ಸೀತೆಯನ್ನು ಬಚ್ಚಿಟ್ಟಿರಬಹುದೆಂದು ನಿಮಗೆ ಸ್ವಲ್ಪಮಾತ್ರವಾದರೂ ಸಂಶಯವುಂಟಾಗುವುದೋ, ಆ ಪ್ರದೇಶಗಳನ್ನೆಲ್ಲಾ ಚೆನ್ನಾಗಿ ಹುಡುಕಿ, ಸೀತೆಯಿರುವಳೇ ಇಲ್ಲವೇ ಎಂಬ ಸಂದೇಹವು ತೀರಿ, ನಿಮ್ಮಮನಸ್ಸಿಗೆ ನಿರ್ಧರವಾಗುವವರೆಗೂ ಬಿಡದೆ ನೋಡಬೇಕು ಆ ಲಂಕಾದ್ವೀಪವನ್ನೂ ದಾಟಿ, ನೂರುಯೋಜನದೂರ ಕಕ್ಕ ಸಮುದ್ರಮಧ್ಯದಲ್ಲಿ ಸಿದ್ಧಚಾರಣಸೇವಿತವಾಗಿ ಶೋಭಿಸುವ ಪುಷ್ಪಿತಕವೆಂಬ ಪರ್ವತವಿರುವುದು ಆ ಪರ್ವತವು ಒಂದುಪಾರ್ಶ್ವದಲ್ಲಿ ಚಂದ್ರನಂತೆ ಧವಳವರ್ಣವಾಗಿಯೂ, ಮತ್ತೊಂದು ಪಾರ್ಶ್ವದಲ್ಲಿ ಸೂರ್ಯನಂತೆ ಅರುಣವರ್ಣವಾಗಿಯೂ ಇದ್ದು, ಸುತ್ತಲೂ ಸಮುದ್ರಜಲದಿಂದ ಪರಿವೃತವಾಗಿ, ತನ್ನ ಶಿಖರಗಳಿಂದ ಆಕಾಶವನ್ನೆತ್ತಿಹಿಡಿದಿರುವಂತೆ ಮಹೋನ್ನತವಾಗಿರುವುದು ದಕ್ಷಿಣಾಯನದಲ್ಲಿ ಸೂರ್ಯನು ಆ ಪರ್ವತದ ಸುವರ್ಣಮಯವಾದ ಒಂದು ಶಿಖರದಮೇಲೆ ಬರುವನು ರಜತಮಯವಾಗಿ ಬಿಳುಪಾದ ಮತ್ತೊಂದು ಶಿಖರದಮೇಲೆ ಚಂದ್ರನು ಬರುವನು ಕೃತಘ್ನರಿಗಾಗಲಿ, ನಾಸ್ತಿಕರಿಗಾಗಲಿ, ಕ್ರೂರರಿಗಾಗಲಿ ಆಪರ್ವತವು ಗೋಚರಿಸುವುದಿಲ್ಲ ನೀವು ಅದನ್ನು ಕಂಡೊಡನೆ ಅದಕ್ಕ ತಲೆಬಗ್ಗಿ ನಮಸ್ಕರಿಸಿ, ಆಮೇಲೆ ಅಲ್ಲಿ ಸೀತೆಯನ್ನು ಹುಡುಕಿನೋಡಿರಿ! ಎಲ್ಲೆ ವೀರರೆ! ನೀವು ಎಲ್ಲಿಯೂ ತಡೆಯಿಲ್ಲದ ಪ

ಪ್ರಶ್ನೆ ಮಾಡಿದಾಗ ತನಗೆ ಅದೊಂದೂ ತಿಳಿಯದೆಂದು ಹೇಳಿದುದೇಕೆ?" ಎಂದರೆ, ವೊದಲೇ ರಾವಣವೃತ್ತಾಂತವನ್ನು ಚೆನ್ನಾಗಿ ತಿಳಿಸಿಬಿಟ್ಟರೆ, ರಾಮನು ತಾನೇ ಹೋಗಿ ರಾವಣನನ್ನು ಕೊಂದು ಸೀತೆಯನ್ನು ತಂದುಬಿಡುವನೆಂದೂ, ಆಗ ಪಾಲಿನಥವಾಗಲಿ, ತನಗೆ ರಾಜ್ಯಪ್ರಾಪ್ತಿಯಾಗಲಿ ಸಂಭವಿಸದೆಂದೂ ಚಿಂತಿಸಿ, ಸುಗ್ರೀವನು ಅದನ್ನು ಮರೆಸಿಟ್ಟಿನೆಂದು ತಿಳಿಯಬೇಕು ಅಥವಾ ತಾನು ವೊದಲು ಆಕಸ್ಮಿಕವಾಗಿ ನೋಡಿದೆಯೆಂದು ಸ್ಪಷ್ಟವಾಗಿ ತಿಳಿದಿರಲಾರದು ಅದನ್ನು ಚೆನ್ನಾಗಿ ನಿಶ್ಚಯಿಸಿ ಹೇಳಲಾರದುದಕ್ಕಾಗಿ ತನಗೆ ತಿಳಿಯದೆಂದು ಹೇಳಿದುದಾಗಿಯೂ ಗ್ರಹಿಸಬಹುದು ಈಗ ಇಲ್ಲಿಮಾತ್ರ ಸ್ಪಷ್ಟವಾಗಿ ಹೇಳಿದುದೇಕೆಂದರೆ, ವಾನರರಿಂದ ಚೆನ್ನಾಗಿ ಹುಡುಕಿಸುವುದಕ್ಕಾಗಿ ತಾನು ನಿಶ್ಚಯವಾಗಿ ತಿಳಿದುಬಂದಿರುವಂತೆ ತಂತ್ರದಿಂದ ಹೇಳಿದುದಾಗಿಯೂ ಗ್ರಹಿಸಬಹುದು

ರಾಕ್ರಮವುಳ್ಳವರಾದುದರಿಂದ, ಅದನ್ನು ಧಾರಾಳವಾಗಿ ಚಾಟಬಹುದು. ಆ ಮೇಲೆ ಸೂರ್ಯವಂತವೆಂಬ ಮತ್ತೊಂದು ಪರ್ವತವು ನಿಮಗೆ ಗೋಚರಿಸುವುದು ಒಂದು ದುರ್ಗಮವಾಗ ದಾರಿಯಿಂದಲೇ ಅದಕ್ಕೆ ಹೋಗಬೇಕು ಪುಷ್ಪಿತಕಗಿರಿಯಿಂದ ಅದಕ್ಕ ಹಿನಾಲ್ಕುಗಾವುದಗಳ ದೂರವಿರುವುದು ಆ ಸೂರ್ಯವಂತದಿಂದಾಚೆಗೆ ವೈದ್ಯುತವೆಂಬ ಬೆಟ್ಟವೊಂದು ಕಾಣುವುದು ಅದು ಸಮಸ್ತವಿಧಗಳಾದ ಫಲವೃಕ್ಷಗಳಿಂದಲೂ ತುಂಬಿ ಸರ್ವಕಾಲಗಳಲ್ಲಿಯೂ ಮನೋಹರವಾಗಿರುವುದು ಆ ಪರ್ವತದಲ್ಲಿ ನೀವು ರಾಜಭೋಗ್ಯಗಳಾದ ಫಲ ಮೂಲಗಳನ್ನು ಬೇಕಾದಷ್ಟು ಭುಜಿಸಬಹುದು ಅಲ್ಲಿ ನೀವು ನಿಮ್ಮ ಮನ ಸ್ತೃಪ್ತಿಯಾಗುವಂತೆ ಮೇಲಾದ ಜೇನನ್ನು ಕುಡಿಯಬಹುದು ಇವುಗಳಿಂದ ನೀವು ತೃಪ್ತರಾಗಿ ಮುಂದೆ ಹೋದರೆ, ಅಲ್ಲಿ ಕಣ್ಣುಗಳಿಗೂ,ಮನಸ್ಸಿಗೂ ಅತ್ಯಾನಂದಕರವಾದ ಕುಂಜರವೆಂಬ ಮತ್ತೊಂದು ಪರ್ವತವು ಸಿಕ್ಕುವುದು ಆ ಪರ್ವತದಲ್ಲಿ ವಿಶ್ವಕರ್ಮನು ಅಗಸ್ತ್ಯನಿಗಾಗಿ ಒಂದು ಮನೆಯನ್ನು ಕಟ್ಟಿ ಕೊಟ್ಟಿರುವನು ಆ ಬೆಟ್ಟದಲ್ಲಿ ನಿರ್ಮಿತವಾದ ಅಗಸ್ತ್ಯಗೃಹವು ಒಂದು ಯೋಜನದಗಲವೂ, ಹತ್ತು ಯೋಜನಗಳ ಉದ್ದವೂ ಇರುವುದು ಅದು ಕೇವಲ ಸುವರ್ಣಮಯವಾಗಿ, ನಡುನಡುವೆ ನವರತ್ನಗಳಿಂದ ಚಿತ್ರಿತವಾಗಿ ದಿವ್ಯ ತೇಜಸ್ಸಿನಿಂದ ಬೆಳಗುತ್ತಿರುವುದು ಅಲ್ಲಿ ಅನೇಕಸರ್ಪಗಳಿಗೆ ನೆಲೆಯಾದ ಭೋಗವತಿಯಂಬ ಪುರವಿರುವುದು ಅದು ನಾಲ್ಕುಕಡೆಗಳಲ್ಲಿಯೂ ವಿಸ್ತಾರವಾದ ಪ್ರಾಕಾರಗಳಿಂದ ಸುರಕ್ಷಿತವಾಗಿರುವುದರಿಂದ, ಎಂತವರಿಗೂ ದುರ್ಜಯವಾಗಿರುವುದು ತೀಕ್ಷ್ಣದಂಷ್ಟ್ರಗಳುಳ್ಳ ಮಹಾವಿಷಸರ್ಪಗಳೇ ಅದನ್ನು ನಿರಪಾಯವಾಗಿ ರಕ್ಷಿಸುತ್ತಿರುವುವು ಅದರಲ್ಲಿಯೇ ವಾಸುಕಿಯೆಂಬ ಮಹಾಪ್ರಾಜ್ಞನಾದ ಸರ್ಪರಾಜನು ವಾಸಮಾಡುತ್ತಿರುವನು ನೀವು ಅಗಸ್ತ್ಯಭವನವನ್ನು ದಾಟಿದೊಡನೆ, ಆ ಭೋಗವತೀಪುರದಲ್ಲಿ ಹುಡುಕಿನೋಡಬೇಕು ಅದರ ಹಿಂಭಾಗಲ್ಲಿ ಇನ್ನೂ ಬೇರೆಬೇರೆ ರಹಸ್ಯಪ್ರದೇಶಗಳೆಷ್ಟೋ ಇರುವುವು ಅವೆಲ್ಲವನ್ನೂ ಚೆನ್ನಾಗಿ ಹುಡುಕಿಬರಬೇಕು ಆ ಭೋಗವತೀಪುರದಿಂದಾಚೆಗೆ ವೃಷಭವೆಂಬ ಬೆಟ್ಟವೊಂದಿರುವುದು ಅದು ಒಂದು ವೃಷಭಾಕಾರದಿಂದಲೇ .ಕಾಣುತ್ತ, ಸಮಸ್ತರತ್ನಗಳಿಂದಲೂ ತುಂಬಿ

ಶೋಭಿಸುತ್ತಿರುವುದು ಆ ಪರ್ವತದಲ್ಲಿ ದಿವ್ಯವಾದ ಚಂದನವೃಕ್ಷಗಳು ಹೇರಳವಾಗಿ ಹುಟ್ಟುವುವು ಅವುಗಳಲ್ಲಿ ಕೆಲವು ಗೋರೋಚನದ ಬಣ್ಣದಿಂದಲೂ, ಮತ್ತೆ ಕೆಲವು ತಾವರೆಯಸಳಿನ ಬಣ್ಣದಿಂದಲೂ, ಮತ್ತೆ ಕೆಲವು ಎಲೆಹಸುರಿನ ಬಣ್ಣದಿಂದಲೂ,ಇನ್ನು ಕೆಲವು ಕೆಂಡದಂತೆ ಕೆಂಪುಬಣ್ಣದಿಂದಲೂ ಶೋಭಿಸುತ್ತಿರುವುವು ನೀವು ಆ ಚಂದನವೃಕ್ಷಗಳನ್ನು ನೋಡಿದರೂ ಅವುಗಳಿಗೆ ಆಸೆಪಟ್ಟು ಯಾವಾಗಲೂ ಎಷ್ಟುಮಾತ್ರವೂ ಕೈಹಾಕಬಾರದು ಭಯಂಕರಾಕಾರವುಳ್ಳ ಲೋಹಿತರೆಂಬ ಕೆಲವು ಗಂಧರ್ವರು ಆ ಚಂದನವನಕ್ಕೆ ಕಾವಲಾಗಿರುವರು ಆ ಋಷಭಪರ್ವತದಲ್ಲಿ, ಶೈಲೂಷ, ಗ್ರಾಮಣಿ, ತಿಗ್ಮ್ರ ಶುಭ್ರ, ಬಭ್ರು, ಎಂಬ ಐದುಮಂದಿ ಗಂಧರ್ವರಾಜರು ಸೂರ್ಯತೇಜಸ್ಸುಳ್ಳವರಾಗಿ ಜ್ವಲಿಸುತ್ತಿರುವರು ಪುಣ್ಯಕರ್ಮಕಳನ್ನು ಮಾಡಿ ಸದ್ಗತಿಯನ್ನು ಹೊಂದಿದವರಲ್ಲಿಯೂ, ಕೆಲವರು ಸೂರ್ಯತೇಜಸ್ಸಿನಿಂದಲೂ, ಕೆಲವರು ಚಂದ್ರಕಾಂತಿಯಿಂದಲೂ,ಮತ್ತೆ ಕಲವರು ಅಗ್ನಿತೇಜಸ್ಸಿನಿಂದಲೂ ಕೂಡಿ ಆ ಪರ್ವತದಲ್ಲಿ ವಾಸಮಾಡುತ್ತಿರುವರು ಪ್ರಳಯಕಾಲದಲ್ಲಿ ಭೂಮಿಯು ನಾಶ ಹೊಂದುವಾಗ, ಸ್ವರ್ಗಾದಿಲೋಕಗಳನ್ನು ಹೊಂದಿದ ಕಲವುಮಹಾಪುರುಷರು ಇತರರಿಗೆ ಅಗೋಚರವಾದ ತೇಜಸ್ಸಿನಿಂದ ಪ್ರಕಾಶಿಸುವ ಆ ಪರ್ವತದಲ್ಲಿ ಸೇರಿ ವಾಸಮಾಡುವರು ಆ ಪರ್ವತದಿಂದಾಚೆಗೆ ಬಹಳ ಭಯಂಕರವಾದ ಪಿತೃಲೋಕವಿರುವುದು ಅದೇ ಯಮನ ರಾಜಧಾನಿಯು ಇದರಲ್ಲಿ ಯಾವಾಗಲೂ ಭಯಂಕರವಾದ ಗಾಢಾಂಧಕಾರವು ವ್ಯಾಪಿಸಿರುವುದರಿಂದ, ನಿಮಗೆ ಆಲ್ಲಿ ಪ್ರವೇಶಿಸಲು ಸಾಧ್ಯವಿಲ್ಲ ಎಲೈ ವಾನರರೆ'ನೀವು ಮಹಾವೀರರಾಗಿದ್ದರೂ, ಇಷ್ಟುದೂರದವರೆಗೆ ಮಾತ್ರವೇ ಹೋಗಿ ಹುಡುಕುವುದಕ್ಕೆ ಸಾಧ್ಯವೇಹೊರತು ಮುಂದೆ ಹೋಗಲಾರಿರಿ' ಇಲ್ಲಿಂದ ಮುಂದಕ್ಕೆ ಎಷ್ಟೇ ಗಮನಶಕ್ತಿಯುಳ್ಳವರಿಗೂ ಹೋಗಲು ಸಾಧ್ಯವಾಗದು ಈಗ ನಾನು ಇದುವರೆಗೆ ಹೇಳಿದ ಸ್ಥಳಗಳನ್ನು ಮಾತ್ರವೇ ಅಲ್ಲದೆ, ನಾನು ಹೇಳದಿದ್ದರೂ, ಅಲ್ಲಲ್ಲಿ ನಿಮಗೆ ಗೋಚರಿಸುವ ಇತರಸ್ಥಳಗಳೆಲ್ಲವನ್ನೂ ನೀವು ಚೆನ್ನಾಗಿ ಹುಡುಕಿನೋಡಿ, ಸೀತಾದೇವಿಯ ವೃತ್ತಾಂತವನ್ನು ತಿಳಿದು ಹಿಂತಿರುಗಿ ಬರಬೇಕು ಒಂದುತಿಂಗಳೊಳಗಾಗಿ ನಿಮ್ಮಲ್ಲಿ ಯಾವನು ಹಿಂತಿರುಗಿ ಇಲ್ಲಿಗೆ ಬಂದು ''ಸಿಕ್ಕಿದಳು ಸೀತೆ" ಎಂಬೀ ಎರಡುಮಾತುಗಳನ್ನಾದರೂ ನನ್ನ

ಕಿವಿಗೆ ಬೀಳಿಸುವನೋ, ಅವನು ನನಗೆ ಸಮಾನವಾದ ವೈಭವಗಳನ್ನೇ ಹೊಂದಿ ಸುಖಿಸುವನು ಅವನಿಗಿಂತಲೂ ನನಗೆ ಬೇರೊಬ್ಬನು ಪ್ರಿಯನಲ್ಲ ಅಂತವನೇ ನನಗೆ ಪ್ರಾಣಗಳಿಗಿಂತಲೂ ಮೇಲೆನಿಸುವನು ಅವನು ಬೇರೆ ಯಾವಪಿಥದಲ್ಲಿಯಾದರೂ, ಎಷ್ಟೇ ಅಪರಾಥಗಳನ್ನು ಮಾಡಿದ್ದರೂ ನನಗೆ ಬಂಥುವಂತೆ ಇಷ್ಟನೇ ಆಗುವನು ಎಲ್ಲೆ ವಾನರರೆ ! ನೀವಾದರೋ ಎಣೆ ಯಿಲ್ಲದ ಪರಾಕ್ರಮವುಳ್ಳವರು ಶೌರ್ಯಥೈರ್ಯಾದಿಸಮಸ್ತಗುಣಗಳಿಂದಲೂ ಪ್ರಖ್ಯಾತವಾದ ಸತ್ಕುಲದಲ್ಲಿ ಜನಿಸಿದವರು ರಾಜಪುತ್ರಿಯಾದ ಸೀತೆಯು ಸಿಕ್ಕುವುದಕ್ಕೆ ನಿಮ್ಮಿಂದ ಸಾಥ್ಯವಾದ ಪುರುಷಪ್ರಯತ್ನವೆಲ್ಲವನ್ನೂ ಮಾಡ ಬೇಕು" ಎಂದನು ಇಲ್ಲಿಗೆ ನಾಲ್ವತ್ತೊಂಬನೆಯ ಸರ್ಗವು

ಸುಷೇಣನೇ ಮೊದಲಾದ ವಾನರರನ್ನು ಪಶ್ಚಿಮದಿಕ್ಕಿಗೆ ಕಳುಹಿಸಿದುದು

ಹೀಗೆ ಸುಗ್ರೀವನು ಹನುಮದಾದಿವಾನರರನ್ನು ದಕ್ಷಿಣದಿಕ್ಕಿಗೆ ಹೊ ರಡುವಂತೆ ನಿಯಮಿಸಿ, ಆಮೇಲ ಮೇಘುದಂತೆ ಕಪ್ಪಾದ ದೊಡ್ಡ ಆಕಾರ ವುಳ್ಳ ಸುಷೇಣನೆಂಬ ಕಪಿಯೂಥಪನನ್ನು ನೋಡಿ, ತಾರೆಗೆ ತಂದೆಯಾಗಿ ಯೂ, ತನಗೆ ಮಾವನಾಗಿಯೂ, ಭಯಂಕರಪರಾಕ್ರಮವುಳ್ಳವನಾಗಿಯೂ ಇರುವ ಆ ಸುಷೇಣನಿಗೆ ನಮ್ರತೆಯಿಂದ ನಮಸ್ಕರಿಸಿ, ಅವನ ಮುಂದೆ ಕೈ ಮುಗಿದು ನಿಂತು, ಹಾಗೆಯೇ ಕಾಂತಿಮಂತನಾಗಿಯೂ, ಅನೇಕ ಕಪಿ ವೀರ ರಿಂದ ಪರಿವೃತನಾಗಿಯೂ, ಇಂದ್ರನಂತೆ ತೇಜಸ್ಸುಳ್ಳವನಾಗಿಯೂ, ಎಣೆಯಿಲ್ಲದ ಬುದ್ಧಿಪರಾಕ್ರಮಗಳುಳ್ಳವನಾಗಿಯೂ, ಗರುಡನಿಗೆ ಸಮಾ ನವಾದ ದೇಹಕಾಂತಿಯುಳ್ಳವನಾಗಿಯೂ ಇದ್ದ ಮರೀಚಪುತ್ರನಾದ ಮಾರೀಚನೆಂಬ ವಾನರಶ್ರೇಷ್ಠನನ್ನೂ, ಮತ್ತು ಅವನ ಪಕ್ಕದಲ್ಲಿದ್ದ ಅವನ ತಮ್ಮಂದಿರಾದ ಮಾರೀಚರೆಂಬ ಮಹಾಬಲಾಢ್ಯರಾದ ಕಪಿಗಳನ್ನೂ, ನೋಡಿ ಮರೀಚಋಷಿಯ ಮಕ್ಕಳಾದ ಅವರೆಲ್ಲರನ್ನೂ ಪಶ್ಚಿಮದಿಕ್ಕಿಗೆ ಹೋಗು ವಂತೆ ನಿಯಮಿಸುವವನಾಗಿ, ಅವರನ್ನುದ್ದೇಶಿಸಿ ''ಎಲ್ಲೆ ವಾನರೋತ್ತಮರೆ ! ನೀವೆಲ್ಲರೂ ಪೂಜ್ಯನಾದ ಈ ಸುಷೇಣನನ್ನು ಮುಂದಿಟ್ಟುಕೊಂಡು, ಎದ್ದು

ಲಕ್ಷವಾನರರನ್ನು ನಿಮಗೆ ಬೆಂಬಲವಾಗಿಯೂ ಕರೆದುಕೊಂಡು, ಪಶ್ಚಿಮ ದಿಕ್ಕಿನಲ್ಲಿ ಸೀತೆಯನ್ನು ಹುಡುಕಿಬರಬೇಕು ನೀವು ಕ್ರಮವಾಗಿ ಸುರಾಷ್ಟ್ರ ಬಾಹ್ಲೀಕ, ಶೂರ ದೇಶಗಳನ್ನೂ, ಅಲ್ಲಲ್ಲಿ ಸಸ್ಯಾದಿಗಳಿಂದ ತುಂಬಿ ರಮಣೀಯಗಳಾದ ಬೇರ ಜನಪದಗಳನ್ನೂ, ವಿಸ್ತಾರವಾದ ಪಟ್ಟಣಗಳನ್ನೂ, ಪುನ್ನಾಗವನವನ್ನೂ, ಮತ್ತು ಪಗಡೆ ಮುಂತಾದ ವೃಕ್ಷಗಳಿಂದ ತುಂಬಿದ ಕುಕ್ಷಿದೇಶವನ್ನೂ ಹುಡುಕಬೇಕು ಎಲೈ ವಾನರರೆ! ಅಲ್ಲಲ್ಲಿ ಹೇರಳವಾದ ತಾಳೆಗಿಡಗಳಿಂದ ತುಂಬಿದ ಕಾಡುಗಳು ಬಹಳವಾಗಿರುವುವು ಅವೆಲ್ಲವನ್ನೂ ಸುತ್ತಿನೋಡಬೇಕು ಅಲ್ಲಲ್ಲಿ ಪಶ್ಚಿಮಾಭಿಮುಖವಾಗಿ ಪ್ರವಹಿಸುವ ಶೀತಲ ಜಲವುಳ್ಳ ಪವಿತ್ರಗಳಾದ ನದಿಗಳನ್ನೂ, ಋಷಿಗಳ ತಪೋವನಗಳನ್ನೂ, ಅರಣ್ಯಗಳನ್ನೂ, ಬಟ್ಟಗಳನ್ನೂ, ಹುಡುಕಿನೋಡಬೇಕು ಅಲ್ಲಲ್ಲಿ ನಿರ್ಜಲವಾದ ಮರುಭೂಮಿಗಳಂಟು ಮಹೋನ್ನತಗಳಾದ ಶಿಖರಗಳುಳ್ಳ ಬೆಟ್ಟಗಳುಂಟು ಆ ಪಶ್ಚಿಮದಿಕ್ಕಿನ ವಾರಿಯು ಅನೇಕಪರ್ವತಗಳ ಸಮೂಹದಿಂದ ನಿಬಿಡವಾಗಿ ಸಂಚರಿಸುವುದಕ್ಕೂ ಅಸಾಧ್ಯವಾಗಿರುವುದು ಅವಲ್ಲವನ್ನೂ ನೀವು ನಿಮ್ಮ ಸಾಹಸದಿಂದ ದಾಟಿ. ಅಲ್ಲಲ್ಲಿ ಸೀತೆಯನ್ನು ಹುಡುಕುತ್ತ. ಆ ದಿಕ್ಕಿನ ಭೂಪ್ರದೇಶಗಳೆಲ್ಲವನ್ನೂ ದಾಟಿಹೋದ ಮೇಲೆ ನಿಮಗೆ ಪಶ್ಚಿಮಸಮುದ್ರವು ಸಿಕ್ಕುವುದು ಆ ಸಮುದ್ರದಲ್ಲಿ ತಿಮಿಗಳೆಂಬ ಮಹಾಮತ್ಸ್ಯಗಳೂ ಮೊಸಳೆಗಳೂ ಅನೇಕವಾಗಿರುವುವು ಹೀಗೆ ಅಕ್ಷೋಭ್ಯವಾಗಿಯೂ, ಗಂಭೀರವಾಗಿಯೂ ಇರುವ ಆ ಪಶ್ಚಿಮಸಮುದ್ರತೀರವನ್ನು ಸೇರಿದಮೇಲೆ, ನೀವೂ ನಿಮ್ಮ ಪರಿಜನರೂ ಅಲ್ಲಲ್ಲಿನ ತಾಳೆಯ ಕಾಡುಗಳಲ್ಲಿಯೂ, ಹೊಂಗೆಯ ಕಾಡುಗಳಲ್ಲಿಯೂ, ತೆಂಗಿನ ತೋಟಗಳಲ್ಲಿಯೂ ವಿನೋದದಿಂದ ವಿಹರಿಸಬಹುದು ಅಲ್ಲಿನ ತೀರಪರ್ವತಗಳಲ್ಲಿಯೂ, ಕಾಡುಗಳಲ್ಲಿಯೂ ಸೀತೆಯನ್ನೂ, ರಾವಣನ ಸ್ಥಳವನ್ನೂ ಚೆನ್ನಾಗಿ ಹುಡುಕಬೇಕು ಮತ್ತು ಅಲ್ಲಿರುವ ಮುರಚೀಪಟ್ಟಣವನ್ನೂ, ರಮಣೀಯವಾದ ಜಟಿಲಪುರವನ್ನೂ, ಅವಂತಿ, ಅಂಗಲೋಪೆ,ಎಂಬ ಎರಡು ಪಟ್ಟಣಗಳನ್ನೂ ಚೆನ್ನಾಗಿ ಸುತ್ತಿ ನೋಡಬೇಕು ಮತ್ತು ಅಲ್ಲಿ ಒಳಗಿರುವ ಜನರೇ ಕಾಣದಂತೆ ಮರಗಳಿಂದದಟ್ಟವಾಗಿ ತುಂಬಿದ ಅಲಕ್ಷಿತವೆಂಬ ಮಹಾರಣ್ಯದಲ್ಲಿ ಪ್ರವೇಶಿಸಿ, ಅಲ್ಲಿಯೂ ಚೆನ್ನಾಗಿ ಹುಡುಕಿ ಬರಬೇಕು ಮತ್ತು ಅಲ್ಲಲ್ಲಿರುವ ವಿಸ್ತಾರವಾದ ರಾಷ್ಟ್ರಗಳಲ್ಲಿ

ಯೂ, ಪಟ್ಟಣಗಳಲ್ಲಿಯೂ ಚೆನ್ನಾಗಿ ಸುತ್ತಿನೋಡಬೇಕು ಸಿಂಧು-ನದವು ಸಮುದ್ರವನ್ನು ಸೇರುವ ಸಂಗಮಸ್ಥಳದಲ್ಲಿ ಹೇಮಗಿರಿಯೆಂಬ ದೊಡ್ಡ ಪರ್ವತವೊಂದಿರುವುದು ಅದು ನೂರುಶಿಖರಗಳುಳ್ಳದಾಗಿ ಮಹೋನ್ನತಗಳಾದ ಅನೇಕವೃಕ್ಷಗಳಿಗೆ ನೆಲೆಯಾಗಿರುವುದು ಮನೋಹರಗಳಾದ ಆ ಪರ್ವತದ ತಪ್ಪಲುಗಳಲ್ಲಿ ರಕ್ಕೆಯುಳ್ಳ ಸಿಹ್ಮಗಳುಂಟು ಅವು ತಿಮಿತಿಮಿಂಗಲಾದಿ ಮತ್ಸ್ಯಗಳನ್ನೂ, ಆನೆಗಳನ್ನೂ ಎತ್ತಿಕೊಂಡು ಹೋಗಿ, ಅಲ್ಲಿನ ಮಹಾವೃಕ್ಷಗಳ ಕೆಳಗಿರುವ ತಮ್ಮ ಗೂಡುಗಳಲ್ಲಿ ಆಹಾರಾರ್ಥವಾಗಿ ಬಚ್ಚಿಟ್ಟುಕೊಳ್ಳುವುವು ಸುತ್ತಲೂ ಜಲಪೂರ್ಣವಾದ ಆ ತೀರಪ್ರದೇಶಗಳಲ್ಲಿಯೂ, ಆ ಹೇಮಗಿರಿಪರ್ವತದ ಶಿಖರಗಳಲ್ಲಿಯೂ ಇರುವ ಆನೆಗಳು, ಅಲ್ಲಿ ಸಿಕ್ಕುವ ಆಹಾರ ಸನ್ನಿವೃತ್ತಿಯಿಂದ ಯಾವಾಗಲೂ ತೃಪ್ತಿಹೊಂದಿದುವುಗಳಾಗಿ, ಮದದಿಂದ ಮೈಮರೆತು, ಮೇಘಗರ್ಜನೆಗಳನ್ನು ಮಾಡುತ್ತ ತಮ್ಮ ಭಯವನ್ನೂ ಮರೆತು, ಆ ಸಿಹ್ಮಗಳ ಗೂಡಿನ ಸಮೀಪಕ್ಕೆ ಬಂದು ಅವುಗಳಿಗೆ ತುತ್ತಾಗುವುವು ಆಕಾಶವನ್ನು ಮುಟ್ಟುವಂತೆ ಮಹೋನ್ನತವಾಗಿಯೂ, ಸುವರ್ಣಮಯವಾಗಿಯೂ, ಚಿತ್ರವಿಚಿತ್ರಗಳಾದ ಮರಗಳಿಂದ ತುಂಬಿದುವಾಗಿಯೂ ಇರುವ ಆ ಹೇಮಪರ್ವತದ ಒಂದೊಂದು ಶಿಖರವನ್ನೂ, ನೀವು ಕಾಮರೂಪಿಗಳಾದ ನಿಮ್ಮನಿಮ್ಮ ವಾನರಸೈನ್ಯಗಳೊಡನೆ ಚೆನ್ನಾಗಿ ಹುಡುಕಿ ನೋಡಬೇಕು ಎಲೈ ವಾನರರೆ ! ನೀವು ಆ ಪಶ್ಚಿಮಸಮುದ್ರದಲ್ಲಿ ಸ್ವಲ್ಪದೂರದವರೆಗೆ ಹೋದರೆ, ಅದರ ನಡುವೆ ಸುವರ್ಣಮಯವಾಗಿಯೂ ನೂರುಯೋಜನಗಳ ವಿಸ್ತಾರವುಳ್ಳದಾಗಿಯೂ, ತೇಜೋವಿಶೇಷದಿಂದ ನೋಡಲಸಾಧ್ಯವಾಗಿಯೂ ಇರುವ ಪಾರಿಯಾತ್ರವೆಂಬ ಪರ್ವತದ ಶಿಖರವನ್ನೂ ಕಾಣುವಿರಿ ಆ ಶಿಖರದಲ್ಲಿ ಬಲಾಢ್ಯರಾಗಿಯೂ, ಅಗ್ನಿಯಂತೆ ತೀಕ್ಷ್ಣರಾಗಿಯೂ ಭಯಂಕರಸ್ವರೂಪವುಳ್ಳವರಾಗಿಯೂ, ತಮಗಿಷ್ಟಬಂದ ರೂಪವನ್ನು ಹೊಂದಬಲ್ಲವರಾಗಿಯೂ ಇರುವ ಮಹಾವೇಗಶಾಲಿಗಳಾದ ಇಪ್ಪತ್ತುನಾಲ್ಕುಕೋಟಿಗಂಧರ್ವರು ವಾಸಮಾಡುತ್ತಿರುವರು ಅವರು ಅಲ್ಲಲ್ಲಿ ಸಾವಿರಾರುಸಂಖ್ಯೆಯಿಂದ ಗುಂಪುಗುಂಪಾಗಿರುವರು ನಿಮ್ಮಲ್ಲಿ ಎಷ್ಟೇ ಪರಾಕ್ರಮವುಳ್ಳವರಾದರೂ ಅವರ ಸಮೀಪಕ್ಕೆ ಹೋಗಕೂಡದು.

ಆಸೆಯಿಂದ ಅಲ್ಲಿರುವ ಹಣ್ಣುಗಳನ್ನಾಡರೂ ಸ್ವಲ್ಪಮಾತ್ರವೂ ಕುಯ್ಯಬಾರದು ಅವರನ್ನು ಇದಿರಿಸಲು ಯಾರಿಗೂ ಸಾಧ್ಯವಲ್ಲ ಅವರೆಲ್ಲರೂ ಮಹಾವೀರರು ಬಹಳ ಧೈರ್ಯಶಾಲಿಗಳು ಅತಿಭಯಂಕರವಾದ ಬಲಪರಾಕ್ರಮವುಳ್ಳವರು ಆ ಗಂಧರ್ವರೇ ಅಲ್ಲಿನ ಫಲಮೂಲಗಳಿಗೆ ಕಾವಲಾಗಿರುವರು. ಆದುದರಿಂದ ಅಲ್ಲಿನ ಫಲಮೂಲಗಳಲ್ಲಿ ಸ್ವಲ್ಪಮಾತ್ರವೂ ಚಾಪಲ್ಯವುಂಟಾಗದಂತೆ ಎಚ್ಚರಿಕೆಯಿಂದಿದ್ದು ಪ್ರಯತ್ನಪಟ್ಟು ಸೀತೆಯನ್ನು ಹುಡುಕಿಬರಬೇಕು ನೀವು ಸಾಮಾನ್ಯನಾನರರಂತೆಯೇ ನಡೆಯುತ್ತ ಅಲ್ಲಿ ಸುತ್ತುತಿದ್ದರೆ, ಆ ಗಂಧರ್ವರಿಂದ ನಿಮಗೆ ಯಾವಭಯವೂ ಇರದು ಆ ಸ್ಥಳವನ್ನು ಹುಡುಕಿದಮೇಲೆ, ನೀವು ಇನ್ನೂ ಸ್ವಲ್ಪದೂರದವರೆಗೆ ಮುಂದೆ ಹೋದರೆ, ವಜ್ರವೆಂಬ ಮತ್ತೊಂದು ದೊಡ್ಡಪರ್ವತವು ಸಿಕ್ಕುವುದು ಅದು ವೈಡೂರ್ಯಮಣಿಯಂತೆ ಬಣ್ಣವುಳ್ಳುದಾಗಿ, ವಜ್ರದಂತೆ ಅತಿಕಠಿನವಾಗಿರುವುದು ಅಲ್ಲಿಯೂ ಬಗೆಬಗೆಯ ಬಳ್ಳಿಗಳೂ,ಮರಗಳೂ ತುಂಬಿರುವುವು ಅದು ಸರಿಯಾಗಿ ನೂರುಯೋಜನದುದ್ದವುಳ್ಳುದಾಗಿರುವುದು .ಎಲೈ ವಾನರರ ! ನೀವು ಪ್ರಯತ್ನಪಟ್ಟು ಆ ಪರ್ವತಗುಹೆಗಳಲ್ಲಿ ಸೀತೆಯನ್ನು ಹುಡುಕಿಬರಬೇಕು ಹೀಗೆ ಆಸಮುದ್ರದ ಮುಕ್ಕಾಲುಪಾಲನ್ನು ಹಾಟಿ ಮುಂದೆಹೋದರ, ನಾಲ್ಕನೆಯ ಭಾಗದಲ್ಲಿ ಚಕ್ರವಂತವೆಂಬ ಒಂದುಪರ್ವತವಿರುವುದು ಪೂರ್ವದಲ್ಲಿ ವಿಶ್ವಕರ್ಮನು ಸಹಸ್ರಾವಯವಗಳುಳ್ಳ ಚಕ್ರಾಯುಧವನ್ನು ಆ ಪರ್ವತದಲ್ಲಿಯೇ ನಿರ್ಮಿಸಿದನು ಅಲ್ಲಿಯೇ ಪೂರ್ವದಲ್ಲಿ ಶ್ರೀ ಮಹಾವಿಷ್ಣುವು ಪುರುಷೋತ್ತಮರೂಪದಿಂದವತರಿಸಿ, ಪಂಚಜನಹಯಗ್ರೀವರೆಂಬ ರಾಕ್ಷಸರಿಬ್ಬರನ್ನೂ ಕೊಂದು, ಆ ಪಂಚಜನರಾಕ್ಷಸನಿಂದ ಅವನ ಅಸ್ಥಿರೂಪವಾದ ಪಾಂಚಜನ್ಯವೆಂಬ ಶಂಖವನ್ನೂ, ಹಯಗ್ರೀವನೆಂಬ ದೈತ್ಯನ ರಕ್ಷಣೆಯಲ್ಲಿದ್ದ ಚಕ್ರಾಯುಧವನ್ನೂ ಪಡೆದನು ಆ ಪರ್ವತದ ಚಿತ್ರವಿಚಿತ್ರಗಳಾದ ತಪ್ಪಲುಗಳಲ್ಲಿಯೂ, ಗುಹೆಗಳಲ್ಲಿಯೂ ಅಲ್ಲಲ್ಲಿ ಸುತ್ತಿ, ರಾವಣನನ್ನೂ ಸೀತೆಯನ್ನೂ ಹುಡುಕಬೇಕು ಆ ಪರ್ವತಕ್ಕೆ ಅರುವತ್ತುಯೋಜನದೂರದಲ್ಲಿ ವರಾಹವೆಂಬ ಮತ್ತೊಂದು ಪರ್ವತವುಂಟು ಅಗಾಧವಾದ ಸಮುದ್ರಮಧ್ಯದಲ್ಲಿ ಸುವರ್ಣಶಿಖರಗಳಿಂದ ಕೂಡಿ ಮಹಾತೇಜಸ್ಸಿನಿಂದ ಬೆಳಗುತ್ತಿರುವ ಆ ಪರ್ವತ

ದಲ್ಲಿ, ಸ್ವರ್ಣಮಯವಾದ ಪ್ರಾಗ್ಜ್ಯೋತಿಷವೆಂಬ ಪಟ್ಟಣವೊಂದಿರುವುದು ದುಷ್ಟಾತ್ಮನಾದ ನರಕನೆಂಬ ದಾನವನೊಬ್ಬನು ಅಲ್ಲಿ ವಾಸಮಾಡುತ್ತಿರುವನು ಅದರ ತಪ್ಪಲುಗಳಲ್ಲಿರುವ ಗುಹೆಗಳಲ್ಲಿಯೂ ನೀವು ಪ್ರವೇಶಿಸಿ, ರಾವಣನನ್ನೂ, ಸೀತೆಯನ್ನೂ ಹುಡುಕಬೇಕು ಆ ಬೆಟ್ಟವನ್ನು ದಾಟಿ ಹೋದರೆ ಮತ್ತೊಂದು ಪರ್ವತವು ಕಾಣುವುದು ಅದರ ಗುಹೆಗಳ ಒಳಭಾಗವೆಲ್ಲವೂ ಸುವರ್ಣಮಯವಾಗಿಯೇ ಇರುವುದು ಹೊರಗಿನ ತಪ್ಪಲುಗಳೂ ಸುವರ್ಣಮಯವಾಗಿರುವುವು ಹೀಗೆ ಸಮಸ್ತಭಾಗಗಳಲ್ಲಿಯೂ ಕಾಂಚನಮಯನಾಗಿ, ಅನೇಕ ಗಿರಿನದಿಗಳಿಂದ ಕೂಡಿದ ಆ ಪರ್ವತದ ಸುತ್ತಲೂ ಕಾಡಾನೆಗಳೂ, ಕಾಡುಹಂದಿಗಳೂ, ಸಿಹ್ಮಗಳೂ, ಹುಲಿಗಳೂ ಯಾವಾಗಲೂ ಗರ್ಜಿಸುತ್ತ, ತಮ್ಮ ಪ್ರತಿಧ್ವನಿಯನ್ನು ಕೇಳಿ ಮತ್ತಷ್ಟು ಕೊಬ್ಬಿದವುಗಳಾಗಿ, ತಮ್ಮ ಗರ್ಜನೆಯನ್ನು ಇನ್ನೂ ಮೇಲೆಮೇಲೆ ಹೆಚ್ಚಿಸುತ್ತಿರುವುವು ಆ ಪರ್ವತದಲ್ಲಿಯೇ ದೇವತೆಗಳು ಪಾಕಶಾಸನನಾದ ಮಹೇಂದ್ರನಿಗೆ ದೇವರಾಜ್ಯದಲ್ಲಿ ಪಟ್ಟಾಭಿಷೇಕವನ್ನು ಮಾಡಿದರು ಆ ಪರ್ವತಕ್ಕೆ ಮೇಘುವಂತವೆಂದು ಹೆಸರು ನೀವು ದೇವೇಂದ್ರಪರಿಪಾಲಿತವಾದ ಆ ಪರ್ವತವನ್ನೂ ದಾಟಿಹೋದರೆ, ಅದರಮುಂದೆ ಬಾಲಸೂರ್ಯವರ್ಣವುಳ್ಳುದಾಗಿಯೂ, ತೇಜಸ್ಸಿನಿಂದ ಜಾಜ್ವಲ್ಯಮಾನವಾಗಿಯೂ, ಪುಷ್ಪಿತಗಳಾದ ಸುವರ್ಣವೃಕ್ಷಗಳಿಂದ ಶೋಭಿತವಾಗಿಯೂ ಇರುವ ಮತ್ತೊಂದು ಪರ್ವತಸಮೂಹವು ಕಾಣುವುದು ಸುವರ್ಣಮಯಗಳಾದ ಅರುವತ್ತುಸಾವಿರಬೆಟ್ಟಗಳು ಆ ಸಮೂಹದಲ್ಲಿ ಅಡಗಿರುವುವು ಆ ಪರ್ವತಗಳ ನಡುವೆ ಸಮಸ್ತಪರ್ವತಗಳಿಗೂ ರಾಜನಾಗಿ, ಸರ್ವೋತ್ತಮವೆನಿಸಿಕೊಂಡ ಸಾವರ್ಣಿಮೇರುವೆಂಬ ದೊಡ್ಡ ಪರ್ವತವೊಂದಿರುವುದು ಪೂರ್ವದಲ್ಲಿ ಸೂರ್ಯನು ಆ ಪರ್ವತಕ್ಕೆ ಪ್ರಸನ್ನನಾಗಿ ಅದನ್ನು ನೋಡಿ " ಎಲೆ ಪರ್ವತರಾಜನೇ ! ನಿನ್ನಲ್ಲಿರುವ ತರುಗುಲ್ಮಲತಾದಿಗಳೂ, ಇತರ ಸಮಸ್ತವಸ್ತುಗಳೂ ಅಹೋರಾತ್ರವೂ ಸ್ವರ್ಣಮಯವಾಗಿಯೇ ಬೆಳಗುವಂತೆ, ನಾನು ಅನುಗ್ರಹಿಸಿರುವೆನು ಮತ್ತು ನಿನ್ನಲ್ಲಿ ವಾಸಮಾಡುವ ದೇವಗಂಧರ್ವದಾನವಾದಿಗಳೂಕೂಡ, ರಕ್ತವರ್ಣವುಳ್ಳವರಾಗಿ ಸುವರ್ಣಪ್ರಭೆಯಿಂದ ಕೂಡಿ

ರಲಿ' " ಎಂದು ವರವನ್ನು ಕೊಟ್ಟಿರುವನು ವಿಶ್ವೇದೇವತೆಗಳೂ ಸಪ್ತ ಮರುತ್ತುಗಳೂ, ಅಷ್ಟವಸುಗಳೂ, ಇತರ ದೇವತೆಗಳೂ ಸಾಯಂಕಾಲದಲ್ಲಿ ಈಪರ್ವತಕ್ಕೆ ಬಂದು, ಇಲ್ಲಿ ಸೂರ್ಯೋಪಸ್ಥಾನವನ್ನು ಮಾಡಿಹೋಗುವರು ಸೂರ್ಯನೂ ಅವರ ಪೂಜೆಯನ್ನಂಗೀಕರಿಸಿದಮೇಲೆಯೇ ಅಸ್ತಗಿರಿಯನ್ನು ಹೊಂದಿ ಸಮಸ್ತಭೂತಗಳಿಗೂ ಅದೃಶ್ಯನಾಗುವನು ಆ ಸಾವರ್ಣಿಮೇರು ವಿಗೂ, ಅಸ್ತಗಿರಿಗೂ ಹತ್ತುಸಾವಿರ ಯೋಜನಗಳ ದೂರವಿರುವುದು ಈ ಹತ್ತುಸಹಸ್ರಯೋಜನಗಳನ್ನೂ ಸೂರ್ಯನು ಒಂದುಗಳಿಗೆಯ ಕಾಲದೊಳ ಗಾಗಿ ದಾಟಿ ಅಸ್ತಗಿರಿಯನ್ನು ಸೇರುವನು ಸಾವರ್ಣಿಮೇರುವಿನ ತಿಖರದಲ್ಲಿ ವಿಶ್ವಕರ್ಮನಿರ್ಮಿತವಾದ ಒಂದುದೊಡ್ಡ ದಿವ್ಯಭವನವಿರುವುದು ಅದು ಸೂ ರ್ಯನಂತೆಯೇ ಜಾಜ್ವಲ್ಯಮಾನವಾಗಿರುವುದು ಉಪ್ಪರಿಗೆಗಳ ಸಮೂಹದಿಂದ ಅತಿಸುನೋಹರವಾಗಿರುವುದು ಚಿತ್ರವಿಚಿತ್ರಗಳಾಗಿ ಅನೇಕಪಕ್ಷಿಸಮೂ ಹಗಳಿಂದ ತುಂಬಿದ ವೃಕ್ಷಸಮೂಹದಿಂದ ಶೋಭಿತವಾಗಿರುವುದು. ಪಾಶಹಸ್ತನಾದ ಮಹಾತ್ಮನಾದ ವರುಣನಿಗೆ ಅದೇ ವಾಸದ ಮನೆಯು ಸಾವರ್ಣಿಮೇರುಪರ್ವತಕ್ಕೂ, ಅಸ್ತಗಿರಿಗೂ ನಡುವೆ ಹತ್ತು ತಿಖರಗಳುಳ್ಳ ದಾಗಿಯೂ, ಚಿತ್ರವರ್ಣವಾದ ವೇದಿಕೆಯುಳ್ಳದಾಗಿಯೂ ಇರುವ ಸುವ ರ್ಣಮಯವಾದ ದೊಡ್ಡ ತಾಳೆಯನುರವೊಂದಿರುವುದು ಧರ್ಮಜ್ಞನಾಗಿ ಯೂ, ತಪಸ್ಸಿನಿಂದ ಲೋಕಪೂಜ್ಯನಾಗಿಯೂ, ಬ್ರಹ್ಮಸಮಾನನಾಗಿಯೂ ಇರುವ ಮೇರುಸಾವರ್ಣಿಯೆಂಬ ಮಹಾತಪಸ್ವಿಯು ಅದರಲ್ಲಿ ವಾಸಮಾ ಡುತ್ತಿರುವನು ಇಂತಹ ಮಹಾವೈಭವವುಳ್ಳ ಆ ಸಾವರ್ಣಿಮೇರುಪರ್ವತ ದಲ್ಲಿ, ನೀವು ಅಲ್ಲಿನ ಸಮಸ್ತದುರ್ಗಪ್ರದೇಶಗಳನ್ನೂ, ಕೊಳಗಳನ್ನೂ, ನದಿ ಗಳನ್ನೂ ಚೆನ್ನಾಗಿ ಸುತ್ತಿ ರಾವಣನನ್ನೂ, ಸೀತೆಯನ್ನೂ ಹುಡುಕಬೇಕು ನೀವು ಆ ಪರ್ವತವನ್ನು ಪ್ರವೇಶಿಸಿದೊಡನೆ ಅಲ್ಲಿ ಸೂರ್ಯನಂತೆ ಪ್ರಕಾಶಿಸು ತ್ತಿರುವ ಮೇರುಸಾವರ್ಣಿಮಹರ್ಷಿಗೆ ತಲೆಬಗ್ಗಿ ನಮಸ್ಕರಿಸಿ, ಆತನನ್ನೂ ಸೀತಾದೇವಿಯ ವೃತ್ತಾಂತವನ್ನು ಕುರಿತು ವಿಚಾರಿಸಬೇಕು, ಸೂರ್ಯನು ರಾ ತ್ರಿಯಲ್ಲಿ ಅಸ್ತಂಗತನಾಗಿ ಪ್ರಾತಃಕಾಲದಲ್ಲಿ ಉದಿಸಿದಮೇಲೆ, ಉದ ಯಪರ್ವತದಿಂದ ಇದುವರೆಗೆ ಹೇಳಿದ ಅಸ್ತಗಿರಿಯವರೆಗಿನ ಪ್ರದೇಶಗಳಲ್ಲಿ

ಮಾತ್ರವೇ,ಕತ್ತಲೆಯನ್ನು ನೀಗಿಸಿ ಪ್ರಕಾಶವುಂಟುಮಾಡಿ ಆ ಅಸ್ತಗಿರಿಯಲ್ಲಿ ಯೇ ಸೇರಿಬಿಡುವನು ಎಲ್ಲೆ ವಾನರೋತ್ತಮರೆ! ಅದುವರೆಗೆ ಮಾತ್ರವೇ ನಿ ಮಗೆ ಸಂಚರಿಸಿಬರುವುದಕ್ಕೆ ಸಾಧ್ಯವು ಅದರಿಂ ಾಚೆಗೆ ಸೂರ್ಯಸಂಚಾರವಿಲ್ಲ ದೆ, ಕತ್ತಲೆಕವಿದು, ನಗರಗ್ರಾಮಗಳೇ ಮೊದಲಾದ ಎಲ್ಲಗಳೂ ಇಲ್ಲ ದುದರಿಂದ,ಅಲ್ಲಿ ಏನಿರುವುದೋ ನನಗೆ ತಿಳಿಯಲಾರದು ನೀವು ಅಸ್ತಗಿರಿಯ ವರೆಗೆ ಮಾತ್ರಹೋಗಿ ಸೀತೆಯನ್ನೂ,ರಾವಣನ ಸ್ಥಲವನ್ನೂ ಕಂಡುಹಿಡಿದು, ಇನ್ನೊಂದು ತಿಂಗಳೊಳಗಾಗಿ ಇಲ್ಲಿಗೆ ಹಿಂತಿರುಗಿಬಂದು ಸೇರಬೇಕು ಒಂ ದು ತಿಂಗಳಿಗೆ ಮೇಲ ನಿಲ್ಲಕೂಡದು ಅಷ್ಟರಲ್ಲಿ ಹಿಂತಿರುಗಿಬಾರದವ ರು ನನ್ನಿಂದ ಮರಣದಂಡನೆಗೆ ಪಾತ್ರರಾಗುವರು ನಿಮ್ಮೊಡನೆ ನನ್ನ ಮಾ ವನಾದ ಸುಷೇಣನು ಬರುವನು ನೀವು ಇವನ ಆಜ್ಞೆಗೆ ಬದ್ಧರಾಗಿ ಅವನು ಹೇಳಿದಂತೆ ನಡೆದುಕೂಳ್ಳಬೇಕು' ವಾನರೋತ್ತಮನಾಗಿಯೂ ಪೂಜ್ಯನಾಗಿ ಯೂ ಇರುವ ಈ ಸುಷೇಣನು,ಎಣೆಯಿಲ್ಲದ ಬಲವುಳ್ಳವನಾಗಿ ಮಹಾಭುಜ ನೆಂಬ ಖ್ಯಾತಿಯನ್ನು ಹೊಂದಿರುವನು ನೀವೂ ಬಹಳಪರಾಕ್ರಮವುಳ್ಳವ ರು ನೀವೆಲ್ಲರೂ ಕಲತು ಮುಂದಿನಕಾರ್ಯಗಳ ವ್ಯವಸ್ಥೆಯನ್ನು ಮಾಡಿಕೂ ಳ್ಳಬೇಕು ಮುಖ್ಯವಾಗಿ ನೀವು ಈ ಸುಷೇಣನನ್ನು ನಿಮಗೆ ಮುಂದಾಳಾಗಿ ಟ್ಟುಕೊಂಡು, ಅವನ ಆಜ್ಞೆಗೆ ವಿಧೇಯರಾಗಿ ಈ ಪಶ್ಚಿಮದಿಕ್ಕಿನಲ್ಲಿ ಸೀತೆಯ ನ್ನೂ, ರಾವಣನನ್ನೂ ಹುಡುಕಿಬರಬೇಕು ರಾಮಪತ್ನಿಯಾದ ಆ ಸೀತೆಯ ನ್ನು ನೀವು ಹೇಗಾದರೂ ಕಂಡು ಹಿಡಿದು ಹಿಂತಿರುಗಿಬಂದರೆ, ಆಗ ರಾಮ ನು ನಮಗೆ ಮಾಡಿದ ಉಪಕಾರಕ್ಕೆ ನಾವೂ ತಕ್ಕ ಪ್ರತ್ಯುಪಕಾರವನ್ನು ಮಾ ಡಿದಂತಾಗುವುದು ಆಗಲೇ ನಾವು ಕೃತಾರ್ಥರಾಗುವೆವು ಎಲ್ಲೆ ವಾನರ ರೇ! ಇದುವರೆಗೆ ನಾನು ಹೇಳಿದುದು ಮಾತ್ರವಲ್ಲದೆ, ಇನ್ನೂ ನಿಮ್ಮ ಕಾರ್ಯ ಕ್ಕೆ ಸಾಧಕವಾದ ಬೇರಯಾವಮಾರ್ಗವಾದರೂ ಇದ್ದರೆ, ಅದನ್ನೂ ನೀವು ಚೆನ್ನಾಗಿ ವಿಮರ್ಶಿಸಿ,ದೇಶಕಾಲಗಳನ್ನೂ, ಕಾರ್ಯಾಕಾರ್ಯಗಳನ್ನೂ ಪರಿತೀಲಿ ಸಿ ನಡೆದುಕೂಳ್ಳಬೇಕು"ಎಂದನು. ಹೀಗೆ ಯುಕ್ತಿಯುಕ್ತವಾದ ಸುಗ್ರೀವನ ಆಜ್ಞೆಯನ್ನು ಸುಷೇಣನೇ ಮೊದಲಾದ ವಾನರರೆಲ್ಲರೂ ಗೌರವದಿಂದ ಪ್ರ

ತಿಗ್ರಹಿಸಿ, ಆತನ ಅನುಮತಿಯನ್ನು ಪಡೆದು ವರುಣಪಾಲಿತವಾದ ಪಶ್ಚಿಮದಿಕ್ಕಿಗೆ ಹೊರಡಲು ಸಿದ್ಧರಾದರು ಇಲ್ಲಿಗೆ ನಾಲ್ವತ್ತೆರಡನೆಯ ಸರ್ಗವು

ಶತಬಲಿ ಮೊದಲಾದ ವಾನರರನ್ನು ಉತ್ತರದಿಕ್ಕಿಗೆ ಕಳುಹಿಸಿದುದು

ಧರ್ಮಜ್ಞನಾಗಿಯೂ, ಕಪಿರಾಜನಾಗಿಯೂ ಇರುವ ಸುಗ್ರೀವನು, ಹೀಗೆ ತನ್ನ ಮಾವನಾದ ಸುಷೇಣನನ್ನು ಪಶ್ಚಿಮದಿಕ್ಕಿಗೆ ಹೋಗುವಂತೆ ಪ್ರಾರ್ಥಿಸಿ ಕಳುಹಿಸಿದಮೇಲೆ, ಶತಬಲಿಯೆಂಬ ಮತ್ತೊಬ್ಬ ಯೂಥಪತಿಯನ್ನು ನೋಡಿ, ತನಗೆ ಶ್ರೇಯಸ್ಕರವಾಗಿಯೂ, ರಾಮನಿಗೆ ಹಿತಕರವಾಗಿಯೂ ಇರುವ ಮಾತುಗಳಿಂದ "ಎಲೈ, ವೀರನೆ! ನೀನು, ನಿನ್ನಂತಯೇ ಬಲಯುಕ್ತರಾದ ಲಕ್ಷವಾನರರೊಡಗೂಡಿ, ಯನುಪುತ್ರರಾದ ನಿನ್ನ ಮಂತ್ರಿಗಳನ್ನೂ ಸಂಗಡಲೇ ಕರೆದುಕೊಂಡು, ಈಗಲೇ ಪ್ರಯಾಣಮಾಡಬೇಕು ನೀವಲ್ಲರೂ ವಿಶಾಲವಾಗಿಯೂ ಹಿಮವತ್ಪರ್ವತಶ್ರೇಣಿಗಳಿಂದಲಂಕೃತವಾಗಿಯೂ ಇರುವ ಉತ್ತರದಿಕ್ಕಿಗೆಹೋಗಿ, ಅಲ್ಲಿ ರಾಮಪತ್ನಿಯಾದ ಸೀತೆಯನ್ನು ಹುಡುಕಿಬರಬೇಕು ಎಲೈ ವಾನರರೆ! ನೀವು ಕಾರ್ಯಸ್ವರೂಪವನ್ನು ಬಲ್ಲವರಲ್ಲಿ ಮೇಲೆನಿಸಿಕೊಂಡಿರುವವರಾದುದರಿಂದ,ನೀವು ಈ ಕಾರ್ಯಸಿದ್ಧಿಯನ್ನು ಹೊಂದಿ ಸೀತೆಯನ್ನು ತಂದು ರಾಮನಿಗೊಪ್ಪಿಸಿದ ಪಕ್ಷದಲ್ಲಿ, ನಾವೆಲ್ಲರೂ ಋಣಮುಕ್ತರಾಗಿ ಕೃತಾರ್ಥರಾಗುವೆವು ಮಹಾತ್ಮನಾದ ರಾಮನು ಮೊದಲೇ ನಮಗೆ ಉಪಕಾರವನ್ನು ಮಾಡಿರುವನು ಅದಕ್ಕೆ ತಕ್ಕಂತೆ ನಾವೂ ಅವನಿಗೆ ಪ್ರತ್ಯುಪಕಾರವನ್ನು ಮಾಡಿ, ಅವನ ಮನಸ್ಸಿಗೆ ಸಂತೋಷವನ್ನುಂಟುಮಾಡಿದ ಹೊರತು ನಮ್ಮ ಜನ್ಮವು ಸಾರ್ಥಕವಾಗಲಾರದು ಮೊದಲು ನಮಗೆ ಯಾವುದೊಂದುಪಕಾರವನ್ನೂ ಮಾಡದಿದ್ದರೂ, ನಮ್ಮಲ್ಲಿ ಕಾರ್ಯಾರ್ಥಿಗಳಾಗಿ ಬಂದವರ ಕೋರಿಕೆಯನ್ನು ಈಡೇರಿಸಿ ಕೊಡುವುದರಿಂದ ನಮ್ಮ ಜನ್ಮವೇ ಸಾರ್ಥಕವಾಗುವುದು ಹೀಗಿರುವಾಗ ನಮಗೆ ಮೊದಲು ಉಪಕಾರಮಾಡಿದವನೇ ತನ್ನ ಕಾರ್ಯವನ್ನು ನೆರವೇರಿಸಬೇಕೆಂದು ಕೇಳಿಕೊಳ್ಳುವಾಗ, ಪ್ರತ್ಯುಪಕಾರರೂಪವಾಗಿಯಾದರೂ ಅವನಕಾರ್ಯವನ್ನು ಈಡೇರಿಸಿಕೊಡುವುದರಿಂದ ನಾವು ಕೃತಾರ್ಥರಾಗುವೆವೆಂಬುದನ್ನು ಹೇಳಬೇಕಾದುದೇನು?

ನೀವು ನಮಗೆ ಪ್ರಿಯವನ್ನೂ, ಹಿತವನ್ನೂ ಕೋರುವವರಾದುದರಿಂದ, ಪ್ರ್ಯ ತ್ಯುಪಕಾರರೂಪವಾದ ಈ ಕಾರ್ಯಕ್ಕೆ ಮನಃಪೂರ್ವಕವಾಗಿ ಪ್ರಯತ್ನಿಸಿ, ಸೀತೆಯನ್ನು ಕಂಡುಹಿಡಿಯುವವಿಷಯದಲ್ಲಿ ಸಾಧ್ಯವಾದಷ್ಟು ಸಾಹಸವನ್ನು ಮಾಡಬೇಕು ಪರಂತಪನಾಗಿ ಪುರುಷೋತ್ತಮನೆನಿಸಿಕೊಂಡ ಈ ರಾಮ ನಾದರೋ ಸಮಸ್ತಭೂತಗಳಿಗೂ ಪೂಜ್ಯನು ನಮ್ಮಲ್ಲಿಯೂ ವಿಶೇಷಪ್ರೀ ತಿಯುಳ್ಳವನು. ಆದುದರಿಂದ ಇವನ ಕಾರ್ಯವನ್ನು ನಾವು ಮುಖ್ಯವಾಗಿ ನೆರವೇರಿಸಬೇಕು ನೀವು ಈ ಉತ್ತರದಿಕ್ಕಿಗೆ ಹೊರಟು, ಅಲ್ಲಿರುವ ಮ್ಲೇಚ್ಛ, ಪುಳಿಂದ, ಶೂರಸೇನ, ಪ್ರಸ್ಥಲಗಳೆಂಬ ದೇಶಗಳನ್ನೂ, ಇಂದ್ರಪ್ರಸ್ಥಾದಿ ಭರತ ದೇಶಗಳನ್ನೂ, ದಕ್ಷಿಣಕುರುದೇಶವನ್ನೂ, ಮದ್ರ,ಕಾಂಭೋಜ ಯವ ನ ಶಕದೇಶಗಳನ್ನೂ, ಆರಟ್ಟಕ. ಬಾಹ್ಲೀಕ, ಋಷಿಕ, ಪಾರವ, ಟಂಬಣ ಜೀನ, ಪರಮಜೀನ, ವಿಹಾರ, ದರದಗಳೆಂಬ ದೇಶಗಳನೂ, ಹಿಮವತ್ಪರ್ವ ತವನ್ನೂ, ಸುತ್ತಿನೋಡಿ, ಆಮೇಲೆ ಅಲ್ಲಿನ ದುರ್ಗಮಾರಣ್ಯಗಳನ್ನೂ ನದಿಗ ಳನ್ನೂ, ಇತರಪರ್ವತಗಳನ್ನೂ ನಿಮ್ಮ ಪರಾಕ್ರಮದಿಂದಲೂ, ಬುದ್ಧಿಚಾ ತುರ್ಯದಿಂದಲೂ ಸಂಪೂರ್ಣವಾಗಿ ಪರಿಶೋಧಿಸಿನೋಡಬೇಕು ಅಲ್ಲಿನ ಲೋ ಧ್ರಕ, ಪದ್ಮಕ, ದೇವದಾರು ಮುಂತಾದ ಮರಗಳ ತೋಪುಗಳಲ್ಲಿಯೂ ಸೀ ತಾದೇವಿಯನ್ನೂ ರಾವಣನಿವಾಸವನ್ನೂ ಹುಡುಕಿನೋಡಿರಿ ! ಅಲ್ಲಿಂದಾಚೆ ಗೆ ದೇವಗಂಧರ್ವಸೇವಿತವಾದ ಸೋಮಾಶ್ರಮಕ್ಕೆಹೋಗಿ, ಅಲ್ಲಿಂದ ಮುಂ ದೆ ದೊಡ್ಡ ತಪ್ಪಲುಗಳಿಂದೊಪ್ಪುತ್ತಿರುವ ಕಾಳಪರ್ವತವನ್ನು ಸೇರಬಹು ದು. ಆ ಪರ್ವತದಲ್ಲಿ ವಿಶಾಲವಾದ ಗುಹೆಗಳೂ ಕಂದರಗಳೂ ಬಹಳವಾಗಿ ರುವುವು ಅವುಗಳನ್ನೆಲ್ಲಾ ಬಿಡದೆ ಸುತ್ತಿ, ಮಹಾಭಾಗೆಯಾದ ಸೀತೆಯನ್ನು ಕಂಡು ಹಿಡಿಯಬೇಕು ಬಂಗಾರದ ಗನಿಗಳಿಂದ ತುಂಬಿದ ಆ ಪರ್ವತೇಂದ್ರ ವನ್ನೂ ದಾಟಿ ಹೋದರೆ,ನಿಮಗೆ ಸುದರ್ಶನವೆಂಬ ಮತ್ತೊಂದು ಪರ್ವತವು ಸಿಕ್ಕುವುದು ಅದನ್ನೂ ಅತಿಕ್ರಮಿಸಿಹೋದರೆ ಪಕ್ಷಿಗಳಿಗೆ ಮುಖ್ಯನಿವಾಸ ವಾದ ದೇವಸಖವೆಂಬ ಪರ್ವತವು ಕಾಣಿಸುವುದು ಅದರಲ್ಲಿ ಬಗೆಬಗೆಯ ಪಕ್ಷಿಗಳು ತುಂಬಿರುವುವು ಬಗೆಬಗೆಯ ವೃಕ್ಷಗಳೂ ಶೋಭಿಸುತ್ತಿರುವುವು. ಆ ಪರ್ವತದ ವನಸಮೂಹಗಳಲ್ಲಿಯೂ, ಗಿರಿನದಿಗಳಲ್ಲಿಯೂ, ಗುಹೆಗಳಲ್ಲಿ

ಯೂ ಸುತ್ತಿ, ಅಲ್ಲಲ್ಲಿ ಸೀತೆಯನ್ನೂ ರಾವಣನನ್ನೂ ಹುಡುಕಬೇಕು ಆ ಪರ್ವತವನ್ನೂ ದಾಟಿದಮೇಲೆ, ನಾಲ್ಕು ಕಡೆಗಳಲ್ಲಿಯೂ ನೂರುಯೋಜನದ ಗಲವುಳ್ಳ ಶೂನ್ಯಪ್ರದೇಶವೊಂದಿರುವುದು ಅಲ್ಲಿ ಪರ್ವತಗಳಾಗಲಿ, ನದಿಗಳಾಗಲಿ, ವೃಕ್ಷಗಳಾಗಲಿ ಕಾಣುವುದಿಲ್ಲ ಅಲ್ಲಿ ಯಾವುದೊಂದು ಪ್ರಾಣಿಯೂ ಇರುವುದಿಲ್ಲ ಮಹಾಭಯಂಕರವಾಗಿ ನಡುಕವನ್ನು ಹುಟ್ಟಿಸುವಂತಿರುವ ಆ ಶೂನ್ಯಾರಣ್ಯವನ್ನು ನೀವು ತೀಘ್ರದಲ್ಲಿಯೇ ದಾಟಿಬಿಡಬೇಕು ಅಲ್ಲಿಂದ ಮುಂದ ಅತಿಥವಳವಾಗಿ ಪ್ರಕಾಶಿಸುವ ಕೈಲಾಸಪರ್ವತವು ಕಾಣಿಸುವುದು ಅದನ್ನು ನೋಡಿದಾಗಲೇ ನಿಮಗೆ ಅತ್ಯಾಹ್ಲಾದವುಂಟಾಗುವುದು ಆ ಪರ್ವತದಲ್ಲಿ ಚಿನ್ನದ ಕಲಸಗಳಿಂದಲಂಕೃತವಾಗಿ ಬೆಳ್ಮೇಘದಂತಿರುವ ಕುಬೇರನ ದಿವ್ಯಭವನವಿರುವುದು ವಿಶ್ವಕರ್ಮನೇ ಅದನ್ನು ನಿರ್ಮಿಸಿರುವನು ಮತ್ತು ಅಲ್ಲಿ ತಾವರೆಗೊಳಗಳಿಂದ ತುಂಬಿದ ವಿಸ್ತಾರವಾದ ಒಂದು (ಮಾನಸ) ಸರೋವರವುಂಟು ಅದರಲ್ಲಿ ಹಂಸಕಾರಂಡವಾದಿಪಕ್ಷಿಗಳು ಅಸಂಖ್ಯಾತವಾಗಿರುವುವು ಅಪ್ಸರಸ್ತ್ರೀಯರು ಗುಂಪುಗುಂಪಾಗಿ ಅಲ್ಲಿಗೆ ಬಂದು ಅದರಲ್ಲಿ ವಿಹರಿಸುತ್ತಿರುವರು ಆ ಕೈಲಾಸದಲ್ಲಿ ವಿಶ್ರವಸ್ಸಿನ ಕುಮಾರನಾಗಿ ಯಕ್ಷರಾಜನೆನಿಸಿಕೊಂಡ ಕುಬೇರನು, ಸಮಸ್ತ ಭೂತಗಳಿಂದಲೂ ಭಕ್ತಿಯಿಂದ ಸೇವಿತನಾಗಿ ಯಕ್ಷರೊಡನೆ ವಿಹರಿಸುತ್ತಿರುವನು ನೀವು ಆ ಪರ್ವತಕ್ಕಹೋಗಿ, ಅಲ್ಲಿ ಚಂದ್ರನಂತೆ ಬೆಳುಪಾದ ಅದರ ಸಮೀಪಪರ್ವತಗಳಲ್ಲಿಯೂ, ಗುಹೆಗಳಲ್ಲಿಯೂ ಪ್ರವೇಶಿಸಿ, ಅಲ್ಲಲ್ಲಿ ಸೀತಾದೇವಿಯನ್ನೂ ರಾವಣನ ವಾಸಸ್ಥಳವನ್ನೂ ಹುಡುಕಿಬರಬೇಕು ಅದರಿಂದಾಚೆಗೆ ನಿಮಗೆ ಕ್ರೌಂಚಪರ್ವತವು ಸಿಕ್ಕುವುದು ಅದರಲ್ಲಿ ಷಣ್ಮುಖನು ತನ್ನ ಬಾಣದಿಂದ ಕೊರೆದಿಟ್ಟಿರುವ ಬಹಳ ದುರ್ಗಮವಾದ ಒಂದು ಮಹಾಬಿಲವುಂಟು ನೀವು ಬಹಳ ಎಚ್ಚರಿಕೆಯಿಂದ ಆ ಬಿಲದಲ್ಲಿ ಪ್ರವೇಶಿಸಿ ನೋಡಬೇಕು ಅಲ್ಲಿ ಸ್ವಲ್ಪ ಮಾತ್ರವೂ ಪ್ರಮಾದದಿಂದಿರಕೂಡದು ಅದನ್ನು ಪ್ರವೇಶಿಸುವುದು ಬಹಳಕಷ್ಟವು ಆ ಬಿಲದಲ್ಲಿ ಸೂರ್ಯನಂತೆ ಕಾಂತಿಯಿಂದ ಬೆಳಗುತ್ತ, ಸಮಸ್ತದೇವತೆಗಳಿಗೂ ಪೂಜ್ಯರಾದ ಮಹಾಮೆಹಮೆಯುಳ್ಳ ಕೆಲವು ಮಹರ್ಷಿಗಳು ದೇವಸ್ವರೂಪದಿಂದ ವಾಸಮಾಡುತ್ತಿರುವರು 'ಇದರಿಂದಲೇ ಅಲ್ಲಿ

ಇತರರು ಪ್ರವೇಶಿಸುವುದು ಕಷ್ಟವು ನೀವು ಆ ಕ್ರೌಂಚಪರ್ವತದಲ್ಲಿಯೂ ಅಲ್ಲಿನ ಗುಹೆಗಳಲ್ಲಿಯೂ, ತಪ್ಪಲುಗಳಲ್ಲಿಯೂ, ಶಿಖರಗಳಲ್ಲಿಯೂ, ಕಂದರ ಗಳಲ್ಲಿಯೂ, ಆ ಪರ್ವತದ ಮಧ್ಯಪ್ರದೇಶಗಳಲ್ಲಿಯೂ ಅಲ್ಲಲ್ಲಿ ತಿರುಗಿ ಸೀತಾ ದೇವಿಯನ್ನು ಹುಡುಕಿಬರಬೇಕು ಕ್ರೌಂಚಪರ್ವತದ ಪ್ರಧಾನಶಿಖರವ ನ್ನೂ, ವೃಕ್ಷರಹಿತವಾದ ಕಾಮಪರ್ವತವನ್ನೂ, ಪಕ್ಷಿಗಳಿಗಾಶ್ರಯಸ್ಥಾನ ವಾದ ಮಾನಸಪರ್ವತವನ್ನೂ ಚೆನ್ನಾಗಿ ಸುತ್ತಿ ಹುಡುಕಿಬರಬೇಕು ಆ ಮಾನಸಪರ್ವತಕ್ಕೆ ಸಾನೂನ್ಯಜಂತುಗಳುಮಾತ್ರವೇ ಅಲ್ಲದೆ, ದೇವದಾನ ವರಾಕ್ಷಸಾದಿಗಳುಕೂಡ ಪ್ರವೇಶಿಸಲಾರರು ಆದರೂ ಅದರಸುತ್ತಿನ ಭೂಪ್ರದೇಶಗಳನ್ನೂ, ಸಮೀಪದ ತಿಟ್ಟುಗಳನ್ನೂ, ಮೇಲಿನ ಪ್ರದೇಶಗಳ ನ್ನೂ ನೀವಲ್ಲರೂ ಸಾಹಸದಿಂದ ಹುಡುಕಿಬರಬೇಕು ಕ್ರೌಂಚಪರ್ವತದಿಂ ದಾಚೆಗೆ ಮೈನಾಕಪರ್ವತವಿರುವುದು ಅದರಮೇಲ ಮಯನೆಂಬ ದಾನ ವನು ತನ್ನ ಮನೆಯನ್ನು ಕಟ್ಟಿಕೊಂಡಿರುವನು ಆ ಪರ್ವತದ ಸಾನುಗಳಲ್ಲಿ ಯೂ, ಮಧ್ಯಪ್ರದೇಶಗಳಲ್ಲಿಯೂ, ಗುಹೆಗಳಲ್ಲಿಯೂ ಸುತ್ತಿನೋಡಬೇಕು ಮತ್ತು ಅಲ್ಲಿ ಕಿಂಪುರುಷಸ್ತ್ರೀಯರ ವಾಸಸ್ಥಾನಗಳುಂಟು ಅಲ್ಲಿಯೂ ನೀ ವು ಚೆನ್ನಾಗಿ ನೋಡಿ ಬರಬೇಕು ಆಪರ್ವತವನ್ನೂ ದಾಟಿಹೋದರ ಸಿದ್ಧ ಸೇವಿತವಾದ ಒಂದು ಪುಣ್ಯಾಶ್ರಮವು ಕಾಣುವುದು ಅಲ್ಲಿ ಅಣಿಮಾದ್ಯಷ್ಟೈಶ್ವರ್ಯಸಿದ್ಧಿಯನ್ನು ಪಡೆದವರಾಗಿಯೂ, ತಪಸ್ಸಂಪನ್ನರಾಗಿಯೂ ಇರುವ ವೈಖಾನಸರೂ, ವಾಲಖಿಲ್ಯರೂ ವಾಸಮಾಡುತ್ತಿರುವರು ತಮ್ಮ ತಪೋ ಬಲದಿಂದಲೇ ಅಷ್ಟೈಶ್ವರ್ಯಸಿದ್ಧಿಯನ್ನು ಪಡೆದು ಪಾಪರಹಿತರಾದ ಆ ಮಹಾತ್ಮರಿಗೆ ನೀವು ಅವಶ್ಯವಾಗಿ ನಮಸ್ಕರಿಸಬೇಕು ಅವರನ್ನು ನಮಸ್ಕ ರಿಸಿ, ವಿನಯಪೂರ್ವಕವಾಗಿ ಸೀತಾದೇವಿಯ ವೃತ್ತಾಂತವನ್ನು ವಿಚಾ ರಿಸಬೇಕು ಆ ಆಶ್ರಮದಲ್ಲಿಯೇ ವೈಖಾನಸವೆಂಬ ಒಂದು ಸರೋವರ ವಿರುವುದು ಅದು ಸುವರ್ಣಕಮಲಗಳಿಂದ ತುಂಬಿ, ಅನೇಕಹಂಸ ಗಳಿಗಾಶ್ರಯವಾಗಿ ಬಾಲಸೂರ್ಯನಂತೆ ಪ್ರಕಾಶಿಸುತ್ತಿರುವುದು ಕು ಬೇರನಿಗೆ ಪಟ್ಟದಾನೆಯಾದ ಸಾರ್ವಭೌಮವೆಂಬ ದಿಗ್ಗಜವು,ತನ್ನ ಹೆಣ್ಣಾನೆ

ಗಳೊಡಗೂಡಿ ಯಾವಾಗಲೂ ಅಲ್ಲಿ ವಿಹರಿಸುತ್ತಿರುವುದು *ಆ ಸರೋವರ ದಿಂದಾಚೆಗೆ ಆಕಾಶದಲ್ಲಿ ಚಂದ್ರಸೂರ್ಯರ ಸಂಚಾರವಾಗಲಿ, ನಕ್ಷತ್ರಸಂ ಚಾರವಾಗಲಿ ಸ್ವಲ್ಪಮಾತ್ರವೂ ಇಲ್ಲ ಅಲ್ಲಿ ಮೇಘಗಳೂ ಸಂಚರಿಸುವು ದಿಲ್ಲ ಅದು ನಿಶ್ಚಬ್ದವಾಗಿ ಶೂನ್ಯವಾಗಿರುವುದು ಆದರೆ ಅಲ್ಲಿ ಚಂದ್ರಸೂರ್ಯ ಸಂಚಾರವಿಲ್ಲದಿದ್ದರೂ, ದೇವಸಮಾನರಾಗಿಯೂ, ಸ್ವತಸ್ಸಿದ್ಧಜ್ಞಾನವುಳ್ಳ ವರಾಗಿಯೂ, ತಪಸ್ಸಿದ್ಧರಾಗಿಯೂ ಇರುವ ಮಹಾಯೋಗಿಗಳು ವಿಶ್ರಮಿಸಿ ಕೊಂಡಿರುವರಾದುದರಿಂದ, ಅವರ ದೇಹಕಾಂತಿಯಿಂದಲೇ ಸೂರ್ಯಕಿರಣ ದಿಂದ ಹೇಗೋಹಾಗೆ ಆ ಪ್ರದೇಶವೆಲ್ಲವೂ ಯಾವಾಗಲೂ ಬೆಳಗುತ್ತಿರುವು ದು ಆ ಪ್ರದೇಶವನ್ನೂ ದಾಟಿಹೋದರೆ ಮುಂದೆ ಶೈಲೋದೆಯೆಂಬ ಒಂ ದು ನದಿಯಿರುವುದು ಆ ನದಿಯ ಎರಡುತೀರಗಳಲ್ಲಿಯೂ ಯಾವಾಗಲೂಗಾ ಳಿಯಿಂದ ಶಬ್ದಿಸುತ್ತಿರುವ ಕೀಚಕಗಳೆಂಬ ಬಿದಿರಿನ ಮೆಳೆಗಳು ಒಂದಕ್ಕೊಂ ದು ಹೆಣೆದಿಟ್ಟಂತೆ ಸೇರಿ ದಟ್ಟವಾಗಿ ಬೆಳೆದಿರುವುದರಿಂದ,ಅಲ್ಲಿನ ಸಿದ್ಧರು ಆ ವುಗಳ ಮೇಲೆಯೇ ಏರಿ, ಆ ನದಿಯ ಒಂದು ಪಾರ್ಶ್ವದಿಂದ ಮತ್ತೊಂದು ಪಾರ್ಶ್ವಕ್ಕೆ ಬಹಳ ಸುಲಭವಾಗಿ ಹೋಗಿಬರುತ್ತಿರುವರು ಅದರಿಂದಾಚೆಗೆ ಪುಣ್ಯಾತ್ಮರಿಗೆ ವಾಸಸ್ಥಾನವಾದ ಉತ್ತರಕುರುದೇಶವಿರುವುದು ಆ ಪ್ರದೇ ಶವು, ಪುಣ್ಯವನ್ನು ಮಾಡಿದವರು ತಮ್ಮ ಪುಣ್ಯಫಲವನ್ನನುಭವಿಸುವುದಕ್ಕಾ ಗಿಯೇ ಹುಟ್ಟಿದ ಭೂಮಿಯಾದುದರಿಂದ, ಅಲ್ಲಿ ಸುವರ್ಣಕಮಲಗಳಿಂದ

---

* ಮುಂದೆ, ''ಹಿಮವಂತಂಚ ಮೇರುಂಚ, ಸಮುದ್ರಂಚ ತಥೋತ್ತರಂ'' ಎಂಬುವಾಗಿ ಸುಗ್ರೀವನಮಾತಿನಿಂದ ವ್ಯಕ್ತವಾಗುವುದರಿಂದ, ಇಲ್ಲಿ ಆ ಮೇರುವಿನ ಪ್ರಸಕ್ತಿಯೇ ಇಲ್ಲವಂಬುದಕ್ಕಾಗಿ ಭ್ರಮಿಸಕೂಡದು ಮಹಾಮೇರುವಿನ ಪಕ್ಕದ ಇಳಾವೃತಪ್ರದೇಶಗಳನ್ನೇ ಇಲ್ಲಿ ತಿಳಿಸಿದುದಾಗಿ ಗ್ರಾಹ್ಯವು.

''ಯಾವತ್ಪರಸ್ತಾತ್ ತಪತಿ ತಾವತ್ಪ್ಲಕ್ಷೇಚಪಾರ್ಶ್ವಯೋ । ಋತೇಹೇಮಗಿರೇರ್ಮೇರೋರುಪರಿ ಬ್ರಹ್ಮಣಸ್ಸಭಾಮ್॥ಇಂದು ವಿಷ್ಣುಪುರಾಣದಲ್ಲಿ ಹೇಳಿರುವಂ ತೆ, ಮೇರುವಿನ ಮುಂದೆಯೂ, ಹಿಂದೆಯೂ, ಪಕ್ಕಗಳಲ್ಲಿಯೂ ಚಂದ್ರಸೂರ್ಯಾದಿ ಗ್ರಹಗಳ ಗತಿಯು ನಿಯತವಾಗಿರುವುದರಿಂದ; ಆದರ ನಿಕಟಪ್ರದೇಶಗಳಲ್ಲಿ ಅವರ ಕಿರ ಣಗಳ ಪ್ರಸಾರವಿಲ್ಲವು ಆದರಿಂದಲೇ ಇಲ್ಲಿ ಆಕಾಶಕ್ಕೆ ಚಂದ್ರಸೂರ್ಯಪ್ರಕಾಶವಿಲ್ಲ ವೆಂದು ತಿಳಿಸಲ್ಪಟ್ಟಿರುವುದು

ಲೂ, ನೀಲವೈಡೂರ್ಯವರ್ಣದ ತಾವರೆ ಬಳ್ಳಿಗಳಿಂದಲೂ ಅಲಂಕೃತವಾಗಿ, ಸಮೃದ್ಧವಾದ ನೀರುಳ್ಳ ನದಿಗಳು ಸಾವಿರಾರುಸಂಖ್ಯೆಯಿಂದ ಪ್ರವಹಿಸುವುವು ಆ ಉತ್ತರಕುರುದೇಶದ ಕೊಳಗಳೆಲ್ಲವೂ, ಸುವರ್ಣಮಯಗಳಾಗಿ ಸೂರ್ಯನಂತೆ ಹೊಳೆಯುತ್ತಿರುವ ರಕ್ತೋತ್ಪಲವನಗಳಿಂದಲಂಕೃತಗಳಾಗಿರುವುವು ಮತ್ತು ಆ ಪ್ರದೇಶವು, ಸುತ್ತಲೂ ನೀಲಮಣಿಯಂತಿರುವ ಎಲೆಗಳಿಂದಲೂ, ಚಿನ್ನದ ಕೇಸರಗಳಿಂದಲೂ ಕೂಡಿ ಚಿತ್ರಪಿಚಿತ್ರಗಳಾದ ನೀಲೋತ್ಪಲವನಗಳಿಂದ ಅತಿಮನೋಹರವಾಗಿರುವುದು ಎಣೆಯಿಲ್ಲದ ಮುತ್ತಿನಮಣಿಗಳೂ, ಬೆಲೆಬಾಳುವ ನವರತ್ನಗಳೂ, ಸುವರ್ಣಗಳೂ, ಪುಡಿಪುಡಿಯಾಗಿ ಉದುರಿ, ಅಲ್ಲಿನ ನದೀತೀರದ ಮಳಲುದಣ್ಣೆಗಳಾಗಿರುವುವು ರತ್ನಖಚಿತಗಳಾಗಿ, ವಿಚಿತ್ರವರ್ಣದಿಂದ ಶೋಭಿಸುವ ಅನೇಕಸ್ವರ್ಣಪರ್ವತಗಳು, ಅಲ್ಲಿನ್ನ ನದಿಗಳ ನೀರಿನ ನಡುವ, ಅಲ್ಲಲ್ಲಿ ಅಗ್ನಿಯಂತೆ ಜ್ವಲಿಸುತ್ತ ಗೋಚರಿಸುವುವು ಅಲ್ಲಿನ ವೃಕ್ಷಗಳು ಯಾವಾಗಲೂ ಪುಷ್ಪಫಲಗಳಿಂದ ತುಂಬಿ, ಪಕ್ಷಿಗಳಿಗೆ ಸುಖಾಶ್ರಯವಾಗಿ, ಸುತ್ತಲೂ ಸುವಾಸನೆಯನ್ನು ಹರಡಿಸಿ ಸೀಯಾದ ರಸವನ್ನು ಸುರಿಸುತ್ತಿರುವುವಲ್ಲದೆ, ಕೋರಿದ ಕೋರಿಕಗಳನ್ನೆಲ್ಲಾ ಕೊಡುವುವು ಕೆಲವು ಉತ್ತಮವೃಕ್ಷಗಳು, ಕೇಳಿದ ವಸ್ತ್ರಗಳನ್ನು ಕೊಡುವುವು ಮತ್ತೆ ಕೆಲವು, ಸ್ತ್ರೀಯರಿಗಾಗಲಿ ಪುರುಷರಿಗಾಗಲಿ ಅವರವರ ವೇಷಕ್ಕನುಗುಣವಾಗಿ ಮುತ್ತು ವೈಡೂರ್ಯದಿಂದ ವಿಚಿತ್ರಗಳಾದ ಆಭರಣಗಳನ್ನು ಕೊಡುವುವು ಅಲ್ಲಿನ ವೃಕ್ಷಗಳು ಸಮಸ್ತ ಋತುಗಳಿಗೂ, ಹಿತಕರವಾದ ವಸ್ತುಗಳನ್ನೇ ಫಲಿಸುವುವು ಮತ್ತೆ ಕಲವು ಗಿಡಗಳು ಬೆಲೆಯುಳ್ಳ ಚಿತ್ರವಿಚಿತ್ರಗಳಾದ ಸುವರ್ಣಾಭರಣಗಳನ್ನೇ ಫಲವಾಗಿ ಬಿಡುವುವು ಮತ್ತಕಲವು ವಿಚಿತ್ರಾಸ್ತರಣವುಳ್ಳ ಶಯನಗಳನ್ನು ಕೊಡುವುವು ಇನ್ನು ಕಲವುವೃಕ್ಷಗಳು ಅವರವರ ಮನಸ್ಸಿಗಿಂಪಾಗುವ ಪುಷ್ಪಮಾಲಿಕಗಳನ್ನು ಫಲಿಸುವುವು ಕಲವುಗಿಡಗಳು ಸರ್ವೋತ್ತಮಗಳಾದ ಪಾನರಸಗಳನ್ನೂ ವಿವಿಧಭಕ್ಷ್ಯಗಳನ್ನೂ ಫಲಿಸುವುವು ಸದ್ಗುಣಸಂಪನ್ನರಾಗಿ ರೂಪಯೌವನಗಳುಳ್ಳ ಸ್ತ್ರೀಯರನ್ನೇ ಕೆಲವು ವೃಕ್ಷಗಳು ತಮ್ಮ ಫಲರೂಪವಾಗಿ ಕೊಡುವುವು ಗಂಧರ್ವರೂ, ಕಿನ್ನರರೂ,ಸಿದ್ಧರೂ, ನಾಗರೂ,

ವಿದ್ಯಾಧರರೂ, ಅಲ್ಲಿ ತಮ್ಮತಮ್ಮ ಸ್ತ್ರೀಯರೊಡಗೂಡಿ ವಿಹರಿಸುತ್ತಾ, ಸೂರ್ಯತೇಜಸ್ಸುಳ್ಳವರಾಗಿರುವರು ಅಲ್ಲಿನವರೆಲ್ಲರೂ ಸುಕೃತಕರ್ಮವುಳ್ಳವರು ಎಲರೂಕ್ರೀಡಾರತರು ಎಲ್ಲರೂ ಕಾಮಾರ್ಥಗಳನ್ನು ಸಮೃದ್ಧವಾಗಿಪಡೆದು ಸ್ತ್ರೀಯರೊಡನೆ ವಿಹರಿಸುವರು ಅಲ್ಲಿ ಯಾವಾಗಲೂ, ಗಾನವಾದ್ಯ ಘೋಷಗಳೊಡನೆ ಅಟ್ಟಹಾಸದಿಂದ ನಗುವ ಧ್ವನಿಯು ಸಮಸ್ತಭೂತಗಳ ಮನಸ್ಸನ್ನಾಕರ್ಷಿಸುವಂತೆ ಕಿವಿಗೆ ಬೀಳುತ್ತಿರುವುದು ಆ ದೇಶದಲ್ಲಿ ಸಂತೋಷವಿಲ್ಲದವನಾಗಲಿ, ಪ್ರಿಯಪತ್ನಿಯಿಲ್ಲದವನಾಗಲಿ ಯಾವನೊಬ್ಬನೂ ಇಲ್ಲವು ಅಲ್ಲಿದ್ದವರಿಗೆ ಏನಾದರಿಕ್ಕೂ ಸರ್ವೋತ್ತಮಗಳಾದ ಸುಖೋಲ್ಲಾಸಾದಿಗುಣಗಳು ಹೆಚ್ಚುತ್ತಿರುವುವು ನೀವು ಆ ಪ್ರದೇಶವನ್ನೂ ದಾಟಿ ಹೋದರೆ,ಉತ್ತರಸಮುದ್ರವು ಸಿಕ್ಕುವುದು ಆ ಸಮುದ್ರಮಧ್ಯದಲ್ಲಿ ಸುವರ್ಣಮಯವಾದ ಸೋಮಗಿರಿಯೆಂಬ ದೊಡ್ಡಪರ್ವತವಿರುವುದು ವಿಷ್ಣುಲೋಕದಲ್ಲಿಯೂ, ಬ್ರಹ್ಮಲೋಕದಲ್ಲಿಯೂ, ಇಂದ್ರಲೋಕದಲ್ಲಿಯೂ ಇರುವ ದೇವತೆಗಳುಮಾತ್ರವೇ ಆ ಪರ್ವತವನ್ನು ನೋಡಬಲ್ಲರೇಹೊರತು ಇತರರಿಗೆ ಅದನ್ನು ನೋಡುವುದೇ ಸಾಧ್ಯವಲ್ಲ ಆ ಪರ್ವತದಲ್ಲಿ ಸೂರ್ಯಸಂಚಾರವಿಲ್ಲದಿದ್ದರೂ, ಸೂರ್ಯಸಂಚಾರವುಳ್ಳ ದೇಶಗಳಂತಯೇ ಪರ್ವತಪ್ರದೇಶವೆಲ್ಲವೂಕೂಡ ಆ ಪರ್ವತಕಾಂತಿಯಿಂದಲೇ ಬೆಳಗುತ್ತಿರುವುದು ಅಲ್ಲಿ ವಿಶ್ವಾತ್ಮಕನಾದ*ಭಗವಂತನೂ,ಏಕಾದಶರುದ್ರಸ್ವರೂಪವುಳ್ಳ ಶಿವನೂ, ದೇವದೇವನಾದ ಬ್ರಹ್ಮನೂ, ಈ ಮೂವರೂ ಅನೇಕಬ್ರಹ್ಮರ್ಷಿಗಳಿಂದ ಪರಿವೃತರಾಗಿ ವಾಸಮಾಡುತ್ತಿರುವರು ಆ ಉತ್ತರಕುರುದೇಶವಿಂದಾಚೆಗೆ ನೀವು ಎಷ್ಟುಮಾತ್ರವೂ ಹೋಗಕೂಡದು ದೈತ್ಯರೇ ಮೊದಲಾದ ವಿಶೇಷಶಕ್ತಿಯುಳ್ಳವರಿಗೂಕೂಡ ಅಲ್ಲಿಂದಾಚೆಗೆ ಹೋಗುವುದು ಸಾಧ್ಯವಲ್ಲ ಆ ಸೋಮಗಿರಿಗೆ ಪ್ರವೇಶಿಸಲು ದೇವತೆಗಳಿಗೂ ಶಕ್ಯವಲ್ಲ ಆ ಪರ್ವತವನ್ನು

---

* ಇಲ್ಲಿ ''ಭಗವಚ್ಛಬ್ದವು, ನಾರಾಯಣನಲ್ಲಿಯೇ ರೂಢವಾದುದರಿಂದ ಅದನ್ನು ವಿಷ್ಣುಪರವೆಂದೇ ಗ್ರಹಿಸಬೇಕು ''ಏವಮೇವ ಮಹಾರ್ಹ ಶಬ್ದೋ ಮೈತ್ರೇಯಭಗವಾನಿತಿ । ಪರಮಬ್ರಹ್ಮ ಭೂತಸ್ಯ ವಾಸುದೇವಸ್ಯನಾನ್ಯಗಃ" ॥ ಎಂದು ವಿಷ್ಣುಪುರಾಣ ವಚನವು.

ಕಣ್ಣಿಂದ ಮಾತ್ರನೋಡಿ ನೀವು ತೀಘ್ರದಲ್ಲಿಯೇ ಹಿಂತಿರುಗಿ ಬಿಡಬೇಕು. ಎಲ್ಲೈವೀರರ! ವಾನರರಾದ ನಿಮಗೆ ಇಷ್ಟುದೂರಕ್ಕೆ ಮಾತ್ರವೇ ಹೋಗಲು ಸಾಧ್ಯವು ಆಲ್ಲಿಂದಾಚೆಗೆ ಸೂರ್ಯನಲ್ಲ! ನಗರಗ್ರಾಮಾದಿವಿಭಾಗಗಳಿಲ್ಲ ಆಲ್ಲಿಂದಾಚೆಗೆ ಏನಿರುವುದೆಂಬುದನ್ನು ನಾವೂಬ್ಬರೂ ಕಾಣೆವು ನಾನು ಇದುವರೆಗೆ ಹೇಳಿದ ಪ್ರದೇಶಗಳಲ್ಲವನ್ನೂ ಚೆನ್ನಾಗಿ ಹುಡುಕಿಬರಬೇಕು ನಾನು ಹೇಳದೆ ಬಿಟ್ಟಿರುವ ಪ್ರದೇಶಗಳೇನಾದರೂ ನಿಮಗೆ ಕಂಡರೂ, ಅವುಗಳನ್ನುಕೂಡ ಹುಡುಕಿ ಬರುವ ಪ್ರಯತ್ನವನ್ನು ಮಾಡಬೇಕು ಎಲ್ಲೈ ವಾನರೋತ್ತಮರೆ! ನೀವೆಲ್ಲರೂ ವೇಗದಲ್ಲಿ ವಾಯುವಿಗೂ, ತೇಜಸ್ಸಿನಲ್ಲಿ ಅಗ್ನಿಗೂ ಸಮಾನರಾಗಿರುವರಿಂದ, ನಿಮ್ಮ ನಿಮ್ಮ ಶಕ್ತಿಯನ್ನು ಮೀರಿ, ಸಾಹಸದಿಂದ ಹುಡುಕಿ, ಸೀತೆಯನ್ನು ಕಂಡುಹಿಡಿದರೆ ರಾಘವನಿಗೆ ಪರಮಸಂತೋಷವನ್ನುಂಟು ಮಾಡಿದಂತಾಗುವುದಲ್ಲದೆ ನನಗೂ ಅದಕ್ಕಿಂತಲೂ ಹೆಚ್ಚು ಪ್ರಿಯವನ್ನು ಮಾಡಿದಂತಾಗುವುದು ನೀವು ಈ ಕಾರ್ಯದಲ್ಲಿನಮಾತ್ರ ಸಿದ್ಧಿಯನ್ನು ಪಡೆದು ಬಂದರೆ, ನಿಮ್ಮ ನಿಮ್ಮ ಇಷ್ಟಬಂಧುಗಳೊಡನೆ ನನ್ನಿಂದ ಪೂಜಿತರಾಗುವಿರಲ್ಲದೆ ನಿಮ್ಮ ಶತ್ರುಗಳನ್ನೂ ಅಡಗಿಸಿ, ನಿಮ್ಮ ಪತ್ನಿಯರೊಡಗೂಡಿ ಇತರ ಪ್ರಾಣಿಗಳನ್ನೂ ಪೋಷಿಸುತ್ತ, ಸುಖವಾಗಿ ಸನುಸ್ತಭೂಮಿಯನ್ನೂ ಸುತ್ತುತ್ತಿರಬಹುದು" ಎಂದನು ಇಲ್ಲಿಗೆ ನಾಲ್ವತ್ತುಮೂರನೆಯಸರ್ಗವು

ರಾಮನು ಗುರುತಿಗಾಗಿ ಹನುಮಂತನ ಕೈಗೆ ತನ್ನ ಉಂಗುರವನ್ನು ಕೊಟ್ಟುದು

ಹೀಗೆ ಸುಗ್ರೀವನು ಅನೇಕವಾನರವೀರರನ್ನು ಬೇರೆಬೇರೆದಿಕ್ಕುಗಳಿಗೆ ಕಳುಹಿಸಿದರೂ, * ಅವನಿಗೆ ವಿಶೇಷವಾಗಿ ಹನುಮಂತನಲ್ಲಿಯೇ ತನ್ನ ಕಾರ್ಯ

---

* ಇಲ್ಲಿ, "ವಿಶೇಷೇಣತು ಸುಗ್ರೀವೋ ಹನುಮತ್ಕರ್ಮಮುಕ್ತವಾನ್" ಎಂದು ಮೂಲವು ಇಲ್ಲಿ ವಿಶೇಷಶಬ್ದದಿಂದ ಸುಗ್ರೀವನು ಹನುಮಂತನಿಗೆ ಈ ರಾಮನೇ ವಿಷ್ಣುವೆಂಬ ವಿಶೇಷವನ್ನು ಉಪದೇಶಿಸಿದುದಾಗಿ ಗ್ರಾಹ್ಯವು ಇದೇ ವಿಷಯವನ್ನು ಕುರಿತು ನೃಸಿಹ್ಮಪುರಾಣದಲ್ಲಿ, ಸುಗ್ರೀವನು ಆಂಜನೇಯನನ್ನು ನೋಡಿ "ಅಯಮಿಕ್ಷ್ವಾಕುದಾಯಾದೋ ರಾಜಾ ರಾಮಃ ಪ್ರತಾಪವಾನ್ । ಸರ್ವಾತ್ಮಾ ಸರ್ವಲೋಕೇಶೋ ವಿಷ್ಣುರ್ಮಾನುಷರೂಪಧೃತ್" ಎಂದು ಹೇಳಿದುದಾಗಿ ವ್ಯಕ್ತಪಡಿಸಲ್ಪಟ್ಟಿದೆ

ಸಾಧನೆಯವಿಷಯದಲ್ಲಿ ಪೂರ್ಣವಾದ ನಂಬಿಕೆಯು ಹುಟ್ಟಿದ್ದುದರಿಂದ, ಸ
ಮಸ್ತಕಾರ್ಯಭರವನ್ನೂ ಅವನ ಮೇಲೆಯೇ ಹೊರಿಸಬೇಕೆಂದು ತೋರಿತು
ಆಗ ಕಪಿರಾಜನಾದ ಸುಗ್ರೀವನು, ಸಂತೋಷದಿಂದ ವಾಯುಕುಮಾರ
ನಾದ ಹನುಮಂತನನ್ನು ಕರದು ''ಎಲೈ ವಾನರೋತ್ತಮನೆ! ಅನೇಕ
ಶತ್ರುಗಳಿಂದ ತುಂಬಿದ ಈ ನೆಲದಲ್ಲಿಯಾಗಲಿ, ನಿರಾಶ್ರಯವಾದ ಅಂತ
ರಿಕ್ಷದಲ್ಲಿಯಾಗಲಿ, ವಾತಚಕ್ರದಿಂದ ದುರ್ಗಮನಾದ ಆಕಾಶದಲ್ಲಿಯಾ
ಗಲಿ, ಅತಿಪ್ರಬಲರಾದ ದೇವತೆಗಳಿರುವ ಸ್ವರ್ಗದಲ್ಲಿಯಾಗಲಿ, ನೀರಿನಲ್ಲಿ
ಯಾಗಲಿ, ನೀನು ತಡೆಯಿಲ್ಲದೆ ಸಂಚರಿಸತಕ್ಕ ಅದ್ಭುತಶಕ್ತಿಯುಳ್ಳವನು
ದೈತ್ಯಲೋಕವಾಗಲಿ, ಗಂಧರ್ವಲೋಕವಾಗಲಿ, ನಾಗಲೋಕವಾಗಲಿ,
ನರಲೋಕವಾಗಲಿ, ಇನ್ನೂ ಯಾವಯಾವಲೋಕಗಳುಂಟೋ ಆ ಲೋ
ಕಗಳಲ್ಲವೂ ನಿನಗೆ ತಿಳಿದಿರುವುವು ಸಮುದ್ರಪರ್ವತಸಹಿತಗಳಾದ ಸ
ಮಸ್ತಲೋಕಗಳನ್ನೂ ನೀನು ಕಂಡಿ-ಬಲ್ಲವನು ಎಲೆ ಮಹಾಕಪಿಯೆ! ನೀನು
ಗಮನಶಕ್ತಿಯಲ್ಲಿಯೂ, ವೇಗದಲ್ಲಿಯೂ, ತೇಜಸ್ಸಿನಲ್ಲಿಯೂ, ಲೋಕವಿ
ಖ್ಯಾತನಾದ ನಿನ್ನ ತಂದೆಯಾದ ವಾಯುದೇವನನ್ನೇ ಹೋಲುತ್ತಿರುವ ತೇ
ಜಸ್ಸಿನಲ್ಲಿ ನಿನಗೆಣೆಯಾದ ಭೂತವೊಂದಾದರೂ ಈ ಪ್ರಪಂಚದಲ್ಲಿಲ್ಲವು ಆ
ದುದರಿಂದ ಸೀತೆಯು ಲಭಿಸುವುದಕ್ಕೆ ತಕ್ಕ ಪ್ರಯತ್ನವನ್ನು ನೂಡಿ ನೀನೇ
ಕಾರ್ಯಸಿದ್ಧಿಯನ್ನು ಹೊಂದಿ ಬರಬೇಕು ಎಲೈ ಹನುಮಂತನೆ! ನಿನಗೆ ತಿಳಿ
ಯದ ನೀತಿಗಳಿಲ್ಲ ಬಲವೂ, ಬುದ್ಧಿಯೂ, ಪರಾಕ್ರಮವೂ ದೇಶಕಾಲಾನು
ಸರಣವೂ, ನ್ಯಾಯನೀತಿಗಳೂ,ನಿನ್ನೊಬ್ಬನಲ್ಲಿಯೇ ಸರಿಯಾಗಿ ಹೊಂದಿರು
ವುವು " ಎಂದನು ಆಗ ರಾಮನು ಹನುಮಂತನೊಡನೆ ಸುಗ್ರೀವನು ಹೇಳು
ತ್ತಿರುವ ಈ ಮಾತನ್ನು ಕೇಳಿ, ಸುಗ್ರೀವನು ಅವನಮೇಲೆಯೇ ಸಮಸ್ತ ಕಾ
ರ್ಯಭಾರವನ್ನೂ ಹೊರಿಸುತ್ತಿರುವುದನ್ನೂ ನೋಡಿ, ತನ್ನಲ್ಲಿ ತಾನು ''ಈ ಸು
ಗ್ರೀವನಾದರೋ ಕಾರ್ಯಸಾಧನೆಗೆ ಹನುಮಂತನೇ ತಕ್ಕವನೆಂದು ಸರ್ವವಿ
ಧದಲ್ಲಿಯೂ ನಿಶ್ಚಯಿಸಿಕೊಂಡಿರುವನು ಈ ಹನುಮಂತನೂಕೂಡ ನಿಶ್ಚಿತ
ಕಾರ್ಯವನ್ನು ಸಾಧಿಸುವ ವಿಷಯದಲ್ಲಿ ಹಿಂಜರಿಯದೆ ಕೊನೆಮುಟ್ಟಿಸತಕ್ಕವ
ನೆಂಬುದರಲ್ಲಿ ಸಂದೇಹವಿಲ್ಲ ಇದುವರೆಗೆ ಇವನು ಎಷ್ಟೋ ದೊಡ್ಡ ಕಾರ್ಯಗ

ಳನ್ನು ಸಾಧಿಸಿರುವುದರಿಂದಲೇ, ಇವನ ಶಕ್ತಿಯಲ್ಲಿ ಎಲ್ಲರಿಗೂ ನಂಬಿಕೆಯುಂಟು ಇದರಿಂದಲೇ ಸುಗ್ರೀವನೂಕೂಡ,ತಾನು ಕಪಿರಾಜನಾಗಿದ್ದರೂ, ಅವನನ್ನು ಬಹಳವಾಗಿ ಗೌರವಿಸಿ ಮಾತನಾಡುತ್ತಿರುವನು ಇಂತವನು ಪ್ರಯಾಣಮಾಡಿ ಹೊರಟಮೇಲೆ ನಮಗೆ ಕಾರ್ಯಸಿದ್ಧಿಯಾಗುವುದರಲ್ಲಿ ಎಷ್ಟು ಮಾತ್ರವೂ ಸಂದೇಹವಿರದು " ಎಂದು ನಿರ್ಧರಿಸಿಕೊಂಡು, ಆ ಮೇಲೆ ಆ ಹನುಮಂತನನ್ನು ನೋಡಿ, ಮನಸ್ಸಿನಲ್ಲಿಯೇ ಉಕ್ಕಿಬರುವ ಸಂತೋಷದಿಂದ ಹಿಗ್ಗುತ್ತ, ಆಗಲೇ ತಾನು ಕೃತಾರ್ಥನಾದಂತೆ ಎಣಿಸಿಕೊಂಡನು ಹೀಗೆ ಸಂತೋಷಪರವಶನಾದ ರಾಮನು ತಾನು ಕೈಯ್ಯಲ್ಲಿಟ್ಟಿದ್ದ ತನ್ನ ನಾಮಾಂಕಿತವಾದ * ಉಂಗುರವನ್ನು ತಗೆದು,ಸೀತೆಗೆ ಗುರುತಿಗಾಗಿ ಹನುಮಂತನಕೈಗೆ ಕೊಟ್ಟು, ''ಎಲ ಕಪಿಶ್ರೇಷ್ಠನೆ! ಒಂದುವೇಳ ಸೀತೆಯು ಮೊದಲು ನಿನ್ನನ್ನು ನೋಡುವಾಗ ಸಂದೇಹವನ್ನಾಗಲಿ, ಭಯವನ್ನಾಗಲಿ, ಹೊಂದಬಹುದು ಆದಕ್ಕವಕಾಶವಿಲ್ಲದಂತೆ ನೀನು ನನ್ನಕಡೆಯಿಂದ ಬಂದವನೆಂಬ ನಿರ್ಧರವನ್ನು ತೋರಿಸುವುದಕ್ಕಾಗಿ,ಈ ಉಂಗುರವನ್ನು ತೆಗೆದುಕೊಂಡು ಹೋಗು ಇದನ್ನು ನೋಡಿದೊಡನೆ ಆಕೆಯು ಸಂದೇಹವೂ, ಭಯವೂ ನೀಗುವುದು

---

* ಸಮಸ್ತಧನವನ್ನೂ ತ್ಯಜಿಸಿ ವನ್ಯವೃತ್ತಿಯಿಂದಿರುವ ರಾಮನಿಗೆ,ಈ ಉಂಗುರವೆಲ್ಲಿಯದು? ಎಂದರೆ, ರಾಮನು ಸಮಸ್ತವನ್ನೂ ತ್ಯಜಿಸಿ ಒಂದಿದ್ದರೂ, ಈ ಉಂಗುರವೊಂದನ್ನುಮಾತ್ರ ಬಚ್ಚಿಟ್ಟು, ಮುಂದಿನ ಕಾರ್ಯಾರ್ಥವಾಗಿ ತನ್ನೊಡನೆ ತಂದನೆಂದು ಗ್ರಾಹ್ಯವು ಇದರಿಂದಲೇ ಈಗ ರಾಮನು ಬರಳಿನಿಂದ ಉಂಗುರವನ್ನು ತೆಗೆದುಕೊಟ್ಟುದಾಗಿ ಹೇಳದೆ, ಸುಮ್ಮನೆ ಕೈಯಲ್ಲಿದ್ದ ಉಂಗುರವನ್ನು ಹನುಮಂತನ ಕೈಗೆ ಕೊಟ್ಟನೆಂದು ಹೇಳಲ್ಪಟ್ಟಿದೆ ಆಥವಾ ರಾಮನಾಮಾಂಕಿತವಾಗಿ ಸೀತೆಯು ಧರಿಸಿದ್ದ ಉಂಗುರವನ್ನು ರಾವಣನು ಬರುವುದಕ್ಕ ಮೊದಲೇ,ಒಮ್ಮೆ ರಾಮನು ಪ್ರಣಯನಶದಿಂದ ತೆಗೆದಿಟ್ಟುಕೊಂಡಿದ್ದನೆಂದೂ ಗ್ರಹಿಸಬಹುದು ಭಾರ್ಯೆಯರು ಸ್ನೇಹದಿಂದ ಯಾವಾಗಲೂ ಕೆರಬೆರಳಿನಲ್ಲಿ ಪತಿಯ ಉಂಗುರವನ್ನಿಡುವ ದೇಶಾಚಾರವುಂಟು ಅಥವಾ,ವಿವಾಹಕಾಲದಲ್ಲಿ ಜನಕನುವರನಿಗೆ ಅಲಂಕಾರಾರ್ಥವಾಗಿ,ಈ ಉಂಗುರವನ್ನು ಕೊಟ್ಟಿರಬಹುದೆಂದೂ ಎಣಿಸಬಹುದು ಮುಂದೆ ಸುಂದರಕಾಂಡದಲ್ಲಿ,''ಗೃಹೀತ್ವಾ ಪ್ರೇಕ್ಷಮಾಣಾ ಸಾಭರ್ತು ಕರವಿಭೂಷಣಂ ' ಎಂದು ಪತಿಯ ಹಸ್ತಭೂಷಣವನ್ನು ಸೀತೆಯು ಕೈಗೆ ತೆಗೆದುಕೊಂಡು ನೋಡಿದುದಾಗಿ ಹೇಳಲ್ಪಟ್ಟಿರುವುದರಿಂದ, ವರಾಲಂಕಾರ್ಥವಾಗಿ ಕೊಟ್ಟ ಈ ಅಂಗುಳೀಯಕವನ್ನು ರಾಮನು ಬಿಡಲಾರದೆ ತಂದಿದ್ದನೆಂದೂ ತೋರುವುದು

ಎಲ್ಲೆ ವೀರನೆ! ನಿನಗೆ ಈಗಿರುವ ಮಹೋತ್ಸಾಹವನ್ನೂ, ನಿನ್ನ ಬಲವನ್ನೂ, ನಿನ್ನ ಪರಾಕ್ರಮವನ್ನೂ, ಇದುವರೆಗೆ ಸುಗ್ರೀವನು ನಿನ್ನೊಡನೆ ಹೇಳಿದ ಮಾತಿನ ಕ್ರಮವನ್ನೂ ನೋಡಿದರೆ, ನಮಗೆ ತಪ್ಪದೆ ನಿನ್ನಿಂದ ಕಾರ್ಯಸಿದ್ಧಿಯಾಗುವುದೆಂಬುದನ್ನು ಸ್ಪಷ್ಟವಾಗಿ ಹೇಳುವಂತಿರುವುದು" ಎಂದನು ಆಗ ಹನುಮಂತನು, ಆ ಉಂಗುರವನ್ನು ಕೈಗೆ ತೆಗೆದುಕೊಂಡು, ಅದನ್ನು ವಿನಯದಿಂದ ತಲೆಯನ್ನೇರಿಸಿಕೊಂಡು, ರಾಮನ ಪಾದಗಳಿಗೆ ಪ್ರಣಾಮಮಾಡಿ, ಕೈಮುಗಿದು, ಅಗಲೇ ಅಲ್ಲಿಂದ ಹೊರಟನು ವೀರನಾದ ಆ ವಾಯುಕುಮಾರನನ್ನು ಅನೇಕವಾನರಸೈನ್ಯವೂ ಹಿಂಬಾಲಿಸಿ ಹೊರಟಿತು ಹೀಗೆ ಮಹತ್ತಾದ ಕಪಿಸೈನ್ಯದಿಂದ ಪರಿವೃತನಾದ ಹನುಮಂತನು, ಮೋಡವಿಲ್ಲದ ಆಕಾಶದಲ್ಲಿ ನಕ್ಷತ್ರಸಮೂಹದಿಂದ ಪರಿವೃತನಾದ ಚಂದ್ರಮಂಡಲದಂತೆ ಪ್ರಕಾಶಿಸುತಿದ್ದನು ಆಗ ಪುನಃ ರಾಮನು ಹನುಮಂತನನ್ನು ಕುರಿತು "ಎಲ್ಲೆ ಹನುಮಂತನೆ! ನೀನು ಮಹಾಬಲಾಢ್ಯನು ಸಿಹ್ಮದಂತೆ ಪರಾಕ್ರಮವುಳ್ಳವನು ಆದುದರಿಂದ ಈಗ ನಾವು ನಿನ್ನೊಬ್ಬನ ಬಲವನ್ನೇ ನಂಬಿರುವೆವು ಎಣೆಯಿಲ್ಲದ ನಿನ್ನ ಪರಾಕ್ರಮಗಳೆಲ್ಲವನ್ನೂ ತೋರಿಸಿ, ಸೀತೆಯು ಲಭಿಸುವಂತೆ ಪ್ರಯತ್ನವನ್ನು ಮಾಡಬೇಕು" ಎಂದನು ಇಲ್ಲಿಗೆ ನಾಲ್ವತ್ತುನಾಲ್ಕನೆಯಸರ್ಗವು

ವಾನರಸೈನ್ಯದ ಪ್ರಯಾಣಸನ್ನಾಹವು

ಹೀಗೆ ಸುಗ್ರೀವನು ಆ ವಾನರರೆಲ್ಲರನ್ನೂ ಕರೆದು, ರಾಮಕಾರ್ಯಸಿದ್ಧಿಗಾಗಿ ಅವರೆಲ್ಲರನ್ನೂ ಒಟ್ಟುಗೂಡಿಸಿ, ನಿಷ್ಪಕ್ಷಪಾತವಾಗಿ ಅವರೆಲ್ಲರಿಗೂ ಮುಂದೇ ಆಜ್ಞೆಯನ್ನು ಮಾಡುವವನಾಗಿ, ಅವರನ್ನು ಕುರಿತು "ಎಲ್ಲೆ ವಾನರರೇ! ನಾನು ಯಾರುಯಾರಿಗೆ ಯಾವಯಾವ ದಿಕ್ಕಿನಲ್ಲಿ, ಯಾವಯಾವ ರೀತಿಯಿಂದ ಹುಡುಕಿಬರಬೇಕೆಂದು ಹೇಳಿರುವೆನೋ, ಅವರವರು ಆಯಾದಿಕ್ಕುಗಳಲ್ಲಿ ಆಯಾಕ್ರಮಗಳಿಂದಲೇ ಹುಡುಕಬೇಕು" ಎಂದನು ಈ ಕ್ರೂರಾಜ್ಞೆಯನ್ನು ಕೇಳಿದೊಡನೆ ಸನುಸ್ತವಾನರರೂ ಮಿಡಿತೆಗಳಂತೆ, ಅಸಂಖ್ಯಾತವಾಗಿ ಸೇರಿ, ಸಮಸ್ತಭೂಮಿಯನ್ನೂ ವ್ಯಾಪಿಸುತ್ತ ಪ್ರಯಾಣವನ್ನು ಬಳೆಸಿದ

ರು ಇತ್ತಲಾಗಿ ರಾಮನು ಲಕ್ಷ್ಮಣನೊಡಗೂಡಿ ಪ್ರಸ್ರವಣಪರ್ವತದಲ್ಲಿ ಯೇ ವಾಸಮಾಡುತ್ತಿದ್ದು,ಸೀತಾನ್ವೇಷಣಕ್ಕಾಗಿ ವಾನರರಿಗೆ ನಿಯಮಿಸಲ್ಪ ಟ್ಟ ಒಂದುತಿಂಗಳ ಅವಧಿಯನ್ನು ಅತ್ಯಾತುರದಿಂದ ನಿರೀಕ್ಷಿಸುತಿದ್ದನು ಅತ್ತ ಲಾಗಿ ವೀರನಾದ ಶತಬಲಿಯು ಅನೇಕಪರ್ವತಗಳಿಂದ ತುಂಬಿದ ಉತ್ತರ ದಿಕ್ಕಿಗೆ ತನ್ನ ಪರಿವಾರಗಳೊಡನೆ ಹೊರಟನು ಕಪಿಯೂಥಪನಾದ ವಿನತ ನು ತನ್ನ ಪರಿವಾರಗಳೊಡನೆ ಪೂರ್ವಾಭಿಮುಖವಾಗಿ ಹೊರಟನು ವಾಯು ಪುತ್ರನಾದ ಹನುಮಂತನು, ತಾರಾಂಗದರೇ ಮೊದಲಾದ ವಾನರವೀ ರರೂಡನೆ ಅಗಸ್ತ್ಯತಿವಾಸವಾದ ದಕ್ಷಿಣದಿಕ್ಕಿಗೆ ಹೊರಟನು ಕಪೀಶ್ವರನಾ ಗಿರುವ ಸುಷೇಣನು ವರುಣನಿಂದ ಪಾಲಿತವಾಗಿ ಮಹಾಭಯಂಕರವಾದ ಪಶ್ಚಿಮದಿಕ್ಕನ್ನು ಕುರಿತು ಹೊರಟನು ಹೀಗೆ ಸುಗ್ರೀವನು ಪ್ರಮುಖರಾದ ವಾನರಸೇನಾಧಿಪತಿಗಳನ್ನು ಕ್ರಮವಾಗಿ ಆಯಾದಿಕ್ಕುಗಳಿಗೆ ಕಳುಹಿಸಿದಮೇ ಲೆಯೇ ಅವನ ಮನಸ್ಸಿಗೆ ನಮ್ಮ ದುಮುಂಟಾಯಿತು ಸುಗ್ರೀವಾಜ್ಞೆಗೆ ಬದ್ಧ ರಾದ ಕಪಿಯೂಥಪರೆಲ್ಲರೂ ತಮ್ಮ ತಮ್ಮ ದಿಕ್ಕನ್ನುಕುರಿತು ಅತಿವೇಗದಿಂ ದ ಹೊರಟರು ಅವರಲ್ಲಿ ಒಬ್ಬೊಬ್ಬರೂ ಮಹೋತ್ಸಾಹದಿಂದುಬ್ಬುತ್ತ, ''ನಾವೇ ರಾವಣನನ್ನು ಕೂಂದು,ನಾವೇ ಸೀತೆಯನ್ನು ತಂದುಬಿಡುವೆವು'' ಎಂದು ಹೆಮ್ಮೆಯನ್ನು ಕೂಚ್ಚಿಕೂಳ್ಳುತ್ತ,ಒಬ್ಬರಿಗೆಮೇಲೆ ಮತ್ತೊಬ್ಬರು ವೀರವಾದಗಳನ್ನು ಮಾಡುತಿದ್ದರು ಒಬ್ಬರಿಗೆಮೇಲೊಬ್ಬರು ಗರ್ಜಿಸಿಸಿಹ್ಮನಾ ದಗಳನ್ನು ಮಾಡುತಿದ್ದರು ಒಬ್ಬರಿಗಿಂತಲೂ ಮತ್ತೊಬ್ಬರು ವೇಗದಿಂದೋ ಡುತಿದ್ದರು ಹೀಗೆ ಮಹಾಬಲಾಢ್ಯರಾದ ವಾನರರಲ್ಲರೂ ಗರ್ಜನಶ್ವನಿಗ ಳೊಡನೆ ಹೋಗುವಾಗ,ಆ ಕಪಿಗಳಲ್ಲಿ ಒಬ್ಬೊಬ್ಬನೂ ವೀರವಾದವನ್ನು ಮಾ ಡತೊಡಗಿದನು ಅವರಲ್ಲಿ ಒಬ್ಬನು ''ನಾನೊಬ್ಬನೇ ಯುದ್ಧದಲ್ಲಿ ಇದಿರಾಗಿ ಬಂದ ರಾವಣನನ್ನು ಕೂಂದುಬರಬಲ್ಲೆನು'' ಎಂದನು ಅದನ್ನು ಕೇಳಿ ಮತ್ತೊಬ್ಬನು''ನಾನು ರಾವಣನನ್ನು ಕೂಲ್ಲುವುದುಮಾತ್ರವೇ ಅಲ್ಲ! ಈಗ ಲೂ ಅವನ ಮುಂದೆ ಸಂಕಟದಿಂದ ನಡುಗುತ್ತಿರುವ ಜನಕಪುತ್ರಿಯಾದ ಸೀತೆಯನ್ನೂ ನಿಮಿಷಮಾತ್ರದಲ್ಲಿ ತಂದೊಪ್ಪಿಸುವೆನು ನೀವಲ್ಲರೂ ಇಲ್ಲಿಯೇ ನಿಲ್ಲಿರಿ''ಎಂದನು ಆಗ ಮತ್ತೊಬ್ಬನು''ಪಾತಾಳದಲ್ಲಿದ್ದರೂ ನಾನೊಬ್ಬನೇಸೀ

ತೆಯನ್ನು ತಂದುಬಿಡುವೆನು ನಿಮ್ಮೆಲ್ಲರಿಗೂ ಇಷ್ಟುಶ್ರಮವೇಕೆ?" ಎಂದನು ಹಾಗೆಯೇ ಒಬ್ಬೊಬ್ಬವಾನರನೂ ಸ್ಪರ್ಧೆಯಿಂದ ಬಂದು ,,ನಾನು ಎಂತಹ ವೃಕ್ಷಗಳನ್ನಾದರೂ ಕಿತ್ತು ಬಿಸುಡಬಲ್ಲೆನು' ನಾನು ಬೆಟ್ಟಗಳನ್ನೂ ಉರಿಳಿಸುವೆನು' ನಾನು ಭೂಮಿಯನ್ನೇ ಭೇದಿಸುವೆನು' ನಾನು ಸಪ್ತಸಮುದ್ರಗಳನ್ನಾದರೂ ಕ್ಷೋಭಹೊಂದಿಸಬಲ್ಲೆನು" ಎಂದು ದರ್ಪವನ್ನು ಹೇಳುತಿದ್ದರು. ಆಗ ಮತ್ತೊಬ್ಬನು ,,ನಾನು ಒಂದು ಗಾವುದದ ದೂರಕ್ಕೆ ಹಾರಬಲ್ಲೆನು" ಎಂದು ತನ್ನ ಶಕ್ತಿಯನ್ನು ಹೇಳಿಕೊಂಡನು ಇದನ್ನು ಕೇಳಿ ಮತ್ತೊಬ್ಬನು ,,ನಾನು ನೂರುಗಾವುದಗಳ ದೂರವನ್ನು ಹಾರುವೆನು" ಎಂದನು ಅದನ್ನು ಕೇಳಿ ಮತೆ್ತಬ್ಬನು,,ನಾನು ಅದಕ್ಕಿಂತಲೂ ದೂರಕ್ಕೆಹಾರುವೆನು" ಎಂದನು ಇನ್ನೊಬ್ಬನು ನಿಮ್ಮ ಹಾರಾಟವೆಲ್ಲವೂ ಹಾಗಿರಲಿ, ,,ನೆಲದಲ್ಲಿಯಾಗಲಿ, ಜಲದಲ್ಲಿಯಾಗಲಿ, ಕಾಡಿನಲ್ಲಿಯಾಗಲಿ, ಬೆಟ್ಟದಲ್ಲಿಯಾಗಲಿ, ಕೊನೆಗೆ ಪಾತಾಳದ ಕೆಳಗಾಗಲಿ ನಾನು ತಡೆಯಿಲ್ಲದೆ ಸಂಚರಿಸಬಲ್ಲೆನು" ಎಂದನು ಹೀಗೆ ಬಲಗರ್ವಿತರಾದ ವಾನರರೆಲ್ಲರೂ ಸುಗ್ರೀವನ ಕಿವಿಗೆ ಬೀಳುವಂತೆ, ತಮ್ಮ ತಮ್ಮ ಹೆಮ್ಮೆಯನ್ನು ಹೇಳಿಕೊಳ್ಳುತ್ತ, ತಮ್ಮ ತಮ್ಮ ದಿಕ್ಕಿಗೆ ಪ್ರಯಾಣಮಾಡಿದರು ಇಲ್ಲಿಗೆ ನಾಲ್ವತ್ತೈದನೆಯ ಸರ್ಗವು

ಸುಗ್ರೀವನು, ಸಮಸ್ತಭೂಮಂಡಲವೂ ತನಗೆ ತಿಳಿದ ರೀತಿಯನ್ನು ರಾಮನಿಗೆ ಹೇಳಿದುದು

ವಾನರವೀರರೆಲ್ಲರೂ ಹೊರಟುಹೋದಮೇಲೆ, ರಾಮನು ಸುಗ್ರೀವನನ್ನು ಕುರಿತು ,,ನೀನು ಈ ಸಮಸ್ತಭೂಮಂಡಲವನ್ನೂ ಹೇಗೆ ಬಲ್ಲೆ?"ಎಂದನು ಆಗ ಸುಗ್ರೀವನು ರಾಮನಿಗೆ ಸಾಷ್ಟಾಂಗವಾಗಿ ನಮಸ್ಕರಿಸಿ,,ಎಲೈಪುರುಷೋತ್ತಮನೆ'ಆ ವೃತ್ತಾಂತವನ್ನು ವಿಸ್ತಾರವಾಗಿ ತಿಳಿಸುವೆನು ಕೇಳು *ಮಹಿ

---

* ಪೂರ್ವದಲ್ಲಿ ಮಾಯಾವಿಯು ವಾಲಿಯೊಡನೆ ಯುದ್ಧಕ್ಕೆ ಬಂದನೆಂದು ಮೊದಲು ಹೇಳಿರುವಾಗ,ಇಲ್ಲಿ ದುಂದುಭಿಯೆಂಬುದು ಹೇಗೆ?'' ಎಂಬಶಂಕೆಯುಂಟಾಗಬಹುದು ಇಲ್ಲಿನ ದುಂದುಭಿಶಬ್ದದಿಂದ ದುಂದುಭಿಯ ಮಗನಾದ ಮಾಯಾವಿಯೆಂದೇ ಗ್ರಾಹ್ಯವು ದುಂದುಭಿಯು ಮಹಿಷಾಕಾರನಾಗಿದ್ದುದರಿಂದ ಅವನ ಮಗನಾದ ಮಾಯಾ

ಷಾಕಾರದಿಂದಿದ್ದ ದುಂದುಭಿಯೆಂಬ ದಾನವನೂ, ಅವನ ಮಗನಾದ ಮಾಯಾವಿಯೂ, ವಾಲಿಯಮೇಲೆ ದಂಡೆತ್ತಿಬಂದಾಗ, ಅವನು ಅವರಿಬ್ಬರನ್ನೂ ಮಲಯಪರ್ವತದಗುಹೆಗೆ ಓಡಿಸಿಬಿಟ್ಟನು ಅವರನ್ನು ಕೊಲ್ಲುವುದಕ್ಕಾಗಿ ತಾನೂ ಆ ಗುಹೆಗೆ ಪ್ರವೇಶಿಸಿದನು ಆಗ ನನ್ನನ್ನು ಆ ಗುಹೆಯಬಾಗಿಲಲ್ಲಿಕಾವಲಿರುವಂತೆ ಹೇಳಿದನು ಒಂದು ಸಂವತ್ಸರವು ಕಳೆದರೂ ವಾಲಿಯು ಹೊರಗೆ

ವಿಯೂ ಮಹಿಷತ್ವದಿಂದಲೇ ನಿರ್ದೇತಿಸಲ್ಪಡುವನೆಂದು ಮಹೇಶ್ವರತೀರ್ಥರ ಸಮಾಧಾನವು. ಆದರೆ ದುಂದುಭಿಯೇ ಮಹಿಷಾಕಾರದಿಂದಿದ್ದನೇ ಹೊರತು ಮಾಯಾವಿಯು ಹಾಗಿದ್ದಂತೆ ಎಲ್ಲಿಯೂ ಹೇಳಲ್ಪಡಲಿಲ್ಲ ಈಗಲೂ, ಮುಂದೆಯೂ, ಆಗಾಗ ಮಹಿಷಶಬ್ದಗಳೇ ಇರುವುದರಿಂದ, ಇಲ್ಲಿನ ದುಂದುಭಿಶಬ್ದವು ರೂಹಿಷರೂಪಿಯಾದ ಆ ದುಂದುಭಿಯನ್ನು ನಿರ್ದೇತಿಸುವುದೇ ಹೊರತು ಮಾಯಾವಿಯನ್ನು ನಿರ್ದೇತಿಸದು ಮತ್ತು ರಾಮನಿಗೆ ತಿಳಿಸಿರುವ ಮಾಯಾವಿವಿಷಯವನ್ನೇ ತಿರುಗಿ ಇಲ್ಲಿಯೂ ಹೇಳುವುದು ಸಮಂಜಸವಲ್ಲ ಆದುದರಿಂದ ಇಲ್ಲಿ ದುಂದುಭಿವಿಷಯವೇ ಹೊರತು ಮಾಯಾವಿವಿಷಯವಲ್ಲವು, ಆದರೂ "ಮೊದಲು ಮಾಯಾವಿಯನ್ನು ಪರ್ವತಗುಹೆಗೆ ಓಡಿಸಿದುದಾಗಿಯೂ, ಈಗ ದುಂದುಭಿಯನ್ನೋಡಿಸಿದುವಾಗಿಯೂ ಹೇಳಿದುದು ಹೇಗೆ ಸಮಂಜಸವು?" ಎಂದರೆ ಪೂರ್ವದಲ್ಲಿ ಮಾಯಾವಿಯ ವೃತ್ತಾಂತವನ್ನೂ, ಈಗ ಮಹಿಷವೃತ್ತಾಂತವನ್ನೂ ಹೇಳಿರುವುದರಿಂದ ಮೊದಲು ಆ ಇಬ್ಬರೂ ಸೇರಿ ವಾಲಿಯನ್ನಿದಿರಿಸಿಗಬಹುದೆಂದು ಗ್ರಾಹ್ಯವು ಆಗ ಮಹಿಷಾಕಾರನಾದ ದುಂದುಭಿಯು ಏನೋ ಒಂದು ವಿಧದಿಂದ ತಲೆ ತಪ್ಪಿಸಿಕೊಂಡು ಬಿಲದಿಂದ ಹೊರಕ್ಕೆಬಂದು, ವುನಃ ಮೈತಿಳಿಯದೆ ವಾಲಿಯಮೇಲೆಯುದ್ಧಕ್ಕೆಬಂದು ಹತನಾಗಿರಬಹುದೆಂದೂ, ಆ ಮಾಯಾವಿಯುಮಾತ್ರ ಬಿಲದಲ್ಲಿಯೇ ಹತನಾದನೆಂದೂ ತಿಳಿಯಬೇಕು ಎರಡು ವಿಷಯಗಳೂ ಒಂದೇಕಾಲದಲ್ಲಿ ನಡೆದುದಾಗಿದ್ದರೂ, ಅವುಗಳಲ್ಲಿ ಒಂದನ್ನು ಮೊದಲು ಹೇಳಿ, ಆಮೇಲೆ ಪ್ರಸಕ್ತಿಯು ಬಂದಾಗ ಮತ್ತೊಂದನ್ನು ಹೇಳುವುದು ವಾಲ್ಮೀಕಿಯ ಸ್ವಭಾವವು ಸುಂದರಕಾಂಡದಲ್ಲಿ, ರಾವಣನು ಸೀತೆಗೆ ಹಾನಿಯನ್ನು ಮಾಡಲು ಉದ್ಯುಕ್ತನಾದಾಗ, ಮಂಡೋದರಿ, ಧಾನ್ಯಮಾಲಿ, ಎಂಬಿಬ್ಬರೂ ಏಕಕಾಲದಲ್ಲಿ ಬಂದು, ರಾವಣನನ್ನು ತಡೆದರೂ, ಅಲ್ಲಿ ಧಾನ್ಯಮಾಲಿಯೊಬ್ಬನನ್ನುಮಾತ್ರವೇ ಹೇಳಿ, ಆಮೇಲೆ ಹನುಮಂತನು ಲಂಕೆಯಿಂದ ಹಿಂತಿರುಗಿ ವಾನರರ ಬಳಿಗೆ ಬಂದು, ತಾನು ಹೋಗಿ ಬಂದವೃತ್ತಾಂತವನ್ನು ಅವರಿಗೆ ತಿಳಿಸುವಾಗ ಮಂಡೋದರಿಯ ವಿಷಯವನ್ನೆತ್ತಿ ಹೇಳಿರುವರು. ಇದರಿಂದ ಹೀಗೆ ಹೇಳುವುದೇ ವಾಲ್ಮೀಕಿಯ ಶೈಲಿಯೆಂದು ಗ್ರಾಹ್ಯವು.

ಬಾರಲಿಲ್ಲ ಇಷ್ಟರಲ್ಲಿ ರಕ್ತಪ್ರವಾಹವಿಂದ ಬಿಲವೆಲ್ಲವೂ ತುಂಬಿಹೋಯಿತು ಅದನ್ನು ನೋಡಿ ನನಗೆ ಆಶ್ಚರ್ಯವುಂಟಾಯಿತು ಆಗ ನಾನು'ಅಣ್ಣನೇನಾದ ನೋ' ಎಂಬ ದುಃಖದಿಂದ ವಿಷವನ್ನು ಕುಡಿದವನಂತೆ ತಬ್ಬಿಬ್ಬಾದೆನು ಅಣ್ಣನಾದ ವಾಲಿಯು ನಿಶ್ಚಯವಾಗಿ ಹತನಾದನೆಂದೇ ನನ್ನ ಬುದ್ಧಿಗೆ ತೋರಿತು ಮಹಿಷಾಕಾರನಾದ ಆ ದುಂದುಭಿಯಾದರೂ ಗುಹೆಯಿಂದ ಹೊರಗೆ ಬಾರದೆ ಅಲ್ಲಿಯೇ ಸಾಯಲೆಂದು, ನಾನು ಆ ಗುಹೆಯ ಬಾಗಿಲನ್ನು ಬೆಟ್ಟಗಳಂತಿರುವ ದೊಡ್ಡ ಬಂಡೆಗಳಿಂದ ಮುಚ್ಚಿ ಬಿಟ್ಟೆನು ಆಮೇಲೆ ನಾನು ಅಣ್ಣನ ಬದುಕಿನಲ್ಲಿ ನಿರಾಶೆಹೊಂದಿ, ಕಿಷ್ಕಿಂಧೆಗೆ ಬಂದು, ತಾರೆಯನ್ನೂ ರುಮೆಯನ್ನೂ ಹೊಂದಿ, ಆ ವಾನರರಾಜ್ಯವನ್ನೂ ಕೈಕೊಂಡೆನು ಆ ಕಿಷ್ಕಿಂಧೆಯಲ್ಲಿ ನನ್ನ ಮಿತ್ರರಿಂದ ಸೇವಿತನಾಗಿ ಭಯವಿಲ್ಲದೆ ಸುಖವಾಗಿದ್ದುಬಿಟ್ಟೆನು ಕಲವು ದಿನಗಳ ಮೇಲೆ ನನ್ನಣ್ಣನಾದ ವಾಲಿಯು ಮಾಯಾವಿಯನ್ನು ಕೊಂದು ಹಿಂತಿರುಗಿ ಬಂದನು ನನಗಾದರೋ ಮಿತಿಮೀರಿದ ಭಯವೂ ಆಶ್ಚರ್ಯವೂ ಉಂಟಾಯಿತು ಆಗಲೇ ನಾನು ಭಕ್ತಿಯಿಂದ ನನ್ನಣ್ಣನಿಗೆ ಆ ವಾನರರಾಜ್ಯವನ್ನು ಹಿಂತಿರುಗಿ ಕೊಟ್ಟುಬಿಟ್ಟೆನು ಆ ವಾಲಿಯು ದುಷ್ಟಾತ್ಮನಾದುದರಿಂದ, ನನ್ನಮೇಲೆ ಕೋಪಾವೇಶವನ್ನು ಹೊಂದಿ,ಮನಸ್ಸು ಕಲಗಿ, ನನ್ನನ್ನು ಕೊಲ್ಲಬೇಕೆಂದೇ ಎಣಿಸಿದನು ಇದನ್ನು ತಿಳಿದು ನಾನು ನನ್ನ ಮಂತ್ರಿಗಳೊಡಗೂಡಿ ಪಲಾಯನಮಾಡಿದೆನು ಆತನೂ ಕೋಪದಿಂದ ನನ್ನನ್ನು ಬೆನ್ನಟ್ಟಿ ಬಂದನು ಆ ವಾಲಿಯ ಭಯದಿಂದ ನಾನು ನನ್ನ ಮಂತ್ರಿಗಳೂಡಗೂಡಿ ಅನೇಕನದಿಗಳನ್ನೂ ಕಾಡುಗಳನ್ನೂ, ಪಟ್ಟಣಗಳನ್ನೂ ಸುತ್ತಿಸುತ್ತಿ ಓಡಿ ಹೋಗುತಿದ್ದೆನು ಆ ಸಂದರ್ಭದಲ್ಲಿಯೇ ನಾನು ಈ ಸಮಸ್ತಭೂಮಿಯನ್ನೂ ಒಂದು ಗೋಷ್ಪದದಂತೆ (ಗೋವಿನ ಹೆಜ್ಜೆ) ದಾಟಿ, ಕನ್ನಡಿಯಂತೆ ಸಮಸ್ತಪ್ರದೇಶಗಳನ್ನೂ ನೋಡುತ್ತ ಸುತ್ತಿ ಬಂದೆನು ಚಕ್ರವಾಳಪರ್ವತದಿಂದ ಪರಿವೃತವಾಗಿ, ಅದರೊಳಗಿನ ಗೈರಿಕಾದಿಧಾತುಗಳಿಂದ ಚಿತ್ರಿತವಾದ ವರ್ತುಲಾಕಾರವುಳ್ಳ ಈ ಸಮಸ್ತಭೂಮಿಯೂ ಒಂದು ಅಲಾತಚಕ್ರ (ಕೂಳ್ಳಿಯಚಕ್ರ) ದಂತೆ ನನಗೆ ಕಾಣಿಸಿತು ಆಮೇಲೆ ನಾನು ವಾಲಿಯಿಂದ ಓಡಿಸಲ್ಪಡುತ್ತಾ ಪೂರ್ವದಿಕ್ಕಿಗೆ ಹೋಗಿ, ಅಲ್ಲಿ ಬಗೆಬಗೆಯ ಮರ

ಗಳನ್ನೂ, ಪರ್ವತಗಳನ್ನೂ, ಮನೋಹರಗಳಾದ ನದಿಗಳನ್ನೂ, ವಿವಿಧ ಸರೋವರಗಳನ್ನೂ ನೋಡಿದೆನು ಗೈರಿಕಾದಿಧಾತುಗಳಿಂದ ಚಿತ್ರಿತವಾದ ಉದಯಪರ್ವತವನ್ನೂ ಕಂಡುಬಂದೆನು ಅಪ್ಸರಸ್ಸುಗಳಿಗೆ ನೆಲಯಾದ ಕ್ಷೀರೋದವಂಬ ಸಮುದ್ರವನ್ನೂ ನೋಡಿದೆನು ಅಲ್ಲಿಗೂ ವಾಲಿಯು ನನ್ನನ್ನು ಬಿಡದೆ ಬೆನ್ನಟ್ಟಿ ಓಡಿಸುತ್ತಿರಲು, ಪೂರ್ವದಿಕ್ಕಿನಿಂದ ಹಿಂತಿರುಗಿಬಿಟ್ಟೆನು ಆ ಲ್ಲಿಂದ ಹಿಂತಿರುಗಿ * ವಿಂಧ್ಯಪರ್ವತದ ವೃಕ್ಷಸಮೂಹಗಳಿಂದಲೂ, ಚಂದನ ವೃಕ್ಷಗಳ ಸಾಲುಗಳಿಂದಲೂ,ಮನೋಹರವಾದ ದಕ್ಷಿಣದಿಕ್ಕಿಗೆ ಓಡಿದೆನು ಅಲ್ಲಿಯೂ ಮತ್ತೆ ಕೆಲವುವನಗಳನ್ನು ನೋಡುತ್ತಾ ಮುಂದೆ ಮುಂದೆ ಓಡಿದೆನು ವಾಲಿಯು ಬೆಂಬಿಡದೆ ಬರುವುದನ್ನು ನೋಡಿ ಅಲ್ಲಿಂದ ಪಶ್ಚಿಮದಿಕ್ಕಿಗೆ ತಿರುಗಿದೆನು ಅಲ್ಲಿಯೂ ಅನೇಕದೇಶಗಳನ್ನು ನೋಡಿಕೊಂಡು, ಕೂನೆಗೆ ಪರ್ವತ ಶ್ರೇಷ್ಠವಾದ ಅಸ್ತಗಿರಿಯನ್ನೂ ಕಂಡೆನು ಅಲ್ಲಿಗೂ ವಾಲಿಯು ನನ್ನನ್ನು ಬೆನ್ನಟ್ಟಿಬಂದನು ಅಲ್ಲಿಂದ ನಾನು ಉತ್ತರದಿಕ್ಕಿಗೆ ಓಡಿದೆನು. ಅಲ್ಲಿ ಹಿಮವತ್ಪರ್ವತವನ್ನೂ, ಮೇರುಪರ್ವತವನ್ನೂ, ಉತ್ತರಸಮುದ್ರವನ್ನೂ ಕಂಡೆನು ಹೀಗೆ ಎಲ್ಲೆಲ್ಲಿಗೆ ಹೋದರೂ ವಾಲಿಯು ನನ್ನನ್ನು ಬಿಡದೆ ಬೆನ್ನಟ್ಟಿ ಬರುತಿದ್ದುದರಿಂದ, ನನಗೆ ರಕ್ಷಕನಾಗಲಿ, ಆಶ್ರಯಸ್ಥಳವಾಗಲಿ ಸಿಕ್ಕದುದಕ್ಕಾಗಿ,ಸಿಂತಕಡೆಯಲ್ಲಿ ನಿಲ್ಲದೆ ಓಡಿಹೋಗುತ್ತಿರಲು,ಆಗ ಬುದ್ಧಿವಂತನಾದ ಹನುಮಂತನು, ನನ್ನ ಕಷ್ಟವನ್ನು ನೋಡಿ ಮರುಕದಿಂದ, '' ಎಲೈ ವಾನರೇಂದ್ರನ ! ಪೂರ್ವದಲ್ಲಿ ಮತಂಗಮಹರ್ಷಿಯು ತನ್ನಾಶ್ರಮವನ್ನು ಕಡಿಸಿದುದಕ್ಕಾಗಿ ವಾಲಿಯನ್ನು ಶಪಿಸಿರುವನಲ್ಲವೆ?ಆ ಸ್ಥಳವು ಈಗ ನನ್ನ ಸ್ಮರಣೆಗೆ ಬಂದಿರುವುದು ವಾಲಿಯು ಮತಂಗಾಶ್ರಮಕ್ಕೆ ಪ್ರವೇಶಿಸಿದೊಡನೆ ಆ ಶಾಪದಿಂದ ಅವನ ತಲೆಯು ಸಹಸ್ರಭಾಗವಾಗಿ ಒಡೆದುಹೋಗುವುದು ಆದುದರಿಂದ ನಾವು ಆ ಆಶ್ರಮದಲ್ಲಿ ಸುಖವಾಗಿಯೂ, ನಿರ್ಭಯವಾಗಿಯೂ ಇರಬಹುದು " ಎಂದನು ರಾಮಾ!ಅದನ್ನು ಕೇಳಿದಕ್ಷಣವೇ ನಾನು ಈ ಋಶ್ಯಮೂಕಪರ್ವತ

---

* ಇಲ್ಲಿ ವಿಂಧ್ಯಪರ್ವತವೃಕ್ಷಗಳಿಂದ ಪ್ರಾಪ್ತವಾದ ದಕ್ಷಿಣದಿಕ್ಕಿನ ಪ್ರದೇಶವೆಂಬುದರಿಂದ, ಕಿಷ್ಕಿಂಧೆಯ ದಕ್ಷಿಣದಿಕ್ಕಿನಲ್ಲಿಯೂಕೂಡ ವಿಂಧ್ಯಪರ್ವತದ ಶೇಷವೊಂದಿರುವುದೆಂದು ತೋರುವುದು.

ಕ್ಕೆ ಬಂದು ಸೇರಿದೆನು ಮತಂಗಮುನಿಯ ಭಯದಿಂದ ವಾಲಿಯು ಇಲ್ಲಿಗೆ ಬರಲಾರದೆ ಹೋದನು ರಾಮಾ ! ನಾನು ಈ ವ್ಯಾಜದಿಂದಲೇ ಸಮಸ್ತ ಭೂಮಂಡಲವನ್ನೂ ಸುತ್ತಿಬಂದು, ಆಲ್ಲಲ್ಲಿನ ವಿಷಯಗಳೆಲ್ಲವನ್ನೂ ಪ್ರತ್ಯಕ್ಷವಾಗಿ ನೋಡಿ, ಕೂನೆಗೆ ಈಪರ್ವತದ ಗುಹೆಯಲ್ಲಿ ಅವಿತುಕೊಂಡೆನು" ಎಂದನು ಇಲ್ಲಿಗೆ ನಾಲ್ವತ್ತಾರನೆಯ ಸರ್ಗವು

ದಕ್ಷಿಣದಿಕ್ಕಿಗೆ ಹೋದ ಹನುಮದಾದಿಗಳು ಹೊರತು, ಬೇರೆ ದಿಕ್ಕುಗಳಿಗೆ ಹೋದ ಕಪಿಸೈನಿಕರೆಲ್ಲರೂ ಹಿಂತಿರುಗಿ ಬಂದುದು

ಅತ್ತಲಾಗಿ ಸುಗ್ರೀವನಿಂದಾಜ್ಞಾಪ್ತರಾದ ಕಪಿಯೂಥಪರೆಲ್ಲರೂ, ಅವನು ಹೇಳಿದ್ದ ರೀತಿಯಲ್ಲೆಯೇ ಆಯಾದಿಕ್ಕುಗಳಿಗೆ ಹೋಗಿ ಅಲ್ಲಲ್ಲಿನ ಕೊಳಗಳಲ್ಲಿಯೂ, ನದಿಗಳಲ್ಲಿಯೂ, ಪರ್ಣಶಾಲೆಗಳಲ್ಲಿಯೂ, ಗಿಡುಬಳ್ಳಿಗಳಲ್ಲಿಯೂ, ಪೊದೆಗಳಲ್ಲಿಯೂ, ಬಯಲುಗಳಲ್ಲಿಯೂ, ಪಟ್ಟಣಗಳಲ್ಲಿಯೂ ಸೀತೆಯನ್ನು ಹುಡುಕುತ್ತಿದ್ದರು ನದಿಗಳಿಂದ ದುರ್ಗಮಗಳಾದ ಪ್ರದೇಶಗಳಲ್ಲಿಯೂ ಪ್ರವೇಶಿಸಿನೋಡಿದರು ಅನೇಕಪರ್ವತಗಳನ್ನೂ ಹುಡುಕಿ ಬಂದರು ಹೀಗೆ ಸುಗ್ರೀವನಿಂದಾಜ್ಞಾಪ್ತನಾದ ಒಬ್ಬೊಬ್ಬವಾನರಯೂಥಪನೂ ಪರ್ವತಾರಣ್ಯಗಳೇ ಮೊದಲಾದ ಸಮಸ್ತಪ್ರದೇಶಗಳನ್ನೂ ಚೆನ್ನಾಗಿ ಹುಡುಕಿದನು ಒಬ್ಬೊಬ್ಬರಿಗೂ ಸೀತೆಯನ್ನು ಕಂಡು ಹಿಡಿಯಬೇಕೆಂದು ಮನಃಪೂರ್ವಕವಾದ ಆತುರವಿತ್ತು ಒಬ್ಬೊಬ್ಬರೂ ಹಗಲಲ್ಲಿ ಬೇರೆಬೇರೆಯಾಗಿ ಹೊರಟು ಅಂತರಿಕ್ಷಸಂಚಾರಿಗಳಾಗಿ ಸುತ್ತಿಸುತ್ತಿ ಹುಡುಕಿ,ರಾತ್ರಿಕಾಲಗಳಲ್ಲಿ ಎಲ್ಲರೂ ಭೂಮಿಯಲ್ಲಿ ಒಂದಾಗಿ ಸೇರುತ್ತಿದ್ದರು ಆ ವಾನರರು ಹೀಗೆ ಒಂದುತಿಂಗಳವರೆಗೆ ಪ್ರತಿದಿನವೂ ಹಗಲಲ್ಲಿ ಆಯಾಸ್ಥಳಗಳಲ್ಲಿ ಸೀತೆಯನ್ನು ಹುಡುಕಿ, ರಾತ್ರಿಕಾಲಗಳಲ್ಲಿ ಸಾರ್ವರ್ತುಕಗಳಾದ ಹೂಗಿಡಗಳ ಕೆಳಗೆ ಒಂದಾಗಿ ಸೇರಿ ಮಲಗುತ್ತಿದ್ದರು ರಾಮಕಾರ್ಯಾರ್ಥವಾಗಿ ಹೊರಟ ಆ ವಾನರರು ಅನುಭವಿಸಿದುದರಿಂದ, ಅಲ್ಲಲ್ಲಿನ ವೃಕ್ಷಗಳೆಲ್ಲವೂ ಸಾಫಲ್ಯವನ್ನು ಹೊಂದುತಿದ್ದುವು ಹೀಗೆ ವಾನರರು ತಾವು ಹೊರಟ ದಿನದಿಂದ ಒಂದು ತಿಂಗಳವರೆಗೆ ಹುಡುಕಿ,ಕೊ

ನೆಗೂ ಸೀತೆಯನ್ನು ಕಾಣದೆ,ನಿರಾಶರಾಗಿ ಹಿಂತಿರುಗಿ, ಸುಗ್ರೀವನ ಬಳಿಗೆ ಬಂದು ಸೇರಿಬಿಟ್ಟರು ತಾವು ಹೋಗಿ ಬಂದವೃತ್ತಾಂತಗಳನ್ನೆಲ್ಲಾ ತಮ್ಮೊಡೆಯನಾದ ಸುಗ್ರೀವನಿಗೂ ಕ್ರಮವಾಗಿ ಒಪ್ಪಿಸಿದರು ಕೊನೆಗೆ ಎಲ್ಲರೂ ಪ್ರಸ್ರವಣವಂಬ ಆ ಮಾಲ್ಯವಂತದಲ್ಲಿಯೇ ಒಂದಾಗಿ ಸೇರಿದರು ಮಹಾಬಲಾಢ್ಯನಾದ ವಿನತನು ತನ್ನ ಪರಿವಾರಗಳೊಡನೆ ಸುಗ್ರೀವನು ಹೇಳಿದ ಕ್ರಮದಲ್ಲೆಯೇ ಪೂರ್ವದಿಕ್ಕಿನ ಪ್ರದೇಶಗಳೆಲ್ಲವನ್ನೂ ಹುಡುಕಿ ನಿರಾಶನಾಗಿ ಬಂದು ಸೇರಿದನು ವಾನರೋತ್ತಮನಾದ ಶತಬಲಿಯೂ ಉತ್ತರದಿಕ್ಕೆಲ್ಲವನ್ನೂ ಸಂಪೂರ್ಣವಾಗಿ ಹುಡುಕಿ ಸೀತೆಯೆನ್ನು ಕಾಣದೆ ತನ್ನ ಸೈನ್ಯಗಳೊಡನೆ ಹಿಂತಿರುಗಿ ಬಂನುಬಿಟ್ಟನು ಸುಷೇಣನು ತನ್ನ ಪರಿವಾರಗಳೊಡನೆ ಪಶ್ಚಿಮದಿಕ್ಕನ್ನು ಹುಡುಕಿ ನಿರಾಶನಾಗಿ ಬಂದುಬಿಟ್ಟನು ಹೀಗೆ ನಿರಾಶರಾದ ವಾನರರಲ್ಲರೂ ಪ್ರಸ್ರವಣ ಪರ್ವತದಲ್ಲಿ ರಾಮನೊಡನ ಕುಳಿತಿದ್ದ ಸುಗ್ರೀವನ ಬಳಿಗೆ ಬಂದು ನಮಸ್ಕರಿಸಿ, "ಸ್ವಾಮೀ! ನಾವು ಸಮಸ್ತಪರ್ವತಗಳನ್ನೂ ಹುಡುಕಿದೆವು, ಕಾಡುಗಳನ್ನೂ ಮಹಾರಣ್ಯಗಳನ್ನೂ ಸುತ್ತಿನೋಡಿದೆವು ನದಿಗಳನ್ನೂ, ಸಮುದ್ರತೀರಗಳನ್ನೂ, ಸಮಸ್ತರಾಷ್ಟ್ರಗಳನ್ನೂ ನೋಡಿ ಬಂದೆವು ನೀವು ಹೇಳಿದ್ದ ಗುಹೆಗಳನ್ನೂ ಹುಡುಕಿದೆವು ಗಿಡುಬಳ್ಳಿಗಳಿಂದ ಗುಬುರುಗಟ್ಟಿದಮಹಾಗುಲ್ಮಗಳನ್ನೂ ನುಗ್ಗಿನೋಡಿದೆವು ದುರ್ಗಮಗಳಾದ ದ್ವೀಪಗಳಲ್ಲೆಯೂ ದುಷ್ಪ್ರವೇಶಗಳಾದ ವಿಷಮಸ್ಥಳಗಳಲ್ಲಿಯೂ ಹೋಗಿ ನೋಡಿದೆವು ಇದಲ್ಲದೆ ನಾವು ಅಲ್ಲಲ್ಲಿ ದೊಡ್ಡಪ್ರಮಾಣವುಳ್ಳ ಯಾವಪ್ರಾಣಿಗಳನ್ನು ಕಂಡರೂ, ರಾವಣನೋ ಅಲ್ಲವೋ ಎಂಬ ಸಂದೇಹವಿದ್ದರೂ,ಅವುಗಳನ್ನು ಕಂಡಕ್ಷಣವೇ ಕೊಂದುಬಿಡುತಿದ್ದೆವು ಏನಾದರೇನು? ನಮಗಂತೂ ಸೀತೆಯು ಸಿಕ್ಕಲಿಲ್ಲ ಸ್ವಾಮಿ! ನೀವು ಕಳುಹಿಸಿರುವ ವಾನರರಲ್ಲಿ, ಹನುಮಂತನೊಬ್ಬನು ಮಹಾಬಲಾಢ್ಯವಾದ ವಾನರವಂಶದಲ್ಲಿ ಹುಟ್ಟಿದವನು ಬಹಳ ಧೈರ್ಯಶಾಲಿಯು ಇದರಮೇಲೆ ಅವನು ಹೋಗಿರುವ ದಿಕ್ಕಾದರೂ ರಾವಣನು ಸೀತೆಯನ್ನೆತ್ತಿಕೊಂಡುಹೋದ ದಿಕ್ಕಾಗಿಯೇ ಇರುವುದು ಆದುದರಿಂದ ಒಂದು ವೇಳೆ ಆ ಹನುಮಂತನು ಸೀತೆಯನ್ನು ಕಂಡುಒಂದರೂ ಬರಬಹುದೆಂದು ತೋರುವುದು" ಎಂದರು ಇಲ್ಲಿಗೆ ನಾಲ್ವತ್ತೇಳನೆಯ ಸರ್ಗವು

{ ಹನುಮದಾದಿಗಳು ದಕ್ಷಿಣದಿಕ್ಕಿನಲ್ಲಿ ಸೀತೆಯನ್ನು ಹು
ಡುಕುತ್ತಿರುವಾಗ ಒಬ್ಬ ರಾಕ್ಷಸನನ್ನು ಕೊಂದುದು }

ಅತ್ತಲಾಗಿ ಹನುಮಂತನು ತಾರಾಂಗದಾದಿಗಳೊಡನೆ ಸೇರಿ, ಸು
ಗ್ರೀವನು ಹೆಳಿದಂತೆ ದಕ್ಷಿಣದಿಕ್ಕಿನಲ್ಲಿ ಅಯಾಪ್ರದೇಶಗಳನ್ನು ಹುಡುಕು
ತಿದ್ದನು ಹಾಗೆಯೇ ತನ್ನ ಪರಿವಾರಗಳೊಡನೆ ಬಹುದೂರಕ್ಕೆ ಹೊರಟುಹೋ
ದನು ಅಲ್ಲಿ ವಿಂಧ್ಯಪರ್ವತದ ಗುಹೆಗಳಲ್ಲಿಯೂ, ಕಾಡುಗಳಲ್ಲಿಯೂ, ತಿಖರಗ
ಳಲ್ಲಿಯೂ, ನದಿಗಳಿಂದ ದುರ್ಗಮಗಳಾದ ಇತರಪ್ರದೇಶಗಳಲ್ಲಿಯೂ, ಕೊ
ಳಗಳಲ್ಲಿಯೂ, ದೊಡ್ಡ ದೊಡ್ಡ ಮರಗಳ ತೋಪುಗಳಲ್ಲಿಯೂ, ಬಗೆಬಗೆಯ
ಸಾಲುಗಳುಳ್ಳ ಮರದ ಗುಂಪುಗಳಲ್ಲಿಯೂ, ವಿಂಧ್ಯದ ಸಮೀಪಪರ್ವತಗಳ
ಲ್ಲಿರುವ ವೃಕ್ಷಸಮೂಹಗಳಲ್ಲಿಯೂ ಪ್ರವೇಶಿಸಿ ಸೀತೆಯನ್ನು ಹುಡುಕು
ತಿದ್ದನು ವೀರರಾದ ಆ ವಾನರರಲ್ಲರೂ ಆ ದಕ್ಷಿಣದಿಗ್ಭಾಗದಲ್ಲಿ ಸಮಸ್ತಪ್ರ
ದೇಶಗಳನ್ನೂ ಸುತ್ತಿಸುತ್ತಿ ನೋಡಿದರೂ ಸೀತೆಯು ಸಿಕ್ಕಲಿಲ್ಲ ಆವಾನರ
ರಾದರೋ ಯಾರಿಗೂ ಇದಿರಿಸಲಸಾಧ್ಯವಾದ ಪರಾಕ್ರಮವುಳ್ಳವರಾದುದ
ರಿಂದ ತಮ್ಮ ಸಾಹಸಗಳನ್ನೆಲ್ಲಾ ತೋರಿಸಿ ಹುಡುಕಿದರೂ ಸೀತೆಯು ಗೋ
ಚರಿಸಲಿಲ್ಲ ಆ ವಾನರರು ಅಲ್ಲಲ್ಲಿ ಸುತ್ತವಾಗ ಕಣ್ಣಿಗೆ ಬಿದ್ದ ಬಗೆಬಗೆಯ ಹ
ಣ್ಣುಗಳನ್ನೂ, ಕಂದಮೂಲಗಳನ್ನೂ ಭಕ್ಷಿಸುತ್ತ, ಅಲ್ಲಲ್ಲಿ ವಿಶ್ರಾಂತಿಗಾಗಿ
ನಿಂತುನಿಂತು ಹೋಗುತಿದ್ದರು ಅವರು ಹೋಗುತಿದ್ದ ವಿಂಧ್ಯಪ್ರದೇಶವಾ
ದರೋ ಲೆಕ್ಕವಿಲ್ಲದಷ್ಟು ಮಹಾರಣ್ಯಗಳಿಂದಲೂ, ಗುಹೆಗಳಿಂದಲೂ ಕೂಡಿ,
ಯಾರಿಗೂ ಪ್ರವೇಶಿಸಲಸಾಧ್ಯವಾಗಿರುವುದು ಅಲ್ಲಿ ಹುಡುಕುವುದೂ ಬಹಳ
ಕಷ್ಟವು ಮತ್ತು ಆ ದೇಶವು ಕೇವಲಜನಶೂನ್ಯವಾಗಿ, ನೋಡುವಾಗಲೇ
ನಡುಕವನ್ನು ಹುಟ್ಟಿಸುವಂತಿರುವುದು ನಿರ್ಜಲವಾಗಿ ಮರುಪ್ರದೇಶದಂ
ತಿರುವುದು ಹೀಗಿದ್ದರೂ ಆ ವಾನರರು ತೃಣಜಲಾದಿಗಳೊಂದೂ ಇಲ್ಲದ ಆ
ಪ್ರದೇಶಗಳನ್ನೆಲ್ಲಾ ಎಷ್ಟೋ ಕಷ್ಟದಿಂದ ಹುಡುಕಿ ನೋಡಿದರು ಎಂತವ
ರಿಗೂ ಪ್ರವೇಶಿಸಲಾಗದ ಮತ್ತೊಂದು ಪ್ರದೇಶವನ್ನು ಕಂಡು ಅಲ್ಲಿಗೂ
ನಿರ್ಭಯವಾಗಿ ಪ್ರವೇಶಿಸಿದರು ಅಲ್ಲಿನ ಮರೆಗಳಲ್ಲಿ ಹೂಗಳಾಗಲಿ, ಹಣ್ಣು
ಗಳಾಗಲಿ, ಎಲೆಗಳಾಗಲಿ ಹುಟ್ಟುವುದಿಲ್ಲ ಅಲ್ಲಿನ ನದಿಗಳಲ್ಲಿ ನೀರಿನ ಪ್ರಸಕ್ತಿ

ಯೇ ಇಲ್ಲ ಗಡ್ಡೆಗೆಣಸಳಾದರೂ ಸಿಕ್ಕುವುದಿಲ್ಲ ಎಮ್ಮೆಗಳಾಗಲಿ, ಜಿಂಕೆಗಳಾಗಲಿ, ಆನೆಗಳಾಗಲಿ ಅಲ್ಲಿ ಬದುಕಿರಲಾರವು ಹುಲಿಮೊದಲಾದ ಕ್ರೂರ ಮೃಗಗಳೂ ಅಲ್ಲಿ ವಾಸಮಾಡಲಾರವು ಅಲ್ಲಿ ಪಕ್ಷಿಗಳಾಗಲಿ, ಬೇರೆ ವನಜಂತುಗಳಾಗಲಿ ಬದುಕವು ಅಲ್ಲಿ ಉತ್ತಮವೃಕ್ಷಗಳಾಗಲಿ, ಓಷಧಿಗಳಾಗಲಿ, ಬಳ್ಳಿಗಳಾಗಲಿ, ಪೊದೆಗಳಾಗಲಿ ಕಾಣಿಸವು ಅಲ್ಲಿನ ಮಹಾತಟಾಕಗಳುಮಾತ್ರ ನುಣುಪಾದ ಮತ್ತು ವಿಸ್ತಾರವಾದ ತಾವರೆಯೆಲೆಗಳಿಂದಲೂ, ಅರಳಿದ ನೀರು ಹೂಗಳಿಂದಲೂ, ನೇತಾತ್ರನಂದಕರಗಳಾಗಿ ಸುಗಂಧವನ್ನು ಹೊರಡಿಸುತ್ತಿರುವುವು ಆದರೆ ಭ್ರಮರಗಳುಮಾತ್ರ ಅದರಲ್ಲಿ ಪ್ರವೇಶಿಸಲಾರದೆ ಬಿಟ್ಟುಹೋಗುವುವು ಅಲ್ಲೆ ಕಂಡುವೆಂಬ ಮಹಾತ್ಮನಾದ ತಪೋನಿಧಿಯೊಬ್ಬನು ವಾಸಮಾಡುತ್ತಿರುವನು ಆತನು ಬಹಳ ಸತ್ಯಸಂಧನು ಆದರ ಬಹಳ ಕೋಪಸ್ವಭಾವವುಳ್ಳವನು, ಅವನು ತನ್ನ ತಪೋನಿಯಮಗಳಿಂದ ಯಾರಿಗೂ ಇಬ್ಬರಿಸಲಸಾಧ್ಯನಾಗಿರುವನು ಅವನ ಹದಿನಾರುವರ್ಷ ವಯಸ್ಸಿನ ಕುಮಾರನೊಬ್ಬನು ಆ ವನದಲ್ಲಿ ಮೃತಿಹೊಂದಿದನು ಇದಕ್ಕಾಗಿ ಆ ಮಹರ್ಷಿಯು ಆ ವನದಮೇಲೆ ಮಹಾಕೋಪವನ್ನು ಹೊಂದಿ, ತನ್ನ ಪುತ್ರನ ಮರಣಕ್ಕೆ ಹೇತುವಾದ ಆ ಮಹಾವನವೆಲ್ಲವೂ ಎಂತವರಿಗೂ ವಾಸಯೋಗ್ಯವಾಗದೆ ದುಷ್ಪ್ರವೇಶವಾಗಿ, ಅಲ್ಲಿ ಮೃಗಪಕ್ಷಿಗಳೂ ಬದುಕದಂತೆ ಶಪಿಸಿಬಿಟ್ಟನು ಹೀಗಿದ್ದರೂ ಈ ವಾನರರುಮಾತ್ರ ಬಹಳ ಎಚ್ಚರಿಕೆಯಿಂದ ಅದರ ಸುತ್ತಲಿನ ಪ್ರದೇಶಗಳನ್ನೂ, ಕಾಡುಗಳನ್ನೂ, ಗಿರಿಕಂದರಗಳನ್ನೂ, ನದಿಗಳ ಉತ್ಪತ್ತಿಸ್ಥಾನಗಳನ್ನೂ ಹುಡುಕದರು ಅಲ್ಲಿಯೂ ಜನಕಪುತ್ರಿಯಾದ ಸೀತೆಯು ಸಿಕ್ಕಲಿಲ್ಲ ಅಕೆಯನ್ನು ಕದ್ದ ರಾವಣನ ಸುಳಿವನ್ನಾದರೂ ಕಾಣಲಿಲ್ಲ ಹೇಗಾದರೂ ಸುಗ್ರೀವನಿಗೆ ಪ್ರಿಯವನ್ನುಂಟುಮಾಡಬೇಕೆಂಬ ಆತುರವುಳ್ಳ ಆ ವಾನರರೆಲ್ಲರೂ, ಒಳ್ಳಿಗಳಿಂದಲೂ, ಪೊದೆಗಳಿಂದಲೂ, ತುಂಬಿದ ಆ ಪ್ರದೇಶದಲ್ಲಿ ಒಳಹೊಕ್ಕು ನೋಡುವಾಗ, ಅಲ್ಲಿ ಚೆನ್ನಾಗಿ ಗುಬುರು ಕಟ್ಟಿದ ಒಂದು ಪೊದೆಯ ಮರೆಯಲ್ಲಿ, ಭಯಂಕರಸ್ವರೂಪವುಳ್ಳ ಕ್ರೂರಕರ್ಮಿಯಾದ ರಾಕ್ಷಸನೊಬ್ಬನು ಕಣ್ಣಿಗೆ ಬಿದ್ದನು ಆ ರಾಕ್ಷಸನಾದರೋ ಯಾವದೇವತೆಗಳನ್ನೂ ಲಕ್ಷ್ಯಮಾಡದ ಮಹಾಥೈರ್ಯವುಳ್ಳವನು ಅವನ ಆಕಾರ

ವೇ ಒಂದು ದೊಡ್ಡಬೆಟ್ಟದಂತೆ ಮಹಾಭಯಂಕರವಾಗಿರುವುದು ಆ ರಾಕ್ಷಸನನ್ನು ಕಂಡೊಡನೆ ಸಮಸ್ತವಾನರರೂ ಅವನೊಡನೆ ಯುದ್ಧಮಾಡುವುದಕ್ಕಾಗಿ ದಟ್ಟಿಯನ್ನು ಬಿಗಿದು ಸಿದ್ಧರಾಗಿ ನಿಂತರು ಮಹಾಬಲಾಢ್ಯನಾದ ಆ ರಾಕ್ಷಸನೂಕೂಡ ಪರ್ವತಾಕಾರವುಳ್ಳ ಈ ವಾನರರ ದೊಡ್ಡಗುಂಪನ್ನು ನೋಡೊಡನೆ ಕೋಪವಶನಾಗಿ "ಎಲ್ಲೈ ಕಾಡುಕಪಿಗಳೆ! ಇನ್ನು ನೀವು ಸತ್ತಿರಿ!" ಎಂದು ಉಚ್ಚಸ್ವರದಿಂದ ಆರ್ಭಟಿಸುತ್ತ, ದೃಢವಾದ ಮುಷ್ಟಿಯನ್ನೆತ್ತಿಕೊಂಡು ಇವರಿಗಿದಿರಾಗಿಯೇ ಬಂದನು ಆಗ ವಾಲಿಪುತ್ರನಾದ ಅಂಗದನು, ಇದಿರಾಗಿ ಬರುವ ಆ ರಾಕ್ಷಸನನ್ನೇ ರಾವಣನೆಂದು ತಿಳಿದು, ಆ ಕ್ಷಣದಲ್ಲಿಯೇ ಅವನನ್ನು ಅಂಗೈಯಿಂದ ಅಪ್ಪಳಿಸಿದನು ರಾಕ್ಷಸನು ಈ ಒಂಡೇಪ್ರಹಾರಕ್ಕ ತಡೆಯಲಾರದೆ, ಬಾಯಿಂದ ರಕ್ತವನ್ನು ಕಕ್ಕುತ್ತ ದೊಡ್ಡಬೆಟ್ಟವು ಉರುಳಿ ಬಿಳುವಂತೆ ನೆಲಕ್ಕೆ ಬಿದ್ದನು ಆ ರಾಕ್ಷಸನು ಮೃತನಾದ ಮೇಲೆ, ಜಯಶೀಲರಾದ ವಾನರವೀರರೆಲ್ಲರೂ, ಅವನೇ ರಾವಣನೆಂಬ ಭ್ರಾಂತಿಗೊಂಡು, ಮಹೋತ್ಸಾಹದಿಂದುಬ್ಬುತ್ತ, ಅಲ್ಲಿನ ಗುಹೆಯಲ್ಲಿಯೇ ಸೀತೆಯೂ ಇರಬಹುದೆಂದೆಣಿಸಿ, ಆ ಪರ್ವತಗುಹೆಗಳೆಲ್ಲವನ್ನೂ ಬಾರಿಬಾರಿಗೂ ಚೆನ್ನಾಗಿ ಹುಡುಕಿ ನೋಡಿದರು ಅಲ್ಲಿನ ಕಾಡುಗಳೆಲ್ಲವನ್ನೂ ಸುತ್ತಿನೋಡಿದರು ಎಲ್ಲಿಯೂ ಸೀತೆಯನ್ನು ಕಾಣಲಿಲ್ಲ ಭಯಂಕರವಾದ ಮತ್ತೊಂದು ಪರ್ವತ ಗುಹೆಯನ್ನೂ ಪ್ರವೇಶಿಸಿ ನೋಡಿದರು ಅಲ್ಲಿಯೂ ಸೀತೆಯು ಸಿಕ್ಕಲಿಲ್ಲ ಎಲ್ಲರ ಮನಸ್ಸಿಗೂ ಬಹಳ ದುಃಖವುಂಟಾಯಿತು ಹೀಗೆ ಅವರೆಲ್ಲರೂ ಆಶಾಭಂಗವನ್ನು ಹೊಂದಿ ಎದೆಗೆಟ್ಟವರಾಗಿ, ಒಂದು ಮರದಕೆಳಗೆ ಏಕಾಂತವಾದ ಸ್ಥಳದಲ್ಲಿ ಒಟ್ಟಾಗಿ ಕುಳಿತುಬಿಟ್ಟರು ಇಲ್ಲಿಗೆ ನಾಲ್ವತ್ತೆಂಟನೆಯ ಸರ್ಗವು

ಹನುಮಂತನು ಇನ್ನೂ ಇತರಪ್ರದೇಶಗಳನ್ನು ಹುಡುಕುವುದಕ್ಕೆ ಹೋದುದು.

ಹೀಗೆ ವಾನರರೆಲ್ಲರೂ ಕುಂದಿದ ಮನಸ್ಸುಳ್ಳವರಾಗಿ, ಏನೂ ತೋರದೆ ಮರದ ಕೆಳಗೆ ಕುಳಿತಿರಲು, ಪ್ರಾಜ್ಞನಾದ ಅಂಗದನೂ ಅಲ್ಲ ತಾನು ಸುತ್ತಿಬಂದ ಬಳಲಿಕೆಯನ್ನಾರಿಸಿಕೊಂಡು, ಆಮೇಲೆ ಅಲ್ಲಿದ್ದ ವಾನರರನ್ನು ಕುರಿ

ತು ,, ಎಲೈ ವಾನರರೇ! ನಾವು ಇದುವರೆಗೆ ಎಷ್ಟೋ ಕಾಡುಗಳನ್ನೂ, ಬೆಟ್ಟ ಗಳನ್ನೂ, ನದಿಗಳನ್ನೂ, ದುರ್ಗಗಳನ್ನೂ, ಮಹಾರಣ್ಯಗಳನ್ನೂ, ಗುಹೆಗಳ ನ್ನೂ ಸುತ್ತಿಸುತ್ತಿ ಹುಡುಕಿದೆವು. ಸೀತೆಯನ್ನು ಕಾಣಲಿಲ್ಲ- ದೇವಕನ್ಯಕೆಯಂತಿ ದ್ದ ಆ ಸೀತೆಯನ್ನು ಕದ್ದುಯ್ದ ರಾಕ್ಷಸನಾದರೂ ಸಿಕ್ಕಲಿಲ್ಲ ಕಾಲವಾದರೋ ಬಹಳವಾಗಿ ಕಳೆದುಹೋಯಿತು ನಮ್ಮ ರಾಜನಾದ ಸುಗ್ರೀವನೋ ಅತಿ ತೀಕ್ಷ್ಣವಾಗಿ ದಂಡಿಸುವನು ಆದುದರಿಂದ ಈಗಲೂ ನಾವು ಉಪೇಕ್ಷೆ ಮಾಡಬಾರದು ತಿರುಗಿ ನಾವೆಲ್ಲರೂ ಸೇರಿ ಅಲ್ಲಲ್ಲಿ ಹುಡುಕಿಬರಬೇಕು ನೀವೆಲ್ಲರೂ ಸೋಮಾರಿತನವನ್ನು ಬಿಟ್ಟು, ಧೈರ್ಯಗೆಡದೆ, ಮುಂದಿನ ಕೆಲಸವ ನ್ನು ನೋಡಬೇಕು ನಿದ್ರೆಮಾಡುವುದಕ್ಕೆ ಇದು ಸಮಯವಲ್ಲ ಹೇಗಾದ ರೂ ಸೀತೆಯನ್ನು ಕಂಡು ಹಿಡಿಯುವ ಪ್ರಯತ್ನವನ್ನು ಮಾಡಬೇಕು ಕಾ ರ್ಯವನ್ನು ಮಾಡುತಿದ್ದರ ಅವಶ್ಯವಾಗಿ ಅದಕ್ಕ ತಕ್ಕ ಫಲವು ಲಭಿಸಬರಲಾರ ದು ಉತ್ಸಾಹವೂ, ಸಾಹಸವೂ, ಧೈರ್ಯವೂ ಈ ಮೂರೂ ಕಾರ್ಯ ಸಿದ್ಧಿಗೆ ಮುಖ್ಯಕಾರಣಗಳೆಂದು ಹೇಳುವರಾದುದರಿಂದ, ನಾನು ನಿಮ್ಮನ್ನು ಎಚ್ಚರಿಸುತ್ತಿರುವೆನು ಎಲ್ಲ ವಾನರರ! ಈಗಲೂ ನೀವು ದುರ್ಗಮವಾದ ಅ ರಣ್ಯವನ್ನು ಚೆನ್ನಾಗಿ ಹುಡುಕಿರಿ ನಿಮ್ಮ ಮನಸ್ಸಿನಲ್ಲಿರುವ ಖೇದವನ್ನು ಬಿ ಟ್ಟುಬಿಡಿರಿ! ಮನಸ್ಸಿನಲ್ಲಿ ಕೊರಗುವುದರಿಂದ ಪ್ರಯೋಜನವಿಲ್ಲ ಈಗ ನಿದ್ರೆ ಮಾಡುವುದು ನಮಗೆ ಯುಕ್ತವಲ್ಲ ನಮ್ಮ ರಾಜನಾದ ಸುಗ್ರೀವನೋ, ಬಹ ಳ ಕೋಪಸ್ವಭಾವವುಳ್ಳವನು ತೀವ್ರವಾಗಿ ದಂಡಿಸತಕ್ಕವನು ನಾವು ಯಾ ವಾಗಲೂ ಅವನ ರಾಜಾಜ್ಞೆಗೆ ಭಯಪಟ್ಟಿರಬೇಕಲ್ಲದೆ, ಶ್ರೀರಾಮನೂಕೂಡ ಮಹಾಪ್ರಭಾವವುಳ್ಳವನಾದುದರಿಂದ, ಅವನಿಗೂ ನಾವು ಹೆದರಿ ನಡೆಯಬೇ ಕು ನಿಮ್ಮ ಹಿತವನ್ನು ಕೋರಿಯೇ ನಾನು ಹೀಗೆ ಹೇಳುವೆನು ಇದು ನಿಮ ಗೂ ಸಮ್ಮತವಾಗಿದ್ದರೆ, ಮೊದಲು ಆ ಕೆಲಸವನ್ನು ಮಾಡಿರಿ! ಹಾಗಿಲ್ಲವೇ, ನ ಮ್ಮೆಲ್ಲರಿಗೂ ಹಿತವಾಗುವಂತೆ ನಿಮಗೆ ಕಾಲೋಚಿತವಾದ ಬೇರೆ ಉಪಾಯವೇ ನಾದರೂ ತೋರಿಬಂದರೆ ಅದನ್ನಾದರೂ ಸೂಚಿಸಿರಿ" ಎಂದನು ಅಂಗದನು ಹೇಳಿದ ಈ ಮಾತನ್ನು ಕೇಳಿ ಗಂಧಮಾದನನೆಂಬ ವಾನರವೀರನೊಬ್ಬನು, ದಾಹದಿಂದಲೂ, ಶ್ರಮದಿಂದಲೂ, ಅಸ್ಪಷ್ಟವಾದ ಮಾತಿನಿಂದ ಸಮಸ್ತ


ವಾನರರನ್ನೂನೋಡಿ ''ಎಲೈ ವಾನರರೇ! ಈ ಅಂಗದನು ಹೇಳಿದ ಮಾತು ಯುಕ್ತವಾಗಿಯೇ ಇರುವುದು ಅವನು ಹೇಳಿದಂತೆ ನಡೆಸುವುದರಿಂದ ನಮ್ಮೆಲ್ಲರಿಗೂ ಹಿತವೂ, ಅನಕೂಲ್ಯವೂ ಉಂಟಾಗುವುದರಲ್ಲಿ ಸಂದೇಹವಿಲ್ಲ ಅವನು ಹೇಳಿದಂತೆಯೇ ನೀವು ಇಲ್ಲಿನ ಪರ್ವತಗಳಲ್ಲಿಯೂ, ಗುಹೆಗಳಲ್ಲಿಯೂ, ಬಿಲಗಳಲ್ಲಿಯೂ, ನಿರ್ಜನವಾದ ಕಾಡಿನಲ್ಲಿಯೂ, ಮತ್ತೊಂದಾವ ರ್ತಿ ಹುಡುಕಿಬನ್ನಿರಿ ' ಗಿರಿನದಿಗಳಲ್ಲಿಯೂ ಚೆನ್ನಾಗಿ ನೋಡಿ ಬನ್ನಿರಿ' ಮಹಾತ್ಮನಾದ ಸುಗ್ರೀವನು ನಿಯಮಿಸಿರುವಂತೆಯೇ ನೀವೆಲ್ಲರೂ ಇಲ್ಲಿನ ವನವನ್ನೂ, ಗಿರಿದುರ್ಗಗಳನ್ನೂ ಬಳಹೊಕ್ಕು ನೋಡಿ ಬನ್ನಿರಿ" ಎಂದನು ಈ ಮಾತನ್ನು ಕೇಳಿದೊಡನೆ ಮಹಾಬಲಾಢ್ಯರಾದ ಆ ವಾನರರಲ್ಲರೂ ಪುನಃಮೇಲಕ್ಕಿದ್ದು, ಆ ದಕ್ಷಿಣದಿಕ್ಕಿನಲ್ಲಿರುವ ವಿಂಧ್ಯಾರಣ್ಯಗಳನ್ನು ಪುನಃ ಹುಡುಕಲಾರಂಭಿಸಿದರು, ಹೀಗೆ ಆ ವಾನರರು ಸೀತಾನ್ವೇಷಣದಲ್ಲಿ ಆತುರವುಳ್ಳವರಾಗಿ, ಅಲ್ಲಲ್ಲಿ ಸುತ್ತಿಬರುವಾಗ, ಮುಂದೆ ಶರತ್ಕಾಲದ ಮೇಘಪಂತ ಬಿಳುಪಾಗಿಯೂ, ಕಾಂತಿಯುಳ್ಳವಾಗಿಯೂ, ಉನ್ನತಶಿಖರವುಳ್ಳವಾಗಿಯೂ, ಅನೇಕಗುಹೆಗಳಿಂದ ಕೂಡಿದುದಾಗಿಯೂ, ಇದ್ದ ರಜತಮಯವಾದ ಒಂದು ಪರ್ವತಭಾಗವನ್ನೆರಿದರು ಅಲ್ಲಿ ಮನೋಹರವಾದ ಕೋದ್ರವನವನ್ನೂ, ವಿಳಲ ಬಾಳೆಯ ತೋಟಗಳನ್ನೂ ನೋಡಿ ಅಲ್ಲಿ ಸೀತೆಯನ್ನು ಹುಡುಕುತಿದ್ದರು ಹೀಗ ಸುತ್ತುವುದರಿಂದ ಆ ವಾನರರಲ್ಲರೂ ಬಹಳಬಳಲಿಕೆಯನ್ನು ಹೊಂದಿದವರಾಗಿದ್ದರೂ, ಅಗನ್ನೂ ಲಕ್ಷ್ಯಕ್ಕೆ ತಾರದೆ, ಆ ಬೆಟ್ಟದ ತುದಿಗೇರಿ, ಅಲ್ಲೆಯೂ ರಾಮನ ಪ್ರಿಯಪತ್ನಿಯಾದ ಸೀತೆಯನ್ನು ಕಾಣದೆ ಹೋದರು ಹೀ ಆ ಪರ್ವತಪ್ರಾಂತಗಳೆಲ್ಲವನ್ನೂ ಸುತ್ತಿ, ಸಮಸ್ತ ಗುಹೆಗಳಲ್ಲಿಯೂ, ಹುಡುಕಿನೋಡಿ, ಎಲ್ಲಿಯೂ ಸೀತೆಯು ಸಿಕ್ಕದುದರಿಂದ ನಿರಾಶರಾಗಿ ಕೆಳಗಿಳಿದರು ಈ ಸಂಚಾರಶ್ರಮದಿಂದ ಅವರೆಲ್ಲರಿಗೂ ಪ್ರಜ್ಞೆತಪ್ಪಿದಂತಾಯಿತು ಅಲ್ಲಲ್ಲೆ ವಿಶ್ರಾಂತಿಗಾಗಿ ನಿಂತುನಿಂತು ಕೆಳಗಿಳಿದು ಬರುತ್ತ, ಕೂನೆಗೆ ಒಂದು ಮರದ ಕಳಗೆ ಸೇರಿದರು ಅಲ್ಲಿ ತಮ್ಮ ಬಳಲಿಕೆಯನ್ನು ತೀರಿಸಿಕೊಂಡು, ತಿರುಗಿ ಆ ದಕ್ಷಿಣಾಭಿಮುಖವಾಗಿಯೇ ಹೊರಟು ಸೀತೆಯನ್ನು ಹುಡುಕುತಿದ್ದರು ಹನುಮಂತನೇ ಮೊದಲಾದ ಸಮಸ್ತವಾನರರೂ ಹೀಗೆ ಸು

ತಾನ್ವೇಷಣಾರ್ಥವಾಗಿ ಹೊರಟು ಆ ವಿಂಧ್ಯಪರ್ವತದ ಬುಡದಿಂದ ಕೊನೆಯವರೆಗೂ ಸಮಸ್ತಪ್ರದೇಶಗಳನ್ನೂ ಸುತ್ತಿಸುತ್ತಿ ಒರುತಿದ್ದರು ಇಲ್ಲಿಗೆ ನಾಲ್ವತ್ತೊಂಬತ್ತನೆಯಸರ್ಗವು

ಹನುಮದಾದಿ ವಾನರರು ಋಕ್ಷಬಿಲದಲ್ಲಿ ಸ್ವಯಂಪ್ರಭೆಯನ್ನು ಕಂಡುದು

ಹನುಮಂತನೂ ತಾರಾಂಗದರೊಡನೆ ಸೇರಿ ವಿಂಧ್ಯಪರ್ವತದ ಗುಹೆಗಳಲ್ಲಿಯೂ, ಕಾಡುಗಳಲ್ಲಿಯೂ, ಸೀತೆಯನ್ನು ಹುಡುಕುತಿದ್ದನು ಈ ಮೂವರೂ ಆ ಬೆಟ್ಟದಲ್ಲಿ ಸಿಂಹಶಾರ್ದೂಲಾದಿಕ್ರೂರಜಂತುಗಳಿಂದ ಭಯಂಕರವಾದ ಮಹಾವನವನ್ನು ಪ್ರವೇಶಿಸಿ, ಅಲ್ಲಿನ ಕಲ್ಲುಬಂಡೆಗಳನ್ನೂ ನದಿಗಳನ್ನೂ ಕದಲಿಸಿ ನೋಡಿದರು ದೊಡ್ಡದೊಡ್ಡ ಗಿರಿನದಿಗಳುಳ್ಳ ವಿಷಮಪ್ರದೇಶಗಳಲ್ಲಿಯೂ ತಿರುಗಿನೋಡುತಿದ್ದರು ಕೂನೆಗೆ ಇವರೆಲ್ಲರೂ ಆ ಬೆಟ್ಟದ ನೈಋತ್ಯದ ಮೂಲೆಯಲ್ಲಿದ್ದ ಒಂದು ತಿಖರದ ಕೊನೆಗೆ ಹೋದರು ಅಲ್ಲಿರುವಾಗಲೇ ಸುಗ್ರೀವನು ಅವರಿಗ ನಿರ್ಣಯಿಸಿಕೂಟ್ಟಿದ್ದ ತಿಂಗಳಕಾಲವು ಮೀರಿ ಹೋಯಿತು ಆ ಪ್ರದೇಶವು ಅಸಂಖ್ಯಾತಗಳಾದ ಗುಹೆಗಳಿಂದಲೂ, ಮಹಾರಣ್ಯಗಳಿಂದಲೂ ಕೂಡಿ ಮಹತ್ತಾಗಿದ್ದುದರಿಂದ, ಅಲ್ಲಿ ಹುಡುಕುವುದು ಯಾರಿಗೂ ಸಾಧ್ಯವಲ್ಲ ಹಾಗಿದ್ದರೂ ವಾಯುಪುತ್ರನಾದ ಹನುಮಂತನು ಆ ದುರ್ಗಪ್ರದೇಶಗಳೆಲ್ಲವನ್ನೂ ಸುತ್ತಿಸುತ್ತಿ ಹುಡುಕುತಿದ್ದನು ಈ ಹನುಮಂತನಂತೆಯೇ ಗಜ, ಗವಾಕ್ಷ, ಗವಯ, ಶರಭ, ಗಂಧಮಾದನ, ಮೈಂದ, ದ್ವಿವಿದ, ಸುಷೇಣ, ಜಾಂಬವಂತ, ನಳ, ಮುಂತಾದವರೂ, ಯುವರಾಜನಾದ ಅಂಗದನೂ ವನಸಂಚಾರದಲ್ಲಿ ಚೆನ್ನಾಗಿ ಪರಿಶ್ರಮವುಳ್ಳ ತಾರನೂ, ಒಬ್ಬರಿಗೊಬ್ಬರು ಬೆಂಬಲವಾಗಿದ್ದುಕೊಂಡು, ಅನೇಕಪರ್ವತಶ್ರೇಣಿಗಳಿಂದ ತುಂಬಿದ ಆ ದಕ್ಷಿಣದಿಕ್ಕಿನ ಪ್ರದೇಶಗಳೆಲ್ಲವನ್ನೂ ಸುತ್ತಿಬರುತಿದ್ದರು ಅವರೆಲ್ಲರೂ ಹೀಗೆ ಸುತ್ತಿತ್ತಿರುವಾಗ ಮುಂದೆ ಒಂದು ದೊಡ್ಡಬಿಲವನ್ನು ಕಂಡರು ಆ ಬಿಲವನ್ನು ಪ್ರವೇಶಿಸುವುದು ಯಾರಿಗೂ ಸಾಧ್ಯವಲ್ಲ ಅದಕ್ಕೆ ಋಕ್ಷಬಿಲವೆಂದು ಹೆಸರು

ಅದು ಮಯನೆಂಬ ದಾನವನಿಂದ ರಕ್ಷಿಸಲ್ಪಡುತ್ತಿರುವುದು ಆ ಬಿಲದ್ವಾರಕ್ಕೆ ಬರುವಷ್ಟರಲ್ಲಿ ಆ ವಾನರರೂಕೂಡ ಆಲ್ಲಲ್ಲಿ ಸುತ್ತಿಬಂದ ಬಾಯಾರಿಕೆಯಿಂದಲೂ ಹಸಿವಿನಿಂದಲೂ ಬಹಳವಾಗಿ ಬಳಲಿ, ದಾಹಶಾಂತಿಗಾಗಿ ಆತ್ಯಾತುರಪಡುತ್ತಿದ್ದರು ಈ ವಾನರರೆಲ್ಲರೂ ಗಿಡುಬಿಳ್ಳಿಗಳಿಂದ ತುಂಬಿದ ಆ ಮಹಾಬಿಲವನ್ನು ನೋಡುತ್ತಿರುವಾಗಲೇ, ಆ ಬಿಲದೊಳಗಿನಿಂದ ಕ್ರೌಂಚಗಳೂ,ಹಂಸಗಳೂ, ಸಾರಸಪಕ್ಷಿಗಳೂ ಹೊರಕ್ಕೆ ಹೊರಟುಬರುತಿದ್ದುವು ನೀರಿನಲ್ಲಿ ನೆನೆದು, ಕಮಲಧೂಳಿಯಿಂದ ಕೆಂಪಾದ ಗರಿಗಳುಳ್ಳ ಚಕ್ರವಾಕಗಳೂ ಹಾರಿಬರುತಿದ್ದುವು ಘಮಘಮಿಸುತ್ತಿರುವ ಕಮಲದ ಸುವಾಸನೆಯೂ ಆ ಬಿಲದೊಳಗಿನಿಂದ ಹೊರಕ್ಕೆಬರುತಿತ್ತು ಮರಗಳಿಂದ ಮುಚ್ಚಿ, ಬೇರು ಬ್ಬರಿಗೆ ದುರ್ಗಮವಾಗಿದ್ದರೂ ಆ ಬಿಲದೊಳಗಿನಿಂದ ಹೀಗೆ ಜಲಪಕ್ಷಿಗಳೂ, ಸುಗಂಧವೂ ಹೊರಗೆ ಬರುವುದನ್ನು ನೋಡಿ ವಾನರರೆಲ್ಲರೂ ಆಶ್ಚರ್ಯಭರಿತರಾಗಿ ನಿಂತಿದ್ದರು ಬಲಾಢ್ಯರಾಗಿಯೂ ತೇಜಸ್ವಿಗಳಾಗಿಯೂ ಇರುವ ಆ ವಾನರರು ಅನೇಕಜಂತುಗಳಿಂದ ಕೂಡಿ, ದೈತ್ಯರಾಜನಾದ ಬಲಿಗೆ ವಾಸಸ್ಥಳವಾದ ಪಾತಾಳದಂತ, ಕಣ್ಣಿಂದ ನೋಡುವುದಕ್ಕೂ ಸಾಧ್ಯವಾಗದಷ್ಟು ಮಹಾಭಯಂಕರವಾಗಿಯೂ, ದುಷ್ಪ್ರವೇಶವಾಗಿಯೂ ಇದ್ದ ಆ ಮಹಾಬಿಲವನ್ನು ನೋಡುತ್ತ ಸ್ತಬ್ಧರಾಗಿ ನಿಂತು ''ಓಹೋ! ಇದೇನು! ಪಾತಾಳವೋ! ಅಥವಾ,ರಾಕ್ಷಸರ ಮಾಯೆಯೋ " ಎಂದು ಶಂಕಿಸುತ್ತ ಸಮೀಪಕ್ಕ ಬಂದರು ಆಗ ಪರ್ವತಶಿಖರದಂತೆ ಆಕಾರವುಳ್ಳ ಹನುಮಂತನು, ದುರ್ಗಮಾರ್ಗಗಳಲ್ಲಿಯೂ,, ಮಹಾರಣ್ಯಗಳಲ್ಲಿಯೂ, ನಿರ್ಭಯವಾಗಿ ಸುತ್ತಿ ಬಳಿಕಯುಳ್ಳವನಾದುದರಿಂದ,ಸುತ್ತಲೂ ಇದ್ದ ವಾನರರನ್ನು ಕುರಿತು ,''ಎಲ್ಲೈ ಮಿತ್ರರೆ! ಅನೇಕಪರ್ವತಶ್ರೇಣಿಗಳಿಂದ ತುಂಬಿದ ಈ ದಕ್ಷಿಣದಿಕ್ಕೆಲ್ಲವನ್ನೂ ಸುತ್ತಿಸುತ್ತಿ ಹುಡುಕಿ ನಾವೆಲ್ಲರೂ ಬಹಳವಾಗಿ ಬಳಲಿಹೋದವು ಆದರೂ ಸೀತೆಯು ಸಿಕ್ಕಲಿಲ್ಲ ನಮಗಾದರೋ ಸಹಿಸಲಾರದ ಬಾಯಾರಿಕೆಯು ಹುಟ್ಟಿರುವುದು ಇದೋ! ಇಲ್ಲಿ ಈ ಗುಹೆಯಿಂದ ಹಂಸಗಳೂ, ಕ್ರೌಂಚಗಳೂ, ಸಾರಸಗಳೂ, ಚಕ್ರವಾಕಗಳೂ ನೀರಿನಲ್ಲಿ ನೆನೆದು ಸಾಲುಸಾಲಾಗಿ ಹೊರಟುಬರುತ್ತಿರುವುವು. ಮತ್ತು ಈ ಗುಹೆಯ ಬಾಗಿಲ ಮರಗಳೂ ಹಚ್ಚಗೆ ಚೆನ್ನಾಗಿ ಬೆಳೆದಿರುವುವು ಇದರಿಂದ ಈ ಗುಹೆಯೆಲ್ಲಿ ಜಲ



1611. ವಾನರರು ಸ್ವಯಂಪ್ರಭೆಯ ಐಕ್ಷಬಲಕ್ಕೆ ಪ್ರವೇಶಿಸುವುದು.

ಪೂರ್ಣವಾದ, ಬಾವಿಯಾಗಲಿ, ಮಡುವಾಗಲಿ, ಇರುವುದೆಂಬುದರಲ್ಲಿ ಸಂದೇಹವಿಲ್ಲ "ಎಂದನು ಈಮಾತನ್ನು ಕೇಳಿದೊಡನೆ ಬಾಯಾರಿಬಳಲಿದ್ದ ಆ ವಾನರರಿಗೂ ಅದನ್ನು ಪ್ರವೇತಿಸಿನೋಡಬೇಕಂಬ ಉತ್ಸಾಹವು ಹುಟ್ಟಿತು ಆಗಲೇ ಅವರೆಲ್ಲರೂ ಬಿಲದೊಳಗೆ ನುಗ್ಗಿದರು ಆದರ ಅಂತರ್ಭಾಗವು ಗಾಢಾಂಧಕಾರದಿಂದಮುಚ್ಚಿ, ನೋಡಿದಾಗಲೇ ನಡುಕವನ್ನು ಹುಟ್ಟಿಸುವಷ್ಟು ಮಹಾ ಭಯಂಕರವಾಗಿದ್ದುದನ್ನು ನೋಡಿದರು ಇವರು ಮುಂದ ಮುಂದೆ ಹೋದ ಹಾಗೆಲ್ಲಾ,ಆ ಬಿಲದಿಂದ ತಮಗಿದಿರಾಗಿ ಹೊರಟು ಬರುತಿದ್ದ ಸಿಹ್ಮಗಳನ್ನೂ, ಇನ್ನೂ ಅನೇಕ ಮೃಗಗಳನ್ನೂ, ಪಕ್ಷಿಗಳನ್ನೂ ಕಂಡರು ಆದರೂ ಎದೆಗುಂದದೆ ಕತ್ತಲೆಕವಿದ ಆ ಮಹಾಬಿಲಕ್ಕೆ ಪ್ರವೇತಿಸಿಬಿಟ್ಟರು ಆಲ್ಲಿ ಅವಾನರರಿಗೆ ಕಣ್ಣುಗಳಾಗಲಿ, ಅವರ ವೀರ್ಯವಾಗಲಿ ಅವರ ಪರಾಕ್ರಮವಾಗಲಿ ಯಾವುದೊಂದೂ ಕಲಸಕ್ಕಬಾರದೆ ಹೋದುವು ಹಾಗಿದ್ದರೂ ಅವರುವಾಯುಸಂಚಾರದಂತೆ ತಡೆಯಿಲ್ಲದೆ ಆ ಕತ್ತಲೆಯಲ್ಲಿಯೇ ವೇಗದಿಂದ ನಡೆದು ಹೋಗುತಿದ್ದರು ಕೊನೆಗೆ ಬಹುದೂರಕ್ಕೆ ಹೋದಮೇಲೆ ಆಲ್ಲಿ ಅತ್ಯಂತಪ್ರಕಾಶಮಾನವಾಗಿ ರಮಣೀಯವಾದ ಒಂದಾನೊಂದು ಪ್ರದೇಶವು ಇವರ ಕಣ್ಣಿಗೆ ಗೋಚರಿಸುವಂತಾಯಿತು ದೊಡ್ಡ ಮರಗಳ ಸಮೂಹದಿಂದ ದುರ್ಗಮವಾಗಿ, ಗಾಢಾಂಧಕಾರದಿಂದ ತುಂಬಿದ ಆ ಬಿಲದಲ್ಲಿ ಈವಾನರರು ಒಬ್ಬರನ್ನೊಬ್ಬರು ಬಿಗಿಯಾಗಿ ತಬ್ಬಿಕೊಂಡು ಮುಂದೆಮುಂದೆನಡೆದು, ಹಾಗೆಯೇ ಒಂದುಗಾವುದದೂರದವರಗೂ ಹೋದರು, ಇವರೆಲ್ಲರಿಗೂ ಆಗ ಬಾಯಾರಿಕೆಯಿಂದ ಪ್ರಜ್ಞೆತಪ್ಪಿದಂತಾದರೂ, ಸ್ವಲ್ಪಕಾಲದವರಿಗೆ ಅದನ್ನೂಲಕ್ಷ್ಯಮಾಡದೆ ಪ್ರಯತ್ನದಿಂದ ಬಿಲದೊಳಗೆ ಪ್ರವೇತಿಸಿಬಿಟ್ಟರು ಇವರಿಗೆ ಕೂನೆಕೂನೆಗೆ ಪ್ರಾಣದಮೇಲೆಯೇ ಆಸೆಯು ಬಿಟ್ಟುಹೋಯಿತು' ಎಲ್ಲರೂ ಆಹಾರವಿಲ್ಲದೆ ಕೃಶರಾಗಿದ್ದರು ಎಲ್ಲರ ಮುಖಗಳೂ ಬಾಡಿ ಹೋದುವು ಹೀಗೆ ಬಹಳವಾಗಿ ಬಳಲಿಬಂದ ಆ ವಾನರರ ದೃಷ್ಟಿಗೆ ಮುಂದೆ ಸಮೀಪದಲ್ಲಿ ಆ ಬೆಳಕು ಕಾಣಿಸಿದಮೇಲೆಯೇ ಇವರ ಮನಸ್ಸಿಗೆ ಸ್ವಲ್ಪವಾಗಿ ಉಲ್ಲಾಸವು ಹುಟ್ಟಿತು, ಕತ್ತಲೆಯಿಲ್ಲದೆ ಅತಿಮನೋಹರವಾದ ಆ ಪ್ರದೇಶದಲ್ಲಿ ಅಗ್ನಿಯಂತೆ ಜಾಜ್ವಲ್ಯಮಾನಗಳಾಗಿ, ಸುವ

ರ್ಣಮಯಗಳಾಗಿದ್ದ ವೃಕ್ಷಗಳನ್ನು ನೋಡಿದರು ಮತ್ತಿ, ತಾಳೆ, ಹೊನ್ನೆ, ಸುರಹೊನ್ನೆ, ಅಸುಗೆ, ಸಂಪಗೆ ಮುಂತಾದ ಪುಷ್ಪಿತಗಳಾದ ಸಮಸ್ತ ವೃಕ್ಷಗಳೂ, ಸುವರ್ಣಮಯವಾಗಿಯೇ ಹೊಳೆಯುವುದನ್ನು ಕಂಡರು ಅಲ್ಲಿನ ಒಂದೊಂದುಮರವೂ ಚಿತ್ರವಿಚಿತ್ರಗಳಾದ ಚಿನ್ನದ ಗೊಂಚಲುಗಳಿಂದಲೂ ಚಿನ್ನದ ಚಿಗುರುಗಳಿಂದಲೂ, ಶೇಖರಗಳಿಂದಲೂ, ಸುವರ್ಣಲತೆಗಳಿಂದಲೂ ಕೂಡಿ ಸ್ವರ್ಣಾಭರಣಗಳಿಂದಲಂಕರಿಸಲ್ಪಟ್ಟಂತೆಯೇ ಕಾಣಿಸುತಿತ್ತು ಒಂದೊಂದುಮರವೂ ಬಾಲಸೂರ್ಯನಂತ ಹೊಳೆಯುತಿತ್ತು ಒಂದೊಂದು ಮರದ ಜಗುಲಿಯೂ, ವೈಡೂರ್ಯಮಯವಾಗಿದ್ದಿತು ಬಗೆಬಗೆಯ ಬೆಳ್ಳಿಯ ಮರಗಳನ್ನೂ ಕಂಡರು ಜಲಪಕ್ಷಿಗಳಿಂದ ತುಂಬಿ ನೀಲ ವೈಡೂರ್ಯವರ್ಣವುಳ್ಳ ಅನೇಕ ಸರೋವರಗಳನ್ನೂ ಕಂಡರು ಅಲ್ಲಿನ ಕಮಲಗಳೆಲ್ಲವೂ ಸುವರ್ಣಮಯಗಳಾಗಿ, ಬಾಲಸೂರ್ಯ ಬಿಂಬಗಳಿಂತೆಯೇ ಕಾಣಿಸುತಿದ್ದುವು ಅಲ್ಲಿನ ಆಮೆ, ಮೀನು ಮೊದಲಾದ ದೊಡ್ಡದೊಡ್ಡ ಜಲಚರಪ್ರಾಣಿಗಳೂ, ಸುವರ್ಣಮಯಗಳಾಗಿಯೇ ಇದ್ದುವು ತಿಳಿತೀರಿನಿಂದ ತುಂಬಿದ ಇಂತಹ ಅನೇಕಸರೋವರಗಳನ್ನುಕಂಡರು ಅಲ್ಲಲ್ಲಿ ಸುವರ್ಣಮಯಗಳಾದ ದೊಡ್ಡದೊಡ್ಡ ಮನೆಗಳೂ ಗೋಚರಿಸಿದುವು ಚಿನ್ನದ ಕಿಟಕಿಗಳುಳ್ಳವಾಗಿ,ಮುತ್ತಿನ ಮಣಿಗಳಿಂದಲಂಕರಿಸಲ್ಪಟ್ಟ ಚಿನ್ನಬೆಳ್ಳಿಯ ಪಿಸುನಾನಗಳನ್ನೂ, ವೈಡೂರ್ಯಖಚಿತಗಳಾದ ಚಿನ್ನಬೆಳ್ಳಿಯ ನೆಲಗಟ್ಟುಗಳನ್ನೂ ಕಂಡರು ಹವಳದಂಬಿ ಹೊಳೆಯುತ್ತ ಪುಷ್ಪಫಲಗಳಿಂದ ತುಂಬಿದ ಮರಗಳ ಸಾಲನ್ನೂ ಕಂಡರು ಅವೆಲ್ಲವೂ ಸುವರ್ಣಭ್ರಮರಗಳಿಂದಲೂ, ಬಗೆಬಗೆಯ ಸುವಾಸನೆಯುಳ್ಳ ಮಕರಂದರಸಗಳಿಂದಲೂ ಶೋಭಿಸುತಿದ್ದುವು, ಅಲ್ಲಲ್ಲಿ ಸುವರ್ಣರತ್ನಗಳಿಂದ ಚಿತ್ರಿತಗಳಾದ ಶಯನಗಳನ್ನೂ, ಆಸನಗಳನ್ನೂ,ಬೆಲೆಯುಳ್ಳವಾಹನಗಳನ್ನೂ ನೋಡಿದರು ಎಲ್ಲಲ್ಲಿ ನೋಡಿದರೂ ಚಿನ್ನ, ಬೆಳ್ಳಿ, ಕಂಚು ಮೊದಲಾದ ಉತ್ತಮಲೋಹದ ಪಾತ್ರೆಗಳು ರಾಶಿರಾಶಿಯಾಗಿ ಕಾಣಿಸುತಿದ್ದುವು ಅಗರು, ಚಂದನ, ಮುಂತಾದ ಸುಗಂಧದ್ರವ್ಯಗಳು ತುಂಬಿದ್ದುವು ಶುದ್ಧವಾಗಿಯೂ, ರುಚಿಯಾಗಿಯೂ ಇರುವ ಫಲಮೂಲಗಳನ್ನೂ ಸರ್ವೋತ್ತಮಗಳಾದ ಪಾನದ್ರವ್ಯಗಳನ್ನೂ, ರಸವತ್ತಾದ ಜೇನನ್ನೂ, ದಿವ್ಯವಸ್ತ್ರ

ರಾಶಿಗಳನ್ನೂ, ರತ್ನಕಂಬಳಿಗಳನ್ನೂ, ವಿಚಿತ್ರಗಳಾದ ಅಜಿನಗಳನ್ನೂ ಕಂಡರು ಅಲ್ಲಲ್ಲಿ ರಾತಿಹಾಕಲ್ಪಟ್ಟು ಆಗ್ನಿಯಂತೆ ದೇದೀಪ್ಯಮಾನವಾದ ಚಿನ್ನದ ಗಟ್ಟಿಗಳನ್ನೂ ಕಂಡರು, ಹೀಗೆ ಸರ್ವೋತ್ತಮಗಳಾದ ಭೋಗದ್ರವ್ಯಗಳಿಂದ ತುಂಬಿದ ಆ ಸ್ಥಲದಲ್ಲಿ, ಈ ವಾನರರು ಅಲ್ಲಲ್ಲಿ ಹುಡುಕುತ್ತ ಬರುವಾಗ ಸಮೀಪದಲ್ಲಿ ಒಂದು ಸ್ತ್ರೀವ್ಯಕ್ತಿಯನ್ನು ಕಂಡರು ಅವಳು ನಾರುಬಟ್ಟೆಯನ್ನೂ, ಕೃಷ್ಣಾಜಿನವನ್ನೂ ಧರಿಸಿ, ನಿಯತಾಹಾರಳಾಗಿ ತಪಸ್ಸುಮಾಡುತ್ತ ತನ್ನ ತೇಜಸ್ಸಿನಿಂದ ಜ್ವಲಿಸುವಂತೆ ಕಾಣುತಿದ್ದಳು ಅವಳನ್ನು ನೋಡಿದೊಡನೆ ಈ ವಾನರರಿಗೆ ಅತ್ಯಾಶ್ಚರ್ಯವೂ, ಮಹಾಭಯವೂ ಉಂಟಾಯಿತು ಎಲ್ಲರೂ ಅಲ್ಲಿಯೇ ಸ್ತಬ್ಧರಾಗಿ ನಿಂತರು ಆಗ ಹನುಮಂತನು ಧೈರ್ಯದಿಂದ ಮುಂದೆಬಂದು ಅವಳನ್ನು ಕುರಿತು "ಎಲೈ ನೀನು ಯಾರು? ಈ ಬಿಲವು ಯಾರದು? ಈ ಉತ್ತಮದ್ರವ್ಯಗಳೆಲ್ಲಿಯವು?" ಎಂದು ಕೈನುಗಿದು ವಿನಯದಿಂದ ಕೇಳಿದನು ಇಲ್ಲಿಗೆ ಐವತ್ತನೆಯಸರ್ಗವು

ಸ್ವಯಂಪ್ರಭೆಯು ವಾನರರಿಗೆ ಋಕ್ಷಬಿಲವೃತ್ತಾಂತವನ್ನು ಹೇಳಿದುದು


ಹೀಗೆ ಹನುಮಂತನು ಆ ತಾಪಸಿಯನ್ನು ಪ್ರಶ್ನೆಮಾಡಿ, ಪುನಃ ಮಹಾನುಭಾವೆಯಾದ ಆಕೆಯನ್ನು ಕುರಿತು "ಎಲೈ ಧಾರ್ಮಿಕಳೇ! ನಾವು ಮಾರ್ಗಶ್ರಮದಿಂದ ಬಳಲಿ, ಹಸಿವು ಬಾಯಾರಿಕೆಗಳಿಂದ ಪೀಡಿತರಾಗಿ, ಇಲ್ಲಿ ಜಲಫಲಾದಿಗಳು ಸಿಕ್ಕಬಹುದೆಂದೆಣಿಸಿ ಹಿಂದುಮುಂದುನೋಡದೆ ಎಲ್ಲರೂ ಕತ್ತಲೆಕವಿದ ಈ ಬಿಲದೊಳಗೆ ಪ್ರವೇಶಿಸಿಬಿಟ್ಟೆವು ಮುಖ್ಯವಾಗಿ ನಾವು ಹಸಿವನ್ನೂ, ಬಾಯಾರಿಕೆಯನ್ನೂ, ತಡೆಯಲಾರದುದಕ್ಕಾಗಿಯೇ ಈ ಮಹಾಬಿಲಕ್ಕೆ ಬಂದುಬಿಟ್ಟೆವೇಹೊರತು ಬೇರೆಯಲ್ಲ ಇಲ್ಲಿನ ಅದ್ಭುತಗಳಾದ ದಿವ್ಯಪದಾರ್ಥಗಳನ್ನು ನೋಡಿದೊಡನೆ, ನಮಗೆ ಮಹಾಭಯವೂ, ಅತ್ಯಾಶ್ಚರ್ಯವೂ ಉಂಟಾಗಿರುವುದು ಈಗ ನಮಗೆ ಏನೊಂದೂ ತೋರದಿರುವುದು ಹಿಂದು ಮುಂದು ತೋರದೆ ಸ್ತಬ್ಧರಾಗಿರುವೆವು ಆಹಾ! ಬಾಲಸೂರ್ಯನಂತೆ ಹೊಳೆಯುತ್ತಿರುವ ಈ ಸುವರ್ಣವೃಕ್ಷಗಳನ್ನೂ, ರುಚಿ

ಯಾಗಿಯೂ, ಶುದ್ಧವಾಗಿಯೂ ಇರುವ ಈ ಫಲಮೂಲಗಳನ್ನೂ, ಸ್ವರ್ಣ ವಿಮಾನಗಳನ್ನೂ, ಚಿನ್ನದ ಗವಾಕ್ಷಗಳುಳ್ಳ ರತ್ನಖಚಿತಗಳಾದ ಈಬೆಳ್ಳಿಯ ಮನೆಗಳನ್ನೂ ನೋಡಿ ನಮಗೆ ಅತ್ಯಾಶ್ಚರ್ಯವು ಹುಟ್ಟಿರುವುದು ಇವೆಲ್ಲವೂ ಯಾರಿಗೆ ಸೇರಿದುವು? ಸುಗಂಧಪುಷ್ಪಗಳೆಂದಲೂ, ಉತ್ತಮಫಲಗಳಿಂದಲೂ, ಕೂಡಿ ಪವಿತ್ರಗಳಾದ ಈ ಸುವರ್ಣವೃಕ್ಷಗಳು ಯಾವನ ಪ್ರಭಾವದಿಂದ ಹುಟ್ಟಿರುವುವು? ಸ್ವಚ್ಛವಾದ ನೀರಿನಲ್ಲಿ ಈ ಚಿನ್ನದ ಕಮಲಗಳು ಹುಟ್ಟಿರುವ ಕಾರಣವೇನು? ಇಲ್ಲಿನ ಮಡುಗಳಲ್ಲಿರುವ ಆಮೆ, ಮೀನು ಮೊದಲಾದ ಜಲ ಚರಪ್ರಾಣಿಗಳೂ ಕೂಡ, ಸ್ವರ್ಣಮಯಗಳಾಗಿಯೇ ತೋರುತ್ತಿರುವುವು ಇವೆಲ್ಲವೂ ಉಂಟಾದುದು ಹೇಗೆ? ನಿನ್ನ ತಪೋಮಹಿಮೆಯಿಂದಲೇ ಈ ಅದ್ಭುತವಸ್ತುಗಳು ಕಾಣುವುವೇ? ಅಥವಾ ಬೇರೊಬ್ಬರ ಪ್ರಭಾವದಿಂದ ಇವು ಹುಟ್ಟಿರುವುವೇ? ನಮ್ಮೊಬ್ಬರಿಗೂ ಈ ವಿಷಯವು ತಿಳಿಯದುದರಿಂದ ನಮ್ಮ ಶಂಕೆಯನ್ನು ನೀನೇ ಪರಿಹರಿಸಬೇಕು" ಎಂದನು ಧರ್ಮಚಾರಿಣಿಯಾದ ಆ ತಾಪಸಿಯು ಪ್ರಾಣಿಹಿತದಲ್ಲಿಯೇ ನಿರತಳಾದುದರಿಂದ ಆ ಹನುಮಂತನನ್ನು ಕುರಿತು, "ಎಲೈ! ಮಯನೆಂಬ ಮಹಾತೇಜಸ್ವಿಯಾದ,*ದಾನವೋತ್ತಮನೊಬ್ಬನುಂಟು ಅವನು ಬಹಳಮಾಯಾವಿಯು ಅವನಿಂದಲೇ ಈ ಶೃಂಗಾರದ ತೋಟವೆಲ್ಲವೂ ನಿರ್ಮಿಸಲ್ಪಟ್ಟಿತು ಪೂರ್ವದಲ್ಲಿ ಆ ಮಯನೇ ಸಮಸ್ತ ದಾನವರಿಗೂ, ವಿಶ್ವಕರ್ಮನಾಗಿದ್ದನು ಸುವರ್ಣಮಯವಾದ ಈ ದಿವ್ಯಗೃಹವನ್ನು ನಿರ್ಮಿಸಿದ ಆ ಮಯನು ಸಾವಿರವರುಷಗಳವರೆಗೆ ಮಹಾರಣ್ಯದಲ್ಲಿ ತಪಸ್ಸುಮಾಡಿ, ಬ್ರಹ್ಮನಿಂದ †ಶುಕ್ರಪ್ರಣೀತವಾದ ಶಿಲ್ಪಶಾಸ್ತ್ರವೆಲ್ಲವೂ ತನಗೆ ಸ್ವಾಧೀನವಾಗುವಂತೆ ವರವನ್ನು ಪಡೆದನು ಹೀಗೆ ಮಾಯಾಬಲಸಂ

---

* ಇಲ್ಲಿ ದಾನವೋತ್ತಮನಾದ ಮಯನೆಂಬುದರಿಂದ ಇವನು ಅಸುರರಕ್ಷಕನಾದ ಮಯನಲ್ಲವೆಂದು ತೋರುವುದು. ಇವನು ತ್ರಿಪುರಗಳಿಗೆ ಅಧಿಪತಿಯೆಂದೂ, ಆ ತ್ರಿಪುರಗಳು ನಶಿಸಿದಮೇಲೆ ಈ ದಾನವನು ತನ್ನ ರಕ್ಷಣೆಗಾಗಿ ಈ ಬಿಲವನ್ನು ಮಾಡಿಕೊಂಡನೆಂದೂ ಮಾತ್ಸ್ಯಪುರಾಣದಲ್ಲಿ ತ್ರಿಪುರದಹನಕಥೆಯಲ್ಲಿ ಹೇಳಲ್ಪಟ್ಟಿದೆ

† ಇಲ್ಲಿ "ಜನರಲ್ಲಿ ಮನಸ್ಸಿನಲ್ಲಿ ಕೋರುವ ಧನವೆಲ್ಲವೂ ತನಗೆ ವಶವಾಗುವಂತೆ" ಎಂದೂ ಅರಾಧಿಂತರವುಂಟು



1615. ಸ್ವಯಂಪ್ರಭೆಯು ವಾನರರಿಗೆ ಫಲಮೂಲಾದಿಗಳನ್ನು ಕೊಡುವುದು.

ಪನ್ನನಾಗಿಯೂ, ಸಮಸ್ತಕಾಮಭೋಗಗಳನ್ನೂ ಸ್ವೇಚ್ಛೆಯಿಂದ ಪಡೆಯಬಲ್ಲ ಶಕ್ತಿಯುಳ್ಳವನಾಗಿಯೂ ಇದ್ದ ಆ ಮಯನು, ಈ ಮಹಾವನದಲ್ಲಿಯೇ ಕೆಲವು ಕಾಲದವರೆಗೆ ಸುಖದಿಂದಿದ್ದನು ಅವನು ದಾನವನಾಗಿದ್ದರೂ ಹೇಮೆಯೆಂಬ ಅಪ್ಸರಸ್ತ್ರೀಯೊಡನೆ ಸೇರಿದುದನ್ನು ನೋಡಿ ದೇವೇಂದ್ರನು ಕೋಪದಿಂದ ವಜ್ರಾಯುಧವನ್ನೆತ್ತಿ ಆತನನ್ನು ಹೊಡೆದುಕೊಂದನು ಆಗ ಬ್ರಹ್ಮನು ಈ ಸರೋವ್ರೋತ್ತಮವಾದ ವನವನ್ನೂ, ಇಲ್ಲಿನ ಶಾಶ್ವತಭೋಗಗಳನ್ನೂ, ಸುವರ್ಣಮಯವಾದ ಈ ದಿವ್ಯಗೃಹವನ್ನೂ ಹೇಮೆಗೆ ಕೊಟ್ಟುಬಿಟ್ಟನು ಎಲೈ ವಾನರೋತ್ತಮನೆ! ನಾನು ಮೇರುಸಾವರ್ಣಿಯ ಮಗಳು ನನಗೆ ಸ್ವಯಂಪ್ರಭೆಯೆಂದು ಹೆಸರು *ಆ ಹೇಮೆಯ ಮನೆ ಮೊದಲಾದ ಈ ಸಮಸ್ತವಸ್ತುಗಳನ್ನೂ ಈಗ ನಾನು ಇಲ್ಲಿದ್ದು ರಕ್ಷಿಸುತ್ತಿರುವೆನು ನೃತ್ತಗೀತಗಳಲ್ಲಿ ನಿಪುಣೆಯಾದ ಆ ಹೇಮೆಯು ನನಗೆ ಪ್ರಿಯಸಖಿಯು ಅವಳು ಬೇರೆ ಯಾರಿಂದಲೂ, ನನಗೆ ತಿರಸ್ಕಾರವುಂಟಾಗದಂತೆ ವರವನ್ನೂ ಕೊಟ್ಟಿರುವಳು ಆದರಿಂದಲೇ ನಾನು ನಿರ್ಭಯಳಾಗಿ ಅದನ್ನು ಕಾಪಾಡುತ್ತಿರುವೆನು ಎಲೈ ವಾನರೋತ್ತಮರ! ನೀವು ಇಲ್ಲಿಗೆ ಯಾವ ಕಾರ್ಯಾರ್ಥವಾಗಿ ಬಂದು, ಯಾವ ಕಾರಣದಿಂದ ಸುತ್ತುತ್ತಿರುವಿರಿ? ಬೇರೊಬ್ಬರಿಗೂ ಪ್ರವೇಶಿಸಲಸಾಧ್ಯವಾದ ಈ ಮಹಾಬಿಲವನ್ನು ನೀವು ಹೇಗೆ ಕಂಡು ಹಿಡಿದಿರಿ? ಮೊದಲು ಇಲ್ಲಿ ನೀವು ನಿಮಗೆ ಭಕ್ಷಣಯೋಗ್ಯಗಳಾದ ಫಲಮೂಲಗಳನ್ನು ತಿಂದು, ತಿಳಿನೀರನ್ನೂ ಕುಡಿದು, ನಿಮ್ಮ ಹಸಿವು ಬಾಯಾರಿಕೆಗಳನ್ನು ತೀರಿಸಿಕೊಂಡಮೇಲೆ, ನಿಮ್ಮ ವೃತ್ತಾಂತವೆಲ್ಲವನ್ನೂ ನನಗೆ ತಿಳಿಸಬೇಕು" ಎಂದಳು ಇಲ್ಲಿಗೆ ಐವತ್ತೊಂದನೆಯ ಸರ್ಗವು

{ ಹನುಮಂತನು ತಾನು ಬಂದ ಉದ್ದೇಶವನ್ನು ಸ್ವಯಂಪ್ರಭೆಗೆ ತಿಳಿಸಿದುದು }

ಆಗ ಧರ್ಮಚಾರಿಣಿಯಾದ ಸ್ವಯಂಪ್ರಭೆಯು ಅತಿಪ್ರೀತಿಯಿಂದ ಆ ವಾನರರನ್ನು ನೋಡಿ "ಎಲೈ ವಾನರರೆ! ಇಲ್ಲಿನ ಫಲಮೂಲಗಳನ್ನು ತಿಂದು

---

* ಇದರಿಂದ ಆ ಹೇಮೆಯು ಬ್ರಹ್ಮಸದನಕ್ಕೆ ಹೋಗಿ ಸೇರಿದಳೆಂದು ಸೂಚಿತವು.

ದರಿಂದ ನಿಮ್ಮ ಬಳಲಿಕೆಯು ತೀರಿದ್ದರೆ, ನಿಮ್ಮ ವೃತ್ತಾಂತವನ್ನೂ ನಾನು ತಿಳಿಯಬಹುದಾಗಿದ್ದರೆ ಅದನ್ನು ವಿವರಿಸಿ ತಿಳಿಸಬೇಕು ನನಗೆ ಅದನ್ನು ಕೇಳಬೇಕೆಂದು ಕುತೂಹಲವಿರುವುದು" ಎಂದಳು ಇದನ್ನು ಕೇಳಿ ಹನುಮಂತನು ತಮ್ಮ ವೃತ್ತಾಂತವೆಲ್ಲವನ್ನೂ ನಿಷ್ಕಪಟವಾಗಿ ಯಥಾಸ್ಥಿತವಾಗಿ ತಿಳಿಸಲಾರಂಭಿಸಿ "ಎಲೆ ತಪಸ್ವಿನಿ! ಸನುಷ್ಯಲೋಕಕ್ಕೂ ರಾಜನಾಗಿಯೂ ಮಹೇಂದ್ರವರುಣರಿಗೆ ಸಾಟಿಯಾಗಿಯೂ ಇರುವ ರಾಮನೆಂಬ ರಾಜಕುಮಾರನೊಬ್ಬನಿರುವನು ಅವನು ದಶರಥಪುತ್ರನು ಶ್ರೀಮಂತನು ಅವನು ತಮ್ಮನಾದ ಲಕ್ಷ್ಮಣನೊಡನೆಯೂ ಪತ್ನಿಯಾದ ಸೀತೆಯೊಡನೆಯೂ ದಂಡಕಾರಣ್ಯಕ್ಕೆ ಬಂದನು ಆ ಮೂವರೂ ಜನಸ್ಥಾನದಲ್ಲಿರುವಾಗ, ರಾವಣನುರಾಮನ ಪತ್ನಿಯಾದ ಸೀತೆಯನ್ನು ಬಲಾತ್ಕಾರದಿಂದ ಕದ್ದುಯ್ದನು ಆಮೇಲೆ ವಾನರರಾಜನಾದ ಸುಗ್ರೀವನಿಗೂ, ರಾಮನಿಗೂ ಸ್ನೇಹವುಂಟಾಯಿತು ಆ ಸುಗ್ರೀವನು ನಮ್ಮೆಲ್ಲರನ್ನೂ ಕರೆದು, ಸೀತೆಯನ್ನು ಹುಡುಕಿ ಬರುವುದಕ್ಕಾಗಿ ಯಮರಕ್ಷಿತವಾಗಿ, ಅಗಸ್ತ್ಯಸಂಚಾರಯೋಗ್ಯವಾದ ಈ ದಕ್ಷಿಣದಿಕ್ಕಿಗೆ ಕಳುಹಿಸಿರುವನು ಆ ಸುಗ್ರೀವನು ಭಯಂಕರಾಕಾರವುಳ್ಳ ಅಂಗದನೇ ಮೊದಲಾದ ಈ ವಾನರಪ್ರಮುಖರಲ್ಲರನ್ನೂ ನೋಡಿ "ನೀವೆಲ್ಲರೂ ಸೇರಿ ಸೀತೆಯನ್ನೂ, ಕಾಮರೂಪಿಯಾದ ರಾವಣನನ್ನೂ ಹುಡುಕಿ ತರಬೇಕು" ಎಂದು ಕ್ರೂರಶಾಸನವನ್ನು ಮಾಡಿರುವನು ನಾವೆಲ್ಲರೂ ಈ ದಕ್ಷಿಣದಿಕ್ಕೆಲ್ಲವನ್ನೂ ಸುತ್ತಿಬಳಲಿ, ಬಾಯಾರಿ, ಕೊನೆಗೆ ಒಂದು ಮರದಕೆಳಗೆ ಸೇರಿದೆವು ಎಲ್ಲರ ಮುಖವೂ ಬಣ್ಣಗೆಟ್ಟಿತು ನಾವೆಲ್ಲರೂ ಹಿಂದುಮುಂದು ತೋರದೆ ಚಿಂತೆಯೆಂಬ ಮಹಾಸಮುದ್ರದಲ್ಲಿ ಮುಳುಗಿ ದಾರಿ ತೋರದೆ ದೀನರಾಗಿದ್ದೆವು ನಾವು ನಾಲ್ಕುಕಡೆಗಳನ್ನೂ ದೃಷ್ಟಿಯಿಟ್ಟು ನೋಡಿದಾಗ ನಮಗೆ ಒಂದು ಬಿಲವು ಕಾಣಿಸಿತು ಅದು ಗಿಡುಬಳ್ಳಿಗಳಿಂದ ಆಚ್ಛಾದಿತವಾಗಿ ಕತ್ತಲೆಕವಿದಿತ್ತು ಆದರೆ ಆ ಬಿಲದ್ವಾರದಿಂದ ನೀರಿನಲ್ಲಿ ನೆನೆದ ಗರಿಗಳುಳ್ಳ ಹಂಸಕಾರಂಡವಗಳೇ ಮೊದಲಾದ ಜಲಪಕ್ಷಿಗಳು ಗರಿಗಳನ್ನೊದರುತ್ತ ಹಾರಿಬರುವುದನ್ನು ಕಂಡೆವು ಆಗ ನಾನು ಈ ಬಿಲದಲ್ಲಿ ನೀರಿರಬಹುದೆಂದೆಣಿಸಿ, ವಾನರರನ್ನು ಕುರಿತು, ಈ ಬಿಲಕ್ಕೆ ಹೋಗಿ ನೋ

ಡುವೆವೆಂದು ಹೇಳಿದೆನು ಅವರಿಗೂ ಅದೇ ಅನುಮಾನವು ತೋರಿತು ಮತ್ತು ನಾವೆಲ್ಲರೂ ಸ್ವಾಮಿಕಾರ್ಯದಲ್ಲಿ ಅತ್ಯಾತುರವುಳ್ಳವರಾಗಿದ್ದುದರಿಂದ ಎಲ್ಲರಿಗೂ ಹೋಗಿನೋಡಬೇಕಂಬ ಸಮ್ಮತಿಹುಟ್ಟಿತು ನಾವೆಲ್ಲರೂ ಒಬ್ಬರನ್ನೊಬ್ಬರು ಬಲವಾಗಿ ತಬ್ಬಿಕೊಂಡು, ಅದೇ ಬಾಗಿಲಿಂದ ಅಂಧಕಾರಾವೃತವಾದ ಈ ಬಿಲಕ್ಕೆ ಪ್ರವೇಶಿಸಿಬಿಟ್ಟೆವು ಈ ಕಾರ್ಯಕ್ಕೆ ನಾನೇ ಮೂಲವು ಈ ಕಾರಣದಿಂದಲೇ ನಾವು ಇಲ್ಲಿಗೆ ಬಂದೆವು.ಹಸಿವಿನಿಂದ ಬಳಲಿದ ನಮಗೆ ಈಗ ಮಹಾತ್ಮಳಾದ ನೀನು ಗೋಚರಿಸಿದೆ ಅತಿಥಿಧರ್ಮವನ್ನನುಸರಿಸಿ ನೀನು ನಮಗೆ ಕೊಟ್ಟ ಫಲಮೂಲಗಳೆಲ್ಲವನ್ನೂ ಹಸಿವಿನಿಂದ ಪೀಡಿತರಾದ ನಾವು ಭಕ್ಷಿಸಿ ತೃಪ್ತರಾದೆವು ಹಸಿವಿನಿಂದ ಸಾಯುತಿದ್ದ ನಮ್ಮೆಲ್ಲರಿಗೂ ಈಗ ನೀನೇ ಪ್ರಾಣದಾನಮಾಡಿದಂತಾಯಿತು ಇದಕ್ಕಾಗಿ ವಾನರರಾದ ನಾವು ಮಾಡಬೇಕಾದ ಪ್ರತ್ಯುಪಕಾರವೇನು?" ಎಂದನು ಹೀಗೆ ವಾನರರು ಹನುಮಂತನ ಮೂಲಕವಾಗಿ ಈ ಮಾತನ್ನಾಡಲು, ಅದನ್ನು ಕೇಳಿ ಸರ್ವಜ್ಞೆಯಾದ ಸ್ವಯಂಪ್ರಭೆಯು, ಅವರೆಲ್ಲರನ್ನೂ ಕುರಿತು, "ಎಲ್ಲೆ ವಾನರರ! ನಿಮ್ಮೆಲ್ಲರ ವಿಷಯದಲ್ಲಿಯೂ ನನಗೆ ಬಹಳ ಸಂತೋಷವುಂಟಾಯಿತು ಕೇವಲಧರ್ಮವೊಂದನ್ನೇ ಆಚರಿಸುತ್ತಿರುವ ನನಗೆ ನೀವು ಮಾಡಬೇಕಾದ ಕಾರ್ಯವೇನೂ ಇಲ್ಲವು ನಿಮ್ಮಿಂದ ನಾನು ಯಾವ ಪ್ರತ್ಯುಪಕಾರವನ್ನೂ ಕೋರುವವಳಲ್ಲ" ಎಂದಳು. ಇಲ್ಲಿಗೆ ಐವತ್ತೆರಡನೆಯ ಸರ್ಗವು

ಸ್ವಯಂಪ್ರಭೆಯು ನಿಜಶಕ್ತಿಯಿಂದ ವಾನರರನ್ನು ಬಿಲದಿಂದ ಹೊರಕ್ಕೆ ತಂದುದು. ವಾನರರು ಕಾಲವು ಮೀರಿಹೋದುದಕ್ಕೂ, ಸೀತೆಯನ್ನು ಕಾಣದುದಕ್ಕೂ ದುಃಖಿಸುತಿದ್ದುದು

ನಿರ್ದುಷ್ಟವಾದ ನಡತೆಯುಳ್ಳ ಆ ತಪಸ್ವಿನಿಯು, ಧರ್ಮಪ್ರಧಾನವಾದ ಈ ಶುಭವಾಕ್ಯವನ್ನು ಹೇಳಿದಮೇಲೆ, ಹನುಮಂತನು ಆಕೆಯನ್ನು ಕುರಿತು "ಎಲೆ ಧರ್ಮಚಾರಿಣಿ! ಈಗ ನಾವೆಲ್ಲರೂ ನಿನ್ನಲ್ಲಿ ಮರೆಬಿದ್ದಿರುವೆವು. ಮಹಾತ್ಮನಾದ ಸುಗ್ರೀವನು ನಮಗೆ ನಿರ್ಣಯಿಸಿದ್ದ ಕಾಲವು ಈ ಬಿಲದಲ್ಲಿಯೇ ಕಳೆದುಹೋಯಿತು. ಈ ಬಿಲವನ್ನು ಬಿಟ್ಟುಹೊರಗೆ ಹೋಗುವು

ದಕ್ಕೂ ದಾರಿತೋರದೆ ತತ್ತಳಿಸುತ್ತಿರುವೆವು ಹೇಗಾದರೂ ನೀನು ನಮ್ಮ ನ್ನು ಈ ಭಯಂಕರವಾದ ಬಿಲದಿಂದ ಹೊರಕ್ಕೆ ಬಿಟ್ಟು ಕಾಪಾಡಬೇಕು ನಾವು ಈಗ ನಮ್ಮ ರಾಜನಾದ ಸುಗ್ರೀವನ ಆಜ್ಞೆಯನ್ನೂ ಮೀರಿದಂತಾ ಯಿತು ಅವನು ಈ ಆಜ್ಞೆಯನ್ನು ಮೀರಿದವರಿಗೆ ನಿಜವಾಗಿ ಮರಣದಂಡನೆ ಯನ್ನೇ ವಿಧಿಸುವಂತೆ ಕ್ರೂರಶಾಸನವನ್ನು ವಿಧಿಸಿರುವುದರಿಂದ, ಈ ನಮ್ಮೆಲ್ಲ ರ ಆಯುಸ್ಸೂ ಇಂದಿಗೆ ತೀರಿತೆಂದೇ ಎಣಿಸಬೇಕಾಗಿದೆ ಸುಗ್ರೀವನ ಭಯ ದಿಂದ ಕಂದಿಕುಂದಿ ಕೊರಗಿದ ನಮ್ಮೆಲ್ಲರನ್ನೂ ಈಗ ನೀನೇ ರಕ್ಷಿಸಬೇಕು ನಾವು ಇನ್ನೂ ಮುಂದೆ ನಡೆಸಬೇಕಾದ ದೊಡ್ಡ ಕಾರ್ಯವಿರುವುದು ನಾವು ಇಲ್ಲಿ ಸಿಕ್ಕಿಬಿದ್ದಿರುವುದರಿಂದ ಆ ಕೆಲಸವನ್ನೂ ನಡೆಸುವುದಕ್ಕಿಲ್ಲ" ಎಂದನು, ಇದನ್ನು ಕೇಳಿ ಆ ತಾಪಸಿಯು ಹನುಮಂತನನ್ನು ನೋಡಿ "ಎಲೈ ವಾನ ರೋತ್ತಮನೆ! ಈ ಬಿಲವನ್ನು ಪ್ರವೇತಿಸಿದಮೇಲೆ ಪ್ರಾಣದೊಡನೆ ಹಿಂತಿ ರುಗಿ ಹೋಗುವುದು ಯಾವನಿಗೂ ಸಾಧ್ಯವಲ್ಲವೆಂದೇ ನನಗೆ ತೋರುವುದು ಆದರೂ ನಾನು ಇದುವರೆಗೆ ಎಷ್ಟೋ ನಿಯಮಗಳನ್ನು ಮಾಡಿ ಸಂಪಾದಿಸಿದ ಪುಣ್ಯಫಲದಿಂದ, ನಿಮ್ಮೆಲ್ಲರನ್ನು ಮಾತ್ರ ಈ ಬಿಲದಿಂದ ಹೊರಕ್ಕೆ ತಂದು ಸೇರಿಸುವೆನು ಆದರೆ, ನೀವು ಹೊರಗೆ ಹೋಗಿ ಸೇರುವವರೆಗೂ ನಿಮ್ಮ ಕ ಣ್ಣುಗಳನ್ನು ಮುಚ್ಚಿಕೊಂಡಿರಬೇಕು ಹಾಗೆ ನೀವು ಕಣ್ಣುಗಳನ್ನು ಮುಚ್ಚಿ ಕೊಳ್ಳದಿದ್ದರೆ, ಹೊರಗೆ ಹೋಗುವುದು ನಿಮಗೆ ಎಷ್ಟುಮಾತ್ರವೂ ಸಾಧ್ಯ ವಲ್ಲ" ಎಂದಳು ಇದನ್ನು ಕೇಳಿದೊಡನೆ ವಾನರರಿಗೆ ಮಿತಿಮೀರಿದ ಸಂ ತೋಷವುಂಟಾಯಿತು ಆಗಲೇ ಅವರೆಲ್ಲರೂ ತಮ್ಮ ಕಣ್ಣೆವೆಗಳನ್ನು ಮುಚ್ಚಿ ಕೊಂಡುದಲ್ಲದೆ, ತಮ್ಮ ಎರಡುಕೈಗಳಿಂದಲೂ ಬಲವಾಗಿ ಕಣ್ಣುಗಳನ್ನು ಅಪ್ಪಿ ನಿಂತಿದ್ದರು. ಆಗ ಸ್ವಯಂಪ್ರಭೆಯು ಕಣ್ಣುಮುಚ್ಚಿನಿಂತಿರುವ ಆ ಸಮಸ್ತವಾನರರನ್ನೂ ತನ್ನ ತಪೋಮಹಿಮೆಯಿಂದ ಎವೆಹಾರುವಷ್ಟರಲ್ಲಿ ಯೇ ಹೊರಕ್ಕೆ ತಂದುಬಿಟ್ಟಳು ವಾನರರೆಲ್ಲರೂ ಆ ಸಂಕಟಪ್ರದೇಶ ದಿಂದ ತಪ್ಪಿಸಿಕೊಂಡು ಬಂದು ನಿಂತಮೇಲೆ, ಧರ್ಮಚಾರಿಣಿಯಾದ ತಾಪಸಿ ಯು ಅವರನ್ನು ಸಮಾಧಾನಪಡಿಸುತ್ತ "ಎಲೈ ವಾನರರೆ! ಬಗೆಬಗೆಯ ಗಿಡುಬಳ್ಳಿಗಳಿಂದ ಶೋಭಿಸುವ ಈ ಪರ್ವತವೇ ವಿಂಧ್ಯವು; ಇಗೋ! ಇದೇ

ಪ್ರಸ್ರವಣಶೈಲವು ಇದೋ ಇತ್ತಲಾಗಿ ಮಹೋದಧಿಯೆಂಬ ಸಮುದ್ರವುಂಟು ನಿಮ್ಮೆಲ್ಲರಿಗೂ ಶುಭವಾಗಲಿ' ನಾನು ಹೋಗಿಬರುವೆನು " ಎಂದುಹೇಳಿ ಆ ಸ್ವಯಂಪ್ರಭೆಯು ಸಂಪದ್ಯುಕ್ತವಾದ ತನ್ನ ಬಿಲವನ್ನು ಪ್ರವೇಶಿಸಿಬಿಟ್ಟಳು ಆಮೇಲೆ ಈ ವಾನರರೆಲ್ಲರೂ ಮುಂದೆ ಭಯಂಕರವಾಗಿದ್ದ ಮಹಾಸಮುದ್ರವನ್ನು ಕಂಡರು ಭಯಂಕರಗಳಾದ ಅಲೆಗಳಿಂದ ತುಂಬಿ, ಅಪಾರವಾಗಿ ಮೊರೆಯಿಡುತಿದ್ದ ಆ ಮಹಾಸಮುದ್ರವನ್ನು ಆಶ್ಚರ್ಯದಿಂದ ನೋಡುತಿದ್ದರು ಮಯನ ಮಾಯೆಯಿಂದ ನಿರ್ಮಿತವಾದ ಆ ಬೆಟ್ಟಗಳ ಗುಹೆಯಲ್ಲಿ ಸಂಚರಿಸುತಿದ್ದಾಗಲೇ ಈ ವಾನರರಿಗೆ ಸುಗ್ರೀವನು ಹೇಳಿದ್ದ ಒಂದುತಿಂಗಳಕಾಲವೂ ವೀರಿಹೋಯಿತು ಈ ವಾನರರ ಮನಸ್ಸಿನಲ್ಲಿ ಭಯವೂ ಹೆಚ್ಚುತ್ತ ಬಂದಿತು ಇವರೆಲ್ಲರೂ ಪುಷ್ಪಿತಗಳಾದ ಗಿಡಗಳುಳ್ಳ ಆ ವಿಂಧ್ಯಪರ್ವತದ * ನೈರುತ್ಯಭಾಗದ ತಪ್ಪಲಮೇಲೆ ಒಂದುಕಡೆಯಲ್ಲಿ ಒಟ್ಟಾಗಿ ಸೇರಿ ಕುಳಿತು ಚಿಂತಿಸುತಿದ್ದರು ಮುಂದೆ ವಸಂತಋತುವಿನಲ್ಲಿ ಫಲಿಸತಕ್ಕ ಮಾವು ಮೊದಲಾದ ಮರಗಳೆಲ್ಲವೂ ಫಲಪುಷ್ಪಗಳ ಭಾರದಿಂದ ಬಗ್ಗಿ, ನೂರಾರು ಕೊನೆಗಳಿಂದ ಉಲ್ಲಾಸಹೊಂದಿರುವುದನ್ನು ನೋಡಿದರು ಆಗಲೇ ವಸಂತಕಾಲವು ಪ್ರಾಪ್ತಲಾದುದನ್ನೂ ನೋಡಿ ಇವರ ಮನಸ್ಸಿನ ಭಯವು ಮಿತಿಮೀರಿಹೋಯಿತು ಇಷ್ಟುಕಾಲವು ಕಳೆದು ಹೋದಮೇಲೆ ಸುಗ್ರೀವನಿಂದ ತಮಗೆ ಮರಣಶಿಕ್ಷೆಯೇ ನಿಜವೆಂದು ನಿಶ್ಚಯಿಸಿಕೊಂಡವರಾಗಿ ಒಬ್ಬರಿಗೊಬ್ಬರು ವಿಚಾರಮಾಡುತ್ತ "ಓಹೋ' ಆಗಲೇ † ಶಿಶಿರಋತುವು ಕಳೆದು ವಸಂತವು

---

* "ಹಿಮವದ್ವಿಂಧ್ಯಶೈಲಾಭ್ಯಾಂ ಪ್ರಾಯೋವ್ಯಾಪ್ತಾವಸುಂಧರಾ" ಎಂಬುದಾಗಿ ವಿಂಧ್ಯಪರ್ವತವು ಪಶ್ಚಿಮದಕ್ಷಿಣಸಮುದ್ರತೀರದವರೆಗೆ ವ್ಯಾಪಿಸಿರುವುದರಿಂದ, ವಾನರರು ಆ ದಿಕ್ಕಿನ ಕೊನೆಯವರೆಗೂಹೋಗಿ ಅಲ್ಲಿರುತಿದ್ದರೆಂದೂಹ್ಯವು

† ವಸಂತದಲ್ಲಿ ಫಲಿಸುವ ಮಾವು ಮುಂತಾದ ಗಿಡಗಳಲ್ಲಿ, ಮೊದಲಿನ ಶಿಶಿರಋತು ವಿನಲ್ಲಿಯೇ ಹೂಗಳು ಕಾಣುವುದರಿಂದ, ಆ ಪುಷ್ಪಗಳಿನ್ನು ಕಂಡಾಗಲೇ ವಸಂತವು ಸಮೀಪಿಸಿದುದಾಗಿ ತಿಳಿದುಕೊಂಡರೆಂದು ಭಾವವು. ಸುಗ್ರೀವನು ಶರತ್ಕಾಲದ ಕೊನೆಯ ಭಾಗವಾದ ಮಾರ್ಗಶೀರ್ಷಮಾಸದಲ್ಲಿ ವಾನರಸೇನೆಯನ್ನು ಕರೆಸಿ, ಪುಷ್ಯಮಾಸವನ್ನು ಅವರ ಸೀತಾನ್ವೇಷಣಕ್ಕೆ ಗಡುವಾಗಿ ಮಾಡಿ ಕಳುಹಿಸಿದನು, ಆ ಪುಷ್ಯಮಾಸವು ಕಳೆದು ಹೋಗಿ, ಆಗ ಫಾಲ್ಗುನವು ನಡೆಯುತಿದ್ದುದರಿಂದಲೇ ಇಲ್ಲಿ ವಸಂತರ್ತುವು ಸಮೀಪಿಸಿದುದಾಗಿ ಹೇಳಿದರೆಂದು ಗ್ರಾಹ್ಯವು

ಪ್ರಾಪ್ತವಾಯಿತು ನಾವು ರಾಜಾಜ್ಞೆಯನ್ನೂ ಮೀರಿದಂತಾಯಿತು. ಇನ್ನು ನಮ್ಮ ಗತಿಯೇನು"ಎಂದು ಹೇಳುತ್ತ ತಮ್ಮ ಉದ್ದೇಶಗಳೆಲ್ಲವೂ ಕೆಟ್ಟು ಹೋದುದಕ್ಕಾಗಿ ಭಯಪಟ್ಟು, ಹಾಗೆಯೇ ಆ ಭಯದಿಂದ ಪ್ರಜ್ಞೆತಪ್ಪಿ ನೆಲದಮೇಲೆ ಬಿದ್ದರು ಆಗ ಸಿಹ್ಮದಂತೆಯೂ, ವೃಷಭದಂತೆಯೂ, ಉಬ್ಬಿದ ಹೆಗಲುಳ್ಳವನಾಗಿಯೂ, ಉದ್ದವಾಗಿ ದುಂಡಾಗಿರುವ ಭುಜಗಳುಳ್ಳವನಾಗಿಯೂ, ಮಹಾಪ್ರಾಜ್ಞನಾಗಿಯೂ ಇದ್ದ ಯುವರಾಜನಾದ ಅಂಗದನು, ಅಲ್ಲಿ ವಯೋವೃದ್ಧರಾಗಿಯೂ, ಶಿಷ್ಟರಾಗಿಯೂ ಇರುವ ಕೆಲವುವಾನರಪ್ರಮುಖರನ್ನು ನೋಡಿ, ಮೃದುವಾಕ್ಯಗಳಿಂದ ಅವರನ್ನು ಮನ್ನಿಸಿ ಸಮಾಧಾನಪಡಿಸುತ್ತ ಒಂದಾನೊಂದುಮಾತನ್ನು ಹೇಳುವನು "ಎಲ್ಲೆ ವಾನರರೇ! ಕಪಿರಾಜನಾದ ಸುಗ್ರೀವನ ಆಜ್ಞೆಯಿಂದಲೇ ನಾವೆಲ್ಲರೂಹೊರಟುಬಂದೆವಷ್ಟೆ? ನಾವು ಬಿಲದಲ್ಲಿದ್ದಾಗಲೇ ಅವನು ಹೇಳಿದ್ದ ಕಾಲದ ಗಡುವು ತೀರಿಹೋಯಿತು ಇದು ನಿಮಗೆ ತಿಳಿಯದುದಲ್ಲ. ನಾವು * ಆಶ್ವಯುಜಮಾಸವುಮೊದಲುಗೊಂಡು ಕಾಲನಿರ್ಣಯದಿಂದ ಆಯಾಕಾರ್ಯಗಳಿಗೆ ನಿಯಮಿಸಲ್ಪಟ್ಟಿರುವೆವು ಸುಗ್ರೀವನು ತನ್ನ ಬಾಯಿಯಿಂದಲೇ ನಮಗೆ ಪ್ರತ್ಯಕ್ಷವಾಗಿ ನಿರ್ಣಯಿಸಿ ಹೇಳಿದ ಕಾಲವೂ ಕಳೆದುಹೋಯಿತು ಇನ್ನು ಮುಂದೆ ನಾವು ಮಾ

---

* ಮೊದಲು ಹನುಮಂತನ ಪ್ರೇರಣೆಯಿಂದ ಸುಗ್ರೀವನು ಆಶ್ವಯುಜಮಾಸದಲ್ಲಿ ಹದಿನೈದುದಿನಗಳ ಅವಧಿಯನ್ನು ಕೊಟ್ಟು ವಾನರಸೇನೆಯನ್ನು ಕರೆತರುವುದಕ್ಕಾಗಿ ನಿಯಮಿಸಿದನು ಆಮೇಲೆ ಲಕ್ಷ್ಮಣನು ಕುಪಿತನಾಗಿ ಬಂದುದನ್ನು ನೋಡಿ ಪುನಃ ಮಾರ್ಗಶೀರ್ಷದಲ್ಲಿ ಹತ್ತುದಿನಗಳ ಗಡುವನ್ನು ಕೊಟ್ಟು ಸೈನಿಕರನ್ನು ಕರೆಸಿದನು ಪುಷ್ಯಮಾಸವೆಲ್ಲವೂ ಸೀತಾನ್ವೇಷಣಕ್ಕಾಗಿ ನಿರ್ಣಯಿಸಿದ ಕಾಲವಾಯಿತು. ಹೀಗೆ ಆಶ್ವಯುಜಮಾಸವು ಮೊದಲಾಗಿ ಕಾಲಸಂಖ್ಯೆಯು ಬೇರೆಬೇರೆಯಾಗಿ ನಿರ್ಣಯಿಸಲ್ಪಟ್ಟಿದ್ದುದರಿಂದ ಅದು ತಮಗೆ ಮರೆತುಹೋಗುವುದಕ್ಕೆ ಅವಕಾಶವಿಲ್ಲವೆಂದು ಭಾವವು ಇಲ್ಲಿ ಮತ್ತೆ ಕೆಲವರು ' ಆಶ್ವಯುಜೇಮಾಸಿ" ಎಂಬುದೆರಲ್ಲಿ ಸಾಮೀಪ್ಯಸೂಚಕವಾದ ಅಧಿಕರಣ ಸಪ್ತಮಿಯನ್ನು ಗ್ರಹಿಸಿ, ಇದನ್ನು ಕಾರ್ತ್ತಿಕಮಾಸಪರವೆಂದೇ ಅರ್ಥಮಾಡುವರು. ಹಾಗೆಯೇಮಾರ್ಗಶೀರ್ಷವನ್ನು ಸೀತಾನ್ವೇಷಣಕಾಲದ ಗಡುವನ್ನಾಗಿಯೂ ಗ್ರಹಿಸಿ, ಈಗ ಪುಷ್ಯನು ಕಳೆದು ಫಾಲ್ಗುನವು ಬಂದುದಾಗಿಯೂ ಭಾವಿಸುವರು.

ಡಬೇಕಾದುದೇನು? ಚೆನ್ನಾಗಿ ವಿಮರ್ಶಿಸಿ ನೋಡಿರಿ ನೀವೆಲ್ಲರೂ ಸುಗ್ರೀವನ ನಂಬಿಕೆಗೆ ಪಾತ್ರರಾದವರು ನೀತಿಮಾರ್ಗವನ್ನು ಚೆನ್ನಾಗಿ ತಿಳಿದವರು ಸ್ವಾಮಿಯಾದ ಆ ಸುಗ್ರೀವನ ಹಿತದಲ್ಲಿಯೇ ಆಸಕ್ತಿಯುಳ್ಳವರು ಯಾವ ಕಾರ್ಯಗಳಲ್ಲಿಯೂ ನೀವು ಸಮರ್ಥರು ಕಾರ್ಯಸಾಧನೆಯಲ್ಲಿ ನಿಮಗೆ ಸಾಟಿಯಾದವರು ಬೇರೊಬ್ಬರೂ ಇಲ್ಲವು ನಿಮ್ಮ ಪೌರುಷವು ಸಮಸ್ತದಿಕ್ಕುಗಳಲ್ಲಿಯೂ ಸುಪ್ರಸಿದ್ಧವಾದುದು ಸುಗ್ರೀವಾಜ್ಞೆಯಿಂದಲೇ ನೀವೆಲ್ಲರೂ ನನ್ನನ್ನು ಮುಂದಿಟ್ಟುಕೊಂಡು ಹೊರಟುಬಂದಿರುವಿರಿ ನಾವು ಬಂದ ಕಾರ್ಯವೂ ಕೈಗೂಡಲಿಲ್ಲ ಕಾಲವೂ ಮೀರಿಹೋಯಿತು ಇನ್ನು ನಾವು ಇಲ್ಲಿಯೇ ಸಾಯಬೇಕಾದುದೇಹೊರತು ಬೇರೆದಾರಿಯಿಲ್ಲ ಇದರಲ್ಲಿ ಸಂದೇಹವೇ ಇಲ್ಲ ವಾನರರಾಜನಾದ ಸುಗ್ರೀವನ ಶಾಸನವನ್ನೇ ಮೀರಿದಮೇಲೆ ನಾವು ಸುಖದಿಂದಿರಿವುದೆಂದರೇನು? ಸುಗ್ರೀವನು ತಾನಾಗಿಯೇ ನಿಯಮಿಸಿಕೊಟ್ಟ ಕಾಲವನ್ನು ಮೀರಿ, ಮಹಾಪರಾಧಿಗಳಾದ ಈ ನಮ್ಮೆಲ್ಲರಿಗೂ ಈಗಪ್ರಾಯೋಪವೇಶವೇ ಯುಕ್ತವು, ಸುಗ್ರೀವನು ಸಹಜವಾಗಿಯೇ ತೀಕ್ಷ್ಣಸ್ವಭಾವವುಳ್ಳವನು ಇದರಮೇಲೆ ರಾಮನ ಕಾರ್ಯದಲ್ಲಿಯೂ, ಆತುರವುಳ್ಳವನಾಗಿರುವನು ಅವನು ಪ್ರಭುವಾಗಿಯೂ ಇರುವನು ನಾವು ಈ ಮಹಾಪರಾಧವನ್ನು ಮಾಡಿ ಅವನಮುಂದೆ ಹೋಗಿ ನಿಂತರೆ, ನಮ್ಮೆಲ್ಲರನ್ನೂ ಅವನು ದಂಡಿಸುವನೇ ಹೊರತು ಒಬ್ಬನನ್ನಾದರೂ ಮನ್ನಿಸಲಾರನು ನಾವು ಕಾಲವನ್ನು ಮೀರಿದವರಾದರೂ, ಸೀತಾವೃತ್ತಾಂತವನ್ನಾದರೂ ತಿಳಿದಿದ್ದರೆ ಅವನ ಮನ್ನಣೆಯನ್ನು ಪಡೆಯಬಹುದಾಗಿತ್ತು ಈ ಎರಡು ವಿಷಯಗಳಲ್ಲಿಯೂ, ನಾವು ತಪ್ಪಿ ನಡೆದವರಾದುದರಿಂದ, ಆ ಸುಗ್ರೀವನು ನಮ್ಮನ್ನು ಕೊಂದೇಬಿಡುವನು ಆದುದರಿಂದ ಈಗ ನಮ್ಮೆಲ್ಲರಿಗೂ, * ಪ್ರಾಯೋಪವೇಶವೇ ಯುಕ್ತವು, ನಾವು ನಮ್ಮ ಹೆಂಡಿರುಮಕ್ಕಳನ್ನೂ, ನಮ್ಮ ಮನೆಗಳನ್ನೂ, ನಮ್ಮ ಸಮಸ್ತಧನವನ್ನೂ, ಗಮನಕ್ಕೆ ತಾರದೆ ಇಲ್ಲಿಯೇ ಸಾಯುವುದು ಮೇಲು. ನಾವು ಇಲ್ಲಿಂದ ಹಿಂತಿರುಗಿ ಹೋದರೂ ಸುಗ್ರೀವನು, ಚಿತ್ರವಧೆ

---

* ಪ್ರಾಯೋಪವೇಶವೆಂದರೆ, ಅನ್ನ ಪಾನಗಳನ್ನು ತ್ಯಜಿಸಿ ಮೌನದಿಂದ ಪ್ರಾಣವನ್ನು ಬಿಡುವುದು.

ಯನ್ನು ಮಾಡಿ, ಹಿಂಸಿಸಿ ನಮ್ಮೆಲ್ಲರನ್ನೂ ಕೊಲ್ಲದೆ ಬಿಡನು ಅದಕ್ಕಿಂತಲೂ ನಾವು ಇಲ್ಲಿಯೇ ಪ್ರಾಯೋಪವೇಶದಿಂದ ಮರಣವನ್ನು ಹೊಂದುವುದೇ ಉತ್ತಮವು ಎಲೈ ವಾನರರೇ ! ಸುಗ್ರೀವನು ನನ್ನಲ್ಲಿ ವಿಶೇಷಪ್ರೀತಿಯಿಂದ ನನಗೆ! ಯೌವರಾಜ್ಯವನ್ನು ಕೊಟ್ಟಿರುವಾಗ, ಈಗ ತನ್ನ ಕೈಯಿಂದಲೇ ನನ್ನನ್ನು ಕೊಲ್ಲಲಾರನೆಂದೆಣಿಸಬೇಡಿರಿ ! ನನಗೆ ಯೌವರಾಜ್ಯವನ್ನು ಕೊಟ್ಟವನು ಸುಗ್ರೀವನಲ್ಲ ಸಮಸ್ತಭೂತಗಳಿಗೂ ಹಿತವನ್ನು ಕೋರತಕ್ಕ ಮಹಾತ್ಮನಾದ ಶ್ರೀರಾಮನೇ ನನಗೆ ಆ ಯೌವರಾಜ್ಯವನ್ನು ಕೊಡಿಸಿದನೇ ಹೊರತುಬೇರೆಯಲ್ಲ ಇದರಮೇಲೆ ನಾನು ವಾಲಿಯ ಮಗನಾದುದರಿಂದ ಸುಗ್ರೀವನು ಮೊದಲಿಂದಲೇ ನನ್ನಲ್ಲಿ ದಾಯಾದದ್ವೇಷವನ್ನಿಟ್ಟಿರುವನು ಈಗ ಇದೂ ಒಂದು ನೆಪವು ಸಿಕ್ಕಿರುವಾಗ ಸುಮ್ಮನೆ ಬಿಡುವನೆ? ಕ್ರೂರ ದಂಡನೆಯನ್ನು ವಿಧಿಸಿ ಮೊದಲು ನನ್ನನ್ನೇ ಕೊಂದುಬಿಡುವನು, ನಾನುಇಲ್ಲಿಂದ ಕಿಷ್ಕಿಂಧೆಗೆ ಹೋಗಿ ಅಲ್ಲಿ ಸುಗ್ರೀವನ ಕೈಯಿಂದ ಸತ್ತರ, ಅಲ್ಲಿರತಕ್ಕ ನನ್ನ ಸ್ನೇಹಿತರೆಲ್ಲರೂ ಸಹಿಸಲಾರದ ಸಂಕಟದಿಂದ ದುಃಖಿಸುವರು ಹಾಗೆ ಮಾಡುವುದರಿಂದ ನನಗೆ ಬಂದಪ್ರಯೋಜನವೇನು? ಇದು ಸಮುದ್ರತೀರವಾಗಿ ಪುಣ್ಯಸ್ಥಳವಾಗಿರುವುದು ಇಲ್ಲಿಯೇ ಪ್ರಾಯೋಪವೇಶವನ್ನು ಮಾಡಿ ಪ್ರಾಣವನ್ನು ಬಿಡುವೆನು " ಎಂದನು ಇದನ್ನು ಕೇಳಿ ಆ ವಾನರರಲ್ಲರೂ ಧೈರ್ಯದಿಂದ ಆ ಅಂಗದನ ಮಾತಿಗನುಮೋದಿಸುತ್ತ " ಹೌದು ! ಸುಗ್ರೀವನೇನೋ ಸಹಜವಾಗಿಯೇ ಕ್ರೂರನು ರಾಮನೂ ಸೀತೆಯನ್ನು ಕಾಣಬೇಕೆಂಬ ಆತುರದಿಂದಿರುವನು ನಾವು ಸುಗ್ರೀವನು ನಿಯಮಿಸಿದ್ದ ಕಾಲವನ್ನೂ ಮೀರಿದೆವಲ್ಲದೆ, ಸೀತೆಯನ್ನೂ ಕಂಡುಹಿಡಿಯದೆ ಹಿಂತಿರುಗಿ ಬಂದುದನ್ನು ಕಂಡರೆ, ಅವನು ರಾಮನ ಪ್ರೀತಿಗಾಗಿಯಾದರೂ ನಮ್ಮನ್ನು ಕೊಲ್ಲದೆ ಬಿಡನು. ಇದರಲ್ಲಿ ಸಂದೇಹವೇ ಇಲ್ಲ ಇದರಮೇಲೆ ತಪ್ಪುಮಾಡಿದವರು ಪ್ರಭುವಿನ ಕಣ್ಣಿಗೆ ಬಿಳಲೇಬಾರದು. ನಾವು ಸೀತೆಯನ್ನು ಹುಡುಕಿ ಅವಳ ವೃತ್ತಾಂತವನ್ನು ತಿಳಿದುಕೊಂಡಮೇಲೆಯೇ ಸುಗ್ರೀವರಾಜನ ಮುಂದೆ ನಿಲ್ಲಬೇಕು ಹಾಗಿಲ್ಲವೇ ಇಲ್ಲಿಯೇ ಪ್ರಾಣವನ್ನು ಬಿಟ್ಟು ಯಮರಾಜನ ಮುಂದೆನಿಲ್ಲಬೇಕು " ಎಂದರು ಹೀಗೆ ಭಯಾರ್ತರಾದ ವಾನರರು ಹೇಳಿದ ಮಾತನ್ನು

ಕೇಳಿ ತಾರನೆಂಬ ಕಪಿಯೂಥಪನು ಅವರನ್ನು ನೋಡಿ ‘‘ಎಲೈ ಕಪಿವೀರರೆ ? ಹೀಗೇಕೆ ದುಃಖಿಸಿ ಭಯಪಡುವಿರಿ ? ನನಗೆ ಬೇರೊಂದುಪಾಯವು ತೋರುವುದು ನಿಮಗೆ ಸಮ್ಮತವಾಗಿದ್ದರೆ ನಾವೆಲ್ಲರೂ ಈ ಬಿಲದಲ್ಲಿ ಪ್ರವೇಶಿಸಿ ಅಲ್ಲಿಯೇ ಇದ್ದುಬಿಡುವೆವು ಇದು ಮಾಯಾನಿರ್ಮಿತವಾದುದರಿಂದ ಬೇರೊಬ್ಬರಿಗೆ ಪ್ರವೇಶಿಸಲು ಸಾಧ್ಯವಲ್ಲ ಮತ್ತು ಇಲ್ಲಿ ಫಲಮೂಲಾದಿಗಳೂ, ಪಾನದ್ರವ್ಯಗಳೂ, ಇತರ ಭೋಜ್ಯವಸ್ತುಗಳೂ ಸಮೃದ್ಧವಾಗಿರುವುವು ಇಲ್ಲಿ ನಾವು ಸುಖವಾಗಿ ಬದುಕಿಯೇ ಇರಬಹುದಲ್ಲವೆ? ಇಲ್ಲಿ ನಮಗೆ ರಾಮನಿಂದಾಗಲಿ, ಸುಗ್ರೀವನಿಂದಾಗಲಿ, ಕೊನೆಗೆ ದೇವೇಂದ್ರನಿಂದಾದರೂ ಎಷ್ಟುಮಾತ್ರವೂ ಭಯವಿಲ್ಲ ” ಎಂದನು ಹೀಗೆ ತಾರನು ಅಂಗದನ ಮತಕ್ಕೂ ಅನುಕೂಲವಾಗುವಂತ ಹೇಳಿದುದನ್ನು ಕೇಳಿ ವಾನರರಲ್ಲರೂ ಸಂತುಷ್ಟರಾಗಿ ‘‘ಹೇಗೆ ಮಾಡಿದರೆ ನಮಗೆ ಹಿಂಸೆಯು ತಪ್ಪುವುದೋ ಹಾಗೆ ಶೀಘ್ರದಲ್ಲಿಯೇ ನಡೆಸಿದರೆ ಸಾಕು!” ಎಂದರು ಇಲ್ಲಿಗೆ ಐವತ್ತು ಮೂರನೆಯ ಸರ್ಗವು

{ ಹನುಮಂತನು ಅಂಗದನಮತವನ್ನು ಖಂಡಿಸಿ,ಸುಗ್ರೀವನಬಳಿಗೆ ಹೋಗುವುದೇ ಯುಕ್ತವೆಂದು ಹೇಳಿದುದು }

ಚಂದ್ರನಂತೆ ಕಾಂತಿವಿಶಿಷ್ಟನಾದ ತಾರನು ಈ ಮಾತನ್ನು ಹೇಳಲು, ಇತರವಾನರರೂ ಅದಕ್ಕೊಪ್ಪಿದುದನ್ನು ಕಂಡೊಡನೆ, ಹನುಮಂತನು ತನ್ನ ಮನಸ್ಸಿನಲ್ಲಿ ‘‘ಓಹೋ! ಸುಗ್ರೀವನ ವಾನರರಾಜ್ಯವೆಲ್ಲವೂ ಈಗಲೇ ಅಂಗದನ ವಶವಾದಂತಿದೆ ” ಎಂದು ಯೋಚಿಸಿ ಚಿಂತಾಕುಲಿತನಾಗಿದ್ದನು ವಾಲಿಕುಮಾರನಾದ ಆ ಅಂಗದನಲ್ಲಿ * ಗ್ರಹಣಧಾರಣಾದಿಗಳಾದ

---

* ‘ಗ್ರಹಣಂಧಾರಣಂಚೈವಸ್ಮರಣಂಪ್ರತಿಪಾದನಂ।ಊಹೋSಪೋಹೋSರ್ಥವಿಜ್ಞಾನಂ ತತ್ತ್ವಜ್ಞಾನಂಚಧೀಗುಣಾಃ॥”ಗ್ರಹಿಸುವುದು,ಮನಸ್ಸಿನಲ್ಲಿಡುವುದು, ಸಮಯಬಂದಾಗ ಸ್ಮರಣೆಗೆ ತಂದುಕೊಳ್ಳುವುದು, ಬೋಧಿಸುವುದು, ಹೊಸವಿಷಯಗಳನ್ನೂ ಹಿಸಿ ತಿಳಿಯುವುದು,ಮೇಲೆಮೇಲೆವಿಮರ್ಶಿಸಿ ತಿಳಿಯುವುದು ಇವೆಂಟೂಬುದ್ಧಿಯಗುಣಗಳು.

ಬಾಹುಬಲ, ಮನೋಬಲ, ಉಪಾಯಬಲ. ಜನಬಲವೆಂಬಿವು ನಾಲ್ಕುಬಗೆಯಾದ ಬಲಗಳು.

ಅಷ್ಟಗುಣಗಳುಳ್ಳ ಬುದ್ಧಿಯೂ, ನಾಲ್ಕುವಿಧಗಳಾದ ಬಾಹುಬಲಾದಿಗಳೂ, * ದೇಶಕಾಲಜ್ಞಾನವೇ ಮೊದಲಾದ ಚತುರ್ದಶಗುಣಗಳೂ, ಪೂರ್ಣವಾಗಿ ತುಂಬಿರುವುವೆಂದೂ ಅವನಿಗೆ ತೋರಿತು, ಚಂದ್ರನು ಶುಕ್ಲಪಕ್ಷದಲ್ಲಿ ದಿನದಿನಕ್ಕೂ ಕಾಂತಿಸಂಪತ್ತಿನಿಂದ ಮೇಲೆಮೇಲೆ ಹೆಚ್ಚುವಂತೆ, ಆ ಅಂಗದನೂ ಎಡೆಬಿಡದೆ ತನ್ನ ತೇಜೋಬಲಪರಾಕ್ರಮಗಳನ್ನು ಹೆಚ್ಚಿಸಿಕೊಳ್ಳುತ್ತ ಬುದ್ಧಿಯಲ್ಲಿ ಬೃಹಸ್ಪತಿಗೂ, ಪರಾಕ್ರಮದಲ್ಲಿ ತನ್ನ ತಂದೆಯಾದ ವಾಲಿಗೂ ಎಣೆಯಾಗಿ ಶುಕ್ರಾಚಾರ್ಯನ ಭೇದೋಪಾಯಕ್ಕೆ ಆದರದಿಂದ ಗಿವಿಕೊಟ್ಟು ಕೇಳುವ ದೇವೇಂದ್ರನಂತೆ ತಾರನೆಂಬ ಮಂತ್ರಿಯ ಮಾತನ್ನು ಗಮನಿಸಿ ಕೇಳುವುದನ್ನೂ ಕಂಡನುಸ್ವಾಮಿಯಾದ ಸುಗ್ರೀವನಕಾರ್ಯದಲ್ಲಿಯೇ ಬಳಲಿ ಕುಳಿತಿದ್ದ ಸರ್ವಶಾಸ್ತ್ರವಿಶಾರದನಾದ ಅಂಗದನು, ಈಗ ಆ ಸುಗ್ರೀವನಲ್ಲಿಯೇ ವೈರಬುದ್ಧಿಯನ್ನಾರೋಪಿಸಿ, ಜಿಹಾಸೆಯಿಂದ ಹೇಳಿದ ಮಾತನ್ನೂ ಕೇಳಿದನು ಹನುಮಂತನು ಆ ಅಂಗದನ ಭೇದಬುದ್ಧಿಯನ್ನು ತಪ್ಪಿಸಿ, ಸುಗ್ರೀವನಿಗನುಕೂಲನನ್ನಾಗಿಯೇ ಮಾಡುವುದಕ್ಕಾಗಿ ಕಲವು ನೀತಿಗಳನ್ನು ಹೇಳಲಾರಂಭಿಸಿದನು ಸಾಮವೇ ಮೊದಲಾದ ಚತುರುಪಾಯಗಳಲ್ಲಿ,ಮೂರನೆಯೆದಾದ ಭೇದೋಪಾಯವನ್ನೇ ಅವಲಂಬಿಸಿ, ಅಲ್ಲಿದ್ದ ಸಮಸ್ತವಾನರರನ್ನೂ ತನ್ನಮಾತಿನ ಚಾತುರ್ಯದಿಂದ ಮೊದಲು ಅಂಗದನಿಂದ ಬೇರ್ಪಡಿಸಿ, ಅವರು ಅವನ ಮತಕ್ಕೊಪ್ಪದಂತೆ ಮಾಡಿಕೊಂಡನು ಹೀಗೆ ವಾನರರು ಅಂಗದನಿಂದ ಭೇದ ಹೊಂದಿದಮೇಲೆ, ತನ್ನೊಳಗೆ ತಾನು ಸುಳ್ಳುಕೋಪವನ್ನು ಹುಟ್ಟಿಸಿಕೊಂಡು, ಆ ಕೋಪರೂಪವಾದ ದಂಡೋಪಾಯವನ್ನ ವಲಂಬಿಸಿ, ಆದಕ್ಕನುಗುಣಗಳಾದ ಕೆಲವುವಾಕ್ಯಗಳಿಂದ ಅಂಗದನಿಗೂ ಭಯವನ್ನು ಹುಟ್ಟಿಸಬೇಕೆಂದೆಣಿಸಿ, ''ಅಂಗದಾ! ನೀನೇನೋ ಯುದ್ಧದಲ್ಲಿ ನಿನ್ನ ತಂದೆಗಿಂತಲೂ ಬ

---

*''ದೇಶಕಾಲಜ್ಞತಾದಾರ್ಢ್ಯಂ ಸರ್ವಕ್ಲೇಶಸಹಿಷ್ಣುತಾ। ಸರ್ವವಿಜ್ಞಾನಿತಾದಾಕ್ಷ್ಯಂ ಮೂರ್ಜಸ್ವಂವೃತಮಂತ್ರತಾ। ಅವಿಸಂವಾದಿತಾಶೌರ್ಯಂ ಶಕ್ತಿಜ್ಞತ್ವಂಕೃತಜ್ಞತಾ । ಶರಣಾಗತವಾತ್ಸಲ್ಯ ಮಮರ್ಷತ್ವಮಚಾಪಲಂ॥" ದೇಶಕಾಲಜ್ಞಾನ, ದೃಢಬುದ್ಧಿ, ಕಷ್ಟಸಹಿಷ್ಣುತೆ, ಸರ್ವಜ್ಞತೆ, ಸಾಮರ್ಥ್ಯ, ರಹಸ್ಯವನ್ನು ಕಾಪಾಡಿಡುವುದು, ಸುಳ್ಳಾಡದಿರುವುದು, ಶೌರ್ಯ, ಇತರರ ಶಕ್ತಿಯನ್ನು ತಿಳಿಯುವುದು, ಕೃತಜ್ಞತೆ,ಶರಣಾಗತ ವಾತ್ಸಲ್ಯ, ತಾಳ್ಮೆ, ಚಾಪಲ್ಯವಿಲ್ಲದಿರುವುದು, ಇಷ್ಟೂ ಚತುರ್ದಶಗುಣಗಳು

ಹಳ ಸಮರ್ಥನೇ ಸರಿ ! ಮತ್ತು ನಿನ್ನ ತಂದೆಯಂತೆ ಕಪಿರಾಜ್ಯಭಾರವೆಲ್ಲವ
ನ್ನೂ ದೃಢವಾಗಿ ನೀನೂ ವಹಿಸಬಲ್ಲೆಯಂಬುದೂ ನಿಜವು ಆದರೇನು ?
ಎಲೆ ವಾನರೇಂದ್ರನೆ ! ಕಪಿಗಳು ಯಾವಾಗಲೂ ಚಂಚಲಮನಸ್ಸುಳ್ಳ
ವರು ನೀನು ಇಲ್ಲಿರಬೇಕೆಂದು ಇವರಿಗೆ ಆಜ್ಞೆಯನ್ನು ಮಾಡಿದರೂ, ಅ
ವರು ತಮ್ಮ ಹೆಂಡಿರುಮಕ್ಕಳನ್ನು ಬಿಟ್ಟು ಎಷ್ಟುಮಾತ್ರವೂ ನಿನ್ನಾ
ಜ್ಞೆಗೊಳಪಟ್ಟು ನಿಲ್ಲಲಾರರು ನಾನು ನಿನ್ನಿದಿರಾಗಿಯೇ ಇದ್ದ ಸ್ಥಿತಿಯ
ನ್ನು ತಿಳಿಸುವೆನು ಕೇಳು ಈ ಜಾಂಬವಂತನೂ, ಈ ನಲನೂ, ಈ ಸು
ಹೋತ್ರನೂ, ಹೇಗೆ ನಿನ್ನನ್ನು ಅನುವರ್ತಿಸುವುದಿಲ್ಲವೋ ಹಾಗೆಯೇ ನಾ
ನೂ ಎಂದಿಗೂ ನಿನ್ನನ್ನು ಹಿಂಬಾಲಿಸುವೆನೆಂದೆಣಿಸಬೇಡ ! ಈ ನಮ್ಮೆಲ್ಲ
ರನ್ನೂ ಸಾಮದಾನಭೇದಗಳಿಂದಲಾಗಲಿ, ದಂಡೋಪಾಯದಿಂದಾಗಲಿ ಆ
ಸುಗ್ರೀವನ ಕಡೆಯಿಂದ ನಿನ್ನ ಕಡೆಗೆ ಆಕರ್ಷಿಸುವುದು ನಿನಗೆ ಎಂದಿಗೂ ಶಕ್ಯ
ವಲ್ಲ ಬಲವಂತನಾದವನು ಬಲಹೀನನೊಡನೆ ಒಂದುವೇಳೆ ವಿರೋಧವನ್ನು
ಮಾಡಿದರೂ ಮಾಡಬಹುದೆಂದು ನೀತಿಜ್ಞರು ಹೇಳುವರೇಹೊರತು,ದುರ್ಬ
ಲನಾದವನು ಬಲಾಢ್ಯನೊಡನೆ ವಿರೋಧಿಸುವುದು ಶ್ರೇಯಸ್ಕರವೆಂದು
ಯಾರೂ ಹೇಳುವುದಿಲ್ಲ ಬಲಹೀನನು ಆತ್ಮರಕ್ಷಣೆಯನ್ನು ಮಾಡಿಕೊಳ್ಳಬೇ
ಕಾದುದರಿಂದ, ಅಂತವನು ಬಲಾಢ್ಯನೊಡನೆ ವಿರೋಧವನ್ನು ಮಾಡಿಕೊಳ್ಳ
ಲೇ ಬಾರದು ಎಲೆ ಅಂಗದಾ!ನಿನಗೆ ಬೇರ ಬಲವಿಲ್ಲದಿದ್ದರೂ ನಿನ್ನ ರಕ್ಷಣೆಗಾ
ಗಿ ಯಾವ ಈ ಗುಹೆಯನ್ನು ಆಶ್ರಯಿಸಬೇಕೆಂದು ಅಪೇಕ್ಷಿಸುವಯೋ,
ತಾರನೂ ಯಾವ ಬಿಲವನ್ನು ತೋರಿಸಿದನೋ, ಆಬಿಲವನ್ನು ಭೇದಿಸುವುದು
ಲಕ್ಷ್ಮಣನ ಬಾಣಗಳಿಗೆ ಅತ್ಯಲ್ಪವಾದ ಕಾರ್ಯವೆಂದು ತಿಳಿ! ಪೂರ್ವದಲ್ಲಿ ಇಂ
ದ್ರನು ಮಯನಮೇಲಿನ ಕೋಪದಿಂದ ಈ ಬಿಲದಮೇಲೆ ವಜ್ರಾಯುಧವನ್ನು
ಪ್ರಯೋಗಿಸಿ ಇದನ್ನು ಸ್ವಲ್ಪಮಾತ್ರವಾಗಿ ಕದಲಿಸಿರುವನು ಈಗ ಲಕ್ಷ್ಮಣ
ನು ತನ್ನ ತೀಕ್ಷ್ಣಬಾಣಗಳಿಂದ ಎಲೆಯನ್ನು ಸೀಳುವಂತೆ ಸುಲಭವಾಗಿಇದನ್ನು
ಭೇದಿಸಿಯೇಬಿಡುವನು ಪೂರ್ವದಲ್ಲಿ ಇಂದ್ರನು ಇದಕ್ಕೆ ಒಂದುದ್ವಾರವನ್ನು
ಮಾತ್ರ ಮಾಡಿದನೇಹೊರತು ಬೇರೊಂದನ್ನೂ ಮಾಡಲಿಲ್ಲ ಈಗ ಲಕ್ಷ್ಮಣ
ನಕೋಪಕ್ಕೆ ಪಾತ್ರವಾದಮೇಲೆ ಈ ಗುಹೆಯು ಛಿನ್ನಭಿನ್ನವಾಗುವುದೆಂದೇ
ತಿಳಿ! ಇಂತಹ ಅಸಮಾನಶಕ್ತಿಯನ್ನು ಹೊಂದಿ,ವಜ್ರದಲಗಿಗೆ ಸಮಾನಗಳಾದ

ಬಾಣಗಳು ಆ ಲಕ್ಷ್ಮಣನಲ್ಲಿ ಎಷ್ಟೋ ಇರುವುವು ಅವು ಪರ್ವತಗಳನ್ನಾದರೂ ಭೇದಿಸಬಲ್ಲುವು ಅವುಗಳಿಗೆ ಈ ಬಿಲವೆಂಬುದು ಎಷ್ಟುಮಾತ್ರವೆಂದೆಣಿಸುವೆ? ಮುಖ್ಯವಾಗಿ ನೀನು ಸುಗ್ರೀವನೊಡನೆ ವಿರೋಧಿಸಿ ಈ ಬಿಲದಲ್ಲಿಯೇ ಇದ್ದು ಬಿಡುವುದಕ್ಕೆ ಉದ್ಯೋತಿಸಿದೆಯಲ್ಲವೆ! ಇದನ್ನು ತಿಳಿದೊಡನೆಯೇ ಈ ವಾನರರೆಲ್ಲರೂ ನಿನ್ನನ್ನು ಬಿಟ್ಟು ಹೊರಟುಹೋಗುವರೆಂದು ತಿಳಿ ಇವರು ನಿನ್ನನ್ನು ಹಿಂಬಾಲಿಸಿ ಬಂದುದುಮೊದಲು, ತಮ್ಮ ಹೆಂಡಿರುಮಕ್ಕಳನ್ನು ನೆನೆಸಿಕೊಂಡು ಎಡೆಬಿಡದೆ ದುಃಖಿಸುತ್ತಾ ತಕ್ಕ ಅನ್ನಪಾನಗಳೂ ಇಲ್ಲದೆ, ಸುಖಶಯ್ಯೆಯೂ ಇಲ್ಲದೆ, ಹಸಿವುಬಾಯಾರಿಕೆಗಳಿಂದ ಬಳಲಿ, ಕಷ್ಟಪಡುತ್ತಿರುವರು ಈಗ ಇವರಿಗೆ ಇದೊಂದುನೆಪವೂ ಸಿಕ್ಕಿದರೆ, ಆಕ್ಷಣವೇ ನಿನ್ನನ್ನು ಬಿಟ್ಟು ಹೊರಟು ಹೋಗುವರು ಇವರು ನಿನ್ನನ್ನು ಬಿಟ್ಟುಹೋದಮೇಲೆ ನೀನು ಮಿತ್ರಬಾಂಧವರನ್ನಗಲಿ ದಿಕ್ಕಿಲ್ಲದೆ ದುಃಖಕ್ಕೆ ಸಿಕ್ಕಬೇಕಾಗುವುದು ಆಗ ನೀನು ಗಾಳಿಗೆ ತೂರಿಹೋಗುವ ಹುಲ್ಲಿಗಿಂತಲೂ ಹೀನನಾಗುವೆ ಇಷ್ಟೇಅಲ್ಲದೆ ಅತಿತೀಕ್ಷ್ಣಗಳಾಗಿಯೂ, ವೇಗವುಳ್ಳವುಗಳಾಗಿಯೂ, ಬೇರೆಯವರಿಗೆ ಇದಿರಿಸಿ ನಿಲ್ಲಲಸಾಧ್ಯಗಳಾಗಿಯೂ, ಮಹಾಭಯಂಕರಗಳಾಗಿಯೂ ಇರುವ ಲಕ್ಷ್ಮಣನ ಬಾಣಗಳು ರಾಜಾಜ್ಞೆಯನ್ನು ಮೀರಿದ ನಿನ್ನನ್ನು ತಪ್ಪದೆ ಕೂಂದುಬಿಡುವುವು ಈಗಲೂ ನೀನು ನನ್ನೊಡನೆ ಬಂದು, ವಿನೀತನಾಗಿ ನಡೆದುಕೊಳ್ಳುತಿದ್ದರೆಮಾತ್ರ, ಸುಗ್ರೀವನು ನಿನ್ನನ್ನು ಯೌವರಾಜ್ಯದಲ್ಲಿರಿಸಿರುವನಲ್ಲದೆ, ಮುಂದೆ ಕ್ರಮವಾಗಿ ನಿನಗೆ ಮುಖ್ಯವಾನರರಾಜ್ಯವನ್ನೂ ಕೊಟ್ಟುಬಿಡುವನು ನಿನ್ನ ಚಿಕ್ಕಪ್ಪನಾದ ಸುಗ್ರೀವನು ಸಾಮಾನ್ಯನಲ್ಲ ಧರ್ಮಾತ್ಮನು ಯಾವಾಗಲೂ ಪರರಿಗೆ ಸಂತೋಷವನ್ನುಂಟುಮಾಡುವವನು ಪಾಪರಹಿತನು, ದೃಢವ್ರತವುಳ್ಳವನು ಶುದ್ಧಸ್ವಭಾವವುಳ್ಳವನು ಪ್ರತಿಜ್ಞೆಗೆ ತಪ್ಪುವವನಲ್ಲ ನೀನು ಆವನನ್ನೇ ದ್ವೇಷಿಯೆಂದೆಣಿಸಿದೆಯಲ್ಲಾ! ಪ್ರಬಲಕಾರಣವಿದ್ದಹೊರತು ಎಂದಿಗೂ ನಿನ್ನನ್ನು ಕೊಲ್ಲುವವನಲ್ಲ. ಇಷ್ಟೇ ಅಲ್ಲದೆ ನಿನ್ನ ತಾಯಿಯಲ್ಲಿ ಆತನಿಗೆಅಸಾಧಾರಣಪ್ರೀತಿಯಿರುವುದರಿಂದ, ಆವಳಿಗೆ ಪ್ರಿಯವನ್ನೇ ಕೋರುತ್ತಿರುವನು ಅವನ ಪ್ರಾಣಗಳೇ ನಿನ್ನ ತಾಯಿಗೆ ವಶಗಳಾಗಿರುವುವು ನೀನು ಅವಳ ಮಗನಾದುದರಿಂದ ಆತನಿಗೂ ನೀನು ಮಗನಲ್ಲದೆ ಬೇರೆಯಲ್ಲ ಅವನಿಗೆ ಬೇರೆಸಂತಾ-

ನವೂ ಇಲ್ಲ ಆದುದರಿಂದ ನೀನು ಅವನಲ್ಲಿಗೆ ಹೋಗಿ ಸೇರಬೇಕಾದುದೇ ಉಚಿತವು" ಎಂದನು ಇಲ್ಲಿಗೆ ಐವತ್ತುನಾಲ್ಕನೆಯ ಸರ್ಗವು

ಅಂಗದಾದಿವಾನರರು ಪ್ರಾಯೋಪವೇಶವನ್ನು ಮಾಡಿದುದು.

ಹೀಗೆ ಹನುಮಂತನು ವಿನಯದಿಂದಲೂ, ಧರ್ಮದಿಂದಲೂ, ರಾಜಭಕ್ತಿಯಿಂದಲೂ ಕೂಡಿ ಹೇಳಿದ ಮಾತನ್ನು ಕೇಳಿ, ಅಂಗದನು ಅತನನ್ನು ಕುರಿತು, "ಎಲೈವಾಯುಪುತ್ರನೆ! ನೀನು ಸುಗ್ರೀವನನ್ನು ಗುಣಾಢ್ಯನೆಂದು ಹೇಳಿದೆಯಲ್ಲವೆ? ಎಂದಿಗೂ ಹಾಗೆನಿಸಬೇಡ! ಸ್ಥಿರಬುದ್ಧಿಯಾಗಲಿ, ದೇಹಶುದ್ಧಿಯಾಗಲಿ, ಅಂತಃಕರಣಶುದ್ಧಿಯಾಗಲಿ, ದಯಾಳುತ್ವವಾಗಲಿ, ಋಜುಸ್ವಭಾವವಾಗಲಿ, ವಿಕ್ರಮಶೌರ್ಯಾದಿಗಳಾಗಲಿ ಸುಗ್ರೀವನಲ್ಲಿ ಎಷ್ಟು ಮಾತ್ರವೂ ಇಲ್ಲ ಅವನು ಧರ್ಮಭ್ರಷ್ಟನೆಂಬುದಕ್ಕೆ ನಮಗೆ ಬೇರೆನಿದರ್ಶನವೇಕೆ? ಯಾವನು ತನ್ನ ಹಿರಿಯಣ್ಣನು ಬದುಕಿರುವಾಗಲೇ, ಅವನ ಪ್ರಿಯಪತ್ನಿಯಾಗಿ, ಧರ್ಮದಿಂದ ತನಗೆ ತಾಯಿಯಂತೆಯೇ ಇರುವ ತಾರೆಯನ್ನು ಪರಿಗ್ರಹಿಸಿ,ಲೋಕಜುಗುಪ್ಸಿತವಾದ ಕಾರ್ಯವನ್ನು ಮಾಡಿರುವನೋ,ಅವನನ್ನು ಹೇಗೆ ಧರ್ಮಜ್ಞನೆಂದು ಹೇಳಬಹುದು?ಇದಲ್ಲದೆ ಅವನು,ತನ್ನಣ್ಣನು ಬಾಗಿಲಲ್ಲಿಕಾವಲಿರುವಂತೆ ತನಗೆ ನಿಯಮಿಸಿ, ರಾಕ್ಷಸನೊಡನೆ ಯುದ್ಧಕ್ಕಾಗಿ ಬಿಲದೊಳಗೆ ಪ್ರವೇಶಿಸಿದಮೇಲೆ,ಕಲ್ಲುಬಂಡೆಗಳಿಂದ ಆ ಬಿಲದ್ವಾರವನ್ನು ಮುಚ್ಚಿಬಂದವನಲ್ಲವೆ? ಹೀಗೆ ಕಪಟಕಾರ್ಯವನ್ನು ಮಾಡಿದ ಆ ಸುಗ್ರೀವನನ್ನು ಹೇಗೆ ನಿಷ್ಕಪಟಿಯೆಂದು ಹೇಳಬಹುದು ಮತ್ತು ರಾಮನೊಡನೆ ತಾನು ಸಖ್ಯವನ್ನು ಬಳೆಸುವುದಾಗಿ ಕೈಹಿಡಿದು ಪ್ರತಿಜ್ಞೆಮಾಡಿ ಕೊಟ್ಟಿದ್ದರೂ, ತನಗುಪಕಾರಿಯಾದ ಆ ರಾಮನವಿಷಯದಲ್ಲಿಯೇ ಆಡಿದ ಮಾತಿಗೆ ತಪ್ಪಿ ಕಾಮಮೋಹಿತನಾಗಿ ಕಿಷ್ಕಿಂಧೆಯಲ್ಲಿ ನಿಂತುಬಿಟ್ಟ, ಆ ಸುಗ್ರೀವನನ್ನು ಪ್ರತಿಜ್ಞೆಗೆತಪ್ಪದವನೆಂದು ಹೇಗೆ ಹೇಳಬಹುದು?ಇವನು ಲಕ್ಷ್ಮಣನಭಯಕ್ಕಾಗಿಯೇ ನಮ್ಮನ್ನು ಸೀತಾನ್ವೇಷಣಾರ್ಥವಾಗಿ ನಿಯೋಗಿಸಿರುವನೇ ಹೊರತು, ಅದರ್ಮಕ್ಕೆ ಹೆದರಿ ಈಕಾರ್ಯಕ್ಕೆ ಪ್ರಯತ್ನಿಸಿದವನಲ್ಲ ಅವನಲ್ಲಿ ಧರ್ಮವೆಲ್ಲಿಯದು ? ತನ್ನಣ್ಣನನ್ನೇ ಕೊಲ್ಲಬೇಕೆಂದು ಯತ್ನಿಸಿದ ಪಾಪಾತ್ಮನಾಗಿಯೂ,ಉಪಕಾರಿಯಾದ


ರಾಮನವಿಷಯದಲ್ಲಿಯೇ ಆಡಿದಮಾತಿಗೆ ತಪ್ಪಿದ ಕೃತಘ್ನನಾಗಿಯೂ, ಚಪಲಚಿತ್ತನಾಗಿಯೂ ಇರುವ ಸುಗ್ರೀವನಲ್ಲಿ,ಬದುಕಬೇಕೆಂಬ ಆಸೆಯುಳ್ಳಯಾವಸಾಥುವಿಗೆ ತಾನೇ ನಂಬಿಕೆಯು ಹುಟ್ಟುವುದು ಸುಗ್ರೀವನು ಗುಣವಂತನಾಗಲಿ, ಗುಣಹೀನನಾಗಲಿ, ಮುಂದೆ ತನ್ನ ಮಗನಿಗೆ ರಾಜ್ಯವನ್ನು ಕೊಡುವನೇಹೊರತು,ಅವನ ವೈರಿಯ ಮಗನಾದ ನನ್ನನ್ನು ಪ್ರಾಣದಿಂಡುಳಿಸುವನೆ!ಎಲೆ ಹನುಮಂತನೆ! ಮುಖ್ಯವಾಗಿ ಈಗ ನಾನು ದಿಕ್ಕಿಲ್ಲದವನಾದೆನು ಆ ಸುಗ್ರೀವನಿಂದ ತಲೆತಪ್ಪಿಸಿಕೂಂಡು ಈ ಋಕ್ಷಬಿಲದಲ್ಲಿಯೇ ಇದ್ದುಬಿಡಬೇಕೆಂದು,ನಾನು ಅವನಕಡೆಯವರಾದ ನಿಮ್ಮೊಡನೆ ಮಾಡಿದ ಮಂತ್ರಲೋಚನೆಯೂ ಹೊರಕ್ಕೆಬಿದ್ದಿತು ಈಗ ನಾನು ಅವನ ರಾಜಾಜ್ಞೆಗೆ ತಪ್ಪಿದ ಮಹಾಪರಾಧಿಯೂ ಆಗಿರುವೆನು ಸಮಸ್ತವಿಷಯಗಳಲ್ಲಿಯೂ ಅವನಿಗಿಂತಲೂ ನಾನು ದುರ್ಬಲನು ಹೀಗಿರುವಾಗ ಕಿಷ್ಕಿಂಧೆಯನ್ನು ಸೇರಿ ನಾನು ಹೇಗೆ ಬದುಕಿರಬಲ್ಲೆನು? ಸುಗ್ರೀವನು ಗೂಢವಾಗಿ ವಂಚಿಸತಕ್ಕವನು ಕ್ರೂರನು ಘಾತುಕನು ರಾಜ್ಯದಾಸೆಯಾದರೋ ಅವನಿಗೆ ಮಿತಿಮೀರಿ ಹೋಗಿರುವುದು ಈ ಕಾರಣಗಳಿಂದ ಅವನು ರಹಸ್ಯವಾಗಿ ನನ್ನನ್ನು ನೇಣುಹಾಕಿಯೋ, ಸೆರೆಯಲ್ಲಿರಿಸಿಯೋ ಕೊಂದೇಬಿಡುವನು ಹಾಗೆ ಸೆರೆಯಲ್ಲಿದ್ದು ಸಾಯುವುದಕ್ಕಿಂತಲೂ ಇಲ್ಲಿ ಪ್ರಾಯೋಪವೇಶವೇ ನನಗೆ ಮೇಲೆಂದು ತೋರಿರುವುದು ಆದುದರಿಂದ ಎಲೈವಾನರರೆ! ನೀವೆಲ್ಲರೂ ನನಗೆ ಅನುಮತಿಯನ್ನು ಕೊಡಬೇಕು ಇಷ್ಟವಿದ್ದರೆ ನೀವು ಕಿಷ್ಕಿಂಧೆಗೆ ಹೋಗಬಹುದು ಪ್ರತಿಜ್ಞೆಮಾಡಿ ಹೇಳುವೆನು, ನಾನುಮಾತ್ರ ಕಿಷ್ಕಿಂಧೆಗೆ ಬರುವವನಲ್ಲ ಇಲ್ಲಿಯೇ ಪ್ರಾಯೋಪವೇಶವನ್ನು ಮಾಡುವೆನು ಇಲ್ಲಿನ ಮರಣವೇ ನನಗೆ ಶ್ರೇಯಸ್ಕರವು,ಬಲಾಢ್ಯರಾದ ರಾಮಲಕ್ಷ್ಮಣರನ್ನು ನೋಡಿಬಾಗ,ನೀವು ಅವರಿಗೆ ನನ್ನ ಪ್ರಣಾಮವನ್ನು ತಿಳಿಸಿ ನಾನು ಅವರಕ್ಷೇಮವನ್ನು ವಿಚಾರಿಸಿದುದಾಗಿ ಹೇಳಬೇಕು ನನ್ನ ಚಿಕ್ಕತಂದೆ ಸುಗ್ರೀವನಿಗೂ, ಚಿಕ್ಕಮ್ಮನಾದ ರುಮೆಗೂ,ನನ್ನ ಪ್ರಣಾಮವನ್ನು ತಿಳಿಸಿಬಿಡಿರಿ! ನನ್ನ ತಾಯಿಯಾದ ತಾರೆಯನ್ನೂ ಸಮಾಧಾನಪಡಿಸಿ,ನನ್ನ ಪ್ರಣಾಮವನ್ನು ತಿಳಿಸಿರಿ! ಅವಳು ಸಹಜವಾಗಿಯೇ ಮಕ್ಕಳಲ್ಲಿ ಬಹಳ ಪ್ರೀತಿಯುಳ್ಳವಳು ಯಾವಪ್ರಾಣಿಗಳಲ್ಲಿಯೂ ಬಹಳ ಕನಿಕರವುಳ್ಳವಳು ಇಲ್ಲಿ ನಾನು ಸತ್ತುದನ್ನು ಕೇಳಿದೊಡನೆ ನಿಜವಾಗಿ ಪ್ರಾಣವನ್ನು ಬಿಟ್ಟುಬಿಡುವಳು."

ಎಂದನು ಇಷ್ಟುಮಾತುಗಳನ್ನು ಹೇಳಿದೊಡನೆಯೇ,ಅಂಗದನು ವೃದ್ಧರಾ ದ ಆ ವಾನರರೆಲ್ಲರಿಗೂ ನಮಸ್ಕರಿಸಿ, ದುಃಖದಿಂದ ಗೋಳಿಡುತ್ತ ನೆಲದಮೇ ಲೆ ಪರ್ಣಿಯನ್ನು ಹಾಸಿಕೊಂಡು ಮಲಗಿಬಿಟ್ಟನು ಇದನ್ನು ನೋಡುತಿದ್ದ ವಾನರರೆಲ್ಲರೂ ಸಂಕಟದಿಂದ ರೋದಿಸಲಾರಂಭಿಸಿದರು ಒಬ್ಬೊಬ್ಬರ ಕ ಣ್ಣುಗಳಿಂದಲೂ ಬಿಸಿಬಿಸಿಯಾದ ಕಣ್ಣೀರು ಬಿಳುತಿತ್ತು ಒಬ್ಬೊಬ್ಬರೂ ಸುಗ್ರೀವನನ್ನು ನಿಂದಿಸಿ,ವಾಲಿಯನ್ನು ಸ್ತುತಿಸುತ್ತ ಅಂಗದನಸುತ್ತಲೂ ಸೇರಿ ತಾವೂ ಪ್ರಾಯೋಪವೇಶವನ್ನು ಮಾಡುವುದಕ್ಕೆ ಉಪಕ್ರಮಿಸಿದರು ಆ ವಾನರರೆಲ್ಲರೂ ಅಂಗದನ ಮನೋಭಿಪ್ರಾಯವನ್ನು ತಿಳಿದು, ತಮಗೂ ಮರ ಣವೇ ಯುಕ್ತವೆಂದು ನಿಶ್ಚಯಿಸಿ, ಆಚಮನವನ್ನುಮಾಡಿ, ಶುದ್ಧರಾಗಿ ಬಂದು ದಕ್ಷಿಣಾಗ್ರವಾಗಿ ದರ್ಭೆಗಳನ್ನು ಹರಡಿ ಆಸಮುದ್ರದ ಉತ್ತರತೀರದಲ್ಲಿ ಪೂರ್ವಾಭಿಮುಖವಾಗಿ ಮಲಗಿದರು ಹೀಗೆ ಮಲಗಿದ ವಾನರರೆಲ್ಲರೂ ಒಬ್ಬ ರಿಗೊಬ್ಬರು, ರಾಮನು ದೇಶಭ್ರಷ್ಟನಾಗಿ ಬಂದುದನ್ನೂ, ದಶರಥನ ಮರ ಣವನ್ನೂ ಖರದೂಷಣಾದಿಗಳ ವಧವನ್ನೂ, ಸೀತಾಪಹರಣವನ್ನೂ, ಜ ಟಾಯುವಧವನ್ನೂ, ವಾಲಿವಧವನ್ನೂ, ಸುಗ್ರೀವನು ಸಂಕೇತಕಾಲವನ್ನು ಮೀರಿದುದಕ್ಕಾಗಿ ರಾಮನಿಗುಂಟಾದ ಕೋಪವನ್ನೂ, ಸೀತಾನ್ವೇಷಣಾರ್ಥ ವಾಗಿ ಸುಗ್ರೀವನು ದಿಕ್ಕುದಿಕ್ಕಿಗೆ ವಾನರರನ್ನು ಕಳುಹಿಸಿದ ಕ್ರಮವನ್ನೂ, ಕೊನೆಗೆ ತಮಗುಂಟಾದ ಈ ಪ್ರಾಯೋಪವೇಶವೆಂಬ ಮಹಾಭಯವನ್ನೂ, ಕ್ರಮವಾಗಿ ಹೇಳಿಕೊಳ್ಳುತ್ತ ಮಲಗಿದ್ದರು ಹೀಗೆ ಪರ್ವತಾಕಾರವುಳ್ಳ ಆ ಮಹಾಕಪಿಗಳೆಲ್ಲರೂ ಒಬ್ಬರಿಗೊಬ್ಬರು ಮಾತಾಡುತ್ತಿರುವಾಗ, ಅದರಿಂದ ಹೊರಟ ದೊಡ್ಡಕಲಕಲಧ್ವನಿಯು ಆ ಪರ್ವತದಲ್ಲಿ ವ್ಯಾಪಿಸಲು, ಮೇಘಗ ರ್ಜನೆಗಳಿಂದುಂಟಾಗುವ ಪ್ರತಿಧ್ವನಿಯಂತೆ ಅಲ್ಲಿನ ಗುಹೆಗಳಿಂದ ದೊಡ್ಡಪ್ರತಿ ಧ್ವನಿಯು ಹೊರಟಿತು. ಇಲ್ಲಿಗೆ ಐವತ್ತೈದನೆಯ ಸರ್ಗವು.

{ಸಂಪಾತಿಯು ಬಂದುದು ಆತನನ್ನು ನೋಡಿ ವಾನರರು ದುಃಖದಿಂದ ಸಂಭಾಷಿಸಿದುದು}

ಈ ವಾನರರೆಲ್ಲರೂ ಯಾವ ಪರ್ವತಪ್ರದೇಶದಲ್ಲಿ ಪ್ರಾಯೋಪವಿಷ್ಟ ರಾಗಿ ಮಲಗಿದ್ದರೋ,ಆಸ್ಥಳದಲ್ಲಿಯೇ ಸಂಪಾತಿಯೆಂಬ ಗೃಧ್ರರಾಜನೊಬ್ಬ

ನು ಸೇರಿದ್ದನು ಇವನು ಜಟಾಯುವಿಗೆ ಜ್ಯೇಷ್ಠ ಸಹೋದರನು ಬಲಪರಾ
ಕ್ರಮಗಳಲ್ಲಿ ಬಹಳ ಖ್ಯಾತಿಹೊಂದಿದವನು ಶ್ರೀಮಂತನು ಚಿರಜೀವಿಯು
ಆ ವಿಂಧ್ಯಪರ್ವತದ ಗುಹೆಯಲ್ಲಿದ್ದುತಿದ್ದ ಈ ಗೃಧ್ರರಾಜನು' ವಾನರರ ಗದ್ದ
ಲವನ್ನು ಕೇಳಿ ಆ ಗುಹೆಯಿಂದ ಹೊರಕ್ಕೆ ಬಂದು ಪ್ರಾಯೋಪವಿಷ್ಟರಾ
ಗಿದ್ದ ಆ ವಾನರರನ್ನು ಕಂಡನು, ಈ ಕಪಿಗಳನ್ನು ಕಂಡೊಡನೆ ತನಗೆ ಒಳ್ಳೆ
ಆಹಾರವು ಸಿಕ್ಕಿತೆಂದು ಹಿಗ್ಗುತ್ತ,ತನ್ನಲ್ಲಿ ತಾನು, ''ಆಹಾ' ಲೋಕದಲ್ಲಿ ದೈ
ವವೇ ಸಮಸ್ತ ಪ್ರಾಣಿಗಳ ಯೋಗಕ್ಷೇಮವನ್ನೂ ವಹಿಸುವುದೆಂಬುದು ನಿಜ
ವು ಬಹುಕಾಲಕ್ಕೆ ಈಗ ನನಗೆ ಸರ್ವೋತ್ತಮವಾದ ಭಕ್ಷ್ಯವು ದೈವವಶ
ದಿಂದ ಸಿಕ್ಕಿರುವುದು ನನ್ನಿಂದ ಯಾವಪ್ರಯತ್ನವಿಲ್ಲದಿದ್ದರೂ, ದೈವಿಕವಾ
ಗಿ ಇದು ನನಗೆ ಲಭಿಸಿತು ಕೊಬ್ಬಿದ ಮೈಯ್ಯುಳ್ಳ ಈ ಕಪಿಗಳಲ್ಲಿ ಒಬ್ಬೊ
ಬ್ಬನನ್ನೂ ಹಿಡಿದು ಕೂಂದು ಭಕ್ಷಿಸಿಬಿಡುವೆನು" ಎಂದು ಹೇಳಿಕೊಳ್ಳುತ್ತ
ಮುಂದೆಬಂದನು, ಹೀಗೆ ಆಹಾರಾರ್ಥಿಯಾಗಿ ಬಂದ ಸಂಪಾತಿಯು ಹೇಳಿ
ದ ಮಾತನ್ನು ಕೇಳಿ, ಅಂಗದನು ಮಹಾಭಯವನ್ನು ಹೊಂದಿ, ಹನುಮಂತ
ನನ್ನು ಕುರಿತು, ''ಆಹಾ' ವಾನರರಾದ ನಮ್ಮೆಲ್ಲರನ್ನೂ ಕೊಲ್ಲುವುದಕ್ಕಾಗಿ
ಸೂರ್ಯಪುತ್ರನಾದ ಯಮನೇ ಗೃಧ್ರವೇಷದಿಂದ ಬಂದಿರುವಂತಿದೆ' ಸೀತೆ
ಯೆಂಬ ನೆಪದಿಂದ ಈಗ ನಾವು ಯಮನ ಕೈಗೂ ಸಿಕ್ಕಬೇಕಾಯಿತೆ? ನಾವು
ರಾಮನ ಕೆಲಸವನ್ನೂ ನಡೆಸಲಿಲ್ಲ ರಾಜಾಜ್ಞೆಯನ್ನೂ ಮೀರಿದೆವು,
ಅಯ್ಯೋ ! ಇಷ್ಟರಲ್ಲಿ ಈ ವಾನರರೆಲ್ಲರಿಗೂ ಆಕಸ್ಮಿಕವಾದ ವಿಪತ್ತು
ಬಂದೊದಗಿತಲ್ಲಾ' ಎಲೈ ವಾನರರೆ' ಹಿಂದೆ ಗೃಧ್ರರಾಜನಾದ ಜಟಾ
ಯುವು, ಸೀತಾದೇವಿಗೆ ಕ್ಷೇಮವನ್ನುಂಟುಮಾಡುವುದಕ್ಕಾಗಿ ಜನಸಾ ನ
ದಲ್ಲಿ ನಡೆಸಿದ ಕಾರ್ಯವನ್ನು ನೀವೂ ಕೇಳಿಬಲ್ಲಿರಷ್ಟೆ? ಆಜಟಾಯು
ವಿನಂತೆಯೇ ತಿರ್ಯಗ್ಜಂತುಗಳು ಮೊದಲಾಗಿ ಸಮಸ್ತಪ್ರಾಣಿಗಳೂ, ರಾಮ
ನಿಗೆ ಪ್ರಿಯವನ್ನುಂಟುಮಾಡುವುದಕ್ಕಾಗಿ ತಮ್ಮ ಪ್ರಾಣಗಳನ್ನೂ ಬಿಡುತ್ತಿ
ರುವುವು ಸಮಸ್ತಪ್ರಾಣಿಗಳೂ, ಸ್ನೇಹಕ್ಕೂ, ಕಾರುಣ್ಯಕ್ಕೂ ಕಟ್ಟುಬಿ
ದ್ದು, ಬೇರೆಬೇರೆವಿಧದಿಂದ ರಾಮನಿಗೆ ಉಪಕಾರವನ್ನು ಮಾಡುತ್ತಿರುವುವು.
ಹಾಗೆಯೇ ಧರ್ಮಜ್ಞನಾದ ಜಟಾಯುವೂಕೂಡ ಆ ರಾಮನಿಗೆ ಉಪಕಾರ
ಮಾಡಬೇಕೆಂದೆಣಿಸಿ ಬಂದು, ತನ್ನ ಪ್ರಾಣಗಳನ್ನೇ ಕೊಟ್ಟುಬಿಟ ನು.



1630. ಪರ್ವತಾಗ್ರದಲ್ಲಿದ್ದ ಸಂಪಾತಿಯನ್ನು ನೋಡಿ, ಪ್ರಾಯೋಪವಿಷ್ಟರಾದ ವಾನರರು ಭಯಪಟ್ಟುದು.

ಇದೊಂದು ವಿಧದಿಂದ ಅವನೂ, ರಾಮನಿಗೆ ಪ್ರಿಯವನ್ನುಂಟುಮಾಡಿದಂತೆಯೇ ಆಯಿತು ಈಗ ನಾವೂ ರಾಮಕಾರ್ಯಾರ್ಥವಾಗಿ ಸುತ್ತಿಸುತ್ತಿ ಸಾಕಾಯಿತು. ಇನ್ನು ನಮಗೆ ಜೀವಚಾಸೆಯೇ ಹೋಯಿತು ಕೊನೆಗೆ ಈ ದುರ್ಗಮಪ್ರದೇಶದಲ್ಲಿ ಸಿಕ್ಕಿಬಿದ್ದೆವು ಇಷ್ಟಾದರೂ ನಾವು ಸೀತೆಯನ್ನು ಕಾಣಲಿಲ್ಲ ಆದರೇನು? ರಾವಣನಿಂದ ಹತನಾದರೂ, ಗೃಧ್ರರಾಜನಾದ ಆ ಜಟಾಯುವೊಬ್ಬನೇ ಭಾಗ್ಯಶಾಲಿಯೆಂದೆಣಿಸಬೇಕಾಗಿದೆ ನಮ್ಮಂತೆ ಅವನು ಸುಗ್ರೀವನ ಭಯಕ್ಕೆ ಸಿಕ್ಕದೆ ಸುಖವಾಗಿ ಸತ್ತುದಲ್ಲದೆ, ರಾಮನ ಕೈಯಿಂದ ಸಂಸ್ಕಾರವನ್ನು ಹೊಂದಿ ಸದ್ಗತಿಯನ್ನೂ ಹೊಂದಿದನು * ಜಟಾಯುವುಹತನಾದುದೊಂದು; ದಶರಥರಾಜನ ಮರಣವೊಂದು, ರಾವಣನು ಸೀತೆಯನ್ನು ಪಹರಿಸಿದುದೊಂದು; ಇವಲ್ಲವೂ ವಾನರರಾದ ನಮ್ಮ ಪ್ರಾಣಗಳಿಗೆ ಸಂಚಕಾರವಾಯಿತು ರಾಮಲಕ್ಷ್ಮಣರು ಸೀತೆಯೊಡನೆ ವನವಾಸಮಾಡಿದುದೂ, ರಾಮಬಾಣದಿಂದ ವಾಲಿಯು ಹತನಾದುದೂ, ರಾಮನ ಕೋಪದಿಂದ ಜನಸ್ಥಾನದಲ್ಲಿ ರಾಕ್ಷಸರಿಗುಂಟಾದ ವಿನಾಶವೂ, ಈ ವಿಪರೀತಗಳೆಲ್ಲವೂ ದಶರಥನು ಕೈಕೇಯಿಗೆ ವರವನ್ನು ಕೊಟ್ಟುದರಿಂದಲೇ ಪ್ರಾಪ್ತವಾದುವು" ಎಂದನು ಹೀಗೆ ಅಂಗದನು ಹೇಳುತಿದ್ದ ದುಃಖವಾಕ್ಯವನ್ನು ಕೇಳಿ, ಧೀಮಂತನಾದ ಆ ಗೃಧ್ರರಾಜನು ಮೆಲ್ಲಗೆ ಮುಂದೆ ಸರಿದು, ಅಲ್ಲಿ ವಾನರರೆಲ್ಲರೂ ದೈನ್ಯದಿಂದ ಮಲಗಿರುವುದನ್ನೂ ನೋಡಿ, ಕದಲಿದ ಮನಸ್ಸುಳ್ಳವನಾಗಿ ಮಾತನಾಡಿಸಬೇಕೆಂದೆಣಿಸಿದನು ತೀಕ್ಷ್ಣವಾದ ಕೊಕ್ಕುಳ್ಳವನಾಗಿಯೂ, ಗಂಭೀರವಾದ ಮಹಾಧ್ವನಿಯುಳ್ಳವನಾಗಿಯೂ ಇರುವ ಆ ಗೃಧ್ರರಾಜನು, ಅಂಗದನ ಬಾಯಿಂದ ಹೊರಟಮಾತನ್ನು ಕೇಳಿದೊಡನೆ "ಓಹೋ! ಇದೇನು! ನನಗೆ ಪ್ರಾಣಕ್ಕಿಂತಲೂ ಪ್ರಿಯನಾದ ಆ ಜಟಾಯುವಿನ ವಧವನ್ನು ಹೇಳುವವನಾರು? ಈ ಮಾತು ನನ್ನ ಮನಸ್ಸನ್ನು ನಡುಗಿಸುವಂತಿದೆಯಲ್ಲಾ? ಜನಸ್ಥಾನದಲ್ಲಿ ರಾವಣನಿಗೂ, ಜಟಾಯುವಿಗೂ

---

* ಜಟಾಯುವು ಹತನಾಗದಿದ್ದರೆ ಅವನಿಂದಲೇ ರಾಮನಿಗೆ ಸೀತಾವೃತ್ತಾಂತವು ತಿಳಿಯುತಿತ್ತೆಂದೂ, ಅಥವಾ ದಶರಥನು ಸಾಯದಿದ್ದರೆ ರಾಮನ ಕಷ್ಟವನ್ನು ಕೇಳಿ ತಾನೇ ಬಂದು ಅವನನ್ನು ಅಯೋಧ್ಯಗಾದರೂ ಕರೆದುಕೊಂಡು ಹೋಗುತಿದ್ದನೆಂದೂ ಇಲ್ಲಿ ವಾನರರ ಆಶಯವು

ಯುದ್ಧವಾಗುವುದಕ್ಕೆ ಕಾರಣವೇನು? ಬಹುಕಾಲಕ್ಕೆ ಈಗಲೇ ನನ್ನ ಪ್ರಿಯ ಸಹೋದರನ ಹೆಸರು ನನ್ನ ಕಿವಿಗೆ ಬಿದ್ದಿತು ಎಲ್ಲೈ ವಾನರರೇ! ನೀವು ದಯೆ ಮಾಡಿ ನನ್ನನ್ನು ಈ ದುರ್ಗಮವಾದ ತಿಟ್ಟಿನಿಂದ ಕೆಳಕ್ಕಿಳಿಸುವಿರಾ ! ಗುಣಜ್ಞನಾಗಿಯೂ, ಪರಾಕ್ರಮಕಾರ್ಯಗಳಲ್ಲಿ ಖ್ಯಾತಿಹೊಂದಿದವನಾಗಿಯೂ ಇದ್ದ ನನ್ನ ಪ್ರಿಯಸಹೋದರನ ಹೆಸರು ಬಹುಕಾಲಕ್ಕೆ ಈಗ ನನ್ನ ಕಿವಿಗೆ ಬಿದ್ದಿತು ಆದರೆ ನಿಮ್ಮ ಬಾಯಿಯಿಂದ ಅವನ ಶ್ಲಾಘನೆಯನ್ನು ಕೇಳಿ ಬಹಳ ಸಂತೋಷವಾಯಿತು ಎಲ್ಲೈ ವಾನರೋತ್ತಮರೆ! ಆ ಜನಸ್ಥಾನದಲ್ಲಿದ್ದ ನನ್ನ ತಮ್ಮನಾದ ಜಟಾಯುವು ಹೇಗೆ ಹತನಾದನೆಂಬುದನ್ನು ಕೇಳಬೇಕೆಂದಿರುವೆನು ಗುರುಜನಗಳಿಗೆ ಪ್ರಿಯನಾದ ಆ ಶ್ರೀರಾಮನು, ಯಾವನ ಜ್ಯೇಷ್ಠಪುತ್ರನೋ, ಆದಶರಥನಿಗೆ ನನ್ನ ತಮ್ಮನು *ಮಿತ್ರನೆಂಬುದು ಹೇಗೆ? ಎಲ್ಲೈ ವಾನರರೇ! ಸೂರ್ಯತಾಪದಿಂದ ನನ್ನ ರೆಕ್ಕೆಗಳೆರಡೂ ಬೆಂದುಹೋಗಿರುವುವು ಇಲ್ಲಿಂದ ನಾನು ಇಳಿಯಲಾರೆನು ನೀವು ದಯೆಮಾಡಿ ನನ್ನನ್ನು ಕೆಳಗಿಳಿಸಬೇಕು " ಎಂದನು ಇಲ್ಲಿಗೆ ಐವತ್ತಾರನೆಯಸರ್ಗವು

{ವಾನರರು ಸಂಪಾತಿಯ ಪ್ರಶ್ನೆಗೆ ಪ್ರತ್ಯುತ್ತರವನ್ನು ಹೇಳಿದುದು}

ಸಂಪಾತಿಯು ದುಃಖದಿಂದ ಕುಗ್ಗಿದ ಕಂಠವುಳ್ಳವನಾಗಿದ್ದರೂ ಅವನು ಹೇಳಿದ ಮಾತುಗಳೆಲ್ಲವೂ ಈ ವಾನರರ ಕಿವಿಗೆ ಬಿದ್ದಿತು ಮೊದಮೊದಲು ಅವನ ಮಾತಿನಲ್ಲಿ ಅವರಿಗೆ ನಂಬಿಕೆಯೇ ಹುಟ್ಟಲಿಲ್ಲ ಅವನು ಯಾವನೋ ಕ್ರೂರಕರ್ಮಿಯೆಂದೇ ಶಂಕಿಸುತಿದ್ದರು ಪ್ರಾಯೋಪವೇಶದಲ್ಲಿದ್ದ ಆ ವಾನರರೆಲ್ಲರೂ ಗೃಧ್ರನನ್ನು ನೋಡಿ, ತಮ್ಮ ಜೀವದಲ್ಲಿ ಸಂಪೂರ್ಣವಾಗಿ ಆಶೆಯನ್ನು ಬಿಟ್ಟು, "ಹೇಗಿದ್ದರೂ ಈ ಪಕ್ಷಿಯು ನಮ್ಮನ್ನು ಭಕ್ಷಿಸದಿರದು "ಎಂದು ಅದರವಿಷಯದಲ್ಲಿ ಕ್ರೂರವಾದ ಅಭಿಪ್ರಾಯವನ್ನೇ ಇಟ್ಟಿ

---

* ದಶರಥನಿಗೆ ಜಟಾಯುವು ಮಿತ್ರನೆಂಬುದನ್ನು ಹಿಂದೆ ಅಂಗದನು ಹೇಳಿದ ಮಾತುಗಳೆಲ್ಲಿ ತಾಳೆಹಾಕಿದ್ದರೂ, ಈಗ ಸಂಪಾತಿಯ ಪ್ರಶ್ನೆಯಿಂದ ಅಂಗದನು ಆವಿಷಯವನ್ನು ಸೂಚಿಸಿರಬೇಕೆಂದೇ ಊಹ್ಯವು.

ದ್ದರು ಕೊನೆಗೆ ಅವರು ಒಬ್ಬರನ್ನೊಬ್ಬರು ನೋಡುತ್ತ ''ಮೊದಲೇ ನಾವು ಪ್ರಾಯೋಪವೇಶದಿಂದ ಸಾಯುವುದಕ್ಕೆ ಸಿದ್ಧರಾಗಿರುವೆವಲ್ಲವೆ? ಈ ಹಕ್ಕಿಯೂ ನಮ್ಮನ್ನು ತಿನ್ನುವುದಕ್ಕೆ ಸಿದ್ಧವಾಗಿರುವುದು ಈಗಲೇ ಇದು ನಮ್ಮೆಲ್ಲರನ್ನೂ ನುಂಗಿಬಿಟ್ಟರೆ, ನಾವು ನಿರಾಯಾಸವಾಗಿ ಶೀಘ್ರದಲ್ಲಿಯೇ ಪ್ರಾಣವನ್ನು ಬಿಡಬಹುದಾದುದರಿಂದ, ನಮ್ಮ ಕಷ್ಟವೇ ತಪ್ಪುವುದು ನಾವು ಉದ್ದೇಶಿಸಿದ ಕಾರ್ಯವೂ ಸಿದ್ಧಿಸುವುದು ಇನ್ನು ಈ ಹದ್ದಿಗಾಗಿ ನಾವು ಭಯಪಡಬೇಕಾದುದೇನು? ಎಂದು ಅವರೆಲ್ಲರೂ ಸ್ಥಿರಬುದ್ಧಿಯನ್ನು ಮಾಡಿಕೊಂಡು, ನಿರ್ಭಯರಾಗಿ ಸಮೀಪಕ್ಕೆ ಬಂದು ಆ ಗೃಧ್ರರಾಜನನ್ನು ಪರ್ವತ ಶಿಖರದಿಂದ ಕಳಕ್ಕಿಳಿಸಿದರು ಆಗ ಅಂಗದನು ಸಂಪಾತಿಯನ್ನು ನೋಡಿ ''ಎಲೈ ಗೃಧ್ರರಾಜನೆ! ಮಹಾಪರಾಕ್ರಮಿಯಾಗಿಯೂ, ಧಾರ್ಮಿಕನಾಗಿಯೂ ಇದ್ದ ಋಕ್ಷರಜಸ್ಸೆಂಬ ವಾನರರಾಜನೊಬ್ಬನಿದ್ದನು ಅವನು ನನ್ನ ಅಜ್ಜನು ಅವನಿಗೆ ನೂರುಕೋಟಿಪುರುಷರ ಬಲವುಳ್ಳ ವಾಲಿಸುಗ್ರೀವರೆಂಬ ಇಬ್ಬರು ಮಕ್ಕಳು ಹುಟ್ಟಿದರು ಅವರಲ್ಲಿ ಜ್ಯೇಷ್ಠನಾದ ವಾಲಿಯೇ ನನ್ನ ತಂದೆಯು ಅವನು ವಾನರರಾಜನಾಗಿ ಲೋಕದಲ್ಲಿ ಎಷ್ಟೋಪ್ರಸಿದ್ಧ ಕಾರ್ಯಗಳನ್ನು ನಡೆಸಿರುವನು ಹೀಗಿರಲು ಅತ್ತಲಾಗಿ ಈ ಭೂಮಿಯೆಲ್ಲಕ್ಕೂ ನಾಥನಾಗಿಯೂ, ಶ್ರೀಮಂತನಾಗಿಯೂ, ಇಕ್ಷ್ವಾಕುವಂಶದದರಲ್ಲಿ ಪುಟ್ಟಿದವನಾಗಿಯೂ, ಮಹಾರಥನಾಗಿಯೂ ಇರುವ ದಶರಥಪುತ್ರನಾದ ರಾಮನೆಂಬವನು, ತನ್ನ ತಂದೆಯ ಮಾತನ್ನು ಸಲ್ಲಿಸುವುದಕ್ಕಾಗಿ ಧರ್ಮಮಾರ್ಗವನ್ನು ಹಿಡಿದು, ತಮ್ಮನಾದ ಲಕ್ಷ್ಮಣನನ್ನೂ, ಭಾರ್ಯೆಯಾದ ವಿದೇಹಪುತ್ರಿಯನ್ನೂ ಸಂಗಡ ಕರೆದುಕೊಂಡು ದಂಡಕಾರಣ್ಯಕ್ಕೆ ಪ್ರವೇಶಿಸಿದನು ಅವರು ಜನಸ್ಥಾನದಲ್ಲಿರುವಾಗ ಅವನ ಪತ್ನಿಯಾದ ಸೀತೆಯನ್ನು ರಾವಣನೆಂಬವನು ಬಲಾತ್ಕಾರದಿಂದ ಕದ್ದುಯ್ದನು ರಾಮನ ತಂದೆಗೆ ಮಿತ್ರನಾದ ಜಟಾಯುವೆಂಬ ಗೃಧ್ರರಾಜನೊಬ್ಬನು ಆ ವಿದೇಹರಾಜಪುತ್ರಿಯು ಆಕಾಶದಲ್ಲಿ ಕದ್ದುಯ್ಯಲ್ಪಡುವುದನ್ನು ಕಂಡನು ಆ ಕ್ಷಣವೇ ಆತನು ರಾವಣರಥವನ್ನು ಮುರಿದು ಅವನನ್ನಡ್ಡಗಟ್ಟಿ ಸೀತೆಯನ್ನು ನಿಲ್ಲಿಸಿದನು ಆ ಜಟಾಯುವು ಬಹಳವೃದ್ಧನಾದುದರಿಂದ, ರಾವಣನೊಡನೆ ಸ್ವಲ್ಪಕಾಲದವರೆಗೆ ಹೋ

ರಾಡುತಿದ್ದು,ಕೊನೆಗೆ ಬಳಲಿ, ರಾವಣನಿಂದ ಹತನಾದನು ಆ ಗೃಧ್ರರಾಜನು ಪ್ರಬಲನಾದ ರಾಕ್ಷಸನಿಂದ ಹತನಾದುದಕ್ಕೆ ಇದೇ ಕಾರಣವು. ಕೊನೆಗೆ ಜಟಾಯುವು ರಾಮನಿಂದ ಸಂಸ್ಕೃತನಾಗಿ ಉತ್ತಮಗತಿಯನ್ನೇ ಹೊಂದಿದನು ಅಮೇಲೆ ಮಹಾತ್ಮನಾದ ಸುಗ್ರೀವನೆಂಬ ನನ್ನ ಚಿಕ್ಕತಂದೆಯೊಡನೆ ರಾಮನು ಸ್ನೇಹವನ್ನು ಬಳೆಸಿ,ಅವನ ಪ್ರೀತಿಗಾಗಿ ನನ್ನ ತಂದೆಯಾದವಾಲಿಯನ್ನು ಕೊಂದನು ಸುಗ್ರೀವನು ಮೊದಲಿಂದಲೇ ನನ್ನ ತಂದೆಯೊಡನೆ ವಿರೋಧಿಸಿಕೊಂಡು ತನ್ನ ಇಷ್ಟಮಂತ್ರಿಗಳೊಡನೆ ಬೇರೆಯಾಗಿರುತಿದ್ದನು ರಾಮನು ವಾಲಿಯನ್ನು ಕೊಂದಮೇಲೆ ಸುಗ್ರೀವನನ್ನು ವಾನರರಾಜ್ಯದಲ್ಲಿ ಅಭಿಷೇಕಿಸಿದನು ಹೀಗೆ ರಾಮನಿಂದ ಪಟ್ಟಾಭಿಷಿಕ್ತನಾದ ಸುಗ್ರೀವನು ರಾಮಕಾರ್ಯಾರ್ಥವಾಗಿ ನಮ್ಮನ್ನು ಕಳುಹಿಸಿದನು ರಾಮನಿಂದ ಪ್ರೇರಿತರಾಗಿ ನಾವು ಅಲ್ಲಲ್ಲಿ ಸೀತೆಯನ್ನು ಹುಡುಕುತ್ತ ಇಲ್ಲಿಗೆ ಬಂದೆವು ರಾತ್ರಿಯಲ್ಲಿ ಸೂರ್ಯಪ್ರಭೆಯನ್ನು ಹೇಗೆ ಕಾಣಲಾರೆವೋ, ಹಾಗೆ ಎಲ್ಲಿ ಹುಡುಕಿದರೂ ಸೀತೆಯನ್ನು ಕಾಣಲಿಲ್ಲ ನಾವೆಲ್ಲರೂ ದಂಡಕಾರಣ್ಯವನ್ನೆಲ್ಲಾ ಎಷ್ಟೋ ಎಚ್ಚರಿಕೆಯಿಂದ ಸುತ್ತಿನೋಡಿದೆವು ಕೊನೆಗೆ ದಾರಿತಿಳಿಯದೆ ಆ ಜ್ಞಾನದಿಂದ ಇಲ್ಲಿ ಒಬ್ಬ ತಾಪಸಿಯ ಬಿಲವನ್ನು ಪ್ರವೇಶಿಸಿಬಿಟ್ಟೆವು ಮಯನ ಮಾಯೆಯಿಂದ ನಿರ್ಮಿತವಾದ ಆಬಿಲವನ್ನು ಹುಡುಕುತ್ತಿರುವಾಗಲೇ ರಾಜನು ನಮಗೆ ನಿರ್ಣಯಿಸಿಕೊಟ್ಟ ಒಂದುತಿಂಗಳಕಾಲವೂ ಕಳೆದುಹೋಯಿತು ಈ ರಾಜಾಜ್ಞೆಯನ್ನು ವೀರಿದ ಭಯಕ್ಕಾಗಿ ಸುಗ್ರೀವನಬಳಿಗೆ ಹಿಂತಿರುಗಿ ಹೋಗಲಾರದೆ, ಇಲ್ಲೆ ಪ್ರಾಯೋಪವೇಶವನ್ನು ಮಾಡುತ್ತಿರುವೆವು ಅಲ್ಲಿಗೆ ನಾವು ಹಿಂತಿರುಗಿ ಹೋದರೂ ರಾಮನಾಗಲಿ, ಸುಗ್ರೀವನಾಗಲಿ, ಲಕ್ಷ್ಮಣನಾಗಲಿ ಕೋಪಗೊಂಡರೆ ನಮಗೆ ಉಳಿಗಾಲವಿಲ್ಲವು " ಎಂದನು ಇಲ್ಲಿಗೆ ಐವತ್ತೇಳನೆಯ ಸರ್ಗವು

ಸಂಪಾತಿಯು ಸೀತೆಯಿರುವ ಸ್ಥಾನವನ್ನು ವಾನರರಿಗೆ ತಿಳಿಸಿದುದು

ಹೀಗೆ ಪ್ರಾಣತ್ಯಾಗಕ್ಕೆ ಸಿದ್ಧರಾಗಿರುವ ವಾನರರು ದೈನ್ಯದಿಂದ ಹೇಳಿದ ಮಾತನ್ನು ಕೇಳಿ ಸಂಪಾತಿಯು, ತಾನೂ ದುಃಖದಿಂದ ಕಣ್ಣೀರನುಬಿ

ಡುತ್ತ,ಉಚ್ಚಧ್ವನಿಯಿಂದ ಅವರನ್ನು ಕುರಿತು ' ಎಲೈ ವಾನರರೆ! ಯುದ್ಧದ ಲ್ಲಿ ಬಲಾಢ್ಯನಾದ ರಾವಣನಿಂದ ಹತನಾದನೆಂದು ನೀವು ಹೇಳಿದ ಜಟಾಯುವು ನನಗೆ ಒಡಹುಟ್ಟಿದ ತಮ್ಮನು ಆಹಾ!ನನ್ನ ಪ್ರಿಯಸಹೋದರನನ್ನು ರಾವಣನು ಕೊಂದುದಾಗಿ ನಿಮ್ಮ ಬಾಯಿಂದ ಕೇಳುತಿದ್ದರೂ, ಮುಪ್ಪಿನಿಂದಲೂ,ರೆಕ್ಕೆಯಿಲ್ಲದುದರಿಂದಲೂ ಕೈಸಾಗದ ನಾನು ಅದನ್ನೂ ಸಹಿಸಿಕೊಂಡಿರಬೇಕಾಗಿದೆಯೆಲ್ಲಾ!ಹಾ! ನನ್ನ ತಮ್ಮನಿಗೆ ವೈರಿಯಾದ ರಾವಣನನ್ನು ಕೊಂದು ಹಗೆಯನ್ನು ತೀರಿಸಿಕೊಳ್ಳುವುದಕ್ಕೂ ಈಗ ನನಗೆ ಶಕ್ತಿಯಿಲ್ಲದೆ ಹೋಯಿತೆ!ನಾನೇನು ಮಾಡಲಿ!ಹೀಗೆ ನನ್ನ ಗರಿಗಳು ಬೆಂದುಹೋಗಿರುವುದಕ್ಕೆ ಕಾರಣವನ್ನು ಹೇಳುವೆನು ಕೇಳಿರಿ!ಪೂರ್ವದಲ್ಲಿ ವೃತ್ರಾಸುರನ ವಧವು ನಡೆದಾಗ, ಅಣ್ಣತಮ್ಮಂದಿರಾದ ನಾವಿಬ್ಬರೂ, ಒಬ್ಬರಿಗೊಬ್ಬರಿಗಿರುವ ವೇಗದ ತಾರತಮ್ಯವನ್ನು ಪರೀಕ್ಷಿಸಿನೋಡಬೇಕೆಂಬ ಹಟದಿಂದ, ಸಹಸ್ರಕಿರಣಗಳಿಂದ ಜ್ವಲಿಸುವ ಸೂರ್ಯನ ಸಮೀಪದವರೆಗೆ ಹಾರಿಹೋದೆವು ನಾವಿಬ್ಬರೂ, ಸುತ್ತಿಸುತ್ತಿ ಮಂಡಲಗತಿಯಿಂದಲೇ ತಿರುಗುತ್ತ, ಮಹಾವೇಗದಿಂದ ಆಕಾಶಮಾರ್ಗದಲ್ಲಿ ಬಹುದೂರವನ್ನು ಕಳೆದುಹೋದೆವು ಅಷ್ಟರಲ್ಲಿ ಸೂರ್ಯನು ಆಕಾಶಮಧ್ಯಕ್ಕೆ ಬಂದನು ಅವನ ತಾಪವೂ ತೀಕ್ಷ್ಣವಾಗುತ್ತ ಬಂದಿತು ನನ್ನ ತಮ್ಮನಾದ ಜಟಾಯುವು ಆ ಬಿಸಿಲಿನ ತಾಪಕ್ಕೆ ತಾಳಲಾರದೆ ಕಂದಿಹೋದನು. ಹೀಗೆ ಸೂರ್ಯಕಿರಣದಿಂದ ಬೆಂದುಹೋಗುತ್ತಿರುವ ತಮ್ಮನನ್ನು ನೋಡಿ ನನಗೆ ಅತನಲ್ಲಿ ಮರುಕಹುಟ್ಟಿತು ಆಗ ನಾನು, ನನ್ನ ರೆಕ್ಕೆಗಳಿಂದ ಅತನನ್ನು ಬಿಸಿಲಿಗೆ ತಾಗದಂತೆ ಮರೆಸಿಟ್ಟುಕೊಂಡೆನು ಅದರಿಂದ ನನ್ನ ರೆಕ್ಕೆಗಳೆರಡೂ ಬೆಂದುಹೋದುವು ಆಗಲೇ ನಾನು ಅಲ್ಲಿಂದ ಈ ವಿಂಧ್ಯಪರ್ವತದಲ್ಲಿ ಬಿದ್ದೆನು ಇದುವರೆಗೆ ಆ ನನ್ನ ತಮ್ಮನ ಗತಿಯೇನಾಯಿತೆಂದು ನನಗೆ ತಿಳಿದಿರಲಿಲ್ಲ ರೆಕ್ಕೆಮುರಿದು ಇಲ್ಲಿ ಬಿದ್ದಿರುವೆನು "ಎಂದನು ಸಂಪಾತಿಯು ಹೇಳಿದ ಮಾತನ್ನು ಕೇಳಿ ಯುವರಾಜನಾದ ಅಂಗದನು ಆ ಸಂಪಾತಿಯನ್ನು ಕುರಿತು 'ಓಹೋ! ನೀನು ಆ ಜಟಾಯುವಿಗೆ ಅಣ್ಣನೆ? ಇಲ್ಲಿ ನಾವು ಆಡುತಿದ್ದ ಮಾತುಗಳೆಲ್ಲವೂ ನಿನ್ನ ಕಿವಿಗೆ ಬಿದ್ದುವೆ? ನೀನು ಜಟಾಯುವಿಗೆ ಸಹೋದರನಾಗಿದ್ದಪಕ್ಷದಲ್ಲಿ ನಿನಗೂ ರಾವಣವೃತ್ತಾಂತವು ತಿಳಿದಿರಬಹುದು ಆ ರಾಕ್ಷಸ

ನೆಲ್ಲಿರುವನೆಂಬುದು ನಿನಗೆ ತಿಳಿದಿದ್ದರೆ ಕೃಪೆಯಿಟ್ಟು ನಮಗೆ ತಿಳಿಸು. ಮುಂದೆಬರುವ ಅನರ್ಥಗಳನ್ನು ತಿಳಿಯದೆ ಅಕೃತ್ಯವನ್ನು ನಡೆಸಿದ, ಆ ನೀಚರಾಕ್ಷಸನು ವಾಸಮಾಡುವ ಸ್ಥಳವು, ಸಮೀಪವಾದರೂ, ದೂರವಾದರೂ ನಿನಗೆ ತಿಳಿದಿದ್ದರೆ ಹೇಳು" ಎಂದನು ಆಗ ಮಹಾತೇಜಸ್ವಿಯಾದ ಸಂಪಾತಿಯು ತನ್ನ ಗುಹ್ಯಕನುರೂಪವಾಗಿ ಆ ವಾನರರೆಲ್ಲರ ಕಿವಿಗಳಿಗೂ ಅಮೃತವರ್ಷವನ್ನು ಕರೆದಂತೆ ಒಂದಾನೊಂದು ಮಾತನ್ನು ಹೇಳುವನು, ''ಎಲೈ ವಾನರರೇ! ನಾನಾದರೋ ಪರಮವೃದ್ಧನು ಕೇವಲತಿರ್ಯಗ್ಜಂತುವಾದ ಗೃಧ್ರವಾಗಿರುವೆನು ನನ್ನ ರೆಕ್ಕೆಗಳೂ ಬೆಂದುಹೋಗಿರುವುವು ನನ್ನ ವೀರ್ಯವೆಲ್ಲವೂ ಉಡುಗಿಹೋದುವು ನನ್ನಿಂದ ಯಾವ ಕಾರ್ಯವಾದೀತು? ನಾನು ಯಾರಿಗೆ ಯಾವಪ್ರಯೋಜನವನ್ನು ಮಾಡಬಲ್ಲೆನು? ಆದರೆ ವಾಙ್ಮಾತ್ರದಿಂದಲಾದರೂ ಈಗ ರಾಮನಿಗೆ ಉತ್ತಮನಾದ ಸಹಾಯವನ್ನು ಮಾಡಲಾರೆನೆ! ಎಲೈ ವಾನರರೆ! ನೀವು ನನ್ನನ್ನು ಕುರಿತು '' ರಾವಣವೃತ್ತಾಂತವನ್ನು ನೀನು ಬಲ್ಲವನಾಗಿದ್ದರೆ ತಿಳಿಸು" ಎಂದು ಹೇಳಿದಿರಲ್ಲವೆ? ಈ ಲೋಕದಲ್ಲಿ ನನಗೆ ತಿಳಿಯದು ದೊಂದೂ ಇಲ್ಲ ನಾನು ವರುಣಲೋಕಗಳೆಲ್ಲವನ್ನೂ ಬಲ್ಲೆನು ತ್ರಿವಿಕ್ರಮರೂಪಿಯಾದ ಶ್ರೀಮಹಾವಿಷ್ಣುವು ಸಾಧಿಸಿದ ಊರ್ಧ್ವಲೋಕಗಳೆಲ್ಲವನ್ನೂ ಬಲ್ಲೆನು ದೇವಾಸುರರಯುದ್ಧಗಳನ್ನೂ ನೋಡಿರುವೆನು ಅದಿಯಲ್ಲಿ ನಡೆದ ಅಮೃತಮಥನವನ್ನೂ ಕಂಡಿರುವೆನು ಈಗ ನೀವು ಬಂದಿರುವುದು ರಾಮನ ಕಾರ್ಯವಾದುದರಿಂದ, ನಾನೂ ಅಕಾರ್ಯಕ್ಕೆ ತಕ್ಕಸಹಾಯವನ್ನು ಮಾಡಿಯೇ ತೀರಬೇಕು ಆದರೆ ಮುಪ್ಪಿನಿಂದ ನನ್ನ ತೇಜಸ್ಸೂ ಕುಂದಿಹೋಯಿತು, ನನ್ನ ಪ್ರಾಣಗಳಲ್ಲಿಯೂ ಬಲವು ತಪ್ಪಿಹೋಯಿತು ನನ್ನ ದೇಹದ ಅವಯವಗಳೂ ಬಿಗಿತಪ್ಪಿದುವು ಈಗ ಕೆಲವುದಿನಗಳ ಕಳಗೆ ದುರಾತ್ಮನಾದ ರಾವಣನು, ರೂಪಸಂಪನ್ನೆಯಾಗಿಯೂ, ಆಭರಣಭೂಷಿತೆಯಾಗಿಯೂ ಇದ್ದ ಒಬ್ಬಯುವತಿಯನ್ನು ಅಂತರಕ್ಷದಲ್ಲಿ ಎತ್ತಿಕೊಂಡು ಹೋಗುತ್ತಿರುವುದನ್ನು ಕಂಡೆನು ಆಗ ಅವಳು ಒಮ್ಮೊಮ್ಮೆ ''ರಾಮಾ! ರಾಮಾ!!" ಎಂದೂ ಮತ್ತೊಮ್ಮೆ ''ಲಕ್ಷ್ಮಣಾ! ಲಕ್ಷ್ಮಣಾ!! ಎಂದೂ ಆಕ್ರೋಶಿಸುತ್ತ, ತಾನುತೊಟ್ಟಿದ್ದ ಆಭರಣಗಳನ್ನು ಕಿತ್ತೆಸೆದು, ರಾವಣನ ಕೈಯಿಂದ ಬಿಡಿಸಿಕೊಳ್ಳುವುದ

ಕ್ಕಾಗಿ ಕೈಕಾಲುಗಳನ್ನೊದರುತ್ತಿದ್ದಳು ಪರ್ವತಾಗ್ರದಮೇಲೆ ಸೂರ್ಯಕಾಂತಿಯು ಪ್ರಸರಿಸುವಂತೆಯೂ, ಮೇಘದಲ್ಲಿ ಮಿಂಚು ಹೊಳೆಯುವಂತೆಯೂ, ಆರಾಕ್ಷಸನ ಕಪಾಪ್ಪದ ಮೈಮೇಲೆ,ಅವಳು ಧರಿಸಿದ್ದ ಪಟ್ಟೆಮಡಿಯಸೆರಗುಹಾರುತ್ತಿರುವುದನ್ನು ಕಂಡೆನು ರಾವಣನ ಹೆಸರನ್ನು ಹಿಡಿದು ಕೂಗುತಿದ್ದುದರಿಂದ,ಅವಳೇ ಸೀತೆಯೆಂದು ನನಗೆ ತೋರುವುದು ಆ ರಾಕ್ಷಸನಿರುವ ಸ್ಥಳವಾವುದೆಂಬುದನ್ನೂ ನಿನಗೆ ಹೇಳುವೆನು ಕೇಳಿರಿ ! ಆ ರಾಕ್ಷಸನು ಸಾಕ್ಷಾದ್ವಿಶ್ರವಸ್ಸಿನ ಮಗನು ಕುಬೇರನಿಗೆ ಒಡಹುಟ್ಟಿದವನು ಅವನು ಲಂಕೆಯೆಂಬ ಪಟ್ಟಣದಲ್ಲಿ ವಾಸವಾಗಿರುವನು ಅವನಿಗೆ ರಾವಣನೆಂದು ಹೆಸರು ಇದೋ! ಇತ್ತಲಾಗಿ ಈ ಸಮುದ್ರತೀರಕ್ಕೆ ನೂರುಗಾವುದಗಳ ದೂರದಲ್ಲಿ ಒಂದಾನೊಂದು ದ್ವೀಪವಿರುವುದು ಅದರಲ್ಲಿಯೇ ಸುಂದರವಾದ ಆ ಲಂಕಾನಗರವಿರುವುದು. ವಿಶ್ವಕರ್ಮನೇ ಅದನ್ನು ಅಷ್ಟುರಮಣೀಯವಾಗಿ ನಿರ್ಮಿಸಿರುವನು ಅದಕ್ಕೆ ಚಿನ್ನದ ಜಗಲಿಗಳುಳ್ಳ ಸುವರ್ಣಮಯವಾದ ಒಂದುಮಹಾದ್ವಾರವಿರುವುದು. ಅದರಸುತ್ತಲೂ ಸೂರ್ಯನಂತೆ ಜ್ವಲಿಸುವ ಮಹಾಪ್ರಾಕಾರವಿರುವುದು ಆ ಲಂಕೆಯಲ್ಲಿಯೇ ವಿದೇಹಪುತ್ರಿಯು ವೈದಲು ತಾನು ಧರಿಸಿದ್ದ ಆ ಕಾಶೇಯವಸ್ತ್ರದೊಡನೆ ದುಃಖಿತೆಯಾಗಿ ಸೆರೆಯಲ್ಲಿಡಲ್ಪಟ್ಟಿರುವಳು ರಾವಣನ ಅಂತಃಪುರದಲ್ಲಿ ಅನೇಕಘೋರರಾಕ್ಷಸಿಯರು ಅವಳಮೇಲೆ ಕಾವಲಿರುವರು. ಅಲ್ಲಿಗೆಹೋದರೆ ನೀವು ಜನಕಪುತ್ರಿಯಾದ ಆ ಸೀತೆಯನ್ನು ನೋಡಬಹುದು. ಸುತ್ತಲೂ ಸಮುದ್ರದಿಂದ ಪರಿವೃತವಾದುದರಿಂದ,ಆ ಲಂಕೆಯು ಶತ್ರುಗಳ ಪ್ರವೇಶಕ್ಕವಕಾಶವಿಲ್ಲದೆ ಸುರಕ್ಷಿತವಾಗಿರುವುದು ನೀವು ಸಂಪೂರ್ಣವಾಗಿ ನೂರುಗಾವುದಗಳವರೆಗೆ ಈ ಸಮುದ್ರವನ್ನು ದಾಟಿ, ಅದರ ದಕ್ಷಿಣತೀರಕ್ಕೆ ಹೋದರೆ, ಆಗ ರಾವಣನನ್ನು ನೋಡಬಹುದು, ಎಲೈವಾನರರೆ! ನೀವು ಶೀಘ್ರದಲ್ಲಿ ಆ ಲಂಕೆಗೆ ಹೋಗಿರಿ! ಅಲ್ಲಿಗೆಹೋದರೆ ನೀವು ಸುಖವಾಗಿ ಸೀತೆಯನ್ನು ಕಂಡು ಹಿಂತಿರುಗಿ ಬರುವಿರೆಂಬು ನನ್ನ ದಿವ್ಯಜ್ಞಾನದಿಂದಲೇ ನಾನು ತಿಳಿದಿರುವೆನು ಕುಳಿಂಗಗಳೂ, ಮತ್ತು ಅವುಗಳಂತೆ ಧಾನ್ಯಜೀವಿಗಳಾದ ಕೆಲವುಪಕ್ಷಿಗಳೂ, ಆಕಾಶದಲ್ಲಿ ಭೂಮಿಗೆ ಸಮೀಪವಾಗಿರುವ ಮೊದಲನೆಯದಾರಿಯಲ್ಲಿ ಸಂಚರಿಸುವುವು. ಕಾಗೆಗಳೂ, ಫಲಮೂಲಗಳಿಂದ ಜೀವಿಸುವ ಇತರ

ಪಕ್ಷಿಗಳೂ ಸಂಚರಿಸತಕ್ಕ ದಾರಿಯು ಎರಡನೆಯದು ನೀರುಕಾಗೆಗಳೂ, ಕ್ರೌಂಚಗಳೂ, ಗೊರವಂಕಗಳೂ, ಅದಕ್ಕೆಮೇಲೆ ಮೂರನೆಯದಾರಿಯೆನ್ನು ಹಿಡಿದು ಹೋಗುವುವು ಗಿಡಗಗಳು ನಾಲ್ಕನೆಯದಾರಿಯನ್ನೂ, ಹದ್ದುಗಳು ಐದನೆಯದಾರಿಯನ್ನೂ ಹಿಡಿದುಹೋಗುವುವು ಬಲದಲ್ಲಿಯೂ, ವೀರ್ಯದಲ್ಲಿಯೂ ಮೇಲೆನಿಸಿಕೊಂಡು, ರೂಪಯೌವನಗಳಿಂದ ಶೋಭಿಸುವ ಹಂಸಗಳ ದಾರಿಯು ಆರನೆಯದು ವಿನತೆಯ ಮಕ್ಕಳೆನಿಸಿಕೊಂಡ ಅರುಣಗರುಡರ ವಂಶದಲ್ಲಿ ಹುಟ್ಟಿದ ಪಕ್ಷಿಗಳಿಗೆ, ಇವೆಲ್ಲಕ್ಕಿಂತಲೂ ಮೇಲಾದ ಏಳನೆಯಮಾರ್ಗವುಂಟು ಎಲೈವಾನರೋತ್ತಮರೆ! ನಾನೂ, ನನ್ನ ಕುಲದಲ್ಲಿ ಹುಟ್ಟಿದವರೂ, ವಿನತಾಪುತ್ರನಾದ ವರುಣನಿಂದ ಜನಿಸಿದವರು ಆದುದರಿಂದ ನಮ್ಮೆಲ್ಲರಿಗೂ ಏಳನೆಯ ದಾರಿಯು ನಾನು ಈಗ ಇಲ್ಲಿದ್ದರೂ, ನನಗೆ ಗರುಡನಂತೆ ದಿವ್ಯದೃಷ್ಟಿಯೂ, ಅನನಂತೆಯೇ ಮಹಾಬಲವೂ ಇರುವುದರಿಂದ,ಇಲ್ಲಿಂದಲೇ ನಾನು ಸೀತೆಯನ್ನೂ, ರಾವಣನನ್ನೂ ಚೆನ್ನಾಗಿ ನೋಡುತ್ತಿರುವೆನು ಆಹಾರಬಲದಿಂದಲೂ, ಸ್ವಾಭಾವಿಕವಾದ ಶಕ್ತಿಯಿಂದಲೂ ನಮ್ಮ ದೃಷ್ಟಿಯು ಯಾವಾಗಲೂ ಸಂಪೂರ್ಣವಾಗಿ ನೂರುಗಾವುದಗಳವರೆಗೆ ಪ್ರಸರಿಸುವುದು ಕೋಳಿಗಳಿಗೆ ಆವುಗಳ ಕಾಲಿನ ತಳದಲ್ಲಿ ದೈವದಿಂದ ವೃತ್ತಿಯು ಕಲ್ಪಿಸಲ್ಪಟ್ಟಿರುವಂತೆ, ನಮಗೆ ಬಹುದೂರದಿಂದಆಹಾರವನ್ನು ಗ್ರಹಿಸಿಕೊಳ್ಳತಕ್ಕ ದೃಷ್ಟಿಶಕ್ತಿಯು ದೈವವಿಹಿತವಾಗಿರುವುದು ಸೀತೆಯನ್ನು ಕದ್ದು, ನಿಂದಿತಕಾರ್ಯವನ್ನು ಮಾಡಿದ ದುರಾತ್ಮನಾದ ರಾವಣನನ್ನು,ಈಗ ನೀವೇ ರಾಮನ ಕೈಯಿಂದ ಕೊಲ್ಲಿಸಿದರೆ, ನಾನೂ ನನ್ನ ತಮ್ಮನವಿಷಯವಾಗಿ ಆ ರಾವಣನಮೇಲೆ ಹಗೆ ತೀರಿಸಿಕೊಳ್ಳಬೇಕಾದ ಪ್ರತಿಕ್ರಿಯೆಯನ್ನು ಸಾಧಿಸಿದಂತಾಗುವುದು ಈಗನೀವು ಈ ಸಮುದ್ರವನ್ನು ದಾಟುವುದಕ್ಕೆ ಉಪಾಯವೇನೆಂಬುದನ್ನು ಮೊದಲು ನೋಡಬೇಕು ನೀವು ಅಲ್ಲಿಗೆ ಹೋಗಿ ಸೇರಿದಮೇಲೆ, ಸೀತೆಯನ್ನು ನೋಡಿ ಇಷ್ಟಸಿದ್ಧಿಯನ್ನು ಹೊಂದಿ, ಸುಖವಾಗಿ ಕಿಷ್ಕಿಂಧೆಗೆ ಬಂದುಸೇರುವುದರಲ್ಲಿ ಸಂದೇಹವಿಲ್ಲ ಎಲೈಮಹಾತ್ಮರ! ಸ್ವರ್ಗವನ್ನು ಹೊಂದಿದ ಮಹಾತ್ಮನಾದ ನನ್ನ ತಮ್ಮನಾದ ಜಟಾಯುವಿಗೆ ನಾನು ಜಲತರ್ಪಣವನ್ನು ಮಾಡಬೇಕು ಅದಕ್ಕಾಗಿ ನೀವು ನನ್ನನ್ನು ಸಮುದ್ರತೀರಕ್ಕೆ ಸಾಗಿಸಬೇಕೆಂದುಕೇಳಿಕೊಳ್ಳು

ವೆನು"ಎಂದನು ಇದನ್ನು ಕೇಳಿ ಆ ವಾನರರು ರೆಕ್ಕೆಯಿಲ್ಲದ ಆ ಪಕ್ಷಿರಾಜನನ್ನು ಸಮುದ್ರತೀರಕ್ಕೆ ಸೇರಿಸಿ, ಅಲ್ಲಿ ಅವನು ಜಟಾಯುವಿಗೆ ಜಲತರ್ಪಣವನ್ನು ಮಾಡಿದಮೇಲೆ, ಅವನನ್ನು ಮೊದಲಿದ್ದಸ್ಥಳಕ್ಕೆ ಕರೆತಂದು ಬಿಟ್ಟು, ತಮಗೆ ರಾವಣವೃತ್ತಾಂತವು ತಿಳಿಯಿತೆಂಬ ಸಂತೋಷದಲ್ಲಿ ಮಗ್ನರಾಗಿದ್ದರು ಇಲ್ಲಿಗೆ ಐವತ್ತೆಂಟನೆಯಸರ್ಗವು.

---

* ಪುನಃ ಜಾಂಬವಂತನು ಕೇಳಿದುದರಮೇಲೆ, ರಾವಣನು ಸೀತೆಯನ್ನಪಹರಿಸಿದ ವೃತ್ತಾಂತವನ್ನು ಸಂಪಾತಿಯು ತನ್ನ ಮಗನಾದ ಸುಪಾರ್ಶ್ವನಿಂದ ತಾನು ತಿಳಿದುದಾಗಿ ಹೇಳಿದುದು

ಗೃಧ್ರರಾಜನಾದ ಸಂಪಾತಿಯ ಮುಖದಿಂದ ಆ ವಾನರರು ಅಮೃತದಂತೆ ಇಂಪಾದ ಈವಾಕ್ಯಗಳನ್ನು ಕೇಳಿ, ಪರಮಸಂತೋಷದಿಂದ ಪುಳಕಿತವಾದ ಮೈಯುಳ್ಳವರಾಗಿದ್ದರು ಆಗ ಅಲ್ಲಿದ್ದ ವಾನರರಿಗೆಲ್ಲಾ ಮಾರ್ಗದರ್ಶಿಯೆನಿಸಿದ ವೃದ್ಧನಾದ ಜಾಂಬವಂತನು,ಇತರವಾನರರೊಡನೆ ಅತಿಸಂಭ್ರಮದಿಂದ ತಟ್ಟನೆ ಮೇಲೆದ್ದು, ಮುಂದೆಬಂದು, ಸಂಪಾತಿಯನ್ನು ನೋಡಿ 'ಅಯ್ಯಾ! ಸೀತೆಯಲ್ಲಿರುವಳು? ಅವಳನ್ನು ಕದ್ದುಕೊಂಡುಹೋದವನಾರು? ಅದನ್ನು ನೋಡಿದವರಾರು? ಇದು ನಿನಗೆ ಹೇಗೆ ತಿಳಿಯಿತು? ಈ ವಿಷಯವೆಲ್ಲವನ್ನೂ ನಮಗೆ ವಿವರವಾಗಿ ತಿಳಿಸುವೆಯಾ?ನೀನೇ ನಮಗೆ ಈಗ ದಿಕ್ಕಾಗಿರುವೆ?ವಜ್ರದಂತೆ ಅರ್ಭಟಿಸಿ ಮೇಲೆಬಿಳುವ ರಾಮನ ಬಾಣಗಳಲ್ಲಿಯೂ, ಲಕ್ಷ್ಮಣಪ್ರಯುಕ್ತಗಳಾದ ಬಾಣಗಳಲ್ಲಿಯೂ ಇರುವ ವೇಗಗವನ್ನು ತಿಳಿಯದೆ,ಈಅಕಾರ್ಯವನ್ನು ಮಾಡಿದವನಾವನು?"ಎಂದನು ಸೀತಾವೃತ್ತಾಂತವನ್ನು ಕೇಳುವುದರಲ್ಲಿ ಅತ್ಯಾತುರವುಳ್ಳ ಆ ವಾನರರು ಪ್ರೀತಿಪೂರ್ವಕವಾಗಿ ಹೇಳಿದ ಈಮಾತನ್ನು ಕೇಳಿ, ಸಂಪಾತಿಯು ಅವರಲ್ಲಿ ಪರಮಪ್ರೇಮವುಳ್ಳವನಾಗಿ,

---

* ಇದು ಮೊದಲಾಗಿ ಐದುಸರ್ಗಗಳು ಅನೇಕಕೋಶಗಳಲ್ಲಿಲ್ಲ ಈ ಸರ್ಗಗಳಿಲ್ಲದಿದ್ದರೂ ಕಥಾಘಟ್ಟನೆಯಲ್ಲಿ ಕೆಡುವುದಿಲ್ಲ. ಇದಲ್ಲದೆ ಪೂರ್ವೋಕ್ತವಿಷಯಗಳಿಗೆ ಇಲ್ಲಿ ಕೆಲವು ವಿರೋಧಗಳೂ ತೋರುವುವು ಆದುದರಿಂದ ಇವು ಪ್ರಕ್ಷಿಪ್ತಗಳೆಂದೇ ಊಹಿಸಬೇಕಾಗಿದೆ

ಅವರನ್ನು ಸಮಾಧಾನಪಡಿಸುತ್ತ, ಪುನಃ ಈ ಮಾತುಗಳನ್ನು ಹೇಳುವನು. ''ಎಲೈ ವಾನರರೆ! ರಾವಣನು ಸೀತೆಯನ್ನು ಕದ್ದುಯ್ದ ವೃತ್ತಾಂತವನ್ನು ನಾನು ಯಾರಿಂದ, ಹೇಗೆ ಕೇಳಿಬಲ್ಲೆನೆಂಬುದನ್ನೂ, ಆಸೀತೆಯು ಈಗ ಎಲ್ಲಿರುವಳೆಂಬುದನ್ನೂ ಹೇಳುವೆನು ಕೇಳಿರಿ! ಬಹುಯೋಜನಗಳ ವಿಸ್ತಾರವುಳ್ಳ ದುರ್ಗಮವಾದ ಈ ಪರ್ವತದಲ್ಲಿಯೇ ಬಹುಕಾಲದಿಂದ ನಾನು ಶಕ್ತಿಗುಂದಿ ವೀರ್ಯವಡಗಿ, ವಾರ್ಧಕದಿಂದಲೂ ಬಹಳವಾಗಿ ಬಳಲಿ ಬಿದ್ದಿದ್ದೆನು ಈ ದುರವಸ್ಥೆಯಲ್ಲಿರುವ ನನ್ನನ್ನು ನೋಡಿ ಸುಪಾರ್ಶ್ವನೆಂಬ ನನ್ನ ಮಗನು, ಆಯಾಕಾಲಕ್ಕೆ ಆಹಾರವನ್ನು ತಂದುಕೊಟ್ಟು ನನ್ನನ್ನು ಪೋಷಿಸುತ್ತಿದ್ದನು. ಗಂಧರ್ವರಿಗೆ ಕಾಮವೆಂಬುದು ತೀವ್ರವಾಗಿರುವುದು ಸರ್ಪಗಳಿಗೆ ಕೋಪವು ತೀವ್ರವು ಮೃಗಗಳಿಗೆ ಭೆಯವು ಅತಿತೀವ್ರವು ಪಕ್ಷಿವರ್ಗಗಳಲ್ಲಿ ಸೇರಿದ ನಮ್ಮ ಗಾದರೋ ಹಸಿವೆಂಬುದು ಬಹಳತೀಕ್ಷ್ಣವು ಹೀಗಿರುವಾಗ ಒಮ್ಮೆ ನನ್ನ ಮಗನಾದ ಸುಪಾರ್ಶ್ವನು, ಸಂಜೆಯಹೊತ್ತಿನಲ್ಲಿ ಹಸಿವಿನಿಂದ ಆಹಾರಕ್ಕಾಗಿ ಆತುರಗೊಂಡಿರುವ ನನ್ನ ಬಳಿಗೆ ಯಾವುದೊಂದಾಹಾರವನ್ನೂ ತಾರದೆ ಬರೀ ಕೈಯಿಂದ ಬಂದನು ನಾನು ''ಮೊದಲೇ ಹಸಿವುಬಾಯಾರಿಕೆಗಳಿಂದ ಬಳಲಿದ್ದುದಲ್ಲದೆ, ವೃದ್ಧನಾಗಿಯೂ ಇದ್ದುದರಿಂದ,ಬರಿಕೈಯಿಂದ ಮುಂದೆ ಬಂದುನಿಂತ ಆಮಗನನ್ನು ನೋಡಿ ಕೋಪದಿಂದಹೆದರಿಸಿದೆನು ಅಪುತ್ರನಾದರೋ ನನ್ನಲ್ಲಿ ನಿಜವಾದಭಕ್ತಿಯುಳ್ಳವನು ನಾನು ಹಸಿವಿನಿಂದ ಕೋಪಗೊಂಡಿರುವುದನ್ನು ನೋಡಿ ಅವನು ಎಷ್ಟೋವಿಧದಿಂದ ಮನ್ನಣೆಯನ್ನು ಬೇಡುತ್ತ ''ಎಲೆ ತಾತನೆ! ನಾನು ಎಂದಿನಂತೆಯೇ ಕಾಲಕ್ಕೆ ಸರಿಯಾಗಿ ಆಹಾರವನ್ನು ಹುಡುಕಿ ತರುವುದಕ್ಕಾಗಿ ಹಾರಿಹೋದೆನು ಮಹೇಂದ್ರಪರ್ವತದ ದ್ವಾರವನ್ನು ಅಡ್ಡಗಟ್ಟಿಕುಳಿತೆನು ಆಲ್ಲಿ ಸಮುದ್ರಸಂಚಾರಿಗಳಾದ ಸಾವಿರಾರು ಜಂತುಗಳನ್ನು ಹಿಡಿಯುವುದಕ್ಕಾಗಿನಾನೊಬ್ಬನೇತಲೆಬಗ್ಗಿಸಿಕೊಂಡು ಆದಾರಿಗಡ್ಡಲಾಗಿದ್ದೆನು ಆ ಸಂದರ್ಭದಲ್ಲಿ ಕಾಡಿಗೆಯಂತೆ ಕಪ್ಪನೆಯ್ಯೆಯುಳ್ಳ ಪುರುಷನೊಬ್ಬನು ಸೂರ್ಯೋದಯಕ್ಕೆ ಸಮಾನನಾದ ದೇಹಕಾಂತಿಯುಳ್ಳ ಒಬ್ಬಹೆಂಗಸನ್ನು ಎತ್ತಿಕೊಂಡು ಹೋಗುತ್ತಿರುವುದನ್ನು ನೋಡಿದೆನು ನಾನು ಆಹಾರಕ್ಕಾಗಿಯೇ ಅಲ್ಲಿ ಕುಳಿತಿದ್ದುದರಿಂದ, ಆ ಎರಡುವ್ಯಕ್ತಿಗಳನ್ನೂ ಆಹಾರವಾಗಿ ಹಿಡಿಯಬೆ

ಕೆಂದು ನಿಶ್ಚಯಿಸಿದ್ದೆನು ಇಷ್ಟರಲ್ಲಿ ಆ ಪುರುಷನು ದಾರಿಗಡ್ಡಲಾಗಿ ನಿಂತಿದ್ದ ನನ್ನನ್ನು ನೋಡಿ, ಅತಿನಿನಯದಿಂದ ಸಾಮವಾಕ್ಯಗಳನ್ನಾಡುತ್ತ ''ದಾರಿಯನ್ನು ಬಿಡುವೆಯಾ'' ಎಂದನು ; ಒಳ್ಳೇಮಾತಿನಿಂದ ಕೇಳಿಕೊಳ್ಳುವವರನ್ನು ಯಾವನೂ ಯಾವಾಗಲೂ ಇದಿರಿಸಬಾರದಲ್ಲವೆ ? ವಿನಯದಿಂದ ಬೇಡುವಾಗ ನೀಚರಿಗೂಕೂಡ ಮನಸ್ಸು ಕರಗುವುದು ಇನ್ನು ನಮ್ಮಂತವರಿಗೆ ಮರುಕವು ಹುಟ್ಟುವುದೆಂಬುದನ್ನು ಹೇಳಬೇಕಾದುದೇನು? ನಾನು ದಾರಿಬಿಟ್ಟೊಡನೆ ಆ ಪುರುಷನು ತನ್ನತೇಜೋವಿಶೇಷದಿಂದ ಆಕಾಶವನ್ನೇ ಉರುಳಿಸುವಂತೆ ನೇಗದಿಂದೋಡಿದನು ಆಮೇಲೆ ಗಗನಚಾರಿಗಳಾದ ಕೆಲವು ಭೂತಗಳು ನನ್ನಲ್ಲಿಗೆ ಬಂದು ನನ್ನನ್ನು ಗೌರವಿಸಿದುವು ಮಹರ್ಷಿಗಳೂ ನನ್ನನ್ನು ನೋಡಿ ''ನೀನು ದೈವವಶದಿಂದ ತಪ್ಪಿಸಿಕೊಂಡು ಬದುಕಿದೆ ಹೇಗೋ ಆತನು ತನಗೆ ಮುಖ್ಯರಕ್ಷಣೀಯವಾದ ಆಸ್ತ್ರೀವ್ಯಕ್ತಿಯಲ್ಲಿ ಗಮನವಿಟ್ಟು, ನಿನ್ನನ್ನು ಲಕ್ಷ್ಯಮಾಡದೆ ಹೋಗಿರಬಹುದೇಹೊರತು ಬೇರೆಯಲ್ಲ ಹೇಗಾದರೂ ನಿನಗೆ ಕ್ಷೇಮವುಂಟಾದುದೇ ಸಾಕು''ಎಂದರು,ಹಾಗೆಯೇ ಆಕಾಶಚಾರಿಗಳಾದಸಿದ್ಧರೂ ನನ್ನಲ್ಲಿಗೆಬಂದು ಇದೇಮಾತನ್ನು ಹೇಳಿದರು ಆಪುರುಷನೇ ರಾಕ್ಷಸರಾಜನಾದ ರಾವಣನೆಂದೂ, ಅವನ ಸಮೀಪದಲ್ಲಿ, ಕದಲಿದ ವಸ್ತ್ರಾಭರಗಳುಳ್ಳವಳಾಗಿ, ದುಃಖದಿಂದ ಕಂಪಿ, ಬಿಚ್ಚಿದ ತಲೆಕೂದಲುಗಳೊಡನೆ ರಾಮಲಕ್ಷ್ಮಣರ ಹೆಸರನ್ನು ಹಿಡಿದು ಆಕ್ರೋತಿಸುತಿದ್ದ ಹೆಂಗಸೇ ಜನಕಪುತ್ರಿಯಾದ ಸೀತೆಯಂದೂ, ರಾಮಭಾರ್ಯೆಯಾದ ಆಕೆಯನ್ನು ಆ ರಾಕ್ಷಸನು ಬಲಾತ್ಕಾರದಿಂದ ಕದ್ದುಯ್ಯುತ್ತಿರುವನೆಂದೂ ಆಮೇಲೆ ನನಗೆ ತಿಳಿಯಿತು ಇದುವರೆಗೆ ನಾನು ಕಾಲವನ್ನು ಕಳೆದು ಬರೀಕೈಯಿಂದ ಬರುವುದಕ್ಕೆ ಇದೇಕಾರಣವು" ಎಂದು ನನ್ನ ಮಗನಾದ ಸುಪಾರ್ಶ್ವನು ನನ್ನ ಮನ್ನಣೆಯೆನ್ನು ಕೇಳಿದನು ಈ ವೃತ್ತಾಂತವನ್ನು ಕೇಳಿದ್ದರೂ, ರಾಮನನಿಮಿತ್ತವಾಗಿ ನನ್ನಿಂದ ಸಾಧ್ಯವಾದ ಪ್ರಯತ್ನ, ಪರಾಕ್ರಮವನ್ನು ತೋರಿಸಬೇಕೆಂಬ ಬುದ್ಧಿಯು ನನಗೆ ಹುಟ್ಟದೆ ಹೋಯಿತು ಎಲೈವಾನರರೆ ! ಪಕ್ಷಿಗಳಾದ ನಮಗೆ ನಮ್ಮ ರೆಕ್ಕೆಗಳೇ ಮುಖ್ಯವಾದ ಬಲವಲ್ಲವೆ? ಆ ರೆಕ್ಕೆಗಳೇ ಇಲ್ಲದಮೇಲೆ ನಾನು ಯಾವಕಾರ್ಯವನ್ನು ಮಾಡಬಲ್ಲೆನು?ಆರೆಕ್ಕೆಗಳು ಹೋದರೂ, ನನಗೆ ವಾಕ್ಕೂ,ಬುದ್ಧಿಯೂ ಕಾಲೋ

ಜಿತವಾದ ಗುಣಗಳೂ ತಕ್ಕಮಟ್ಟಿಗೆ ಹೊಂದಿರುವುದರಿಂದ, ಅದರಿಂದ ನಾನು ನಿಮಗೆ ಹೇಗೆ ಸಹಾಯವನ್ನು ಮಾಡಬಹುದೋ ಅದನ್ನು ಮಾತ್ರ ಹೇಳುವೆನು ಅದನ್ನು ಕೇಳಿ ನಿಮ್ಮ ಪೌರುಷಬಲದಿಂದ ನಿಮ್ಮ ಕಾರ್ಯವನ್ನು ನೀವೇ ಸಾಧಿಸಿಕೊಳ್ಳಬೇಕು ನಾನು ಮಾತಿನಿಂದಲೂ, ಬುದ್ಧಿಯಿಂದಲೂ ನಿಮಗೆ ನನ್ನಿಂದ ಸಾಧ್ಯವಾದಷ್ಟು ಸಹಾಯವನ್ನು ಮಾಡಬಲ್ಲೆನು ರಾಮನ ಕಾರ್ಯವೂ ನನ್ನ ಕಾರ್ಯವೇ ಹೊರತು ಬೇರೆಯೆಲ್ಲ ಇದರಲ್ಲಿ ಸಂದೇಹವಿಲ್ಲ! ವಾನರರಾಜನಾದ ಸುಗ್ರೀವನು ದೇವತೆಗಳಿಗೂ ಇದಿರಿಸಲಾರದ ಬುದ್ಧಿಯಿಂದಲೂ, ಬಲದಿಂದಲೂ, ಧೈರ್ಯದಿಂದಲೂ ಕೂಡಿದ ನಿಮ್ಮನ್ನು ಈ ಕಾರ್ಯಕ್ಕೆ ಕಳುಹಿಸಿರುವನು ಇದಲ್ಲದೆ ಆ ರಾಮಲಕ್ಷ್ಮಣರ ತೀಕ್ಷ್ಣಬಾಣಗಳಾದರೋ ಮೂರುಲೋಕಗಳನ್ನೂ ರಕ್ಷಿಸುವುಪಕ್ಕಾಗಲಿ, ತಿಕ್ಷಿಸುವುದಕ್ಕಾಗಲಿ ಸಮರ್ಥಗಳಾಗಿರುವುವು ಆ ರಾವಣನು ತೇಜಸ್ಸಿನಿಂದಲೂ, ಬಲದಿಂದಲೂ, ಎಷ್ಟೇ ಸಮರ್ಥನಾಗಿದ್ದರೂ ಇರಲಿ! ನಿಮ್ಮ ಸಾಮರ್ಥ್ಯವೂ ಅಸಾಧಾರಣವಾದುದರಿಂದ, ನಿಮಗೆ ಅಸಾಧ್ಯವಾದುದೊಂದೂ ಇಲ್ಲವು ಇನ್ನು ಕಾಲವನ್ನು ಕಳೆದುದುಸಾಕು ಬುದ್ಧಿವಂತರಾದ ನಿಮ್ಮಂತವರು ಕಾರ್ಯವು ಬಂದೊದಗಿದಾಗ ಆಲಸ್ಯಮಾಡಬಾರದಲ್ಲವೆ! ಆದುದರಿಂದ ತೀಘ್ರದಲ್ಲಿ ಮುಂದಿನ ಕಾರ್ಯಕ್ಕೆ ಯತ್ನಿಸಿರಿ" ಎಂದನು ಇಲ್ಲಿಗೆ ಐವತ್ತೊಂಬತ್ತನೆಯಸರ್ಗವು

ಸಂಪಾತಿಯು ತನ್ನ ಹಿಂದಿನ ವೃತ್ತಾಂತವನ್ನು ವಾನರರಿಗೆ ಹೇಳಿಕೊಂಡುದು

ಸಂಪಾತಿಯು ಜಟಾಯುವಿಗೆ ಜಲತರ್ಪಣವನ್ನು ಮಾಡಿ, ಸ್ನಾನ ಮಾಡಿದ ಮೇಲೆ, ವಾನರರೆಲ್ಲರೂ, ಆ ಪರ್ವತದಲ್ಲಿ ಅವನ ಸುತ್ತಲೂ ಕುಳಿತರು ಹೀಗೆ ಸಮಸ್ತವಾನರರಿಂದ ಪರಿವೃತನಾದ ಸಂಪಾತಿಯು ಸಮೀಪದಲ್ಲಿದ್ದ ಅಂಗದನನ್ನೂ, ಅವನ ಸುತ್ತಲೂ ಇದ್ದ ವಾನರರನ್ನೂ ನೋಡಿದನು ಮೊದಲು ನಿಶಾಕರಮಹರ್ಷಿಯು ಹೇಳಿದ್ದಂತೆ, ಈ ವಾನರರ ದರ್ಶನದಿಂದ ತನಗೆ ಶಾಪವಿಮೋಚನಕಾಲವು ಬಂದೊದಗಿತೆಂದು ತೋರಿತು ಅದರಿಂದ ಸಂಪಾತಿಯು ಪರಮಸಂತೋಷಯುಕ್ತನಾಗಿ, ಆ ವಾನರರನ್ನು

ಕುರಿತು "ಎಲೈ ವಾನರರೆ! ನೀವೆಲ್ಲರೂ ನಾನು ಹೇಳುವ ಮಾತನ್ನು ಸಾವಧಾನವಾಗಿ ಕೇಳಬೇಕು ನನಗೆ ಸೀತಾದೇವಿಯ ವೃತ್ತಾಂತವು ತಿಳಿದ ರೀತಿಯನ್ನೂ ಯಥಾರ್ಥವಾಗಿ ಹೇಳುವೆನು ಪೂರ್ವದಲ್ಲಿ ನಾನು ಸೂರ್ಯನ ಬಿಸಿಲಿಗೆ ಸಿಕ್ಕಿ,ಅದರಿಂದ ಬೆಂದ ಮೈಯುಳ್ಳವನಾಗಿ, ಈ ವಿಂಧ್ಯಪರ್ವತದ ತಿಖರದಲ್ಲಿ ಬಿದ್ದೆನು ಆರುದಿನಗಳವರೆಗೆ ನನಗೆ ಮೈಮೇಲೆ ಪ್ರಜ್ಞೆಯೇ ಇರಲಿಲ್ಲ ಹೀಗೆ ಮೂರ್ಛೆಹೊಂದಿ ಪರವಶನಾಗಿದ್ದ ನಾನು ಆರುದಿನಗಳ ಮೇಲೆ ಪ್ರಜ್ಞೆಹೊಂದಿ ಕಣ್ಣು ಬಿಟ್ಟು ನೋಡಿದೆನು ಹಾಗೆ ನೋಡಿದಾಗಲೂ ಈ ಪ್ರದೇಶವಾವುದೆಂದೇ ನನಗೆ ತಿಳಿಯಲಿಲ್ಲ ದಿಗ್ಭ್ರಾಂತನಾಗಿ ನೋಡುತ್ತಿರುವಾಗ ಸಮುದ್ರತೀರಗಳಲ್ಲಿರುವ ಪರ್ವತಗಳನ್ನೂ, ಅಲ್ಲಿನ ಸಮಸ್ತನದಿಗಳನ್ನೂ,ಕೊಳಗಳನ್ನೂ, ವನಗಳನ್ನೂ, ಆ ತೀರಪ್ರದೇಶವನ್ನೂ ಕಂಡಮೇಲೆ ಇದು ಈ ಪ್ರದೇಶವೆಂದು ಗೊತ್ತಾಯಿತು ಇದು ದಕ್ಷಿಣಸಮುದ್ರತೀರದಲ್ಲಿ, ಪಕ್ಷಿಸಮೂಹಗಳ ಸಂತೋಷಜೀವನಕ್ಕೆಡೆಯಾಗಿ, ಗುಹೆಗಳಿಂದಲೂ, ತಿಖರಗಳಿಂದಲೂ ಕೂಡಿದ-ವಿಂಧ್ಯಪರ್ವತದ ಭಾಗವೆಂದು ನಿಶ್ಚಯಿಸಿ ತಿಳಿದುಕೊಂಡೆನು ಈ ಪ್ರದೇಶದಲ್ಲಿ ಮೊದಲು ಅತಿಪವಿತ್ರವಾಗಿ, ದೇವತೆಗಳಿಗೂ ಪೂಜ್ಯವಾದ ಒಂದು ಋಷ್ಯಾಶ್ರಮವಿದ್ದಿತು ಅಲ್ಲಿ ಉಗ್ರತಪಸ್ವಿಯಾದ ನಿಶಾಕರನೆಂಬ ಮಹರ್ಷಿಯೊಬ್ಬನಿದ್ದನು ಎಲೈ ಧರ್ಮಜ್ಞರೆ! ಆ ಮಹರ್ಷಿಯು ಮೃತನಾದಂದಿನಿಂದ ನಾನೊಬ್ಬನೇ ಈ ಪ್ರದೇಶದಲ್ಲಿ ವಾಸಮಾಡುತ್ತಿರುವೆನು ಹೀಗೆ ನಾನು ಏಕಾಕಿಯಾಗಿ ವಾಸಮಾಡುವುದಕ್ಕು ತೊಡಗಿ, ಇದುವರೆಗೆ ಎಂಟುಸಹಸ್ರವರುಷಗಳಾದುವು ಆ ಋಷಿಯಿದ್ದಾಗ ನಾನು ಎಷ್ಟೋಕಷ್ಟಪಟ್ಟು ನಿನ್ನೋನ್ನತವಾದ ಆ ವಿಂಧ್ಯತಿಖರದಿಂದ ಮೆಲ್ಲಗೆ ಕೆಳಗಿಳಿದು, ತೀಕ್ಷ್ಣವಾದ ದರ್ಭೆಗಳಿಂದ ತುಂಬಿದ ಈ ಆಶ್ರಮಭೂಮಿಗೂ ಬಂದು ಸೇರಿ, ಆ ನಿಶಾಕರಮಹರ್ಷಿಯನ್ನು ನೋಡಬೇಕೆಂದು ಪ್ರಯತ್ನಿಸಿದೆನು ಅದಕ್ಕೆ ಮೊದಲೇ ಜಟಾಯುವೂ, ನಾನೂ ಅನೇಕಾವರ್ತಿ ಅವನ ದರ್ಶನವನ್ನುಮಾಡಿ ಆಗಾಗ ಅವನ ಸೇವೆಯೆಲ್ಲಿರುತಿದ್ದೆವು ಅವನು ಮಹಾನುಭಾವನು ಆ ಮಹರ್ಷಿಯ ಆಶ್ರಮದಲ್ಲಿ ಪುಷ್ಪಗಳಾಗಲಿ, ಫಲಗಳಾಗಲಿ ಇಲ್ಲದ ವೃಕ್ಷಗಳೇ ಇಲ್ಲವು ಆ ಆಶ್ರಮದ ಸಮೀಪಕ್ಕೆ

ಬರುವಾಗಲೇ ಸುಗಂಧವಾಯುವು ಘಮಘಮಿಸಿಬೀಸುತ್ತಿರುವುದು ನಾನು ಆ ಪುಣ್ಯಾಶ್ರಮಕ್ಕೆ ಬಂದೊಡನೆ ಒಂದು ಮರದಕೆಳಗೆ ಕುಳಿತು, ಪೂಜ್ಯನಾದ ಆ ನಿಶಾಕರಮುನಿಯ ದರ್ಶನಾರ್ಥವಾಗಿ ನಿರೀಕ್ಷಿಸುತಿದ್ದೆನು ಇಷ್ಟರಲ್ಲಿ ಜಾಜ್ವಲ್ಯಮಾನವಾದ ತೇಜಸ್ಸುಳ್ಳವನಾಗಿ, ಯಾರಿಂದಲೂ ತಿರಸ್ಕರಿಸಲಾರದ ತಪೋಮಹಿಮೆಯುಳ್ಳವನಾಗಿದ್ದ ಆ ಮಹರ್ಷಿಯು ಸ್ನಾನಮಾಡಿ ಉತ್ತರಾಭಿಮುಖವಾಗಿ ಬರುತ್ತ, ನನಗೆ ಸಮೀಪಿಸಿದುದನ್ನು ನೋಡಿದೆನು ಸಮಸ್ತಭೂತಗಳೂ, ಬ್ರಹ್ಮದೇವನನ್ನು ಸುತ್ತಿ ಸೇವಿಸುವಂತೆ ವನಚರಗಳಾದ ಕರಡಿಗಳೂ, ಚಮರಮೃಗಗಳೂ, ಹುಲಿಗಳೂ, ಸಿಹ್ಮಗಳೂ, ಸರ್ಪಗಳೂ, ಆನೆಗಳೂ, ಆ ಆಮಹರ್ಷಿಯನ್ನು ಸುತ್ತಿಕೊಂಡು ಅವನ ಸೇವೆಯನ್ನು ಮಾಡುತಿದ್ದುವು ರಾಜನು ಅಂತಃಪುರಕ್ಕೆ ಸೇರಿದಮೇಲೆ ಅವನ ಪುರವಾರಗಳು ರಾಜಾಜ್ಞೆಯನ್ನು ಹೊಂದಿ ಹಿಂತಿರುಗುವಂತೆ, ಆ ಮಹರ್ಷಿಯು ಆಶ್ರಮದೊಳಗೆ ಪ್ರವೇಶಿಸಿದಮೇಲೆ ಆ ಪ್ರಾಣಿಗಳೆಲ್ಲವೂ ತಮ್ಮ ತಮ್ಮ ನಿವಾಸಕ್ಕೆ ಹೋಗುತಿದ್ದುವು ಆ ಮಹರ್ಷಿಯು ನನ್ನ ಸಮೀಪಕ್ಕೆ ಬಂದಾಗ ನನ್ನಮೇಲೆ ಪ್ರೀತಿಪೂರ್ವಕವಾದ ದೃಷ್ಟಿಯಿಟ್ಟು, ಆಗ ನನ್ನನ್ನು ಮಾತಾಡಿಸದೆ ಆಶ್ರಮದೊಳಕ್ಕೆ ಪ್ರವೇಶಿಸಿ ಸ್ವಲ್ಪಕಾಲದಮೇಲೆ ಹಿಂತಿರುಗಿ ಬಂದು, ನನ್ನನ್ನು ನೋಡಿ, ನಾನು ಬಂದಕಾರ್ಯವೇನೆಂದು ವಿಚಾರಿಸುತ್ತ ''ಎಲೆ ಸೌಮ್ಯನೆ! ನಿನ್ನ ಮೈಮೇಲಿನ ಕೂದಲುಗಳೆಲ್ಲವೂ ಬೆಂದು ಉದುರಿಹೋಗಿರುವುದರಿಂದ, ನಿನ್ನ ಸ್ವರೂಪವೇ ತಿಳಿಯದಿರುವುದು ನಿನ್ನ ರೆಕ್ಕೆಗಳೆರಡೂ ಅಗ್ನಿಯಿಂದ ಬೆಂದು, ಚರ್ಮವೂ ವ್ರಣವಿಶಿಷ್ಟವಾಗಿ ಕಾಣುತ್ತಿರುವುದು ನಾನು ಹಿಂದೆ ಎರಡು ಗೃಧ್ರಗಳನ್ನು ನೋಡಿದ್ದೆನು ಅವೆರಡೂ ವೇಗದಲ್ಲಿ ವಾಯುವಿಗೆ ಸಮಾನಗಳಾಗಿದ್ದುವು ಅವಿಬ್ಬರೂ ಗೃಧ್ರರಾಜರೆನಿಸಿಕೊಂಡು ಒಡಹುಟ್ಟಿದವರಾಗಿದ್ದರು ಇಬ್ಬರೂ ಕಾಮರೂಪಿಗಳು ಅವರಲ್ಲಿ ನೀನು ಜ್ಯೇಷ್ಠನಾದ ಸಂಪಾತಿಯಾಗಿರಬಹುದೆ? ನಿನ್ನ ತಮ್ಮನು ಜಟಾಯುವಲ್ಲವೆ? ನೀವಿಬ್ಬರೂ ಮನುಷ್ಯರೂಪವನ್ನು ಧರಿಸಿ ನನ್ನ ಪಾದಗಳಿಗೆ ನಮಸ್ಕರಿಸುತಿದ್ದಿರಲ್ಲವೆ? ಇದೇನು? ನಿನಗೆ ವ್ಯಾಧಿಯೇನಾದರೂ ಪ್ರಾಪ್ತವಾಯಿತೆ? ನಿನ್ನ ರೆಕ್ಕೆಗಳು ಹೇಗೆ ಬಿದ್ದುಹೋದುವು? ಯಾರಾದರೂ ನಿನ್ನನ್ನು ದಂಡಿಸಿ

ದರೆ? ಹಾಗೆ ದಂಡಿಸಿದವರಾರು? ಅವೆಲ್ಲವನ್ನೂ ನನಗೆ ತಿಳಿಸು" ಎಂದನು. ಇಲ್ಲಿಗೆ ಅರುವತ್ತನೆಯಸರ್ಗವು

ಸಂಪಾತಿಯು ತನ್ನ ರೆಕ್ಕೆಗಳು ಬೆಂದ ವೃತ್ತಾಂತವನ್ನು ನಿಶಾಕರಮಹರ್ಷಿಗೆ ತಿಳಿಸಿದುದು

ಆಮೇಲೆ ನಾನು ಸೂರ್ಯಮಂಡಲದವರೆಗೆ ಹೋದುದು ಮೊದಲಾಗಿ ಭಯಂಕರವಾದ ನನ್ನ ಸಾಹಸಕಾರ್ಯವೆಲ್ಲವನ್ನೂ ಆ ಮಹರ್ಷಿಗೆ ತಿಳಿಸುತ್ತ ಅವನನ್ನು ಕುರಿತು "ಎಲೆ ಮಹಾತ್ಮನೆ! ನನ್ನ ದೇಹವೆಲ್ಲವೂ ಸುಟ್ಟ ಗಾಯಗಳಿಂದ ತುಂಬಿ, ಗರಿಗಳು ಬೆಂದುಹೋಗಿರುವುದರಿಂದಲೂ, ಲಜ್ಜೆಯಿಂದ ನನ್ನ ಇಂದ್ರಿಯಗಳು ಕದಲಿರುವುದರಿಂದಲೂ, ನಾನು ಬಹುಕಾಲದಿಂದ ಕಷ್ಟದಲ್ಲಿ ಬಿದ್ದು ಬಳಲಿರುವುದರಿಂದಲೂ ನಿನಗೆ ಪ್ರತ್ಯುತ್ತರವನ್ನು ಹೇಳುವುದಕ್ಕೂ ಅಶಕ್ತನಾಗಿರುವೆನು ಅದರೂ ಸಂಗ್ರಹಿಸಿ ಹೇಳುವೆನು ಕೇಳು! ನಾನೂ, ನನ್ನ ತಮ್ಮನಾದ ಜಟಾಯುವೂ,ಮದದಿಂದ ಕೊಬ್ಬಿದವರಾಗಿ, ಯಾರು ಹೆಚ್ಚು ವೇಗವುಳ್ಳವರೆಂದು ಪರೀಕ್ಷಿಸಿನೋಡಬೇಕೆಂಬ ಹಟದಿಂದ ಆಕಾಶಕ್ಕೆ ಹಾರಿದೆವು ಹಾರುವುದಕ್ಕೆ ಮೊದಲು ನಾವಿಬ್ಬರೂ ಕೈಲಾಸಶಿಖರದಲ್ಲಿರುವ ಕೆಲವು ಋಷಿಗಳನ್ನುಂದೆ "ಸೂರ್ಯನು ಅಸ್ತಗಿರಿಯನ್ನು ಹೊಂದುವವರೆಗೂ ಅವನನ್ನು ಬಿಡದೆ ಬೆಂಬಿಡಿದು ಹೋಗಬೇಕು" ಎಂದು ಪಂಥವನ್ನು ಕಟ್ಟಿ, ಇಬ್ಬರೂ ಏಕಕಾಲದಲ್ಲಿ ಆಕಾಶಕ್ಕೆ ಹಾರಿದೆವು ನಾವು ಹಾರುವಾಗ ಭೂಮಿಯಲ್ಲಿರುವ ಪಟ್ಟಣಗಳೆಲ್ಲವೂ ಬೇರೆಬೇರೆಯಾಗಿ ಒಂದು ಸಣ್ಣ ಬಂಡಿಯ ಚಕ್ರದಂತೆ ಕಾಣಿಸುತಿದ್ದುವು ಕೆಲವುಕಡೆಗಳಲ್ಲಿ ವಾದ್ಯಘೋಷಗಳೂ, ಕಲವುಕಡೆಯಲ್ಲಿ ಬ್ರಹ್ಮಘೋಷಗಳೂ ನಮ್ಮ ಕಿವಿಗೆ ಬಿಳುತಿದ್ದುವು ರಕ್ತವಸ್ತ್ರವನ್ನು ಧರಿಸಿದ ಬಹಳಮಂದಿ ಸ್ತ್ರೀಯರು ಅಂತರಕ್ಷದಲ್ಲಿ ಹಾಡುತ್ತಿರುವುದನ್ನೂ ನೋಡಿದೆವು ಹಾಗೆಯೇ ಅತಿವೇಗದಿಂದ ಹಾರಿ ಸೂರ್ಯಮಾರ್ಗವನ್ನು ಹಿಡಿದೆವು. ನಾವು ಮೇಲೆ ಹೋದಾಗ ಭೂಮಿಯಮೇಲಿದ್ದ ಮಹಾರಣ್ಯಗಳೆಲ್ಲವೂ ಒಂದು ಸಣ್ಣ ಗರಿಕೆಯಂತೆ ಕಾಣುತಿದ್ದುವು ಮಹಾಪರ್ವತಗಳೆಲ್ಲವೂ ಭೂಮಿಯಮೇಲೆ ಸಣ್ಣ ಸಣ್ಣ

ಹಾಸುಗಲ್ಲುಗಳನ್ನು ಹಾಸಿದಂತ ಕಾಣುತಿದ್ದುವು ಮಹಾನದಿಗಳೆಲ್ಲವೂ ಸೂ
ತ್ರದೆಳೆಗಳಂತೆ ಕಾಣಿಸುತಿದ್ದುವು ಭೂಮಿಯಮೇಲಿನ ಹಿಮವಂತವೂ,ವಿಂಧ್ಯ
ವೂ, ಮಹಾಮೇರುಪರ್ವತವೂ ಮಹಾಸಮುದ್ರದೊಳಗೆ ನೀರಾನೆಗಳಂತೆ ಕಾ
ಣಿಸುತಿದ್ದುವು ಅಷ್ಟುದೂರಕ್ಕೆ ಹೋಗುವುದರಲ್ಲಿ ಮಹಾಶ್ರಮದಿಂದ ನಮ್ಮಿ
ಬ್ಬರ ದೇಹದಲ್ಲಿಯೂ ಬೆವರು ಕಿತ್ತುಕೊಂಡಿತು ಸಹಿಸಲಾರದ ಕಷ್ಟವುಂ
ಟಾಯಿತು ಮನಸ್ಸಿನಲ್ಲಿ ಮಹಾಭಯವೂ ಹುಟ್ಟಿತು ಮನಸ್ಸಿಗೆ ಭ್ರಮೆ ಬಂದಿ
ತು ಕಣ್ಣುಗಳಲ್ಲಿ ಕತ್ತಲೆ ಕವಿದಂತಾಯಿತು ಭಯಂಕರವಾದ ಮೂರ್ಛೆ
ಯೂ ಬಂದಾವರಿಸಿತು ದಿಕ್ಕುಗಳಲ್ಲಿ ಆಗ್ನೇಯವಾವುದು, ದಕ್ಷಿಣವಾವುದು,
ಪಶ್ಚಿಮವಾವುದು ಎಂದೇ ತೋರಲಿಲ್ಲ ಪ್ರಳಯಕಾಲದಲ್ಲಿ ಅಗ್ನಿಯಿಂದ
ದಗ್ಧವಾದ ಈ ಪ್ರಪಂಚದಲ್ಲಿ ಸಮಸ್ತಲೋಕಗಳೂ ನೆಲೆದಪ್ಪಿ, ರೂಪು
ಗೆಡುವಂತೆ ಆಗ ನಮಗೆ ಯಾವುದೊಂದೂ ತಿಳಿಯದೆಹೋಯಿತು ನನ್ನಮನ
ಸ್ಸು ಕದಲಿ ಅದಕ್ಕಾಕ್ಯವಾದ ಚಕ್ಷುರಿಂದ್ರಿಯದಿಂದ ಬೇರ್ಪಟ್ಟು,ಎಲ್ಲಿ
ಯೋ ಲೀನವಾಗಿ ಕೆಟ್ಟುಹೋಯಿತು ನನ್ನದೃಷ್ಟಿಪಾಟವವೂ ನಾಶಹೊಂ
ದಿತು ಹಾಗಿದ್ದರೂ ನಾನು ಎಷ್ಟೋಪ್ರಯತ್ನದಿಂದ ನನ್ನ ಮನಸ್ಸನ್ನು ಚ
ಕ್ಷುರಿಂದ್ರಿಯದೊಡನೆ ನೆಲೆಗೆ ನಿಲ್ಲಿಸಿಕೊಂಡು,ಪ್ರಯತ್ನದಿಂದ ಪುನಃ ಸೂರ್ಯ
ಬಿಂಬವನ್ನೇ ಬೆನ್ನಟ್ಟಿ ಹೊರಟೆನು ಆಗ ನಮಗೆ ಸೂರ್ಯಬಿಂಬವು ಈ ಭೂ
ಗೋಳದಷ್ಟು ಮಹಾಪ್ರಮಾಣವುಳ್ಳದಾಗಿ ಗೋಚರಿಸಿತು ಇಷ್ಟರಲ್ಲಿ
ಜಟಾಯುವು ಬಿಸಿಲಿನಿಂದ ಬೆಂದು, ನನಗೆ ತಿಳಿಸದೆಯೇ ಕೆಳಕ್ಕಿಳಿದನು ಇ
ದನ್ನು ಕೆಂಡೊಡನೆ ನಾನೂ ಆಕ್ಷಣವೇ ಅಲ್ಲಿಂದ ಕೆಳಗಿಳಿದು ಜಟಾಯುವಿನ
ದೇಹವು ಬೆಂದುಹೋಗದಂತೆ ನನ್ನ ರೆಕ್ಕೆಗಳಿಂದ ಅವನನ್ನು ಮರೆಸಿಕೊಂ
ಡೆನು ಇದರಿಂದ ಅವನುಮಾತ್ರ ಬಿಸಿಲಿನಿಂದ ದಗ್ಧನಾಗದೆ ಬದುಕಿಕೊಂ
ಡನು ನಾನು ಆ ತಮ್ಮನನ್ನು ರಕ್ಷಿಸಬೇಕೆಂದು ಆತುರಪಟ್ಟು ಆಕಾಶದಿಂ
ದ ಬಿಳುವಾಗ ಪ್ರಮಾದವಶದಿಂದ ದಗ್ಧನಾಗಿ ಬಿಟ್ಟೆನು ಆ ಜಟಾಯು
ವು ಜನಸ್ಥಾನದಲ್ಲಿ ಬಿದ್ದಿರಬಹುದೆಂದು ಶಂಕಿಸುವೆನು ನನ್ನ ರೆಕ್ಕೆಗಳು
ಬೆಂದೊಡನೆಯೇ ನಾನು ಮೂರ್ಛಿತನಾಗಿ ಈ ವಿಂಧ್ಯಪರ್ವತದಲ್ಲಿ ಬಿದ್ದೆ
ನು ಎಲೈ ಮಹರ್ಷೀ! ನನಗೆ ರೆಕ್ಕೆಗಳೂ ಹೋದುವು ತಮ್ಮನೂ ಅಗಲಿ

ಹೋದನು ; ರಾಜ್ಯವೂ ಕೈತಪ್ಪಿಹೋಯಿತು ನನ್ನ ಪರಾಕ್ರಮವೂ ಕಂಡಿ ಹೋಯಿತು ಈ ದುರವಸ್ಥೆಯಲ್ಲಿ ನನಗೆ ಇನ್ನು ಮೇಲೆ ಈ ಪ್ರಾಣಗಳನ್ನಿ ಟ್ಟುಕೊಂಡಿರುವುದೇ ಇಷ್ಟವಿಲ್ಲ ಸರ್ವವಿಧದಿಂದಲೂ, ಪ್ರಾಣತ್ಯಾಗವ ನ್ನು ಮಾಡಿಬಿಡಬೇಕೆಂಬುದೇ ನನ್ನ ಕೋರಿಕೆಯಾಗಿರುವುದರಿಂದ, ಈಗಲೇ ಈ ಪರ್ವತಶಿಖರದಿಂದ ಬಿದ್ದು ಸಾಯುವೆನು" ಎಂದು ನಾನು ಆ ಮಹ ರ್ಷಿಗೆ ತಿಳಿಸಿದೆನು" ಇಲ್ಲಿಗೆ ಆರುವತ್ತೊಂದನೆಯಸರ್ಗವು

ನಿಶಾಕರಮುನಿಯು ಸಂಪಾತಿಗೆ ಪುನಃ ರೆಕ್ಕೆಗಳು ಬರುವ ರೀತಿಯನ್ನು ತಿಳಿಸಿದುದು

"ಎಲೆವಾನರರ! ನಾನು ಆ ನಿಶಾಕರಮುನಿಯೆಲ್ಲಿ ಹೀಗೆಂದು ವಿಜ್ಞಾ ಪಿಸಿ, ನನ್ನ ಮನಸ್ಸಂಕಟವನ್ನು ತಡೆಯಲಾರದೆ ಅಳುತಿದ್ದೆನು ಅದನ್ನು ನೋ ಡಿ ಮಹಾತ್ಮನಾದ ಆ ಋಷಿಯು, ಸ್ವಲ್ಪಕಾಲದವರೆಗೆ ಏನನ್ನೋ ಧ್ಯಾನಿಸು ತಿದ್ದು, ಆಮೇಲೆ ನನ್ನನ್ನು ನೋಡಿ, "ಎಲಸಂಪಾತಿ! ನಿನಗೆ ರಕ್ಕಗಳೂ, ಗರಿ ಗಳೂ, ಪ್ರಾಣಗಳೂ, ಕಣ್ಣುಗಳೂ, ಬಲಪರಾಕ್ರಮಗಳೂ ತಿರುಗಿ ಹೊಸ ದಾಗಿ ಹುಟ್ಟುವುವು ನೀನು ಭಯಪಡಬೇಡ ಮುಂದೆ ಒಂದುದೊಡ್ಡಕಾ ರ್ಯವು ನಡೆಯುವುದೆಂದು ಪೂರ್ವದಲ್ಲಿ ನಾನು ಕೇಳಿದ್ದೆನು ಈ ಭವಿಷ್ಯದ್ವೃ ತ್ತಾಂತವನ್ನು ನನ್ನ ತಪೋಮಹಿಮೆಯಿಂದಲೇ ನಾನು ತಿಳಿದುಕೊಂಡುದ ಲ್ಲದೆ ಹಿರಿಯರಿಂದಲೂ ಕೇಳಿಬಲ್ಲೆನು ಅದೇನೆಂದರೆ, ಇಕ್ಷ್ವಾಕುವಂಶದಲ್ಲಿ ದಶರಥನೆಂಬ ರಾಜನೊಬ್ಬನು ಹುಟ್ಟಿ ರಾಜ್ಯವಾಳುತ್ತಿರುವನು ಅವನಿಗೆ ಮ ಹಾತೇಜಸ್ವಿಯಾದ ರಾಮನೆಂಬ ಪುತ್ರನೊಬ್ಬನು ಹುಟ್ಟುವನು ತಂದೆಯ ಆ ಜ್ಞೆಯಮೇಲೆ ಸತ್ಯಪರಾಕ್ರಮನಾದ ಆ ರಾಮನು,ತನ್ನ ತಮ್ಮನಾದ ಲಕ್ಷ್ಮ ಣನೊಡನೆಯೂ, ಪತ್ನಿಯಾದ ಸೀತೆಯೊಡನೆಯೂ, ಅರಣ್ಯಕ್ಕೆ ಬರುವನು. ರಾಮನು ವನಸ್ಥಾನದಲ್ಲಿರುವಾಗ ಅವನ ಪ್ರಿಯಪತ್ನಿಯಾದ ಸೀತೆಯನ್ನು ದೇವದಾನವರಿಗೂ ದುರ್ಜಯನಾದ ರಾವಣನೆಂಬ ರಾಕ್ಷಸರಾಜನು ಅಪಹರಿ ಸುವನು ಮಹಾಭಾಗೆಯಾಗಿಯೂ, ಮಹಾಯಶಸ್ವಿನಿಯಾಗಿಯೂ ಇರುವ ಆ ಸೀತೆಯು ರಾವಣನ ಸೆರೆಮನೆಯಲ್ಲಿರುವಾಗ, ಆಕೆಗೆ ರಾವಣನುಬಗೆಬಗೆಯ


ಭಕ್ಷ್ಯಭೋಜ್ಯಗಳನ್ನೂ, ಇತರ ಭೋಗದ್ರವ್ಯಗಳನ್ನೂ ತಂದುಕೊಟ್ಟು ಆಸೆ ತೋರಿಸುವನು ಮಹಾಪತಿವ್ರತೆಯಾದ ಸೀತೆಯು, ಪತಿವಿಯೋಗದುಃಖ ದಿಂದ ಅವುಗಳನ್ನು ಕಣ್ಣೆತ್ತಿಯೂ ನೋಡದೆ ತಿರಸ್ಕರಿಸುವಳು ಹೀಗೆ ಸೀತೆ ಯು ಆಹಾರವಿಲ್ಲದೆ ಕೊರಗುತ್ತಿರುವುದನ್ನು ನೋಡಿ,ದೇವೇಂದ್ರನು ಅವಳಿಗೆ ಸರ್ವೋತ್ತಮವಾದ ದಿವ್ಯಾನ್ನವನ್ನು ತಂದುಕೊಡುವನು ಅಮೃತಕ್ಕಿಂತಲೂ ಮೇಲಾಗಿ, ದೇವತೆಗಳಿಗೂ ದುರ್ಲಭವಾದ ಆ ದಿವ್ಯಾನ್ನವನ್ನು ಕಂಡೊಡನೆ ಸೀತೆಯು,ಅದು ಇಂದ್ರದತ್ತವಾದುದೆಂದು ತಿಳಿದುಅದರಮೇಲಿನ ಸ್ವಲ್ಪಭಾ ಗವನ್ನು ತೆಗೆದು''ನನಗೆ ಪತಿಯಾಗಿಯೂ, ಪ್ರಭುವಾಗಿಯೂ ಇರುವ ರಾಮ ನೂ,ನನ್ನ ಮೈದುನನಾದ ಲಕ್ಷ್ಮಣನೂ, ಇನ್ನೂ ಜೀವಿಸಿದ್ದರೂ, ಇಲ್ಲವೇಮೃ ತರಾಗಿ ದೇವತ್ವವನ್ನು ಹೊಂದಿದ್ದರೂ,ಅವರಿಬ್ಬರಿಗೂ ಮೊದಲು ಈದಿವ್ಯಾ ನ್ನವುಸೇರಲಿ"ಎಂದುಭೂಮಿಯಮೇಲೆ ಇಡುವಳು ಎಲೈಗೃಧ್ರರಾಜನೆ' ಅಂ ತಹ ಮಹಾಪತಿವ್ರತೆಯಾದ ಸೀತೆಯನ್ನು ಹುಡುಕುವುದಕ್ಕಾಗಿ ರಾಮದೂತ ರಾದ ಕೆಲವುವಾನರರು ಇಲ್ಲಿಗೆಬರುವರು ನೀನು ಆ ವಾನರರಿಗೆ ರಾಮಪತ್ನಿ ಯಾದ ಸೀತೆಯ ವೃತ್ತಾಂತವನ್ನು ತಿಳಿಸಬೇಕು ಸಮಸ್ತವಿಧದಲ್ಲಿಯೂ ನೀ ನು ಇಲ್ಲಿರುವುದೇ ಉತ್ತಮವು ಈದುರವಸ್ಥೆಯಲ್ಲಿ ನೀನು ಬೇರೆಲ್ಲಿಗೂ ಹೋ ಗಲಾರೆ' ನೀನು ಇಲ್ಲಿಯೇ ದೇಶಕಾಲಗಳನ್ನು ದಿರುನೋಡುತ್ತಾ ವಾಸಮಾಡು ತ್ತಿರು' ನಿನಗೆ ಪುನಃ ರೆಕ್ಕೆಗಳು ಹುಟ್ಟುವುದರಲ್ಲಿ ಸಂದೇಹವಿಲ್ಲ ನಾನು ನಿನಗೆ ಈಗಲೇ ರೆಕ್ಕೆಗಳನ್ನು ಕೊಡುವ ಶಕ್ತಿಯುಳ್ಳವನಾಗಿದ್ದರೂ,ಅದು ನನಗೆ ಸ ಮ್ಮತವಿಲ್ಲ ನೀನುಇಲ್ಲಿಯೇ ಇದ್ದುನಿರೀಕ್ಷಿಸುತಿದ್ದರೆ, ಸಮಸ್ತಲೋಕಗಳಿಗೂ ನಿನ್ನಿಂದಕ್ಷೇಮವುಂಟಾಗುವುದು ರಾಜಪುತ್ರರಾದ ಆ ರಾಮಲಕ್ಷ್ಮಣರಕಾರ್ಯ ವು,ನಿನಗೆಮಾತ್ರವೇ ಅಲ್ಲದೆ, ಸಮಸ್ತಬ್ರಾಹ್ಮಣರಿಗೂ, ದೇವತೆಗಳಿಗೂ, ಮ ಹರ್ಷಿಗಳಿಗೂ, ದೇವೇಂದ್ರನಿಗೂಅವಶ್ಯಕರ್ತವ್ಯವು ನನಗೂ ಅಣ್ಣತಮ್ಮಂ ದಿರಾದ ಆ ರಾಮಲಕ್ಷ್ಮಣರನ್ನು ನೋಡಬೇಕೆಂಬ ಕೋರಿಕೆಯು ವಿಶೇಷವಾ ಗಿದ್ದರೂ,ಅಷ್ಟುದೀರ್ಘಕಾಲದವರೆಗೆ ಈ ಪ್ರಾಣಗಳನ್ನಿಟ್ಟು ಕೊಂಡಿರುವು ದು ಇಷ್ಟವಿಲ್ಲ.ಅದಕ್ಕೆಮೊದಲೇ ಈದೇಹವನ್ನು ಬಿಟ್ಟುಬಿಡುವೆನು" ಎಂದು ಸಮಸ್ತತತ್ವಾರ್ಥಗಳನ್ನೂ ಧ್ಯಾನದೃಷ್ಟಿಯಿಂದಲೇ ತಿಳಿದಿದ್ದ ಆನಿಶಾಕರ ಮಹರ್ಷಿಯು ನನಗೆ ಹೇಳಿರುವನು " ಇಲ್ಲಿಗೆ ಅರುವತ್ತೆರಡನೆಯ ಸರ್ಗವು.

ಸಂಪಾತಿಗೆ ರೆಕ್ಕೆಗಳು ಬಂದುದು ಅವನು ವಾರರರಿಗೆ ಮುಂದಿನ ಕರ್ತವ್ಯವನ್ನು ಹೇಳಿ, ಅವರ ಅನುಮತಿಯನ್ನು ಪಡೆದು ಹೊರಟುಹೋದುದು

"ಎಲೈವಾನರರೆ! ಆ ನಿಶಾಕರಮುನಿಯು ಇವೇ ಮೊದಲಾದ ಇನ್ನೂ ಬೇರೆಬೇರೆ ಮಾತುಗಳಿಂದ ನನ್ನನ್ನು ಪ್ರೋತ್ಸಾಹಿಸಿ ಸಮಾಧಾನವನ್ನು ಮಾಡಿ, ಅನುಜ್ಞೆಯನ್ನು ಕೊಟ್ಟು, ತಾನು ತನ್ನಾಶ್ರಮಕ್ಕೆ ಪ್ರವೇಶಿಸಿದನು ಆ ಮೇಲೆ ನಾನು ಮೆಲ್ಲಮೆಲ್ಲಗೆ ಪರ್ವತಗುಹೆಯಿಂದ ಸರಿದು ಬಂದು, ವಿಂಧ್ಯಪರ್ವತದ ಒಂದುತಿಖರವನ್ನೇರಿ, ನಿಮ್ಮ ಆಗಮನವನ್ನೇ ಇದಿರುನೋಡುತಿದ್ದೆನು ಆ ಮಹರ್ಷಿಯು ಹೇಳಿದ ಮಾತುಗಳನ್ನು ಮನಸ್ಸಿನಲ್ಲಿಯೇ ಇಟ್ಟುಕೊಂಡು, ದೇಶಕಾಲಗಳನ್ನು ನಿರೀಕ್ಷಿಸುತ್ತ ಇದುವರೆಗೆ ನೂರಾರು ಸಂವತ್ಸರಗಳನ್ನು ಕಳೆದೆನು ಆ ಮಹರ್ಷಿಯು * ಮಹಾಪ್ರಸ್ಥಾನಕ್ಕೆ ಹೋಗಿ ಸ್ವರ್ಗವನ್ನು ಸೇರಿದಂದಿನಿಂದ ಇಲ್ಲಿ ನಾನು ಸಂಕಟದಿಂದ ಬೇಯುತ್ತ, ಮನಸ್ಸಿನಲ್ಲಿ ನಾನಾವಿಧದಿಂದ ಚಿಂತಿಸಿ ಕೂರಗುತ್ತಿರುವೆನು ನನಗೆ ಸಾಯಬೇಕೆಂಬ ಬುದ್ಧಿಯು ಹುಟ್ಟಿದಾಗಲೆಲ್ಲಾ ಆನಿಶಾಕರಮಹರ್ಷಿಯ ಮಾತನ್ನು ಮನಸ್ಸಿಗೆ ತಂದುಕೊಂಡು, ಆ ಪ್ರಯತ್ನವನ್ನು ಬಿಟ್ಟು ನನಗೆ ನಾನೇ ಸಮಾಧಾನಮಾಡಿಕೊಳ್ಳುತ್ತಿರುವೆನು ಆ ಋಷಿಯು ನನಗೆ ತಿರುಗಿ ರೆಕ್ಕೆಗಳೂ, ಬಲವೂ, ಬರುವುದಾಗಿ ಹೇಳಿರುವ ಮಾತುಗಳೇ ಈಗ ನನ್ನ ಪ್ರಾಣಗಳನ್ನು ರಕ್ಷಿಸುತ್ತಿರುವುವೇಹೊರತು ಬೇರೆಯೆಲ್ಲ ಅವನು ನನಗೆ ಆಗ ತೋರಿಸಿರುವ ಆಶೋತ್ತರವೇ, ಅಗ್ನಿಜ್ವಾಲೆಯು ಅಂಧಕಾರವನ್ನು ನೀಗಿಸುವಂತೆ ನನ್ನ ಮನೋದುಃಖವನ್ನು ನೀಗಿಸುತ್ತಿರುವುದು ಎಲೈವಾನರರೆ! ಆ ದುರಾತ್ಮನಾದ ರಾವಣನ ಪರಾಕ್ರಮವನ್ನು ಬಲ್ಲವನಾಗಿದ್ದನಾನು ನನ್ನ ಮಗನನ್ನು ನೋಡಿ, 'ಆಗಲೇ ನೀನು ರಾವಣನನ್ನು ಕೊಂದು ಸೀತೆಯನ್ನು ರಕ್ಷಿಸದೆ ಬರಬಹುದೆ?" ಎಂದು ಕೋಪದಿಂದ ಹೆದರಿಸಿದೆನು ಏನಾದರೇನು? ಆ ಸೀತೆಯ ವಿಲಾಪವನ್ನು ಕೇಳಿಯೂ, ರಾಮಲಕ್ಷ್ಮಣರಿಬ್ಬರೂ ಸೀತಾವಿರಹಿತ

* ಮಹಾಪ್ರಸ್ಥಾನವೆಂದರೆ ಮರಣಪ್ರಾಪ್ತಿಗಾಗಿ ಹಿಮವಂತಕ್ಕೆ ಹೋಗತಕ್ಕ ಯಾತ್ರೆಯು.

ರಾಗಿರುವರೆಂಬುದನ್ನು ತಿಳಿದೂ, ನನ್ನ ಮಗನು ದಶರಥನಲ್ಲಿರುವ ಸ್ನೇಹಕ್ಕೆತಕ್ಕಂತೆ ಸೀತೆಯನ್ನು ಬಿಡಿಸಿ ನನಗೆ ಪ್ರಿಯವನ್ನುಂಟುಮಾಡದೆ ಹೋದನು" ಎಂದನು ಹೀಗೆ ಸಂಪಾತಿಯು ವಾನರರೊಡನೆ ಹೇಳುತ್ತಿರುವಾಗ, ಆಸಮಸ್ತವಾನರರ ಸಮಕ್ಷದಲ್ಲಿಯೇ ಅವನಿಗೆ ರೆಕ್ಕೆಗಳು ಹುಟ್ಟಿದುವು ಆಗ ಸಂಪಾತಿಯು ತನ್ನ ಶರೀರದಲ್ಲಿ ಕೆಂಪುಕೂದಲುಗಳೊಡನೆ ಗರಿಗಳು ಬೆಳೆಯುತ್ತಿರುವುದನ್ನು ನೋಡಿ, ಎಣೆಯಿಲ್ಲದ ಸಂತೋಷವನ್ನು ಹೊಂದಿ, ಅಲ್ಲಿದ್ದವಾನರರನ್ನು ಕುರಿತು ''ಎಲೈವಾನರರೆ ! ಎಣೆಯಿಲ್ಲದಮಹಾಮಹಿಮಯುಳ್ಳ ಆನಿಶಾಕರಮುನಿಯ ಪ್ರಭಾವದಿಂದಲೇ, ಸೂರ್ಯಕಿರಣದಿಂದ ಬಂದುಹೋದನನ್ನ ರೆಕ್ಕೆಗಳು ಈಗ ಪುನಃ ಹುಟ್ಟಿದುವು ನಾನು ಯೌವನದಲ್ಲಿದ್ದಾಗ ಯಾವದೇಹಬಲವನ್ನು ಹೊಂದಿದ್ದೆನೋ, ಅದೇ ಬಲಪರಾಕ್ರಮಗಳು ಈಗಲೂ ನನಗೆ ಬಂದಿರುವುವು ಎಲೈವಾನರರೆ!ನೀವುಸರ್ವವಿಧದಿಂದಲೂ ಮುಂದಿನ ಕಾರ್ಯಕ್ಕೆ ಪ್ರಯತ್ನವನ್ನುಮಾಡಿರಿ ನೀವು ತಪ್ಪದೆ ಸೀತೆಯನ್ನು ಪಡೆಯುವಿರಿ ಇದೋ!ನನಗೆ ರೆಕ್ಕೆಗಳು ಬೆಳೆದಿರುವುದನ್ನು ನೋಡಿರಿ ಇದೇ ನಿಮಗೆ ಕಾರ್ಯಸಿದ್ಧಿಯಾಗುವುದೆಂಬ ನಂಬಿಕೆಯನ್ನು ಹುಟ್ಟಿಸುವುದು" ಎಂದನು ಸಂಪಾತಿಯು ಹೀಗೆಂದು ವಾನರರಿಗೆ ಹೇಳಿ, ಆಕಾಶದಲ್ಲಿ ಸಂಚರಿಸುವ ವಿಷಯದಲ್ಲಿ ತನ್ನ ಹೊಸರೆಕ್ಕೆಗಳಿಗುಂಟಾಗಿರುವ ಒಲವೆಷ್ಟೆಂಬುದನ್ನು ತಿಳಿಯಬೇಕಂದು, ಆಗಲೇ ಅಂತರಿಕ್ಷಕ್ಕೆ ಹಾರಿದನು ಹೀಗೆ ಹಾರಿಹೋದಾಗ ಪುನಃಸಂಪಾತಿಯು ಕೆಳಗಿದ್ದವಾನರರನ್ನು ನೋಡಿ ''ನೀವು ತಪ್ಪದೆ ನಿಮ್ಮಕೆಲಸಕ್ಕೆ ಪ್ರಯತ್ನಿಸಿರಿ! ನಿಸ್ಸಂದೇಹವಾಗಿ ನಿಮ್ಮಕಾರ್ಯವು ಸಿದ್ಧಿಸುವುದು" ಎಂದು ಹೇಳಿ ಹೋದನು ಅಲ್ಲಿದ್ದ ವಾನರರೆಲ್ಲರೂ ಸಂತೋಷದಿಂದ ಆಮಾತನ್ನು ಕೇಳುತ್ತ, ಅವನಿಗೆಪುನಃ ರೆಕ್ಕೆಗಳು ಹುಟ್ಟಿದುದನ್ನೂನೋಡಿ ಆಶ್ಚರ್ಯಪಡುತ್ತ, ತಮಗೆ ಕಾರ್ಯಸಿದ್ಧಿಯಾಗುವುದರಲ್ಲಿ ಸಂದೇಹವಿಲ್ಲವೆಂಬ ನಂಬಿಕೆಯಿಂದ,ಮುಂದೆ ಸೀತಾನ್ವೇಷಣದಿಂದ ತಮಗೆ ಬರಬೇಕಾದ ಅಭ್ಯುದಯಕ್ಕಾಗಿ ತಮ್ಮ ಪರಾಕ್ರಮವನ್ನು ತೋರಿಸಬೇಕೆಂದು ಯತ್ನಿಸುತಿದ್ದರು ವಾಯುವೇಗವುಳ್ಳ ಆ ವಾನರರೆಲ್ಲರೂ ತಮ್ಮ ಪೌರುಷದಿಂದಲೇ ಸೀತೆಯನ್ನುಕಂಡುಹಿಡಿಯಬೇಕೆಂದು ನಿಶ್ಚಯಿಸಿ, ಮುಂದಿನ ಅಭಿಜಿನ್ಮುಹೂರ್ತವನ್ನು ನಿರೀಕ್ಷಿಸುತಿದ್ದು,ಆ



1650. ಸಂಪಾತಿಯು ತಿರುಗಿ ರೆಕ್ಕೆಗಳನ್ನು ಹೊಂದಿ 'ಮೇಲಕ್ಕೆ ಹಾರಿದುದು.

ಮುಹೂರ್ತವು ಪ್ರಾಪ್ತವಾದೊಡನೆ ದಕ್ಷಿಣಾಭಿಮುಖವಾಗಿ ಹೊರಟರು. ಇಲ್ಲಿಗೆ ಅರುವತ್ತುಮೂರನೆಯಸರ್ಗವು

ವಾನರರು ಸಮುದ್ರದ ಕಡೆಗೆ ಹೋದುದು

ಸಿಹ್ಮಪರಾಕ್ರಮವುಳ್ಳ ಆ ವಾನರವೀರರು ಸಂಪಾತಿಯ ಮಾತಿನ ಮೇಲೆ ಸೀತೆಯಿರುವ ಸ್ಥಳವನ್ನು ತಿಳಿದು, ಸಂತೋಷದಿಂದ ಹಾರಾಡುತ್ತ, ಪುನಃ ಎಲ್ಲರೂ ಒಂದಾಗಿ ಸೇರಿ ಉತ್ಸಾಹದಿಂದ ಸಿಹ್ಮನಾದಮಾಡಿದರು ಸಂಪಾತಿಯು ಹೇಳಿದಂತೆಯೇ ರಾವಣನ ನಿವಾಸದ ದಾರಿಯನ್ನು ಗೊತ್ತು ಮಾಡಿ,ಸೀತೆಯನ್ನು ನೋಡಬೇಕೆಂಬ ಆತುರದಿಂದ ಮಹೋತ್ಸಾಹವುಳ್ಳವರಾಗಿ ಸಮುದ್ರತೀರಕ್ಕೆ ಬಂದರು ಭಯಂಕರಪರಾಕ್ರಮಿಗಳಾದ ಆ ವಾನರರೆಲ್ಲರೂ ಅಲ್ಲಿ ಸೇರಿ *ಸಮಸ್ತಪ್ರಪಂಚವನ್ನೂ ತನ್ನಲ್ಲಿ ಪ್ರತಿಬಿಂಬಿಸುವಂತೆ ಮಾಡತಕ್ಕ ದೊಡ್ಡ ಕನ್ನಡಿಯಂತಿರುವ ಮಹಾಸಮುದ್ರವನ್ನು ನೋಡಿದರು ಹೀಗೆ ಬಲಾಢ್ಯರಾದ ವಾನರರೆಲ್ಲರೂ ಆ ದಕ್ಷಿಣಸಮುದ್ರದ ಉತ್ತರತೀರವನ್ನು ಸೇರಿ ಅಲ್ಲಿ ನಿಂತು, ವಿಕಾರರೂಪವುಳ್ಳವುಗಳಾಗಿಯೂ, ಬಹಳ ದೊಡ್ಡದೇಹವುಳ್ಳವುಗಳಾಗಿಯೂ ಇದ್ದ ಬಗೆಬಗೆಯ ಜಂತುಗಳು ಬಾಯನ್ನು ತೆರೆದುಕೊಂಡು ಸಮುದ್ರಜಲದಲ್ಲಿ ಕ್ರೀಡಿಸುವುದನ್ನೂ ಕಂಡರು ಅಲೆಗಳು ತುಂಬಿ ತುಳುಕುತಿದ್ದುವು ಆ ಮಹಾಸಮುದ್ರವು ಒಂದುಕಡೆಯಲ್ಲಿ ಮಲಗಿದಂತೆ ಶಾಂತವಾಗಿಯೂ, ಮತ್ತೊಂದು ಕಡೆಯಲ್ಲಿ ಆಡುವಂತೆ ಉಲ್ಲೋಲಕಲ್ಲೋಲವಾಗಿಯೂ, ಕಾಣುತಿತ್ತು ಆ ಸಮುದ್ರದ ನಡುನಡುವೆ ಮಹೋನ್ನತಗಳಾಗಿ ಪರ್ವತಗಳಂತೆ ಉಬ್ಬಿದ ಜಲರಾಶಿಯು ತುಳುಕಾಡುತಿತ್ತು ಕೆಲವು ಕಡೆಯಲ್ಲಿ ದಾನವೇಂದ್ರರೂ, ಮತ್ತೆ ಕೆಲವೆಡೆಗಳಲ್ಲಿ ಪಾತಾಳವಾಸಿಗಳಾದ ನಾಗರೂ ವಿಹರಿಸುತಿದ್ದರು ನೋಡುವಾಗಲೇ ಮೈಯಲ್ಲಿ ರೋಮಾಂಚವನ್ನೆಬ್ಬಿಸುವಂತೆ ಮಹಾಭಯಂಕರವಾದ ಆ ಸಮುದ್ರವನ್ನು ಕಂಡೊಡನೆ, ವಾನರರಿಗೆ ಮನಸ್ಸಿನಲ್ಲಿ ಚಿಂತೆಯುಂಟಾಯಿತು.

---

* ಇಲ್ಲಿ "ಸಮಸ್ತಪ್ರಪಂಚದೊಳಗಿನ ಸಕಲವಸ್ತುಗಳಿಂದಲೂ ಪರಿಪೂರ್ಣವಾದ ಮಹಾಸಮುದ್ರ" ವೆಂದು ಗೋವಿಂದರಾಜರು ಅರ್ಥಾಂತರವನ್ನು ಮಾಡಿರುವರು.

ಆಕಾಶದಂತೆ ಕೊನೆಮೊದಲಿಲ್ಲದ ಆ ಮಹಾಸಾಗರವನ್ನು ನೋಡಿ ಅವರೆಲ್ಲರೂ, ಮುಂದೆ ಮಾಡಬೇಕಾದ ಕಾರ್ಯವೇನೆಂದು ಒಬ್ಬರಿಗೊಬ್ಬರು ಹೇಳಿಕೊಳ್ಳುತ್ತ ಚಿಂತಾಕುಲಿತರಾಗಿದ್ದರು ಹೀಗೆ ಮಹಾಸಮುದ್ರವನ್ನು ನೋಡಿ ವಿಷಾದಹೊಂದಿ ಭಯಪಡುತ್ತಿರುವ ಆ ವಾನರಸೈನ್ಯವನ್ನು ನೋಡಿ ಅಂಗದನು ಸಮಾಧಾನಪಡಿಸುವುದಕ್ಕಾರಂಭಿಸಿದನು ಕಾಲೋಚಿತವಾದ ಬುದ್ಧಿಚಾತುರ್ಯವುಳ್ಳ ಆ ವಾಲಿಪುತ್ರನು, ಮಿತಿಮೀರಿದ ಚಿಂತೆಯಿಂದ ಕೊರಗುತ್ತಿರುವ ಆ ಸಮಸ್ತವಾನರರನ್ನೂ ನೋಡಿ,"ಎಲ್ಲೈವೀರರೆ! ಈಗ ನೀವು ಮನಸ್ಸಿನಲ್ಲಿ ಹೀಗೆ ವಿಷಾದಕ್ಕೆಅವಕಾಶಕೊಡಬಾರದು ಚಿಂತೆಯೆಂಬುದೇ ಸಮಸ್ತಮೋಕ್ಷಗಳಿಗೂ ಪ್ರಧಾನಸ್ಥಾನವು ಕೋಪಗೊಂಡ ಹಾವು ಎಳೇ ಮಗುವನ್ನು ಕಚ್ಚಿಕೊಲ್ಲುವಂತೆ, ಈ ಚಿಂತೆಯೆಂಬುದೇ ಮನುಷ್ಯನನ್ನು ಕೊಂದುಬಿಡುವುದು ಪರಾಕ್ರಮಕಾಲದಲ್ಲಿಮಾತ್ರ ವಿಷಾದವು ಬಂದೊದಗಿದ ಪಕ್ಷದಲ್ಲಿ, ಆಗಲೇ ಅದು ಪುರುಷನಿಗೆ ಅಧೋಗತಿಯನ್ನೇ ತಂದಿಡುವುದು. ಧೈರ್ಯಗುಂದಿದವನಿಗೆ ಯಾವ ಪುರುಷಾರ್ಥವೂ ಸಿದ್ಧಿಸದು " ಹೀಗೆಂದು ಹೇಳಿ ಅಂಗದನು, ಆ ರಾತ್ರಿಯು ಕಳೆದಮೇಲೆ, ವಾನರಸೈನ್ಯದಲ್ಲಿ ಪ್ರಮುಖರಾದವರೊಡನೆ ಕನೆತು, ಸಮುದ್ರಲಂಘನವನ್ನು ಕುರಿತು ತಿರುಗಿ ಆಲೋಚಿಸತೊಡಗಿದನು ಆಗ ದೆವೇಂದ್ರನನ್ನು ಬಳಸಿ ನಿಂತಿರುವ ದೇವಸೇನೆಯಂತೆ ಆ ಅಂಗದನ ಸುತ್ತಲೂ ಸಮಸ್ತವಾನರಸೇನೆಯೂ ಬಳಸಿ ನಿಂತುಪ್ರಕಾಶಿಸುತಿತ್ತು ವಾಲಿಪುತ್ರನಾದ ಅಂಗದನು, ಮತ್ತು ಆಂಜನೇಯನು ಇವರಿಬ್ಬರು ಹೊರತು ಅಷ್ಟು ದೊಡ್ಡಕಪಿಸೈನ್ಯವನ್ನು ತಡೆದು ನಿಲ್ಲಿಸುವುದಕ್ಕೆ ಬೇರಯಾರಿಂದ ಸಾಧ್ಯವು?"ಆಮೇಲೆ ಶ್ರೀಮಂತನಾದ ಅಂಗದನು, ಅಲ್ಲಿ ಪ್ರಮುಖರಾಗಿದ್ದ ಕೆಲವು ವೃದ್ಧವಾನರರನ್ನು ನೋಡಿ,ಇತರ ಕಪಿಸೈನ್ಯವನ್ನೂ ಸಮಾಧಾನಗೊಳಿಸುತ್ತ ಅರ್ಥಯುಕ್ತವಾದ ಮಾತಿನಿಂದ ಅವರನ್ನು ಕುರಿತು ಹೇಳುವನು "ಎಲ್ಲೈ ವಾನರರ! ನಿಮ್ಮಲ್ಲಿ ಈ ಸಮುದ್ರವನ್ನು ದಾಟಬಲ್ಲ ಮಹಾತೇಜಸ್ವಿಯಾವನು?ಶತ್ರುಸೂದನನಾದ ಸುಗ್ರೀವನನ್ನು ಸತ್ಯಸಂಧನನ್ನಾಗಿ ಮಾಡಬಲ್ಲವನಾವನು? ಈ ನೂರುಯೋಜನಗಳ ದೂರವನ್ನು ಯಾವ ವೀರನು ಹಾರಬಲ್ಲನು? ಈ ಸಮಸ್ತಕಪಿಯೂಥಪರಿಗೂ, ಈಗ ಬಂದೊದಗಿರುವ

ಮಹಾಭಯವನ್ನು ಬಿಡಿಸಬಲ್ಲವನಾವನು? ಎಲ್ಲೈ ವೀರರೆ! ಯಾವನ ಮಹಿಮೆಯಿಂದ ನಾವೆಲ್ಲರೂ ಇಲ್ಲಿಂದ ಕೃತಾರ್ಥರಾಗಿ ಹಿಂತಿರುಗಿ, ಸುಖವಾಗಿ ಕಿಷ್ಕಿಂಧೆಯನ್ನು ಸೇರಿ, ನಮ್ಮ ಮನೆಮಂದಿಮಕ್ಕಳನ್ನೆಲ್ಲಾ ನೋಡಬಹುದು! ಯಾವನ ಅನುಗ್ರಹದಿಂದ ನಾವು ಇಲ್ಲಿಂದ ಹಿಂತಿರುಗಿ ರಾಮನನ್ನೂ, ವೀರನಾದ ಲಕ್ಷ್ಮಣನನ್ನೂ, ಮಹಾಬಲಾಢ್ಯನಾದ ಸುಗ್ರೀವನನ್ನೂ ಸಂತೋಷದಿಂದ ಇದಿರುಗೊಳ್ಳುವೆವೋ ತಿಳಿಯಲಿಲ್ಲ ನಿಮ್ಮಲ್ಲಿ ಯಾವನಾದರೂ ಒಬ್ಬನು ಈ ಸಮುದ್ರವನ್ನು ದಾಟುವುದಕ್ಕೆ ಸಮರ್ಥನಾಗಿದ್ದಪಕ್ಷದಲ್ಲಿ, ಅಂತವನು ತೀಕ್ಷ್ರದಲ್ಲಿಯೇ ಮುಂದೆ ಬಂದು ಪುಣ್ಯಹೇತುವಾದ ಈ ಅಭಯದಕ್ಷಿಣೆಯನ್ನು ಕೊಟ್ಟು, ನಮ್ಮನ್ನು ಕಾಪಾಡಲಿ!" ಎಂದನು ಅಂಗದನು ಹೇಳಿದ ಮಾತನ್ನು ಕೇಳಿ ಆ ವಾನರರಲ್ಲಿ ಒಬ್ಬನಾದರೂ, ಒಂದು ಮಾತನ್ನೂ ಆಡಲಿಲ್ಲ ಸಮಸ್ತಕಪಿಸೈನ್ಯವೂ ಸ್ತಬ್ಧವಾಗಿ ನಿಂತಿತು ಆಗ ವಾನರೋತ್ತಮನಾದ ಅಂಗದನು ತಿರುಗಿ ಆ ಕಪಿಗಳನ್ನು ನೋಡಿ "ಎಲ್ಲೈ! ನೀವೆಲ್ಲರೂ ಬಲಾಢ್ಯರಲ್ಲಿ ಮೇಲೆನಿಸಿಕೊಂಡವರು ದೃಢಪರಾಕ್ರಮವುಳ್ಳವರು ಒಬ್ಬೊಬ್ಬರೂ ಲೋಕಮಾನ್ಯವಾದ ಮಹಾಕುಲದಲ್ಲಿ ಹುಟ್ಟಿದವರು ಲೋಕಪೂಜ್ಯರು ಎಲ್ಲೈ ವಾನರೋತ್ತಮರೆ! ನಿಮ್ಮಲ್ಲಿ ಯಾವನೊಬ್ಬನಿಗೂ, ಯಾವಾಗಲೂ, ಎಲ್ಲೆಯೂ ಗತಿಭಂಗವಿಲ್ಲವಷ್ಟೆ? ಈಗ ನೀವೇಕೆ ಸುಮ್ಮನಿರುವಿರಿ? ನಿಮ್ಮಲ್ಲಿ ಆರಾರಿಗೆ ಎಷ್ಟೆಷ್ಟು ದೂರದವರೆಗೆ ದಾಟುವ ಶಕ್ತಿಯುಂಟೆಂಬುದನ್ನಾದರೂ ತಿಳಿಸಿರಿ" ಎಂದರು ಇಲ್ಲಿಗೆ ಅರುವತ್ತನಾಲ್ಕನೆಯ ಸರ್ಗವು


ವಾನರರು ಸಮುದ್ರವನ್ನು ದಾಟುವುದರಲ್ಲಿ ತಮತಮಗಿರುವ ಶಕ್ತಿತಾರತಮ್ಯವನ್ನು ಹೇಳಿಕೊಂಡುದು

ಅಲ್ಲಿದ್ದ ವಾನರರೆಲ್ಲರೂ ಅಂಗದನು ಹೇಳಿದ ಈ ಮಾತನ್ನು ಕೇಳಿ, ಸಮುದ್ರಲಂಘನವಿಷಯದಲ್ಲಿ ತಮತಮಗಿರುವ ಬಲೋತ್ಸಾಹಗಳನ್ನು ಕ್ರಮವಾಗಿ ತಿಳಿಸುತ್ತ ಬಂದರು ಗಜನೂ, ಗವಾಕ್ಷನೂ, ಗವಯನೂ, ಶರಭನೂ, ಗಂಧಮಾದನನೂ, ಮೈಂದನೂ, ದ್ವಿವಿದನೂ, ಸುಷೇಣನೂ,

ಜಾಂಬವಂತನೂ ಕ್ರಮವಾಗಿ ತಮ್ಮತಮ್ಮ ಶಕ್ತಿಯನ್ನು ಹೇಳತೊಡಗಿದರು ತಾನು ಹತ್ತು ಯೋಜನಕ್ಕೆ ಹಾರುವುದಾಗಿ *ಗಜನು ಹೇಳಿದನು ಗವಾಕ್ಷನು ಇಪ್ಪತ್ತು ಯೋಜನಗಳನ್ನು ಹಾರುವೆನೆಂದನು ಗವಯನು ಅಲ್ಲಿದ್ದ ವಾನರರನ್ನು ಕುರಿತು ''ಎಲ್ಲೈ ವೀರರೆ! ನಾನು ಮೂವತ್ತು ಯೋಜನಗಳವರೆಗೆ ಹಾರುವೆ" ನೆಂದನು ಶರಭನು ತಾನು ನಾಲ್ವತ್ತುಯೋಜನಗಳನ್ನು ಹಾರಬಲ್ಲೆನೆಂದನು ಮಹಾತೇಜಸ್ವಿಯಾದ ಗಂಧಮಾದನನು ''ನಾನು ಸ್ವಲ್ಪವೂ ಸಂದೇಹವಿಲ್ಲದೆ ಐವತ್ತುಯೋಜನಗಳನ್ನು ಹಾರಬಿಡುವೆನು" ಎಂದನು ಮೈಂದನು ಅರವತ್ತುಯೋಜನಗಳನ್ನು ಹಾರಬಲ್ಲೆನೆಂದನು ತೇಜೋವಿಶಿಷ್ಟನಾದ ದ್ವಿವಿದನು ತಾನು ಎಪ್ಪತ್ತುಯೋಜನಗಳನ್ನು ಹಾರಬಲ್ಲೆನೆಂದನು ಕಪಿಶ್ರೇಷ್ಠನಾದ ಸುಷೇಣನು ಎಂಭತ್ತುಯೋಜನಗಳನ್ನು ಹಾರಿಬಿಡುವೆನೆಂದನು ಹೀಗೆ ಒಬ್ಬರಮೇಲೊಬ್ಬರು ತಮ್ಮ ವೀರ್ಯವನ್ನು ಹೇಳಿಕೊಳ್ಳುತ್ತಿರಲು ವೃದ್ಧನಾದ ಜಾಂಬವಂತನು ಆ ಸಮಸ್ತವಾನರರನ್ನೂ ಸಮಾಧಾನಪಡಿಸಿ ತಡೆದು, ಅವರನ್ನು ಕುರಿತು ' ಎಲ್ಲೈ ವೀರರೆ! ಪೂರ್ವದಲ್ಲಿ ನನಗೂ ತಕ್ಕಷ್ಟು ಲಂಘನಶಕ್ತಿಯಿದ್ದಿತು ಹಾಗಿದ್ದ ನನಗೆ ಈಗ ವಯ

---

* ಗಜನೇ ಮೊದಲಾದವರು, ಮೊದಲು ತಮ್ಮನ್ನು ಸೀತಾನ್ವೇಷಣಕ್ಕಾಗಿ ಸುಗ್ರೀವನು ಕಳುಹಿಸುವಾಗ ''ಭೂತಲೇ ಸಾಗರೇ ವಾಪಿ ಶೈಲೇಷುಚ ವನೇಷುಚ ! ಪಾತಾಳೇ ಲ್ಪಪಿಮಥ್ಯೇವಾನಮಾಮಾಚ್ಛಿದ್ಯತೇಗತಿ ''ಭೂಮಿಯಲ್ಲಿಯಾಗಲಿ,ಸಮುದ್ರದಲ್ಲಿಯಾಗಲಿ,ಪರ್ವತಾರಣ್ಯಗಳಲ್ಲಿಯಾಗಲಿ, ಕೊನೆಗೆ ಪಾತಾಳಮಧ್ಯದಲ್ಲಿಯಾಗಲಿ ತನ್ನ ಗತಿಗೆ ತಡೆಯಿಲ್ಲವೆಂದು ಒಬ್ಬೊಬ್ಬ ಕಪಿಯೂಧಪನೂ ತನ್ನತನ್ನಶಕ್ತಿಯನ್ನು ಹೇಳಿಕೊಂಡಿರುವನು ಹಾಗೆಯೇ ಅಂಗದನೂ ಪೂರ್ವಸರ್ಗದಲ್ಲಿ ''ನಹಿ ವೋ ಗಮನೇ ಸಂಗಃ ಕದಾಚಿತ್ಕೃಸ್ಯಚಿತ್" ಎಂದು ಅವರ ಪರಾಕ್ರಮವನ್ನು ಅನುವೋದಿಸಿರುವನು ಈ ಮಾತುಗಳು ನಿಜವಾಗಿದ್ದಪಕ್ಷದಲ್ಲಿ,ಈಗ ಇಲ್ಲಿ ವೀರರಾದ ವಾನರರು, ತಾವು ಹತ್ತು ಯೋಜನಗಳನ್ನೂ, ಇಪ್ಪತ್ತುಯೋಜನಗಳನ್ನೂ ಹಾರಬಲ್ಲೆವೆಂದು ಹೇಳಿಬಹುದೆ! ಎಂದರೆ, ತಾವು ಬಹಳಶಕ್ತಿಯುಳ್ಳವರಾಗಿದ್ದರೂ ರಾವಣನಿರುವ ಲಂಕೆಯನ್ನು ಪ್ರವೇಶಿಸಿ ಸೀತೆಯನ್ನು ಹುಡುಕುವುದು ತಮಗೆ ಸಾಧ್ಯವಲ್ಲವೆಂದು ತೋರಿದುದರಿಂದ್ದ ಅದಕ್ಕೆ ಸಮರ್ಥನಾದ ಹನುಮಂತನಲ್ಲಿಯೇ ಈ ಕಾರ್ಯಭರವನ್ನು ಹೊರಿಸಬೇಕೆಂದು ನಿಶ್ಚಯಿಸಿ, ಅವನಿಗೆ ವಿಶೇಷಪ್ರೋತ್ಸಾಹವನ್ನು ಹುಟ್ಟಿಸುವುದಕ್ಕಾಗಿಯೇ ತಮ್ಮ ಶಕ್ತಿಯನ್ನು ತಗ್ಗಿಸಿ ಹೇಳಿಕೊಂಡರೆಂದು ಗ್ರಾಹ್ಯವು.



1654. ಅಂಗದಾದಿಗಳು ಸಮುದ್ರವನ್ನು ದಾಟುವುದರಲ್ಲಿ ತಮತಮಗಿರುವ ಶಕ್ತಿಯನ್ನು ಜಾಂಬವಂತನಿಗೆ ತಿಳಿಸಿದುದು. ಹನುಮಂತನು ಏಕಾಂತವಾಗಿ ದೊರದಲ್ಲಿ ಕುಳಿತಿದ್ದುದು.

ಸ್ಸು ಕಳೆದುಹೋಯಿತು ಮುದುಕನಾಗಿಬಿಟ್ಟೆನು ಹೀಗಿದ್ದರೂ ನಮ್ಮ ಪ್ರಭುವಾದ ಸುಗ್ರೀವನೂ, ರಾಮನೂ ನಿಶ್ಚಯಿಸಿರುವ ಪ್ರಕೃತಕಾರ್ಯವನ್ನು ಉಪೇಕ್ಷಿಸಿ ಬಿಟ್ಟುಬಿಡುವುದಕ್ಕಿಲ್ಲ ಕಾಲಭೇದದಿಂದ ನನಗೆ ಈ ಅವಸ್ಥೆಯುಂಟಾಗಿದ್ದರೂ, ಈಗಲೂ ನಾನು ಎಷ್ಟುದೂರದಕ್ಕೆ ಹಾರಬಲ್ಲೆನೆಂಬುದನ್ನು ಹೇಳುವೆನು ಕೇಳಿರಿ ಈ ಮುಪ್ಪಿನಲ್ಲಿಯೂ ನಾನು ಸಸ್ಸಂದೇಹವಾಗಿ ಸ್ವಲ್ಪವೂ ಹೆಚ್ಚುಕಡಿಮೆಯಿಲ್ಲದೆ, ತೊಂಬತ್ತುಯೋಜನಗಳನ್ನು ಹಾರುವೆನು ನನಗೆ ಮೊದಲು ಒಳ್ಳೇ ಯೌವನವಿದ್ದಾಗ, ನನಗಿದ್ದ ಗಮನಶಕ್ತಿಯು ಇಷ್ಟು ಮಾತ್ರವೇ ಅಲ್ಲ ಮೊದಲು ಬಲಿಚಕ್ರವರ್ತಿಯಾಗದಲ್ಲಿ ಶ್ರೀಮಹಾವಿಷ್ಣುವು ತ್ರಿವಿಕ್ರಮಾವತಾರವನ್ನೆತ್ತಿ, ಮೂರಡಿಗಳ ಭೂಮಿಯನ್ನು ಯಾಚಿಸಿ, ಅದನ್ನು ತನ್ನ ಕಾಲಿನಿಂದ ಅಳೆಯುತಿದ್ದನಲ್ಲವೆ? ಆಗ ಮೂರು ಲೋಕವನ್ನೂ ಅತಿಕ್ರಮಿಸಿದ ಅವನ ಆಕಾರವನ್ನೇ (ಬ್ರಹ್ಮಾಂಡವನ್ನೇ) ನಾನು ಪ್ರದಕ್ಷಿಣವಾಗಿ ಸುತ್ತಿಬಂದಿರುವೆನು ನನಗೆ ಯೌವನಕಾಲದಲ್ಲಿ ಬೇರೆ ಯಾರಿಗೂ ಇಲ್ಲದ ಅಸಾಧಾರಣಗಮನಶಕ್ತಿಯಿದ್ದಿತು ಹಾಗಿದ್ದ ನಾನು ಈಗ ಕೈಲಾಗದ ಮದುಕನಾಗಿಬಿಟ್ಟೆನು ನನ್ನ ಹಾರುವ ಶಕ್ತಿಯೆಲ್ಲವೂ ಅಡಗಿಹೋಯಿತು ಈಗ ನನಗೆ ತೊಂಬತ್ತುಯೋಜನಗಳನ್ನು ಮಾತ್ರ ಹಾರುವಶಕ್ತಿಯುಂಟೆಂದು ತೋರಿರುವುದು ಆದರೆ ಲಂಕೆಗೆ ನೂರುಯೋಜನಗಳನ್ನು ದಾಟಿ ಹೋಗಬೇಕಾಗಿರುವುದರಿಂದ, ಈಗ ನನ್ನ ಶಕ್ತಿಯೂ ಪ್ರಯೋಜನಕ್ಕೆ ಬಾರದು" ಎಂದನು ಇವೆಲ್ಲವನ್ನೂ ಕೇಳುತಿದ್ದ ಯುವರಾಜನಾದ ಅಂಗದನು, ಪ್ರಾಜ್ಞನಾದ ಜಾಂಬವಂತನ ಅನುಮತಿಯನ್ನು ಪಡೆದು, ತನಗಿರುವ ಶಕ್ತಿಯನ್ನು ಹೇಳುವುದಕ್ಕೆ ತೊಡಗಿ, ಬಹಳ ಸಾರವತ್ತಾದ ವಾಕ್ಯದಿಂದ ಆ ವಾನರರನ್ನುದ್ದೇಶಿಸಿ, ಎಲೈ ವಾನರರೆ! ನೀವು ನಿಮ್ಮನಿಮ್ಮ ಪರಾಕ್ರಮವನ್ನು ಹೇಳಿದುದಾಯಿತಷ್ಟೆ? ನನ್ನ ಶಕ್ತಿಯೆನ್ನೂ ಹೇಳುವೆನು ಕೇಳಿರಿ ಇಲ್ಲಿಂದ ಲಂಕೆಗೆ ನೂರುಯೋಜನಗಳಿರುವುವಷ್ಟೆ? ಈ ನೂರುಯೋಜನಗಳನ್ನೂ ನಾನು ಹಾರಿಹೋಗಬಲ್ಲೆನು ಆದರೆ ಹಿಂತಿರುಗಿ ಬರುವುದಕ್ಕೆ ನನಗೆ ಶಕ್ತಿಯಿರುವುದೋ ಇಲ್ಲವೋ ಎಂಬುದನ್ನು ಈಗ ನಿಶ್ಚಯಿಸಿ ಹೇಳಲಾ

ರೆನು" ಎಂದನು ಆಗ ವಾಕ್ಯಾತುರ್ಯವುಳ್ಳ *ವಾನರೋತ್ತಮನಾದ ಜಾಂಬವಂತನು ಅಂಗದನನ್ನು ನೋಡಿ, "ಎಲೈ ಯುವರಾಜನೆ! ಈ ಸಮಸ್ತವಾನರರಿಗೂ, ಭಲ್ಲೂಕಗಳಿಗೂ ನೀನು ಮೇಲಾದವನೆಂಬುದರಲ್ಲಿ ಸಂದೇಹವೇನಿದೆ? ಲಂಘನದಲ್ಲಿ ನಿನಗಿರುವ ಶಕ್ತಿಯು ಇಂತದೆಂಬುದನ್ನು ನಾವೆಲ್ಲರೂ ತಿಳಿದೇ ಇರುವೆವು ಈ ನೂರುಯೋಜನಗಳುಮಾತ್ರವೇ ಅಲ್ಲ! ಸಹಸ್ರಯೋಜನಗಳನ್ನಾದರೂ ಹಾರಿ, ಹಿಂತಿರುಗಿಬರುವ ಶಕ್ತಿಯೂ ನಿನಗಿರುವುದರಲ್ಲಿ ಸಂದೇಹವಿಲ್ಲ ಆದರೂ ಭೃತ್ಯರಾದ ನಾವೆಲ್ಲರೂ ಇದ್ದುಕೊಂಡು, ಪ್ರಭುವಾದ ನಿನ್ನಿಂದ ಕೆಲಸಮಾಡಿಸುವುದೆಂದರೇನು? ಇದು ಬಹಳ ದೋಷಾಸ್ಪದವು. ಯಾವ ಸಾಸ್ತ್ರವೂ ಇದನ್ನೊಪ್ಪುವುದಿಲ್ಲ ಪ್ರಭುವಾದ ನಿನ್ನನ್ನು ಕಳುಹಿಸುವುದು ಭೃತ್ಯರಾದ ನಮಗೆ ಯುಕ್ತವಲ್ಲ ಪ್ರಭುವಾದವನು ಭೃತ್ಯರನ್ನು ಕೆಲಸಕ್ಕೆ ನಿಯಮಿಸುವನೇ ಹೊರತು ತಾನು ನಿಮಾಮ್ಯನಲ್ಲ ಈಗ ನಮಗೆ ನೀನು ಪ್ರಭುವಾಗಿರುವುದರಿಂದ, ನೀನು ನಮ್ಮಲ್ಲರಿಗೂ ಯಾವ ಕಾರ್ಯವನ್ನಾದರೂ ನಿಯೆಮಿಸಬಹುದು ಯಾವ ವಿಷಯದಲ್ಲಿಯೂ ನಾವು ನಿನಗೆ ನಿಯಾಮಕರಲ್ಲ ಎಲೈ ಪರಂತಪನೆ! ನೀನು ನಮ್ಮನ್ನು ಕಾಪಾಡತಕ್ಕ ಸ್ವಾಮಿಯಾದುದರಿಂದ, ನಾವೆಲ್ಲರೂ ನಿನ್ನನ್ನು ಸುಖವಾಗಿ ರಕ್ಷಿಸಿಕೊಳ್ಳಬೇಕಲ್ಲವೆ? ಸೈನಿಕರಲ್ಲರಿಗೂ ಸ್ವಾಮಿಯಾದವನೇ ಎಚ್ಚರಿಕೆಯಿಂದ ರಕ್ಷಿಸಿಡಬೇಕಾದ ಮುಖ್ಯವಸ್ತುವು ಇದನ್ನು ನಾನಾಗಿ ಹೇಳುವವನಲ್ಲ ಲೋಕಸ್ವಭಾವವೇ ಹೀಗಿರುವುದು ನಿನ್ನನ್ನು ನಿಧಿಯಂತೆ ಎಚ್ಚರಿಕೆಯಿಂದ ರಕ್ಷಿಸಿಡಬೇಕಾದುದೇ ನಮ್ಮ ಮುಖ್ಯಕರ್ತವ್ಯವು. ಇಷ್ಟೇಅಲ್ಲದೆ ವೃಕ್ಷಗಳಿಗೆ ಬೇರು ಹೇಗೋ ಹಾಗೆ ಪ್ರಕೃತಕಾರ್ಯಕ್ಕೆ ನೀನೇ ಮೂಲಭೂತನು. ಸಮಸ್ತಕಾರ್ಯಕ್ಕೂ ಮೂಲಪ್ರಾಯವಾದ ವಸ್ತುವನ್ನು ಅಪಾಯವಿಲ್ಲದೆ ರಕ್ಷಿಸಿಟ್ಟುಕೊಳ್ಳಬೇಕು ಕಾರ್ಯಜ್ಞರು ಅನುಸರಿಸಬೇಕಾದ ನೀತಿಯೇ ಇದು. ಮ

---

*ಕಪಿಗಳಿಗೂ ಕರಡಿಗಳಿಗೂ ಬಹಳ ಭೇಧವಿಲ್ಲದುದರಿಂದಲೇ, ಇಲ್ಲಿ ಜಾಂಬವಂತನನ್ನು ವಾನರೋತ್ತಮನೆಂದು ಸಂಬೋಧಿಸಿದುದಾಗಿ ಗ್ರಾಹ್ಯವು ಹಾಗೆಯೇ ಮುಂದೆ ಅಂಗದನನ್ನು ಭಲ್ಲೂಕಶ್ರೇಷ್ಠನೆಂದುಜಾಂಬವಂತನುಸ್ತುತಿಸುವುದಕ್ಕೂ ಇದೇ ಕಾರಣವು

ರಗಳ ಬೇರನ್ನು ಚೆನ್ನಾಗಿ ರಕ್ಷಿಸಿಟ್ಟರಲ್ಲವೇ ಅದರಿಂದ ಪುಷ್ಪಫಲಾದಿಗಳನ್ನು ಪಡೆಯಬಹುದು ಆ ಮೂಲವನ್ನೇ ಕದಲಿಸಿದಮೇಲೆ ವೃಕ್ಷಗಳಲ್ಲಿ ಯಾವ ಗುಣವುಂಟು? ಎಲೈ ಸತ್ಯಪರಾಕ್ರಮನೆ ! ಹಾಗೆಯೇ ಇಲ್ಲಿಯೂ ಈಗಿನ ಕಾರ್ಯಸಾಧನೆಗಾಗಿ ನೀನೇ ನಮಗೆ ಮುಖ್ಯನಿಯಾಮಕನಾಗಿ, ಬುದ್ಧಿಪೂರ್ವಕ್ರಮಗಳಲ್ಲಿ ಮೇಲೆನಿಸಿಕೊಂಡು, ಈ ಕಾರ್ಯಸಿದ್ಧಿಗೂ ಮೂಲಭೂತನಾಗಿರುವೆ ! ನೀನು ಲಂಕೆಗೆ ಹೋದಮೇಲೆ ನಮಗೆ ಸಿದ್ಧಿಯೆಲ್ಲಿಯೆದು? ಇದಲ್ಲದೆ ನೀನು ರಾಜಕುಮಾರನುಮಾತ್ರವೇ ಅಲ್ಲ! ಈಗ ನಮ್ಮೆಲ್ಲರಿಗೂ ನೀನೇ ರಾಜನಾಗಿಯೂ ಇರುವೆ ನಿನ್ನನ್ನಾಶ್ರಯಿಸಿಯೇ ನಾವೆಲ್ಲರೂ ಕಾರ್ಯಸಾಧನೆಯಲ್ಲಿ ಸಮರ್ಥರೆನಿಸಿಕೊಳ್ಳುವೆವು ನೀನಿಲ್ಲದಮೇಲೆ ನಮಗೆ ಯಾವ ಸಾಮರ್ಥ್ಯವುಂಟು " ಎಂದನು ಮಹಾಪ್ರಾಜ್ಞನಾದ ಜಾಂಬವಂತನು ಹೇಳಿದ ಮಾತನ್ನು ಕೇಳಿ, ಅಂಗದನು ಅವನನ್ನು ಕುರಿತು ,,ಎಲೈ ಪೂಜ್ಯನೆ ! ಈ ಸಮುದ್ರವನ್ನು ದಾಟುವುದಕ್ಕಾಗಿ ನಾನೂ ಪ್ರಯತ್ನಿಸದೆ, ಬೇರೊಬ್ಬ ವಾನರನೂ ಹೋಗಲಾರದೆ ಸುಮ್ಮನಿದ್ದಪಕ್ಷದಲ್ಲಿ, ಇನ್ನು ನಾವೆಲ್ಲರೂ ತಿರುಗಿ ಪ್ರಾಯೋಪವೇಶವನ್ನೇ ಮಾಡಬೇಕಾಗಿ ಬರುವುದಲ್ಲವೆ? ವಾನರೇಂದ್ರನಾದ ಸುಗ್ರೀವನ ಆಜ್ಞೆಯನ್ನೂ ನೆರವೇರಿಸದೆ, ಅವನು ಹೇಳಿದ್ದ ಕಾಲವನ್ನೂ ಮೀರಿ ನಾವು ಹಿಂತಿರುಗಿ ಕಿಷ್ಕಿಂಧೆಗೆ ಹೋದರೂ, ನಮಗೆ ನಮ್ಮ ಪ್ರಾಣಗಳನ್ನು ಉಳಿಸಿಕೊಳ್ಳುವುದೇನೋ ಅಸಂಭವವು ನಮ್ಮ ರಾಜನಾದ ಸುಗ್ರೀವನಿಗೆ ಅನುಗ್ರಹವುಂಟಾದರೂ ಮಿತಿಮೀರಿ ಹೋಗುವುದು ಕೋಪವುಂಟಾದರೂ ಮಿತಿಮೀರಿ ಹೋಗುವುದು ಅವನ ಆಜ್ಞೆಯನ್ನು ಮೀರಿ ನಾವು ಅವನಲ್ಲಿಗೆ ಹೋದರೆ ನಮ್ಮೆಲ್ಲರಿಗೂ ನಾಶವು ತಪ್ಪದು ಆದುದರಿಂದ ಸಮಸ್ತವಿಷಯಗಳನ್ನೂ ಬಲ್ಲ ನೀನೇ ನಿನ್ನಲ್ಲಿ ಚೆನ್ನಾಗಿ ಪರ್ಯಾಲೋಚಿಸಿ, ಈ ಕಾರ್ಯವು ಕೆಡದಂತೆ ಉಪಾಯವನ್ನು ಹುಡುಕಿ ಹೇಳು " ಎಂದನು ಇದನ್ನು ಕೇಳಿ ಜಾಂಬವಂತನು ಆ ಅಂಗದನನ್ನು ನೋಡಿ ,,ಎಲೈ ಯುವರಾಜನೆ! ನಿನು ಪ್ರಯತ್ನಿಸಿ ಬಂದ ಕಾರ್ಯಕ್ಕೆ ಲೋಪವೆಂಬುದೆಂದಿಗಾದರೂ ಉಂಟೆ? ನೀನು ಚಿಂತಿಸಬೇಡ ! ಈ ಕಾರ್ಯವನ್ನು ಸಾಧಿಸಬಲ್ಲ ಮಹಾವೀರನನ್ನು ಇದೋ ಈಗಲೇ ತೋರಿಸಿಕೊಡುವೆನು " ಎಂದನು. ವೃದ್ಧನಾದ ಜಾಂಬವಂತನು ಆ ವಾನರ

ರನ್ನು ಹೀಗೆಂದು ಸಮಾಧಾನಪಡಿಸಿ, ಪ್ರತ್ಯೇಕವಾದ ಒಂದು ಏಕಾಂತ ತಸ್ಥಳದಲ್ಲಿ ಸುಖವಾಗಿ ಕುಳಿತಿದ್ದ ಆಂಜನೇಯನ ಬಳಿಗೆ ಬಂದು,ಬಲಪರಾಕ್ರಮಗಳಿಂದ ಪ್ರಸಿದ್ಧವಾಗಿಯೂ, ಲಂಘನಶಕ್ತಿಯುಳ್ಳವರಲ್ಲಿ ಮೇಲಾಗಿಯೂ ಇರುವ ಆ ಮಾರುತಿಯನ್ನು ನೋಡಿ, ಸಮುದ್ರಲಂಘನಕಾರ್ಯಕ್ಕಾಗಿ ಅವನನ್ನು ಪ್ರೋತ್ಸಾಹಿಸತೊಡಗಿದನು ಇಲ್ಲಿಗೆ ಅರುವತ್ತೈದನೆಯ ಸರ್ಗವು.

ಜಾಂಬವಂತನು ಸಮುದ್ರಲಂಘನಕಾರ್ಯಕ್ಕಾಗಿ ಆಂಜನೇಯನನ್ನು ಪ್ರೇರಿಸಿದುದು

ಅಷ್ಟು ಲಕ್ಷವಾನರಸೈನ್ಯವೂ ದುಃಖಿತವಾಗಿರುವುದನ್ನು ನೋಡಿ, ಜಾಂಬವಂತನು ಏಕಾಂತದಲ್ಲಿ ಕುಳಿತಿದ್ದ ಆಂಜನೇಯನಬಳಿಗೆ ಬಂದು ಹೇಳುವನು ,,ಎಲೈ ಹನುಮಂತನೆ! ನೀನಾದರೋ, ಇಲ್ಲಿನ ಸಮಸ್ತವಾನರಸೈನ್ಯದಲ್ಲಿಯೂ, ಮೇಲಾದ ವೀರನೆನಿಸಿಕೊಂಡಿರುವೆ ಸಮಸ್ತಶಾಸ್ತ್ರಗಳಲ್ಲಿಯೂ ನಿಪುಣನೆನಿಸಿಕೊಂಡಿರುವೆ ಹೀಗಿದ್ದರೂ ಈಗ ನೀನು ಈ ಏಕಾಂತಸ್ಥಳದಲ್ಲಿ ಕುಳಿತು ಮಾತಾಡದಿರಬಹುದೆ? ನೀನು ತೇಜಸ್ಸಿನಿಂದಲೂ, ಬಲದಿಂದಲೂ, ಸಮಸ್ತವಾನರರಾಜನಾದ ಸುಗ್ರೀವನಿಗೂ, ಆ ರಾಮಲಕ್ಷ್ಮಣರಿಗೂ ಎಣೆಯೆನಿಸಿಕೂಂಡವನಲ್ಲವೆ? ಅರಿಷ್ಟನೇಮಿಯ ಮಗನಾಗಿ, ವಿನತೆಗೆ ಪುತ್ರನೆನಿಸಿಕೊಂಡು, ಮಹಾಬಲಾಢ್ಯನೆನಿಸಿ, ಗರುತ್ಮಂತನೆಂದು ಖ್ಯಾತಿಹೊಂದಿದ, ಪಕ್ಷಿರಾಜನೊಬ್ಬನುಂಟು ಮಹಾವೇಗಶಾಲಿಯಾಗಿಯೂ, ಯಶಸ್ವಿಯಾಗಿಯೂ ಇರುವ ಆತನು ಸಮುದ್ರದಲ್ಲಿರುವ ಸರ್ಪಗಳನ್ನು ಹಿಡಿದೆತ್ತುವಾಗ ನಾನು ಅನೇಕಾವರ್ತಿ ನೋಡಿರುವೆನು ಆ ಗರುತ್ಮಂತನ ರೆಕ್ಕೆಗಳಿಗೆ ಎಷ್ಟು ಬಲವುಂಟೋ, ಅಷ್ಟುಬಲವೂ ನಿನ್ನ ಬಾಹುಗಳಲ್ಲಿರುವುದು ನಿನ್ನ ಪರಾಕ್ರಮವಾಗಲಿ, ವೇಗವಾಗಲಿ, ಅವನ ಪರಾಕ್ರಮವೇಗಗಳಿಗೆ ಎಷ್ಟುಮಾತ್ರವೂ ಕಡಿಮೆಯಾದುದಲ್ಲ!ಎಲೈ ವಾನರೋತ್ತಮನೆ! ನಿನಗಿರುವ ಬಲವೂ, ನಿನಗಿರುವ ಬುದ್ಧಿಯೂ, ನಿನ್ನ ತೇಜಸ್ಸೂ, ನಿನ್ನ ಧೈರ್ಯವೂ ಈ ಪ್ರಪಂಚದಲ್ಲಿ ಬೇರೆ ಯಾವ ಭೂತರಾಶಿಗಳಲ್ಲಿಯೂ ಇಲ್ಲ ಹೀಗಿದ್ದರೂ ನಿನ್ನ ಮಹಿಮೆಯ

ನ್ನೀ ನೀನು ತಿಳಿಯದಿರುವೆಯಲ್ಲಾ ಎಲೈ ವತ್ಸ ಆಂಜನೇಯನೆ! ಅಪ್ಸರಸ್ತ್ರೀ ಯರಲ್ಲಿ ಮೇಲೆನಿಸಿಕೊಂಡ ಪುಂಜಿಕಸ್ಥಲಿಯೆಂಬ ದೇವಕನ್ಯಕೆಯೊಬ್ಬಳುಂಟು. ಅವಳ ಹೆಸರು ಮೂರುಲೋಕಗಳಲ್ಲಿಯೂ ಪ್ರಖ್ಯಾತವಾಗಿರುವುದು ರೂಪ ದಲ್ಲಿ ಆಕೆಗೆಣೆಯಾದ ಬೇರೆ ಹೆಂಗಸಿಲ್ಲ ಅವಳು ತಾಪದಿಂದ ಈ ಭೂಮಿ ಯಲ್ಲಿ ಮಹಾತ್ಮನಾದ ಕುಂಜರನೆಂಬ ವಾನರನಿಗೆ ಮಗಳಾಗಿ, ವಾನರಯೋ ನಿಯಲ್ಲಿ ಹುಟ್ಟಿ, ಕಾಮರೂಪಿಣಿಯಾಗಿ,ಅಂಜನೆಯೆಂಬ ಹೆಸರಿನಿಂದ ಖ್ಯಾತ ಳಾಗಿ, ಕೇಸರಿಯೆಂಬ ವಾನರನಿಗೆ ಪತ್ನಿಯಾದಳು ಅವಳು ವಾನರಿಯಾಗಿದ್ದರೂ, ಸರ್ವಾಂಗಸುಂದರಿಯಾಗಿ ಶೋಭಿಸುತಿದ್ದಳು ಇಷ್ಟಬಂದಂತೆ ರೂಪ ವನ್ನು ಮಾರಿಸಬಲ್ಲಳು ಒಮ್ಮೆ ಆಕೆಯ ಮನುಷ್ಯಸ್ತ್ರೀರೂಪವನ್ನು ಧರಿಸಿ, ರೂಪಯೌವನಗಳಿಂದ ಕೂಡಿ, ಬಗೆಬಗೆಯ ಪುಷ್ಪಾಭರಣಗಳನ್ನು ಧರಿಸಿ, ಮೇಲಾದ ಪಟ್ಟೆಮಡಿಯನ್ನುಟ್ಟು, ಮಳೆಗಾಲದ ಮೇಘರಾತಿಯಂತಿದ್ದ ನೀಲಪರ್ವತದ ಶಿಖರದಲ್ಲಿ ಸಂಚರಿಸಿತಿದ್ದಳು ಆಕೆಯು ಹೀಗೆ ವಿನೋದದಿಂದ ಸಂಚರಿಸುತ್ತಿರುವಾಗ, ವಾಯುವು ಮೆಲ್ಲಗೆ ಬೀಸಿ, ಅವಳು ಉಟ್ಟಿದ್ದ ಪೀತ ವಸ್ತ್ರವನ್ನು ಸ್ವಲ್ಪವಾಗಿನೇಲಕ್ಕೆ ಹಾರಿಸಿದನು ಈ ಸಂದರ್ಭದಲ್ಲಿ ವಾಯು ದೇವನು ಆವಳ ದುಂಡಾದ ತೊಡೆಗಳನ್ನೂ, ಉಬ್ಬಿದ ಸ್ತನಗಳನ್ನೂ, ಅಂದ ವಾದ ಮುಖವನ್ನೂ ಚೆನ್ನಾಗಿ ನೋಡಿಬಿಟ್ಟನು ವಿಸ್ತಾರವಾದ ನಿತಂಬದಿಂ ದಲೂ, ಸಣ್ಣನಡುವಿನಿಂದಲೂ ಶೋಭಿಸುತ್ತ, ಸರ್ವಾಂಗಸುಂದರಿಯಾಗಿ ದ್ದ ಆಕೆಯ ದೇಹದ ಸೊಬಗನ್ನು ನೋಡಿಡೊಡನೆ ವಾಯುವಿಗೆ ಕಾಮಾತುರವುಂಟಾಯಿತು ಆ ಕಾಮದಿಂದ ಮರುಳಾದ ವಾಯುದೇವನು ಪುರುಷರೂಪದಿಂದ ತನ್ನ ಉದ್ದವಾದ ತೋಳುಗಳಿನ್ನು ನೀಡಿ, ಕಾಮವಶದಿಂದ ಮೈ ಮರೆತು, ಆಕೆಯನ್ನಪ್ಪಿಕೊಂಡನು ಇದನ್ನು ನೋಡಿ, ನಿರ್ದೋಷವಾದ ನಡ ತೆಯುಳ್ಳ ಆಕೆಯು ಬೆಜ್ಜರಬಿದ್ದವಳಾಗಿ,ಕೋಪದಿಂದ ''ಆಹಾ! ಏಕಪತ್ನೀ ವ್ರತದಿಂದಿರುವ ನನ್ನ ಪಾತಿವ್ರತ್ಯವನ್ನು ಹೀಗೆ ಕೆಡಿಸುವುದಕ್ಕೆ ಪ್ರಯತ್ನಿ ಸುವವನಾವನು '' ಎಂದು ಕೂಗಿದಳು ಹೀಗೆ ಅಂಜನೆಯು ಕೂಗಿಕೊಳ್ಳು ವುದನ್ನು ನೋಡಿ, ವಾಯುದೇವನು ಆಕೆಯನ್ನು ಸಮಾಧಾನಪಡಿಸುತ್ತಾ ಪ್ರ ತ್ಯುತ್ತರವನ್ನು ಹೇಳುವನು. ''ಎಲೈಸುಭಗೆ! ನಾನು ಪಾತಿವ್ರತ್ಯದಿಂದ ಪ್ರ

ಸಿದ್ಧಿಹೊಂದಿದ ನಿನ್ನನ್ನು ಆಲಿಂಗಿಸಿದದಂತೆ, ಮನಸ್ಸಿನಿಂದಲೇ ವರಿಸಿದೆ ನೇಹೊರತು ಬೇರೆಯಲ್ಲ ಈಗಲೂ ನಿನ್ನ ಪಾತಿವ್ರತ್ಯಕ್ಕೆ ಭಂಗವುಂಟಾಗುವಂತೆನಿನ್ನನ್ನು ಹಿಂಸಿಸುವವನಲ್ಲ ಇದರಿಂದನಿನಗೆ ಮುಂದೆಶ್ರೇಯಸ್ಸುಂಟು ವೀರ್ಯದಲ್ಲಿಯೂಬುದ್ಧಿಯಲ್ಲಿಯೂ ಅಸಮಾನಕಾದ ಪುತ್ರನೊಬ್ಬನು ನಿನಗೆ ಹುಟ್ಟುವನು ಅವನು ಮಹಾಧೀರನಾಗಿಯೂ ಮಹಾತೇಜಸ್ವಿಯಾಗಿಯೂ, ಲೋಕೋತ್ತರವಾದ ಬಲಪರಾಕ್ರಮಗಳುಳ್ಳವನಾಗಿಯೂ ಖ್ಯಾತಿಹೊಂದಿರವನು ಹಾರುವುದರಲ್ಲಿಯೂ ನೆಗೆಯುವುದರಲ್ಲಿಯೂ ನನಗೆ ಸಮಾನನಾದ ಶಕ್ತಿಯುಳ್ಳವನಾಗುವನು ನೀನು ಚಿಂತಿಸಬೇಡ" ಎಂದನು. ಎಲೈ ಆಂಜನೇಯನೆ! ಹೀಗೆ ಹೇಳಿದ ವಾಯುದೇವನ ಮಾತನ್ನು ಕೇಳಿ, ನಿನ್ನ ತಾಯಿಯಾದ ಅಂಜನೆಗೆ ಬಹಳ ಸಂತೋಷವುಂಟಾಯಿತು ಅಲ್ಲಿನ ಗುಹೆಯಲ್ಲಿಯೇ ವಾನರ ಶ್ರೇಷ್ಠನಾದ ನಿನ್ನನ್ನು ಹಡೆದಳು ನೀನು ಹುಟ್ಟಿದೊಡನೆ ಆಕಾಶದಲ್ಲಿ ಸೂರ್ಯಬಿಂಬವು ಉದಿಸಿದುದನ್ನುನೋಡಿ ಆ ಮಹಾರಣ್ಯದಲ್ಲಿ ಬೆಳೆದ ಒಂದು ದೊಡ್ಡಹಣ್ಣೆಂಬ ಭ್ರಾಂತಿಯಿಂದ ಅದನ್ನು ಹಿಡಿಯಬೇಕೆಂದು ಮೇಲೆ ಹಾರಿದೆ ಎಲೆ ಮಹಾಕಪೀ! ನೀನು ಆಕಾಶದಲ್ಲಿ ಮುನ್ನೂರುಯೋಜನಗಳದೂರಕ್ಕೆ ಹಾರಿ, ಸೂರ್ಯನ ತೇಜಸ್ಸಿನ ಬೇಗೆಗೆ ಸಿಕ್ಕಿದರೂ ಸ್ವಲ್ಪಮಾತ್ರವೂ ಬಳಲಲಿಲ್ಲ ನೀನು ಹೀಗೆ ಅಂತರಿಕ್ಷದಲ್ಲಿ ಅತಿವೇಗದಿಂದ ಅಷ್ಟುದೂರಕ್ಕೆ ಬಂದುದನ್ನುನೋಡಿ, ಬುದ್ಧಿಶಾಲಿಯಾದ ದೇವೇಂದ್ರನು, ನಿನ್ನಿಂದ ಲೋಕಕ್ಕೆ ಏನಪಾಯವುಂಟಾಗಬಹುದೋ ಎಂದುಶಂಕಿಸಿ, ಕೋಪಗೊಂಡು ನಿನ್ನನ್ನು ತಡೆಯುವುದಕ್ಕಾಗಿ ತನ್ನ ವಜ್ರಾಯುಧವನ್ನು ನಿನ್ನಮೇಲೆ ಬೀಸಿದನು ಆ ಪ್ರಹಾರದಿಂದ ನೀನು ಆ ಪರ್ವತಶಿಖರದಲ್ಲಿ ಬಿದ್ದಾಗ, ನಿನ್ನ ಎಡದಹನುವು ಆ ಕಲ್ಲುಬಂಡೆಗೆ ತಗುಲಿ ಊಬುಕೊಂಡಿತು ಅದುವೊದಲು ನಿನಗೆ ಹನುಮಂತನೆಂಬ ಹೆಸರು ಪ್ರಸಿದ್ಧವಾಯಿತು! ಹೀಗೆ ನಿನಗೆ ಇಂದ್ರನು ಮಾಡಿದ ತಿರಸ್ಕಾರವನ್ನುನೋಡಿ ವಾಯುದೇವನಿಗೆ ಮಿತಿಮೀರಿದ ಕೋಪವುಂಟಾಯಿತು. ಈ ಮೂರುಲೋಕವನ್ನೂ ಹಾಳುಗೆಡಿಸಬೇಕೆಂಬ ಉದ್ದೇಶದಿಂದ ಎಲ್ಲೆಲ್ಲಿಯೂ ತನ್ನ ಸಂಚಾರವನ್ನೇ ನಿಲ್ಲಿಸಿಬಿಟ್ಟನು ದೇವತೆಗಳೆಲ್ಲರೂ ಭಯದಿಂದ ಬೆಜ್ಜರಬಿದ್ದರು ಮೂರುಲೋಕವೂ ತತ್ತರಿಸಿತು. ಆಗ ಸಮಸ್ತದೇವತೆಗ

ಳೂ ಸೇರಿಬಂದು ವಾಯುದೇವನಿಗೆ ಕೋಪಸಮಾಧಾನವನ್ನು ಮಾಡತೊಡಗಿದರು ಇದರಿಂದ ವಾಯುವು ಪ್ರಸನ್ನನಾದಮೇಲೆ ಬ್ರಹ್ಮನು ಬಾಲನಾದ ನಿನ್ನಬಳಿಗೆ ಬಂದು ''ನಿನಗೆ ಎಂದಿಗೂ ಶಸ್ತ್ರದಿಂದ ಸಾವಿಲ್ಲದಿರಲಿ'' ಎಂದು ವರವನ್ನು ಕೊಟ್ಟನು ಎಲೈ ಸತ್ಯವಿಕ್ರಮನೆ! ಆಗ ದೇವೇಂದ್ರನು ನಿನ್ನಬಳಿಗೆ ಬಂದು, ಮಹಾಘೋರವಾದ ತನ್ನ ವಜ್ರಾಯುಧದ ಪೆಟ್ಟಿನಿಂದಲೂ ನಿನಗೆ ನೋವಿಲ್ಲದುದನ್ನು ನೋಡಿ ಆಶ್ಚರ್ಯಪಡುತ್ತ, ನಿನ್ನಲ್ಲಿ ಪ್ರೀತನಾಗಿ ''ನಿನಗೆ ಸ್ವೇಚ್ಛಾಮರಣಶಕ್ತಿಯುಂಟಾಗಲಿ'' ಎಂದು ಸರ್ವೋತ್ತಮವಾದ ಮತ್ತೊಂದುವರವನ್ನು ಕೊಟ್ಟನು ಎಲೈ ವಾನರವೀರನೆ! ಹೀಗೆ ಭಯಂಕರ ಪರಾಕ್ರಮವುಳ್ಳ ನೀನು ಕೇಸರಿಯ ಕ್ಷೇತ್ರದಲ್ಲಿ ಹುಟ್ಟಿದವನು ವಾಯುದೇವನಿಗೆ ಔರಸಪುತ್ರನು ತೇಜಸ್ಸಿನಲ್ಲಿಯೂ, ಲಂಘನದಲ್ಲಿಯೂ, ನಿನ್ನ ತಂದೆಯಾದ ವಾಯುವಿಗೆ ಸಾಟಿಯಾದವನು ಸಾಮರ್ಥ್ಯದಲ್ಲಿಯೂ ಪರಾಕ್ರಮದಲ್ಲಿಯೂ ನಿನ್ನನ್ನು ಬೇರೊಬ್ಬ ಪಕ್ಷಿರಾಜನೆಂದೇ ಹೇಳಬಹುದು ನಮಗಾದರೋ ಈಗ ಪ್ರಾಣಗಳನ್ನುಳಿಸಿಕೊಳ್ಳುವುದೇ ಕಷ್ಟವಾಗಿ ತೋರಿರುವುದರಿಂದ, ಈಗ ನೀನೇ ನಮ್ಮೆಲ್ಲರಿಗೂ ಪ್ರಾಣದಾನವನ್ನು ಮಾಡಿ ಕಾಪಾಡಬೇಕು ಎಲೈವತ್ಸನೆ! ವಿಷ್ಣುದೇವನು ತ್ರಿವಿಕ್ರಮಾವತಾರವನ್ನು ಮಾಡಿದಾಗ, ನಾನು ಪರ್ವತಾರಣ್ಯಗಳಿಂದ ತುಂಬಿದ ಈ ಸಮಸ್ತ ಭೂಮಂಡಲವನ್ನೂ ಇಪ್ಪತ್ತೊಂಬಾವರ್ತಿ ಪ್ರದಕ್ಷಿಣಮಾಡಿ ಬಂದೆನು ಇಷ್ಟೇ ಅಲ್ಲದೆ ಮೊದಲು ಅಮೃತಮಥನದಲ್ಲಿ ಸಮುದ್ರವನ್ನು ಕಡೆಯುವುದಕ್ಕಾಗಿ ದೇವತೆಗಳು ಹೇಳಿ ಕಳುಹಿಸಿದಮೇರೆಗೆ, ನಾನು ನಾನಾವಿಧಮೂಲಿಕೆಗಳನ್ನು ಸಂಗ್ರಹಿಸಿತಂದೆನು ಆ ಓಷಧಿಗಳನ್ನು ಹಾಕಿ ಕಡೆದುದರಿಂದಲೇ ಸಮುದ್ರದಿಂದ ಅಮೃತವು ಹುಟ್ಟಿತು ಆಗ ನನಗೆ ಅಧಿಕವಾದ ಬಲವಿದ್ದಿತು ಹಾಗಿದ್ದ ನಾನು ಈಗ ವೃದ್ಧನಾದುದರಿಂದ ನನ್ನ ಶಕ್ತಿಯು ಕುಂದಿತು ಈ ಕಾಲದಲ್ಲಿ ನಮ್ಮಲ್ಲಿ ನೀನೊಬ್ಬನೇ ಸಮಸ್ತಶಕ್ತಿಗಳಿಂದಲೂ ಪೂರ್ಣನಾದವನು ಆದುದರಿಂದ ಈಗ ನಿನ್ನ ಪರಾಕ್ರಮವನ್ನು ಹೊರಪಡಿಸು ಹಾರುವುದರಲ್ಲಿ ನಿನಗೆಣೆಯಾದವರು ಬೇರೊಬ್ಬರೂ ಇಲ್ಲವು ಈ ವಾನರಸೈನ್ಯವೆಲ್ಲವೂ ನಿನ್ನ ವೀರ್ಯವನ್ನು ನೋಡಬೇಕೆಂದೇ ಆತುರಪಡುತ್ತಿರುವುವು ಎಲೈ ವಾನರಸಿಹ್ಮನೆ! ಏಳು! ಈ

ಸಮುದ್ರವನ್ನು ಲಂಘಿಸು ನಿನಗಿರುವ ಗಮನಶಕ್ತಿಯು ಯಾವಭೂತಗಳಿಗೂ ಇಲ್ಲವಲ್ಲವೆ? ಈ ಸಮಸ್ತವಾನರರೂ ದುಃಖಿಸುವುದನ್ನು ಕಾಣೆಯಾ? ಈಗಲೂ ನೀನು ಉಪೇಕ್ಷಿಸಬಹುದೆ? ಪೂರ್ವದಲ್ಲಿ ವಿಷ್ಣುದೇವನು ಬಲಿಚಕ್ರವರ್ತಿಯು ಕೊಟ್ಟ ಮೂರಡಿಯ ನೆಲವನ್ನಾಕ್ರಮಿಸಿದಂತೆ ನಿನ್ನವೇಗವನ್ನು ತೋರಿಸಿ ಸಮುದ್ರವನ್ನು ಲಂಘಿಸು" ಎಂದನು ಇದನ್ನು ಕೇಳಿ ಪ್ರಸಿದ್ಧವೇಗವುಳ್ಳ ಹನುಮಂತನು ಉತ್ಸಾಹಗೊಂಡವನಾಗಿ, ಆ ಸಮಸ್ತವಾನರಸೈನ್ಯವೂ ಸಂತೋಷಪಡುವಂತೆ, ಆಗಲೇ ತನ್ನ ದೇಹವನ್ನು ಅತ್ಯದ್ಭುತವಾಗಿ ಬೆಳಸಿಕೊಂಡನು ಇಲ್ಲಿಗೆ ಅರುವತ್ತಾರನೆಯ ಸರ್ಗವು

ಹನುಮಂತನು ತನ್ನ ಉತ್ಪತ್ತಿಯನ್ನೂ, ತನ್ನ ಒಲಪರಾಕ್ರಮಗಳನ್ನೂ ಎತ್ತಿಹೇಳಿ, ವಾನರರಿಗೆ ಉತ್ಸಾಹವನ್ನು ಹುಟ್ಟಿಸಿದುದು, ಸಮುದ್ರವನ್ನು ಹಾಟುವುದಕ್ಕಾಗಿ ಮಹೇಂದ್ರಪರ್ವತವನ್ನು ಏರಿದುದು

ಹೀಗೆ ಸಮುದ್ರದ ನೂರುಯೋಜನಗಳನ್ನೂ ಪೂರ್ಣವಾಗಿ ಹಾರಬೇಕೆಂದು,ಆಕಾರದಿಂದಲೂ,ವೀರ್ಯದಿಂದಲೂ, ಮೇಲೆಮೇಲೆ ಉಬ್ಬುತ್ತಿರುವ ವಾನರೋತ್ತಮನಾದ ಆ ಆಂಜನೇಯನನ್ನು ಕಂಡೊಡನೆ, ಅಲ್ಲಿದ್ದ ಸಮಸ್ತವಾನರರೂ ತಮ್ಮ ಚಿಂತೆಯನ್ನು ಬಿಟ್ಟು ಸಂತೋಷದಿಂದ ಉಕ್ಕುತಿದ್ದರು ಒಬ್ಬೊಬ್ಬರೂ ಸಿಹ್ಮನಾದವನ್ನು ಮಾಡತೊಡಗಿದರು ಒಬ್ಬೊಬ್ಬರೂ ಮುಂದೆಬಂದು ಬಲಾಢ್ಯನಾದ ಹನುಮಂತನನ್ನು ಸ್ತುತಿಸುತಿದ್ದರು ಒಬ್ಬೊಬ್ಬರ ಮನಸ್ಸಿನಲ್ಲಿಯೂ, ಮಿತಿಮೀರಿದ ಹರ್ಷವು ನೆಲೆಗೊಂಡಿತು ಎಲ್ಲರೂ ಆಶ್ಚರ್ಯದಿಂದ ಅವನಸುತ್ತಲೂಸೇರಿ,ಪೂರ್ವದಲ್ಲಿ ತ್ರಿವಿಕ್ರಮಾವತಾರವನ್ನೆತ್ತಿ ಸಮಸ್ತಲೋಕಗಳನ್ನೂ ಮೂರಡಿಗಳಿಂದ ಅಳೆಯುವುದಕ್ಕೆ ಪ್ರಯತ್ನಿಸಿದ ಶ್ರೀಮಹಾವಿಷ್ಣುವನ್ನು ಸುತ್ತಿನಿಂತು ಪ್ರಜೆಗಳು ಆಶ್ಚರ್ಯದಿಂದ ಸ್ತಬ್ಧರಾಗಿ ನೋಡುತಿದ್ದಂತೆ, ಸ್ತಬ್ಧರಾಗಿ ನೋಡುತಿದ್ದರು ವಾನರರು ಸ್ತೋತ್ರಮಾಡುತಿದ್ದಷ್ಟು,ಆ ಹನುಮಂತನಿಗೆ ದೇಹವೂ, ವೀರ್ಯವೂ, ಮೇಲೆಮೇಲೆ ಉಬ್ಬಿಬರುತಿತ್ತು ಅವನ ಮನಸ್ಸಿನ ಸಂತೋಷವೂ ಈಕ್ಕಿಬರುತಿತ್ತು ಆ ಸಂ

ತೋಷದಿಂದ ಬಾಲವನ್ನಾಡಿಸುತ್ತ, ಮೇಲೆಮೇಲೆ ಬೆಳೆಯುತ್ತಲೇ ಇದ್ದನು. ವೃದ್ಧರಾದ ವಾನರರೆಲ್ಲರೂ ಸ್ತೋತ್ರಮಾಡುತ್ತಿದ್ದಾಗ ಅವನತೇಜಸ್ಸು ಮೇಲೆಮೇಲೆ ವೃದ್ಧಿಹೊಂದಿತು. ಅವನ ಆಕಾರವು ಎಣೆಯಿಲ್ಲದಂತೆ ಕಾಣಿಸಿತು. ಪರ್ವತಗುಹೆಯಲ್ಲಿ ಉತ್ಸಾಹದಿಂದುಬ್ಬಿಬಳೆಯುವ ಸಿಹ್ಮದಂತೆ ಈತನು ವಿಜೃಂಭಿಸುತಿದ್ದನು. ಹೀಗೆ ಉತ್ಸಾಹದಿಂದುಬ್ಬುತ್ತಿರುವ ಧೀಮಂತನಾದ ಆ ಹನುಮಂತನಮುಖವು, ಕೆಂಪಗೆಕಾಯಿಸಿದ ಹುರಿಯುವ ಮಡಕೆಯಂತೆಯೂ, ಹೊಗೆಯಿಲ್ಲದ ಬೆಂಕಿಯಂತೆಯೂ ಜ್ವಲಿಸುತಿತ್ತು. ಆಗ ಹನುಮಂತನು ಸಂತೋಷದಿಂದುಬ್ಬಿದ ರೋಮಾಂಚವುಳ್ಳವನಾಗಿ, ವಾನರರ ಮಧ್ಯದಲ್ಲಿ ನಿಂದ್ದುನಿಂತು, ಅಲ್ಲಿದ್ದ ವೃದ್ಧರಾದ ವಾನರರನ್ನು ನಮಸ್ಕರಿಸಿ, ಈ ಮಾತನ್ನು ಹೇಳುವನು, ''ಎಲೈ ಪೂಜ್ಯರೆ! ಅಗ್ನಿಗೆ ಸಖನಾದ ವಾಯುದೇವನು ಎಣೆಯಿಲ್ಲದ ಶಕ್ತಿಯುಳ್ಳವನು ಅಸಾಧಾರಣವಾದ ಗಮನವೇಗವುಳ್ಳವನು ಸಾಟಿಯಿಲ್ಲದ ಬಲವುಳ್ಳವನು ನೆಲವನ್ನು ಮುಟ್ಟದೆ ಆಕಾಶದಲ್ಲಿಯೇ ಸಂಚರಿಸುತಕ್ಕವನೆಂಬುದನ್ನು ಕಾಣಿರಾ! ಶೀಘ್ರವೇಗವುಳ್ಳ ಮಹಾತ್ಮನಾದ ಆ ವಾಯುವಿಗೆ ನಾನು ಪುತ್ರನಲ್ಲವೆ? ಇನ್ನು ಹಾರುವುದರಲ್ಲಿ ನನಗೆ ಸಮಾನರಾದವರು ಬೇರೆಯಾರುಂಟು? ವಿಸ್ತಾರವಾಗಿಯೂ, ಆಕಾಶವನ್ನೊದೆಯುವಂತೆ ಮಹೋನ್ನತವಾಗಿಯೂ ಇರುವ ಮಹಾಮೇರುಪರ್ವತವನ್ನು ಕೂಡ, ನಾನು ನಡುವೆ ಎಲ್ಲಿಯೂ ವಿಶ್ರಾಂತಿಯನ್ನು ತೆಗೆದುಕೊಳ್ಳದೆ ಸಹಸ್ರಾವರ್ತಿಯಾದರೂ ಸುತ್ತಿಬರಬಲ್ಲೆನು. ನನ್ನತೋಳಿನಬಲದಿಂದಲೇ ಈ ಮಹಾಸಮುದ್ರಜಲವೆಲ್ಲವನ್ನೂ ಮೇಲೆತ್ತಿ ಚೆಲ್ಲಿ, ಅನೇಕ ಪರ್ವತಗಳಿಂದಲೂ, ನದಿಗಳಿಂದಲೂ, ಮಡುಗಳಿಂದಲೂ ತುಂಬಿದ ಈ ಸಮಸ್ತಲೋಕವನ್ನೂ ಆ ನೀರಿನಲ್ಲಿ ತೇಲಾಡಿಸಬಲ್ಲೆನು. ಈಗ ನನ್ನ ತೊಡೆಗಳ, ಮತ್ತು ಮೊಳಕಾಲುಗಳ ವೇಗದಿಂದಲೇ ಮಹಾಗ್ರಾಹಗಳಿಂದ ಕೂಡಿದ ಈ ಸಮುದ್ರವನ್ನೂ ಕೂಡ ಉಲ್ಲೋಲಕಲ್ಲೋಲವಾಗುವಂತೆ ತುಳುಕಾಡಿಸಿ, ಅದರಲ್ಲಿರುವ ತಿಮಿತಿಮಿಂಗಲಾದಿಸಮಸ್ತಪ್ರಾಣಿಗಳೂ ಆಕಾಶದಲ್ಲಿ ತತ್ತರಿಸುವಂತೆ ಮಾಡುವೆನು. ನೋಡಿರಿ! ಆಕಾಶದಲ್ಲಿ ಗರುಡನು ತನ್ನ ಆಹಾರಾರ್ಥವಾಗಿ ಸರ್ಪಗಳನ್ನು ಹಿಡಿಯಬೇಕೆಂದು ಮಹಾವೇಗದಿಂದ ತಿರುಗು

ತ್ತಿರುವಾಗ, ಆತನ ಒಂದು ಸುತ್ತಿಗೆ ಸಾವಿರಸುತ್ತಿನಂತೆ ನಾನು ಆವ ನನ್ನು ಪ್ರದಕ್ಷಿಣಮಾಡಬಲ್ಲವನೆಂದುತಿಳಿಯಿರಿ ಸೂರ್ಯನು ಉದಯಪರ್ವತದಿಂದ ಹೊರಡುವಾಗಲೇ ಅವನೊಡನೆ ಹೊರಟು, ಅವನಿಗೆ ಮೊದಲೇ ಅಸ್ತಗಿರಿಯನ್ನು ಸೇರಿ, ಅಸೂರ್ಯನು ಆಕಾಶಮಧ್ಯದಲ್ಲಿ ಕಾಣುವಾಗಲೇ ನಾನು ಹಿಂತಿರುಗಿಬಂದು ಅವನನ್ನಿ ದಿರುಗೊಳ್ಳಬಲ್ಲೆನು ಆ ಸೂರ್ಯನನ್ನಿ ದಿರುಗೊಂಡಮೇಲೆಯೂ ನಾನು ನೆಲವನ್ನು ಸೋಕಿ ವಿಶ್ರಮಿಸಿಕೊಳ್ಳದೆ ಮೊದಲಿನ ಮಹಾವೇಗದಿಂದಲೇ ತಿರುಗಿ ಮತ್ತೊಂದಾವರ್ತಿ ಸೂರ್ಯನನ್ನಿ ದಿರುಗೊಳ್ಳಬಲ್ಲೆನು ಇಷ್ಟೇ ಇಲ್ಲದೆ ಆಕಾಶದಲ್ಲಿ ಸಂಚರಿಸತಕ್ಕ ಬೇರೆಯಾವ ಭೂತಗಳನ್ನಾಗಲಿ, ಬೇರೆಯಾವ ಗ್ರಹನಕ್ಷತ್ರಗಳನ್ನಾಗಲಿ ವೇಗದಲ್ಲಿ ನಾನು ಮೀರಿಹೋಗಬಲ್ಲೆನು ಎಲೈ ವಾನರರೇ! ಈಗ ನಾನು ಆಕಾಶದಲ್ಲಿ ಹಾರುತ್ತಿರುವಾಗ ಆ ವೇಗದಿಂದಲೇ ಈ ಸಮುದ್ರವನ್ನು ಶೋಷಿಸಿಬಿಡುವೆನು ನೋಡಿರಿ ! ಭೂಮಿಯನ್ನೂ ಭೇದಿಸಿಬಿಡುವೆನು! ಪರ್ವತಗಳನ್ನೂ ಚೂರ್ಣವಾಗಿ ಮಾಡುವೆನು ನಾನು ಹಾರುವಾಗ ನನ್ನ ತೋಡೆಯ ವೇಗದಿಂದ ಈ ಸಮುದ್ರವೇ ನನ್ನ ಹಿಂದೆ ಹೊರಟು ಬರಬೇಕಾಗುವುದೆಂದು ತಿಳಿಯಿರಿ ಈಗ ನಾನು ಸಮುದ್ರವನ್ನು ಲಂಘಿಸುವುದಕ್ಕಾಗಿ ಆಕಾಶಕ್ಕೆ ಹಾರಿದಕ್ಷಣವೇ, ನನ್ನ ವೇಗದಿಂದ ಇಲ್ಲಿನ ಕಾಡುಗಳಲ್ಲಿರುವ ಲತೆಗಳಿಂದಲೂ, ವೃಕ್ಷಗಳಿಂದಲೂ, ಬಗೆಬಗೆಯ ಪುಷ್ಪಗಳು ನನ್ನಹಿಂದೆ ಸೆಳೆಯಲ್ಪಡುವುದನ್ನು ನೋಡುವಿರಿ ಈ ಪುಷ್ಪಗಳಿಂದ ಆಕಾಶಗಲ್ಲಿ ನಾನು ಹೋಗುವ ದಾರಿಯು ನಕ್ಷತ್ರಗಳಿಂದ ತುಂಬಿದ ಛಾಯಾಪಥ (ಸ್ವಾತೀನಕ್ಷತ್ರಮಾರ್ಗ)ದಂತೆ ಕಾಣುವುದನ್ನು ನೋಡಿರಿ! ಎಲೈ ವಾನರೋತ್ತಮರೆ! ನಾನು ಇಲ್ಲಿಂದ ಆಕಾಶಕ್ಕೆ ನೆಗೆಯುವದನ್ನಾಗಲಿ ಹಾರಿಹೋಗುವದನ್ನಾಗಲಿ, ಸಮುದ್ರದ ಆ ದಕ್ಷಿಣತೀರದಲ್ಲಿ ಇಳಿಯವುದನ್ನಾಗಲಿ, ಸಮಸ್ತಭೂತಗಳೂ, ಎಷ್ಟಾಶ್ಚರ್ಯದಿಂದ ನೋಡುವುವೆಂಬುದನ್ನು ನಿಮ್ಮ ಕಣ್ಣಾರೆ ನೀವೇನೊಡಬಹುದು ಈಗ ನಾನು ಆಕಾಶದಲ್ಲಿ ಹೋಗುವಾಗ ಮಹಾಮೇಘದಂತೆ ಗಗನಸ್ಥಲವೆಲ್ಲವನ್ನೂ ವ್ಯಾಪಿಸಿ, ಆ ಆಕಾಶವನ್ನೇ ನುಂಗಿಬಿಡುವಂತೆ ಕಾಣುವುದನ್ನು ನೀವೇ ನೋಡುವಿರಿ ! ಹೆಚ್ಚಾ

ಗಿ ಹೇಳಿದುದರಿಂದೇನು? ಈಗ ನಾನು ಮೇಘುಗಳನ್ನು ಉರುಬಿಬಿಡುವೆನು ಪರ್ವತಗಳನ್ನು ನಡುಗಿಸುವೆನು ನಾನು ಎಚ್ಚರಿಕೆಯಿಂದ ಹಾರುವಾಗ ಈ ಸಮುದ್ರವನ್ನೇ ಕ್ಷೋಭೆಹೊಂದಿಸುವೆನು ಮುಖ್ಯವಾಗಿ ನನಗಿರುವ ಶಕ್ತಿಯು ಗರುಡನೊಬ್ಬನು, ವಾಯುದೇವನೊಬ್ಬನು ; ಇವರಿಬ್ಬರಿಗೆ ಹೊರತು ಬೇರೂಬ್ಬರಿಗೂ ಇಲ್ಲವು ಮಹಾವೇಗವುಳ್ಳ ಗರುಡನನ್ನೂ, ವಾಯುವನ್ನೂ ಬಿಟ್ಟರ ಆಕಾಶದಲ್ಲಿ ಹಾರುವಾಗ ನನ್ನನ್ನು ಹಿಂಬಾಲಿಸತಕ್ಕ ಶಕ್ತಿಯುಳ್ಳ ಭೂತವು ಈ ಪ್ರಪಂಚದಲ್ಲಿ ಬೇರೊಂದೂ ಇಲ್ಲವು ಎವೆಮುಚ್ಚುವುದರೊಳಗಾಗಿಯೇ ನಾನು ನಿರಾಧಾರವಾದ ಈ ಆಕಾಶದಲ್ಲಿ ಮೇಘುದಿಂದ ಮಿಂಚು ಬರುವಂತೆ, ಹಾರಿಬರುವುದನ್ನು ನೋಡಿರಿ ! ಪೂರ್ವದಲ್ಲಿ ತ್ರಿವಿಕ್ರಮಾವತಾರವನ್ನೆತ್ತಿದ ಮಹಾವಿಷ್ಣುವಿನ ರೂಪದಂತೆಯೇ, ಈಗ ಈ ಸಮುದ್ರಲಂಘನಕಾಲದಲ್ಲಿ ನನ್ನ ರೂಪವು ಕಾಣುವುದನ್ನು ನೋಡಿರಿ' ಎಲೈ ವಾನರರ' ಇನ್ನು ನೀವು ಸಂತೋಷದಿಂದಿರಬಹುದು. ನಾನು ತಪ್ಪದೆ ಸೀತೆಯನ್ನು ನೋಡಿ ಬರುವೆನು ನನ್ನ ಬುದ್ಧಿಯೇ ನನಗೆ ಆ ಕಾರ್ಯಸಿದ್ಧಿಯನ್ನು ಸೂಚಿಸುತ್ತಿರುವುದು ನನ್ನ ಮನಸ್ಸಿಗೆ ದೃಢವಾದ ನಂಬಿಕೆಯಿರುವುದು ನನ್ನ ದೇಹದಲ್ಲಿ ನಡೆಯತಕ್ಕ ಶುಭನಿಮಿತ್ತಗಳೂ ಮುಂದಿನ ಕಾರ್ಯಸಿದ್ಧಿಯನ್ನು ವ್ಯಕ್ತವಾಗಿ ಸೂಚಿಸುತ್ತಿರುವುವು ನಾನು ಸೀತೆಯನ್ನು ನೋಡಿಯೇ ಬರುವೆನು ನೀವು ಚಿಂತಿಸಬೇಕಾದುದಿಲ್ಲ ಎಲೈ ಕಪಿವೀರರೆ' ನೀವು ನೂರುಯೋಜನಗಳನ್ನು ಹೇಳಿದಿರಿಲ್ಲವೆ? ಹತ್ತು ಸಹಸ್ರಯೋಜನಗಳನ್ನಾದರೂ ನಾನು ದಾಟಬಲ್ಲೆನೆಂದು ಈಗ ನನ್ನ ಮನಸ್ಸಿಗೆ ತೋರಿರುವುದು ನಾನು ವೇಗದಲ್ಲಿ ಗರುತ್ಮಂತನಿಗೂ, ನನ್ನ ತಂಡೆಯಾದ ವಾಯುದೇವನಿಗೂ ಸಾಟಿಯೆಂದು ಮೊದಲೇ ಹೇಳಿರುವೆನಲ್ಲವೆ? ವಜ್ರಹಸ್ತನಾದ ಇಂದ್ರನನ್ನಾದರೂ, ಸ್ವಯಂಭುವಾದ ಬ್ರಹ್ಮನನ್ನಾದರೂ ನಾನು ನನ್ನ ಪರಾಕ್ರಮದಿಂದ ಜಯಿಸಿ, ಅವರ ಕೈಯಿಂದ ಅಮೃತವನ್ನು ಕಿತ್ತುತರಬಲ್ಲೆನು.ಇನ್ನು ಹೆಚ್ಚು ಮಾತುಗಳಿಂದೇನು? ಈಗ ರಾವಣನಿಗೂ, ಸೀತೆಗೂ ವಾಸಸ್ಥಾನವಾದ ಆ ಲಂಕೆಯನ್ನೇ ಇಲ್ಲಿಗೆ ತ್ತುತರಬೇಕೆಂಬ ಬುದ್ಧಿಯು ನನಗೆ ಹುಟ್ಟಿರುವುದು" ಎಂದನು.ಹೀಗೆ ಎಣೆಯಿಲ್ಲದ ತೇಜಸ್ಸುಳ್ಳವನಾಗಿ ಗರ್ಜಿಸುತ್ತಿರುವ ವಾನರ

ಶ್ರೇಷ್ಠನಾದ ಆ ಆಂಜನೇಯನನ್ನು, ಅಲ್ಲಿದ್ದ ವಾನರರೆಲ್ಲರೂ ಪರಮಸಂತೋಷದಿಂದ ನೋಡುತ್ತ ಸ್ತಬ್ಧರಾಗಿ ನಿಂತಿದ್ದರು ಸಮಸ್ತವಾನರಬಂಧುಗಳಿಗೂ ದುಃಖನಿವೃತ್ತಿಯಾಗುವಂತೆ ಆಂಜನೇಯನು ಹೇಳಿದ ಈಮಾತನ್ನು ಕೇಳಿ, ಜಾಂಬವಂತನೂ ಪರಮಾನಂದಭರತನಾಗಿ, ಆ ವಾನರೋತ್ತಮನನ್ನು ನೋಡಿ, ''ಎಲೈ ಮಹಾವೀರನೆ! ನೀನು ಕೇಸರಿಪುತ್ರನಲ್ಲವೆ? ವಾಯುದೇವನ ಕುಮಾರನಲ್ಲವೆ? ಬಾಲ್ಯದಲ್ಲಿಯೇ ಅಸಾಧ್ಯಸಾಹಸವನ್ನು ತೋರಿಸಿ ಹನುಮಂತನೆಂಬ ಖ್ಯಾತಿಯನ್ನು ಹೊಂದಿದವನಲ್ಲವೆ? ನಿನ್ನ ಬಂಧುಗಳಾದ ಈ ಸಮಸ್ತವಾನರರ ಅಪಾರದುಃಖವೂ ಇಂದಿಗೆ ನೀಗಿತು ಎಲ್ಲರನ್ನೂ ನೀನೇ ಬದುಕಿಸಿದಂತಾಯಿತು ಈ ವಾನರರೆಲ್ಲರೂ ಸೇರಿ, ನಿನಗೆ ಮಂಗಳವನ್ನು ಕೋರುತ್ತ, ನಿನ್ನ ಕಾರ್ಯಸಿದ್ಧಿಗಾಗಿ ಬಹಳ ಆಕ್ಕರೆಯಿಂದ ಮಂಗಳಾಶಾಸನವನ್ನು ಮಾಡುವರು ಮಹರ್ಷಿಗಳ ಅನುಗ್ರಹಬಲದಿಂದಲೂ, ವೃದ್ಧರಾದ ಈ ವಾನರರ ಶ್ರೇಯಃಪ್ರಾರ್ಥನೆಯಿಂದಲೂ, ಗುರುಗಳ ಆತೀವಾರ್ದಮಹಿಮೆಯಿಂದಲೂ ನೀನು ಈ ಮಹಾಸಮುದ್ರವನ್ನು ಸುಖವಾಗಿ ದಾಟಿ ಬಾ! ಎಲೈ ಆಂಜನೇಯನೆ! ನೀನು ಇಲ್ಲಿಗೆ ಸುಖವಾಗಿ ಬಂದು ಸೇರುವವರೆಗೂ ನಾವೆಲ್ಲರೂ ಒಂದೇಕಾಲಿನಿಂದ ನಿಂತು ನಿರೀಕ್ಷಿಸುತ್ತಿರುವೆವು ಈಗ ಈ ಸಮಸ್ತವಾನರರ ಜೀವವೂ ನಿನ್ನ ಕೈಯಲ್ಲಿ ಅಡಗಿರುವುದು" ಎಂದನು, ಆಮೇಲೆ ವಾನರಸಿಂಹನಾದ ಹನುಮಂತನು ಅಲ್ಲಿದ್ದ ಕಪಿಗಳೆಲ್ಲರನ್ನೂ ನೋಡಿ, ''ಎಲೈ ವಾನರರೆ! ನಾನು ಇಲ್ಲಿಂದ ಹಾರುವಾಗ ನನ್ನ ವೇಗವನ್ನು ಈ ಭೂಮಿಯೇ ತಡೆಯಲಾರದೆಕುಗ್ಗುವುದು ಈ ಮಹೇಂದ್ರಪರ್ವತವಾದರೆ ಎತ್ತರವಾದ ಬಂಡೆಗಳಿಂದ ನಿಬಿಡವಾಗಿರುವುದು ಇತರ ಶಿಖರಗಳೂ ದೊಡ್ಡದಾಗಿ ಸ್ಥಿರವಾಗಿರುವುವು ಆದುದರಿಂದ ಈ ಮಹೇಂದ್ರಪರ್ವತದ ಶಿಖರಗಳು ನನ್ನ ವೇಗವನ್ನು ತಡೆಯಬಲ್ಲುವೆಂದು ತೋರುವುದು ಅನೇಕವೃಕ್ಷಗಳಿಂದ ತುಂಬಿ, ಗೈರಿಕಾದಿಧಾತುಗಳ ರಸದಿಂದ ಶೋಭಿತಗಳಾದ ಈ ಶಿಖರಗಳಲ್ಲಿಯೇ ನನ್ನ ವೇಗವನ್ನು ಬಿಡುವೆನು ಇಲ್ಲಿಂದ ನೂರು ಯೋಜನಗಳನ್ನು ಹಾರುವಾಗ, ನನ್ನ ಕಾಲಿನ ತುಳಿತಕ್ಕೆ ಈ ಪರ್ವತಶಿಖರಗಳುಮಾತ್ರವೇ ತಡೆಯಬಲ್ಲವು" ಎಂದನು ವಾಯುವಿನಂತೆ ಮಹಾವೇಗ

ವುಳ್ಳವನಾಗಿಯೂ, ಶತ್ರುನಿಗ್ರಾಹಕನಾಗಿಯೂ ಇರುವ ಆಂಜನೇಯನು ಅಗಲೇ ಆ ಮಹೇಂದ್ರಪರ್ವತದ ಶಿಖರಕ್ಕೇರಿಹೋದನು ಆ ಪರ್ವತವಾ ದರೋ ವಿವಿಧವೃಕ್ಷಗಳಿಂದ ನಿಬಿಡವಾಗಿರುವುದು ಅಲ್ಲಲ್ಲಿ ಹುಲ್ಲೆಗಳು ಹ ಸುರುಹುಲ್ಲಿನ ಮೈದಾನಗಳಲ್ಲಿ ವಿನೋದದಿಂದ ವಿಹರಿಸುತ್ತಿರುವುವು ಬಳ್ಳಿ ಗಳೂ ಹೂಗಳೂ ತುಂಬಿ ಬೆಳೆದಿರುವುವು ಹುಲಿ ಸಿಂಹ ಮೊದಲಾ ದ ಕ್ರೂರಮೃಗಗಳು ಸುತ್ತಲೂ ತಿರುಗುತ್ತಿರುವುವು ಆಲ್ಲಲ್ಲಿ ಮದನಾನೆ ಗಳು ಸಂಚರಿಸುತ್ತಿರುವುವು ಮದವೇರಿದ ವನಪಕ್ಷಿಗಳು ಸುತ್ತಲೂ ಧ್ವನಿ ಮಾಡುತ್ತಿರುವುವು ಅದರ ನಾಲ್ಕುಕಡೆಗಳಿಂದಲೂ ಗಿರಿನದೀಪ್ರವಾಹಗ ಳು ಸುರಿಯುತ್ತಿರುವುವು. ಸುತ್ತಲೂ ದೊಡ್ಡದೊಡ್ಡ ಶಿಖರಗಳು ಕಾ ಣುತ್ತಿರುವುವು ಹೀಗೆ ದೃಢವಾಗಿಯೂ ದುರ್ಗಮವಾಗಿಯೂ ಇರುವ ಆ ಮಹೇಂದ್ರಪರ್ವತವನ್ನು, ಮಹೇಂದ್ರಸಮಾನವಾದ ವೀರ್ಯವುಳ್ಳ ಆ ವಾನರಶ್ರೇಷ್ಠನು ಲೀಲಾಮಾತ್ರದಿಂದೇರಿ ಹೋದನು ಮಹಾದೇಹವುಳ್ಳ ಈ ಹನುಮಂತನ ಕಾಲಿನ ತುಳಿತದಿಂದ ಅಷ್ಟುದೊಡ್ಡಪರ್ವತವೂಕೂಡ, ಸಿಂ ಹದ ಕಾಲಿಸಿಂದಪ್ಪಳಿಸಲ್ಪಟ್ಟ ದೊಡ್ಡ ಮದದಾನೆಯಂತೆ ನಡಿಲಿಹೋಯಿ ತು ಹನುಮಂತನ ಪಾದಘಟ್ಟನದಿಂದ ಮಹಾಶಿಲೆಗಳೆಲ್ಲವೂ ನಡಿಲಿಬಿದ್ದುವು ಹನುಮಂತನ ಕಾಲೊತ್ತಿಗೆ ಆಪರ್ವತದೊಳಗಿನ ದ್ರವಜಲವು ಮೇಲೆ ಜಿನುಗಿ ಅನೇಕಗಿರಿನದಿಗಳಾಗಿ ಹೊರಡಲಾರಂಭಿಸಿದುವು ಅಲ್ಲಿ ಜಿಂಕೆ, ಆನೆ ಮುಂ ತಾದ ಮೃಗಗಳೆಲ್ಲವೂ ಭಯದಿಂದ ಚದರಿ ಪಲಾಯನಮಾಡುತಿದ್ದುವು ಆ ಪರ್ವತದಮೇಲಿನ ದೊಡ್ಡ ಮರಗಳೆಲ್ಲವೂ ಕಂಪಿಸುತಿದ್ದುವು ಅಲ್ಲಿ ಮಧು ಪಾನದಿಂದ ಕೊಬ್ಬಿಬೆಳೆದಿದ್ದ ನಾಗದಂಪತಿಗಳೂ, ಗಂಧರ್ವಮಿಥುನಗಳೂ ವಿದ್ಯಾಧರಸಮೂಹಗಳೂ, ಅಕ್ಷಣವೇ ಮೇಲೆ ಹಾರುತಿದ್ದುವು ಅಲ್ಲಿನ ಸ ಮಸ್ತಪಕ್ಷಿಗಳೂ ಬೆಟ್ಟದ ತಪ್ಪಲುಗಳನ್ನು ಬಿಟ್ಟುಚದರಿದುವು ಅಲ್ಲಿನಮಹಾ ಸರ್ಪಗಳು ಭಯದಿಂದ ಬಿಲದೊಳಗೆ ಹುದುಗಿಕೊಂಡುವು ಆ ಪರ್ವತಶಿಖ ರಗಳಲ್ಲಿರುವ ದೊಡ್ಡಬಂಡೆಗಳೆಲ್ಲವೂ ನಡಿಲಿಬಿದ್ದುವು ಆಂಜನೇಯನ ಕಾಲಿ ನ ತುಳಿತಕ್ಕೆ ಆ ಮಹಾಪರ್ವತವೇ ಸಂಪೂರ್ಣವಾಗಿ ನಡಿಲಿಹೋಯಿತು ಅಲ್ಲಲ್ಲಿ ಬಿಲಗಳಿಂದ ಹೊರಗೆ ತಲೆಯಿಟ್ಟಿದ್ದ ಮಹಾಸರ್ಪಗಳು, ಹಾಗೆಯೇ

ಭಯದಿಂದ ಬುಸುಗುಟ್ಟುತ್ತ ಹೆಡೆಯೆತ್ತಿ ನಿಂತಿರಲು, ಆ ಪರ್ವತದಮೇಲೆ ಅನೇಕಧ್ವಜಗಳನ್ನೆತ್ತಿ ಕಟ್ಟಿದಂತೆ ಕಾಣುತಿದ್ದುವು ಆಲ್ಲಿದ್ದ ಮಹರ್ಷಿಗಳೆಲ್ಲರೂ ಭಯದಿಂದ ತಮ್ಮತಮ್ಮ ಆಶ್ರಮಗಳನ್ನು ಬಿಟ್ಟುಹೋಗುತ್ತಿರಲು" ಆ ಪರ್ವತವು ಮಹಾರಣ್ಯಮಧ್ಯದಲ್ಲಿ ತನ್ನ ಸಂಗಡಿಗರನ್ನು ಕಳೆದುಕೊಂಡು, ಒಂಟಿಯಾಗಿ ಭಯದಿಂದ ತತ್ತ್ತಳಿಸಿ ನಡುಗುವ ದಾರಿಗನಂತೆ ತೋರುತಿತ್ತು ವೇಗಶಾಲಿಯಾಗಿಯೂ, ಪರಂತಪನಾಗಿಯೂ, ಮಹಾತ್ಮನಾಗಿಯೂ ಇರುವ ಆ ಹನುಮಂತನು, ತನ್ನ ಲಂಘನವೇಗದಲ್ಲಿಯೇ ನಟ್ಟ ಮನಸ್ಸುಳ್ಳವನಾಗಿ, ಆ ವಿಷಯದಲ್ಲಿ ತನ್ನ ಬುದ್ಧಿಯನ್ನೂ ದೃಢಪಡಿಸಿಕೂಂಡು, ಆಗಲೇ ತನ್ನ ಮನಸ್ಸಿನಿಂದ ಲಂಕೆಯನ್ನು ಪ್ರವೇಶಿಸಿದಷ್ಟು ಮಹೋತ್ಸಾಹದಿಂದ ದ್ದನು ಇಲ್ಲಿಗೆ ಅರುವತ್ತೇಳನೆಯಸರ್ಗವು

ಇದು ಕಿಷ್ಕಿಂಧಾಕಾಂಡವು

ಶ್ರೀ ರಾಮಚಂದ್ರಪರಬ್ರಹ್ಮಣೇ ನಮಃ.